REGISTERED No. B. 2891

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾದಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಲಿಸುವೆನಾಗಿ ॥ ವ ವಚನ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೨೫ ನೆಯ ಜೂನ ೧೯೩೪. | ಸಂಚಿಕೆ ೪೨.

ಜನಸೇವೆಯೇ ದೇವರಸೇವೆ.

## ಪುಣೆಯ ವಿದ್ಯಾರ್ಥಿಗಳಿಗೆ ಮಹಾತ್ಮರ ಉಪದೇಶ.

"ಹರಿಜನರ ಮೇಲೆ ಪ್ರೇಮವಿದ್ದರೆ ಅವರ ವಸತಿ ಸ್ಥಾನವನ್ನು ಸ್ವಚ್ಛ ಮಾಡಿರಿ."

ಪುಣೆಯ ವಿದ್ಯಾರ್ಥಿಗಳು ಮಹಾತ್ಮಾಜಿಯವರಿಗೆ ಮಾನಪತ್ರ ಸಮರ್ಪಣೆ ಮಾಡಿದಾಗ್ಗೆ ಅದಕ್ಕುತ್ತರವಾಗಿ ಮಹಾತ್ಮಾಜಿಯವರು— "ಪುಣೆಯ ಹರಿಜನರ ಮನೆಗಳಿಗೆ ಗೃಹಗಳೆಂದು ಯಾರೂ ಅನ್ನಲಾರರು. ಅವು ಕೋಳಿಯ ಮನೆಗಳಾಗಿವೆ. ಹರಿಜನರ ಮೇಲೆ ನಿಮ್ಮ ಪ್ರೇಮವಿದ್ದರೆ ಮೊದಲು ಅವರ ಮನೆಗಳನ್ನು ಸ್ವಚ್ಛ ಮಾಡಿರಿ. ಅವರಿಗೆ ಶಿಕ್ಷಣ ಕೊಡಿರಿ. ಶಿಕ್ಷಣವೆಂಬುದರ ಅರ್ಥವು ಓದುಬರಹವೆಂಬುದೇ ಅಲ್ಲ. ಸ್ವಚ್ಛತೆ ಮತ್ತು ಆರೋಗ್ಯಗಳ ಮಹತ್ವವನ್ನು ಅವರಿಗೆ ಮನಗಾಣಿಸಿಕೊಡಿರಿ. ಮತ್ತು ಆ ಪ್ರಕಾರ ಅವರಾಚರಿಸುವಂತೆ ಮಾಡಿರಿ" ಎಂದು ಉಪದೇಶ ಮಾಡಿದರು.

SANGAM CLOTH STORES
Prop. M S Hundekar & Sons,
P.O: TERDAL – 587 315
Dt. Bijapur, (Karnataka)

ಕೇವಲ ನೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಗಂಡಾಂತರಕ್ಕೊಳಗಾಗಬೇಡಿರಿ :
ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹೆಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಆಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ 'ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ' ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ ತಿಜೋರಿ** ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಅತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜೂನ್ ತಾರೀಖು ೨೫ ನೆಯ ಸೋಮವಾರ | ಸಂಚಿಕೆ ೪೩.


# ಹೈದರಾಬಾದಿನಲ್ಲಿ ಭಯಂಕರ ಕೊಲೆಗಳು.

## ಸ್ತ್ರೀಯರನ್ನಪಹರಿಸಿ ಕೊಲೆಮಾಡುವ ಪ್ರಯತ್ನ.
## ಹೂತ ಪ್ರೇತಗಳು ಹೊರತೆಗೆಯಲ್ಪಟ್ಟವು.

ಹೈದರಾಬಾದ ಪಟ್ಟಣದಲ್ಲಿ ಕಳೆದ ೩-೪ ವರುಷಗಳಿಂದಲೂ ಅನೇಕ ಕೊಲೆಗಳನ್ನು ಮಾಡಿ ಲಕ್ಷಾಂತರ ರೂಪಾಯಿಗಳ ಮತ್ತು ರತ್ನಾಭರಣಗಳನ್ನು ಸುಲಿಯುತ್ತಿದ್ದ ಒಂದು ಭಯಂಕರ ಕಳ್ಳರ ತಂಡದ ಶೋಧವಾಗಿದೆ. ಪೋಲೀಸರು ಅವರಲ್ಲಿ ಮುಖ್ಯರಾದ ಸೀತಯ್ಯ ಮತ್ತು ತುಳಜಾರಾಮ ಎಂಬೀರ್ವರನ್ನು ಬಂಧಿಸಿದ್ದು ಅವರು ಮಾಡಿರುವ ಅಮಾನುಷ ಕೃತ್ಯಗಳು ಪ್ರಕಟವಾಗಿವೆ.

ಈ ಕೊಲೆಪಾತಕರು ಹೈದರಾಬಾದದ ಪ್ರಸಿದ್ಧ ನಾಯಕಿಗಳನ್ನೂ ಶ್ರೀಮಂತರನ್ನೂ ಮೋಸ ಮಾಡಿ ತಮ್ಮ ಗುಪ್ತ ಮನೆಗಳಿಗೆ ಕರೆಮಕೊಂಡು ಹೋಗಿ ಅಲ್ಲಿ ಅವರಿಗೆ ಅಮಲುಬರುವ ಪೇಯಗಳನ್ನು ಕುಡಿಸಿ ಸ್ಮೃತಿ ತಪ್ಪಲು ಅವರನ್ನು ಅಲ್ಲಿಯೇ ಹೂಳಿ ಅವರ ಮೈಮೇಲಿನ ಮುತ್ತು ರತ್ನಾಭರಣಗಳನ್ನಪಹರಿಸುವ ಕಾರ್ಯವನ್ನು ಕಳೆದ ಮೂರು ವರುಷಗಳಿಂದಲೂ ಮಾಡುತ್ತಿದ್ದಾರೆ. ಆರು ತಿಂಗಳುಗಳ ಪೂರ್ವದಲ್ಲಿ ಗೌರಮ್ಮನೆಂಬ ನರ್ತಕಿಯು ಒಮ್ಮೆಲೆ ಇಲ್ಲವಾದುದನ್ನು ಕಂಡು ಅವಳು ತುಳಜಾರಾಮನ ಸಂಗಡ ಹೋದುದನ್ನು ಶೋಧಿಸಿ ಅವನನ್ನು ಬಂಧಿಸಲು ಅವನು ಆ ಪೂರ್ವದಲ್ಲಿಯೇ ಯಶೋದೆ ಎಂಬ ಮತ್ತೋರ್ವ ನಾಯಕಿಯನ್ನೂ ಅಪಹರಿಸಿದುದು ತಿಳಿಯಿತು. ಅವನೂ ಮತ್ತು ಅವನ ಸಂಗಡಿಗನಾದ ಸೀತಯ್ಯನೂ ಯಶೋದೆಯನ್ನು ತಂದೊಪ್ಪಿಸುವೆವೆಂಬ ಹೊಣೆಯ ಮೇಲೆ ಬಿಡುಗಡೆ ಹೊಂದಿ ಪೋಲೀಸರ ಕಣ್ಣಲ್ಲಿ ಮಣ್ಣು ತೂರಿ ಮಾಯವಾದರು. ಪುನ: ಅವರನ್ನು ಶೋಧಿಸುವಷ್ಟರಲ್ಲಿ ಸೀತಯ್ಯನು ನಿಜಾಮಾಬಾದದ ಒಂದು ದೇವಾಲಯದಲ್ಲಿ ಬ್ರಾಹ್ಮಣ ವೇಷ ಧರಿಸಿ ಪೂಜಾರಿಯಾಗಿದ್ದನು. ಪುನ: ಅವರನ್ನೆಲ್ಲ ಬಂಧಿಸಲು ಅವರು ತಮ್ಮ ಗುಂಪಿನಲ್ಲಿ ೧೯ ಜನರಿರುವರೆಂದು ಒಪ್ಪಿಕೊಂಡರು. ಪೋಲೀಸ ಸುಪರಿಂಟೆಂಡೆಂಟರು, ಸಿಟಿ ಪೋಲೀಸ ಕಮಿಶನರರು, ಮುಖ್ಯ ನ್ಯಾಯಾಧೀಶರು, ನಗರಾಧ್ಯಕ್ಷರು ಮೊದಲಾದವರಿಲ್ಲ ಕೂಡಿ ಅವರಿದ್ದ ಮನೆಯನ್ನು ಅಗಿಸಲು ನೆಲದಲ್ಲಿ ಹೂತ ೫-೬ ಪ್ರೇತಗಳು ದೊರೆತವು. ಅಲ್ಲಲ್ಲಿಯ ನೆರೆಮನೆಗಳಲ್ಲಿಯೂ ಇದೇ ಪ್ರಕಾರ ಅಗಿದು ನೋಡಲು ಎಷ್ಟೋ ಮನುಷ್ಯರ ಎಲುಬಿನ ಹಂದರಗಳು ದೊರೆತವು.

ಧೂಳ ಪೇಟೆಯ ಒಂದು ಮನೆಯಲ್ಲಿ ಸಿಟಿ ಕಾಲೇಜಿನ ಒಬ್ಬ ಅಧ್ಯಾಪಕರು ವಾಸಿಸುತ್ತಿದ್ದರು. ಅವರು ಮಲಗುವ ಕೋಣೆಯನ್ನು ಅಗಿಸಲು ಅಲ್ಲಿಯೂ ಛಿನ್ನವಿಚ್ಛಿನ್ನವಾದ ಪ್ರೇತಗಳೂ ಎಲುವುಗಳೂ ಹೊರಟವು. ಇದನ್ನು ಕಂಡು ಆ ಮನೆಯವರೆಲ್ಲ ಹೌಹಾರಿ ಹೋಗಿದ್ದಾರೆ.

ಪ್ರಕಟವಾದ ಪ್ರೇತಗಳಲ್ಲಿ ೬ ಜನ ಸ್ತ್ರೀಯರ ಹೆಣಗಳು ಗುರುತಿಸಲ್ಪಟ್ಟಿವೆ. ಈ ಸಂಗತಿಯಿಂದ ಕಳೆದ ನಾಲ್ಕೈದು ದಿವಸಗಳಿಂದ ಹೈದರಾಬಾದದಲ್ಲೆಲ್ಲ ಹಾಹಾಕಾರವೇ ಉಂಟಾಗಿದೆ.

---

## ಪ್ರಸಿದ್ಧ ಪತ್ರಿಕೆ.

ಯಾವತ್ತು ವೀರಶೈವ ಜಂಗಮ-ಗುರು ಪಟ್ಟಾಧ್ಯಕ್ಷ ಭಕ್ತ ಮಾಹೇಶ್ವರ ಶಿಷ್ಟ-ಸಾಹುಕಾರ ಮೊದಲಾದ ವೀರಶೈವ ಸಮಸ್ತ ಸೈವದನರಿಗೆ ವಿನಯಪೂರ್ವಕವಾಗಿ ಬಿನ್ನೈಸುವುದೇನಂದರೆ—

ತಾ|| ೨೫-೬-೩೪ ಇವತ್ತಿ ಸೋಮವಾರ ಸಾಯಂಕಾಲ ೫ ಗಂಟೆಗೆ ಆಸ್ಟ್ರೀಯನ್ ಲೇಡಿ **"ಮಿಸ್ ಮೇರಿಯಾ ಲೂಸ್ ಮೇಅರ್"** ಇವರಿಗೆ ಅವರ ಅರ್ಜಿಯ ಪ್ರಕಾರ ವೀರಶೈವ ಧರ್ಮದೀಕ್ಷೆಯನ್ನು ಶ್ರೀ ಸಿದ್ಧೇಶ್ವರ ಸಂಸ್ಥೆಯ ಜನರಲ್ ಕಮಿಟಿಯವರ ಮತ್ತು ಸಭೆಯಲ್ಲಿ ಸೇರಿದ ಸರ್ವ ಲಿಂಗಾಯತರ ಒಪ್ಪಿಗೆ ಪ್ರಕಾರ ಮತ್ತು ಅಖಿಲಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ **ರಾ|| ಸಾ|| ಹಳಕಟ್ಟಿ**ಯವರ ಅಭಿಪ್ರಾಯದ ಪ್ರಕಾರ ಸದರಿ ಸಂಸ್ಥೆಯವರು ಶುದ್ಧೀಕರಣ ಉಪಕಮಿಟಿಯವರಿಗೆ ಅಧಿಕಾರ ಕೊಟ್ಟ ಪ್ರಕಾರ **ಬ್ರಹ್ಮಶ್ರೀ ಚರಪಟ್ಟಾಧ್ಯಕ್ಷ ಬಬಲೇಶ್ವರ** ಮತ್ತು **ಮನಗೂಳಿ** ಮೊದಲಾದ ಸ್ವಾಮಿಗಳ ನೇತೃತ್ವದ ಕೆಳಗೆ ಶ್ರೀ ಸಿದ್ಧೇಶ್ವರ ಪವಿತ್ರ ಸ್ಥಾನದಲ್ಲಿ ಜರಗಿಸತಕ್ಕದ್ದಿದೆ. ಕಾರಣ ಸದರಿ ವೇಳೆಗೆ ತಾವೆಲ್ಲರೂ ಆಗಮಿಸಬೇಕಾಗಿ ವಿನಂತಿ ಇದೆ.

ವಿಜಾಪುರ.
ತಾ|| ೨೨-೬-೩೪.

**ಬಿ. ಡಿ. ಹಾಳಕೋಟಿ** ಬಿ. ಎ. ಎಲ್.ಎಲ್. ಬಿ.
ಅಧ್ಯಕ್ಷ
ಶ್ರೀ ಸಿದ್ಧೇಶ್ವರ ಸಂಸ್ಥಾ ವಿಜಾಪುರ ಮತ್ತು
ಅದಕ್ಕೆ ಶುದ್ಧೀಕರಣ ಕಮಿಟಿ

## ವೀರಶೈವ ಮತ.

ತಾ. ೧೦-೬-೩೪ನೆಯ ಸಿವಸ ಸಾಯಂಕಾಲ ೬ ಗಂಟೆಗೆ ರಾ. ಸಾ. ಹಳಕಟ್ಟಿಯವರ ಅಧ್ಯಕ್ಷತೆಯ ಕೆಳಗೆ ಶ್ರೀ ಪಿಲ್ಲೇಶ್ವರ ಕಪರ್ದಿ ಪಾಲಿನವರಿ ಕೀರ್ತನ ಕೇಳಿ ಶಿವಮೂರ್ತಿ ಶಾಸ್ತ್ರಿಗಳು 'ವೀರಶೈವ ಮತ' ಎಂಬ ವಿಷಯದ ಮೇಲೆ ಮನೋಜ್ಞ ೩ ತಾಸುಗಳ ವರೆಗೆ ಒಳ್ಳೇ ಮಹತ್ವಪೂರ್ಣವಾದ ಭಾಷಣವನ್ನು ಮಾಡಿದರು. ಅವರ ಮುಖ್ಯಾಂಶವನ್ನು ಇಲ್ಲಿ ಮಿಳಿಸಿ ಕೊಡಲಾಗಿದೆ—

"ವೀರಶೈವ ಮತವು ಇಂದೇ ಕಾಲದ್ದಲ್ಲ. ಇಂದೇ ಸ್ಥಾಪಿತವಾದದ್ದಲ್ಲ. ಅನೇಕ ವಿಭೂತಿಗಳು ಕಾಲ ಕಾಲಕ್ಕೆ ಜನ್ಮ ತಾಳಿ ಇದನ್ನು ಉದ್ಧಾರ ಮಾಡುತ್ತ ಬಂದಿದ್ದಾರೆ. ಮತಸ್ಥಾಪಕರು ಇಂಥವರೇ ಎಂದು ನಿಶ್ಚಯವಾಗಿ ಹೇಳಲಿಕ್ಕೆ ಬರುವದಿಲ್ಲ ಆದಾಗ್ಯೂ ನಾವು ಸ್ಥೂಲ ದೃಷ್ಟಿಯಿಂದ ವೀರಶೈವ ಮತದ ಇತಿಹಾಸವನ್ನು ೩ ಭಾಗವಾಗಿ ವಿಂಗಡಿಸಬಹುದು. (೧) ಬಸವೇಶ್ವರನ ಹಿಂದಿನ ಕಾಲ. (೨) ಬಸವೇಶ್ವರನ ಕಾಲ. (೩) ಬಸವೇಶ್ವರನಿಂದೀಚೆಯ ಕಾಲ.

ಬಸವೇಶ್ವರನಿಗಿಂತಲೂ ಪೂರ್ವದಲ್ಲಿ ವೀರಶೈವ ಮತವು ದಕ್ಷಿಣದಲ್ಲಿ ಅಂದರೆ ತಮಿಳ, ಆಂಧ್ರ, ಕೇರಳ ದೇಶಗಳಲ್ಲಿ ಒಳ್ಳೇ ಜಾಗೃತಾವಸ್ಥೆಯಲ್ಲಿದ್ದಿತು. ತಮಿಳನಾಡಿನಲ್ಲಿ ಮಾಣಿಕ್ಯವಾಚಗರ ಪಿಳ್ಳೆಸ್ಥೆನಾರ ಎಂಬ ಮಹಾ ವೀರಶೈವ ವಿಭೂತಿಗಳೂ ಕವಿಗಳೂ ಆಗಿ ಹೋದರು. ೬೩ ಪುರಾತನರ ಚರಿತ್ರೆಯು ತಮಿಳುನಾಡಿನ ವಾಙ್ಮಯವು. ಪಾಲ್ಕುರಿಕೆಯ ಸೋಮನಾರಾಧ್ಯ ಮೊದಲಾದವರು ಆಂಧ್ರ ಸೀಮೆಯವರು. ಕೇರಳ ದೇಶದಲ್ಲಿ ವೀರಶೈವ ಮತವು ಬಹು ನಿಕೃಷ್ಟಾವಸ್ಥೆಯಲ್ಲಿದ್ದಿತು. ಅವರನ್ನು ಜನರು ಕೇಳಾಗಿ ಕಾಣುತ್ತಿದ್ದರು. ನಗರತರು ಎಂಬ ಹೆಸರಿನವರು ಈಗ್ಯೂ ಜನಿವಾರ ಲಿಂಗಗಳನ್ನು ಧರಿಸುತ್ತಿದ್ದಾರೆ. ಬಸವೇಶ್ವರನಕ್ರಾಂತಿಯು ಕರ್ನಾಟಕ ಮಹಾರಾಷ್ಟ್ರಗಳಲ್ಲಿ ವಿಶೇಷವಾಗಿ ಹಬ್ಬಿತು. ತೀರ ದಕ್ಷಿಣದವರೆಗೂ ಉತ್ತರದವರೆಗೂ ಅದು ಹೆಚ್ಚಾಗಿ ಹಬ್ಬಲಿಲ್ಲ. ಬಸವೇಶ್ವರನಿಂದೀಚೆಗೆ ವಿಜಯನಗರದ ಅರಸನ ಕಾಲದಲ್ಲಿ ಕರ್ನಾಟಕದ ತುಂಬ ವೀರಶೈವ ಮತವು ತಲೆಯೆತ್ತಿ ಮೆರೆಯಿತು.

ವೀರಶೈವ ಮತತತ್ವಗಳು ಶೈವಾಗಮಗಳಲ್ಲಿ ದೊರೆಯುತ್ತವೆ. ಅವುಗಳಿಗೇ ಕೆಲವು ಆಚಾರ್ಯರು ಸೂತ್ರ ಬರೆದು ಪ್ರಸಾರ ಮಾಡಿದರು. ಅವುಗಳ ರಹಸ್ಯವನ್ನೇ ಶಿವಶರಣರು ಆಯಾ ಭಾಷೆಗಳಲ್ಲಿ ವಚನಗಳ ರೂಪದಿಂದ ಅಲ್ಲಲ್ಲಿ ಹರಡಿದರು. ಬಸವೇಶ್ವರನ ಪೂರ್ವದಲ್ಲಿ ವೀರಶೈವ ಮತವು ವೈದಿಕ ಸ್ವರೂಪದ್ದಿತ್ತು. ಆದರೆ ಯಜ್ಞ ಯಾಗಾದಿಗಳಿಗೆ ಅವಕಾಶವಿರಲಿಲ್ಲ. ಬಸವಾದಿ ಪ್ರಮಥರು ಆ ವೈದಿಕ ವರಕಾಂಡವನ್ನು ಹಿಂದು ವೀರಶೈವ ಮತಕ್ಕೆ ಅಪ್ತಾಕೃತ ಸ್ವರೂಪವನ್ನುಂಟುಮಾಡಿದ್ದಾರೆ. ಬಸವಣ್ಣನವರಿಗಿಂತಲೂ ಸ್ವಲ್ಪ ಮುಂಚೆ ಏಕಾಂತದ ರಾಮಯ್ಯ, ದೇವರ ದಾಸಿಮಯ್ಯ, ರೇವಣಸಿದ್ಧಯ್ಯ ಮೊದಲಾದವರು ವೀರಶೈವ ಮತವನ್ನು ಪ್ರಸಾರ ಮಾಡಿ ಅಲ್ಲಲ್ಲಿ ತಮ್ಮ ಮಠಗಳನ್ನು ಕಟ್ಟಿಸಿದರು. ಆ ಕುರುಹುಗಳು ಅಲ್ಲಲ್ಲಿ ತೋರುತ್ತಿವೆ. ಬಸವೇಶ್ವರನ ಕಾಲದಲ್ಲಿ ಬಸವ, ಚೆನ್ನಬಸವ, ಅಲ್ಲಮಪ್ರಭು, ಸಿದ್ಧರಾಮಯ್ಯ ಮೊದಲಾದ ಮಹಾ ಶಿವಶರಣರು ಅದನ್ನು ಒಳ್ಳೆಯ ಸ್ಥಿತಿಗೆ ತಂದರು. ಬಸವನಿಗಿಂತ ಮುಂಚೆ ಸೂತ್ರದ ಕಾಲವಿದ್ದರೆ ಬಸವೇಶ್ವರನ ಕಾಲಕ್ಕೆ ಭಕ್ತಿಯುಗವೆಂದು ಹೇಳಬಹುದು. ಬಸವಾದಿ ಪ್ರಮಥರು ಉಜ್ವಲವಾದ ಭಕ್ತಿಯನ್ನು ಜನ ಸಾಮಾನ್ಯರಲ್ಲಿ ಹರಡಿದರು. ಆದೇ ಕಾಲಕ್ಕೆ ಕೆರೆಯ ಪದ್ಮರಸ, ಹರಿಹರ, ರಾಘವಾಂಕ, ನಿಜಗುಣಾರ್ಯ ಮೊದಲಾದ ಕವೀಶ್ವರರೂ ನಿತ್ಯ ಜ್ಞಾನಿಗಳೂ ಜನಿಸಿ ಕನ್ನಡ ವಾಙ್ಮಯವನ್ನು ಹಬ್ಬಿಸಿದರು.

ವಿಜಯನಗರದ ಪ್ರೌಢರಾಯನ ಕಾಲಕ್ಕೆ ಹಂಪಿಯಲ್ಲಿ ತೋಂಟದಾರ್ಯರೇ ಮೊದಲಾದ ೧೦೧ ಜನ ವಿರಕ್ತರಿದ್ದರು. ವಿರೂಪಾಕ್ಷ ಚಕ್ರವರ್ತಿಗಳು ವೀರಶೈವ ಮತಾವಲಂಬಿಗಳಾಗಿದ್ದರು. ಇವನ್ನು ನೋಡಿ ಅವರ ಮಾಂಡಲಿಕರಾದ ಕೆಳದಿ, ಬೀಳಗಿ ಪುಂಗನೂರು ರಾಜರೂ ಸಹ ವೀರಶೈವ ಮತವನ್ನು ಸ್ವೀಕರಿಸಿದರು. ಈ ಮೇರೆಗೆ ವೀರಶೈವ ಮತವು ಕಾಲಕಾಲಕ್ಕೆ ಅಭಿವೃದ್ಧಿಯನ್ನು ಹೊಂದುತ್ತಲೇ ನಡೆದಿದೆ.

||ಶ್ರೀಗುರು ಬಸವಲಿಂಗಾಯನಮಃ||

## ವೀರಶೈವ ಮಹಾಜನರಿಗೆ ಸೂಚನೆ.

ತಾ. ೨-೬-೩೪ನೇ ದಿವಸ ಇಂಗಳೇಶ್ವರದಲ್ಲಿ ಜರುಗಿದ ೬೩ ಪುರಾತನರ ಪೂಜಾ ಕಾಲದಲ್ಲಿ ಧರ್ಮಾರ್ಥವಾಗಿ ಎಲ ರೂ. ಗಳನ್ನು ಕೂಡಿಸಲ್ಪಟ್ಟದ್ದಾಗಿದೆ.

ವೀರಶೈವರ ಜಾಗೃತಿಗಾಗಿ ವೀರಶೈವ ಧರ್ಮ ತತ್ವಗಳನ್ನೊಳಕೊಂಡ ಸಣ್ಣ ಸಣ್ಣ ಪುಸ್ತಕಗಳನ್ನು ಅಲ್ಪ ಬೆಲೆಗಾಗಲಿ ಅಥವಾ ಪುಕ್ಕಟೆಯಾಗಿ ಆಗಲಿ ಸರ್ವ ಜನರಿಗೆ ದೊರೆಯುವಂತೆ ಮಾಡುವದಕ್ಕೆ ಮೇಲ್ಕಂಡ ಧರ್ಮಾರ್ಥ ಹಣವನ್ನು ಉಪಯೋಗಿಸತಕ್ಕದ್ದಾಗಿದೆ.

ಸ್ವಲ್ಪ ದಿವಸಗಳಲ್ಲಿಯೇ ವೀರಶೈವ ಧರ್ಮ ತತ್ವಜ್ಞರಾದ ವಿದ್ವಾಂಸರಿಂದ ಗ್ರಂಥ ಬರೆಯಿಸಿ ಪ್ರಸಿದ್ಧ ಮಾಡಲ್ಪಡುವದು.

**ಶಿವಾನಂದ ಸ್ವಾಮಿ ಸೊನ್ನ.**

## ಬಸವ ಜಯಂತಿ.

ಶ್ರೀವಚ್ಚಜಗದ್ಗುರು ಬಸವಾಚಾರ್ಯನ ಜಯಂತಿಯು ಬೆಂಗಳೂರು ಜಿಲ್ಲಾ ಬಿಡದಿ ಗ್ರಾಮದಲ್ಲಿ ಬಹು ಸಂಭ್ರಮದಿಂದ ಜರುಗಿತು. ಇಲ್ಲಿಯ ಶಿವಾಲಯದಲ್ಲಿ ಆ ಮಹಿಮನ ಪುರಾಣವು ಕೆಲ ದಿವಸಗಳಿಂದಲೂ ನಡೆಯುತ್ತಾ ಇತ್ತು. ಈ ಜಯಂತ್ಯುತ್ಸವಕ್ಕೆ ಅನ್ಯ ಮತೀಯರು ಕೂಡಾ ನೆರವಾದುದು ಅವರಲ್ಲಿರುವ ಭಕ್ತಿಭಾವನೆಗಳನ್ನು ಆ ಬಸವೇಶನ ಅಸಾಧಾರಣವಾದ ಲೋಕೋದ್ಧಾರವನ್ನೂ ವ್ಯಕ್ತಗೊಳಿಸಿದವು.

**ಉತ್ಸವ ಭಾಗಿ.**

## ಕಟಗೇರಿ ಸಭೆ.

ಬಾದಾಮಿ ತಾಲೂಕು ಕಟಗೇರಿಯಲ್ಲಿ ತಾರೀಖು ೭-೬-೩೪ನೆಯ ದಿವಸ ಸಭೆಸೇರಿ ಜೀವದಯಾ ಸಂಘ ಮತ್ತು ಜೀವ ದಯಾ ಗ್ರಂಥಾಲಯಗಳು ಸ್ಥಾಪನೆಯಾದವು. ಅನಂತರ ಅಸ್ಪೃಶ್ಯತಾ ನಿವಾರಣೆ, ವೀರಶೈವ ಏಕೀಕರಣ, ಅಹಿಂಸೆ ಮೊದಲಾದ ವಿಷಯಗಳ ಮೇಲೆ ಭಾಷಣಗಳಾದವು. ರಾ. ರಂಗಪ್ಪ ಬಾರಕೇರ ಇವರು ಅಸ್ಪೃಶ್ಯತಾ ನಿವಾರಣೆ, ಬಸವಣ್ಣನವರ ಮಹಿಮೆ, ಜಾತಿಯ ಹೆಚ್ಚು ಕಡಿಮೆಗಳ ಹುಚ್ಚು ಬಿಡಿಸುವ ಲಾವಣಿ ಪದಗಳನ್ನು ಜನರ ಮನಸ್ಸಿನಲ್ಲಿ ನಾಟುವಂತೆ ಹೇಳಿದರು.

**ವೀರಶೈವ ತರುಣ.**

## ವೀರಶೈವ ತರುಣ ಸಂಘ ಗದಗ.

ಈ ಸಂಘವು ಹುಟ್ಟಿ ೧೬-೧೮ ವರುಷಗಳಾಗಿರಬಹುದು. ಮೊದಲಿನಿಂದಲೂ ಯಥಾಶಕ್ತಿ ಸಮಾಜ ಮತ್ತು ಭಾಷಾಸೇವೆಗಾಗಿ ಪ್ರಯತ್ನಿಸುತ್ತ ಬಂದಿದ್ದಾರೆ. ಪರಸಮಾಜದವರೊಡನೆ ಮೈತ್ರಿಯಿಂದ ನಡೆದು ಪ್ರಸಂಗದಲ್ಲಿ ಅವರ ಸಹಕಾರವನ್ನು ಹೊಂದಿ ಕೆಲಸಮಾಡುತ್ತಿರುತ್ತಾರೆ. ದೀರ್ಘ ಪ್ರಯತ್ನ ಪಟ್ಟು ವೀ. ಜ. ಲಾಯಬ್ರರಿಯೊಂದನ್ನು ಸ್ಥಾಪಿಸಿರುತ್ತಾರೆ. ಅದರಲ್ಲಿ ಯಾವ ಭೇದ ಭಾವವಿಲ್ಲದೆ ಓದಲಿಕ್ಕೆ ಎಲ್ಲರಿಗೂ ಅನುಕೂಲ ಮಾಡಿರುತ್ತಾರೆ. ಈಗ ಈ ಸಂಸ್ಥೆಯು ಉತ್ತಮ ರೀತಿಯಿಂದ ಸಾಗಿದೆ. ಇದಕ್ಕೆ ಇವರು ಈ ಸಂಘದ ಹೆಸರಿನಿಂದ ಕರ್ನಾಟಕ ಸೆಂಟ್ರಲ್ ಬ್ಯಾಂಕಿನಲ್ಲಿ ಅಜ ಮಾಸ ೧೬೦೦-೧೪೦೦ ರೂಪಾಯಿ ತೇವು ಇಟ್ಟಿರುವದೇ ಪ್ರತ್ಯಕ್ಷ ಉದಾಹರಣೆಯು. ಇದಲ್ಲದೆ ಶ್ರೀ ಬಸವ ಜಯಂತಿಯ ಪ್ರಸಂಗಾನುಸಾರ ಮಧ್ಯದಲ್ಲಿ ಪ್ರಸಿದ್ಧ ವ್ಯಾಖ್ಯಾತರನ್ನು ಮತ್ತು ಕೀರ್ತನಕಾರರನ್ನು ಕರೆಯಿಸಿ ಜನರಿಗೆ ಅವರ ಉಪದೇಶದ ಲಾಭವನ್ನು ಒದಗಿಸಿ ಕೊಡುತ್ತಿದ್ದಾರೆ. ಇದರಿಂದ ಇವರು ಎಲ್ಲರಿಗೂ ಪ್ರಿಯರಾಗಿದ್ದಾರೆ. ಹೀಗಿದ್ದು ಇತ್ತೀಚೆಗೆ ಇವರ ಮೇಲೆ ಟೀಕಾತ್ಮಕ ಲೇಖಗಳು ಬರುತ್ತಿರುವದು ನಮಗೆ ಕಂಡುಬಂದಿದೆ. ಟೀಕೆ ಮಾಡುವಷ್ಟು ಕೆಲಸ ಮಾಡುವದು ಸುಲಭವಲ್ಲವೆಂದು ಹೇಳಬೇಕಾಗಿಲ್ಲ. ಹೀಗೆ ಟೀಕಿಸಿ ಕಾರ್ಯಕರ್ತರಲ್ಲಿ ನಿರುತ್ಸಾಹವನ್ನುಂಟುಮಾಡಿ, ಉತ್ತಮವಾಗಿ ಪಡೆದಿರುವ ಇಂಥ ಅತ್ಯುಪಯುಕ್ತ ಸಂಸ್ಥೆಗೆ ಧಕ್ಕೆ ತರುವದು ವಿಹಿತವಲ್ಲವೆಂದು ಹೇಳಿ, ಇಂಥ ಟೀಕೆಗಳ ಕಡೆಗೆ ಯಾರೂ ಲಕ್ಷ ಕೊಡಬಾರದೆಂದು ನಮ್ಮ ಸೂಚನೆಯು.

ತಾ. ೧೦-೬-೧೯೩೪.

ರಾವಸಾಹೇಬ ಎಸ್. ಡಿ. ಮಾನ್ವಿ, ಎಮ್. ವ್ಹಿ. ಕೋಟೆ ಬೆಂಚ ಮ್ಯಾಜಿಸ್ಟ್ರೇಟ ಮತ್ತು ಕಾಟನ್ 'ಮಾರ್ಕೇಟ್ ಅಸೋಸಿಯೇಶನ್ ಪ್ರೆಸಿಡೆಂಟರು, ಎಸ್. ಎಸ್. ಯಳಮೇಲಿ ಹತ್ತಿ ಅರಳೆ ವ್ಯಾಪಾರಿಗಳು, ಜಿ. ಎಸ್. ತಡಸ ಮುನಸಿಪಾಲಿಟಿ ಮೆಂಬರರು ಎಚ್. ಎಲ್. ಬೇವಿನಕಟ್ಟಿ ಮುನಸಿಪಾಲಿಟಿ ಮೆಂಬರರು ಎಸ್. ಎ. ತುಪ್ಪದ ಹತ್ತಿ ಅರಳೆ ವ್ಯಾಪಾರಿಗಳು, ಎಸ್. ಎ. ಮಾನ್ವಿ ಇಲೆಕ್ಟ್ರಿಕ್ ಕಂಪನಿ ಮಾಲಕರು, ಡಾಕ್ಟರ ಡಿ. ವ್ಹಿ. ಕಲ್ಲೂಳಗಿ ಎಂ. ಬಿ. ಬಿ. ಎಸ್, ಟಿ. ವ್ಹಿ. ಕೋಟೆ ಪ್ರೆಸಿಡೆಂಟ ಗದಗ ಬೆಟಗೇರಿ ಮುನಸಿಪಾಲಿಟಿ, ರಂಗಲಿದಾಸ ರಾಮದಾಸ ಹತ್ತಿಅರಳೆ ವ್ಯಾಪಾರಿಗಳು ಎನ್. ಕೆ. ಹುಯಿಲ್‌ಗೋಳ ಬಿ. ಎ. ಎಲ್. ಎಲ್. ಬಿ. ಕೆ. ಎಸ್. ಹುಬ್ಬಳ್ಳಿ ಬೆಂಚ್ ಮ್ಯಾಜಿಸ್ಟ್ರೇಟ್ ಮತ್ತು ಮುನಸಿಪಾಲಿಟಿ ಮೆಂಬರ್, ಎಸ್. ಎ. ಶಟ್ಟಿ ರಿಟಾಯರ್ಡ ಸ್ಕೂಲಬೋರ್ಡ ಅಡ್ಮಿನಿಸ್ಟ್ರೇಟವ್ವ ಅಧೀಕರ, ಎಂ. ಸಿ. ತುಮ್ಮಿನಕಟ್ಟಿ ಎಂ. ಎಸ್. ಸಿ. ಪಿ. ಎಚ್. ಡಿ. ಕರಿಯಪ್ಪ ಬಸಪ್ಪ ಮಾನ್ವಿ ಯಜಮಾನರು ಎ. ಎನ್. ಜಾಲಿಹಾಳ ವಕೀಲರು, ಆರ್. ಎಮ್. ಢಾಲಾಯತ್ ಬಿ. ಎ. ಎಲ್. ಎಲ್. ಬಿ. ಮತ್ತು ಮುನಸಿಪಾಲಿಟಿ ಮೆಂಬರರು ಕೆ. ಎನ್ ಸಾಂತಗೇರಿ ವಕೀಲರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಮತ್ತು ಮುನಸಿಪಾಲಿಟಿ ಮೆಂಬರರು, ಸಿ. ಬಿ. ರಾಚಯ್ಯನವರ ವಕೀಲರು ಮುನಸಿಪಾಲಟಿ ಮೆಂಬರರು ವ್ಹಿ. ಎ. ಶಟ್ಟಿ. ಮ್ಯಾನೇಜರ ಕಾಟನ್ ಸೇಲ ಸೊಸಾಯಿಟಿ, ಎಫ್. ಬಿ. ಲಕ್ಷೆಶ್ವರ ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಮೆಂಬರರು. ಪ್ರಭಯ್ಯ ವೀರಯ್ಯ ಕಂಬಿಮಠ ಸರಾಫರು; ಎ. ಎ. ಹಣಿಗಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮತ್ತು ಮುನಸಿಪಾಲಿಟಿ ಮೆಂಬರರು, ಎಸ್. ಕೆ. ಮಾನ್ವಿ ಹತ್ತಿ ಅರಳೆ ವ್ಯಾಪಾರಿಗಳು, ಎಲ್. ವ್ಹಿ. ಶಿರೋಳ ಡಿಸ್ಟ್ರಿಕ್ಟ ಸ್ಕೂಲ್ ಬೋರ್ಡ ಕವಿಯೊಟ ಚೇರಮನ್ ಮತ್ತು ಮುನಸಿಪಾಲಿಟಿ ಮೆಂಬರರು ಧರ್ಮಪ್ಪ ಶಾಂತವೀರಪ್ಪ ಕಾರಟಗಿ ಲಾಯಬ್ರರಿ ಜಾಗಾ ದಾನಕೊಟ್ಟವರು. ದೊಡ್ಡವೀರಪ್ಪ ಭಂಗಾರ ಶಟ್ರ ಹತ್ತಿ ಅರಳೆ ವ್ಯಾಪಾರಿಗಳು.

### ಮುಸ್ಕಿ ಭಜನಾ ಸಂಘ.

ನೈಜಾಂ ರಾಜ್ಯದ ರಾಯಚೂರು ಜಿಲ್ಲಾ ಮುಸ್ಕಿ ಗ್ರಾಮದಲ್ಲಿ ಬ್ರಾಹ್ಮಣರ ಸಂಖ್ಯೆ ೧೦೦ಕ್ಕೆ ಮೇಲ್ಪಟ್ಟಿದೆ. ಆದರೂ ಇಲ್ಲಿದ್ದ ಮಾರುತಿ ಗುಡಿಯ ಸುತ್ತಲೂ ತಿಪ್ಪೆಗುಂಡಿ, ಕಸಕಡ್ಡಿಗಳ ರಾಶಿಯೇ ಇದ್ದಿತು. ನಾವು ಕೆಲವು ಬ್ರಾಹ್ಮಣ ತರುಣರು ಈ ದುರವಸ್ಥೆಯನ್ನು ನೋಡಿ ಎರಡು ತಿಂಗಳುಗಳಿಂದ ಆ ಸ್ಥಳವನ್ನು ಸ್ವಚ್ಛ ಮಾಡಿ ಆ ಮೇಲೆ ಇಲ್ಲಿಯ ಬ್ರಾಹ್ಮಣ ಮಹಾಶಯರ ಸಹಾಯದಿಂದ ಈ ಮಾರುತಿ ಗುಡಿಯ ಮುಂದೆಯೇ ಮಹಾ ಸಮಾರಾಧನೆ ಮಾಡಿಸಿ ಪ್ರತಿನಿತ್ಯ ಅಲ್ಲಿ ಭಜನೆಯನ್ನು ಮಾಡುತ್ತಿದ್ದೇವೆ. ಎಂಬುದಾಗಿ ಭಜನಾಸಂಘದ ಅಧ್ಯಕ್ಷರು ತಿಳಿಸುತ್ತಾರೆ. ಇದು ಅಭಿನಂದನೀಯವಾದ ಪ್ರಯತ್ನ; ತರುಣರಿಗೆ ಭೂಷಣವಾದುದು.

### ಸ್ತುತ್ಯ ದಾನ.

ಇದೇ ತಿಂಗಳ ೬ನೇ ತಾರೀಖಿನ ದಿವಸ ಶ್ರೀಯುತ ಶಿವರುದ್ರಪ್ಪನವರು ಕೋರೇರವಾಲಿ ಇವರು ಹೆಬ್ಬಾಳ ಮುಕ್ಕಾಮಿನಲ್ಲಿ ನೆರವೇರಿಸಿದ ತಮ್ಮ ಪುತ್ರನ ವಿವಾಹೋತ್ಸವದ ಕಾಲದಲ್ಲಿ ಸಮಾಜೋದ್ಧಾರಕ ಸಂಸ್ಥೆಯಾದ ಶ್ರೀ ನಾಗನೂರ ಮಹಾಸ್ವಾಮಿಗಳಿಂದ ಬೆಳಗಾವ ಶಹಾಪುರದಲ್ಲಿ ಸ್ಥಾಪಿಸಿದ ವೀರಶೈವ ಫ್ರೀ ಬೋರ್ಡಿಂಗಕ್ಕೆ ವರನ ಕಡೆಯಿಂದ ೫೧ ರೂಪಾಯಿಗಳನ್ನೂ ಕನ್ಯೆಯ ಕಡೆಯಿಂದ ೧೦ ರೂಪಾಯಿಗಳನ್ನೂ ದಾನವಾಗಿ ಕೊಡಿಸಿದರೆಂದು ತಿಳಿಸಲು ತುಂಬಾ ಸಂತೋಷವೆನಿಸುವದು. ಲಗ್ನದಲ್ಲಿ ದುಂದುವೆಚ್ಚ ಮಾಡದೆ ಸನ್ಮಾರ್ಗದರ್ಶಿಗಳಾದ ಈ ಮಹನೀಯರಂತೆ ಪರೋಪಕಾರದಿಂದಾಚರಿಸಿ ಇಹಪರ ಸುಖಿಗಳಾಗಬೇಕೆಂದು ಬೋರ್ಡಿಂಗಿನ ವ್ಯವಸ್ಥಾಪಕರು ನಿರ್ನಂತಿವಾಡಿಕೊಳ್ಳುತ್ತಾರೆ.

## ಶ್ರೀ ಬಸವೇಶ್ವರ ಸ್ತೋತ್ರ.

ದಾಟು:—"ಎನಿತು ಇನಿದು ಈ ಕನ್ನಡ ನುಡಿಯು" ಎಂಬಂತೆ.

**ಸಮತಾಭಾವದ ಶ್ರೀ ಬಸವೇಶನ|**
**ಪ್ರೇಮಾದರದಿಂ ಪಾಡುತ ನಮಿಸುವ** ||ಪಲ್ಲ||

**ಭಕ್ತಿಯ ಬೆಳಕನು ಲೋಕಕೆ ಬೀರಿ |**
**ಮುಕ್ತಿಯ ಮಾರ್ಗವ ತೋರಿದ ಹೋರಿ |**
**ಜನ ಕಲ್ಯಾಣಕೆ ಪ್ರಾಣವ ನೀಡಿದ** ||೧||

**ಶಿವಾನುಭವದ ಸವಿಯನು ತಿಳಿಸಿ |**
**ಮೃದು ವಚನಾಮೃತ ಪದುಳದಿ ಸುರಿಸಿ |**
**ಕೃತಿಯಿಂ ಜನಹಿತ ಗೈದಿಹ ಭಕ್ತನ** ||೨||

**ಕಾಯಕ ರೂಪದ ವರ ಕೈಲಾಸಕೆ |**
**ಸೋಪಾನವನು ಪ್ರೇಮದಿ ರಚಿಸಿ |**
**ಕೀರ್ತಿಯ ಪೊಂದಿದ ಸುಂದರ ಶರಣನ** ||೩||

—ಅನೆಂದ ಕವಿ ಕುರಗುಂದ.

# ಗೆಲುವಿನ ಮೂರು ಗುಟ್ಟಿನ ಮಾತು!

( ಬರೆದವ— **ಅರಿತಪ್ಪ ನುರಿತಪ್ಪ ಬೆರೆತಪ್ಪನವರ.** )

ಗೆಲವು ಯಾರಿಗೆ ಬೇಡ? ಎಲ್ಲರಿಗೂ ಬೇಕು. ಯಾತರಲ್ಲಿ ಗೆಲುವು ಬೇಡ? ಎಲ್ಲವರಲ್ಲಿಯೂ ಬೇಕು. ಆಡುವಲ್ಲಿ ಹುಡುಗರಿಗೆ, ಓದುವಲ್ಲಿ ಬಾಲಕರಿಗೆ, ಮಾಡುವಲ್ಲಿ ತರುಣರಿಗೆ, ಹೀಗೆ ಎಲ್ಲರಿಗೂ ಎಲ್ಲ ಕೆಲಸಗಳಲ್ಲಿಯೂ ಗೆಲವು ಬೇಕೇ ಬೇಕಲ್ಲನೆ? ಸೋಲನ್ನು ಯಾರಾದರೂ ಬಯಸುತ್ತಾರೆಯೆ? ಇಲ್ಲವೇ ಇಲ್ಲ. ಹಾಗಾದರೆ ಎಲ್ಲರಿಗೂ ಏಕೆ ಗೆಲವು ಬರುವುದಿಲ್ಲ?

ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಗೆಲ್ಲಬೇಕಾಗಿದೆ. ಸೈನಿಕನು ಕಾಳಗದಲ್ಲಿ ಗೆಲ್ಲಬೇಕಾಗಿದೆ. ವರ್ತಕನು ವ್ಯಾಪಾರದಲ್ಲಿ ಗೆಲ್ಲಬೇಕಾಗಿದೆ. ಹೀಗೆ ಸಕಲರೂ ತಾವು ಹಿಡಿದ ಕೆಲಸದಲ್ಲಿ ತಮಗೆ ಯಾವಾಗ ಗೆಲುವಾದೀತೋ ಎಂದೇ ಹಾರೈಸುತ್ತಿರುತ್ತಾರಲ್ಲನೆ? ನನ್ನ ಇದೊಂದು ಕೆಲಸ ಕೈಗೂಡಿತೆಂದರೆ ನನಗೆ ಸಮಾನರಾರು? ನನ್ನ ಸುಖದ ಸುರಿಮಳೆಯೆಂದೇ ಅಳಿನಿಂದ ಅರಸಿನವರೆಗೂ ದರಿದ್ರನಿಂದ ಧನಿಕನವರೆಗೂ, ಪಾಮರನಿಂದ ಪಂಡಿತನವರೆಗೂ ಸಕಲರೂ ತಮ್ಮ ತಮ್ಮ ಕೆಲಸದ ಗೆಲುವನ್ನೇ ಎದುರು ನೋಡುತ್ತಿದ್ದಾರಲ್ಲನೆ? ಆದರೆ ಬಹುಜನರು ನೋಲಿನಿಂದ ಸುಟ್ಟು ಸುಣ್ಣಾಗಿರುವುದೇಕೆ?

ಅವರಿಗೆ ಗೆಲುವಿನ ಗುಟ್ಟು ಗೊತ್ತಿಲ್ಲ. ಗೆಲುವಾಗಬೇಕೆಂಬ ಬಯಕೆಯೊಂದಿದ್ದ ಮಾತ್ರದಲ್ಲಿ ಗೆಲುವು ಬರುವುದೆ? ಇಲ್ಲವೇ ಇಲ್ಲ. ಗೆಲುವಿನ ಗುಟ್ಟನ್ನು ತಿಳಿದುಕೊಂಡು ಹಾಗೆ ನಡೆಯಲೇಬೇಕು. ಈ ಗುಟ್ಟು ಬಹುಜನರಿಗೆ ಗೊತ್ತಿಲ್ಲ. ತರುಣರಿಗಂತೂ ಈ ಗುಟ್ಟನ್ನು ಮೊದಲು ತಿಳಿಸಬೇಕು. ಇದಕ್ಕಾಗಿಯೇ ಇನೇಕ ತರುಣರ ಅನುಕಂಪನೀಯ ಸ್ಥಿತಿಯನ್ನು ನೋಡಿ ಮನನೊಂದು ಈ ಗುಟ್ಟನ್ನು ಗಟ್ಟಿಯಾಗಿ ಹೇಳಿದ್ದಾಗಿದೆ.

(೧) **ಉತ್ಸಾಹ**—ತನ್ನ ಕೆಲಸದಲ್ಲಿ ತನಗೆ ಗೆಲುವು ಬರಬೇಕಾದರೆ ಮೊದಲು ತಾನು ಉತ್ಸಾಹಶೀಲನಾಗಲೇಬೇಕು. ಉತ್ಸಾಹವೇ ಗೆಲುವಿನ ಮೂಲ. ತನ್ನ ಕೆಲಸ ಪೂರೈಸುವಲ್ಲಿ ತನಗೇನೇ ಉತ್ಸಾಹವಿಲ್ಲವಿದ್ದರೆ ಇದಕ್ಕೆ ಅನ್ಯರ ಸಹಾಯ ಸೌಲಭ್ಯಗಳು ದೊರೆಯುವುದಿಲ್ಲ. ಅನ್ಯರ ನೆರವಿಲ್ಲದಿದ್ದರೆ ಗೆಲುವು ತನ್ನ ಮನಸ್ಸಿನ ಮಂಡಿಗೆಯೇ ಸರಿ,

(೨) **ಸಾಹಸ**— ಗೆಲುವಿಗೆ ಉತ್ಸಾಹವೊಂದೇ ಸಾಲದು ಇದಕ್ಕೆ ತಕ್ಕಂತೆ ಸಾಹಸವೂ ಬೇಕು. ಎಷ್ಟೇ ತೊಂದರೆಗಳು ಬರಲಿ; ನಿರಾಶನಾಗಬಾರದು. ಉತ್ಸಾಹ ಕುಗ್ಗಬಾರದು. ಪ್ರತಿಕೂಲಗಳೂ, ವಿಘ್ನಗಳೂ, ಉತ್ಸಾಹ ಸಾಹಸಗಳನ್ನು ಪುಟಗೊಳಿಸುವ ಉರುವಲುಗಳಾಗಬೇಕೇ ವಿನಾ ನೊಂದಿಸುವ ನೀರಾಗಬಾರದು. ವಿಘ್ನಗಳು ಬಂದಷ್ಟು ಸಾಹಸವು ತೀಕ್ಷ್ಣವಾಗಬೇಕು. ಗೆಲುವು ಸಮಿಸಿಸಿತೆಂದು ದೈಮರೆತು ಸಾಹಸ ಮಾಡಬೇಕು.

(೩) **ಬುದ್ಧಿಶಕ್ತಿ**— ತನ್ನ ಕಾರ್ಯಕ್ಕೆ ಆವಶ್ಯಕವಾಗಿರುವ ಬುದ್ಧಿ ಶಕ್ತಿಯಿಲ್ಲದೆ ಉತ್ಸಾಹ ಸಾಹಸಗಳಿಂದಲೇ ಗೆಲುವು ಬರುವುದಿಲ್ಲ. ಸಾಹಸವಿಲ್ಲದ ಉತ್ಸಾಹ ಕರಡದ ಬೆಂಕಿ. ಬುದ್ಧಿಯಿಲ್ಲದ ಸಾಹಸೋತ್ಸಾಹಗಳು ಹಸಿಕಟ್ಟಿಗೆಯ ಬೆಂಕಿ, ತನ್ನ ಕೆಲಸದ ಹಿಂದು ಮುಂದಿನ ತಿಳುವಳಿಕೆಯಿರಬೇಕು. ಯೋಗ್ಯಾಯೋಗ್ಯಗಳ ಪರಿಜ್ಞಾನವಿರಬೇಕು, ಗ್ರಾಹಕ ಶಕ್ತಿ, ಸ್ಮರಣ ಶಕ್ತಿಗಳಿರಬೇಕು.

ಹೀಗೆ ಉತ್ಸಾಹ, ಸಾಹಸ, ಮತ್ತು ಬುದ್ಧಿ ಶಕ್ತಿಗಳು ಯಾರಲ್ಲಿರುತ್ತವೆಯೋ ಅವರು ಗೆಲ್ಲುವರು. ಇವುಗಳಲ್ಲಿ ಯಾವುದಿಲ್ಲದಿದ್ದರೂ ಸೋಲು ಬಂದೇ ಬರುವದು. ಕೆಲವರೇನೋ ಅನ್ಯರಿಗೆ ಕಡಕೊಡುವಷ್ಟು ಬುದ್ಧಿಯುಳ್ಳವರಿರುತ್ತಾರೆ ಆದರೆ ಅವರಲ್ಲಿ ಉತ್ಸಾಹ ಸಾಹಸಗಳೇ ಇರುವುದಿಲ್ಲ. ಕೆಲವರ ಉತ್ಸಾಹವೇನೋ ನೀರಿನಮೇಲಿನ ಗುಳ್ಳೆಯಂತೆ ತಟ್ಟನೆ ತೋರಿ ತಟ್ಟನೆ ಅಡಗುತ್ತದೆ. ಸಾಹಸವೆಂಬುದೇ ಅವರಲ್ಲಿರುವುದಿಲ್ಲ. ಕೆಲವರು ನಿರುತ್ಸಾಹದ ಪುತ್ಥಳಿಗಳಾಗಿರುತ್ತಾರೆ. ಕೆಲವರ ಉತ್ಸಾಹ ಸಾಹಸಗಳಿಗೆ ಮಿತಿಯಿಲ್ಲ. ಆದರೆ ಕುದುರೆಯ ಮುಂದೆ ರಥವನ್ನು ಕಟ್ಟುವ ಬುದ್ಧಿ! ಹೀಗೆ ಈ ಮೂರರಲ್ಲಿ ಕೊರತೆಗಳಿರುವುದರಿಂದಲೇ ಗೆಲುವು ಬರುವುದಿಲ್ಲ.

ನಮ್ಮ ದೇಹದಲ್ಲಿ ಸೊಂಟದವರೆಗಿನ ಕೆಳಭಾಗವೇ ಉತ್ಸಾಹ. ಅದರ ಮೇಲಣ ಕುತ್ತಿಗೆಯವರೆಗಿನ ಎದೆಯ ಭಾಗವೇ ಸಾಹಸ. ಮೇಲಣ ಶಿರಸ್ಸೇ ಬುದ್ಧಿಶಕ್ತಿ. ದೇಹದ ಈ ಮೂರು ಭಾಗಗಳಲ್ಲಿ ಯಾವುದಿಲ್ಲದಿದ್ದರೆ ಮನುಷ್ಯನು ಮನುಷ್ಯನಾಗಿ ಜೀವಿಸುವನು? ಇವು ಮೂರೂ ಬೇಕೇ ಬೇಕಲ್ಲವೆ? ಹಾಗೆಯೇ ಗೆಲುವಿನ ಗಂಡಿಗೆ ಈ ಮೂರೂ ಭಾಗಗಳು ಇದ್ದೇ ಇರುತ್ತವೆ ಇವುಗಳಲ್ಲಿ ಯಾವುದಿಲ್ಲದಿದ್ದರೂ ಅವನು ಈ ಸಂಸಾರ ಸಮರದಲ್ಲಿ ಸೋಲಿನ ಜೋಲು ಮೋರೆಯನ್ನಿಟ್ಟುಕೊಂಡು ಜೀವಿಸಬೇಕಾಗುತ್ತದೆ.

ಆದಕ್ಕಾಗಿ ತರುಣರೇ, ಉತ್ಸಾಹವೇ ನಿಮ್ಮ ಗಂಡು ಮೆಟ್ಟು. ಅದಿಲ್ಲದವರಲ್ಲಿ ಗಂಡುತನ ಕಡಿಮೆ. ಅದಕ್ಕಾಗಿ ಇಪ್ಪತ್ತನೆಯ ವರುಷದಲ್ಲಿಯೇ ಎಪ್ಪತ್ತನೆಯ ವರುಷದವರ ನಿರುತ್ಸಾಹಗಳ ಹೊದಿಕೆಯನ್ನು ಹಾಸಿ ಹೊದ್ದುಕೊಂಡು ನಿಮ್ಮ ಮುಂದಣ ಜೀವಿತವನ್ನು ದುಃಖದ ಮಡುವಿನಲ್ಲಿ ಕಳೆಯುವಂತೆ ಮಾಡಿಕೊಳ್ಳಬೇಡಿರಿ. ಉತ್ಸಾಹ ತಾಳಿರಿ. ದೇಹಶಕ್ತಿ ಮಾನಸಿಕ ಬಲಗಳೆಂಬ ಉರುವಲ ಗಾಳಿಗಳಿಂದ ಉತ್ಸಾಹವೆಂಬ ಅಗ್ನಿಯನ್ನು ಪುಟಗೊಳಿಸಿ ತೇಜೋಮಯವಾದ ನಿಮ್ಮ ಮುಖವನ್ನು ಮುಂದೆ ಮಾಡಿ ಕಾರ್ಯಕ್ಕೆ ಹೊರಡಿರಿ.

ಸಾಹಸವೇ ನಿಮ್ಮ ಕೆಚ್ಚೆದೆ. ಎದೆಯಿಲ್ಲದಿದ್ದ ಮೇಲೆ ಮುದಿತನ ಬಂದಿತೆಂದೇ ತಿಳಿಯಿರಿ. ಎದೆಯುಳ್ಳ ಗಂಡು ಸುಡುಗಾಡನ್ನು ಸ್ವರ್ಗ ಮಾಡಬಲ್ಲ. ಎದೆಯಿಲ್ಲದ ಹೇಡಿ ಸ್ವರ್ಗಕ್ಕೆ ಹೋದರೂ ಅದನ್ನು ಸುಡುಗಾಡ ಮಾಡುವನು. ಯಾವ ಕಷ್ಟ ನಷ್ಟಗಳಿಗೂ ಅಂಜಿ ಅಳುಕದ ಕೆಚ್ಚೆದೆಯುಳ್ಳವರು ರೂಪದಲ್ಲಿ ಹೆಣ್ಣಾದರೂ ಗುಣದಲ್ಲಿ ಗಂಡು. ಇಂತಹ ಗಂಡುಗಲಿಗಳೇ ಗೆಲುವಿನ ನಿಶಾನೆಯನ್ನು ಹಿಡಿದುಕೊಳ್ಳುವರು.

ಮಂದತನ, ಮಳ್ಳುತನಗಳನ್ನು ಬಿಟ್ಟು ಚುರುಕು ಬುದ್ಧಿಯುಳ್ಳವರಾಗಿರಿ. ವಿವೇಕವಿರಲಿ. ಹಿತಾಹಿತಗಳ ಮುಂದಾಲೋಚನೆಯಿರಲಿ. ಒಣ ಸಾಹಸೋತ್ಸಾಹಗಳು ಗುದ್ದವನ್ನು ಬಗೆದು ಇಲಿಯ ಬೇಟೆಯನ್ನು ಮಾಡಿದಂತಾಗುವುದು. ನೀರು ಆಳವಾಗಿದ್ದರೂ ಹೆರಿಯದಿದ್ದರೆ ಕೆಡುವಂತೆ ಬುದ್ಧಿಶಕ್ತಿಯಿದ್ದರೂ ಆಸ್ಪರಲ್ಲಿ ಸರಳ ಮಾರ್ಗದಿಂದ ತಮ್ಮ ವಿಚಾರ ಝರಿಯನ್ನು ಹೋಗಗೊಡದಿದ್ದರೆ ಆ ಬುದ್ಧಿಗೆ ಮಂದತ್ವ ಬರುವುದು. ಆಸ್ಪರ ಸಲಹೆಯ ವಿನಾ ಅದು ತಿಳಿಯಾಗದು.

ಆದಕಾರಣ ಗೆಲುವು ಬೇಕೆಂಬುವವರು ಈ ಗುಟ್ಟಿನ ಮೂರು ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಲಿ. ಇವುಗಳಲ್ಲಿ ಯಾವುದು ತಮ್ಮಲ್ಲಿಲ್ಲವೋ ಅದನ್ನು ಸಂಪಾದಿಸಲಿ. ಆ ಮೇಲೆ ಈ ಮುಪ್ಪುರಿ ಹಗ್ಗದಿಂದ ಯಾವ ತಮ್ಮ ಬಯಕೆಯನ್ನಾದರೂ ಬಿಗಿದು ಕಟ್ಟಬಹುದು ಗೆಲುವಿನ ಡಂಗುರವನ್ನು ಹೊಡೆಸುತ್ತ ಮೆರೆಯಲಿ. ಇದನ್ನು ಅಂತು ಆಚರಿಸಿದರೆ ಗೆಲವು. ಮರೆತು ಮನಸೋತರೆ ಸೋಲು.

# ಹುಬ್ಬಳ್ಳಿ ವೀರಶೈವ ಮಡಿವಾಳರಿಗೆ ಶಿವದೀಕ್ಷೆ.

ಮೊದಲೇ ಪ್ರಕಟಿಸಿದಂತೆ ನಿನ್ನೆ ಸಾಯಂಕಾಲ ೭ ಘಂಟೆಗೆ ಇಲ್ಲಿಯ ಓಲಿ ಮಠದಲ್ಲಿ ಹುಬ್ಬಳ್ಳಿ ವೀರಶೈವ ಮಡಿವಾಳರ ಸಮುನ್ನತಿಗಾಗಿ ಹುಬ್ಬಳ್ಳಿ ವೀರಶೈವ ಜಾಹೀರ ಸಭೆಯು ಶ್ರೀ. ಪಾವಟೆ ಸಿದ್ಧರಾಮಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಇಲ್ಲಿಯ ವೀರಶೈವ ಮಡಿವಾಳರ ಸಮಾಜದವರೆಲ್ಲರು ಬಂದಿದ್ದರಲ್ಲದೆ ವೀರಶೈವ ಸಮಾಜದ ಸಭ್ಯ ಗೃಹಸ್ಥರೂ ಮುಂದಾಳುಗಳೂ ಹಾಜರಿದ್ದರು. ಈ ಸಭೆಯಲ್ಲಿ ಪಾಸಾದ ಮಹತ್ವದ ಠರಾವುಗಳು ಕೆಳಗಿನಂತೆ.

**ಠರಾವುಗಳು.**

(೧) ಈ ವೀರಶೈವ ಮಡಿವಾಳರು ಈ ವರೆಗೆ ಲಿಂಗಧಾರಣವನ್ನು ಪೂರ್ವದಿಂದಲೂ ಹೊಂದುತ್ತ ಬಂದಿರುತ್ತಾರೆ. ಆದರೆ ಅವಾಂತರ ಕಾರಣಗಳಿಂದ ಅವರ ಕಾಯಕವು ತಪ್ಪಿ ಲಿಂಗಾಯತರಲ್ಲದವರ ಬಟ್ಟೆಗಳನ್ನು ಮಡಿಮಾಡಹತ್ತಿದ್ದರಿಂದ ಅಷ್ಟಾವರಣಗಳಲ್ಲಿ ಕೆಲವು ಲೋಪವಾಗಿ ವೀರಶೈವ ಸಮಾಜದವರ ಬಳಕೆ ತಪ್ಪಿದೆ. ಇದು ಮಡಿವಾಳ ಕಾಯಕದವರಿಗೂ ಮತ್ತು ವೀರಶೈವ ಸಮಾಜಕ್ಕೂ ಧಾರ್ಮಿಕವಾಗಿಯೂ ಆರ್ಥಿಕವಾಗಿಯೂ ಹಾನಿಯಾಗುತ್ತಿರುವುದರಿಂದ ವೀರಶೈವ ಮಡಿವಾಳರು ಇನ್ನು ಲಿಂಗಾಯತರಲ್ಲದವರ ಬಟ್ಟೆಗಳನ್ನು ತೊಳೆಯುವುದನ್ನು ಬಿಡಬೇಕು. ಮತ್ತು ವೀರಶೈವರು ಅವರಿಗೆ ಧರ್ಮದ ಅಷ್ಟಾವರಣ ಪಂಚಾಚಾರಗಳ ಸಮಗ್ರ ಶಿವದೀಕ್ಷೆಯನ್ನು ಕೊಟ್ಟು ಉಳಿದ ವೀರಶೈವರಂತೆ ಅವರನ್ನು ಭೇದವಿಲ್ಲದೆ ಕಾಣಬೇಕು. ಗುರುಜಂಗಮ ಬಳಕೆಯಲ್ಲಿ ಯಾವ ನ್ಯೂನತೆ ಇಲ್ಲದೆ ಅವರೊಡನೆ ಸಮರಸ ಮಾಡಬೇಕು.

ಸೂಚಕರು—ಸಿದ್ಧಪ್ಪ ನಿಂಗಪ್ಪ ಬೆಳಗಲಿ,
ಅನುಮೋದಕರು— ಕಲ್ಲಪ್ಪ ಸತ್ತೂರ,
ಪುಷ್ಟಿ— ನೀಲಕಂಠಪ್ಪ ಬನ್ನೆ.

(೨) ವೀರಶೈವ ಮಡಿವಾಳರು ಶ್ರೀ. ಶಿದ್ಧಪ್ಪ ಬೆಳಗಲಿ ಇವರು ತಂದ ನಿರ್ಧಾರದಂತೆ ಪೂರ್ವದಿಂದಲೂ ವೀರಶೈವರಿದ್ದು ಈಗ ಅವಾಂತರ ಕಾರಣಗಳಿಂದ ಕಾಯಕ ಕ್ರಮವು ತಪ್ಪಿ ಕೆಲವು ಆವರಣಗಳು ಹಾಗು ಆಚರಣೆಗಳು ಅವರಲ್ಲಿ ಇಲ್ಲವಾಗಿವೆ. ಈಗ ಅವರು ಕಾಯಕ ಕರ್ಮವನ್ನು ಸರಿಪಡಿಸಿಕೊಳ್ಳುವ ನಿಶ್ಚಯವನ್ನು ಮಾಡಿರುವದರಿಂದ ವೀರಶೈವರು ತಮ್ಮ ಬಟ್ಟೆಗಳನ್ನು ವೀರಶೈವರಲ್ಲದವರಿಗೆ ತೊಳೆಯಲಿಕ್ಕೆ ಕೊಡಬಾರದು. ಅಷ್ಟಾವರಣ ಸಮಗ್ರ ದೀಕ್ಷೆಯನ್ನು ಅವರಿಗೆ ಕೊಟ್ಟು ಗುರುಜಂಗಮ ಬಳಕೆಯಲ್ಲಿಯ ಭೇದವಿಲ್ಲದೆ ವೀರಶೈವರಂತೆ ಅವರೊಡನೆ ಎಲ್ಲ ವೀರಶೈವರು ಸಮರಸ ಮಾಡಬೇಕು.

ಸೂಚಕರು— ಗುರುಶಾಂತಪ್ಪನವರು ಗೊಬ್ಬಣ್ಣನವರ
ಅನುಮೋದಕರು—ರಾಚಪ್ಪ ಶಿವಯೋಗಪ್ಪ ಕುಬಸದ
ಪುಷ್ಟಿ—ವೀರಪ್ಪ ಲಕ್ಕೀಮರದ.

(೩) ಶ್ರೀಮದ್ವಿಸವಾದಿ ಪ್ರಮಥರ ಆಚರಣೆಯಲ್ಲಿ ವಿಶ್ವಾಸವುಳ್ಳ ಮತ್ತು ಪೂರ್ವ ಸಂಪ್ರದಾಯದಂತೆ ಅನುಗ್ರಹವನ್ನು ಹೊಂದಿದ ಯೋಗ್ಯ ಪಟ್ಟಾಧಿಕಾರಿಗಳಿಂದ ಈ ವೀರಶೈವ ಮಡಿವಾಳರಿಗೆ ಸಮಗ್ರ ಶಿವದೀಕ್ಷೆಯನ್ನು ಕೊಟ್ಟು ಅಷ್ಟಾವರಣಕ್ಕೆ ಯೋಗ್ಯರನ್ನಾಗಿ ಮಾಡಬೇಕು. ಎಂದು ಈ ಸಭೆಯು ನಿರ್ಧರಿಸುತ್ತದೆ.

ಸೂಚಕರು—ದುಂಡಪ್ಪ ಗುರಪ್ಪ ಗೋಣಿ,
ಅನುಮೋದಕರು— ವಿರೂಪಾಕ್ಷಪ್ಪ ಪಾವಟಿ.
ಪುಷ್ಟಿ—ಗಂಗಾಧರಪ್ಪ ವಾಲಿ,

ಈ ಠರಾವಿಗೆ ಶ್ರೀ. ಪಿ. ಆರ್. ಹಿರೇಮಠ ವಕೀಲ ಇವರು ಕೆಳಗಿನಂತೆ ಉಪಸೂಚನೆ ತಂದರು.

ಪೂರ್ವ ಸಾಂಪ್ರದಾಯ ಪದ್ಧತಿಗನುಸರಿಸಿ ಅನುಗ್ರಹ ಹೊಂದದ ಪಟ್ಟಾಧಿಕಾರಿಗಳಿಂದ ದೀಕ್ಷೆ ಹೊಂದಬೇಕೆಂದಪೇಕ್ಷಿಸುವ ಮಡಿವಾಳರು ದೀಕ್ಷೆಯನ್ನು ಹೊಂದಬೇಕು.

ಈ ಉಪಸೂಚನೆಗೆ ಶ್ರೀ. ಎಫ್. ಎಂ. ಹಿರೇಮಠ ಇವರ ಅನುಮೋದನವನ್ನಿತ್ತರು. ನಂತರ ಶ್ರೀ. ಪಾವಟೆ ವಕೀಲರು ಪೂರ್ವ ಸಾಂಪ್ರದಾಯ ಪದ್ಧತಿಗನುಸರಿಸಿ ಅನುಗ್ರಹ ಹೊಂದಿರುವ ಯೋಗ್ಯ ಪಟ್ಟಾಧಿಕಾರಿಗಳಿಂದ ದೀಕ್ಷೆ ಹೊಂದಬೇಕೆಂದು ಸಮಂಜಸವಾದ ಸಕಾರಣಗಳೊಂದಿಗೆ ಸಕಲರು ಒಪ್ಪುವಂತೆ ತಿಳಿಸಿ ಹೇಳಿದರು. ಕಡೆಗೆ ಹೋಟೆಗೆ ಹಾಕಲು ಶ್ರೀ. ಹಿರೇಮಠ ವಕೀಲರು ತಂದ ಉಪಸೂಚನೆಯು ಬಿದ್ದುಹೋಯಿತು. ಮೂಲ ಸೂಚನೆಯು ಪಾಸಾಯಿತು.

(೪) ಈ ಎಲ್ಲ ನಿರ್ಧಾರಗಳಲ್ಲಿ ಕಂಡ ವಿಷಯಗಳು ಒಂದು ತಿಂಗಳಲ್ಲಿ ಪೂರ್ತಿಗೊಳಿಸುವದಕ್ಕೋಸ್ಕರ ಕೆಳಗಿನ ಸಮಗ್ರ ಗೃಹಸ್ಥರದೊಂದು ಸಂಗಡವನ್ನು ನೇಮಿಸಬೇಕು.
ಶ್ರೀಯುತರುಗಳಾದ

೧ ವೀರಪ್ಪ ಲಕ್ಕಿಮರ, ೨ ಗುರುಶಾಂತಪ್ಪ ಗೊಬ್ಬಣ್ಣನವ ೩ ಲೋಕಪ್ಪ ಕುಬಸದ, ೪ ಫಕೀರಯ್ಯ ಮಹಾಲಿಂಗಯ್ಯ ಹಿರೆಮಠ, ೫ ಶಿದ್ದಪ್ಪ ಹೂಗಾರ, ೬ ಗುರಪ್ಪನವರು ಶಿವಣಗಿ, ೭ ಶಿದ್ದಪ್ಪ ಬೆಳಗಲಿ, ೮ ನೀಲಕಂಠಪ್ಪ ಬನ್ನೆ ೯ ಫಕೀರಪ್ಪ ನಿಂಗಪ್ಪ ಬೆಳಗಲಿ ೧೦ ವೀರಪ್ಪ ಹುಚ್ಚಪ್ಪ ಹೆಬ್ಬಳ್ಳಿ, ೧೧ ಮುದಕಪ್ಪ ಪರಪ್ಪ ಕುಂದಗೋಳ, ೧೨ ಮಲ್ಲಪ್ಪ ಸತ್ತೂರ್ ೧೩ ಕಲ್ಲಪ್ಪ ಸತ್ತೂರ, ೧೪ ಬಸಪ್ಪ ಕುಂದಗೋಳ, ೧೫ ಯಲ್ಲಪ್ಪ ಕುಂದಗೋಳ.

ಸೂಚಕರು—ಶ್ರೀ. ಎಲ್. ಎಸ್. ಪಾಟೀಲ,
ಅನುಮೋದಕರು—ವೇ|| ಚಂದ್ರಶೇಖರ ಶಾಸ್ತ್ರಿ.

ಹುಬ್ಬಳ್ಳಿ ತಾ. ೧೬.


## ಪ್ರಕಟನೆ.

ಮಂಡಲದ ಶುದ್ಧ ಕೈನೂಲಿನ ಉತ್ತಮ ಖಾದಿ ಮಾರಾಟಕ್ಕೆ ಸಿದ್ಧವಾಗಿದೆ. ಒಟ್ಟಾಗಿ ಮಾರಲ್ಪಡುವುದು. ದರ ಮುಂತಾದವುಗಳ ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಿರಿ.

ವಿವರಃ— **ಅಂಗಿ ಅರವಿ (ಶರಟಿಂಗ)**

೮೧ ತಾಗೆಗಳು (ಗಂಜಿ ಆಗದೇ ಇದ್ದವು) } ಒಂದು ತಾಗೆಯ ಅಳತೆ
೨೩ ,, (ಗಂಜಿ ಆದವು) } ೩೩ ಇಂಚು ಅಗ
೧೦೪ ಅಂತು } ೧೧ ವಾರ ಉದ್ದ ಅಂದಾಜ

೧೫ ಪೇಟಾಗಳು (ಅಳತೆ ೮, ೧೧ ಮೊಳ) ಈ ಪ್ರಕಾರ ಇವೆ.

ವಿಳಾಸಃ—**ವಿರೂಪಾಕ್ಷಪ್ಪ ಪಟ್ಟಣಶೆಟ್ಟಿ.**
ಕಾರ್ಯದರ್ಶಿ
ವೀರಶೈವ ಖಾದಿ ಮಂಡಲ ಗದಗ.






ಶಾ. ಶ. ೧೮೫೬ ನೆಯ ಜ್ಯೇಷ್ಠ ಶು|| ೧೩ ಸೋಮವಾರ

# ಮೈಸೂರು ವೀರಶೈವ ಮಹಾಜನರ ಅಭಿನಂದನೀಯ ತೀರ್ಮಾನ.

ಬಾಳೆಹಳ್ಳಿ ಶ್ರೀಗಳನ್ನು ನೈಸೂರಿಗೆ ಬರಮಾಡಿಕೊಳ್ಳುವ ಮುನ್ನ ಕಳೆದ ೧೩ನೆಯ ತಾರೀಖಿನ ದಿವಸ ಮೈಸೂರಲ್ಲಿ ವೀರಶೈವ ಮಹಾಜನರು ಕೂಡಿ ಮಾಡಿದ ತೀರ್ಮಾನವು ಇದೇ ಸಂಚಿಕೆಯ ಹೀರೆ ಕಡೆ ಪ್ರಕಟವಾಗಿದೆಯಷ್ಟೆ. ವೀರಶೈವ ಜನಾಂಗಕ್ಕೆ ಭೂಷಣಪ್ರದವಾದ ಈ ತೀರ್ಮಾನನನ್ನು ಮಾಡಿದುದಕ್ಕೋಸ್ಕರ ಮೈಸೂರಿನ ವೀರಶೈವ ಮಹಾಜನರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಬಾಳೆಹಳ್ಳಿ ಶ್ರೀಗಳು ತಮಗೂ ಬಸವಾದಿ ಪ್ರಮಥರು ಪೂಜ್ಯರಾಗಿದ್ದಾರೆಂತಲೂ ಅವರು ಬೋಧಿಸಿದ ವೀರಶೈವ ಮತತತ್ವ ಗಳು ಮಾನ್ಯವಾಗಿವೆಯೆಂತಲೂ ಅಷ್ಟಾವರಣಯುಕ್ತ ವೀರಶೈವರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣಗಳಲ್ಲವೆಂತಲೂ ಈಗಿರತಕ್ಕ ವಿರಕ್ತ ಸ್ವಾಮಿಗಳು ಅಷ್ಟಾವರಣಾಂತರ್ಗತ ಜಂಗಮರೆಂತಲೂ ಒಪ್ಪಿ ಆ ಪ್ರಕಾರ ಸಾರ್ವಜನಿಕವಾಗಿ ಪ್ರಕಟಿಸಲೇಬೇಕು. ಹಾಗೆ ಮಾಡಿ ನಾಗಲೇ ಇವರನ್ನು ನಿಜವೀರಶೈವರು ಗುರುಗಳನ್ನಾಗಿ ಪುರಸ್ಕರಿಸು ವುದು ಯೋಗ್ಯ.

ಬಸವನು ಮಹಾ ಭಕ್ತ, ಮಹಿಮ, ಎಂಬ ನಾಲ್ಕು ಹೊಳಪಿನ ಮಾತುಗಳನ್ನಾಡಿ ಮಳ್ಳ ಭಕ್ತರ ಮುಖಕ್ಕೆ ಮಂಕು ಬೂದಿ ಯನ್ನು ತೂರಿ ಎಲ್ಲರಿಂದಲೂ ಮನ್ನಣೆಯನ್ನು ಹೊಂದಿ ಮೆರೆ ಯುತ್ತ ಸರ್ವಶ್ರೇಷ್ಠವಾದ ವೀರಶೈವ ಮತವನ್ನು ವಿರೂಪಗೊಳಿಸಿ ಸಮಾಜವನ್ನು ಛಿನ್ನಭಿನ್ನ ಮಾಡಿ ತಮ್ಮ ಶ್ರೇಷ್ಠತ್ವವನ್ನು ಸ್ಥಾಪಿ ಸುವ ಇವರ ನಿಂದ್ಯ ಪ್ರಯತ್ನಗಳಿಗೆ ವೀರಶೈವ ಮತಾಭಿಮಾನಿ ಗಳು ಇನ್ನು ಮೋಸ ಹೋಗುವರೆ?

ಕಳೆದೆರಡು ತಿಂಗಳುಗಳಿಂದಲೂ ಅನೇಕ ಮಹಾಶಯರು ಕೇಳಿದ ಪ್ರಶ್ನೆಗಳಿಗೆ ಈ ವರೆಗೂ ತಮ್ಮ ಪ್ರಕಟನೆಗಳಿಂದ ಅದೇಕೆ ಉತ್ತರಗಳನ್ನು ಪ್ರಕಟಿಸಿಲ್ಲ? ಪಂಚಾಚಾರ್ಯ ಪ್ರಭಾ ಪತ್ರಿಕೆ ಯಲ್ಲಿ ವೀರಶೈವ ಮತವನ್ನೇ ತಲೆಕೆಳಗೆ ಮಾಡುವ ಅನೇಕ ನಿಂದ್ಯ ಲೇಖನಗಳು ಪ್ರಕಟವಾಗುತ್ತಿದ್ದರೂ ಆ ವಿಷಯದಲ್ಲಿ ಇವರನ್ನೂ ಹೊಣೆಗಾರರನ್ನಾಗಿ ಮಹಾಜನರು ತಿಳಿದಿದ್ದರೂ ಆ ವಿಷಯವಾಗಿ ಒಂದು ಶಬ್ದವನ್ನಾದರೂ ಅದೇಕೆ ಉಚ್ಚರಿಸಿಲ್ಲ? ಬಸವಾದಿ ಪ್ರಮ ಥರ ನಿಂದಕ ಶಿರೋಮಣಿಗಳೇ ಈಗಲೂ ಇವರ ಹತ್ತಿರ ಮುಖ್ಯ ಮಂತ್ರಿಗಳಂತಿರುವುದೇಕೆ?

ಶ್ರೀಗಳು ತಾವು ಭಕ್ತರಿಂದಲೇ ಆರಿಸಲ್ಪಟ್ಟವರೆಂದು ಹೇಳು ತ್ತಿದ್ದಾರಷ್ಟೆ. ಎಂದಮೇಲೆ ಭಕ್ತರು ಕೇಳುವ ಪ್ರಶ್ನೆಗಳಿಗೆ ಆ ಗುರು ಪೀಠವಲ್ಲಿರುವವರೆಗಾದರೂ ಉತ್ತರಗಳನ್ನು ಹೇಳಲೇಬೇಕಾದುದು ಇವರ ಮೇಲಿದ್ದ ಹೊಣೆಗಾರಿಕೆಯಲ್ಲವೆ? ಮಾನ್ಯರಾದ ಉತ್ತರ ಕರ್ನಾಟಕದ ಅನೇಕ ಪ್ರಮುಖವೀರಶೈವರು ವಿಜ್ಞಾಪಿಸಿಕೊಂಡುದು ದಕ್ಕೆ ಈ ವರೆಗೇಕೆ ಪ್ರಕಟಿಸಿಲ್ಲ? ಹೀಗೆ ಸಮಾಜವನ್ನೇ ಉಪೇಕ್ಷಿ ಸುವುದು 'ಝಾರ ಶಾಹಿ' ಗಿಂತಲೂ ಹೆಚ್ಚಿನ ನಿರಂಕುಶತ್ವವಲ್ಲವೆ? ಇದು ಗುರುಪೀಠದಲ್ಲಿರುವವರಿಗೆ ಎಳ್ಳಷ್ಟಾದರೂ ಶೋಭಿಸುವುದೆ?

ಹೀಗೆ ಸಮಾಜದ ಕೇಳಿಕೆಯನ್ನು ನಿರ್ಲಕ್ಷಿಸಿ ಮತಕ್ಕೆ ವಿರೋಧವಾದ ರೀತಿಯಲ್ಲಿ ನಡೆಯುತ್ತ ಅಂತಹ ವಿಚಾರ ಪ್ರಸಾರಕ್ಕೆ ಪ್ರೋತ್ಸಾಹಿಸುತ್ತ ಪವಿತ್ರವಾದ ಗುರುಪೀಠದ ಪಾರಂಪರ್ಯವನ್ನು ನಾಶಗೊಳಿಸಲು ಪ್ರಯತ್ನಿಸುವ ಈ ಶ್ರೀಗಳಿಗೆ ತಲೆಬಾಗಿ ಗುರುತ್ವ ವನ್ನು ಒಪ್ಪಿಕೊಳ್ಳುವುದೆಂದರೆ ವೀರಶೈವಕ್ಕೂ, ಸ್ವಾಭಿಮಾನಕ್ಕೂ ವಿಶ್ರಾಂತಿಯನ್ನು ಕೊಟ್ಟಂತೆಯೇ ಸರಿಯೆಂದು ವೀರಶೈವ ಮತಾಭಿ ಮಾನಿಗಳು ಯೋಚಿಸುವುದು ಸಹಜವಲ್ಲವೆ?

ಆದುದರಿಂದ ಬಾಳೇಹಳ್ಳಿ ಶ್ರೀಗಳು ಈಗಲಾದರೂ ಜಾಗೃತ ರಾಗಿ ಆ ಪರಮಪೂಜ್ಯ ಶ್ರೀ ಜಗದ್ಗುರು ರೇವಣಸಿದ್ಧರ ಪೀಠದ ಪೂರ್ವ ಪದ್ಧತಿಯನ್ನು ಅಳಿಸದೆ ಬಸವಾದಿ ಪ್ರಮಥರಲ್ಲಿ ಭಕ್ತಿ ಭಾವಗಳನ್ನು ವಹಿಸುವುದು ವಿಹಿತ. ಇಲ್ಲವಾದರೆ ಬೆಂಗಳೂರು ವೀರಶೈವ ಮಹಾಜನರು ಇವರ ಗುರುತ್ವವನ್ನು ನಿರಾಕರಣೆ ಮಾಡಿ ದಂತೆ ಇವರು ಹೋಗುವಲ್ಲೆಲ್ಲಾ ನಿಜವಾದ ವೀರಶೈವ ಮತಾಭಿ ಮಾನಿಗಳು ಇವರ ವಿಷಯದಲ್ಲಿ ಅಸಹಕಾರವನ್ನೇ ಮಾಡದಿರ ಲಾರರು.

## ಶಿವಾನುಭವ ಮಂಟಪಗಳ ಉದಯ.

ವೀರಶೈವ ಮತದ ತಿರುಳು ತಿಳಿಯಬೇಕಾದರೆ ಶ್ರೀ ಬಸವಾದಿ ಪ್ರಮಥರ ವಚನಗಳ ಅಧ್ಯಯನ, ಅನುಭವಗಳು ಅತ್ಯಾವಶ್ಯಕ. ಅದಕ್ಕೋಸ್ಕರವೇ ಪೂರ್ವದಲ್ಲಿ ಶಿವಾನುಭವ ಮಂಟಪಗಳುಂಟಾಗಿ ದ್ದವು. ಈಗ ಅನೇಕರು ಆ ವಿಷಯದಲ್ಲಿ ಲಕ್ಷಿಸುತ್ತಿರುವುದು ಅಭಿನಂದನೀಯವಾದುದು.

ಧಾರವಾಡದ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿ ನಲ್ಲಿ ಈ ಸಾರಿ ಶಿವಾನುಭವ ಶಿಕ್ಷಣಕ್ಕೇನೇ ಪ್ರಾಮುಖ್ಯತೆಯನ್ನು ಕೊಟ್ಟುದು ಮತ್ತು ಅಲ್ಲಿಯ ವಿರಕ್ತ ಮಠದಲ್ಲಿ ಪ್ರತಿನಿತ್ಯ ಶಿವಾನು ಭವ ಗೋಷ್ಠಿ ನಡೆಯುವಂತೆ ಗೊತ್ತುಮಾಡಿರುವುದು, ವಿಜಾಪುರದ ಲ್ಲಿ ಶಿವಾನುಭವ ಕೂಟ ಏರ್ಪಟ್ಟುದುದು, ಗೆದಗಿನಲ್ಲಿ ಇದೇ ವಾರವೇ ಶಿವಾನುಭವ ಮಂಡಲ ಏರ್ಪಡಬಹುದ್ದಿರುವುದು, ಹಾವೇರಿ, ಇಳಕಲ್ಲ ಈ ಸ್ಥಳಗಳಲ್ಲಿ ಶಿವಾನುಭವ ಮಂಟಪ ಸ್ಥಾಪನೆಗಾಗಿ ಅಲ್ಲಿಯ ಉತ್ಸಾಹಿ ಜನರು ನಮಗೆ ಬರೆದಿರುವುದು ಈ ಎಲ್ಲ ಚಟುವಟಿಕೆಗ ಳನ್ನು ನೋಡಿದರೆ ಶಿವಾನುಭವ ಮಂಟಪಗಳ ಉದಯದ ಪುಣ್ಯ ಸಮಯವಿಸಿತೆಂದು ತೋರುವುದಿಲ್ಲವೆ?

ಜನಗಳಲ್ಲುಂಟಾದ ಈ ಜಾಗೃತಿಯನ್ನು ನೋಡಿಯಾದರೂ ಗುರುಗಳು ಮತ್ತು ಜಂಗಮರು ತಮ್ಮ ತಮ್ಮ ಮತಗಳಲ್ಲಿ

# ಶ್ರೀ ರಂಭಾಪುರಿ ಪೀಠಾಧೀಶರೂ ಮೈಸೂರು ಪಟ್ಟಣದ ವೀರಶೈವರೂ.

ಇದೇ ಮಾಹೆ ತಾ. ೧೭-೬-೩೪ನೇ ಸೋಮವಾರ ದಿವಸ ಮೈಸೂರು ಹಳೇ ಅಗ್ರಹಾರದಲ್ಲಿರುವ ತುರುವೇಕೆರೆ ಮ. ರಾ. ಭಕ್ತೆ ನಂಜಪ್ಪನವರ ಮನೆಯಲ್ಲಿ ಶ್ರೀಮಾನ್ ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ವೀರಶೈವ ಮುಖಂಡರ ಸಭೆ ಸೇರಿ ಈಗ ಬೆಂಗಳೂರಿಗೆ ದಯಮಾಡಿಸಿರುವ ಶ್ರೀ ರಂಭಾಪುರಿ ಸ್ವಾಮಿಯವರು ಮೈಸೂರಿಗೆ ಆಗಮಿಸುವ ವಿಷಯದಲ್ಲಿ ಸಾಯಂಕಾಲ ೭ ಗಂಟೆಯಿಂದ ರಾತ್ರಿ ಒಂದು ಗಂಟೆಯವರೆಗೆ ಚರ್ಚೆ ನಡೆಯಿತು. ಈ ಸಭೆಯಲ್ಲಿ ಸುಮಾರು ೨೦೦-೩೦೦ ಜನಗಳ ಮಟ್ಟಿಗೆ ಸೇರಿದ್ದರು. ಇವರಲ್ಲಿ ಬಹುಜನಗಳು ಶ್ರೀ ರಂಭಾಪುರಿ ಸ್ವಾಮಿಗಳವರು ಶ್ರೀ ಬಸವೇಶ್ವರ ಸ್ವಾಮಿಯವರಲ್ಲಿ ಪೂಜ್ಯ ಭಾವವನ್ನಿಟ್ಟಿಲ್ಲವೆಂತಲೂ ವೀರಶೈವರಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚಾತುರ್ವರ್ಣಗಳುಂಟೆಂದು ವಾದಿಸಿ ವೀರಶೈವರಲ್ಲಿ ಪರಸ್ಪರ ಈರ್ಷಾಸೂಯೆಗಳನ್ನುಂಟುಮಾಡುವ ಕೆಲವು ಪತ್ರಿಕಾಕರ್ತರಿಗೂ, ಶಾಸ್ತ್ರಿಗಳಿಗೂ ಪ್ರೋತ್ಸಾಹ ಮಾಡುತ್ತಿರುವುದಲ್ಲದೆ ತಕ್ಕ ಸಲಹೆಗಳನ್ನು ಕೊಡುತ್ತಿರುತ್ತಾರೆಂತಲೂ, ವಿರಕ್ತರಿಗೆ ಮೈಲಾರಂಭರ ಸಂಯೋಗವಿದೆಯೆಂದು ೧೪-೫-೩೪ನೆಯ ತಾರೀಖಿನಲ್ಲಿ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯವನ್ನು ತಿಳಿದು ತಮ್ಮ ಅಧಿಕಾರ ವಾಣಿಯಿಂದ ಖಂಡಿಸದೆ ಮೌನ ವ್ರತವನ್ನು ಆಚರಿಸಿರುವುದನ್ನು ನೋಡಿದರೆ ಮಹಾಸ್ವಾಮಿಯವರು ತಮ್ಮ ಕರ್ತವ್ಯವನ್ನು ಮರೆತಿರುವಂತೆ ಕಾಣುತ್ತದೆಂತಲೂ, ವಾದಿಸಿ ಈ ಅನುಮಾನಗಳಿಗೆ ಸ್ವಾಮಿಗಳವರು ಶಾಸ್ತ್ರ ಸಮ್ಮತವಾದ ಉತ್ತರಗಳನ್ನು ತಮ್ಮ ಅಧಿಕಾರ ವಾಣಿಯಿಂದ ಪ್ರಕಟಿಸಿ ನಮ್ಮ ಅನುಮಾನ ಪರಿಹಾರ ಮಾಡಿದ ತರುವಾಯ ಸ್ವಾಮಿಗಳವರನ್ನು ಬರ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟರು.

ಮುತ್ತೈ ಕೆಲವರು ಹೇಗಾದರು ಆಗಲಿ ಸ್ವಾಮಿಗಳವರನ್ನು ಕರಸಿಕೊಂಡು ಗೌರವಿಸಬೇಕೆಂದು ಅನಂತರ ನಮಗುಂಟಾಗಿರುವ ಅನುಮಾನ ಪರಿಚ್ಛೇದ ಮಾಡಿಕೊಳ್ಳೋಣವೆಂದು ಅಭಿಪ್ರಾಯ ಪಟ್ಟರು.

ಇದಾದ ಮೇಲೆ ಮ. ರಾ. ಎಂ. ಪಿ. ಲಿಂಗಪ್ಪಯ್ಯನವರು "ಶ್ರೀ ರಂಭಾಪುರಿ ಸ್ವಾಮಿಗಳವರನ್ನು ಯಾವ ವಿಧವಾದ ಪ್ರಶ್ನೆಗಳನ್ನು ಕೇಳದೆ, ಬರಮಾಡಿಕೊಂಡು ಗೌರವಿಸಬೇಕು" ಎಂಬ ಠರಾವನ್ನು ತಂದರು. ಈ ಠರಾವಿನ ಮೇಲೆ ಮ. ರಾ. ರಾ. ಬಿ. ಎಸ್. ಪುಟ್ಟಸ್ವಾಮಯ್ಯನವರು "ಶ್ರೀ ರಂಭಾಪುರಿ ಮಹಾಸ್ವಾಮಿಯವರ ಮೇಲೆ ಬಂದಿರುವ ಆಪಾದನೆಗಳಿಗೆ ಶಾಸ್ತ್ರಸಮ್ಮತವಾದ ಸದುತ್ತರವು ಮಹಾಸ್ವಾಮಿಯವರ ಅಧಿಕಾರ ವಾಣಿಯಿಂದ ಬಂದಮೇಲೆ ಆಗಮಾಡಿಕೊಂಡು ಗೌರವಿಸಬೇಕು." ಎಂಬ ಅಮೆಂಡ್‌ಮೆಂಟನ್ನು ತಂದರು. ಅನಂತರ ಸಭಾಸದರು ಓಟು ಮಾಡುವುದರ ಮೂಲಕ ಸಭೆಯವರ ಅಭಿಪ್ರಾಯವನ್ನು ತೆಗೆದು ಕೊಳ್ಳಬೇಕೆಂದು ಪ್ರೆಸಿಡೆಂಟರನ್ನು ಕೇಳಿಕೊಂಡರು. ಆದರೆ ಪ್ರೆಸಿಡೆಂಟರವರು ಮಹಾಜನಗಳ ಅಭಿಪ್ರಾಯದಂತೆ ಓಟು ತೆಗೆದು ಕೊಳ್ಳುವುದರ ಮೂಲಕ ಠರಾವಿನ ಪರಿಣಾಮವನ್ನು ನಿರ್ಧರಿಸದೆ ಸಕಾರಣವನ್ನು ತೋರಿಸದೆ ಈ ಸಭೆಯನ್ನು ಆಡ್ಜರ್ನ್ ಮಾಡುವುದಾಗಿ ಸೂಚಿಸಿದರು. ಅನಂತರ ಕೆಲವರು ಈ ಸಭೆಯನ್ನು ಆಡ್ಜರ್ನ್ ಮಾಡಬೇಕೆ ಬೇಡವೆ ಎಂಬುವುದನ್ನು ಓಟುಮೂಲಕ ಸಭಾಸದರ ಅಭಿಪ್ರಾಯವನ್ನು ನಿರ್ಧರಿಸಬೇಕೆಂದು ಒತ್ತಾಯ ಮಾಡಿ ಕೇಳಿದರು. ಆದರೂ ಈ ಸೂಚನೆಗೆ ಲಕ್ಷ್ಯ ಕೊಡದೆ ತಮ್ಮ ಸ್ವಂತ ಅಭಿಪ್ರಾಯದ ಮೇಲೆ ತಮ್ಮ ಪೀಠವನ್ನು ಬಿಟ್ಟು ಹೊರಟು ಹೋದರು. ಪ್ರೆಸಿಡೆಂಟರು ಈ ರೀತಿ ಮಾಡಿದ್ದು ಸರಿಯಲ್ಲವೆಂದೂ ಇದು ಸಭಾ ನಡಿಸತಕ್ಕ ನಿಯಮಗಳಿಗೆ ವಿರುದ್ಧವಾದ್ದೆಂದು ಅಭಿಪ್ರಾಯ ಪಟ್ಟು ಪ್ರೆಸಿಡೆಂಟರ ಸ್ಥಾನಕ್ಕೆ ಮ. ರಾ. ಸಾಹುಕಾರ ಟಿ. ಎಸ್. ಮಾದಪ್ಪನವರನ್ನು ಚುನಾಯಿಸಿಕೊಂಡು ಅವರ ಅಧ್ಯಕ್ಷತೆಯಲ್ಲಿ ಮ|| ರಾ|| ಬಿ. ಎಸ್. ಪುಟ್ಟಸ್ವಾಮಿಯವರು ತಂದಿಟ್ಟ ಅಮೆಂಡ್‌ಮೆಂಟ್ ಠರಾವನ್ನು ಮಹಾಜನಗಳ ಅಭಿಪ್ರಾಯದಂತೆ ಅಧ್ಯಕ್ಷರು ಓಟಿಗೆ ಹಾಕಿಸಿದರು. ಸದರಿ ಅಮೆಂಡ್‌ಮೆಂಟ್ ಠರಾವು ಏಕಮತದಿಂದ ಅನುಮೋದಿಸಲ್ಪಟ್ಟಿತು. ತರುವಾಯ ಅಧ್ಯಕ್ಷರಿಗೆ ಸಭೆಯ ಪರವಾಗಿ ಮ|| ರಾ|| ಎಂ. ಎನ್. ಮಹಂತದೇವರು ವಂದನೆಗಳನ್ನರ್ಪಿಸಿದ ಮೇಲೆ ಶ್ರೀಮಾನ್ ಮಹಾರಾಜರವರಿಗೆ ಶ್ರೇಯಃ ಪ್ರಾರ್ಥನೆ ಮಾಡಿ ತರುವಾಯ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

---

ಬಸವಾದಿ ಪ್ರಮಥರ ವಚನಗಳ ಪ್ರವಚನ ಮತ್ತು ವಿಚಾರ ವಿನಿಯಮು ಜರುಗುವಂತೆ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವಲ್ಲವೆ? ವಿಜಾಪುರ, ಗದಗ ಮೊದಲಾದ ಸ್ಥಳಗಳಲ್ಲಿಯ ಮಹಾಶಯರಂತೆ ಬೇರೆ ಸ್ಥಳಗಳ ಉತ್ಸಾಹಿ ವೀರಶೈವರೂ ತಮ್ಮ ತಮ್ಮ ಸ್ಥಳಗಳಲ್ಲಿ ಶಿವಾನುಭವ ಮಂಟಪಗಳನ್ನು ಏರ್ಪಡಿಸಲು ಪ್ರಯತ್ನಿಸುವುದು ಯೋಗ್ಯವಾಗಿಲ್ಲವೆ?

ಎಲ್ಲಾ ಸ್ಥಳಗಳಲ್ಲಿ ಏರ್ಪಡುವ ಸಂಸ್ಥೆಗಳೂ **ಶಿವಾನುಭವ ಮಂಟಪ** ಎಂಬ ಒಂದೇ ಹೆಸರನ್ನು ಹೊಂದುವುದು ಯುಕ್ತ. ಏಕೆಂದರೆ ಆ ಬಸವಾದಿ ಪ್ರಮಥರಂಟ್ಟ ಈ ಹೆಸರಿನಲ್ಲಿ ವಿಶೇಷವಾದ ಅರ್ಥ ಭಾವನೆಗಳು ವ್ಯಕ್ತವಾಗುತ್ತವೆ. ಮತ್ತು ಒಂದೇ ಹೆಸರಿಡುವುದರಿಂದ ಇವುಗಳ ಸಂಘಟನೆಗೆ ಅನುಕೂಲವಾಗುತ್ತದೆ. ಎಲ್ಲ ಶಿವಾನುಭವ ಮಂಟಪಗಳಲ್ಲಿಯೂ ಶಿವಶರಣರ ವಚನಗಳು ಒಬ್ಬರಿಂದ ಓದಲ್ಪಟ್ಟು ಅನಂತರ ಅವುಗಳ ಸಂಬಂಧವಾದ ವಿಚಾರ ವಿನಿಮಯವೂ ಆಗಬೇಕು. ತಮ್ಮಲ್ಲಿ ಸಂಶಯ ನಿವಾರಣೆಯಾಗದಿದ್ದರೆ ಶ್ರೀಮಾನ್ ಪಾವಟೆ ಸಿದ್ಧರಾಮಪ್ಪನವರಂತಹ ವಚನ ಶಾಸ್ತ್ರ ಬಲ್ಲವರೂ ಅನುಭವಿಕರೂ ಆದ ಮಹಾಶಯರಿಗೆ ಬರೆದು ತಿಳಿದುಕೊಳ್ಳಬೇಕು.

ಹೀಗೆ ಶಿವಶರಣರ ನಿಜಾಭಿಪ್ರಾಯಗಳನ್ನು ತಿಳಿದುಕೊಂಡು ಆ ಮೇಲೆ ಆ ಪ್ರಕಾರ ತಮ್ಮ ಆಚರಣೆಯನ್ನೂ ತಿದ್ದಿಕೊಳ್ಳಲಿಕ್ಕೆ ಈ ಶಿವಾನುಭವ ಮಂಟಪಗಳು ಸಹಾಯವಾಗಲೆಂದು ಹಾರೈಸುತ್ತೇವೆ.

**ಅಪೂರ್ವ ಲಾಭ! ಇಂಥಾ ಸುಸಮಯ!!**
**ಎಂದಿಗೂ ದೊರೆಯಲಾರದು!!!**

## ಪ್ರಪಂಚದ ಗುಟ್ಟು ಗ್ರಂಥಮಾಲೆಯ
## ಪ್ರಥಮ ಪುಷ್ಪ.
## ವಿವಾಹಜಾತಕ ಕುಂಡಲಿ ಪದಕಚಕ್ರಗಳು

**ಇದನ್ನು ೨-೩ ದಿವಸಗಳ ಮಟ್ಟಿಗೆ ಚೆನ್ನಾಗಿ ನೋಡಿದ ಮಾತ್ರದಿಂದಲೇ, ಎಲ್ಲ ಮತದವರು ಸ್ವಯಂ ಸಿದ್ಧಾಂತಿ, ಪುರೋಹಿತ ಶಾಸ್ತ್ರಿಗಳಾಗುತ್ತಾರೆ. ಹಾಗಿಲ್ಲದಿದ್ದರೆ ನಾವಸು ಮಾಡಿರಿ.**

ಇಂಥಾ ಅಪೂರ್ವ ಪದಕಗಳ ಚಕ್ರವನ್ನು ಇದುವರಿಗೂ ಯಾರೂ ತಯಾರು ಮಾಡಿ ಪ್ರಚಾರ ಮಾಡಲಿಲ್ಲ. ಈ ಪ್ರಥಮ ಪುಷ್ಪದಲ್ಲಿ ಗ್ರಹಗಳ ಗೋಚಾರಪದಕ, ಜಾತಕ ಕುಂಡಲಿ ಪದಕ, ಜನನ ನಕ್ಷತ್ರ ದೋಷ ಪದಕ, ಬಾಲಾರಿಷ್ಟ, ದೋಷ ಪದಕ, ಜನನಾದಿ ಆಯುಷ್ಯದವರಿಗೂ ಬರುವ ಕಂಟಕಗಳ ಪದಕ, ಸ್ತ್ರೀ ಪುರುಷ ಜನನ ಪದಕ. ಪಂಚಾಂಗಶುದ್ಧಿ ಪದಕ, ವಿವಾಹ ಲಗ್ನಕ್ಕೆ ಗ್ರಹಗಳ ಬಲಾಬಲ ಪದಕ, ಮದುಮಕ್ಕಳ ತಾರಾಬಲ, ಚಂದ್ರ ಬಲ ಪದಕ, ಹೆಣ್ಣು ಗಂಡಿನ ಸಾಲಾವಳಿ ಪದಕ, ಋತು ನಕ್ಷತ್ರ, ಮರಣ ನಕ್ಷತ್ರ, ದೋಷ ಪದಕ ಮಾನವರು ಮಾಡತಕ್ಕ ಯಾವತ್ತು ಶುಭ ಕಾರ್ಯಗಳ ಮುಹೂರ್ತ ಪದಕ, ಮನೆಕಟ್ಟ ಬೇಕಾದ ಗುಣಿಸಿ ಹಾಕಿದ ಆಯ ಧನ ರುಣ, ಆಯುಷ್ಯ ಪದಕ, ಜೋಳ, ಅಕ್ಕಿ, ಗೋಧಿ, ಬೆಲ್ಲ, ಖಡಿಕೆ, ಬೆಳ್ಳಿ, ಭಂಗಾರ, ಹತ್ತಿ, ನೂಲುಬಟ್ಟೆ ಮುಂತಾದ ಪದಾರ್ಥಗಳಿಗೆ ಪ್ರತಿದಿವಸ ತೇಜಿ, ಮಂದಿ, ಆಗುವ ಪದಕ ಇತ್ಯಾದಿ ಯಾವತ್ತು ಪದಕಗಳನ್ನು ಓದಲಕ್ಕೆ ಬಂದ ಸಣ್ಣ ಹುಡುಗರು, ಹೆಣ್ಣು ಮಕ್ಕಳು ಮುಂತಾದವರು ನೋಡಿದ ಕೂಡಲೆ ೫ ನಿಮಿಷಗಳಲ್ಲೇ ಪ್ರತಿಯೊಬ್ಬರಿಗೂ, ಗುರುಬಲ, ಶನಿ ಬಲ, ಹೇಳಲಿಕ್ಕೆ ಬರುತ್ತೇ. ಒಂದು ಪಾವು ಗಂಟೆಯಲ್ಲಿ ಯಾವತ್ತು ಪಂಚಾಂಗಗಳಲ್ಲಿ ಹಾಕಿರುವ ಎಲ್ಲಾ ಸಂಕೇತ ಮರ್ಮಗಳನ್ನು ತಿಳಿದು, ಗ್ರಹರಾಶಿ ಕುಂಡಲಿ, ಹಾಕಿ ಲಗ್ನ ಸಾಧಿಸಿ ಜನ್ಮ ಲಗ್ನ ಕುಂಡಲಿ, ಅಂಶಕುಂಡಲಿ ನಕ್ಷತ್ರ, ಅದ್ಯಾಂಡ ಇಷ್ಟಕಾಲ, ಗ್ರಹ ದಶಾ ನಿರ್ಣಯ ಮುಂತಾದವುಗಳನ್ನು ನೋಡಿಕೊಂಡು, ಹುಟ್ಟಿದ ಶಿಶುವಿಗೆ ನಕ್ಷತ್ರ ದೋಷ ಯಾರ್ಯಾರಿಗೆ ಅನಿಷ್ಟವಾಗುವದು. ಇಷ್ಟಿ ವ್ಯನೇ ವರ್ಷಗಳಲ್ಲಿ ಬಾಲಾರಿಷ್ಟವುಂಟಾಗುವುದನ್ನು ಇವುಗಳಿಗೆ ಶಾಂತಿದಾನಕ್ರಮ, ಜನನಾದಿಯಾಗಿ ಆಯುಷ್ಯದವರಿಗೂ ಇಷ್ಟನೇ ವರ್ಷಗಳಲ್ಲಿ ಇಂಥಾ ಕಂಟಕಗಳು ಜರುಗುವ ವಿಷಯ, ಇಷ್ಟೇ ವರುಷ ಆಯುಷ್ಯ. ತಿಳಿದು ಜಾತಕ ಪತ್ರಿಕೆಯನ್ನು ಬರೆಯಲಿಕ್ಕೆ ಬರುತ್ತೆ. ತನಗೆ ಬೇಕಾದ ಮಾಸದಲ್ಲಿ ಪಂಚಾಂಗ ಶುದ್ಧಿಯನ್ನು ನೋಡಿ, ಬಲವಾದ ವಿವಾಹ ಲಗ್ನವನ್ನು ತೆಗೆದು, ಲಗ್ನದ ಶುಭಕಾಲವನ್ನು ಮದುಮಕ್ಕಳಿಗೆ ತಾರಾಬಲ, ಚಂದ್ರಬಲ, ನೋಡಿ ವಿವಾಹ ಲಗ್ನ ಪತ್ರಿಕೆಯನ್ನು ತಯಾರುಮಾಡಿ, ಲಗ್ನ ಕಟ್ಟಲಿಕ್ಕೆ ಚನ್ನಾಗಿ ಬರುತ್ತೆ. ಆಪ್ತ ಬಂಧುಗಳಿಗೆ ವಿವಾಹ ಪತ್ರಿಕೆಯನ್ನು ಬರೆಯುವ ವಿಧಾನ, ತಾವೇ ಸ್ವಂತವಾಗಿ ವಿವಾಹ ಮಾಡಿಸತಕ್ಕ ಕಂಕಣಧಾರಣ, ಮಾಂಗಲ್ಯಧಾರಣ ಮೊದಲಾದ ಎಲ್ಲಾ ವಿವಾಹ ಕಾರ್ಯಗಳನ್ನು ಆಯಾಯ ಮತ್ರಗಳಿಂದ ಮಾಡಿಸತಕ್ಕ ವಿವಾಹ ವಿಧಿಯನ್ನು ಬಹು ಚೆನ್ನಾಗಿ ಬರೆದಿರುತ್ತೆ. ಇದರಿಂದ ತಮ್ಮ ತಮ್ಮ ಮತದಲ್ಲಿ ತಾವೇ ಸ್ವಂತ ವಿಧಿ ಪ್ರಕಾರ ವಿವಾಹ ಮಾಡಿಸಲಿಕ್ಕೆ ಬಹಳೇ ಅನುಕೂಲವಾಗಿರುತ್ತೆ. ಸಾಲಾವಳಿ ಪದಕವನ್ನು ನೋಡಿದ ಕೂಡಲೇ ೨ ನಿಮಿಷದಲ್ಲಿ ಇಂಥಾ ಹೆಸರಿನ ಹೆಣ್ಣಿಗೂ ಗಂಡಿಗೂ, ಇಷ್ಟು ಗುಣಗಳು ಬರುತ್ತವೆ. ಲಗ್ನಮಾಡಬೇಕೇ ಮಾಡಬಾರದೆಂಬುವ ವಿಷಯಗಳು ಗೊತ್ತಾಗುತ್ತೆ. ಗ್ರಹ ಆಯ ಪದಕದಲ್ಲಿ ಆಯ, ಧನ, ರುಣ, ಆಯುಷ್ಯ ಮುಂತಾದ ಯಾವತ್ತು ಬರತಕ್ಕ ಅಗಲ, ಉದ್ದ, ಮೊಳಗಳ ಸಂಖ್ಯೆಯನ್ನು ಹಾಕಿರುತ್ತೆ. ಪ್ರತಿಯೊಬ್ಬರು ಈ ಪದಕವನ್ನು ನೋಡಿ ತಮಗೆ ಬೇಕಾದಷ್ಟು ಉದ್ದ ಅಗಲವನ್ನು ಇಟ್ಟುಕೊಂಡು ಮನೆಕಟ್ಟಿಕೊಳ್ಳಬೇಕು. ವಾಸ್ತು ಪುರುಷನು ರಾಜಯೋಗ ಮಾಡತಕ್ಕ ವಿಷಯ, ಮಲಗುವ ದಿಕ್ಕು ವಗೈರೆ ಚೆನ್ನಾಗಿ ಬರೆದಿರುತ್ತೆ. ಎಲ್ಲಾ ಪದಾರ್ಥಗಳ ತೇಜಿ, ಮಂಡಿ ಪದಕವನ್ನು ನೋಡಿದ ಕೂಡಲೆ ಎಲ್ಲಾ ಪದಾರ್ಥಗಳಿಗೂ ತೇಜಿ ಮಂದಿಯಾಗುವುದು ಸುಲಭವಾಗಿ ತಿಳಿಯುತ್ತೆ. ವೇದೋಕ್ತ, ಮಂತ್ರವಿಧಿ ಪ್ರಕಾರ ನವಗ್ರಹ ಶಾಂತಿವಿಧಿಯನ್ನು ಶನಿಜಪ ಕ್ರಮವನ್ನು ಚೆನ್ನಾಗಿ ಬರೆದಿರುತ್ತೆ. ಮೇಲ್ಕಂಡ ಎಲ್ಲ ಮರ್ಮಗಳನ್ನು ತಿಳಿದುಕೊಳ್ಳಲಿಕ್ಕೆ ಒಂದು ಶ್ಲೋಕವನ್ನು ಕಲಿಯುವ ಅವಶ್ಯಕ್ಯವಿಲ್ಲ, ಗಣಿತವನ್ನು ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ವಿವಾಹ ಲಗ್ನವನ್ನು ಶೋಧಿಸಿ, ಶಾಸ್ತ್ರ ವಿಧಿ ಪ್ರಕಾರ ವಿವಾಹ ಮಾಡಿಸುವದಕ್ಕೂ, ಇತರ ಎಲ್ಲಾ ವೈದಿಕ ಕಾರ್ಯಗಳನ್ನು ಮಾಡಿಸುವದಕ್ಕೂ, ಜಾತಕ ಪತ್ರಿಕೆಯನ್ನು ಬರೆಯುವುದಕ್ಕೂ, ಶಾಸ್ತ್ರಿಗಳನ್ನು ಕರೆಸಬೇಕಾದ ಕಾರಣವಿಲ್ಲ. ತಾವೇ ಸ್ವತಃ ಮಾಡಿಕೊಳ್ಳಲಿಕ್ಕೆ ಬರುತ್ತೆ. ಎಲ್ಲಿಯಾದರೂ ಒಂದು ಸಂಶಯ ಬಂದ ವಿಷಯವನ್ನು ನಮಗೆ ಸ್ವತಃ ಬರೆದು ತಿಳಿದುಕೊಳ್ಳಬೇಕು. ಇದುವರಿಗೂ; ಜ್ಯೋತಿಷ ವೈದೀಕ ಶಾಸ್ತ್ರದಲ್ಲಿ ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ಪುಣ್ಯಾತ್ಮರು ೮-೧೦ ಪ್ರತಿಗಳನ್ನು ತರಿಸಿಕೊಂಡು ತಮ್ಮ ಎಡಬಲ ಗ್ರಾಮಗಳಲ್ಲಿರುವ ಪುರೋಹಿತರಿಗೆ ಕಳಿಸಿ ಮುಂದಕ್ಕೆ ತಂದು ಕೀರ್ತಿ ತೆಗೆದುಕೊಳ್ಳಬೇಕು. ಈ ಗ್ರಂಥಗಳನ್ನು ತಾವು ತರಿಸಿ ಪ್ರಚಾರ ಮಾಡಿದರೆ ತಾವು ಎಲ್ಲಾ ಗ್ರಾಮಗಳಲ್ಲಿ ಪಾಠಶಾಲೆಗಳನ್ನು ಇಡಿಸಿದಂತೆ ಆಗುತ್ತದೆ. ಪ್ರಚಾರದ ಖರ್ಚಿನ ಬಗ್ಗೆ. ಕ್ರಯ ೦-೧೨-೦,

ಮ್ಯಾನೇಜರ,
**ಪ್ರಪಂಚದ ಗುಟ್ಟು ಗ್ರಂಥಮಾಲೆ ಕಾರ್ಯಾಲಯ,**
**ಬಳ್ಳಾರಿ, ಹರಪನಹಳ್ಳಿ.**

### ವೀರಕುಮಾರಿಗೆ ಪ್ರತಿಫಲ.

ಶರಣ ಸಂದೇಶದ ಕೆಲವು ಸಂಚಿಕೆಗಳ ಪೂರ್ವದಲ್ಲಿ 'ವೀರ ಬಾಲಾ ಹರನಾಮ ಕುಮಾರಿ' ಎಂಬವಳು ಸುಲಿಗೆಗಾರರೊಡನೆ ಹೋರಾಡಿದ ಸಂಗತಿಗಳನ್ನೂ ಮತ್ತು ತನ್ನ ಶೌರ್ಯದಿಂದ ಅವರ ಮುಖ್ಯನನ್ನು ಕೊಂದುಹಾಕಿದ ಸಂಗತಿಯನ್ನೂ ಬರೆದಿದ್ದಿ ತಷ್ಟೆ. ಆ ಹೋರಾಟದಲ್ಲಿ ಅವಳಿಗೆ ಎರಡು ಬಂದೂಕಿನ ಗುಂಡುಗಳು ತಗಲಿದ್ದುದರಿಂದ ಆಸ್ಪತ್ರೆಯಲ್ಲಿ ಉಪಚಾರ ಹೊಂದಿ ಈಗ ಗುಣವಾಗಿದ್ದಾಳೆ. ಇವಳಿಗೆ ಸೆಂಜಾಂಬದ ಗವ್ಹರ್ನರರು ದರ್ಶನ ಕೊಟ್ಟು ಅವಳ ಕಾರ್ಯದ ಪ್ರತಿಫಲವಾಗಿ ೧೦೦೦ ರೂ. ಗಳನ್ನೂ. ಮತ್ತು ಕೆಲವು ಭೂಮಿಯನ್ನೂ ಕೊಟ್ಟಿದ್ದಾರೆ.

ಭೋರ ರಾಣೆಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಅವರ ಹಸ್ತದಿಂದ ಈ ವೀರಬಾಲಾ ಹರನಾಮ ಕುಮಾರಿಗೆ ಒಂದು ಬಂಗಾರದ ಕಂಕಣವು ಹಾಕಲ್ಪಟ್ಟಿತು.

## ಬಸವೇಶನನ್ನು ಬೇಡುವೆ.

ಹೇ ಬಸವೇಶ! ಗುರುವರ್ಯ! ಅಂದು ರುಗ್ಣ ಶಯ್ಯೆಯೊಳೊರಗಿ ಸಾವತಾತೆರ್ದ ವೀರಶೈವ ಧರ್ಮಕೆ ನಿನ್ನ ದಿವ್ಯ ಶಕ್ತಿ ಸುಧಾರಸವೆರೆದು ಜೀವದಾನವ ಗೈದು ಬದುಕಿಸಿದೆ ಎತ್ತಿ ಮಹಾನುಭಾವ! ನೀನುಂಟು, ವೀರಶೈವಮುಂಟು, ಷಟ್ಸ್ಥಲದ ಬಟ್ಟೆದೋರಿ ಅಷ್ಟಾವರಣದ ಹೆಗ್ಗಳಿಕೆಯರುಹಿ ಮತವ ಕಾಶಿಟ್ಟೆ. ನೀರ್ವಾಣ ಭಾಷೆಯ ವೇದ ವೇದಾಂಗಗಳ ಸಾರಸರ್ವಸ್ವವನೆ ಅಚ್ಚಗನ್ನಡ ವಚನದೊಳಗಾಡಿ ಶರಣರಾ ಸರಳ ಜೀವನದೆ ತತ್ವಾರ್ಥಗಳ ನಡೆದು ತೋರಿ ಅದ್ಭುತ ಪವಾಡಗಳ ಮೆರೆದು ಜ್ಞಾನ ದೀಪವ ಸಾಮಾನ್ಯ ಮಾನವ ಜೀವಿಯ ಎದೆಯೊಳೂ ಬೆಳಗಿ ಎಲ್ಲರಿಗೆ ಮುಕುತಿ ಮಾರ್ಗವ ತೋರಿ ಮರೆಯಾದೆ, ಹೇ ಕರುಣಾಳು!

ಕಾಯಕವೆ ಕೈಲಾಸವೆನುತೆ ಸಾರಿ ಅಕ್ಕ ತಾಯ್ತಂಗಿಯರ ದುಸ್ಸಹ ದುಃಖವನೆ ನೀಗಿ ಎನಿತೆನಿತೋ ಬರಿಸಗಳ ಅಸ್ಪೃಶ್ಯತಾ ಪಾಪವ ತೊಳೆದು ಭಾರತಿಯ ಮೇಲಿರ್ದ ಭಾರವ ಕಳೆದು ಕರ್ನಾಟಕ ಜೀವನ ರಂಗದೊಳು ತಾಂಡವ ನೃತ್ಯವಾಡಿ ಕಪ್ಪಡಿಯೊಳ್ಕೈಕ್ಯವಾದೆಯಲ್ತೆ! ದೇವ ನಿನ್ನ ಮೂರ್ತಿಯ ಮನದೆ ಚಿತ್ರಿಸಿ ಮೈಯ್ಯಿಕ್ಕುವೆವು. ನಿನಗೆ ಇಂದು ವೀರಶೈವ ಧರ್ಮಕೆ ಮುಸಗಿರ್ದ ಕಾಡ ಕತ್ತಲೆಯ ಪರಿದಿಕ್ಕ ತಿಳುವಿನಾ ಬೆಳಕ ಬೀರಿ ಪರಿಪರಿ ಭಿನ್ನವಾಗಿಹ ಮತವ ಬೆರಸಿ ಕಾಪಾಡು ನಿನ್ನ ತುಳದಯೆಯ, ನಿನ್ನ ಕರುಣಾರಸವಾಹಿನಿಯ ದೇವ ಇತ್ತಲಿತ್ತ ಹರಿಯಬಿಡು ಕೈವಿಡಿದು ಸಲಹು ದೇವ, ವಂದಿಪೆವು ನಿನ್ನ.

## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರು ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

**ಜಿ ಎಸ್ ಗಂಗಾಧರಯ್ಯ,**
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,
ತುಮಕೂರು (ಮೈಸೂರು ಸ್ಟೇಟ್


## ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಆಕ್ಟಿನ ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ—

| ತಿಂಗಳು | ಪಾಲಿಯ ಒಟ್ಟು ಕಿಮ್ಮತ್ತು. |
|---|---|
| ಜನವರಿ ೧೯೩೪ | ೩೫೦೦ ರೂ. |
| ಫೆಬ್ರುವರಿ ,, | ೧೨೦೦೦ ರೂ. |
| ಮಾರ್ಚ ,, | ೩೦೫೦೦ ರೂ. |
| ಒಟ್ಟು. | ೪೬೦೦೦ ರೂ. |

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮದುವೆ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ; ತಿಂಗಳಿಗೆ ೧೦೦ರಿಂದ ೧೫೦ರವರೆಗೆ ಕಮಿಶನ್ ಸಿಗುವದು.

Managing Agents.





# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜನ ಗುರುಮತಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತೀತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟವನುಭವಿಸುತ್ತಿರುವರು. ಈ ಕೆಟ್ಟಬೇನೆಯು (**ಪ್ಲೇಗ ಮಾರಿಕಾ,**) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯ ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಔಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ,** ಪೋಸ್ಟ— **ಕಮಲಾಪೂರ** ಜಿ. **ಗುಲ್‌ಬರ್ಗಾ.**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ಅನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವ ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಮಿಂದ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ಸುಗಳಿಂದ ಶೋಧ ವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು. ಆಗ ನಿಮಗೆ ಖಂಡಿತವಾಗಿಯೂ ಅತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

**ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್|**
**ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ||**

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ನ್ಪಷ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನಸನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಸ್ತುತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರ್ಜನವಾಗುವದಕ್ಕಿಂತ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಆಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ವೇಲ್ಲುಂಡ ಎಲ್ಲ ಗಳಿಗೆ ಔತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವ್ಯೆರಿಯು**—ಕಾಲಿಗೆ ಆರಿವೆ ಕಟ್ಟಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೮ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಷಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ದೆಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆ ೧೨ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

# ರಾಷ್ಟ್ರೀಯ ಸಭೆಯ ಚಟುವಟಿಕೆಗಳು.

## ಪಾರ್ಲಿಮೆಂಟರಿ ಬೋರ್ಡಿನ ಅಧಿವೇಶನ.

ಕಳೆದ ರವಿವಾರ ಪಾರ್ಲಿಮೆಂಟರಿ ಬೋರ್ಡಿನ ಅಧಿವೇಶನವು ಪಂ. ಮಾಲವೀಯರವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಮಹಾತ್ಮಾಜಿಯವರು ಮತ್ತು ರಾಷ್ಟ್ರೀಯ ಪ್ರಮುಖರು ಆಗಮಿಸಿದ್ದರು. ಪಾರ್ಲಿಮೆಂಟರಿ ಬೋರ್ಡಿನ ನಿಯಮಗಳು ರಾಂಚಿಯಲ್ಲಿ ಕೂಡಿದ ಸ್ವರಾಜ್ಯ ಪಕ್ಷದ ನಿಯಮಗಳಂತೆಯೇ ಇರುತ್ತವೆ. ಆದರೆ ಇದಕ್ಕೂ ಮತ್ತು ಕಾರ್ಯಕಾರಿ ಮಂಡಲಿಗೂ ಸಂಬಂಧವನ್ನುಂಟುಮಾಡುವ ಈ ಕೆಲವು ನಿಯಮಗಳಿವೆ.

(೧) ರಾಷ್ಟ್ರೀಯ ಪಾರ್ಲಿಮೆಂಟರಿ ಬೋರ್ಡಿನ ಪ್ರತಿಯೊಬ್ಬ ಸಭಾಸದನು ರಾಷ್ಟ್ರೀಯ ಸಭೆಯ ಸಭಾಸದನಿರಲೇಬೇಕು. ಮತ್ತು ಅವನಿಗೆ ರಾಷ್ಟ್ರೀಯ ಸಭೆಯ ಪೂರ್ಣ ಸ್ವಾತಂತ್ರ್ಯದ ಧ್ಯೇಯವು ಮಾನ್ಯವಿರಲೇಬೇಕು.

(೨) ಬೋರ್ಡಿನ ಮಧ್ಯವರ್ತಿ ಕಾರ್ಯಾಲಯವು ಕಾರ್ಯದರ್ಶಿಗೆ ಅನುಕೂಲವಿರುವ ಸ್ಥಳದಲ್ಲಿರಬೇಕು.

(೩) ಬೋರ್ಡಿನ ಸಭಾಸದರಲ್ಲಿ ೯ ಜನರಿದ್ದರೆ ಸಮಿತಿಯ ಕಾರ್ಯಸಾಗಿಸಬಹುದು.

(೪) ಬೋರ್ಡಿನ ಅವಧಿಯು ಮೂರು ವರುಷವಿರಬೇಕು.

### ಜಾತಿಯ ಮತದಾನ ವಿಚಾರ.

ಪಾರ್ಲಿಮೆಂಟರಿ ಬೋರ್ಡು ಶುಭ್ರ ಪತ್ರಿಕೆಯನ್ನು ತ್ಯಜಿಸಿದ ನೇಲೆ ಜಾತಿಯ ಮತದಾನ ಪದ್ಧತಿಯನ್ನು ಮಾನ್ಯ ಮಾಡಬೇಕೋ ಬೇಡವೋ ಎಂಬ ವಿಚಾರವಾಯಿತು.

ಪಂ. ಮಾಲವೀಯ ಮತ್ತು ಶ್ರೀ. ಆಣೆಯವರು ಈ ಜಾತಿ ಮತದಾನ ಪದ್ಧತಿಯನ್ನು ನಿಷೇಧಿಸಿದರು. ಬ್ಯಾ. ಅಸಫ ಅಲ್ಲಿಯವರು—"ಈ ಜಾತಿವಾರ ಪದ್ಧತಿಯನ್ನು ಕಿತ್ತಿಹಾಕಿದರೆ ರಾಷ್ಟ್ರೀಯ ಮುಸಲ್ಮಾನರು ಅರಿಸಿ ಬರಲಾರರು. ಅಂದಮೇಲೆ ರಾಷ್ಟ್ರೀಯ ಸಭೆಗೆ ಮುಸಲ್ಮಾನರ ಬೆಂಬಲವಿಲ್ಲವೆಂದು ಸಿದ್ಧವಾದೀತು. ಆದ್ದರಿಂದ ಅದನ್ನು ನಾವು ಸ್ವೀಕರಿಸಲೂ ಬಾರದು. ತ್ಯಜಿಸಲೂ ಬಾರದು" ಎಂದರು.

ಇದಕ್ಕೆ ಮತ್ತೊಬ್ಬ ಸಭಾಸದರು— "ಈ ನಿರ್ಣಯವು ಆಯ್ಕೆಗೇನೂ ಪ್ರಯೋಜನವಿಲ್ಲ. ಅಂದಮೇಲೆ ಇದನ್ನು ಸ್ವೀಕರಿಸುವುದೇಕೆ? ಎಂದರು. ಅನಂತರ ಪಾರ್ಲಿಮೆಂಟರಿ ಬೋರ್ಡು ಈ ಜಾತಿ ನಿರ್ಣಯವನ್ನು ತೆಗೆದು ಹಾಕಿತು.

**ಶಪಥ ಪತ್ರಿಕೆ**—ಶಾಸನ ಸಭೆಗಳ ಆಯ್ಕೆಗೆ ನಿಲ್ಲುವ ಪಾರ್ಲಿಮೆಂಟರಿ ಬೋರ್ಡಿನ ಉಮೇದುವಾರರು ೫ ನಿಯಮಗಳಿಂದ ಕೂಡಿದ ಒಂದು ಶಪಥ ಪತ್ರಿಕೆಗೆ ಸಹಿಮಾಡಬೇಕಾಗುತ್ತದೆ. ಆ ಪತ್ರಿಕೆಯ ನಿಯಮಗಳ ಸಾರಾಂಶವು ಹೀಗೆ—

(೧) ನಾನು ಇಂಥದೊಂದು ಸ್ಥಳದ ರಾಷ್ಟ್ರೀಯ ಸಭಾಸದನಿದ್ದೇನೆ.

(೨) ನಾನು ಕೇಂದ್ರ ಶಾಸನ ಸಭೆಯ ಆಯ್ಕೆಗೆ ಮತದಾರ ಸಂಘದ ವತಿಯಿಂದ ನಿಲ್ಲುತ್ತಿದ್ದೇನೆ.

(೩) ನನ್ನನ್ನು ರಾಷ್ಟ್ರೀಯ ಸಭೆಯು ನಿಲ್ಲಿಸಿದೆ ಇನ್ನೊಬ್ಬರನ್ನು ನಿಲ್ಲಿಸಿದರೆ ನಾನು ಸ್ವಂತವಾಗಲಿ ಇಲ್ಲವೆ ಆವುದೊಂದು ಪಕ್ಷವನ್ನು ಹಿಡಿದಾಗಲಿ ನಿಲ್ಲಲಾರೆನು.

(೪) ಮತದಾರ ಸಂಘವು ನನಗೆ ನಿಲ್ಲಲು ಆಜ್ಞೆ ಮಾಡಿದರೆ ಪಾರ್ಲಿಮೆಂಟರಿ ಬೋರ್ಡಿನ ಆಯ್ಕೆಗೆ ಸಿದ್ಧನಾಗುವೆನು.

(೫) ನಾನು ಬೋರ್ಡಿನ ನಿಯಮಗಳನ್ನೆಲ್ಲ ಪಾಲಿಸುವೆನು. ನನಗೆ ಅವರ ನಿಯಮಗಳನ್ನು ಪಾಲಿಸುವದಾಗದಿದ್ದರೆ ಬೋರ್ಡು ನನ್ನ ಶಾಸನ ಸಭೆಯ ಸಭಾಸದತ್ವವನ್ನು ತ್ಯಜಿಸಲು ಆಜ್ಞೆ ಮಾಡಿದರೆ ನಾನು ಅದೇ ಪ್ರಕಾರ ನಡಕೊಳ್ಳುವೆನು.

### ಹೃದಯದ್ರಾವಕ ನೋಟ.

ರಾಷ್ಟ್ರೀಯ ಕಾರ್ಯಕಾರಿ ಮಂಡಲವು ಮುಖ್ಯ ನಿರ್ಣಯವಾದ ಜಾತಿವಿಷಯಕ ಧೋರಣದ ಮೇಲೆ ತನ್ನ ವಿಚಾರವನ್ನು ಸರಿಯಾಗಿ ಮಂಡಿಸಿ ನಿಷೇಧಿಸದಿದ್ದುದಕ್ಕಾಗಿ ಪಂ. ಮಾಲವೀಯ ಮತ್ತು ಶ್ರೀ. ಆಣೆಯವರು ೧೯೩೮ರ ತಾರೀಖಿಗೆ ಬೋರ್ಡಿನ ಮತ್ತು ಕಾರ್ಯಕಾರಿ ಸಮಿತಿಯ ತಮ್ಮ ಸ್ಥಾನಕ್ಕೆ ತ್ಯಾಗ ಪತ್ರ ಕೊಟ್ಟಿದ್ದರು. ಇದರಿಂದ ರಾಷ್ಟ್ರೀಯ ಮುಂದಾಳುಗಳಲ್ಲಿ ಒಳ್ಳೇ ಹಾಹಾಕಾರವುಂಟಾಯಿತು. ಕಡೆಗೆ ಮಧ್ಯ ರಾತ್ರಿಯಲ್ಲಿ ಮಹಾತ್ಮಾಜಿಯವರು ಇವರಿಗೆ ತಮ್ಮ ತ್ಯಾಗ ಪತ್ರವನ್ನು ತಿರುಗಿ ತಕ್ಕೊಳ್ಳಬೇಕೆಂದೂ ಮತ್ತು ರಾಷ್ಟ್ರೀಯ ಸಭೆಯ ಈ ಪರೀಕ್ಷೆಯ ಕಾಲದಲ್ಲಿ ಅದಕ್ಕೆ ಅಚಲವಾದ ಆಧಾರವಾಗಬೇಕೆಂದೂ ಕರುಳು ಕರಗುವಂತೆ ವಿನಂತಿ ಮಾಡಿಕೊಂಡರು. ಆ ಕಾಲಕ್ಕೆ ಮಹಾತ್ಮಾಜಿಯವರ ಮತ್ತು ಪಂಡಿತಜಿಯವರ ನೇತ್ರಗಳು ಅಶ್ರುಪೂರ್ಣವಾಗಿದ್ದವಂತೆ. ಕಡೆಗೆ ಅವರು ತಮ್ಮ ತ್ಯಾಗ ಪತ್ರವನ್ನು ತಿರುಗಿ ತಕ್ಕೊಂಡರು. ಈ ವಿಷಯದಲ್ಲಿ ಶ್ರೀ. ಸರೋಜನಿ ದೇವಿಯವರನ್ನು ಕೇಳಲು ಅವರು— "ಗಾಂಧೀಜಿಯವರು ದೊಡ್ಡ ಮಾಂತ್ರಿಕರಿರುತ್ತಾರೆಂಬುದು ಇನ್ನೊಮ್ಮೆ ಜನರ ನಿದರ್ಶನಕ್ಕೆ ಬಂದಿತು" ಎಂದರು. ಶ್ರೀ. ರಾಜಗೋಪಾಲಾಚಾರ್ಯರು— "ಇದರಿಂದ ಪಂಡಿತಜಿಯವರ ರಾಷ್ಟ್ರೀಯ ಸಭೆಯ ನಿಷ್ಠೆಯು ಸ್ಪಷ್ಟವಾಯಿತು" ಎಂದರು.

### ಮೌ. ಶೌಕತ ಅಲ್ಲಿಯವರ ಸಮಾಧಾನ.

ಮೌ. ಶೌಕತ ಅಲ್ಲಿಯವರು ಮಹಾತ್ಮರು ಮುಂಬೈಯಲ್ಲಿ ಡ್ಯಾಗ್ಗೆ ಅವರಿಗೆ ಭೆಟ್ಟಿಯಾದರು. ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಮಾಡಿದ ಜಾತಿ ವಿಷಯಕ ನಿರ್ಣಯವು ತಮಗೆ ಸಮಾಧಾನಕಾರಕವಾಗಿದೆಯೆಂದೂ ಮತ್ತು ಪಂ. ಮಾಲವೀಯ ಹಾಗೂ ಶ್ರೀ. ಆಣೆಯವರು ತಮ್ಮ ತ್ಯಾಗಪತ್ರವನ್ನು ತಿರುಗಿ ತಕ್ಕೊಂಡುದು ಅನಂದದ ಸಂಗತಿಯೆಂದೂ ಹೇಳಿದರು.

### ಬೋರ್ಡಿನ ಮುಂದಿನ ಸಭೆ.

ಪಾರ್ಲಿಮೆಂಟರಿ ಬೋರ್ಡಿನ ಮುಂದಿನ ಸಭೆಯು ಬನಾರಸದಲ್ಲಿ ಕೂಡುವುದು.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಹೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

## WANTED.

Applications are invited for the post of an Assistant Laboratory Chemist who should be able to carry on control analytical work, as well as to help the Chief Chemist in research work. Minimum qualification required is B. Sc., with chemistry as principal subject and preferably Botany subsidary. Research or control Laboratory experiency will be additional qualification.

Applications should reach the undersigned not later than the 15th ot July 1934, giving particulars of qualification, mother-tongue and minimum salary expected.

M. C. Tumminakatti, M. Sc., Ph. D.,
Works-Manager,
KARNATAK CHEMICAL WORKS,
GADAG.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಪಸ್ತ,**
**ಬಾಗಲಕೋಟೆ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )

## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
**ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.**

**ಎಲ್ಲ ನಮೂನೆಗಳು ಬರೇ ೧ ರೂಪಾಯಿ!**

--೧೦೦೦--

**ನೀಲೀ ಮತಿಜೀಟು—** ೪ ರೂಪಾಯಿ
**ಭಾಸ್ಕರ ಪ್ರಕಾಶ—** ೧೧ ,,
**ಗುಂಗಾಡ ನಾಶಕ—** ೧೧ ,,
**ಚೇಳಿನ ನಾಶ—** ೧೧ ,,
**೧೨ ತಗಣಿ ಶತ್ರು ಬಾಟ್ಲಿ—** ೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. **ಹಂಚಳಿ.**
**ತ. ವಿಜಾಪುರ.**

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾರಿಗು ಅಂಜುವನಲ್ಲ।
ಕೂಡಲಸಂಗನುದೇವರ ರಾಜತೇಜದಲ್ಲಿಪ್ಪನಾಗಿ ॥ ವ ೨೨೮ ॥ ಮಹಾಪ್ರಭಾವಿ ಬಸವಣ್ಣನವರು.

ಸಂಪಾದಕರು:
ಶ್ರೀ. ಹರ್ಡೀಕರ ಮುಂಡ [illegible]ವರು.

ಬಿಡಿಸಂಚಿಕೆಗೆ ೧ ½ ಕೆ.
ವಾರ್ಷಿಕ ಚಂದಾ:- ಅಂಚೆ [illegible] ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೩. | ಆಲಮಟ್ಟಿ- ಸೋಮವಾರ ತಾರೀಖು ೯ ನೆಯ ಜುಲೈ [illegible] ಸಂಚಿಕೆಯು

ಜನಸೇವೆಯೇ ದೇವರಸೇವೆ.

## ಮಹಾತ್ಮಾಜಿಯವರು
## ಉಪ್ರಾಯಶ್ಚಿತ್ ಹೊಂದುವರು.

ಮಹಾತ್ಮಾ ಗಾಂಧೀಜಿಯವರ ಸನ್ಮಾನಾರ್ಥವಾಗಿ ಅಜಮೀರದಲ್ಲಿ ಮೂವತ್ತು ಸಾವಿರ ಜನಗಳ ಒಂದು ಪ್ರಚಂಡ ಸಭೆಯು ಸೇರಿದ್ದಿತು.

ಆಗ ಶ್ರೀ. ಸ್ವಾಮಿ ಲಾಲಾನಾಥರ ನೇತೃತ್ವದ ಕೆಳಗೆ ಒಂದು ಸನಾತನಿಗಳ ಕಪ್ಪು ನಿಶಾನೆಗಳ ಮೆರವಣಿಗೆಯು ಸಭಾ ಸ್ಥಾನಕ್ಕೆ ಬರಲು ಜನರು ಸನಾತನಿಗಳ ಮೇಲೆ ಬಿದ್ದು ಸ್ವಾಮಿ ಲಾಲಾನಾಥರಿಗೆ ವಿಶೇಷ ಗಾಯಗೊಳಿಸಿದ್ದಾರೆ. ಆಗ ಮಹಾತ್ಮಾಜಿಯವರು ಈ ಪ್ರಕಾರ ಹೇಳಿದ್ದಾರೆ.

"ಈಗ ನಡೆದ ಅತ್ಯಾಚಾರವನ್ನು ನೋಡಿ ನನಗೆ ಬಹಳ ದುಃಖವಾಗಿದೆ. ಈ ಅತ್ಯಾಚಾರದ ಸಲುವಾಗಿ ನಾನು ಪ್ರಾಯಶ್ಚಿತ್ ಹೊಂದುವದನ್ನು ನಿಶ್ಚಯಗೊಳಿಸಿದ್ದೇನೆ. ಯಾವ ಪ್ರಕಾರದ ಪ್ರಾಯಶ್ಚಿತ್ ಸ್ವೀಕರಿಸಲಾಗುವದೆಂಬುದನ್ನು ಈಗಲೇ ಹೇಳಲು ಬರುವುದಿಲ್ಲ."

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಇ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)


ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹತ್ತಿಲ್ಲವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣಿಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಜನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.


ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜುಲೈ ತಾರೀಖು ೯ ನೆಯ ಸೋಮವಾರ | ಸಂಚಿಕೆ ೪೫.


## ಸೊಲ್ಲಾಪುರಕ್ಕೆ
# ಧರ್ಮಾತ್ಮಾ ಮಾಲವೀಜಿಯವರ ಸಂದರ್ಶನ.

ಈ ವಾರದಲ್ಲಿ ಧರ್ಮಾತ್ಮಾ ಮಾಲವೀಜಿಯವರು ಸೊಲ್ಲಾಪುರ, ಪಂಢರಪುರ ಮತ್ತು ಕೊಲ್ಹಾಪುರಗಳನ್ನು ಸಂದರ್ಶಿಸಿದರು. ಸೊಲ್ಲಾಪುರದಲ್ಲಿ ತಾ. ೧೦ನೆಯ ದಿವಸ ವೈಕ್ಯಾನಿಕ್ ಥಿಯೇಟರಿನಿಂದ ಪಂಡಿತಜಿಯವರ ಪ್ರಚಂಡ ಮೆರವಣಿಗೆಯು ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸುವಾಗ ಮಂಗಳವಾರ ಮತ್ತು ಶುಕ್ರವಾರ ಪೇಟೆಗಳಲ್ಲಿ ಅಂಟಿಸಿದ ಶ್ರೀ. ಮಲ್ಲಪ್ಪ ಧನಶೆಟ್ಟಿ ಮತ್ತು ಕುರುಬಾನ ಹುಸೇನ ಇವರ ಭಾವಚಿತ್ರಗಳಿಗೆ ಪಂಡಿತಜಿಯವರು ಎದ್ದು ನಿಂತು ವಂದಿಸಿದರು. ಬ್ಯಾ. ಸರದಾರ ಇವರ ಮನೆಯ ಮುಂದೆ ಮೆರವಣಿಗೆಯು ಬರಲು ಅವರ ಮನೆಯಲ್ಲಿಯ ಒಬ್ಬ ಸ್ತ್ರೀಯಳು ಪಂಡಿತಜಿಯವರಿಗೆ ನೂಲಿನ ಹಾರವನ್ನರ್ಪಿಸಿ ವಂದಿಸಿದಳು. ಮೆರವಣಿಗೆಯು ಸಾಗಿರುವಾಗ ಅನೇಕರು ಅಟ್ಟದಮೇಲಿಂದ ಪುಷ್ಪ ವೃಷ್ಟಿ ಮಾಡುತ್ತಿದ್ದರು. ಅತ್ತರ ಗುಲಾಬ ಸಿಂಪಡಿಸುತ್ತಿದ್ದರು.

ಬೆಳಗಿನ ೯॥ ಗಂಟೆಗೆ ಇಲ್ಲಿಯ ಪದ್ಮಶಾಲಿ ಸಮಾಜದವರ ಪರವಾಗಿ ಪಂಡಿತಜಿಯವರಿಗೆ 'ಪದ್ಮಶಾಲಿ ಕಟ್ಟಡದಲ್ಲಿ' ಮಾನಪತ್ರವನ್ನರ್ಪಿಸಿದರು. ಸಾಯಂಕಾಲ ೫ಗಂಟೆಗೆ ಇಲ್ಲಿಯ ವ್ಯಾಪಾರೀ ಮಂಡಲದವರ ಸಲುವಾಗಿ ಜೈನ ಬೋರ್ಡಿಂಗಿನಲ್ಲಿ ಪಂಡಿತಜಿಯವರಿಗೆ ಮಾನಪತ್ರವನ್ನರ್ಪಿಸುವ ಸಮಾರಂಭವು ಜರುಗಿತು. ಇಲ್ಲಿ ಪಂಡಿತಜಿಯವರು ತಮ್ಮ ಭಾಷಣದಲ್ಲಿ, ಶ್ರೀಮಂತ ಮತ್ತು ಕೂಲಿಕಾರರಲ್ಲಿ ಯಾವಾಗಲೂ ಮಿತ್ರತ್ವವಿದ್ದರೇನೇ ವ್ಯಾಪಾರವು ವೃದ್ಧಿಯಾಗುವದೆಂದೂ, ಜಪಾನ ದೇಶವು ಇಷ್ಟು ಸುಲಭವಾಗಿ ಪದಾರ್ಥಗಳನ್ನು ಪೂರೈಸುವ ಕಾರಣವಾದರೂ ಇದೆಯೆಂತಲೂ ವಿವರಿಸಿ ಕೂಲಿಕಾರರು ದರಿದ್ರರಾಗಲು ಅವರಲ್ಲಿರುವ ಮದ್ಯಪಾನ ಚಟವೇ ಕಾರಣವೆಂದೂ, ಅದನ್ನು ತೀವ್ರವೇ ನಿಲ್ಲಿಸಬೇಕೆಂದೂ ಹೇಳಿದರು.

ಅನಂತರ ಸಾಯಂಕಾಲ ೬ ಗಂಟೆಗೆ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ಸೊಲ್ಲಾಪುರ ವೀರಶೈವರ ಪರವಾಗಿ ಮಾನಪತ್ರವನ್ನರ್ಪಿಸುವ ಸಮಾರಂಭವು ಉಪಕ್ರಮವಾಯಿತು. ಶ್ರೀ. ಸಿದ್ಧೇಶ್ವರ ದೇವಸ್ಥಾನದಲ್ಲಿ ಸ್ತ್ರೀ ಪುರುಷರು ಕಿಕ್ಕಿರಿದು ನೆರೆದಿದ್ದರು. ಶ್ರೀ. ಕಾಡಾದಿ ನಾಗಪ್ಪನವರು ವೀರಶೈವರ ಮಾನಪತ್ರವನ್ನು ಓದಿ ಹೇಳಿದರು. ಮಾನಪತ್ರದಲ್ಲಿ ವೀರಶೈವ ಸಮಾಜದ ಇತಿಹಾಸ, ವೀರಶೈವ ಕವಿಗಳು, ಶಾಸ್ತ್ರಜ್ಞರು, ರಾಜರು, ಶೂರ ಸ್ತ್ರೀಪುರುಷರು ಮೊದಲಾದ ವಿಷಯಗಳನ್ನು ಸ್ವಲ್ಪದರಲ್ಲಿಯೇ ಸಮಂಜಸವಾಗಿ ವಿವರಿಸಿದ್ದರು ಇದಕ್ಕುತ್ತರವಾಗಿ ಪಂಡಿತಜಿಯವರು ತಮ್ಮ ಭಾಷಣದಲ್ಲಿ ಈ ಪ್ರಕಾರ ಹೇಳಿದರು—

"ಈ ರಮಣೀಯ ಸ್ಥಾನ ಮತ್ತು ಸಿದ್ಧೇಶ್ವರ ಪವಿತ್ರ ಮುದಿರವನ್ನು ನೋಡಿ ನನಗೆ ಆನಂದವಾಗುತ್ತಿದೆ. ಇಂಥ ಪವಿತ್ರ ಸ್ಥಾನದಲ್ಲಿಯೇ ನನ್ನನ್ನು ಗೌರವಿಸಲಾಗುವುದರಿಂದ ನಾನು ಹೆಚ್ಚಿನ ಭಾಗ್ಯವಾನನೆಂದೇ ತಿಳಿಯುತ್ತೇನೆ. ನಾನಾದರೂ ಶೈವನೇ ಇದ್ದೇನೆ. ಮತ್ತು ವೀರಶೈವರಂತೆಯೇ ದಿನಾಲೂ ಶಿವ ಪಂಚಾಕ್ಷರಿ ಮಂತ್ರವನ್ನು ಜಪಿಸಿದ ವಿನಾ ನನ್ನ ಸಂಧ್ಯಾವಂದನೆ ಸಂಪೂರ್ಣವಾಗುವುದಿಲ್ಲ. ಮುಸಲ್ಮಾನ್, ಕ್ರಿಶ್ಚಿಯನ್ ಧರ್ಮಗಳಂತೆಯೇ ಹಿಂದು ಧರ್ಮದಲ್ಲಿಯೂ ಉಪಾಸನೆಯ ಮಂತ್ರವಿದೆ. ಅವು ಎರಡು ಇವೆ. ಒಂದು ಓಂ ನಮಃ ಶಿವಾಯ, ಇನ್ನೊಂದು ಓಂ ನಮೋ ನಾರಾಯಣಾಯ ಎಂದು. ಇದರಲ್ಲಿ ಎರಡು ಜನ ಈಶ್ವರರಿದ್ದಾರೆಂಬ ಕಲ್ಪನೆ ಇಲ್ಲದೆ ಹರಿಹರರು ಏಕರೂಪವಾಗಿಯೇ ಇದ್ದಾರೆ. ಈ ಪಂಚಾಕ್ಷರಿ ಇಲ್ಲವೆ ಷಡಕ್ಷರಿ ಮಂತ್ರವನ್ನು ಪ್ರತಿಯೊಬ್ಬ ಸ್ತ್ರೀ ಪುರುಷನು ಆವಶ್ಯಕವಾಗಿ ಜಪಿಸಲೇ ಬೇಕು. ನಿಮ್ಮ ಸಮಾಜವು ವ್ಯಾಪಾರ ವೃತ್ತಿಯಿಂದ ಸ್ವತಂತ್ರ ಸಮಾಜವಿದೆಯೆಂಬುದನ್ನು ಕೇಳಿ ನನಗೆ ಆನಂದವಾಗುತ್ತಿದೆ."

ಅನಂತರ ನಾಗರಿಕರ ಪರವಾಗಿ ಹಿಂದೀ ಮಾನಪತ್ರವನ್ನು ಡಾ. ವೈಶಂಪಾಯನ್ ಇವರು ಓದಿದರು. ಅದಕ್ಕುತ್ತರವಾಗಿ ಪಂಡಿತಜಿಯವರು ಸ್ವದೇಶಿ ಮಹತ್ವವನ್ನು ತಿಳಿಸಿಕೊಡುವಾಗ ಪ್ರತಿಯೊಬ್ಬನು ಸ್ವದೇಶಿ ಪದಾರ್ಥಗಳನ್ನೇ ಉಪಯೋಗಿಸುವ ವ್ರತವನ್ನು ಕೈಕೊಳ್ಳಬೇಕಾಗಿ ವಿಜ್ಞಾಪಿಸಿಕೊಂಡರು.

# ಶ್ರೀ. ಪುಟ್ಟಸ್ವಾಮಿಯವರ ಸ್ವಂತ ಲೇಖನ.

(ನಮ್ಮ ಪ್ರಾರ್ಥನೆಯ ಮೇರೆಗೆ ಶ್ರೀಮಾನ್ ಬಿ. ಎಸ್. ಪುಟ್ಟ ಸ್ವಾಮಿಯವರು ಬಿ. ಎ., ಬಿ. ಎಲ್. ಎಂ. ಎಲ್. ಸಿ., ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್, ಮೈಸೂರು ಇವರು ತಾ ೨೭-೬-೩೬ನೆಯ ದಿವಸ ನಮ್ಮ ಕಡೆಗೆ ಕಳುಹಿಸಿದ ಲೇಖನವನ್ನು ಇದ್ದ ಕ್ಕಿದ್ದಂತೆಯೇ ಇಲ್ಲಿ ಪ್ರಕಟಿಸಿದ್ದಾಗಿದೆ. ಸಾರ್ವಜನಿಕವಾದ ಈ ಮಹತ್ವದ ವಿಷಯದಲ್ಲಿ ನಡೆದ ಸಂಭಾಷಣೆಯನ್ನು ಶ್ರೀಮಾನ್ ಪುಟ್ಟ ಸ್ವಾಮಿಯವರು ಬರೆದು ಕಳುಹಿಸಿದುದಕ್ಕೋಸ್ಕರ ನಾವು ಹೃದಯಪೂರ್ವಕ ಇವರನ್ನು ಅಭಿನಂದಿಸುತ್ತೇವೆ. ಈ ಲೇಖನವುಳ್ಳ ಪತ್ರಿಕೆಯು ಬಾಳೆಹೊಳ್ಳಿ ಶ್ರೀಗಳಿಗೆ ರಜಿಸ್ಟರ್ ಮೂಲಕ ಕಳುಹಿಸಲ್ಪಡುತ್ತದೆ. —ಸಂಪಾದಕ.)

**ಶರಣಸಂದೇಶ ಪತ್ರಿಕೆಯ ಸಂಪಾದಕರಲ್ಲಿ ವಿಜ್ಞಾಪನೆಗಳು.**

ಅಭಿಮಾನಪೂರ್ವಕವಾಗಿ ತಾವು ಕಳುಹಿಸಿಕೊಟ್ಟ ಶರಣ ಸಂದೇಶದ ಜೂನ್ ತಿಂಗಳು ೧೧ ಮತ್ತು ೧೫ನೇ ತಾರೀಕು ಸಂಚಿಕೆ ಗಳು ನಿನ್ನೆಯ ದಿವಸ ನನ್ನ ಹಸ್ತಗತವಾದವು. ಮೊನ್ನೆ ತಾನೆ ಮುಗಿದ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಕಾರ್ಯಕಲಾಪಗಳ ಸಂದಣಿಯಲ್ಲಿ ಸಿಕ್ಕಿದ್ದ ನನಗೆ ಪತ್ರಿಕಾ ಪತ್ರವ್ಯವಹಾರಕ್ಕೆ ವ್ಯವಧಾನವಿಲ್ಲದೆ ನಾನು ನನ್ನ ಕರ್ತವ್ಯ ಭಾರವನ್ನು ನಡೆಯಿಸಲು ಕಾಲ ವಿಲಂಬ ಮಾಡಿದುದಕ್ಕಾಗಿ ದಯೆಯಿಟ್ಟು ಕ್ಷಮಿಸಬೇಕಾಗಿ ಬೇಡುತ್ತೇನೆ.

ತಾ. ೨೬-೬-೩೬ರಲ್ಲಿ ನಾನು ಶ್ರೀ ರಂಭಾಪುರಿಯವರ ಸಂದ ರ್ಶನಕ್ಕೆ ಹೋಗಿದ್ದುದು ನಿಜ. ಈ ಭೇಟಿಯು ಶ್ರೀ ರಂಭಾಪುರಿ ಯವರೊಡನೆ ನಾನು ಮಾಡಿದ ಭೇಟಿಗಳಲ್ಲಿ ಮೂರನೆಯದಾಗಿದು ತ್ತದೆ. ಶ್ರೀಗಳವರೇ ನನ್ನನ್ನು ದರ್ಶನಾಶೀರ್ವಾದಕ್ಕೆ ಬರಬೇ ಕೆಂದು ಅಪ್ಪಣೆ ಕೊಡಿಸಿದ್ದ ನೇರೆ ಸಂದರ್ಶನಾರ್ಥಿಯಾಗಿ ಹೋದೆ ನಲ್ಲದೆ ನಾನು ಈ ಭೇಟಿಗಾಗಿ ಶ್ರೀಗಳವರನ್ನು ಪ್ರಾರ್ಥಿಸಿಕೊಂಡಿರ ಲಿಲ್ಲ. ಪ್ರಕೃತವಲ್ಲಿ ವೀರಶೈವ ಸಮಾಜದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳು ಹೋಗಿ ಐಕಮತ್ಯ ಸ್ಥಾಪನೆಗೆ ಅವಕಾಶ ವನ್ನೀಯುವ ಸನ್ನಿವೇಶಗಳು ಒಂದು ನೇಕೆ ಉಂಟಾದರೂ ಉಂಟಾ ಗಬಹುದೆಂಬ ಒಂದು ಕೊನೆಯ ಆಶೆಯಿಂದ ಶ್ರೀಗಳವರನ್ನು ಸಂದರ್ಶಿಸಲು ಹೋಗಿದ್ದೆನಲ್ಲದೆ ಪತ್ರಿಕಾ ಬಾತ್ಮಿದಾರರಂತೆ ಶ್ರೀಗ ಳವರಿಗೆ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ಪಡೆದು ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂಬ ಉದ್ದೇಶದಿಂದ ನಾನು ಶ್ರೀಗಳವರನ್ನು ಸಂದ ರ್ಶಿಸಿದವನಲ್ಲ. ತತ್ರಾಪಿ ಈ ಭೇಟಿಯಲ್ಲಂತೂ ಶ್ರೀಗಳವರಿಂದ ನಾನು ಏತಕ್ಕಾಗಿ ಆಹ್ವಾನಿಸಲ್ಪಟ್ಟಿದ್ದೆನೊ ಅದನ್ನು ತಿಳಿದುಕೊಳ್ಳು ವುದು ನನ್ನ ಮುಖ್ಯ ಕರ್ತವ್ಯವಾಗಿತ್ತು.

ಈ ಭೇಟಿಯಲ್ಲಿ ಪ್ರಸ್ತಾಪಪತ್ರೀಸ ಮತಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ಶ್ರೀಗಳವರಿಂದಲೇ ಚರ್ಚೆಗೆ ಬಂದುವು. ಸಂಭಾಷಣಾ ಕಾಲದಲ್ಲಿ ಶ್ರೀ ಬಸವೇಶ್ವರನ ವಿಷಯಗಳನ್ನು ಕುರಿತು ಶ್ರೀಗಳವರು ತಮಗಿರುವ ಭಾವನೆಯನ್ನು ನಿರ್ದಿಷ್ಟವಾಗಿ ಸ್ಪಷ್ಟೋ ಕ್ತಿಗಳಿಂದ ಸೂಕ್ತವಾಡಿದ ಅಂಶಗಳನ್ನು ಕ್ರೋಢೀಕರಿಸಿ "ತಾಯಿ ನಾಡು" ಪತ್ರಿಕೆಯ ಬಾತ್ಮಿದಾರರಿಗೆ ಪ್ರಕಟನೆಗಾಗಿ ಸದುದ್ದೇಶ ದಿಂದ ಸೂಚಿಸಿದೆನು. ಆ ಪತ್ರಿಕೆಯಲ್ಲಿ ಅಡಕವಾಗಿರುವ ಪ್ರತಿ ಯೊಂದು ಅಂಶವೂ ಶ್ರೀಗಳವರಿಂದ ಸೂಕ್ತವಾದುವೂ ಮತ್ತು ಯಥಾರ್ಥವಾದುವುಗಳೂ ಅಲ್ಲದೆ ಅನ್ಯಥಾ ಅಲ್ಲ. ಸುಮತೀ ಪಂಡಿತ ರೇವಣಾರಾಧ್ಯರು "ಪ್ರಜಾಬಂಧು"ವಿನಲ್ಲಿ ಬರೆಯುವಂತೆ ಶ್ರೀಗ ಳವರಿಂದ ಸೂಕ್ತವಾಗದ, ವಿಷಯಗಳ್ಯಾವುವನ್ನೂ ನಾನು ಕಲ್ಪಿಸಿ ಕೊಂಡು ಪ್ರಕಟಿಸಿಲ್ಲ. ಹಾಗೆ ಪ್ರಕಟಿಸಬೇಕಾದ ಅವಶ್ಯಕತೆಯೂ ನನಗಿಲ್ಲ. ಸುಮತೀ ಪಂಡಿತ ರೇವಣಾರಾಧ್ಯರು "ಪ್ರಜಾ ಬಂಧು" ವಿನಲ್ಲಿ ಬರೆದಿರುವ ಲೇಖನದಲ್ಲಿ "ಶ್ರೀ ರಂಭಾಪುರಿಯವರೂ, ಶ್ರೀ ಮುರಿಗಿ ಮಠದವರೂ ಲಿಂಗಿಗಳಿಗೆ ಶ್ರೀ ಬಸವೇಶ್ವರನಂತೆ ಲಿಂಗಧಾರಣೆ ಮಾಡುತ್ತಿರುವರು" ಎಂಬ ವಿಷಯವು ಕಲ್ಪಿತವಾ ದುದೆಂದೂ, ಅದು ಶ್ರೀಗಳವರಿಂದ ಸೂಕ್ತವಲ್ಲದ ವಿಷಯವೆಂದೂ ಬರೆದಿರುತ್ತಾರೆ. ಈ ವಿಷಯದಲ್ಲಿ ನಾನು ಹೇಳಬೇಕಾದುದು ಇಷ್ಟೆ.

ಶ್ರೀಗಳವರು ವೀರಶೈವ ಮತದ ಪ್ರಾಚೀನತೆಯನ್ನೂ, ಕರ್ಲ ಮಂಗಲದ ಶ್ರೀಕಂಠಯ್ಯನವರಿಂದ ಇತ್ತೀಚೆಗೆ ಪ್ರಕಟವಾಗಿರುವ ಪುಸ್ತಕದಲ್ಲಿನ ಸಾರಾಂಶವನ್ನೂ ಕುರಿತು ಪ್ರಸ್ತಾಪ ಮಾಡುವಾಗ್ಗೆ ಶ್ರೀಗಳವರು ತಾವು ವೀರಶೈವ ಮತದ ಪ್ರಾಚೀನತೆಯನ್ನು ಸ್ಥಾಪನೆ ಮಾಡುವ ಪ್ರಯತ್ನದಲ್ಲಿರುವ ವೇಳೆಯಲ್ಲಿ ಕರ್ಲಮಂಗಲಂ ಶ್ರೀಕಂಠಯ್ಯನವರು ಬರೆದಿರುವ ಪುಸ್ತಕಕ್ಕೆ ಕೆಲವರಿಂದ ಪ್ರೋತ್ಸಾಹ ದೊರೆಯುತ್ತಿರುವುದು ಶೋಚನೀಯವಾದ ಸಂಗತಿಯೆಂದು ಅಪ್ಪಣೆ ಕೊಡಿಸಿದರು. ಆಗ ನಾನು ಒಂದುವೇಳೆ ವೀರಶೈವ ಮತಕ್ಕೆ ಪ್ರಾಚೀನತೆಯು ಸಂಸಿದ್ಧವಾಗದೆ ಹೋದ ಮಾತ್ರದಿಂದಲೇ ವೀರಶೈವ ಮತದ ಪ್ರಾಶಸ್ತ್ಯವು ಕಮ್ಮಿಯಾಗಲಾರದೆಂತಲೂ, ವೀರ ಶೈವ ಮತದ ತತ್ವದ ಗುಣಗ್ರಹಣವೇ ಮುಖ್ಯವಲ್ಲದೆ ಗುಣರಹಿತ ವಾದ ಪ್ರಾಚೀನತೆಯಿಂದ ಅಷ್ಟೊಂದು ಪ್ರಾಶಸ್ತ್ಯ ಉಂಟಾಗಲಾರ ದೆಂಬ ಭಾವನೆಯನ್ನು ಶೃತಪಡಿಸಿದ ವೇಳೆಯಲ್ಲಿ ಶ್ರೀಗಳವರು ಗುಣಗ್ರಹಣದ ಜತೆಗೆ ಇರುವ ಪ್ರಾಚೀನತೆಯನ್ನೂ ಸಂಸಿದ್ಧ ಮಾಡುವುದು ಉತ್ತಮವೆಂಬ ಸಮಂಜಸವಾದ ಸಮಾಧಾನವನ್ನು ಅಪ್ಪಣೆ ಕೊಡಿಸುತ್ತ "ಈಗ ನೋಡಿ ನಾವೂ ಶ್ರೀ ಮುರುಗಿ ಮಠ ದವರೂ, ಅಲಿಂಗಿಗಳಿಗೆ ಲಿಂಗಧಾರಣೆ ಮಾಡುತ್ತಿರುತ್ತೇವೆ. ಆದರೆ ನಮ್ಮಿಂದ ಲಿಂಗಧಾರಣೆ ಮಾಡಿಸಿಕೊಂಡವರಿಗೂ, ಆನಾದಿಯಾಗಿ ಲಿಂಗಧಾರಣೆ ಮಾಡಿಕೊಂಡು ಬಂದಿರುವವರಿಗೂ ಸಮಾನತ್ವ ಉಂಟಾಗುವುದೆ? ಒಬ್ಬರಿಗೆ ಪ್ರಾಚೀನತೆಯುಂಟು, ಮತ್ತೊಬ್ಬರಿಗೆ ಇಲ್ಲ; ಇದೇ ವ್ಯತ್ಯಾಸ" ಎಂದು ಅಪ್ಪಣೆ ಕೊಡಿಸಿದರು.

ಶ್ರೀ ಬಸವೇಶ್ವರನನ್ನು ನಿಂದಿಸುವರೆಂಬ ಒಂದು ಅಪವಾದ ವನ್ನು ಹೋಗಲಾಡಿಸುವುದು ಮುಖ್ಯಾಂಶವೆಂದು ಶ್ರೀಗಳವರಿಗೆ ನನ್ನ ಹಿಂದಿನ ಎರಡು ಭೇಟಿಗಳಲ್ಲಿಯೂ ಶೃತಪಡಿಸಿಕೊಂಡಿದ್ದೆ. ಶ್ರೀಗಳವರು ಶ್ರೀ ಬಸವೇಶ್ವರನನ್ನು ನಿಂದಿಸುವುದಿಲ್ಲವೆಂಬ ಅಂಶ ವನ್ನು ಪ್ರತಿಯೊಬ್ಬ ಭಕ್ತನೂ ಶ್ರೀಗಳವರನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿ ತಿಳಿದುಕೊಳ್ಳುವುದು ಕಷ್ಟ ಸಾಧ್ಯವಾದುದರಿಂದ ಬೆಂಗ ಳೂರು ಮುಕ್ಕಾಮಿನಲ್ಲಿ ಶ್ರೀಗಳವರು ನಡೆಸುವ ಸಭೆಯಲ್ಲಿ ಬಹಿ ರಂಗವಾಗಿ ಈ ವಿಷಯದಲ್ಲಿ ಅಪ್ಪಣೆ ಕೊಡಿಸುವುದು ಸೂಕ್ತವೆಂದು ಪುನಹ ಅರಿಕೆಮಾಡಿಕೊಂಡಾಗ ಶ್ರೀಗಳವರು ಹಾಗೆ ಅಪ್ಪಣೆ ಕೊಡಿಸಿದರೂ ಕೆಲವರು ಅಸಹಕಾರ ಮಾಡೇಮಾಡುವರೆಂತಲೂ, ಅದರಿಂದ ನಾನು ಎಣಿಸಿರುವಂತೆ ಯಾವ ಪ್ರಯೋಜವೂ ಉಂಟಾ

ಗಲಾರದೆಂತಲೂ, ಯಾರೂ ಅಸಹಕಾರ ಮಾಡಿಕೊಳ್ಳದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುವ ದಾದರೆ ಮಾರನೆಯ ದಿವಸವೆ ಶ್ರೀ ಬಸವೇಶ್ವರನು ವೀರಶೈವ ಮತೋದ್ಧಾರಕನೆಂತಲೂ, ಮಹಾಮಹಿಮನೆಂತಲೂ, ಅನೇಕ ಪವಾಡಗಳನ್ನು ಮಾಡಿ ನೆರೆದವನೆಂತಲೂ, ಒಹಿರಂಗ ಸಭೆಯಲ್ಲಿ ಅಪ್ಪಣೆ ಕೊಡಿಸುವುದಾಗಿ ಸೂಚಿಸಿದರು. ನಾನು "ಈಗಾಗಲೇ ವೇಳೆಯಾಗಿದೆ ಶಿವಪೂಜೆಗೆ ಹೊತ್ತಾಯಿತು. ನಾನು ಹಾಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾದರೆ ಮರುದಿನ ಬಂದು ಬಹಿರಂಗ ಸಭೆಯಲ್ಲಿ ಯಾವ ರೀತಿ ಅಪ್ಪಣೆ ಕೊಡಿಸಬೇಕೆಂಬುದನ್ನು ಅರಿಕೆ ಮಾಡಿಕೊಳ್ಳುವೆನು" ಎಂದು ತಿಳಿಸಿದೆನು. ಶ್ರೀಗಳವರು ಅದರಿಂದ ಪ್ರಯೋಜನವಿಲ್ಲವೆಂತಲೂ "ತಾವು ಸೂಚಿಸಿದಂತೆ ಅಪ್ಪಣೆ ಕೊಡಿಸಿದ ಮೇಲೂ ಮತ್ತೆ ಯಾರಾದರೂ ಬಂದು, ನೀವು ಬಸವೇಶ್ವರನನ್ನು ಪೂಜಿಸುತ್ತೀರಾ, ಹಾಗೆ ಪೂಜಿಸುವುದಾದರೆ ನಮ್ಮೆದುರಿಗೆ ಪೂಜಿಸಿ" ಎಂದು ಕೇಳಿಯೆ ಕೇಳುವರೆಂತಲೂ, ಅಂಥವರಿಗೆ ನಾವು ಅಪ್ಪಣೆ ಕೊಡಿಸುವದೇನಂದರೆ ಸ್ವಾಮಿ ಮೇಣದ ಬೊಂಬೆಯಲ್ಲ. ಭಕ್ತನಿಗೆ ಯಾವ ಸ್ಥಾನವನ್ನು ಕೊಡಬೇಕೋ ಅಷ್ಟು ಸ್ಥಾನವನ್ನು ಮಾತ್ರ ಕೊಡಲಾದೀತೆ ಹೊರತು ತಾವು ಬಸವೇಶನನ್ನು ಪೂಜ್ಯ ಭಾವದಿಂದ ಕಾಣಲಾಗುವದಿಲ್ಲವೆಂಬ ಅಂಶಗಳನ್ನು ವ್ಯಕ್ತಗೊಳಿಸಿದರು. ಹೀಗೆ ಪ್ರಸಂಗ ಒದಗಿ ಆಗಾಗ್ಗೆ ಬಸವೇಶ್ವರನನ್ನು ಕುರಿತು ಶ್ರೀಗಳವರಿಂದ ನಿರ್ದಿಷ್ಟವಾಗಿ ಉಕ್ತವಾದ ಅಂಶಗಳನ್ನು ಕ್ರೋಢೀಕರಿಸಿ ಪ್ರಕಟಿಸಿರುತ್ತೇನೆ.

ನಾನು ಮೇಲೆ ಹೇಳಿದಂತೆ ಈ ಪ್ರಕಟನೆಯನ್ನು ತಾಯಿ ನಾಡು ಪತ್ರಿಕಾ ಬಾತ್ಮಿದಾರರಿಗೆ ಸೂಚಿಸುವಾಗ ಸದುದ್ದೇಶದಿಂದಲೇ ಸೂಚಿಸಿದೆ. ಬಸವಪ್ರೇಮಿಗಳಾದ ಶಿಷ್ಯಮಂಡಲಿಯವರು ಶ್ರೀಗಳವರು ಬಸವೇಶ್ವರನನ್ನು ನಿಂದಿಸುವುದಿಲ್ಲವೆಂಬ ಅಂಶವನ್ನು ಈ ಪ್ರಕಟನೆಯಿಂದ ಅರಿತು ಸಾಕಾದಷ್ಟು ಸಮಾಧಾನ ಬಂತೆಂದು ತೃಪ್ತರಾಗಿ ಶ್ರೀಗಳವರಲ್ಲಿ ಅಸಹಕಾರವನ್ನು ಮಾಡುವುದನ್ನು ಬಿಟ್ಟರೂ ಬಿಡಬಹುದೆಂಬ ಭಾವನೆಯೊಂದು ಕಡೆ ಅಥವಾ ಶ್ರೀಗಳವರೇ ದೂರಾಲೋಚಿಸಿ, ಭಗವಂತನೇ "ನನಗಿಂತಲೂ ನನ್ನ ಭಕ್ತರೇ ಅಧಿಕರು" ಎಂದು ಸಾರಿರುವಾಗ ಪರಮ ಭಕ್ತಾಗ್ರೇಸರನಾದ ಬಸವೇಶ್ವರನು ಶ್ರೀಗಳವರಿಂದಲೂ ಪೂಜಾರ್ಹನೆಂದು ಒಪ್ಪಿದ ಮಾತ್ರದಿಂದಲೇ ಶ್ರೀಗಳವರ ಸ್ಥಾನ ಮರ್ಯಾದೆಗೆ ಸ್ವಲ್ಪವೂ ಚ್ಯುತಿ ಉಂಟಾಗುವುದಿಲ್ಲ. ಅದಕ್ಕೆ ಬದಲಾಗಿ ಅತ್ಯಧಿಕ ಶೋಭೆಯುಂಟಾಗುವ ಕಾರಣ ಶ್ರೀಗಳವರೇ ಶ್ರೀ ಬಸವೇಶ್ವರನು ತಮ್ಮಿಂದಲೂ ಪೂಜಾರ್ಹನು ಎಂದು ಒಪ್ಪಿದರೂ ಒಪ್ಪಬಹುದೆಂಬ ಭಾವನೆಯು ಮತ್ತೊಂದು ಕಡೆ ಉಂಟಾಗಿ ಉಭಯತಾಪಿ ಯಾರಿಗಾದರೂ ದೈವವು ಸುಬುದ್ಧಿಯನ್ನು ಕೊಡುವುದಾದರೆ ಈಗ ನಡೆಯುತ್ತಿರುವ ಚರ್ಚೆಯು ಕೊನೆಗಂಡು ವೀರಶೈವ ಸಹೋದರ ನವಜೈತನ್ಯದಿಂದ ಸಣ್ಣ ಸಣ್ಣ ವಿಷಯಗಳಿಗೆ ಲಕ್ಷ್ಯ ಕೊಡುವುದನ್ನು ಮರೆತು ಮತ ಸುಧಾರಣಾ ಕಾರ್ಯವನ್ನು ಕೈಹಿಡಿದು ವೃದ್ಧಿಯಾಗಲೆಂಬ ಸದುದ್ದೇಶದಿಂದ ಪ್ರಕಟನೆಗಾಗಿ ಕಳುಹಿಸಿದೆನು.

ಇತಿ ತಮ್ಮ ಅತ್ಯಂತ ವಿಧೇಯ,
B. S. Puttaswamy

---

ಗುರು ಶಿವಸಿದ್ಧೇಶ್ವರ ಪ್ರಭುವೇ.|| ಈ ಪ್ರಕಾರ ಲಿಂಗಪೂಜೆಯ ಅರಿಯದೆ ಎಷ್ಟು ಶಿವಪೂಜೆಯನ್ನು ಮಾಡಿದರೂ ವ್ಯರ್ಥವೆಂದು ವಚನಕಾರರ ಅಭಿಪ್ರಾಯ.

—ಮಹಾಂತದೇವರು ಮುರುಘಾಮಠ,
ದಾವಣಗೆರೆ

||ಶ್ರೀ ಗುರು ಬಸವ ಲಿಂಗಾಯ ನಮಃ||

## ಲಿಂಗಪೂಜಾ ರಹಸ್ಯ.

ವೀರಶೈವ ಮತದಲ್ಲಿ ಲಿಂಗಪೂಜಾ ತತ್ವವು ಆತ್ಮಾನುಭವಕ್ಕೆ ಸಂಬಂಧಿಸಿರುತ್ತದೆ. ಪರಶಿವನು ಕೈಲಾಸದಲ್ಲಿ ಅಥವಾ ಬೇರೆ ಗುಡಿಯಲ್ಲಿ ಇರುತ್ತಾನೆಂದು ತಿಳಿಯಬಾರದು ಆತನು ನಮ್ಮ ಹೃದಯದಲ್ಲಿ ವಾಸಿಸಿದ್ದಾನೆ. ಆದುದರಿಂದ ದೇಹವೇ ದೇವಾಲಯ ಎಂಬ ಶರಣರ ವಚನ ಮತ್ತು "ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ" ಎಂಬ ಭಗವದುಕ್ತಿಗಳು ಸಾಧಕವಾದಪುಗಳಾಗಿವೆ. ನಮ್ಮಲ್ಲಿ ಅವ್ಯಕ್ತರೂಪದಿಂದಿದ್ದ ಆ ಪರಮಾತ್ಮನನ್ನು ವ್ಯಕ್ತಗೊಳಿಸಿಕೊಳ್ಳಲು ಸಹಾಯಕವಾಗಿರುವ ಕ್ರಿಯೆಗಳನ್ನು ಆಚರಿಸುವುದೇ ಲಿಂಗಪೂಜೆಯು.

ದೀಕ್ಷೆಯ ಕಾಲದಲ್ಲಿ ಗುರುಗಳು ಶಿಷ್ಯನಿಗೆ ಲಿಂಗದ ಲಕ್ಷಣವನ್ನು, "ಲೀಯತೆ ಗಮ್ಯತೆ ಯತ್ರ ಜಗದೇ ತಜ್ಜ್ಞರಾಚರಂ| ತದೇವ ಲಿಂಗನಿತ್ಯಾಹುರ್ಲಿಂಗಂ ತತ್ವ ವಿಶಾರದಾಃ|| ಈ ಪ್ರಕಾರ ಹೇಳಿ ಲಿಂಗಧಾರಣೆಯನ್ನು ಮಾಡುವನು. ಗುರುವು ಕೊಟ್ಟ ಲಿಂಗವೇ ಸರ್ವಾಂಗದಲ್ಲೆಲ್ಲಾ ತುಂಬಿ ಶಿಷ್ಯನ ಅಂಗಭಾವವನ್ನೆಲ್ಲಾ ಹರಿದು ಬಿಟ್ಟದ್ದರಿಂದ ಭವಬಾಧೆ ತಟ್ಟದಿರುವುದಕ್ಕೆ ಲಿಂಗವು ಆವರಣವಾಯಿತು. ನಾನು ಶರೀರವೆಂಬ ಭಾವವಿದ್ದರೇನೇ ಭವವು ತಟ್ಟುವದು. ನಾನು ಮಾಂಸ ಪಿಂಡವನ್ನು ಅಳಿದು (ಮಂತ್ರಶರೀರ) ಲಿಂಗಶರೀರವೆಂಬ ಭಾವವಿರಬೇಕು. ಈ ಪ್ರಕಾರ ತನ್ನಲ್ಲಿ ಲಿಂಗದ ಗುಣಗಳನ್ನು ವ್ಯಕ್ತಗೊಳಿಸುವದೇ ಲಿಂಗಪೂಜೆಯ ಮುಖ್ಯ ಉದ್ದೇಶವು.

ಬಸವ ಮಹಾನುಭಾವರು ತ್ರಿವಿಧ ಲಿಂಗಗಳ ಪೂಜೆಯನ್ನು ಯಾವ ಪ್ರಕಾರ ಮಾಡಬೇಕೆಂಬುದನ್ನು ಹೀಗೆ ವಿವರಿಸಿದ್ದಾರೆ—

ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವದು, ಮಾಡಿದ ಪೂಜೆಯ ನೋಡುವದಯ್ಯಾ, ಶಿವತತ್ವವ ಪಾಡುವದು ಶಿವನ ಮುಂದೆ ನಲಿದಾಡುವದಯ್ಯಾ, ಭಕ್ತಿ ಸಂಧಾನವ ಮಾಡುವದು ನಮ್ಮ ಕೂಡಲ ಸಂಗಯ್ಯನ ಕೂಡುವದು|| ಈ ಪ್ರಕಾರ ಗಂಧ, ಅಕ್ಷತೆ, ಪತ್ರ, ಪುಷ್ಪ, ತಾಂಬೂಲ, ನೈವೇದ್ಯ ಧರಿಸಿ ಪೂಜೆ ಮಾಡುವದೇ ಇಷ್ಟಲಿಂಗ ಪೂಜೆಯು. ಮಾಡಿದ ಪೂಜೆಯನ್ನು ಯಾವಾಗಲೂ ನೋಡುವದೇ (ಧ್ಯಾನಮಾಡುವದೇ) ಪ್ರಾಣಲಿಂಗ ಪೂಜೆಯು. ನೋಡಿದ ನಂತರ ಕೂಡುವದೇ (ಬೆರೆಯುವದೆ) ಭಾವಲಿಂಗ ಪೂಜೆಯು. ಈ ಪ್ರಕಾರ ತ್ರಿವಿಧ ಲಿಂಗಗಳ ಪೂಜೆಯ ಮರ್ಮವನ್ನು ತಿಳಿದು ಪ್ರತಿಯೊಬ್ಬ ವೀರಶೈವನು ಆಚರಿಸಲಿಕ್ಕೆ ಬೇಕು ಇದೇ ಪ್ರಕಾರ ಅನೇಕ ಶಿವಶರಣರ ವಚನಗಳು ಇರುತ್ತವೆ. ಅವುಗಳಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಈ ಪ್ರಕಾರ ಹೇಳಿರುತ್ತಾರೆ. "ಇಷ್ಟಲಿಂಗದ ಪೂಜೆಯಾವದು, ಪ್ರಾಣಲಿಂಗದ ಪೂಜೆಯಾವದು, ಭಾವಲಿಂಗದ ಪೂಜೆಯಾವದು, ಹೇಳಿಹೆ ಕೇಳಿರಯ್ಯಾ. ಅಷ್ಟವಿಧಾರ್ಚನೆ ಮಾಡುವದು ಇಷ್ಟಲಿಂಗಪೂಜೆ, ಆ ಲಿಂಗವ ಮನಸ್ಸಿನಲ್ಲಿ ಧ್ಯಾನಿಸಿ ಮನೋ ಮಧ್ಯದಲ್ಲಿಪ್ಪ ನಿಃಕಲ ಬ್ರಹ್ಮವನು ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಕರಸ್ಥಲದಲ್ಲಿಪ್ಪ ಲಿಂಗದ ಗೊತ್ತಿನಲ್ಲಿ ಕಟ್ಟಿ ನಿಲಿಸುವದೀಗ ಪ್ರಾಣಲಿಂಗ ಪೂಜೆ. ಮನಸ್ಸು ತಲ್ಲಿಂಗದಲ್ಲಿ ಲೀಯವಾಗಿ ನಚ್ಚು ಮೆಚ್ಚು ಅಚ್ಚೊತ್ತಿ ಅಗಲದಿಪ್ಪುದೀಗ ಭಾವಲಿಂಗ ಪೂಜೆ ಇವು ಮೂರು ಲಿಂಗದ ಅರ್ಚನೆಯೇ ಮೂರು ಲಿಂಗದ ಉಪಚಾರ ಶಿವಾರ್ಚಕರಾದ ವೀರಶೈವರು ಮಾಡುವ ಲಿಂಗಾರ್ಚನೆಯು ಕ್ರಮವೆಂದು ಹೇಳಲ್ಪಟ್ಟಿತಯ್ಯಾ ಮಹಾಲಿಂಗ

# ಸಿಂಗಾಪುರದ ಸಂಗ್ರಾಮ ಸಾಹಿತ್ಯ.

### ಸಿಂಗಾಪುರದ ಮಹತ್ವ.

ಬ್ರಿಟಿಶ್ ಸಾಮ್ರಾಜ್ಯ ಭವನಕ್ಕೆ ೫೫ ಬೀಗದ ಕೈಗಳಿರುವವೆಂದು ಒಬ್ಬ ಪ್ರಸಿದ್ಧ ನೌಕಾಧಿಪತಿಯು ಹೇಳಿದ್ದಾನೆ. ಎಲ್ಲಿಯವರೆಗೆ ಈ ಬೀಗದ ಕೈಗಳು ಹಸ್ತಗತವಾಗಿರುವವೋ ಅಲ್ಲಿಯವರೆಗೆ ಬ್ರಿಟಿಶ ಸಾಮ್ರಾಜ್ಯದ ರಾಜ್ಯಕಾರ್ಯ, ವ್ಯಾಪಾರೋದ್ಯೋಗ ಮೊದಲಾದವುಗಳಿಗೆ ಯಾವ ಭಯವೂ ಇಲ್ಲ. ಈ ದೃಷ್ಟಿಯಿಂದ ಸಿಂಗಾಪುರವು ಅತ್ಯಂತ ಮಹತ್ವದ ಬೀಗದ ಕೈಯಾಗಿರುವದು.

ಈ ಮಹತ್ವದ ಸ್ಥಲವು ಹಿಂದಿ ಮತ್ತು ಫ್ಯಾಸಿಫಿಕ ಮಹಾಸಾಗರಗಳು ಕೂಡುವಲ್ಲಿ ಮಲಾಯಾ ದ್ವೀಪಕಲ್ಪದ ದಕ್ಷಿಣ ಅಂಚಿಗೆ ಒಂದು ಇಕ್ಕಟ್ಟಾದ ಸಾಮುದ್ರಧುನಿಯಲ್ಲಿರುವದು. ಹಿಂದಿ ಮಹಾಸಾಗರದಿಂದ ಫ್ಯಾಸಿಫಿಕ ಮಹಾಸಾಗರದಲ್ಲಿ ಪ್ರವೇಶಿಸುವ ಯಾವ ಹಡಗವಾದರೂ ಸಿಂಗಾಪುರದ ಮುಂದೆಯೇ ಹೋಗಬೇಕು. ಆದರ ಹೊರತು ಅನ್ಯ ಮಾರ್ಗವೇ ಇಲ್ಲ. ಆದ್ದರಿಂದ ಇದು ಜಿಬ್ರಾಲ್ಟರಕ್ಕಿಂತಲೂ ಮಹತ್ವದ ನೌಕಾಸ್ಥಳವಾಗಿದೆ.

### ವ್ಯಾಪಾರ ಕೇಂದ್ರ.

ಮಹಾಯುದ್ಧದ ಪೂರ್ವದಲ್ಲಿ ಬ್ರಿಟಿಶರ ವ್ಯವಹಾರ ಕೇಂದ್ರವು ಪೂರ್ವದಿಕ್ಕಿನಲ್ಲಿರಲಿಲ್ಲ. ಆದರೆ ಜಪಾನರು ಅಭಿವೃದ್ಧಿಯಾಗಹತ್ತಿದಂದಿನಿಂದಲೂ, ಚೀನದಲ್ಲಿಯ ಬ್ರಿಟಿಶರ ವ್ಯಾಪಾರಕ್ಕೆ ಉತ್ತೇಜನ ಮತ್ತು ರಕ್ಷಣೆಗಳು ಬೇಕಾದುದರಿಂದಲೂ ಮತ್ತು ಮಲಾಯಾ ದ್ವೀಪ ಕಲ್ಪದಲ್ಲಿಯ ರಬ್ಬರಿನ ವ್ಯವಸಾಯವು ಬ್ರಿಟಿಷರ ಹಸ್ತಗತವಾದುದರಿಂದ ಅದರ ರಕ್ಷಣೆಗಾಗಿಯೂ ಸಿಂಗಾಪುರಕ್ಕೆ ವ್ಯಾಪಾರದ ಕೇಂದ್ರನೆಂಬ ಮಹತ್ವವು ಪ್ರಾಪ್ತವಾಯಿತು.

### ನೌಕಾ ಸ್ಥಾನ.

ಆದುದರಿಂದ ಬ್ರಿಟಿಶರು ಇಲ್ಲಿ ಅಸಂಖ್ಯ ದ್ರವ್ಯವನ್ನು ವೆಚ್ಚ ಮಾಡಿ ಮೊದಲೇ ನಿಸರ್ಗಸಿದ್ಧವಾದ ನೌಕಾಸ್ಥಾನವನ್ನು ಭದ್ರಪಡಿಸಿ ಅಜಿಂಕ್ಯವಾಗಿ ಮಾಡಿದ್ದಾರೆ. ಇಲ್ಲಿ ಹಡಗುಗಳು ನಿಲ್ಲಲಿಕ್ಕೆಂದು ಮಾಡಿದ ಧಕ್ಕೆಗಳಲ್ಲಿ ಬ್ರೆಕ್‌ವಾಟರ್ಸ ಯಂತ್ರದ ಸಹಾಯದಿಂದ ೧೦ ಸಾವಿರ ಚೀನೀ ಮತ್ತು ತಮಿಳು ಜನರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಬಹು ದೊಡ್ಡ ಹಡಗುಗಳು ಸಹ ಬಂದು ನಿಲ್ಲಬಲ್ಲವು. ಇಲ್ಲಿಯ ಪ್ರತಿಯೊಂದು ಧಕ್ಕೆಯು ೧೩೦ ಅಡಿ ಆಗಲ ೪೦ ಅಡಿ ಆಳ ೧೦೦೦ ಅಡಿ ಉದ್ದವಿದ್ದು ಇವು ಒಂದು ಮೈಲಿನವರೆಗೆ ಹಬ್ಬಿವೆ.

### ಸಿಂಗಾಪುರದ ರಹಸ್ಯ.

ಹಿಂದಿ ಮತ್ತು ಫ್ಯಾಸಿಫಿಕ ಮಹಾಸಾಗರಗಳಲ್ಲಿ ಪರ್ಯಟನ ಮಾಡುವ ಪ್ರತಿಯೊಂದು ಹಡಗವು ಸಿಂಗಾಪುರದ ಮುಂದೆಯೇ ಹಾಯ್ದು ಹೋಗಬೇಕಾಗುವದೆಂದು ಹೇಳಿದೆಯಷ್ಟೆ. ಆದರೆ ಇಲ್ಲಿಯ ಸಾಮುದ್ರಧುನಿಯು ಪ್ರವಾಹವು ಅತ್ಯಂತ ಘಾತುಕವಾದುದರಿಂದ ಯೋಗ್ಯ ಮಾರ್ಗದರ್ಶಿಯಿಲ್ಲದೆ ಯಾವದಾದರೂ ಹಡಗವು ಹೋದರೆ ಅದು ಒಡೆದು ಚೂರುಚೂರಾಗುವದು. ಈ ಮಾರ್ಗದರ್ಶಿಗಳು ಯಾವಾಗಲೂ ಅಚ್ಚ ಬ್ರಿಟಿಶರೇ ಇರುತ್ತಾರೆ. ಬ್ರಿಟನದಲ್ಲಿ ಜನ್ಮಿಸದ ಮನುಷ್ಯನಿಗೆ ಈ ಕಾರ್ಯವು ಎಂದೂ ವಹಿಸಲು ಕೊಡುವುದಿಲ್ಲವೆಂದನೇಲೆ ಇದರ ರಹಸ್ಯವನ್ನೆಷ್ಟೆಂಬುದು ವಿದಿತವಾಗುತ್ತದೆ. ಈ ಬಂದರವಿರುವ ಚಂಗಿಭೂಶಿರಕ್ಕೆ ಅಭೇದ್ಯವಾದ ಕೋಟಿಯನ್ನು ಕಟ್ಟಿರುವರು. ಅದೂ ಅಚ್ಚ ಬ್ರಿಟಿಶರ ರಕ್ಷಣೆಯಲ್ಲಿದೆ. ಈ ಸಾಮುದ್ರಧುನಿಯ ಧಡದಿಂದ ಒಂದು ಪ್ರಚಂಡ ಪ್ರಕಾಶ ಪುಂಜವನ್ನು (Search light) ಇಟ್ಟಿದ್ದಾರೆ. ಇದರಿಂದ ಮಧ್ಯರಾತ್ರಿಯಲ್ಲಿಯು ಸಹ ಮಧ್ಯಾಹ್ನದಷ್ಟು ಪ್ರಕಾಶ ಬೀಳುತ್ತದೆ.

### ಸಿಂಗಾಪುರದ ಸಂಗ್ರಾಮ ಭಂಡಾರ.

ಸಿಂಗಾಪುರವು ಇಷ್ಟು ರಹಸ್ಯಯುಕ್ತವಾಗಿದ್ದರೂ ಕೆಲ ಜರ್ಮನರು ಇಲ್ಲಿ ಪ್ರವೇಶಿಸಿ ಶಸ್ತ್ರಾಗಾರದ ಗುಟ್ಟನ್ನು ಗ್ರಹಿಸಿದ್ದಾರೆಂದು ಹೇಳುತ್ತಾರೆ. ಈ ಜರ್ಮನರ ಹೇಳಿಕೆಯಂತೆ ಅಲ್ಲಿ ೧೪ ಇಂಚಿನ ಮೂರು ತೋಪುಗಳಿವೆ. ಅವು ೫೯ ಅಡಿ ಉದ್ದವಿದ್ದು ೧೫೦ ಟನ್ ಭಾರವಿರುತ್ತವಂತೆ. ಪ್ರತಿಯೊಂದು ತೋಪು ೩೫೦ ಪೌಂಡು ಗುಂಡುಗಳನ್ನು ಎಸೆಯಬಲ್ಲುದು. ಇಲ್ಲಿ ಕೆಲಸ ಮಾಡುವವರು ಕೇವಲ ಕೆಂಪು ಜನರು. ೧೫೦ ಟನ್ ಭಾರವಾದ ಒಂದು ಕ್ರೇನ್ (ಎತ್ತುವ ಯಂತ್ರ) ಮತ್ತು ೫೦ ಸಾವಿರ ಟನ್ ಭಾರವಾದ ಒಂದು ತೇಲುವ ಧಕ್ಕೆಯೂ ಇದ್ದು ಅಲ್ಲಿ ಸಂಗ್ರಾಮದ ಹಡಗು ಪಡೆಯೆಲ್ಲ ಆಶ್ರಯ ಹೊಂದುವುದು. ಇಲ್ಲಿ ತಂಪಿ ರಹಿತ ವಾರ್ತಾವಾಹಕ ಸ್ಥಾನವಿದ್ದು ಅದಕ್ಕೂ ಇಂಗ್ಲೆಂಡದ ವ್ಹಾಯಿಟ್ ಹಾಲಕ್ಕೂ ಸಂಬಂಧವಿದೆ. ಮತ್ತು ಈ ಪ್ರಚಂಡವಾದ ಯುದ್ಧ ನೌಕಾಬಲಕ್ಕೆಲ್ಲ ೬ ತಿಂಗಳುವರೆಗೆ ಸಾಲುವಷ್ಟು ೧೫ ಲಕ್ಷ ಟನ್ ಜ್ವಾಲಾಗ್ರಾಹಿ ತೈಲದ ಸಂಗ್ರಹವಿದೆ.

### ಸಿಂಗಾಪುರದ ವೈಮಾನಿಕ ಬಲ.

ಸಿಂಗಾಪುರ ಪಟ್ಟಣದಿಂದ ೨ ಮೈಲಿನ ಮೇಲೆ ಸೆಲಾಗ್ ಎಂಬಲ್ಲಿ ೧೦ ಲಕ್ಷ ಪೌಂಡುಗಳನ್ನು ವೆಚ್ಚಮಾಡಿ ವೈಮಾನಿಕ ಕ್ಷೇತ್ರವನ್ನು ಮಾಡಿದ್ದಾರೆ. ಇದು ಸಾವಿರ ಗಜ ಕ್ಷೇತ್ರವುಳ್ಳ ವರ್ತುಲಾಕಾರದ ಬೈಲು ಪ್ರದೇಶವಿದ್ದು ಇದರ ಸುತ್ತಲೆಲ್ಲ ಸರಕಾರಿ ಅಧಿಕಾರಸ್ಥರ ಆಫೀಸುಗಳಿರುತ್ತವೆ ಇದು ಇಂಗ್ಲೆಂಡ, ಆಸ್ಟ್ರೇಲಿಯಾ, ಜಾವಾ, ಹಿಂದುಸ್ಥಾನ ಮೊದಲಾದವುಗಳ ಕಡೆಗೆ ಹೋಗಿಬರುವ ವಿಮಾನಗಳು ನಿಲ್ಲುವ ಕೇಂದ್ರಸ್ಥಾನವಾಗಿದೆ. ಇಲ್ಲಿ ಯುದ್ಧದ ವಿಮಾನಗಳನ್ನಿರಿಸುವದಕ್ಕಾಗಿ ಮಹಾಯುದ್ಧದ ಕಾಲಕ್ಕೆ ಪ್ರಸಿದ್ಧ ಯಾನ ತಜ್ಞನಾಗಿದ್ದ ಸ್ಕ್ವಾಡ್ರನ್ ಲೀಡರ ಆರ್. ಎ. ಜಾರ್ಜ ಇವರನ್ನು ನಿಯಮಿಸಿದ್ದಾರೆ ಒಂದು ಗಂಟೆಗೆ ೩೦೦ ಮೈಲಿಗಿಂತ ವೇಗವಾಗಿ ಹೋಗುವ "ಫಾಯರ್ ಡ್ರಾಯಿಫ್ಲಿಂಗ್" ಎಂಬ ಕಲೆಯಲ್ಲಿ ಇವರು ಒಳ್ಳೇ ಶಿಷ್ಟಾಚಾರಿದ್ದಾರೆ. ಇವರ ನಿಯೋಜನೆಯಿಂದ ಸಿಂಗಾಪುರದ ವೈಮಾನಿಕ ಬಲವು ಅಜಿಂಕ್ಯವಾಗಿದೆ.

### ಜಗತ್ತಿನ ಕಣ್ಣು.

ಸಿಂಗಾಪುರದ ಬಲ ಸಂವರ್ಧನೆಯನ್ನು ಜಪಾನವು ಬಿರುಗಣ್ಣಿನಿಂದ ನೋಡುತ್ತಲಿದೆ. ಅದೂ ತನ್ನ ರಕ್ಷಣೆಗಾಗಿ ಅಲ್ಲಿನ ೬೦೦ ಮೈಲಿನ ಕ್ರಾ ಸಂಯೋಗ ಭೂಮಿಯಲ್ಲಿ ಹಡಗುಪಡೆಯ ಸಂಚಲನಕ್ಕಾಗಿ ಒಂದು ಕಾಲಿವೆಯನ್ನು ಅಗಿಯುವ ಪ್ರಯತ್ನದಲ್ಲಿದೆ. ಪೂರ್ವದಿಕ್ಕಿನಲ್ಲಿ ಯುದ್ಧವು ಆಗಬಹುದು. ಇಲ್ಲವೆ ಆಗದಿರಬಹುದು. ಆದರೆ ಸಿಂಗಾಪುರದ ಬಲವೂ, ಮಹತ್ವವೂ ಎಂದೂ ಕಡಿಮೆಯಾಗಲಾರವು. ೧೨ ವರುಷಗಳ ಮುಂಚೆಯೇ ಈ ಮಲಾಯಾ, ನಡುಗಡ್ಡೆಯು ಬ್ರಿಟಿಶರ ವಶಕ್ಕೆ ಬಂದಿದ್ದಿತು. ಆಗ್ಗೆ ಇದರ ಮಹತ್ವ

# ರಾಷ್ಟ್ರೀಯ ಸಭೆಯ ಚಟುವಟಿಕೆಗಳು.

### ಸರದಾರ ವಲ್ಲಭಭಾಯಿಯವರ ಆರೋಗ್ಯ.

ಸರದಾರ ವಲ್ಲಭಭಾಯಿಯವರ ಮೂಗಿನ ಬೇನೆಯು ಪ್ರತಿ ದಿವಸ ಹೆಚ್ಚಾಗುತ್ತ ನಡೆದುದರಿಂದ ಇವರ ತಲೆಯು ಯಾವಾಗಲೂ ನೋಯುತ್ತಿರುತ್ತದೆ. ಇವರಿಗೆ ನಿದ್ರಾಭಂಗವಾಗಿ ತೊಂದರೆಯಾಗುತ್ತಿದೆ. ಆದುದರಿಂದ ಇವರ ಪ್ರಕೃತಿಯು ಕೆಡುತ್ತ ಇದೆ. ಹೀಗಿದ್ದರೂ ಇವರನ್ನು ಸರಕಾರವು ಬಿಡುಗಡೆ ಮಾಡುವ ವಿಚಾರದಲ್ಲಿಲ್ಲ. ಬೇಡಾ ಮತ್ತು ಅಹಮ್ಮದಾಬಾದ ಜಿಲ್ಲಾಧಿಕಾರಿಗಳು ಇವರನ್ನು ಬಿಡುಗಡೆ ಮಾಡಲು ನಮ್ಮ ವಿರೋಧವಿಲ್ಲವೆಂದು ಮುಂಬೈ ಸರಕಾರಕ್ಕೆ ತಿಳುಹಿಸಿದ್ದಾರೆಂಬ ಸುದ್ದಿ ಯಿದೆ. ಸರದಾರ ವಲ್ಲಭಭಾಯಿ, ಪಂ. ಜವಾಹರಲಾಲ ಮತ್ತು ಸರಹದ್ದ ಗಾಂಧಿ ಇವರನ್ನು ಬಿಟ್ಟು ಬಿಟ್ಟರೂ ಮಹಾತ್ಮಾಜಿಯವರು ಸತ್ಯಾಗ್ರಹವನ್ನು ಪ್ರಾರಂಭಿಸುವದಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಮುಂಬೈ ಸರಕಾರದವರು ಇನ್ನೂ ಇವರನ್ನು ಬಿಟ್ಟು ಬಿಡುವದನ್ನೇ ನಿರ್ಧರಿಸಿಲ್ಲ ಔಷಧೋಪಚಾರ ದೃಷ್ಟಿಯಿಂದ ಪುಣೆಗೆ ಹೋಗುವುದು ಸಾಧ್ಯವೇ ಹೇಗೆಂಬುದಕ್ಕೆ ಸರಕಾರದವರು ಸರದಾರ ವಲ್ಲಭಭಾಯಿಯವರ ಅಭಿಪ್ರಾಯವನ್ನು ವಿಚಾರಿಸಿದ್ದರು. ಅದಕ್ಕೆ ಇವರು ಪುಣೆಗಿಂತಲೂ ಮುಂಬಯಿಗೆ ಹೋಗುವುದೇ ತಮಗೆ ಅನುಕೂಲವೆಂದೂ ಅಲ್ಲಿಯ ಮಿತ್ರ ಡಾಕ್ಟರರ ಸಲಹೆಯನ್ನು ತೆಗೆದುಕೊಳ್ಳುವುದರಲ್ಲಿ ಬರಲಾಗುವುದೆಂದೂ ತಿಳಿಸಿದಂತೆ ಸುದ್ದಿ ಯಿದೆ.

### ಬರುವ ಕಾಂಗ್ರೆಸ್ ಅಧಿವೇಶನವು ಆಝಾದ ಮೈದಾನದ ಮೇಲೆಯೆ?

ಸ್ವಾಗತ ಮಂಡಲದವರು ಕಾಂಗ್ರೆಸ್ಸಿನ ಅಧಿವೇಶನ, ಸ್ವದೇಶ ಪ್ರದರ್ಶನ ಮತ್ತು ಪ್ರತಿನಿಧಿಗಳ ವಸತಿ ಸ್ಥಾನ, ಆಝಾದ ಮೈದಾನಿನ ಮೇಲೆಯೇ ಮಾಡಬೇಕೆಂದು ನಿಶ್ಚಯಿಸಿ ಸ್ಥಳವನ್ನು ದೊರಕಿಸುವದಕ್ಕಾಗಿ ಸರಕಾರಕ್ಕೆ ಬರೆದುಕೊಂಡಿದ್ದಾರೆ. ಆದರೆ ಇನ್ನೂ ಸರಕಾರದವರಿಂದ ಉತ್ತರ ಬಂದಿಲ್ಲ. ಆಝಾದ ಮೈದಾನವು ಮುಂಬೈಯಲ್ಲಿಯ ಮಧ್ಯ ಭಾಗದ ವಿಸ್ತೀರ್ಣ ಸ್ಥಳವಾಗಿದ್ದು ರೇಲ್ವೆ ಸ್ಟೇಶನಿಗಾದರೂ ಸಮೀಪದಲ್ಲಿಯೇ ಇರುವದು. ಮತ್ತು ಶಾಸನೋಲ್ಲಂಘನೆಯ ಚಳವಳಿಯ ದೃಷ್ಟಿಯಿಂದಲೂ ಇದು ಸಂಸ್ಮರಣೀಯವಾಗಿರುವುದರಿಂದ ಇಲ್ಲಿಯೇ ಅಧಿವೇಶನವನ್ನು ಜರುಗಿಸಬೇಕೆಂದು ಸ್ವಾಗತ ಮಂಡಲದವರು ನಿರ್ಧರಿಸಿರುವರು. ಆದರೆ ಸರಕಾರದವರ ಉತ್ತರವು ಹೇಗೆ ಬರುವುದೊ?

### ಶ್ರೀ. ಜಯರಾಮದಾಸರ ಬಿಡುಗಡೆ.

ಅಖಿಲಭಾರತೀಯ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಾದ ಶ್ರೀ. ಜಯರಾಮದಾಸ ದೌಲತರಾಮ ಇವರನ್ನು ತಾ. ೨ನೆಯ ದಿವಸ ಇವರ ಶಿಕ್ಷೆಯ ಅವಧಿಯು ಪೂರೈಸುವ ಮುಂಚಿತವಾಗಿಯೇ ಸರಕಾರದವರು ಇವರನ್ನು ಬಿಡುಗಡೆ ಮಾಡಿದ್ದಾರೆ. ಬಿಡುಗಡೆಯ ನಂತರ ಇವರು ಈ ಪ್ರಕಾರ ಹೇಳಿದ್ದಾರೆ—

"ಯಾರು ಆಶೆಯಿಂದ ಲಂಡನ್ ಕಡೆಗೆ ಈಗಲೂ ನೋಡುತ್ತಿದ್ದಾರೆಯೋ ಅವರು ಜಾಯಿಂಟ್ ಕಮಿಟಿಯ ವರದಿಯು ಪ್ರಕಟವಾಗಿ ಪರಿಸ್ಥಿತಿಯು ಈಗಿನಕ್ಕಿಂತಲೂ ಕೆಟ್ಟಾಗಲೇ ಜೀವನ್ನಾಗಿ ನಿರಾಶರಾಗುವರು. ಇಂಥ ಪರಿಸ್ಥಿತಿಯಲ್ಲಿ ಶುಭ್ರ ಪತ್ರಿಕೆ ಜಾಯಿಂಟ್ ಕಮಿಟಿಗಳನ್ನು ಲಕ್ಷಿಸದೆ ಕರಾಚಿ ಕಾಂಗ್ರೆಸ್ಸಿನ ಬೇಡಿಕೆಗಳಿಗೆ ಅಂಟಿಕೊಂಡಿರುವುದೇ ಮೇಲು. ಇನ್ನು ಮೇಲೆ ನಾನು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಗಳಲ್ಲಿಯೇ ಬೆರೆತು ನಡೆಯುವೆನಲ್ಲದೆ ನಾನು ಸ್ವತಃ ಅಸೆಂಬ್ಲಿಗೆ ನಿಲ್ಲುವದಿಲ್ಲ. ಆದರೆ ಅಸೆಂಬ್ಲಿಗೆ ನಿಲ್ಲುವ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೆ ಮಾತ್ರ ಶಕ್ಯವಿರುವಷ್ಟು ಸಹಾಯ ಮಾಡುವೆನು."

### ಶ್ರೀ ಸತ್ಯಾಗ್ರಹಿಗಳ ಬಿಡುಗಡೆ.

ಮಹಾತ್ಮಾ ಗಾಂಧೀಜಿಯವರ ಸೆಕ್ರೆಟರಿ ಶ್ರೀ. ಮಹಾದೇವ ಭಾಯಿ ದೇಸಾಯಿ ಇವರ ಧರ್ಮ ಪತ್ನಿ ಸೌ. ದುರ್ಗಾಬೆನ್ ಮತ್ತು ಸತ್ಯಾಗ್ರಹಾಶ್ರಮದಲ್ಲಿನ ೪೫ ಜನ ಸ್ತ್ರೀ ಸತ್ಯಾಗ್ರಹಿಗಳ ಬಿಡುಗಡೆಯು ಅವಧಿಯು ಪೂರೈಸುವ ಮುಂಚೆಯೇ ಮಾಡಲ್ಪಟ್ಟಿದೆ.

---

## ಶ್ರೀಮದ್ವೀರಶೈವ ಮಹಾಸಭೆಯ ಸ್ಥಾಯಿಂಡಿಂಗ ಕಮಿಟಿ.

ವೀರಶೈವ ಮಹಾಸಭೆಯ ಸ್ಥಾಯಿಂಡಿಂಗ ಕಮಿಟಿಯು ಹೋದ ಸೆಪ್ಟೆಂಬರದಲ್ಲಿ ಧಾರವಾಡದಲ್ಲಿ ನೆರೆಸಲ್ಪಟ್ಟಿತಷ್ಟೇ. ಆದರೆ ಈ ಕಮಿಟಿಯ ಎರಡನೆಯ ಸಭೆಯನ್ನು ಬಾಗಲಕೋಟೆಯಲ್ಲಿ ನೆರೆಸಲು ಅಲ್ಲಿಯ ಮಹಾಜನರಿಗೆ ವಿನಂತಿ ಮಾಡಿಕೊಳ್ಳಲಾಗಿ ಇದಕ್ಕೆ ಅವರು ಒಪ್ಪಿರುವರು. ಸಭೆಯು ಆಗಷ್ಟ ತಿಂಗಳ ಮೂರನೆಯ ವಾರದಲ್ಲಿ ನೆರೆಯುವದು. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಬಗ್ಗೆ ಯಾರಿಗಾದರೂ ಸೂಚನೆಗಳನ್ನು ಮಾಡುವದಿದ್ದರೆ ಅವರು ಅವುಗಳನ್ನು ಆಗಷ್ಟ ೧೫ನೆಯ ತಾರೀಖಿನ ಒಳಗಾಗಿ ನಮ್ಮ ಕಡೆಗೆ ಕಳಿಸಬೇಕೆಂದು ವಿನಂತಿ ಇದೆ.

ಇದೇ ಕಾಲಕ್ಕೆ ವೀರಶೈವ ತರುಣ ಸಂಘ, ಶಿಕ್ಷಣ ಪರಿಷತ್ತು, ಪಂಡಿತ ಮಂಡಲಿ ಇವುಗಳ ಮಧ್ಯವರ್ತಿ ಕಮಿಟಿಗಳೂ ಸಹ ಬಾಗಲಕೋಟೆಯಲ್ಲಿ ಕರೆಯಲ್ಪಡುವವು.

ವಿಜಾಪುರ.
ತಾ. ೬-೩-೩೪.

ಪಿ. ಜೆ. ಹಳಕಟ್ಟಿ.
ಅಧ್ಯಕ್ಷರು,
ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಳ.

---

ವೆನಿಸದೆ ಅವರು ಇದನ್ನು ಡಚ್ಚರಿಗೆ ಮಾರಿಬಿಟ್ಟರು. ಆದರೆ ಸರ ಥಾಮಸ್ ರಾಲ್ಫಸ್ ಎಂಬವರು ಸಿಂಗಾಪುರದ ಮಹತ್ವವನ್ನು ಕಂಡು ಅದನ್ನು ವಶಪಡಿಸಿಕೊಂಡು ಅಲ್ಲಿ ಬ್ರಿಟಿಶ್ ಧ್ವಜವನ್ನೇರಿಸಿದರು. ಇದಕ್ಕೆ ಡಚ್ಚರು ಒಪ್ಪದೆ ಬ್ರಿಟಿಶ ಸರಕಾರಕ್ಕೆ ತಮ್ಮ ದೂರು ಹೇಳಲು ಅವರು ರಾಲ್ಫಸ್ ಇವರಿಗೆ ಅದನ್ನು ಬಿಟ್ಟುಕೊಡಲು ತಿಳಿಸಿದರು. ಆದರೆ ಮಿ. ರಾಲ್ಫಸರು ಅದು ಎಂಥ ಆಯಕಟ್ಟಿನ ಪ್ರಬಲಸ್ಥಾನವಿರುವದೆಂಬುದನ್ನು ಮನಗಾಣಿಸಿಕೊಡಲು ಅವರ ದನ್ನಿಟ್ಟುಕೊಂಡು ಇಷ್ಟು ಸಂಗ್ರಾಮ ಸಾಹಸವನ್ನಂಟುಮಾಡಿದ್ದಾರೆ. ಸಿಂಗಾಪುರದ ಈ ಸಂಗ್ರಾಮಸಾಹಸ ವರ್ಧನೆಯ ಕಡೆಗೆ ಜಗತ್ತಿನ ದೃಷ್ಟಿಯೆಲ್ಲ ಆಕರ್ಷಿತವಾಗಿದೆಯೆಂದರೆ ಅತಿಶಯೋಕ್ತಿ ಯಾಗದು.



ಶಾ. ಶ. ೧೮೫೬ ನೆಯ ಜ್ಯೇಷ್ಠ ಬ|| ೧೩ ಸೋಮವಾರ.

## ಧಾರ್ಮಿಕ ವಿಚಾರ ಕ್ರಾಂತಿ.

ಇದು ಕ್ರಾಂತಿಯ ಯುಗ. ಎಲ್ಲ ವಿಷಯಗಳಲ್ಲಿಯೂ ಬಲವಾದ ಕ್ರಾಂತಿಯುಂಟಾಗುತ್ತಲಿದೆ. ಚಕ್ರವರ್ತಿಯು ಕೂಡಾ ತಾನೆಲ್ಲಿ ಕೂಲಿಕಾರನಾಗುವೆನೋ ಎಂದು ಚಿಂತಿಸಬೇಕಾಗಿದೆ. ಕೂಲಿಕಾರನು ಕೂಡಾ ನಾನು ರಾಷ್ಟ್ರಾಧಿಪತಿಯಾಗುವೆನೆಂಬ ಮಹತ್ವಾಕಾಂಕ್ಷೆಯುಳ್ಳವನಾಗಿದ್ದಾನೆ.

ಹೀಗೆ ರಾಜಕೀಯ ವಿಷಯದಲ್ಲೊಂದೇ ಪ್ರಪಂಚವು ಕ್ರಾಂತಿಗೊಳಗಾಗಿಲ್ಲ. ಶಾಸ್ತ್ರೀಯ ಜ್ಞಾನದಲ್ಲಿಯೂ ಅತ್ಯದ್ಭುತವಾದ ಕ್ರಾಂತಿಗೊಳಗಾಗಿದೆ. ಮನುಷ್ಯನು ತಾನು ಕುಳಿತಲ್ಲಿಯೇ ತನ್ನ ಇಷ್ಟ ಬಂದ ಪ್ರಪಂಚದ ಬೇಕಾದ ಭಾಗದಲ್ಲಿನ ಸಮಾಚಾರ, ಸ್ವರ, ಚಿತ್ರಗಳನ್ನು ಕೂಡಾ ತಿಳಿದುಕೊಂಡು, ಕೇಳಿ, ನೋಡಿ ಸಂತೋಷಿಸಲು ಸಮರ್ಥನಾಗಿದ್ದಾನೆ.

ಈ ಭೂಗೋಲವನ್ನು ಬಿಟ್ಟು ಮಂಗಳಾದಿ ಅನ್ಯ ಗ್ರಹಗಳ ಮೇಲೆಯೂ ಹೋಗಿ ವಾಸಿಸುವ ಮಹತ್ವಾಕಾಂಕ್ಷೆಯು ಮನುಷ್ಯನಲ್ಲುಂಟಾಗುತ್ತಲಿದೆ. ಪಂಚ ಭೂತಗಳ ಸರ್ವಶಕ್ತಿಗಳನ್ನೂ ಮನುಷ್ಯನು ತನ್ನ ಹಿಡಿಯಲ್ಲಿ ಹಿಡಿದುಕೊಳ್ಳುವ ಸಾಹಸದಲ್ಲಿದ್ದಾನೆ.

ಈ ಪ್ರಕಾರ ಸಕಲ ಸಂಗತಿಗಳಲ್ಲಿಯೂ ಅಭೂತಪೂರ್ವವಾದ ಮತ್ತು ಅತರ್ಕೀಯವಾದ ಕ್ರಾಂತಿಗಳುಂಟಾಗುತ್ತಿರುವಾಗ ಧಾರ್ಮಿಕ ವಿಷಯದಲ್ಲಿ ಮಾತ್ರ ಯಾವ ವಿಚಾರ ಕ್ರಾಂತಿಯೂ ಆಗಬಾರದೆಂದು ಪೇಕ್ಷಿಸುವುದು ಯುಕ್ತವೆ? ಅದು ಸಾಧ್ಯವಾದರೂ ಆಗುವುದೆ? ಇಂತಹ ಕ್ರಾಂತಿಯ ಸುಖ ಸೌಲಭ್ಯಗಳಲ್ಲಿರುವ ಮನುಷ್ಯನು ಪ್ರಾಚೀನ ಧಾರ್ಮಿಕ ಆಚಾರ ವಿಚಾರಗಳಿಂದಲೇ ಕಟ್ಟಲ್ಪಟ್ಟಿರುವುದು ಶಕ್ಯವೆ? ಆ ಹಿಂದಣ ಭಾವನೆ ಆಚಾರ ವಿಚಾರಗಳಲ್ಲಿಯೇ ಕೊಡಗಿರಬೇಕೆಂದಪೇಕ್ಷಿಸುವುದು ಅನುಚಿತವಲ್ಲವೆ?

ಈಗಿನ ರಾಜಕೀಯ, ವೈಜ್ಞಾನಿಕ, ಮತ್ತು ಔದ್ಯೋಗಿಕ ಸುಖ ಸೌಲಭ್ಯಗಳೂ ಸ್ವಾತಂತ್ರ್ಯಗಳೂ ಮನಾಕರ್ಷಕವು. ಆದರೆ ಧಾರ್ಮಿಕ ಮತ್ತು ಸಾಮಾಜಿಕ ಭಾವನೆ, ಆಚಾರ, ವಿಚಾರಗಳು ಮಾತ್ರ ಈಗಿನವಿರಬಾರದು. ಅವು ಹಿಂದಣದವುಗಳೇ ಇರಬೇಕು. ಅವುಗಳಲ್ಲಿ ಮಾತ್ರ ವಿಚಾರಕ್ರಾಂತಿಯಾಗಲೇಬಾರದೆಂದಪೇಕ್ಷಿಸುವುದು ಅಸಂಗತವಲ್ಲವೆ?

ಹಿಂದಣ ಕಾಲದಲ್ಲಿ ಕೂಡಾ ಇನ್ನೆಲ್ಲವುಗಳಲ್ಲಿಯೂ ಸರಿಯಾದ ಸ್ಥಿತಿಯಲ್ಲಿಯೇ ವಿಚಾರಕ್ರಾಂತಿಯಾಗುತ್ತಿದ್ದಿತು. ರಾಜನ ಕೈಯಲ್ಲಿಯೇ ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳಿರುತ್ತಿದ್ದವು. ಜನಾಂಗದ ಕ್ಷೇಮಕ್ಕೆ ಅನುಕೂಲವಾಗುವಂತೆ ಹೇಗೆ ರಾಜಕಾರಣದಲ್ಲಿ ಸುಧಾರಣೆಯನ್ನು ಮಾಡುತ್ತಿದ್ದನೋ ಹಾಗೆಯೇ ಧಾರ್ಮಿಕ ಕಟ್ಟಳೆಗಳಲ್ಲಿಯೂ ವ್ಯತ್ಯಸ್ತ ಮಾಡುತ್ತಿದ್ದನು. ಹಾಗಾದಾಗಲೇ ಅತನ ಪ್ರಜೆಗಳು ಸುಖ ಶಾಂತಿಗಳಿಂದ ಜೀವಿಸುತ್ತಿದ್ದರು.

ಧಾರ್ಮಿಕ ಆಚಾರ ವಿಚಾರಗಳಲ್ಲಿ ಕಾಲಕಾಲಕ್ಕೆ ವ್ಯತ್ಯಸ್ತಗಳಾಗುತ್ತಿದ್ದವೆಂಬುದಕ್ಕೆ ಅನೇಕ ಸ್ಮೃತಿ ಗ್ರಂಥಗಳೇ ಆಧಾರವಾಗಿವೆ. ಅಂತಹ ಸ್ಮೃತಿ ಗ್ರಂಥಗಳು ಈಗಿನ ಕಾಲಕ್ಕನುಸರಿಸಿ ಅದೇಕೆ ಏರ್ಪಡಬಾರದು? ಜನಾಂಗದಲ್ಲಾಗಿರುವ ಧಾರ್ಮಿಕ ವಿಚಾರ ಕ್ರಾಂತಿಗೆ ಯೋಗ್ಯ ಮಾರ್ಗವನ್ನು ಕಲ್ಪಿಸಿಕೊಡದೆ ವೃಥಾ ಅದನ್ನು ದೂಷಿಸಿದರಾಗುವುದೇನು? ಆ ವಿಚಾರ ಕ್ರಾಂತಿಯನ್ನು ತಡೆಯುವುದು ಯಾರಿಗೆ ತಾನೆ ಶಕ್ಯವು?

ಈ ಇಪ್ಪತ್ತನೆಯ ಶತಮಾನದ ರಾಜಕೀಯ ಮುಂತಾದ ಎಲ್ಲ ಸುಧಾರಣೆಗಳನ್ನು ಬಿಟ್ಟಾಗಲೇ ಹಿಂದಿನ ಧಾರ್ಮಿಕ ಆಚಾರ ವಿಚಾರಗಳನ್ನು ಜನಾಂಗದಲ್ಲಿ ನೆಲೆಗೊಳಿಸುವುದು ಸಾಧ್ಯ. ಈಗಿನ ಈ ಯಾಂತ್ರಿಕ ಯುಗದ ಸುಖ ಸೌಲಭ್ಯಗಳನ್ನನುಭವಿಸುತ್ತ ಪ್ರಪಂಚದ ನಾನಾ ಧರ್ಮ ಮತ ಪಂಥದವರ ಸ್ಪರ್ಧೆಯ ತಾಳಿಕೆಗೆ ಸಿಕ್ಕು ಹಿಂದಿನ ಆಚಾರ ವಿಚಾರಗಳನ್ನೇ ಅನುಸರಿಸುತ್ತೇವೆಂದರೆ ಅವು ಅವರ ಗಂಟಲಿಗೆ ಗಾಣವಾಗಿಯೇ ಪರಿಣಮಿಸುವವು.

ಆದುದರಿಂದ ಹಿಂದು ಧರ್ಮದವರು ಈಗಲಾದರೂ ಎಚ್ಚತ್ತು ಅಯಾ ಮತಗಳ ಮುಖ್ಯ ಗುರುಗಳೂ ಧಾರ್ಮಿಕ ಸಂಸ್ಥೆಯವರೂ ಯೋಚಿಸಿ ಈಗಿನ ಕಾಲಕ್ಕನುಗುಣವಾದ ರೀತಿಯಲ್ಲಿ ತಮ್ಮ ತಮ್ಮ ಮತಗಳ ಆಚಾರ ವಿಚಾರಗಳನ್ನು ವ್ಯತ್ಯಸ್ತಗೊಳಿಸಬೇಕು.

ಹಿಂದುಗಳಲ್ಲಿ ಪರಸ್ಪರ ಸಂಘಟನೆಯಾಗುವ ರೀತಿಯಲ್ಲಿ ಎಲ್ಲ ಮತ ಪಂಥದವರೂ ತಮ್ಮತಮ್ಮ ಮತಾಚಾರಗಳ ಸ್ಮೃತಿಗ್ರಂಥಗಳನ್ನುಂಟು ಮಾಡಲೇಬೇಕಾದ ಕಾಲವು ಈಗ ಬಂದಿದೆ. ಈ ಇಪ್ಪತ್ತನೆಯ ಶತಮಾನದ ಸ್ಮೃತಿ ಗ್ರಂಥವು ಈ ಪ್ರಕಾರ ಏರ್ಪಡದಿದ್ದರೆ ವ್ಯಕ್ತಿಯ ಧಾರ್ಮಿಕ ವಿಚಾರ ಕ್ರಾಂತಿಗೆ ಯಾವ ನಿಯಮ ನಿರ್ಬಂಧಗಳೂ ಇಲ್ಲದೆ ವ್ಯಕ್ತಿಯ ಇಚ್ಛಾ ಸ್ಮೃತಿ ಗ್ರಂಥಗಳೇ ನಿರ್ಮಾಣವಾಗುತ್ತ ಹೋಗುವವು. ಹಾಗಾದರೆ ಧಾರ್ಮಿಕ ಮಾರ್ಗದರ್ಶಕರು ತಮ್ಮ ಮೇಲಿರತಕ್ಕ ಹೊಣೆಗಾರಿಕೆಯನ್ನು ಅರಿತುಕೊಂಡು ಆಚರಿಸದಿದ್ದುದು ಅವರ ಅಪರಾಧವೇ ವಿನಾ ವಿಚಾರ ಕ್ರಾಂತಿಯ ಅಥವಾ ಅದಕ್ಕೆ ಸಿಕ್ಕಿದ ವ್ಯಕ್ತಿಯ ದೋಷವೇನೂ ಅಲ್ಲ.

## ಶ್ರೀ. ನಲಿನೀರಂಜನ ಸರಕಾರ
### ಇವರು ಕಲಕತ್ತಾದ ನಗರಾಧ್ಯಕ್ಷರಾದರು.

ಕಳೆದ ಜನೆಯ ತಾರೀಖಿನ ದಿವಸ ಕಲಕತ್ತಾ ಕಾರ್ಪೋರೇಶನ್ನಿನ ಸಭೆ ನಡೆದು ಶ್ರೀ. ನಲಿನೀರಂಜನ ಸರಕಾರ ಇವರು ಬಹು ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮಿ. ಫಜಲುಲ್ ಹಕ್ಕ ಇವರು ಪ್ರತಿಸ್ಪರ್ಧಿಗಳಾಗಿ ನಿಂತಿದ್ದರು.

## ವಿಶ್ವ ಧರ್ಮದ ಸೂತ್ರ.

ಜಗತ್ತಿನ ಸುಖ ಶಾಂತಿಗಳಿಗೆ ಧರ್ಮವೂ ಒಂದು ಮುಖ್ಯ ಸಾಧನವಾಗಿದೆ. ಧರ್ಮದ ಆಚಾರ ವಿಚಾರಗಳು ದೇಶ ಕಾಲ ಪರಿಸ್ಥಿತಿಗಳಿಂದ ಎಷ್ಟೇ ವ್ಯತ್ಯಾಸವಾಗಿ ತೋರುತ್ತಿದ್ದರೂ ಧರ್ಮ ಭಾವನೆಯೇನೂ ಮನುಷ್ಯ ಪ್ರಾಣಿಯಿಂದ ಅಳಿದು ಹೋಗುವುದು ಶಕ್ಯವೇ ಇಲ್ಲ. ಅದು ಯಾವುದಾದರೊಂದು ನಾಮ ರೂಪ ಸ್ಥಿತಿಗಳಲ್ಲಿ ಇದ್ದೇ ಇರುತ್ತದೆ.

ಮನುಷ್ಯ ಪ್ರಾಣಿಯಲ್ಲಿ ಉತ್ಕ್ರಾಂತಿಜನ್ಯ ಬುದ್ಧಿ ಮತ್ತು ಭೀತಿ ಪ್ರೀತಿಗಳ ಮನೋವೃತ್ತಿಗಳು ಎಲ್ಲಿಯವರೆಗೂ ಇರುತ್ತವೆಯೋ ಅಲ್ಲಿಯವರೆಗೂ ಇಂದ್ರಿಯಾತೀತ ಭಾವನೆಯಿರುವದು ಸ್ವಾಭಾವಿಕ. ಇದೇ ಧರ್ಮದ ಮೂಲ. ಆದಕಾರಣ ಧರ್ಮವಿರಹಿತ ಮನುಷ್ಯನಿರುವುದು ಶಕ್ಯವೇ ಇಲ್ಲ. ಆದರೆ ಆ ಧಾರ್ಮಿಕ ಭಾವನೆ ವಿಚಾರ ಆಚಾರಗಳು ಮಾತ್ರ ಬೇರೆಬೇರೆಯಾಗಿಯೂ ಪರಸ್ಪರ ವಿರೋಧವಾಗಿಯೂ ಇರಬಹುದು.

ಜಗತ್ತಿನ ಸುಖಶಾಂತಿಗಳಿಗೆ ಶಸ್ತ್ರ ಸನ್ಯಾಸ ಮತ್ತು ಯುದ್ಧ ನಿವಾರಣೆಗಳು ಹೇಗೆ ಆವಶ್ಯಕವೆಂದು ಅನೇಕ ಮಹಾಪುರುಷರು ಯೋಚಿಸಿ ಅಂತಹ ಸ್ಥಿತಿಯುಂಟಾಗಲು ಪ್ರಯತ್ನಿಸುತ್ತಿದ್ದಾರೆಯೋ ಹಾಗೆಯೇ ಜಗತ್ತಿನಲ್ಲಿ ವಿಶ್ವಧರ್ಮ ಸ್ಥಾಪನೆಯಾಗಬೇಕೆಂದು ಅನೇಕ ವಿಭೂತಿಗಳು ಪ್ರಯತ್ನಿಸುತ್ತಿದ್ದಾರೆ. ಈಗ ಜಗತ್ತಿನಲ್ಲಿರುವ ಎಲ್ಲಾ ಧರ್ಮಮತಪಂಥಗಳಲ್ಲಿಯ ಪರಸ್ಪರ ವಿರೋಧವನ್ನುಂಟುಮಾಡುವ ಆಚಾರ ವಿಚಾರಗಳನ್ನು ಅಳಿಸಿ ಪರಸ್ಪರ ಪ್ರೇಮಾದರಗಳನ್ನುಂಟುಮಾಡುವ ರೀತಿ ನೀತಿಗಳನ್ನು ಬೆಳೆಯಿಸಬೇಕೆಂಬುದೇ ಇವರ ಉದ್ದೇಶ. ಇದೇ ವಿಶ್ವಧರ್ಮದ ಮೂಲ.

ಇಂಥ ವಿಶ್ವ ಧರ್ಮವು ಜಗತ್ತಿನಲ್ಲಿ ಎಂದೇ ಸ್ಥಾಪನೆಯಾಗಲಿ. ಆಗ ಅದು ಹೇಗಿರುತ್ತದೆಂಬುದನ್ನು ಈಗ ಅನೇಕರು ಅನೇಕ ಪ್ರಕಾರ ತಿಳಿಸುತ್ತಿದ್ದಾರೆ. ಆ ವಿಶ್ವಧರ್ಮದ ಸೂತ್ರಗಳನ್ನು ಈಗ ಅನೇಕರು ಜನಾಂಗದ ಮುಂದಿಡುತ್ತಿದ್ದಾರೆ. ಅಮೇರಿಕೆಯು ಜಗತ್ತಿಗೇನೇ ಈ ವಿಷಯದಲ್ಲಿ ಆಹ್ವಾನ ಕೊಟ್ಟಿದೆ. ಮೂವತ್ತು ವರುಷಗಳ ಪೂರ್ವದ ತರುಣರೇ ಈ ಕಾರ್ಯದಲ್ಲಿ ಮುಂದರಿಯಬೇಕೆಂದು ಮಿ. ಸಂಡರ್‌ಲಂಡ್‌ರವರು ಸೂಚಿಸಿರುತ್ತಾರೆ. ಅಂತಹ ತರುಣರ ವಿಚಾರಸರಣಿಗೆ ಅನುಕೂಲವಾಗಲು ನಾವು ನಮ್ಮ ವಿಚಾರಗಳನ್ನು ಅವರ ಮುಂದಿಡುತ್ತೇವೆ.

(೧) ಯಾವ ಧರ್ಮವೂ ಸಂಪೂರ್ಣ ಸತ್ಯ ಅಥವಾ ಸಂಪೂರ್ಣ ಅಸತ್ಯವಿಲ್ಲವೆಂದು ತಿಳಿಯಬೇಕು.

(೨) ಅನ್ಯರಿಗೆ ಯಾವ ವಿಧವಾದ ಹಿಂಸೆ ತಾಪಗಳೂ ತನ್ನ ಧರ್ಮ ಭಾವನೆ ಆಚಾರ ವಿಚಾರಗಳಿಂದುಂಟಾಗಬಾರದು.

(೩) ತಾನು ತನ್ನ ಧರ್ಮಾಚಾರಗಳನ್ನು ಆಚರಿಸಲು ಪ್ರಚಾರಗೊಳಿಸಲು ಎಷ್ಟು ಸ್ವಾತಂತ್ರ್ಯವುಳ್ಳವನಾಗಿದ್ದಾನೆಯೋ ಅಷ್ಟೇ ಅನ್ಯ ಧರ್ಮದವನಿಗೂ ಅತನ ಆಚಾರಗಳನ್ನಾಚರಿಸಲು ಪ್ರಚಾರಗೊಳಿಸಲು ಸ್ವಾತಂತ್ರ್ಯವಿದೆಯೆಂದು ತಿಳಿಯಬೇಕು.

ವಿಶ್ವಧರ್ಮಕ್ಕೆ ಇವೇ ಮೂರು ಮುಖ್ಯ ಸೂತ್ರಗಳಾಗುವವು. ಇವುಗಳನ್ನು ತ್ರಿಕರಣಪೂರ್ವಕ ಆಚರಣೆಯಲ್ಲಿ ತರುವ ವ್ಯಕ್ತಿಯು ದೇವರಿಂದ ಧರ್ಮಪುಸ್ತಕ ಬಂದಿದೆಯೆಂದು ತಿಳಿಯುವುದಿಲ್ಲ. ಅತನು ಯಾವುದೊಂದು ಪುಸ್ತಕದ ಅಥವಾ ಒಂದು ಕಾಲದಲ್ಲಿ ಧರ್ಮವನ್ನು ಬೋಧಿಸಿದ ವ್ಯಕ್ತಿಯ ದಾಸನಾಗುವುದಿಲ್ಲ. ತನ್ನ ಅಂದಿನ ಹಿಂದಿನ ವೈಜ್ಞಾನಿಕ ಶಾಸ್ತ್ರದ ಪುಸ್ತಕದಲ್ಲಿ ಪಕ್ಕಾನ್ನ ಮಾಡುವ ಕ್ರಮ ಹೇಗಿದ್ದಿತೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದಿಲ್ಲ.

ಇಂತಹ ಮನೋವೃತ್ತಿಗಳುಂಟಾದಂತೆ ವಿಶ್ವ ಧರ್ಮದ ಅಪಾಯಗಳಾಗಲು ಅರ್ಹರಾಗುವರು.

## ಪತ್ರಿಕಾ ವಿಮರ್ಶೆ.

**ವಿಶ್ವ ಭಾರತಿ**— ವಿಚಾರ ಕ್ರಾಂತಿಗೆ ಅನುಕೂಲವಾದ ಇದೊಂದು ಒಳ್ಳೆಯ ಮಾಸಪತ್ರಿಕೆ. ಬೆಂಗಳೂರಲ್ಲಿ ಪ್ರಕಟವಾಗುತ್ತಿದೆ. ಶ್ರೀ. ಜಿ. ಎಂ. ಶಿದ್ಧಲಿಂಗಪ್ಪನವರು ಇದರ ಸಂಪಾದಕರು. ಕಾರ್ಲ್‌ಮಾರ್ಕ್ಸ್‌ರವರ ಈ ಕೆಳಗಿನ ದಿವ್ಯ ಸಿದ್ಧಾಂತವನ್ನು ಈ ಪ್ರಥಮ ಪತ್ರಿಕೆಯ ಮುಖ ಪುಟದ ಮೇಲಿಟ್ಟಿದ್ದಾರೆ.

"ಸಮಾಜದ ಮನಸ್ಸಿನ ಪ್ರವೃತ್ತಿ, ಅದರ ನಿಬಂಧನೆ, ಧರ್ಮ ಮತ್ತು ರಾಜ್ಯ ಪದ್ಧತಿ, ಇವುಗಳೆಲ್ಲಾ ಆ ಸಮಾಜದ ಸಾಂಪತ್ತಿಕ ಸ್ಥಿತಿಯ ಮೇಲೆಯೇ ಅವಲಂಬಿಸಿವೆ."

ಕ್ರೌನ್ ಆಕಾರದ ನಾಲ್ಕನೆಯ ಒಂದು ಭಾಗ ೩೨ ಪುಟಗಳು ಳ್ಳದ್ದಾಗಿದೆ. ಮುದ್ದಾದ ಮುದ್ರಣ. ಬೇರೆ ಬೇರೆ ವಿಷಯಗಳ ಮೇಲೆ ವಿದ್ವಾಂಸರ ಲೇಖನಗಳಿವೆ. ವಾರ್ಷಿಕ ಚಂದಾ ಅಂಚೆಯ ವೆಚ್ಚ ಸೇರಿ ರೂ. ೩-೮-೦ ಸಕಲರೂ ಅವಶ್ಯಕವಾಗಿ ಓದಬೇಕಾದ ಪತ್ರಿಕೆ. ಕನ್ನಡಿಗರು ಇದಕ್ಕೆ ತುಂಬಾ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

**ವೀರಶೈವ ಚಂದ್ರಿಕೆ**— ಇದು ವೀರಶೈವ ಮತಸಂಬಂಧವಾದ ಸಂಗತಿಗಳನ್ನು ವಿವೇಚಿಸುವ ಮಾಸಪತ್ರಿಕೆ. ಇದು ಶಿರಹಟ್ಟಿಯಲ್ಲಿ ಪ್ರಕಟವಾಗುತ್ತದೆ. ಶ್ರೀಯುತ ಆಲೂರು ಮುರಿಗೇಂದ್ರ ಶೆಟ್ಟರು ಇದರ ಸಂಪಾದಕರು. ಆದರೆ ಈ ಪತ್ರಿಕೆಯ ಆತ್ಮನಿವೇದನವನ್ನು ಶ್ರೀ. ಹು. ರಾ. ಅಗ್ನಿ ಹೋತ್ರಿ ಎಂಬುವವರು ಬರೆದಿದ್ದಾರೆ. ಮತ ಸಂಬಂಧವಾದ ಈ ಪತ್ರಿಕೆಯಲ್ಲಿ ಅನ್ಯಮತೀಯ ಲೇಖಕರೇ ಪರಮತದ ಸಂಗತಿಗಳನ್ನು ಬರೆಯುತ್ತಿರುವುದು ಬಹುದೊಡ್ಡದಾದ ಹೊಣೆಗಾರಿಕೆ. ಇದರಿಂದ ವಿಶೇಷ ತಪ್ಪುಗಳಾಗಿ ಜನರಲ್ಲಿ ತಪ್ಪು ತಿಳುವಳಿಕೆಯುಂಟಾಗುವ ಸಂಭವವಿದೆ. ಆದುದರಿಂದ ಸಂಪಾದಕರು ಈ ವಿಷಯದಲ್ಲಿ ಹೆಚ್ಚು ಜಾಗರೂಕರಾಗಿರಬೇಕಾದುದು ಅವಶ್ಯಕ.

ಶ್ರೀಯುತ ಬಾಲೇ ಹೊಸೂರು ರಾಮರಾಯರು ತಮ್ಮ ಲೇಖನದಲ್ಲಿ ಬಸವೇಶ್ವರರ ಸಂಬಂಧವಾಗಿ ಬರೆದಿದರಲ್ಲಿ ಹೀಗೆ ಹೇಳಿದ್ದಾರೆ—

"ಬಿಜ್ಜಳ ರಾಜನು ಬಸವೇಶ್ವರರ ಶಂಗಿಯೊಡನೆ ಮದುವೆ ಮಾಡಿಕೊಂಡನು. ಅದುಕಾರಣ ಬಸವೇಶ್ವರರನ್ನು ಅಮಾತ್ಯ ವನ್ನಾಗಿ ಮಾಡಿದರು."

ಇದು ಕೇವಲ ನಿರಾಧಾರವಾದ ಮತ್ತು ಪರಮತೀಯ ಗ್ರಂಥಕಾರರು ಮತದ್ವೇಷದಿಂದ ಬರೆದ ಸಂಗತಿಯು. ಈಗ ಬಸವೇಶನ ವಿಷಯದಲ್ಲಿ ಸ್ವಮತೀಯ ಮತ್ತು ಪರಮತೀಯ ಅನೇಕ ಗ್ರಂಥಕಾರರು ಐತಿಹಾಸಿಕ ದೃಷ್ಟಿಯಿಂದ ಬರೆದ ಪುಸ್ತಕಗಳನ್ನು ಈ ಲೇಖಕರು ಓದುವುದು ಅವಶ್ಯಕ.

ಈ ಪತ್ರಿಕೆಯಲ್ಲಿ ಅಚ್ಚು ದೋಷ ಹೆಚ್ಚಾಗಿವೆ. ಲೇಖಕರು ಭಾಷಾ ದೋಷ ನಿವಾರಣೆಯ ಕಡೆಗೆ ಗಮನಿಸುವುದು ಅವಶ್ಯಕ. ವಾರ್ಷಿಕ ಚಂದಾ ೧-೧೧-೦.

## ಸಮಾಚಾರ ಸಂಗ್ರಹ.

—ಆಕೋದೆಯ್ನ್ ಇಬ್ಬರು ಪರಾಣರು ಗೇನೂ ಎಂಬ ಹಿಂದುವಿನಿಂದ ಕೊಟ್ಟ ಸಾಲವನ್ನು ತೀರಿಸಿಕೊಳ್ಳುವದಕ್ಕಾಗಿ ಅವನಿಗೆ ಮನಬಂದಂತೆ ಹೊಡೆಯುಲು ಆ ಬಡವನು ೨ ದಿವಸಗಳಲ್ಲಿ ತೀರಿ ಕೊಂಡನು. ಪರಾಣರು ಬಂಧಿಸಲ್ಪಟ್ಟಿದ್ದಾರೆ.

—ಪಾವನಗಾದಲ್ಲಿ ಗಾಂಧೀಜಿಯವರು ಕಾಶೀವಾಡದ ತರುಣರಿಗೆ ಉಪದೇಶ ಮಾಡುವಾಗ್ಗೆ ನೀವು ವಾಚಾಲತ್ವವನ್ನು ಬಿಟ್ಟು ಕಾರ್ಯ ಮಾಡಿರೆಂದು ಹೇಳಿದರು.

—ತಿಕಾರಪುರದ ಕಾರಾಗೃಹದಲ್ಲಿ ಸೆರೆಯಾಳುಗಳು ತಮ್ಮೊಳಗೇ ಜೊತೆವಾಡಲಾಗಿ ಒಬ್ಬನು ಸತ್ತನು. ಅನೇಕರಿಗೆ ಗಾಯಗಳಾಗಿವೆ. ಕಾರಾಗೃಹದಲ್ಲಿ ಕಲಹವೇ?

—ಇಲ್ಲಿಯವರೆಗೆ ಹಿಂದುಸ್ಥಾನದಿಂದ ೧೪೮೫೫೪೭೦೦ ರೂ. ಗಳ ಬಂಗಾರವು ಪರದೇಶಗಳಿಗೆ ಹೋಗಿದೆ. ಮುಂಬಯಿಯಿಂದಲೇ ೫೫೫೧೧೧೦೦೪೪ ರೂ. ಗಳ ಬಂಗಾರವು ಕಳಿಸಲ್ಪಟ್ಟಿದೆ

—ಪಂ. ಜವಾಹರಲಾಲರು ಮಲಗಿರುವ ಕಾರಾಗೃಹ ಕೋಣೆಯಲ್ಲಿ ಅವರ ಕಾಟನ ಕೆಳಗೆ ಒಂದು ಸರ್ಪವಿದ್ದಿತಂತೆ. ವಾರ್ಡರನು ಬಂದು ಅದನ್ನು ಕೊಂದನು. ಅವರ ತೂಕವು ೨ ಪೌಂಡು ಕಡಿಮೆಯಾಗಿದೆ.

—ಜೈನ ಸಮಾಜದಲ್ಲಿಯ ಭಿನ್ನಭಿನ್ನ ಪಂಗಡಗಳಲ್ಲಿ ಐಕ್ಯ ಮತ್ಯವನ್ನುಂಟುಮಾಡುವದಕ್ಕಾಗಿ ಜೈನಮುನಿ ಮಿಶ್ರಿಲಾಲಜಿಯವರು ಕಳೆದ ೧೪ನೆಯ ಫೆಬ್ರುವರಿಯಿಂದ ಉಪವಾಸ ಮಾಡುತ್ತಿದ್ದಾರೆ. ಪೂರ್ವದಲ್ಲಿ ಅವರ ತೂಕವು ೧೪೦ ಪೌಂಡು ಇದ್ದಿತು. ಈಗ ೪೦ ಪೌಂಡು ಇದೆ: ಒಟ್ಟು ೧೦೦ ಪೌಂಡು ಇಳಿದದೆ

—ಅಮರೇಲಿಯಲ್ಲಿ ರಾಣೇಬಾಯಿ ಜಿವಾ ಗಾವೇಟ ಎಂಬ ಹೆಸರಿನ ೧೦೯ ವರುಷದ ಒಬ್ಬ ಸ್ತ್ರೀಯು ಮೊನ್ನೆಮೊನ್ನೆ ತೀರಿ ಕೊಂಡಳು. ಸಾಯುವವರೆಗೆ ಅವಳು ಸಶಕ್ತಳಾಗಿಯೇ ಇದ್ದಳು.

—ಪಂಢರಪುರಕ್ಕೆ ಕಳೆದ ೨೩ನೆಯ ತಾರೀಖಿಗೆ ಧರ್ಮಾತ್ಮಾ ಮಾಲವೀಜಿಯವರು ದಯಮಾಡಿಸಿದರು. ಆ ಕಾಲಕ್ಕೆ ಸನಾತನಿಗಳು ಅವರಿಗೆ ಮಾನಪತ್ರ ಕೊಡುವದನ್ನು ನಿಷೇಧಿಸಿದರು. ಮಾನ ಪತ್ರದ ಕಾಲಕ್ಕೆ ಮಾಲವೀಜಿಯವರು ಎಲ್ಲರೂ ಕೂಡಿ ಹಿಂದು ಧರ್ಮದ ರಕ್ಷಣೆ ಮಾಡಿರೆಂದು ಹೇಳಿದರು.

—ಒಬ್ಬ ಚರ್ಮಕಾರನು ತನ್ನ ಯಜಮಾನನ ಹೆಂಡತಿಯನ್ನು ಎತ್ತಿಕೊಂಡುಹೋಗಿ ಫರೀದಪುರದಲ್ಲಿ ಒಬ್ಬನಿಗೆ ೪೦೦ ರೂ. ಗಳಿಗೆ ಮಾರಿದ್ದರಿಂದ ೭ ವರ್ಷ ಶಿಕ್ಷಿಸಲ್ಪಟ್ಟನು. ಆದರೆ ಗಂಡನು ಪುನಃ ದೊರಿತ ತನ್ನ ಹೆಂಡತಿಯನ್ನು ತಾನೇ ಆ ಫರೀದ ಪುರದವನಿಗೆ ಮಾರಿಬಟ್ಟನು.

—ಬೆಳಗಾವಿಯ ವರ್ಣಾಶ್ರಮ ಸಂಘದವರು ಅಸ್ಪೃಶ್ಯತಾ ನಿವಾರಕ ಗೊತ್ತುವಳಿಯ ವಿರುದ್ಧವಾಗಿ ದೇವಾಲಯದ ಪೂಜಾರಿಗಳು, ವಕೀಲರು, ವ್ಯಾಪಾರಸ್ಥರು ಮೊದಲಾದವರ ಅನೇಕ ಸಹಿಗಳನ್ನು ಕೇಂದ್ರ ಶಾಸನ ಸಭೆಯ ಕಾರ್ಯದರ್ಶಿಗಳ ಕಡೆಗೆ ಕಳಿಸಿದ್ದಾರೆ. ಸಹಿ ಮಾಡಿದವರಲ್ಲಿ ಶ್ರೀ ದತ್ತಾತ್ರೇಯ ಬೆಳವಿ ವಕೀಲರು ಒಬ್ಬರಾಗಿದ್ದಾರೆ!

—ಕರಾಚಿಗೆ ಮಹಾತ್ಮಾಜಿಯವರು ಬಂದಾಗ್ಗೆ ಸರಕಾರದವರು ಅವರ ಸಂರಕ್ಷಣಾರ್ಥವಾಗಿ ಇಬ್ಬರು ಪೋಲೀಸರನ್ನು ಇಟ್ಟಿದ್ದಾರೆ.

—ಮದ್ರಾಸದ "ಹಿಂದು" ಇಂಗ್ಲೀಷ ದೈನಿಕ ಪತ್ರಿಕೆಯ ಒಂದು ಶಾಖಾ ಆಫೀಸನ್ನು ಕಲಕತ್ತೆಯಲ್ಲಿ ಪ್ರಾರಂಭಿಸಿದ್ದಾರೆ.

—ಆಸ್ಟ್ರೇಲಿಯಾ ಖಂಡದಲ್ಲಿ ವಿಕ್ಟೋರಿಯಾ ಎಂಬ ಗ್ರಾವದಲ್ಲಿ ಮಳೆಯಾಗಲು ಮೊನಗಳೇ ಬಿದ್ದವು. ಅವು ೫ ಮೈಲಿನ ಅಂತರದ ಮೇಲಿರುವ ಸರೋವರದೊಳಗಿಂದ ಬಿರುಗಾಳಿಯಿಂದ ಹಾರಿಸಲ್ಪಟ್ಟು ಬಂದು ಬಿದ್ದಿರಬಹುದೆಂದು ಊಹಿಸಲಾಗಿದೆ.

—ಆಸಾಮದಲ್ಲಿ ಜಲ ಪ್ರಳಯದಿಂದ ಅಪಾರ ಜಹದ ಹೋಟಗಳು ಮುಳುಗಿ ಜಹವು ತೇಲಿ ಹೋಗಿದೆ. ಜಲಪ್ರಳಯ ಫಂಡಿಗೆ ಆಸಾಮ ಗವ್ಹರ್ನರರು ೧೫ ಸಾವಿರ ರೂಪಾಯಿ ಕೊಟ್ಟಿದ್ದಾರೆ.

—ಭಯಂಕರ ಮಳೆಯು ಬೀಳಹತ್ತಿರುವಾಗ ಮುಂಬಯಲ್ಲಿ ಕೆಲ ಕಳ್ಳರು ಒಂದು ಮನೆಯ ಕಿಡಿಕಿಯ ಕಂಬಿಗಳನ್ನು ಮಣಿಸಿ ೧ ಸಾವಿರ ರೂಪಾಯಿಗಳನ್ನು ಒಯ್ದರು.

—ಮುಂಬೈ ಯುನಿವ್ಹರ್ಸಿಟಿಯ ಕಳೆದ ಮಾರ್ಚ ಮತ್ತು ಎಪ್ರಿಲ್ ತಿಂಗಳುಗಳಲ್ಲಿಯ ಪರೀಕ್ಷೆಗಳ ಕಾಲಕ್ಕೆ ಅಯೋಗ್ಯ ಸಾಧನಗಳನ್ನವಲಂಬಿಸಿದುದಕ್ಕಾಗಿ ೧೨ ಜನ ವಿದ್ಯಾರ್ಥಿಗಳಿಗೆ ಕೆಲವು ವರ್ಷ ಪರೀಕ್ಷೆಗೆ ಕುಳಿತು ಕೊಳ್ಳಬಾರದೆಂದು ಯುನಿವ್ಹರ್ಸಿಟಿಯು ಆಜ್ಞಾಪಿಸಿದೆ.

—ಶ್ರೀ. ಎ. ಸಿ. ಮಿಶ್ರ ಇವರು ಅಸೆಂಬ್ಲಿಯಲ್ಲಿ ಸರದಾರ ವಲ್ಲಭಭಾಯಿ ಪಟೇಲ ಮತ್ತು ಕೆಂಪಂಗಿಯವರ ಮುಂದಾಳುಗಳಾದ ಖಾನ ಅಬ್ದುಲ್ ಗಫೂರಖಾನರವರ ಬಿಡುಗಡೆಯ ವಿಷಯವಾಗಿ ಒಂದು ಗೊತ್ತುವಳಿಯನ್ನು ತರುವವರಿದ್ದಾರೆ.

—ಕಾಂಗ್ರೆಸ್ಸಿನ ಅಕ್ಟಿಂಗ್ ಅಧ್ಯಕ್ಷರಾದ ಶೇಟ ಜಮನಾಲಾಲ ಬಜಾಜ ಇವರು ಒಂದು ಪ್ರಕಟನೆಯನ್ನು ಹೊರಡಿಸಿ ಮಹಾತ್ಮಾ ಗಾಂಧಿಯವರು ಬಾಂಬ ಅತ್ಯಾಚಾರದಿಂದ ಸುರಕ್ಷಿತವಾಗಿ ಬಿಡುಗಡೆಯಾದುದಕ್ಕೋಸ್ಕರ ಪ್ರಾರ್ಥನೆಯ ದಿನವೆಂದು ಜುಲೈ ೧೫ನೆಯ ತಾರೀಖನ್ನು ಆಚರಿಸಲು ಸೂಚಿಸಿದ್ದಾರೆ.

—ಶ್ರೀ. ಸತ್ಯಮೂರ್ತಿಯವರು ಕಾಂಗ್ರೆಸ್ಸಿನ ಜ್ಯುಬಿಲಿ ಉತ್ಸವವು ಬಹು ದೊಡ್ಡ ಪ್ರಮಾಣದಿಂದ ಜರುಗಿಸುವುದು ಅಗತ್ಯವಾಗಿರುವದರಿಂದ ಅದನ್ನು ಈ ವರುಷ ನೆರವೇರಿಸದೆ ಮುಂದಿನ ವರುಷ ಜರುಗಿಸಬೇಕಾಗಿ ಸೂಚಿಸಿದ್ದಾರೆ.

—ಹೈದರಾಬಾದ ಉಸ್ಮಾನಿಯಾ ಯುನಿವ್ಹರ್ಸಿಟಿಯ ಭವ್ಯ ಕಟ್ಟಡದ ಶಂಕು ಸ್ಥಾಪನೆಯ ಸಮಾರಂಭವು ತಾ. ೬-೭-೩೪ನೆಯ ದಿವಸ ಸಾಯಂಕಾಲ ೪॥ ಗಂಟೆಗೆ ನಿಜಾಮ ಸರಕಾರದವರಿಂದ ಜರುಗಿತು.

—ರಾಜಪುತಾನಾ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ. ಮುಕ್ತಬಿಹಾರಿಲಾಲ ಭಾರ್ಗವ ಇವರು ಅಸೆಂಬ್ಲಿಯ ಅಯ್ಕೆಗೆ ನಿಲ್ಲುವವರಿದ್ದಾರೆ.

—ನೇ. ನಾ. ಸರ್. ತೇಜ ಬಹದ್ದೂರ್ ಸಪ್ರು ರವರು ಹಿಂದು ಸ್ಥಾನದ ಯಾವದೇ ಒಂದು ಪ್ರಾಂತದ ಗವ್ಹರ್ನರರಾಗುವರೆಂದು ತಿಳಿಯುತ್ತದೆ.

—ಶ್ರೀ. ಮಹಾದೇವಭಾಯಿ ದೇಸಾಯಿ ಇವರ ಬಿಡುಗಡೆಯು ಈ ವಾರದಲ್ಲಿ ಆಗುವದಿದೆ.

—ಶ್ರೀ. ಕಾಕಾ ಕಾಲೇಲಕರರು ಹೈದರಾಬಾದ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಹೊಂದಿದ್ದಾರೆ.

—ಜೂನ ತಿಂಗಳ ತಾರೀಖು ೩೦ನೆಯ ದಿವಸ ೧೫ ಜನ ರಾಜಕೀಯ ಕೈದಿಗಳನ್ನು ಅಂದಮಾನ ದ್ವೀಪಕ್ಕೆ ಕಲಕತ್ತಾದಿಂದ ಕಳುಹಿಸಿದರು. ಒಟ್ಟು ರಾಜಕೀಯ ಕೈದಿಗಳ ಸಂಖ್ಯೆಯು ೨೦೦ಕ್ಕಿಂತ ಹೆಚ್ಚಾಗಿದೆಯೆಂದು ತಿಳಿಯುತ್ತದೆ.

# ಪತ್ರಗಳ ಸಾರಾಂಶ.

## ಶೋಚನೀಯ ನಿಧನ.

ಸಂಪಗಾಂವದ ರಾ. ಸಾ. ರಾಜಶೇಖರ ನಂದಿ ವಾಟೇಲ ಇವರು ತಾ. ೩೦-೬-೩೪ನೆಯ ಶನಿವಾರ ದಿವಸ ಮಧ್ಯಾಹ್ನ ೨॥ ಗಂಟೆ ಸುಮಾರಕ್ಕೆ ನಿಮೋನಿಯಾದಿಂದ ಪರಲೋಕವಾಸಿಗಳಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಇವರು ಕೋ-ಆಪರೇಟಿವ್ ಸೊಸಾಯಿಟಿಯ ಆರ್ಬಿಟ್ರೇಟರ್, ಮತ್ತು ಸುಪರ್‌ವಾಯಿಜಿಂಗ್ ಯುನಿಯನ್ನಿನ ಪ್ರೆಸಿಡೆಂಟರಾಗಿ ಅವಿಶ್ರಾಂತ ದುಡಿದು ಜನತೆಯ ಪ್ರೀತಿಗೆ ಪಾತ್ರರಾಗಿದ್ದರು. ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರರಾಗಿ ಜನತೆಯ ಕಲ್ಯಾಣಕ್ಕೋಸ್ಕರ ಅನೇಕ ಗೊತ್ತುವಳಿಗಳನ್ನು ತಂದು ಕಷ್ಟ ಪಟ್ಟರು. ಇವರು ಕನ್ನಡ ವಾಙ್ಮಯದ ಬೆಳವಣಿಗೆಗೆ ವಿಶೇಷ ಪ್ರಯತ್ನ ಪಡುತ್ತಿದ್ದರು. ಇಂಥವರ ಮರಣದಿಂದ ಆ ಭಾಗದಲ್ಲಿ ಒಬ್ಬ ಪ್ರಮುಖ ಕಾರ್ಯಕರ್ತರಿಲ್ಲದಂತಾಗಿದೆ. ಇವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದೂ, ಇವರ ಕುಟುಂಬದವರಿಗೆ ಹಿತವಾಗಲೆಂದೂ ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ವಿ. ಗು. ಬಾಗೀಹಳ್ಳಿ.

## ಜಾತ್ರಿ ಕಮಿಟಿಯ ಸೆಕ್ರೆಟರಿಯಿಂದ

ಶ್ರೀಮನ್ಮಹಾ ಅಥಣಿ ಶಿವಯೋಗಿಗಳ ರಥೋತ್ಸವವು ಪ್ರತಿವರ್ಷ ಶ್ರಾವಣ ಶುಕ್ಲ ೧೩ ದಿವಸ ಧಾರವಾಡ ಶ್ರೀ. ಜ. ಮುರುಘರಾಜೇಂದ್ರ ಫ್ರೀ ಬೋರ್ಡಿಂಗಿನಲ್ಲಿ ಜರಗತಕ್ಕದ್ದು; ಆದರೆ ಆ ಸಮಯಕ್ಕೆ ಮಳೆಯು ವಿಶೇಷವಾಗಿರುವದರಿಂದ ಉತ್ಸವಕ್ಕೂ ದರ್ಶನಕ್ಕೆಂದು ಬರುವ ಭಕ್ತಾದಿಗಳಿಗೂ ಉಪನ್ಯಾಸ ಕೀರ್ತನಕಾರರಿಗೂ ಮತ್ತು ಭಜನಾ, ವಾದ್ಯ, ಕುಸ್ತಿ ಸಂಘದವರ ಕಾರ್ಯಕ್ರಮಗಳಿಗೆ ಆಗುವ ಅನಾನುಕೂಲತೆಗಳನ್ನೇ ತಿಳಿದು ಈ ರಥೋತ್ಸವವನ್ನು ಮಾಘ ಶುದ್ಧ ೫ ಗೆ ಮಾಡುವದಾಗಿ ಜಾತ್ರಿ ಕಮಿಟಿಯವರೂ ಮತ್ತು ಸ್ಥಳ ಪರಸ್ಥಳ ಭಕ್ತ ಮಾಹೇಶ್ವರರೂ ಬೋರ್ಡಿಂಗ ಕಮಿಟಿಯವರ ಅನುಮತಿ ಪ್ರಕಾರ ನಿಶ್ಚಯಿಸಿರುವರು.

ತಾರೀಖು. ೩-೭-೧೯೩೪

ಸೆಕ್ರೆಟರಿ ರಥೋತ್ಸವ ಕಮಿಟಿ,
ಮುರುಘರಾಜೇಂದ್ರ ಬೋರ್ಡಿಂಗ್
ಹಾವೇರಿ ಪೇಟೆ ಧಾರವಾಡ.

## ಬಾಗಲಕೋಟಿ
## ಹತ್ತೀಯವರ ಓಣಿಯಲ್ಲಿ ಕತ್ತೆಗಳ ಕಾಟ.

ಚಿಂತಾಲ ಬಾವಿಯ ಎದುರಿಗಿರುವ ಹತ್ತೀಯವರ ಓಣಿಯಲ್ಲಿ ಕತ್ತೆಗಳ ಕಾಟವು ಮಿತಿಮೀರಿದೆ. ಹೊತ್ತು ಮೀರಿದ ಮೇಲೆ ಈ ಓಣಿಯಲ್ಲಿ ಅಡ್ಡಾಡುವದೇ ಕಠಿಣವಾಗಿದೆ. ಕತ್ತೆಗಳ ಹಿಂಗಾಲು ಪೆಟ್ಟು ತಿಂದು, ಬಾಯಿ ಬಿಚ್ಚಿ ಹೇಳಿದರೆ ಜನರಲ್ಲಿ ಅಪಹಾಸ್ಯವಾಗುವದೆಂದು ಮನದಲ್ಲಿಯೇ ಮರಗುತ್ತ ಕೆಲವರು ಅಳು ನೋರೆಯಿಂದ ಹೋಗುತ್ತಲಿದ್ದಾರೆ. ಪೆಟ್ಟಿನ ಬೇನೆ ತಾಳಲಾರದ ತಾಳ್ಮೆಯಿಲ್ಲದ ಕೆಲ ಜನರು ಸಿಟ್ಟಿನಿಂದ ಓಡಾಡುತ್ತ ಕತ್ತೆಗಳ ಹಿಂಡಿಗೆ ಹಿಡಿಗಲ್ಲೆಸೆಯುತ್ತ ರೌದ್ರಾವತಾರನಲ್ಲಿ ಹೋಗುತ್ತಲಿದ್ದಾರೆ. ಚಿಕ್ಕ ಮಕ್ಕಳಿಗೆ ಕತ್ತೆಯ ಕಡತ ಬಿದ್ದರಂತೂ ಪ್ರಾಣಭಯವೇ ಸರಿ. ಸುದೈವದಿಂದ ಇನ್ನೂ ಹಾಗಾಗಿಲ್ಲ. ಈ ಕತ್ತೆಗಳ ಕಾಟಕ್ಕೆ ಮುನಸೀಪಾಲಿಟಿಯ ಕಂದೀಲು ಜೋಗಳ ಪದ ಹಾಡುವದೇ (ಅತ್ಯಂತ ಮಿಣು ಮಿಣು ಕಾಗಿರುವದೆ) ಕಾರಣವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಇದರ ಹೊರತು, ಈಗೆರಡು ದಿವಸಗಳಿಂದ ಜಿಟಿಜಿಟಿ ನುಳೆಯು ಹತ್ತಿರುವದರಿಂದ ಕೆಸರೂ ಸಾಕಷ್ಟಾಗಿದೆ. ನೊದಲೇ ಮಲಮೂತ್ರ ವಿಸರ್ಜನೆಗಾಶ್ರಯವಿತ್ತು ಈ ಹೊಲಸೋಣೆಯಲ್ಲಿ ಕೊಳೆನಾತವು ತಲೆಹಿಡಿದು ಬಿಟ್ಟಿದೆ. ಆದರೆ ಯಾರು ಕೇಳಬೇಕು?

ಓರ್ವ ಓಣಿಯ ಹೊಸ ನಿವಾಸಿ.

## ಆಡಂಬರ (ಫ್ಯಾಶನ್)ಗಳು ಹುಟ್ಟಿದುದು ಹೇಗೆ?

ಯಾವನೊಬ್ಬ ದೊಡ್ಡ ಮನುಷ್ಯನು ತನ್ನಲ್ಲಿರುವ ವ್ಯಂಗಗಳನ್ನು ಮುಚ್ಚಿಕೊಳ್ಳುವದಕ್ಕಾಗಿ ಒಂದು ಪದ್ಧತಿಯ ಉಡುಪು ಹಾಕಿಕೊಂಡರೆ ಅದೇ ಸಕಲ ಜನರಿಗೆ ಮುಂದೆ ಆಡಂಬರದ ಉಡುವಾಯಿತು. ಆಡಂಬರದಲ್ಲಿ ಫ್ರಾನ್ಸ ದೇಶವೇ ಮುಕುಟ ಮಣಿಯಾಗಿದೆಯಷ್ಟೆ ಅದಕ್ಕೆ ಕಾರಣವೆಂದರೆ. ಫ್ರಾನ್ಸನ ರಾಜನು ತನ್ನ ಮಣೆದ ಕಾಲುಗಳು ಯಾರಿಗೂ ಕಾಣಿಸಬಾರದೆಂದು ಉದ್ದವಾದ ಕೋಟುಗಳನ್ನು ಹಾಕುವ ಪದ್ಧತಿಯನ್ನುಂಟುಮಾಡಿದನು. ಸದ್ಯಕ್ಕೆ ಜನರು ಅವನ ಕೋಟನಂಥ ಉದ್ದವಾದ ಕೋಟುಗಳನ್ನು ಹಾಕಿಕೊಳ್ಳುವದೇ ಗೌರವವೆಂದು ತಿಳಿಯುತ್ತಾರೆ.

ಫ್ರಾನ್ಸನ ಹೆನ್ರಿಸನಾನನ ಅಂಗುಷ್ಠದ ಮುಂದೆ ಒಂದು ದೊಡ್ಡ ಗಂಟು ಇದ್ದಿತು. ಅದನ್ನು ಮುಚ್ಚಿಕೊಳ್ಳುವದಕ್ಕಾಗಿ ಅವನು ತನ್ನ ಬೂಟಿನ ಮುಂಭಾಗವನ್ನು ಉದ್ದವಾಗಿ ಮಾಡಿಸಿದನು. ಬರಬರುತ್ತ ಈ ತರದ ಚೂಪಾದ ತುದಿಯ ಬೂಟುಗಳನ್ನು ಪಯೋಗಿಸುವುದೇ ಆಡಂಬರವೆಂದು ಜನರು ತಿಳಿದರು.

ಫ್ರಾನ್ಸನ ಮೊದಲನೆಯ ರಾಜನ ತಲೆಯ ಮೇಲೆ ಒಂದು ತರದ ಹುಣ್ಣುಗಳಾಗಿದ್ದವು. ಅವನ್ನು ಮುಚ್ಚಿಕೊಳ್ಳುವದಕ್ಕಾಗಿ ಅವನು ಈಗಿನ ಕ್ರಾಪಿನ ಪದ್ಧತಿಯಂತೆ ತನ್ನ ಕೂದಲುಗಳನ್ನು ಕತ್ತರಿಸಿದನು. ಆದನ್ನು ಅವನ ಓಲಗದಲ್ಲಿರುವವರೆಲ್ಲರೂ ಅನುಸರಿಸಿದರು. ಇದೇ ರೂಢಿಯೇ ಈಗ ಬಹು ಪ್ರಿಯವಾದುದಾಗಿಲ್ಲವೇ?

ಒಬ್ಬ ಪರದೇಶಸ್ಥ ಹೆಣ್ಣುಮಗಳು ತನ್ನ ಕುತ್ತಿಗೆಯ ಮೇಲಿನ ಕಲೆಗಳನ್ನು ಮುಚ್ಚುವುದಕ್ಕಾಗಿ ನಾವಡರನ್ನು ಹಚ್ಚಿದಳು. ಆದನ್ನೇ ಈಗ ಎಲ್ಲ ಸ್ತ್ರೀಯರು ಅಂದಕ್ಕಾಗಿ ಉಪಯೋಗಿಸುತ್ತಿರುವುದಿಲ್ಲವೇ?

ಬವೇರಿಯಾ ದೇಶದ ಇಸಾಬೆಲಾ ಎಂಬ ರಾಣಿಯು ಒಳ್ಳೇ ಮೋಹಕಳಾಗಿದ್ದಳು ಅವಳು ತನ್ನ ಸೌಂದರ್ಯವನ್ನು ಜನರ ಮುಂದೆ ಪ್ರಕಟಿಸುವದಕ್ಕಾಗಿ ಈಗ ಅನೇಕ ಸ್ತ್ರೀಯರು ಅಂದವೆಂದು ತೊಟ್ಟುಕೊಳ್ಳುವ ಜಾಕೀಟಿನ ಪದ್ಧತಿಯನ್ನು ಹುಟ್ಟಿಸಿದಳು. ಈ ಜಾಕೀಟುಗಳನ್ನು ಹಾಕಿದರೆ ಕುತ್ತಿಗೆ, ಭುಜ ಮತ್ತು ಎದೆಯ ಸ್ವಲ್ಪ ಭಾಗವು ತೆರೆಯುವದರಿಂದ ತನ್ನ ಮೋಹಕ ರೂಪವು ಎರಡನೆಯವರ ಮನಸ್ಸಿನಲ್ಲಿ ಕೂಡಲೆ ಬಿಂಬಿಸುವದೆಂದು ಅವಳು ತಿಳಿದಿದ್ದಳು. ಅದೇ ಈಗಿನ ಆಡಂಬರ ಪ್ರಿಯ ತರುಣಿಯರಿಗೆ ಬೇಕಾದುದಾಗಿದೆ. ಅನ್ಯ ವಿಷಯಗಳಲ್ಲಿ ರೂಢಿ ಪರಂಪರೆಯನ್ನು ತಿರಸ್ಕರಿಸುವ ಈಗಿನ ಸುಧಾರಕ ಆಡಂಬರ ಪ್ರಿಯರು ಈ ಆಡಂಬರದ ಮೂಢ ರೂಢಿಗಳನ್ನು ಇನ್ನಾದರೂ ಬಿಡುವರೇ?

### ಹಿಂದುಸ್ಥಾನಕ್ಕೊಬ್ಬ ಕೆಮಲ್ ಪಾಶಾ.

ಕಳೆದ ವರುಷ ಅಮೇರಿಕೆಯಲ್ಲಿ ಶ್ರೀ. ಕೇದಾರನಾಥ ದಾಸ ಗುಪ್ತ ಇವರ ಪ್ರಯತ್ನ ವಿಶೇಷದಿಂದ ಕೂಡಿದ್ದ ಸರ್ವ ಧರ್ಮ ಪರಿಷತ್ತಿಗೆ ಹೋಗಿದ್ದ ಕೊಲ್ಲಾಪುರ ರಾಜಾರಾಮ ಕಾಲೇಜಿನ ಪ್ರಿನ್ಸಿಪಾಲ ಡಾ. ಬಾಳಕೃಷ್ಣ ಇವರು ಈಗ ಈ ದೇಶಕ್ಕೆ ಬಂದಿದ್ದಾರೆ. ಇವರು ತಮ್ಮ ಒಂದು ಸಂಭಾಷಣೆಯಲ್ಲಿ ಹೀಗೆ ಹೇಳಿದರು—

"ಅಮೇರಿಕೆಯಲ್ಲಿ ೪೦ ವರುಷಗಳ ಹಿಂದೆ ಕೂಡಿದ್ದ ಮೊದಲನೆಯ ಸರ್ವ ಧರ್ಮ ಪರಿಷತ್ತಿಗೆ ಸ್ವಾಮಿ ವಿವೇಕಾನಂದರು ಹೋಗಿ ಅಲ್ಲಿ ಹಿಂದು ಧರ್ಮದ ಮಹತ್ವವನ್ನು ವ್ಯಕ್ತಗೊಳಿಸಿದರು. ಸರ್ವಧರ್ಮಗಳ ಪರಿಷತ್ತಿನ ಮುಂದಿನ ಅಧಿವೇಶನವು ಹಿಂದುಸ್ಥಾನದಲ್ಲಿ ಕೂಡುವದಿದೆ. ಹಿಂದುಸ್ಥಾನದಲ್ಲಿರುವ ಎಲ್ಲ ಧರ್ಮದವರಲ್ಲಿ ಪರಸ್ಪರ ಪ್ರೇಮಾದರಗಳಿಲ್ಲದೆ ಇಂಥ ಪರಿಷತ್ತನ್ನು ಕೂಡಿಸುವುದು ನಮಗೆ ಅವಮಾನಕರವಾದುದೇ ಸರಿ.

ಹಿಂದುಗಳಲ್ಲಿರುವ ನಾನಾ ಮಠ ಸಂಗಡದವರಲ್ಲಿ ಪರಸ್ಪರ ಪ್ರೇಮಾದರಗಳಿರಬೇಕು. ಇಂಥ ಸಂಘಟನೆಗೆ ಹಿಂದುಸ್ಥಾನಕ್ಕೆ ಈಗ ತುರ್ಕಿಸ್ಥಾನದ ಕೆಮಲ್ ಪಾಶಾರವರಂತಹ ಒಬ್ಬ ಮಹಾತ್ಮನು ಬೇಕಾಗಿದ್ದಾನೆ."


## ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ವೆಸ್ಟ್‌ಮೆಂಟ್ ಕಂಪನಿ ಲಿಮಿಟೆಡ್ ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ)

ಸ್ವರಾಜ್ಯ ಕಂಪನಿಯು ಜನರಿಗೆ ಬಹು ಪ್ರಿಯ ಕರವಾಗಿದೆ. ಕಂಪನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ ಬೆಳವಣಿಗೆಯ ರಿಪೋರ್ಟ ಕೆಳಗಿನಂತೆ ಇದೆ—

| ತಿಂಗಳು | | ಪಾಲಿಯ ಒಟ್ಟು ಕಿಮ್ಮತ್ತು. |
|---|---|---|
| ಜನವರಿ ೧೯೩೪ | | ೩೫೦೦ ರೂ. |
| ಫೆಬ್ರುವರಿ | ,, | ೧೨೦೦೦ ರೂ. |
| ಮಾರ್ಚ | ,, | ೩೦೫೦೦ ರೂ. |
| | ಒಟ್ಟು. | ೪೬೦೦೦ ರೂ. |

ತಡಮಾಡಬೇಡಿರಿ. ಸ್ವರಾಜ್ಯ ಕಂಪನಿಯ ಜನನ ಮದುವೆ ಮತ್ತು ಜೀವ ವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು— ಏಜಂಟರಿಗೆ ಉತ್ತಮವಾದ ಸಂಧಿ; ತಿಂಗಳಿಗೆ ೧೦೦ರಿಂದ ೧೫೦ರವರೆಗೆ ಕಮಿಶನ್ ಶಿಗುವದು

Managing Agents.


# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತನ್ನ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರು ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,
ತುಮಕೂರು. (ಮೈಸೂರು ಸ್ಟೇಟ್)




# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಪ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗಳೇಶ್ವರ ಕೊಳ್ಳವು ಪ್ರಸಿದ್ಧವಿರುವದು ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಕನಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟಿ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಆರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ಲ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಷಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. **ಒಂದು ವೇಳೆಯಾದರೂ ಪರೀಕ್ಷಿಸಿ** ನೋಡಿರಿ. ಬಡವರಿಗೂ ಶ್ರೀಮಂತರಿಗೂ ನೋಯಿ ದರದಿಂದ ಕೊಡಲ್ಪಡುವದು.

ಪತ್ತಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆ ೧೨ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತೀಚ್ಚಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ವಿಪರೀತ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟ ಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಸಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇನೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ, ಪೋಸ್ಟ— ಹುಮನಾಬಾದ ಜಿ. ಗುಲ್‌ಬರ್ಗಾ**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಅತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧವ ದಿವ್ಯ ಗುಣದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಎರಿದ ರೋಗನೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ಸುಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ. ವ್ಯಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

## WANTED.

Applications are invited for the post of an Assistant Laboratory Chemist who should be able to carry on control analytical work, as well as to help the Chief Chemist in research work. Minimum qualification required is B. Sc., with chemistry as principal subject and preferably Botany subsidary. Research or control Laboratory experiency will be additional qualification.

Applications should reach the undersigned not later than the 15th of July 1934, giving particulars of qualification, mother-tongue and minimum salary expected.

M. C. Tumminakatti, M. Sc., Ph. D.,
Works-Manager,
KARNATAK CHEMICAL WORKS,
GADAG.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಧ್ಯಾನಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಿದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಪ್ಪಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಪಸತ್ತ,**
**ಬಾಗಲಕೋಟೆ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮಶಿಬೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಚೇಳಿನ ನಾಶ— | ೧೧ | ,, |
| ೧೨ ತಗಣಿ ಕತ್ತು ಬಾಟ್ಲಿ— | ೭ | ,, |

೧೦೦ ಬೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. **ಹಂಚಲಿ.**
**ಜಿ. ವಿಜಾಪುರ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾನಲ್ಲ। ದೋಷವಿರೋಧಿ। ಶರಣಸಾರಾಂಗ ಆಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರವಾಗಿ ॥ ವ. ೨೨೯ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ಖರ್ಚು ಸೇರಿ ೩ರೂ.

ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. ಸೋಮವಾರ ತಾರೀಖು ೨೩ ನೆಯ ಜುಲೈ ೧೯೩೪. ಸಂಚಿಕೆ ೪

ಜನಸೇವೆಯೇ ದೇವರ ಸೇವೆ.

## ಸ್ವಾತಂತ್ರತೆಯು ಸ್ವಾರ್ಥಾಗುವುದೇ?

ರಾಜಕೀಯ ಅಪರಾಧಕ್ಕೋಸ್ಕರ ಶಿಕ್ಷೆಯನ್ನನುಭವಿಸಿದವರಿಗೆ
ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಸೇರಲು
ಅವಕಾಶವಿಲ್ಲವಷ್ಟೆ.

ಈ ವಿಷಯವಾಗಿ ಮಿ. ಅಬ್ದುಲ್ ಮತೀನ ಚೌಧರಿ ಇವರು ಅಸೆಂಬ್ಲಿಯಲ್ಲಿ ಈ ಪ್ರಕಾರ ಕೇಳುವವರಿದ್ದಾರೆ—

"ಶಾಸನೋಲ್ಲಂಘನೆಯ ಚಟುವಟಿಕೆಯಲ್ಲಿ ಶಿಕ್ಷೆಯನ್ನನುಭವಿಸಿದವರು ಅಸೆಂಬ್ಲಿಯಲ್ಲಿ ಸೇರಲು ಅಪಾತ್ರರೆಂಬುದನ್ನು ದೂರಮಾಡಲು ಸರಕಾರದವರು ಯೋಚಿಸಿರುವರೆ?"

ಈ ವಿಷಯದಲ್ಲಿ ಹಿಂದುಸ್ಥಾನ ಸರಕಾರವು ತನ್ನ ಅಭಿಪ್ರಾಯವನ್ನು ಇಷ್ಟರಲ್ಲಿಯೇ ಪ್ರಕಟಿಸುವುದಾಗಿ ತಿಳಿದಿದೆ.

SANGAM CLOTH STORE
Prop: M. S. Hundekar & Sons,
P.O: TERDAL – 587 315
Dt. Bijapur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜೂರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರವ್ವಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗುಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಜುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೆ. ಸ್ಥವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತ್ರಿ?

ಶೆಟ್ಟರು—ಏನು ಹೇಳಲೆವ್ವಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಜೇಕಾದಷ್ಟು ಪಾತ್ರಿ ಮಾಳೂಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತವ್ವಾ.

ರಾಮಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾವರಿಸಾ, ಇವಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅಂತ್ರ ತೀಮೆಂತ ಚಿನೆಕ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹೆಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತವ್ವಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಬಿ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.
ಷ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ,
ರವಿವಾರಪೇಟೆ ಬೆಳಗಾಂವ.

ಸಿ. ಕೆ. ಲಿಂಗಯ್ಯ ಸ್ವಾಮಿ ಪುಸ್ತಕ ವ್ಯಾಪಾರಿ
ಇವರಿಂದ
ಗದಗಿನಲ್ಲಿ ಪ್ರಸಿದ್ಧಿಸಲ್ಪಟ್ಟ
ಶ್ರೀ ಹೂಲಿ (ಪೂವಲ್ಲಿ)
ಸಿದ್ಧಾಂತ ಪಂಚಾಂಗವನ್ನೇ
ಕೊಳ್ಳಿರಿ.
ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ
ಗದಗ

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜುಲೈ ತಾರೀಖು ೨೩ ನೆಯ ಸೋಮವಾರ | ಸಂಚಿಕೆ ೪೭.


# ಮಹಾತ್ಮಾಜಿಯವರ ಮಹಾಯಾತ್ರೆ.

### ದಕ್ಷಿಣೆ ತೆಗೆದುಕೊಂಡು ಬನ್ನಿರಿ.

ಲಾಹೋರಿನಿಂದ ಕಲಕತ್ತೆಗೆ ಹೋಗುವಾಗ್ಗೆ ಮಹಾತ್ಮಾಜಿಯವರು ದಿಲ್ಲಿಯಲ್ಲಿ ಅರ್ಧ ಗಂಟೆಯವರೆಗೆ ತಡೆದರು. ಅವಾಗ್ಗೆ ಅವರ ದರ್ಶನಕ್ಕಾಗಿ ಪ್ರಚಂಡ ಜನಸ್ತೋಮವುಂಟಾಗಲು ಅವರನ್ನುದ್ದೇಶಿಸಿ ಮಹಾತ್ಮರು—"ದಕ್ಷಿಣೆ ತೆಗೆದುಕೊಂಡು ಬನ್ನಿರಿ; ಆಂದರೆ ಕಾರ್ಯಸಿದ್ಧಿಯಾಗುವದೆಂದು ಗಟ್ಟಿಯಾಗಿ ಹೇಳಿದರು." ಪಂ. ಜವಾಹರಲಾಲರ ಬಿಡುಗಡೆಯ ವಿಷಯಕ್ಕೆ ಆಲೋಚಿಸುತ್ತಿರುವಿರೊ ಎಂದು ಒಬ್ಬರು ಕೇಳಲು ಈ ಸಂಚಾರದಲ್ಲಿ ಕೂಡಾ ನಾನು ಅದನ್ನೇ ಆಲೋಚಿಸುತ್ತಿರುವೆನೆಂದು 'ಮಹಾತ್ಮರು ನುಡಿದರು.

### ತನ್ನ ಮಿದುಳನ್ನು ತಿದ್ದಿಕೊಳ್ಳಲಿ!

ಅಜಮೀರದಲ್ಲಿ ಪಂ. ಲಾಲನಾಥರಿಗೆ ದೊಣ್ಣೆಯಿಂದ ಹೊಡೆದು ಗಾಯಗೊಳಿಸಿದ ಒಬ್ಬ ಸ್ವಯಂಸೇವಕನು ಪಶ್ಚಾತ್ತಾಪಪಟ್ಟು ತಾನೂ ಏನು ಪ್ರಾಯಶ್ಚಿತ್ತ ಹೊಂದಬೇಕೆಂದು ಅವನು "ಆರ್ಜವ" ಪತ್ರಿಕಾ ಸಂಪಾದಕರಿಗೆ ಕೇಳಿಕೊಂಡಿದ್ದನು. ಅವರು ಗಾಂಧೀಜಿಯವರಿಗೆ ಭೆಟ್ಟಿಯಾಗೆಂದು ಅವನಿಗೆ ತಿಳಿಸಿದರು. ಅವನು ಯಾವ ಪ್ರಾಯಶ್ಚಿತ್ತ ತೆಗೆದುಕೊಳ್ಳಬೇಕೆಂದು ಗಾಂಧೀಜಿಯವರನ್ನು ಕೇಳಲು ಅವರು, "ಅವನು ತನ್ನ ಮಿದುಳನ್ನು ತಿದ್ದಿಕೊಳ್ಳಲಿ" ಎಂದು ಹೇಳಿದರು.

### ನಾನು ವಿರೋಧಿಗಳನ್ನು ಪ್ರೀತಿಸುತ್ತೇನೆ.

ಮಹಾತ್ಮಾಜಿಯವರು ಕಾನಪುರ ಸ್ಟೇಶನಕ್ಕೆ ಬರಲು ಅನೇಕ ಜನರು ಅವರನ್ನು ಸ್ವಾಗತಿಸಿದರು. ಜನಸಮೂಹದಲ್ಲಿ ಸನಾತನಿಗಳ ಕರಿ ನಿಶಾನಿಗಳೂ ಇದ್ದವು. ಆದಕ್ಕವರು—"ನನಗೆ ವಿರೋಧಿಗಳು ಪ್ರಿಯರು. ಆದರೆ ವಿರೋಧಿಸುವವರು ಅಹಿಂಸಾವ್ರತವನ್ನು ಪಾಲಿಸಬೇಕೆಂದು ನನ್ನ ಪ್ರಾರ್ಥನೆ" ಎಂದರು. ಅಷ್ಟಿ ಎಷ್ಟೋ ಜನರು ಗಾಂಧೀಜಿಯವರಿಗೆ ಉಂಗುರಗಳನ್ನೂ ಗಡಿಯಾರಗಳನ್ನೂ ಕೊಟ್ಟರು.

ಇಲ್ಲಿಯ ರಾಷ್ಟ್ರೀಯ ಸ್ವಯಂಸೇವಕರು ಗಾಂಧೀಜಿಯವರಿಗೆ ಭೆಟ್ಟಿಯಾಗಿ ತಿರುಗಿ ಪಟ್ಟಣದೊಳಗೆ ಬರುವಾಗ್ಗೆ ಕೆಲ ಸನಾತನಿಗಳು ಅವರ ಮೇಲೆ ಜೋಡುಗಳನ್ನೆಸೆದಲ್ಲದೆ ಕರೀ ನಿಶಾನಿಯ ಕೋಲುಗಳಿಂದ ಥಳಿಸಿದರು. ಈ ವಿಷಯವಾಗಿ ಮೂವರನ್ನು ಬಂಧಿಸಿ ಹೊಣೆಯ ಮೇಲೆ ಬಿಟ್ಟಿದ್ದಾರೆ.

### ಕಲಕತ್ತೆಯಲ್ಲಿ ಮಹಾತ್ಮರು.

ಮಹಾತ್ಮಾಜಿಯವರು ಹೌರಾ ಸ್ಟೇಶನದಲ್ಲಿಳಿಯುವರೆಂದು ಸಾವಿರಾರು ಜನರು ಮಾರ್ಗ ಪ್ರತೀಕ್ಷಣೆಮಾಡುತ್ತ ನಿಂತಿರಲು ಅವರು ಕಲಕತ್ತೆಯಿಂದ ೬ ಮೈಲು ಅಂತರವಿರುವ ಬೇಲೂರು ನಿಲ್ದಾಣದಲ್ಲಿಯೇ ಇಳಿದರು. ಅವರನ್ನು ಸ್ವಾಗತಿಸುವದಕ್ಕಾಗಿ ಡಾ. ಬಿ. ಸಿ. ರಾಯ, ಮೇಯರ ಸರ್ ಎನ್. ಎನ್. ಸರಕಾರ, ಮೌ. ಅಬ್ದುಲ ಕಲಮ ಆಝಾದ, ಜೆ ಸಿ. ಗುಪ್ತ ಮೊದಲಾದವರು ಬಂದಿದ್ದರು. ಅಲ್ಲಿಂದ ಅವರು ಮೋಟಾರಿನಲ್ಲಿ ಕಲಕತ್ತಾಪುರ ಪ್ರವೇಶ ಮಾಡಿದರು.

### ಸ್ತ್ರೀಯರ ಸಭೆಯಲ್ಲಿ.

ಕಲಕತ್ತೆಯ ಆಲ್ಬರ್ಟ ಹಾಲಿನಲ್ಲಿ ಮಹಾತ್ಮರ ಭಾಷಣವಾಗುವದೆಂದು ವಂಗ ಸ್ತ್ರೀಯರು ಸಂದಿಲ್ಲದಂತೆ ನೆರಿದಿದ್ದರು. ಮಹಾತ್ಮರ ಪಾದಸ್ಪರ್ಶನ ಮಾಡಿ ತಮ್ಮ ಒಡವೆಗಳನ್ನು ಅರ್ಪಿಸುವದರಲ್ಲಿಯೇ ಬಹಳ ನಿಮಿಷಗಳು ಕಳೆದವು'

ಮಹಾತ್ಮರ ಚೀಲವೂ, ಗಾಂಧೀ ಟೊಪ್ಪಿಗೆಯೂ ಆಭರಣಗಳಿಂದ ತುಂಬಿ ಹೋದವು. ಮಹಾತ್ಮರು ಉತ್ಸಾಹದಿಂದ ಅವುಗಳನ್ನು ಸ್ವೀಕರಿಸಿ ಶ್ರೀ. ಶಕ್ಕರ ಬಾಪು ಇವರಿಗೆ ಕೊಟ್ಟರು. ಇದರಲ್ಲಿಯೇ ಕಾಲವು ಮೀರಲು ಭಾಷಣ ಮಾಡದೆ ಗಾಂಧೀಜಿಯವರು ಎದ್ದರು.

### ಮಹಾತ್ಮರ ಸಂದೇಶ.

ಮಹಾತ್ಮರು ಈ ಕೆಳಗಿನಂತೆ ತಮ್ಮ ವಿಜ್ಞಾಪನೆಯನ್ನು ಪ್ರಸಿದ್ಧಗೊಳಿಸಿದ್ದಾರೆ—

"ನನ್ನ ಮೇಲೆ ಏರಿ ಬೀಳಬಹುದೆಂಬ ಇಲ್ಲವೆ ದೊಂಬಿಯಾಡಬಹುದೆಂಬ ಸಂಶಯದಿಂದ ಪೋಲೀಸರು ಅನೇಕರನ್ನು ಬಂಧಿಸಿರುವರೆಂದು ಕೇಳಿ ನನಗೆ ಕೆಡಕೆನಿಸುತ್ತಿದೆ. ಅವರನ್ನು ಬಿಟ್ಟುಕೊಡಬೇಕೆಂದು ಪೋಲೀಸರಿಗೆ ನನ್ನ ವಿಜ್ಞಾಪನೆ. ನನ್ನ ಜೀವಿತವು ಜನಸೇವೆಗಾಗಿ ಅರ್ಪಿಸಲ್ಪಟ್ಟಿದೆ. ಮತ್ತು ನಾನು ಸಾರ್ವಜನಿಕ ಸೇವೆಯನ್ನು ಮಾಡಹತ್ತಿದಂದಿನಿಂದ ಅದು ಜನತೆಯ ಕೈಯಲ್ಲಿಯೇ ಇದೆ. ಪೋಲೀಸರು ತಮ್ಮ ಕರ್ತವ್ಯವನ್ನು ಮಾಡಬೇಕಾಗುತ್ತದೆಂಬುದನ್ನು ನಾನು ಅರಿತಿರುವೆನಾದರೂ ಶಕ್ಯವಿದ್ದರೆ ಬಂಧಿತರನ್ನು ಬಿಟ್ಟುಕೊಡಬೇಕೆಂದು ಅವರಿಗೆ ನನ್ನ ವಿಜ್ಞಾಪನೆ."

ವ್ಯಾಪಾರಸ್ಥರಿಗೆ ನಿತ್ಯವೂ ಉಪಯೋಗ ಬೀಳುವ

# ರೇಲ್ವೆ ಸಂಬಂಧದ ಮಾಹಿತಿಯು.

(ಕರ್ನಾಟಕ ಚೇಂಬರ ಆಫ್ ಕಾಮರ್ಸದ ಗೌರವ ಕಾರ್ಯದರ್ಶಿಗಳಿಂದ)

**ಓದಿರಿ! ವ್ಯಾಪಾರಸ್ಥರಲ್ಲಿ ಹಂಚಿರಿ! ಮತ್ತು ಹೆಚ್ಚಿಗೆ ಬೇಕಾದರೆ ತರಿಸಿಕೊಳ್ಳಿರಿ.!**

—( ಕಳೆದ ಸಂಚಿಕೆಯಿಂದ ಮುಂದುವರಿದುದು )—

**೪. ಮಾಲಿನ ಡಿಲಿವ್ಹರಿಯನ್ನು ಹೇಗೆ ತೆಗೆದುಕೊಳ್ಳಬೇಕು?**

ರಿಸ್ಕ ನೋಟೆಂದರೆ ಜವಾಬ್ದಾರಿಯ ಚೀಟಿ. ಇದನ್ನು ಬರೆದು ಕೊಡದ ಹೊರತು ಮಾಲನ್ನು ಹೇರುವದು ಅತ್ಯಂತ ಕಠಿಣವೇ. ಅದ್ದರಿಂದ ನಿರುಪಾಯರಾಗಿ ವ್ಯಾಪಾರಸ್ಥರು ಅದನ್ನು ತುಂಬಿಕೊಡುತ್ತಾರೆ. ಅದರಿಂದ ಕಛೇರಿಗಂತೂ ಅಪ್ಪಣೆಯೇ ಸಿಕ್ಕಂತಾಗಿ ವ್ಯಾಪಾರಸ್ಥರಿಗೂ ಹಾಗು ಅವರ ಮುಖಾಂತರ ಮಾಲು ತೆಗೆದು ಕೊಳ್ಳುವ ಗಿರಾಕಿಗಳಿಗೂ ಹೇಗೆ ಲುಕ್ಸಾನವಾಗುತ್ತದೆಂಬುದನ್ನು ಈ ಮೊದಲು ತೋರಿಸಿಕೊಟ್ಟಿದ್ದೇವೆ. ಮಾಲು ಹೇರುವ ಕಾಲಕ್ಕೆ ಯಾವ ವಿಘ್ನಗಳುಂಟೋ ಅವೇ ಮಾಲಿನ ಡಿಲಿವ್ಹರಿ ತೆಗೆದುಕೊಳ್ಳುವ ಕಾಲಕ್ಕೂ ಬರುತ್ತೆಂದು ಎದುರಿಗೆ ಬಂದು ನಿಲ್ಲುತ್ತವೆಯೆಂಬುದನ್ನು ತೋರಿಸಿಕೊಟ್ಟು ಅವುಗಳಿಗೆ ಉಪಾಯಗಳನ್ನೂ ಸೂಚಿಸುತ್ತೇವೆ.

ಯಾವ ಮಾಲು ಮಾಲಕನ ಜವಾಬ್ದಾರಿಯ ಮೇಲೆ ಬರುತ್ತದೆಯೋ ಅದು 'ಎ' ಇಲ್ಲವೆ 'ಬಿ' ರಿಸ್ಕ ನೋಟನ್ನು ತುಂಬಿ ಕೊಟ್ಟಂಥ ಮಾಲೇ ಬಹಳ ಮಾಡಿ ಇರುತ್ತದೆ. ಇಂಥ 'ಎ' ಇಲ್ಲವೆ 'ಬಿ' ರಿಸ್ಕ ನೋಟಿನ ಮಾಲು ಬಂದಾಗ್ಗೆ ಅದಕ್ಕೇನಾದರೂ ಲುಕ್ಸಾನವು ತಟ್ಟಿದಂತೆ ಕಂಡರೆ ಆ ಸಂಬಂಧವಾಗಿ ಡಿಲಿವ್ಹರಿ ಬುಕ್ಕಿನಲ್ಲಿ ಗುಡ್ಸ ಮಾಸ್ತರನು ಲುಕ್ಸಾನದ ಶರಾ ಕಾಲಮ್ಮನ್ನು ಬಹುಶಃ ತುಂಬ ಕೊಡುವದೇ ಇಲ್ಲ. ಮತ್ತು ಇದಕ್ಕೆ ವಿರುದ್ಧವಾಗಿ ಡಿಲಿವ್ಹರಿ ಬುಕ್ಕಿನ ಕಡೇ ಕಾಲಮ್ಮಿನಲ್ಲಿ ಮಾಲು ಒಳ್ಳೇ ಸ್ಥಿತಿಯಲ್ಲಿ ದೊರೆಯಿತೆಂದು ಡಿಲಿವ್ಹರಿ ತೆಗೆದುಕೊಳ್ಳುವವನ ಕಡೆಯಿಂದ ಸಹಿ ಮಾಡಿಸಿಕೊಳ್ಳುತ್ತಾನೆ. ಈ ಪ್ರಕಾರ ಸಹಿ ಮಾಡಿಕೊಟ್ಟ ಮಾಲನ್ನು ತಂದ ನಂತರ ಲುಕ್ಸಾನದ ರಕಮನ್ನು ತುಂಬಿಕೊಡಿರೆಂದು ಕಂಪನಿಗೆ ನೋಟೀಸು ಕೊಟ್ಟರೆ 'ನೀವು ಕ್ಲಿಯರ ರಿಸೀಟ (ಮಾಲು ಒಳ್ಳೇ ಸ್ಥಿತಿಯಲ್ಲಿ ಮುಟ್ಟಿತೆಂಬದಕ್ಕೆ ಸಹಿ) ಕೊಟ್ಟಿದ್ದೀರಿ; ಕಾರಣ ನಿಮ್ಮ ಲುಕ್ಸಾನಕ್ಕೆ ನಾವು ಜವಾಬ್ದಾರರಲ್ಲವೆಂದು ಉತ್ತರವು ಬರುತ್ತದೆ. ಆ ಮೇಲೆ ವ್ಯಾಪಾರಸ್ಥರು ಕೋರ್ಟನಲ್ಲಿ ದಾವೆಯನ್ನು ತಂದರೆ ಕ್ಲಿಯರ ರಿಸೀಟು ಬರೆದುಕೊಡಲ್ಪಟ್ಟದ್ದೆ; ಕಾರಣ, ಲುಕ್ಸಾನವನ್ನು ಕೇಳಲಿಕ್ಕೆ ವಾದಿಗೆ ಕಾರ್ಯಕಾರೀಕ ಹಕ್ಕು ಇಲ್ಲ'ವೆಂದು ಕೈಫಿಯತ್ತು ಬರುತ್ತದೆ. ಹೀಗೆ ಒಂದು ಕಡೆಗೆ ಕ್ಲಿಯರ ರಿಸೀಟನ್ನು ಬರೆದು ಕೊಡದ ಹೊರತು ಮಾಲನ್ನೇ ವ್ಯಾಪಾರಸ್ಥರ ವಶಕ್ಕೆ ಕೊಡುವಂತಿಲ್ಲ. ಮತ್ತು ಅಡಚಣೆಯು ಮೂಲಕ ಜಾಗೆ ಕ್ಲಿಯರ ರಿಸೀಟ್ ಕೊಟ್ಟ ಕೂಡಲೆ ಲುಕ್ಸಾನವನ್ನು ಕೇಳುವ ಹಕ್ಕೇ ಮುಳುಗಿತೆಂದು ಇನ್ನೊಂದು ಕಡೆಗೆ ಅನ್ನುವದು, ಈ ಪ್ರಕಾರ ವ್ಯಾಪಾರಸ್ಥರನ್ನು ಕತ್ತರಿಯಲ್ಲಿ ಸಿಗಿಸುವ ಈ ಒತ್ತಾಯದ ಪೇಚ್ಚು ಅನ್ಯಾಯದ ಕಾಯಿದೆಯಿಂದ ವ್ಯಾಪಾರಸ್ಥರಂತೂ ತೀರ ತ್ರಸ್ತರಾಗಿಬಿಟ್ಟಿದ್ದಾರೆ. ಜಾಗು ಹತಾಶರಾಗಿ ಸುಮ್ಮನೆ ಲುಕ್ಸಾನವನ್ನು ಸೋಸಹತ್ತಿದ್ದಾರೆ. ಆದರೆ ಇನ್ನು ಅವರು ನಿರಾಶರಾಗುವ ಕಾರಣವಿಲ್ಲ.

ಕ್ಲೆಯರ ರಿಸೀಟನ್ನು ಕೊಟ್ಟರೂ ಲುಕ್ಸಾನವನ್ನು ಶಾಬೀತ ಮಾಡಿಕೊಡುವ ವಾದಿಯ ಹಕ್ಕು ನಷ್ಟವಾಗುವುದಿಲ್ಲವೆಂದು ಕಲಕತ್ತೆಯ ಹಾಯಕೋರ್ಟನವರು ನಿರ್ಣಯಿಸಿದ್ದಾರೆ. ಇದರಂತೆ ಇಂಗ್ಲಿಷ ಪ್ರಕರಣಗಳೆಷ್ಟೋ ಇರುತ್ತವೆ. ಮತ್ತು ಮುಂಬೈ ಇಲಾಖೆಯ ಧುಳೆ ಕೋರ್ಟನವರು ಕೂಡಾ ಈ ಪ್ರಕಾರವೇ ನಿಕಾಲೆ ಹೇಳಿದ್ದಾರೆ. ಯೋಗ್ಯ ಪುರಾವೆಗಳಿದ್ದು ಬೇರೆಯೇನೂ ಅಡಚಣೆಯಿರದಿದ್ದರೆ ಕೇವಲ ಕ್ಲಿಯರ ರಿಸೀಟ್ ಕೊಟ್ಟ ಮಾತ್ರದಿಂದ ಕಂಪನಿಯ ಮೇಲೆ ದಾವೆಯನ್ನು ಹೇಗೆ ಮಾಡುವದೆಂದು ಯಾರೂ ಹೆದರಬಾರದು. ಡಿಲಿವ್ಹರಿ ತೆಗೆದುಕೊಳ್ಳುವ ಮುಂದೆ ಪ್ರಥಮದಲ್ಲಿಯೇ, ಲುಕ್ಸಾನವಾಗಿದ್ದರೆ ಆ ರೀತಿಯಾಗಿ ಡಿಲಿವ್ಹರಿ ಬುಕ್ಕಿನಲ್ಲಿ ಶರಾ ಬರೆಯುವದಕ್ಕೆ ಎಚ್ಚರಿಕೆಯನ್ನು ವಹಿಸಬೇಕು. ಈ ರೀತಿಯಾಗಿ ಶರಾ ಬರೆದು ಡಿಲಿವ್ಹರಿ ತೆಗೆದುಕೊಳ್ಳಲಿಕ್ಕೆ ಮಾಸ್ತರನು ತಕರಾರು ಮಾಡಿದರೆ ಅಲ್ಲಿಂದಲ್ಲಿಯೇ ಆಗಿಂದಾಗ್ಗೆ ಒಂದು ತಂತಿಯನ್ನು ಕಂಪನಿಯ ಮ್ಯಾನೇಜರನಿಗೆ ಕೊಡಶಕ್ಕದ್ದು. ಮತ್ತು ವ್ಯಾಪಾರಸ್ಥನು ತನ್ನ ಪಂಚರನ್ನು ಸ್ಟೇಶನದ ಮೇಲೆ ಒಯ್ದು ಅವರಿಗೆ ಎಲ್ಲವನ್ನೂ ತೋರಿಸಿ ಸ್ವಂತವ ಒಂದು ಪಂಚನಾಮೆಯನ್ನು ತಯಾರಿಸತಕ್ಕದ್ದು; ಅಥವಾ ರಸೀದಿಯ ಬೆನ್ನಿನ ಮೇಲೆ ಆದ ಪ್ರಕಾರವನ್ನೆಲ್ಲ ರಸೀದಿಯ ಛಾಪೀ ಅಕ್ಷರಗಳ ಮೇಲೆ ಬರೆದು ಅದರ ಮೇಲೆ ತನ್ನ ಸಹಿಯನ್ನು ಮಾಡತಕ್ಕದ್ದು. ಮತ್ತು ಆ ತರುವಾಯ ರಸೀದಿಯನ್ನು ಮಾಸ್ತರನ ಸ್ವಾಧೀನ ಮಾಡತಕ್ಕದ್ದು. ಹೀಗೆ ಮಾಡಿದರೆ ಮುಂದೆ ಕೋರ್ಟನಲ್ಲಿ ಆ ದಾಖಲೆಯು ಉಪಯೋಗ ಬೀಳುವದು. ಎಷ್ಟೋ ಸಾರೆ ವ್ಯಾಪಾರಸ್ಥರು ಡಿಲಿವ್ಹರಿ ತೆಗೆದುಕೊಳ್ಳುವದನ್ನೇ ನಿರಾಕರಿಸುತ್ತಾರೆ. ಆದರೆ ಇದು ಕಾಯಿದೆಯ ವಿರುದ್ಧವಾಗುವದು. ಯಾವಾಗಲೂ ಡಿಲಿವ್ಹರಿಯನ್ನು ಆಗಿಂದಾಗ್ಗೆ ತೆಗೆದುಕೊಂಡು ಹಿಂದುಗಡೆಗೆ ಲುಕ್ಸಾನದ ವಿಷಯವಾಗಿ ಮೇಲೆ ಬರೆದಂತೆ ನ್ಯಾಯವನ್ನಾಡಬೇಕು.

ಅನೇಕ ಸಾರೆ ಮಾಲನ್ನು ವಶಕ್ಕೆ ತೆಗೆದುಕೊಳ್ಳುವಾಗ, ಲುಕ್ಸಾನವಾಗಿರುವದೆಂಬದೇ ತಿಳಿಯುವದಿಲ್ಲ; ಮಾಲನ್ನು ಮನೆಗೆ ತಂದ ನಂತರ ತಿಳಿಯುತ್ತದೆ. ಇಂಥ ಸ್ಥಿತಿಯಲ್ಲಿ ಆ ಮಾಲು ಕಂಪನಿಯ ವಶದಲ್ಲಿದ್ದಾಗ್ಗೇನೇ ಅದಕ್ಕೆ ಲುಕ್ಸಾನವು ತಟ್ಟಿತೆಂಬದನ್ನು ಶಾಬೀತು ಮಾಡಿಕೊಡಲು ಬಂದರೆ ಕೋರ್ಟನವರು ಕಂಪನಿಯ ಕಡೆಯಿಂದ ಲುಕ್ಸಾನವನ್ನು ಕೊಡಿಸುತ್ತಾರೆ. ಈ ಪ್ರಕಾರ ಧುಳೆಯ ಕೋರ್ಟನವರು ಲುಕ್ಸಾನವನ್ನು ಕೊಡಿಸಿದ್ದಾರೆ.

### ೫. ಲುಕ್ಸಾನಕ್ಕೆ ಜವಾಬ್ದಾರರು ಯಾರು?

ರೇಲ್ವೆಯಿಂದ ಬಂದ ಮಾಲಿಗೆ ಎಷ್ಟೋ ಸಾರಿ ಲುಕ್ಸಾನವು ಕಟ್ಟುತ್ತದೆ. ಹೀಗೆ ಲುಕ್ಸಾನವಾದ ಕಾಲಕ್ಕೆ ಮೂರು ನಾಲ್ಕು ರೇಲ್ವೆಗಳ ಮೇಲಿಂದ ಮಾಲು ಹಾಗು ಬಂದಿರುವಾಗ್ಗೆ ಯಾವ ರೇಲ್ವೆ ಕಂಪನಿಯನ್ನು ಜವಾಬ್ದಾರಿಯೆಂದು ಹಿಡಿಯಬೇಕೆಂಬುದು ಒಂದು ಮಹತ್ವದ ಪ್ರಶ್ನೆಯಾಗಿದೆ. ಈ ಪ್ರಶ್ನೆಯು ಎಷ್ಟೋ ಮಂದಿಗೆ ಸರಿಯಾಗಿ ತಿಳಿಯದ್ದರಿಂದ ಬೇರೊಂದು ರೇಲ್ವೆಯವರು ಜವಾಬ್ದಾರರೆಂದು ತಿಳಿದು ತಪ್ಪು ತಿಳುವಳಿಕೆಯಿಂದ ಅವರ ಮೇಲೆಯೇ ಕೋರ್ಟಿನಲ್ಲಿ ದಾವೇ ಮಾಡಿ ಅದು ರದ್ದಾದದ್ದು ನಮಗೆ ತಿಳಿದು ಬಂದಿದೆ. ಮತ್ತು ಈ ರೀತಿಯಾಗಿ ವ್ಯಾಪಾರಸ್ಥರ ಸಾವಿರಾರು ರೂಪಾಯಿಗಳು ನಷ್ಟವಾಗಿವೆ ಆದ್ದರಿಂದ ಅದಕ್ಕೆ ಸಂಬಂಧಿಸಿದ ಕಾಯಿದೆಯನ್ನು ಇಲ್ಲಿ ಕೊಡುತ್ತೇವೆ.

ಯಾವ ರೇಲ್ವೆಯವರು ಮಾಲನ್ನು ಡಿಲಿವ್ಹರಿ ಮಾಡುತ್ತಾರೋ ಅವರೇ ಲುಕ್ಸಾನವನ್ನು ತುಂಬಿ ಕೊಡಲಿಕ್ಕೆ ಜವಾಬ್ದಾರರೆಂದು ಸರ್ವಸಾಧಾರಣವಾಗಿ ಎಲ್ಲರೂ ತಿಳಿದು ಕೊಳ್ಳುತ್ತಾರೆ. ಆದರೆ ಅದು ತೀರ ತಪ್ಪಾದ ಗ್ರಹಿಕೆಯಾಗಿರುತ್ತದೆ. ರೇಲ್ವೆ ಆಕ್ಟಿನ ಎಂನೇ ಕಲಮಿನ ಪ್ರಕಾರ ಮೊದಲು ಯಾವ ರೇಲ್ವೆಯ ಮೇಲೆ ಮಾಲು ಹೇರಲ್ಪಟ್ಟಿತೋ ಅಥವಾ ಯಾವ ರೇಲ್ವೆಯ ಮೇಲೆ ಮಾಲಿಗೆ ಲುಕ್ಸಾನು ಕಟ್ಟಿತೋ ಆ ರೇಲ್ವೆಯ ಮೇಲಷ್ಟೇ ದಿವಾಣೆಯೊಳಗೆ ದಾವೆಯನ್ನು ತರಬಹುದು. ಲುಕ್ಸಾನವು ಇಂಥದೇ ರೇಲ್ವೆ ಲೈನಿನ ಮೇಲೆ ಸಂಭವಿಸಿತೆಂಬದನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳಲಿಕ್ಕೆ ವ್ಯಾಪಾರಸ್ಥರಿಗೆ ಮಾರ್ಗವಿರುವದಿಲ್ಲ. ಕಾರಣ ಇಂಥ ಸಂದರ್ಭದಲ್ಲಿ ಮಾಲು ಹಾದು ಬಂದಂಥ ಎಲ್ಲ ರೇಲ್ವೆಯವರಿಗೂ ರೇಲ್ವೆ ಆಕ್ಟಿನ ೭೭ ಮತ್ತು ೧೪೦ನೇ ಕಲಮುಗಳ ಪ್ರಕಾರ ಇನ್ ವ್ಹಾಯಿಸ್ ಆದ ತಾರೀಖಿನಿಂದ ಆರು ತಿಂಗಳುಗಳೊಳಗಾಗಿಯೇ ಕಾಯಿದೇಶೀರ ರಜಿಸ್ಟರ ನೋಟೀಸನ್ನು ಕೊಡಬೇಕು. ಮತ್ತು ಅದರಲ್ಲಿ ನಿಮ್ಮ ಲೈನಿನ ಮೇಲೆ ಲುಕ್ಸಾನವಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಕೇಳಬೇಕು. ನಂತರ ಯಾರಾದರೂ ತಮ್ಮ ಲೈನಿನ ಮೇಲೆ ಲುಕ್ಸಾನವಾಗಿದೆಯೆಂದು ತಿಳಿಸಿದರೆ ಆ ರೇಲ್ವೆ ಕಂಪನಿಯ ಮೇಲಷ್ಟೇ ದಾವೇ ಮಾಡಬೇಕು. ಯಾವ ಲೈನಿನ ಮೇಲೆ ಲುಕ್ಸಾನವಾಯಿತೆಂಬದನ್ನು ಯಾರೂ ತಿಳಿಸದಿದ್ದ ಪಕ್ಷದಲ್ಲಿ ಯಾವ ರೇಲ್ವೆಯ ಮೇಲೆ ಮೊದಲು ಮಾಲು ಹೇರಲ್ಪಟ್ಟಿತೋ ಆ ರೇಲ್ವೆಯ ಮೇಲಷ್ಟೇ ದಾವೇ ಮಾಡಬೇಕು. ಮೂಲನ್ನು ಮೊದಲು ಹೇರಿದ ರೇಲ್ವೆಯವರು ಎಂನೇ ಕಲಮಿನ ಪ್ರಕಾರವಾದಿಗೆ ಯಾವಾಗಲೂ ಜವಾಬ್ದಾರರಾಗುತ್ತಾರೆ. ಕಾರಣ ಎಲ್ಲಿಯೇ ಲುಕ್ಸಾನವಾದರೂ ಮೊದಲಿನ ರೇಲ್ವೆಯೊಂದರಮೇಲೆಯೇ ದಾವೇ ತರಲಿಕ್ಕೆ ಬರುತ್ತದೆ. ಮೊದಲನೇ ರೇಲ್ವೆಯನ್ನು ಬಿಟ್ಟು ಉಳಿದ ರೇಲ್ವೆ ಕಂಪನಿಯವರನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿದರೆ ಆ ರೇಲ್ವೆಯ ಲೈನಿನ ಮೇಲೆ ಲುಕ್ಸಾನವಾಯಿತೆಂಬದನ್ನು ಸಿದ್ಧಮಾಡಿಕೊಡುವ ಜವಾಬ್ದಾರಿಯು ವಾದಿಯ ಮೇಲೆ ಬೀಳುತ್ತದೆ. (ಮುಂದುವರಿಯುವದು.)

---

—ಪಂ. ಜವಾಹರಲಾಲರಿಗೆ ಈಗ ವ್ಯಾಯಾಮದ ಅನುಕೂಲತೆ ಇಲ್ಲದಿದ್ದುದರಿಂದ ಅವರ ತೂಕವು ೧೦ ಪೌಂಡು ಕಡಿಮೆಯಾಗಿದೆ.

—ಸಂಕೇಶ್ವರ ಪೀಠದ ಶ್ರೀ ಶಂಕರಾಚಾರ್ಯರವರು ಯವತ್ಮಾಳದಲ್ಲಿ ಭಾಷಣ ಮಾಡುವಾಗ್ಗೆ ಮಂದಿರ ಪ್ರವೇಶ ಗೊತ್ತುವಳಿಯನ್ನು ವಿರೋಧಿಸಿದರು. ಅದಕ್ಕೆ ಪ್ರಸಿದ್ಧ ರಾಷ್ಟ್ರಭಕ್ತರಾದ ಶ್ರೀ. ಮಾಧವರಾವ ಅಣೆ ಇವರು ಅನುಮೋದಿಸಿದರು!

‖ಶ್ರೀಗುರುಬಸವಲಿಂಗಾಯ ನಮಃ‖

## ತ್ರಿವಿಧ ದಾಸೋಹ.

ವೀರಶೈವ ಮತದಲ್ಲಿ ತ್ರಿವಿಧ ದಾಸೋಹದ ತತ್ವವು ಗುರು ಲಿಂಗ, ಜಂಗಮಗಳಿಗೆ ತನುಮನಧನ (ಆತ್ಮಾರ್ಪಣ) ಗಳನ್ನು ಭಕ್ತಿಯಿಂದ ಅರ್ಪಿಸುವದಾಗಿದೆ. ಗುರು, ಲಿಂಗ, ಜಂಗಮಗಳೇ ಮೂರು ರೂಪಗಳಿಂದ ಪರಶಿವನು ತೋರುವನಲ್ಲದೆ ವೇದದಲ್ಲಿಯಾಗಲಿ ಅಥವಾ ಸ್ಮೃತಿ ಶಾಸ್ತ್ರಗಳಲ್ಲಿಯಾಗಲಿ ತೋರಲಾರನು.

ಮಹಾನುಭಾವರಾದ ಬಸವಣ್ಣನವರು ತ್ರಿವಿಧ ದಾಸೋಹದಿಂದಲೇ ದೇವನು ಸಾಧ್ಯನೆಂದು ಹೇಳಿರುತ್ತಾರೆ.

"ಶಾಸ್ತ್ರ ಏನವೆಂಬೆನೆ? ಕರ್ಮವ ಭಜಿಸುತ್ತಿದೆ. ವೇದ ಏನೆಂಬೆನೆ? ಪ್ರಾಣವಧೆಯ ಹೇಳುತ್ತಿದೆ. ಸ್ಮೃತಿ ಏನವೆಂಬೆ ಮುಂದಿಟ್ಟು ಅರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು, ಕೂಡಲ ಸಂಗಮದೇವ" ಈ ಪ್ರಕಾರ ಗುರುಗಳ ಸೇವೆಯನ್ನು ಮಾಡಿ ಶರೀರವನ್ನು ಸವಿಸಬೇಕು. ಶಿವಪೂಜೆಯ ಸ್ತುತಿ ಧ್ಯಾನಗಳಲ್ಲಿ ಮನಸ್ಸನ್ನು ಇಡಬೇಕು. ತನ್ನ ಸಂಪತ್ತನ್ನೂ ಶಿವಭಕ್ತರ ಪುಣ್ಯಾರ್ಥವಾಗಿ ವಿನಿಯೋಗಿಸಲು ಜಂಗಮ ಮೂರ್ತಿಗಳಿಗೆ ಅರ್ಪಿಸಿ ಸವಿಸಬೇಕು. ಈ ಪ್ರಕಾರ ತನುಮನಧನಗಳನ್ನು ಗುರುಲಿಂಗ ಜಂಗಮತ್ರಯಕ್ಕೆ ಸಲ್ಲಿಸುವದೇ ತ್ರಿವಿಧ ದಾಸೋಹವೆಂದು ಹೀಗೆ ಹೇಳುತ್ತಾರೆ.

ಮಹಾನುಭಾವರಾದ ಬಸವಣ್ಣನವರು, ತನುಮನಧನಗಳನ್ನು ಸವಿಸಲೇಬೇಕೆಂದು ಹೇಳುತ್ತಾರೆ.

ತನುವಕೊಟ್ಟು ಗುರುವನೊಲಿಸಲೇಬೇಕು, ಮನವಕೊಟ್ಟು ಲಿಂಗವನೊಲಿಸಲೇಬೇಕು, ಧನವಕೊಟ್ಟು ಜಂಗಮವನೊಲಿಸಲೇಬೇಕು. ಈ ತ್ರಿವಿಧವ ಹೊರಗುಮಾಡಿ ಹರಿಯ ಹೊಯಿಸಿ ಕುರುಹ ಪೂಜಿಸುವವರ ಮೆಚ್ಚ ಕೂಡಲಸಂಗಮದೇವಾ.

ಈ ಪ್ರಕಾರ ಗುರುಗಳೆ, ಶಿವಭಕ್ತರ ಸೇವೆಯಲ್ಲಿ ಶರೀರವನ್ನು ಸವಿಸದೇ ಲಿಂಗದೇವನಲ್ಲಿ ಮನಸ್ಸನ್ನು ಇರಿಸದೆ ಶಿವಭಕ್ತರ ಸಹಾಯಾರ್ಥವಾಗಿ ಸಂಚರಿಸುವ ಜಂಗಮ ಮೂರ್ತಿಗಳಿಗೆ ಧನವನ್ನು ವೆಚ್ಚಮಾಡದೆ ಬಾಹ್ಯಾಡಂಬರದಿಂದ ಲಿಂಗದೇವನು ಮೆಚ್ಚಲಾರನು.

ತ್ರಿವಿಧ ದಾಸೋಹದ ತತ್ವವನ್ನು ತಿಳಿದು ಆಚರಿಸುವುದೇ ನಿಜವಾದ ಭಕ್ತಿಯು. ಈ ವಿಷಯದಲ್ಲಿ ಅನೇಕ ಶಿವಶರಣರ ವಚನಗಳುಂಟು. ಸ್ವತಂತ್ರ ಸಿದ್ಧಲಿಂಗ ಶಿವಯೋಗಿಗಳು—

ಗುರುವನರಿದು ಗುರುಭಕ್ತಿಯ ಮಾಡಿ, ಲಿಂಗವನರಿದು ಲಿಂಗಭಕ್ತಿಯ ಮಾಡಿ, ಜಂಗಮವನರಿದು ಜಂಗಮ ಭಕ್ತಿಯ ತ್ರಿವಿಧವನೂ ಒಂದೆಂದು ಕಂಡು ತ್ರಿವಿಧ ಭಕ್ತಿಸಂಪನ್ನರಾದವರ ಭಕ್ತರೆಂಬೆನು; ಅಲ್ಲದವರ ಉದರ ಪೋಷಕರೆಂಬೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ.

ಈ ಪ್ರಕಾರ ತ್ರಿವಿಧ ದಾಸೋಹವಿಲ್ಲದೆ ಮಾಡುವ ಭಕ್ತಿಯು ವ್ಯರ್ಥವೆಂದು ವಚನಕಾರರ ಅಭಿಪ್ರಾಯವು.

—ಮಹಾಂತದೇವರು ಮುರುಘಾಮಠ,

ಧಾರವಾಡ.

# 'ಪ್ಲೇಗ್ ಸಂಜೀವಿನಿಯ' ಗುಣವರ್ಣನೆ.

[ಚಿಟಗುಪ್ಪಿಯ ಸುಪ್ರಸಿದ್ಧ ಡಾಕ್ಟರರಾದ ಶ್ರೀ. ಎನ್ ಬಿ. ಶಾಲಿಗ್ರಾಮು ಎಂ. ಬಿ. ಬಿ. ಎಸ್ ಇವರು ನಮ್ಮ 'ಪ್ಲೇಗ್ ಸಂಜೀವಿನಿಯ' ಮಾತ್ರೆಗಳನ್ನು ಉಪಯೋಗಿಸಿ ಸಂತೋಷಪಟ್ಟು ಈ ಕೆಳಗಿನಂತೆ ಪತ್ರ ಬರೆದಿದ್ದಾರೆ]

ಡಾ. ಎನ್. ಬಿ. ಶಾಲಿಗ್ರಾಮು,
ಎಂ ಬಿ ಬಿ. ಎಸ್. (ಮುಂಬೈ)

ಚಿಟಗುಪ್ಪಾ (ಮೊಯಿನಾಬಾದ)
ತಾ ೧೭-೨-೧೯೩೪.

ಶ್ರೀಮನ್ನಿರಂಜನ ಗುರುಮತಕಲ್ಲು ಶ್ರೀ ಶಾಂತವೀರ ಸ್ವಾಮಿಗಳವರಿಂದ
ಸಿದ್ಧಗೊಳಿಸಲ್ಪಟ್ಟ

## "ಪ್ಲೇಗ್ ಸಂಜೀವಿನಿ ಮಾತ್ರೆಯು"

ಒಳ್ಳೇ ತೃಪ್ತಿಕರವಾದ ಗುಣಕಾರಿಯಾಗಿರುವದೆಂಬುದನ್ನು ತಿಳುಹಿಸಲು ನನಗೆ ಅತ್ಯಾನಂದವೆನಿಸುತ್ತಿದೆ.

ಪ್ಲೇಗ ಹಾವಳಿಯ ಕಾಲದಲ್ಲಿ ಚಿಟಗುಪ್ಪಿಯ ಮಿ. ಹುಪ್ರಿಕರ, ವಾಯ್, ಜಿ. ಇವರು ಇದನ್ನು ನನ್ನ ಕಡೆಗೆ ಕಳುಹಿಸಿದ್ದರು. ನಾನು ಇದನ್ನೇ ಅನೇಕ ಕಡೆಗಳಲ್ಲಿ ಉಪಯೋಗಿಸಿ, ಇದು ಪ್ಲೇಗ ಉಂಟಾಗುವುದನ್ನು ಪ್ರತಿಬಂಧಿಸುವದಲ್ಲದೆ ಬಹ್ವಂಶವಾಗಿ ಪ್ಲೇಗ ಬೇನೆ ಬಂದ ಮೇಲೆಯೂ ಗುಣಪಡಿಸಬಲ್ಲುದೆಂದು ಕಂಡುಕೊಂಡಿದ್ದೇನೆ. ಇವನ್ನೇ ಉಪಯೋಗಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸೂಚಿಸುತ್ತೇನೆ ಮತ್ತು ಇದರ ಜೊತೆಗೆ ಕಳುಹಿಸಲ್ಪಡುವ ಸೂಚನೆಗಳ ಪ್ರಕಾರ ಇದನ್ನು ಉಪಯೋಗಿಸಿದರೆ ಇದು ಸಂಪೂರ್ಣವಾಗಿ ಗುಣಪಡಿಸುವದೆಂದು ನಾನು ನಿಶ್ಚಯವಾಗಿ ಹೇಳುತ್ತೇನೆ.

(ರುಜು) ಎನ್. ಬಿ. ಶಾಲಿಗ್ರಾಮು,
ಎಮ್. ಬಿ. ಬಿ. ಎಸ್.
ಪ್ಲೇಗಿನ ಮುಖ್ಯಾಧಿಕಾರಿ, ಮೋಯಿನಾಬಾದ
(ಪಾಯಿಗಾ)

(ಮೂಲ ಪ್ರತಿಯ ಭಾಷಾಂತರ)

---

**DR. N. B. SHALIGRAM,**
M. B B S. (BOM.)

CHITAGOPA (Moinabad)
D. 17th February 1934.

IT GIVES ME IMMENSE PLEASURE TO STATE HERE THAT THE RESULTS OF

## *"PLAGUE SANJIWINI MATRA"*

MANUFACTURED BY

## SHANTWIR SWAMI OF GURUMATKAL

ARE QUITE SATISFACTORY.

This was sent to me by Mr. Huprikar Y. G of Chitagopa, during the plague epidemic. I have used the same in many cases and found preventive as well as curative to a great extent. I strongly recommend to use the same, which, I assure will give complete relief, it it is used according to the instructions accompanying it.

Sd/- N. B. SHALIGRAM.
M. B. B. S (BOM.)
Special Plague Officer, Moinabad.
(Paigah.)

(True copy.)

# ರಾಷ್ಟ್ರೀಯ ಸಭೆಯ ಚಟುವಟಿಕೆಗಳು.

### ಬಿಟ್ಟುಕೊಟ್ಟರು.

ಡಾ. ಮಹಮ್ಮದ ಅಲಮೆರವರು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ತಮ್ಮ ಸದಸ್ಯತ್ವವನ್ನು ಬಿಟ್ಟುಕೊಟ್ಟಿದ್ದಾರೆ.

### ಸರದಾರರು.

ಬಿಡುಗಡೆಯಾದಕೂಡಲೆ ಸರದಾರ ವಲ್ಲಭಭಾಯಿ ಪಟೇಲರವರು ತಮ್ಮ ಪೂರ್ವದ ರಾಷ್ಟ್ರೀಯ ಸಭೆಯ ಅಧ್ಯಕ್ಷಪದವನ್ನು ಪುನಃ ಸ್ವೀಕರಿಸಿದರು.

ಇವರು ತಮ್ಮ ಭಾಷಣದಲ್ಲಿ— "ಧೈರ್ಯಗೆಡುವವರು ಸಂಕುಚಿತ ಸ್ವಭಾವದವರಿರುತ್ತಾರೆ. ನಾವು ಧೈರ್ಯದಿಂದ ನಡೆಯಬೇಕು. ಶಾಸನ ಸಭೆಗಳಿಗೆ ಹೋಗುವವರಿಗೆ ಸಹಾಯಮಾಡಬೇಕು. ಅವರನ್ನು ಕಳಿಸಿದ ಮೇಲೆ ಶಾಸನ ಸಭಾ ಪ್ರವೇಶಕ್ಕೆ ಒಪ್ಪಿಗೆ ಇಲ್ಲದ ಕೆಲಸಗಾರರಿಗೆ ಮುಂದೇನುಮಾಡಬೇಕೆಂಬುದನ್ನು ನಾನು ಹೇಳುವೆನು" ಎಂದರು.

### ಪಂ. ಜವಾಹರಲಾಲರನ್ನು ಬಿಡುವದಿಲ್ಲವೆ?

ಕಾಮನ್ಸ ಸಭೆಯಲ್ಲಿ ಪಂ. ಜವಾಹರಲಾಲರ ಮುಕ್ತತೆಯ ಬಗ್ಗೆ ವಿಚಾರಿಸಲು ಸರ ಸ್ಯಾಮ್ಯುಅಲ್ ಹೂಅರ ಇವರು— ಪಂ ಜವಾಹರಲಾಲರಿಗೆ ರಾಜದ್ರೋಹಾತ್ಮಕ ಮತ್ತು ಉತ್ತೇಜಕ ಮೂರು ಭಾಷಣಗಳನ್ನು ಮಾಡಿದ ಬಗ್ಗೆ ಶಿಕ್ಷೆಯಾಗಿದೆ ಆದುದರಿಂದ ಅವರನ್ನು ಬಿಡುವದು ಶಕ್ಯವಿಲ್ಲವೆಂದು ಹೇಳಿದರು.

### ಕರ್ನಾಟಕದ ಸ್ವಾರ್ಥತ್ಯಾಗ.

ಕರನಿರಾಕರಣೆಯ ಚಟುವಟಿಕೆಯಲ್ಲಿ ಭಾಗ ವಹಿಸಿದ್ದ ಗುಜರಾಥದ ರೈತರಿಗೆ ಸಂದೇಶ ಕೊಡುವಾಗ್ಗೆ ಸರದಾರ ವಲ್ಲಭಭಾಯಿ ಪಟೇಲರವರು "ಕರ್ನಾಟಕದಲ್ಲಿಯು ಶೂರ ಒಕ್ಕಲಿಗರು ಸ್ವಾರ್ಥ ತ್ಯಾಗದ ವಿಷಯದಲ್ಲಿ ನಿಮ್ಮೊಡನೆ ಸ್ಪರ್ಧೆ ಮಾಡಿದ್ದಾರೆ. ಅಲ್ಲಿಯ ಸ್ತ್ರೀಪುರುಷರು ತಮ್ಮ ಅನೇಕ ಕಷ್ಟಗಳ ಪರಿವೆಯಿಲ್ಲದೆ ಕೆಲಸ ಮಾಡಿದ್ದಾರೆ. ಅವರೂ ಈಗ ಅನ್ನಾನ್ನಗತಿಕರಾಗಿದ್ದಾರೆ. ಅವರ ಶೌರ್ಯದ ಮತ್ತು ಸ್ವಾರ್ಥತ್ಯಾಗದ ಉದಾಹರಣೆಗಳನ್ನು ಕೇಳಿ ನನಗೆ ಆಶ್ಚರ್ಯವೆನಿಸುತ್ತಿದೆ." ಎಂದರು.

### ಮುಂದಿರ ಪ್ರವೇಶ ಬಿಲ್ಲಿನ ಭವಿಷ್ಯ.

ಇದೇ ತಿಂಗಳ ೨೩ನೆಯ ತಾರೀಖಿನ ದಿವಸ ಮುಂದಿರ ಪ್ರವೇಶ ಬಿಲ್ಲಿನ ಚರ್ಚೆಯು ಅಸೆಂಬ್ಲಿ ಅಧಿವೇಶನದಲ್ಲಿ ನಡಿಯುವುದಿದೆ. ಅದಕ್ಕಾಗಿ ಶ್ರೀ. ರಾಜಗೋಪಾಲಾಚಾರ್ಯರವರು ಅಸೆಂಬ್ಲಿಯ ಹಿಂದು ಸಭಾಸದರಿಗೆ ಈ ಕೆಳಗಿನಂತೆ ಬರೆದುಕೊಂಡಿದ್ದಾರೆ—

"ಅಸೆಂಬ್ಲಿಯ ಹಿಂದು ಸಭಾಸದರ ಬಹುಮತವು ಮಂದಿರ ಪ್ರವೇಶಕ್ಕೆ ಅನುಕೂಲವಿಲ್ಲವೆಂದು ಮಹಾತ್ಮಾಜಿಯವರಿಗೆ ತಿಳಿದರೆ ಅವರು ಹೆಚ್ಚಿಗೆ ವಿಚಾರಿಸುವುದು ಬೇಡವೆಂದು ಸೂಚಿಸುವರು. ಈ ಬಿಲ್ಲು ಅಗತ್ಯವಾದ ಹೆಚ್ಚು ಕಡಿಮೆಗಳಿಂದ ಹಿಂದು ಸಭಾಸದರ ಸ್ಪಷ್ಟವಾದ ಬಹುಮತದಿಂದಲೇ ತೀರ್ಮಾನವಾಗಬೇಕೆಂದು ಮಹಾತ್ಮಾಜಿಯವರ ಇಚ್ಛೆಯಿದೆ. ಹಿಂದುಗಳಲ್ಲದ ಸದಸ್ಯರ ಸಹಾಯದಿಂದ ನಿರ್ಣಯವಾಗುವುದಕ್ಕೆ ಗಾಂಧೀಜಿಯವರ ಒಪ್ಪಿಗೆಯಿಲ್ಲ. ಆದುದರಿಂದ ಈ ಬಿಲ್ಲಿಗೆ ತಾವು ಅನುಕೂಲರಾಗಿದ್ದೀರಾ? ಅಥವಾ ಪ್ರತಿಕೂಲರಾಗಿದ್ದೀರಾ? ಜಾಗ್ರತೆ ತಿಳಿಸುವ ಕೃಪೆಯಾಗಲಿ"

## ಬಾಣಂತಿಯರಿಗೊಂದು ಮಹೋಪಕಾರ.

ಪ್ರಸೂತಿ ವೇದನೆಯನ್ನು ಕೇಳಿ ಸ್ತ್ರೀಯರಂತೂ ಇರಲಿ ಪುರುಷರೆಷ್ಟೋ ಜನರು ಅಂಜುತ್ತಿರುವರಲ್ಲ? ಅದೆಂಥ ಕಷ್ಟ! ಎಂಥ ಆಪತ್ತು, ಪ್ರಸೂತಿ ವೈರಾಗ್ಯವನ್ನೇ ತಂದು ಕೊಡುತ್ತಲಿದೆ. ಆದರೆ ಈಗ ಸ್ತ್ರೀಯರ ದೈವ ತೀರಿಯತೆಂದೆನ್ನಬಹುದು. ಲಿವ್ಹರ್ಪೂಲದ ಒಬ್ಬ ಡಾಕ್ಟರರು ಸುಖವಾಗಿ ಏನೂ ನೋವಾಗದಂತೆ ಹಡೆಯುವ ಯುಕ್ತಿಯನ್ನು ಶೋಧಿಸಿದ್ದಾರೆ. ಅದನ್ನು ಅನೇಕರು ನೂರಾರು ಜನ ಗರ್ಭಿಣಿ ಸ್ತ್ರೀಯರಿಗೆ ಉಪಯೋಗಿಸಿ ಅವರು ಯಾವ ಕಷ್ಟವೂ ಇಲ್ಲದೆ ಸುಖವಾಗಿ ಹಡೆಯುವರೆಂದು ಕಂಡುಕೊಂಡಿದ್ದಾರೆ. ಆ ಯಂತ್ರವು ಒಳ್ಳೇ ಸುಲಭವಾಗಿದೆ. ಆ ಯಂತ್ರವನ್ನು ಹೆಡೆಯಲಿರುವ ಸ್ತ್ರೀಯು ಒಂದು ಕಡೆ ಒತ್ತಿದರೆ ಕೂಡಲೆ ಅವಳ ಶ್ವಾಸದಲ್ಲಿ 'ನಾಯಟ್ರಸ ಆಕ್ಸಾಯಡ' ಎಂಬ ದುಃಖ ಪರಿಹಾರಕ ವಾಯುವು ಪ್ರವೇಶಿಸುತ್ತದೆ. ಇದರಿಂದ ಆ ಸ್ತ್ರೀಯಳಿಗೆ ಸಾವಕಾಶವಾಗಿ ಮಬ್ಬು ಬರುತ್ತದೆ. ಮಬ್ಬು ಹೆಚ್ಚಾದಂತೆ ಕೈಯಲ್ಲಿಯ ಯಂತ್ರವು ಕೈ ತಪ್ಪಿ ವಾಯು ನಿಲ್ಲುತ್ತದೆ. ಮತ್ತು ಈ ಕೈತಪ್ಪಿದ ಕೂಡಲೇ ಸುಖವಾಗಿ ಪ್ರಸವವಾಗುತ್ತಿದೆ. ಇದನ್ನು ದೊಡ್ಡ ದೊಡ್ಡ ಡಾಕ್ಟರರು ಬಂದೇ ಉಪಯೋಗಿಸುವ ಅವಶ್ಯಕತೆಯಿಲ್ಲ. ಊರಲ್ಲಿಯ ಸೂಲಗಿತ್ತಿಯು ಸಹ ಇದನ್ನು ಉಪಯೋಗಿಸಬಲ್ಲಳು. ಇಂಗ್ಲಂಡದಲ್ಲಿಯ ಎಷ್ಟೋ ಆಸ್ಪತ್ರೆಗಳು ಈ ಯಂತ್ರವನ್ನು ತರಿಸಿಕೊಂಡಿರುವವೆಂದು ತಿಳಿಯುತ್ತಿದೆ. ಇನ್ನುಮುಂದೆ ಸ್ತ್ರೀಯರ ಭಾಗ್ಯಕ್ಕೆ ಎಣೆಯುಂಟೆ?

### ಪ್ರತಿದಿನವೂ ಮೂವತ್ತು ಜನ ಹಿಂದು ಸ್ತ್ರೀಯರ ಧರ್ಮಾಂತರ!

ಬ್ಯಾ. ಮುಕುಂದರಾವ ಜಯಕರ ಇವರು ಡಾ. ಮುಂಜೆ ಇವರಿಗಾಗಿ ಉಪಹಾರ ಕೂಟವನ್ನೇರ್ಪಡಿಸಿದ ಕಾಲದಲ್ಲಿ ಹೇಳಿದುದೇನೆಂದರೆ—"ಹಿಂದು ಮಹಾಸಭೆಯವರು ಅನಾಥ ಹಿಂದು ವಿಧವೆಯರ ಸಂರಕ್ಷಣೆಯನ್ನು ತೀವ್ರವೇ ಕೈಕೊಳ್ಳಬೇಕು. ನನಗೆ ದೊರೆತಿರುವ ಅಂಕೆಗಳ ಮೇಲಿಂದ ನೋಡಿದರೆ ಪ್ರತಿದಿನವೂ ೩೦ ಹಿಂದು ತರುಣಿಯರನ್ನು ಧರ್ಮಾಂತರಗೊಳಿಸಿ ಮುಸಲ್ಮಾನರನ್ನಾಗಿ ಮಾಡುತ್ತಾರೆ. ಕಳೆದ ೨ ವಾರಗಳಲ್ಲಿಯೇ ಮುಂಬಯಿ ಇಲಾಖೆಯಲ್ಲಿ ೧೧ ಜನ ಹಿಂದು ಸ್ತ್ರೀಯರನ್ನು ಎತ್ತಿಕೊಂಡು ಹೋದುದು ಕಂಡು ಬಂದಿದೆ. ಇಂಥ ಸ್ಥಿತಿಯಲ್ಲಿ ಅನಾಥಾಲಯದ ಅವಶ್ಯಕತೆ ಎಷ್ಟಿದೆಯೆಂಬುದು ವಿದಿತವಾಗುವದಿಲ್ಲವೆ?"

---

—೧೯೩೦ನೆಯ ಇಸವಿಯಲ್ಲಿ ಮಹಾತ್ಮಾಜಿಯವರು ಎರವಡಾ ಕಾರಾಗೃಹದಲ್ಲಿ ರಚಿಸಿದ ಹಿಂದಿ ಪದ್ಯಗಳನ್ನು ಮಿ. ಜೆ. ಎಸ್. ಹಾಯಲ್ಯಾಂಡ ಎಂಬವರು ಇಂಗ್ಲೀಷಿನಲ್ಲಿ ಭಾಷಾಂತರ ಮಾಡಿ Songs from Prison ಎಂಬ ಹೆಸರಿನಿಂದ ಪ್ರಸಿದ್ಧಪಡಿಸಿರುವರು.

ಶಾ. ಶ. ೧೮೫೬ನೆಯ ಆಷಾಢ ಶು|| ೧೧ ಸೋಮವಾರ.

# ವೀರಶೈವ ಮತ ಮತ್ತು ಆರ್ಯಸಮಾಜ.

ವೀರಶೈವ ಮತತತ್ವಗಳಿಗೂ ಆರ್ಯಸಮಾಜದ ತತ್ವಗಳಿಗೂ ಇರುವ ಮುಖ್ಯ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ವಿವರಿಸಿದ್ದಾಗಿದೆ. ಈ ವಿವೇಚನೆಯಿಂದ ವೀರಶೈವ ಮತವು ಆರ್ಯಸಮಾಜಕ್ಕಿಂತ ಎಷ್ಟೋ ಶ್ರೇಷ್ಠವಾದುದೆಂದು ನಿಷ್ಪಕ್ಷಪಾತಿಗಳಿಗೆ ತೋರದಿರಲಾರದು.

ಒಂದು ಧರ್ಮ ಅಥವಾ ಮತಕ್ಕೆ ತತ್ವಜ್ಞಾನ, ಸಮಾಜ ವ್ಯವಸ್ಥೆ ಮತ್ತು ಆಚಾರಗಳೆಂಬ ಮೂರು ಮುಖ್ಯಾಂಗಗಳಿರುತ್ತವೆ. ದೇವರು, ಜೀವ, ಸ್ವರ್ಗ, ನರಕ, ಮೋಕ್ಷ ಮೊದಲಾದ ಅಪ್ರತ್ಯಕ್ಷ ಭಾವನಾಗಮ್ಯ ಮತ್ತು ಪಾರಲೌಕಿಕ ಸಂಬಂಧವಾದ ಸಂಗತಿಗಳು ತತ್ವಜ್ಞಾನಕ್ಕೆ ಸಂಬಂಧಪಟ್ಟವುಗಳಾಗಿವೆ. ಇವುಗಳ ವ್ಯತ್ಯಾಸ ಅಥವಾ ತಾರತಮ್ಯಗಳು ಜನಸಾಮಾನ್ಯರಿಗೆ ತಿಳಿಯತಕ್ಕವುಗಳಲ್ಲ. ಈ ಸಂಬಂಧವಾಗಿ ಯೋಚಿಸುವ ಜನರು ಕೂಡಾ ಜನಾಂಗದಲ್ಲಿ ಬಹು ವಿರಳ.

ಸಾಮಾಜಿಕ, ಸಾಂಪತ್ತಿಕ, ಶೈಕ್ಷಣಿಕ ಮೊದಲಾದ ವಿಷಯಗಳು ಸಮಾಜದ ವ್ಯವಸ್ಥೆಗೆ ಸೇರಿದವುಗಳಾಗಿವೆ. ಇವು ಪ್ರತ್ಯಕ್ಷ, ಬುದ್ಧಿಗಮ್ಯ ಮತ್ತು ಇಹಲೋಕದ ಜೀವಿತಕ್ಕೆ ಸಂಬಂಧಪಟ್ಟವುಗಳಾಗಿವೆ. ಆದುದರಿಂದ ಇವುಗಳ ವ್ಯತ್ಯಾಸ ಅಥವಾ ತಾರತಮ್ಯಗಳನ್ನು ಅನೇಕರು ತಿಳಿದುಕೊಳ್ಳಲು ಸಮರ್ಥರಿರುತ್ತಾರೆ. ಇವುಗಳ ಸುಖಸೌಲಭ್ಯಗಳ ಮೇಲಿಂದಲೇ ಮತಧರ್ಮಗಳ ಮೇಲು ಕೀಳುಗಳನ್ನು ನಿರ್ಧರಿಸುವವರೇ ಹೆಚ್ಚು.

ಈ ಐಹಿಕ ಮತ್ತು ಪಾರಲೌಕಿಕ ಸುಖಶಾಂತಿಗಳನ್ನು ಸಾಧಿಸಲು ಅನುಕೂಲವಾಗಿ ತೋರುವ ಸ್ನಾನ, ಪೂಜೆ, ಧ್ಯಾನ, ಊಟ ಮೊದಲಾದ ನಿತ್ಯ ಮತ್ತು ನೈಮಿತ್ತಿಕ ಕ್ರಿಯೆಗಳ ವಿಷಯದಲ್ಲಿರುವ ನಿಯಮ ನಿಬಂಧನೆಗಳೆಲ್ಲಾ ಆಚಾರಗಳು. ಇವುಗಳೇ ಧರ್ಮಗಳೆಂದು ತಿಳಿದುಕೊಂಡಿರುವವರೂ ಬಹು ಜನರು. ಈ ಆಚಾರಗಳು ಯಾವ ಮತಧರ್ಮಗಳಲ್ಲಿ ಎಷ್ಟು ಕಡಿಮೆಯಾಗಿರುತ್ತವೆಯೋ ಅಥವಾ ಅನಿರ್ಬಂಧವಾಗಿರುತ್ತವೆಯೋ ಅಷ್ಟು ಆ ಮತಧರ್ಮಗಳು ಒಳ್ಳೆಯವುಗಳೆಂದು ತಿಳಿದು ಕೊಳ್ಳುವವರೂ ಈಗ ಹೆಚ್ಚುತ್ತಿದ್ದಾರೆ. ಈ ಪ್ರಕಾರ ಆಚಾರಗಳ ತಾರತಮ್ಯಗಳ ಮೇಲೆಯೇ ಧರ್ಮಾಧರ್ಮಗಳನ್ನು ಯೋಚಿಸುವ ಜನರು ಅತ್ಯಧಿಕ.

ಈ ಪ್ರಕಾರ ಇತರಕ್ಕ ಮತಧರ್ಮಗಳ ಮುಖ್ಯಾಂಗಗಳಲ್ಲಿ ಮುಖ್ಯವಾದ ಸಮಾಜ ವ್ಯವಸ್ಥೆಯನ್ನು ಕುರಿತು ಸ್ವಲ್ಪ ಯೋಚಿಸೋಣ. ಆರ್ಯ ಸಮಾಜ ಸ್ಥಾಪಕರಾದ ಶ್ರೀ. ಸ್ವಾಮಿ ದಯಾನಂದ ಸರಸ್ವತಿಯವರು ರಚಿಸಿದ ಸತ್ಯಾರ್ಥ ಪ್ರಕಾಶ ಗ್ರಂಥವನ್ನೇ ಇಲ್ಲಿ ಆ ಸಮಾಜದ ತತ್ವಗಳಿಗೆ ಆಧಾರವಾಗಿ ಇಟ್ಟುಕೊಂಡಿದೆ.

## ಸಮಾಜ ವ್ಯವಸ್ಥೆ.

ಮೇಲಣ ಅಪ್ರತ್ಯಕ್ಷವಾದ ವಿಷಯಗಳ ಸತ್ಯಾಸತ್ಯತೆಗಳನ್ನು ನಿರ್ಧರಿಸುವುದು ಯಾರಿಗೂ ಶಕ್ಯವಿಲ್ಲ. ಆದುದರಿಂದ ಅವರವರ ಬುದ್ಧಿಭಾವನೆಗಳಿಗೆ ಆ ಸಂಗತಿಗಳನ್ನು ಬಿಟ್ಟು ಪ್ರತ್ಯಕ್ಷವಾದ ಈ ಸಮಾಜ ವ್ಯವಸ್ಥೆಯ ವಿಷಯವಾಗಿ ಯೋಚಿಸೋಣ.

**ಆರ್ಯ ಸಮಾಜದಲ್ಲಿ** ಗುಣಕರ್ಮಗಳಿಂದ ಬ್ರಾಹ್ಮಣಾದಿ ನಾಲ್ಕು ವರ್ಣಗಳಿವೆ. ವಿದ್ಯೆಕಲಿಸುವವರು ಬ್ರಾಹ್ಮಣರು, ಯುದ್ಧ ಮಾಡುವವರು, ಕ್ಷತ್ರಿಯರು. ಒಕ್ಕಲತನ, ವ್ಯಾಪಾರ ಮಾಡುವವರು ವೈಶ್ಯರು. ತಿಡಿಗೆ ಮತ್ತು ಬೇರೆ ಸೇವೆಯ ಕೆಲಸ ಮಾಡುವವರು ಶೂದ್ರರು.

ಈ ನಾಲ್ಕು ವರ್ಣಗಳು ಸ್ತ್ರೀಯರಿಗೂ ಇವೆ. ಬ್ರಾಹ್ಮಣ ಪುರುಷನು ಬ್ರಾಹ್ಮಣ ಸ್ತ್ರೀಯಳನ್ನೇ ಲಗ್ನವಾಗಬೇಕು. ಸ್ತ್ರೀಯರು ೧೪ ವರುಷದವರು ಪುರುಷರು ೨೫ ವರುಷದವರು ಆದ ನಂತರ ಅವರವರ ಗುಣ ಕರ್ಮಗಳನ್ನು ನೋಡಿ ಇಂತಿಂತಹ ವರ್ಣದವರೆಂದು ಗೊತ್ತುಮಾಡಬೇಕು.

ಆನೆಯ ವರುಷಕ್ಕೆ ಮಕ್ಕಳನ್ನು ಗುರುಕುಲಕ್ಕೆ ಕಳುಹಿಸಬೇಕು. ದ್ವಿಜರ ಗಂಡು ಮಕ್ಕಳಿಗೆ ಯಜ್ಞೋಪವೀತ ಸಂಸ್ಕಾರವನ್ನು ಮನೆಯಲ್ಲಿಯೇ ಮಾಡಿ ಗುರುಕುಲಕ್ಕೆ ಕಳುಹಿಸಬೇಕು. ಆ ಮೇಲೆ ಗುರುಕುಲದಲ್ಲಿಯೂ ಸಂಸ್ಕಾರ ಪಡೆಯಬೇಕು. ಹಣ್ಣುಮಕ್ಕಳಿಗೆ ತಂದೆತಾಯಿಗಳಾಗಲಿ ಅಥವಾ ಅಧ್ಯಾಪಕರಾಗಲಿ ಗಾಯತ್ರಿ ಮಂತ್ರವನ್ನು ಅರ್ಥಸಹಿತವಾಗಿ ಉಪದೇಶಿಸಬೇಕು.

ಶೂದ್ರನು ಸತ್ಕುಲಪ್ರಸೂತನೂ ಶುಭಲಕ್ಷಣಯುಕ್ತನೂ ಆಗಿದ್ದಲ್ಲಿ ಅವನಿಗೆ ಮಂತ್ರ ಸಂಹಿತೆಯನ್ನು ಬಿಟ್ಟು ಉಳಿದ ಸಮಸ್ತ ಶಾಸ್ತ್ರಗಳನ್ನೂ ಅಧ್ಯಯನ ಮಾಡಿಸಬಹುದು. (ಸ. ೩-೪ ಸಮುಲ್ಲಾಸ.)

ಆರ್ಯಸಮಾಜದ ಈ ವರ್ಣ ವಿಚಾರವು ಅವ್ಯವಹಾರ್ಯ, ಅಸಂಗತ, ಅನುಚಿತ ಮತ್ತು ಅನರ್ಥಕಾರಿಯಾದುದಾಗಿದೆ. ಹಿಂದು ಜನಾಂಗದಲ್ಲಿ ನಾನಾ ಭಿನ್ನಭೇದ ಮೇಲು ಕೀಳು ಪರಾವಲಂಬನೆಗಳನ್ನುಂಟುಮಾಡುವುದಾಗಿದೆ.

ಆನೆಯ ವರುಷಕ್ಕೆ ದ್ವಿಜರ ಗಂಡುಮಕ್ಕಳಿಗೆ ಮಾತ್ರ ಯಜ್ಞೋಪವೀತ ಸಂಸ್ಕಾರವಾಗಬೇಕಂತೆ. ಇವರಿಗೆ ವೇದಾಧ್ಯಯನದ ಅಧಿಕಾರವಿದೆ. ಶೂದ್ರನು ಸತ್ಕುಲೋತ್ಪನ್ನನೂ ಶುಭಲಕ್ಷಣಯುಕ್ತನೂ ಆಗಿದ್ದರೆ ಮಂತ್ರ ಸಂಹಿತೆಯ ಬಿಟ್ಟು ಬೇರೆ ವಿದ್ಯೆಯನ್ನು ಕಲಿಯಬೇಕಂತೆ.

ಪುರುಷನು ೨೫ ವರುಷಗಳ ನಂತರ ಅತನ ಗುಣ ಕರ್ಮಗಳಿಂದ ವರ್ಣ ವಿಭಾಗದಲ್ಲಿ ಸೇರುವನಷ್ಟೆ, ಆ ಮುಂಚೆ ಆನೆಯ ವರುಷದಲ್ಲಿಯೇ ಅತನು ಇಂತಹ ವರ್ಣದವನೇ ಎಂದು ಗೊತ್ತುಮಾಡುವುದು ಹೇಗೆ? ದ್ವಿಜರ ಮಕ್ಕಳು ದ್ವಿಜರಿಂತಲೂ ಶೂದ್ರನ

ಮಗನು ಶೂದ್ರನೆಂತಲೂ ತಿಳಿದೇ ಅನೆಯ ವರುಷದಲ್ಲಿ ಕೆಲವರಿಗೆ ಸಂಸ್ಕಾರ ಕೊಟ್ಟು ಕೆಲವರು ಅಸಂಸ್ಕಾರಿಗಳಾಗುವಂತೆ ಮಾಡುವರಷ್ಟೆ. ಎಂದಮೇಲೆ ಜನ್ಮದಿಂದಲೇ ವರ್ಣವನ್ನು ಅನುಸರಿಸಿದಂತಾಗಲಿಲ್ಲವೆ?

ಅನೆಯ ವರುಷದ ದ್ವಿಜರ ಮಗನು ಅಜನೆಯ ವರುಷದಲ್ಲಿ ಶೂದ್ರನಾಗಬಹುದು. ಮತ್ತು ಅನೆಯ ವರುಷದಲ್ಲಿರುವ ಶೂದ್ರನ ಮಗನು ಅಜನೆಯ ವರುಷದಲ್ಲಿ ಬ್ರಾಹ್ಮಣನಾಗಬಹುದು. ಎಂದ ನೇಲೆ ಮೊದಲಿನ ಸಂಸ್ಕಾರಗಳೆಲ್ಲ ವ್ಯರ್ಥವಲ್ಲವೆ? ಮತ್ತು ಶೂದ್ರರ ಮಕ್ಕಳ ವಿಷಯದಲ್ಲಿ ಪಕ್ಷಪಾತ ಮಾಡಿದಂತಾಗಲಿಲ್ಲವೆ?

ಅಡಿಗೆ ಮಾಡುವುದು ಶೂದ್ರರ ಕೆಲಸವಾದಮೇಲೆ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯರೆಲ್ಲಾ ಅಡಿಗೆಯನ್ನು ಮಾಡಬಾರದಾಯಿತು. ಬ್ರಾಹ್ಮಣ ಸ್ತ್ರೀಯಳು ವಿದ್ಯಾಭ್ಯಾಸ ಮಾಡಿಸಬೇಕು. ಕ್ಷತ್ರಿಯ ಸ್ತ್ರೀಯಳು ಕತ್ತಿಯನ್ನೇ ಹಿಡಿಯಬೇಕು. ಬೇರೆ ಕೈಕಸಬನ್ನು ಇವರು ಮಾಡಬಾರದಾಯಿತು. ಏಕೆಂದರೆ ಈ ಎಲ್ಲಾ ವರ್ಣಗಳ ಸ್ತ್ರೀ ಪುರುಷರೂ ತಮ್ಮ ತಮ್ಮ ವರ್ಣಗಳಿಗುಚಿತವಾಗಿರುವ ಕಾರ್ಯಗಳನ್ನೇ ಮಾಡುತ್ತಿರಬೇಕಂತೆ.

**ವೀರಶೈವ ಮತದಲ್ಲಿ** ಈ ಅತ್ಯಂತ ಅನರ್ಥಕಾರಿಯಾದ ವರ್ಣ ವಿಚಾರವೇ ಇಲ್ಲ. ಮನುಷ್ಯರಲ್ಲಿ ಭಕ್ತ, ಭವಿ ಎಂಬೆರಡೇ ವರ್ಗಗಳಿವೆ. ಲಿಂಗಾಂಗಿಯಾದ ಚಾಂಡಾಲ ಮೊದಲುಗೊಂಡು ಬ್ರಾಹ್ಮಣನವರೆಗಿನವರೆಲ್ಲರೂ ಭಕ್ತರು. ಲಿಂಗಧಾರಿಗಳಾಗದಿದ್ದವರೆಲ್ಲರೂ ಒಂದು ವರ್ಗದವರು.

ಭಕ್ತರಾದ ಸಕಲ ಸ್ತ್ರೀಪುರುಷರೂ ಧಾರ್ಮಿಕ ಸಂಸ್ಕಾರಗಳಿಗೆ ಸಮಾನಾಧಿಕಾರಿಗಳು. ಜೀವಿತಕ್ಕೆ ಅವಶ್ಯಕವಾದ ಎಲ್ಲ ಕೈಕಸಬುಗಳನ್ನೂ ಬೇಕಾದವರು ಮಾಡಬಹುದು. ಇಷ್ಟೇ ಅಲ್ಲ. ಏನಾದರೊಂದು ಕೈಕಸಬನ್ನು ಮಾಡಲೇಬೇಕಾದುದು ಲಿಂಗಾಂಗಿಗಳ ಕರ್ತವ್ಯ.

ಒಬ್ಬ ಶಿವಶರಣನು ಶಿವಾನುಭವ ಮಂಟಪದಲ್ಲಿ ಧರ್ಮೋಪದೇಶವನ್ನು ಮಾಡುತ್ತಿರಬಹುದು. ಆ ಶರಣನು ಮನೆಯಲ್ಲಿ ತನ್ನ ಪತಿಪುತ್ರರಿಗೂ ಅತಿಥಿಗಳಿಗೂ ಅಡಿಗೆ ಮಾಡಿ ನೀಡಿ ಅವರ ಸೇವೆಯನ್ನು ಮಾಡಬಹುದು. ಅನಂತರ ರಾಟೆಯಲ್ಲಿ ನೂಲು ತೆಗೆಯುತ್ತಲೂ ಕಾಲ ಕಳೆಯಬಹುದು. ಇದೇ ಪ್ರಕಾರ ಒಬ್ಬ ಶರಣನು ಧರ್ಮೋಪದೇಶಕನಾಗಿಯೂ ಪ್ರತಿನಿತ್ಯ ಅಡವಿಯಿಂದ ಕಟ್ಟಿಗೆಯನ್ನು ತೆಗೆದುಕೊಂಡು ಬಂದು ಶಿವಭಕ್ತರಿಗೆ ಮಾರಿ ತಾನು ಸ್ವಾವಲಂಬನೆಯಿಂದ ಜೀವಿಸಬಹುದು.

ಈ ಪ್ರಕಾರ ವರ್ಣಗಳ ಸಂಕೋಲೆಯಿಲ್ಲದೆ ಸ್ವಾವಲಂಬನೆಯಿಂದ ಜೀವಿಸುವ ವೀರಶೈವ ಸಮಾಜ ವ್ಯವಸ್ಥೆಗೂ ಆರ್ಯಸಮಾಜದ ಅನರ್ಥಕಾರಿಯಾದ ವರ್ಣ ವ್ಯವಸ್ಥೆಗೂ ಮಹದಂತರವಿದೆಯೆಂಬುದು ಈ ಸಂಕ್ಷಿಪ್ತ ವಿವೇಚನೆಯಿಂದಲೇ ಚತುರ ವಾಚಕರಿಗೆ ವ್ಯಕ್ತವಾಗಿರಬಹುದು.

ಆರ್ಯರ ಈ ವರ್ಣ ವ್ಯವಸ್ಥೆಯೇ ಹಿಂದು ಜನಾಂಗದ ಈಗಿನ ರಾಜಕೀಯ, ಸಾಮಾಜಿಕ, ಸಾಂಪತ್ತಿಕ ಮೊದಲಾದ ಎಲ್ಲ ದುರವಸ್ಥೆಗಳಿಗೂ ಮೂಲವು. ಈ ವರ್ಣ ಕಲ್ಪನೆಯು ನಿರ್ಮೂಲವಾದ ವಿನಾ ಕ್ರೈಸ್ತ, ಮುಸಲ್ಮಾನ, ಬೌದ್ಧ ಧರ್ಮಗಳಂತೆ ಹಿಂದು ಧರ್ಮವು ಸುಸಂಘಟಿತವೂ ತೇಜೋಮಯವೂ ಆಗಲಾರದು.

ಇವರ ಆಶ್ರಮ ಧರ್ಮದಲ್ಲಿ ಸ್ತ್ರೀಯರಿಗೆ ಏನೂ ಸಮಾನತ್ವವಿಲ್ಲ. ಪುರುಷನು ವಾನಪ್ರಸ್ಥ ಮತ್ತು ಸನ್ಯಾಸಾಶ್ರಮಗಳನ್ನು ವಹಿಸಿದಾಗ ಸತಿಯು ಆತನ ಇಷ್ಟದಂತೆಯೇ ವರ್ತಿಸಬೇಕು. ಸ್ತ್ರೀಯಳಿಗೆ ಈ ಆಶ್ರಮಗಳನ್ನು ಸ್ವೀಕರಿಸುವ ಅಧಿಕಾರವಿಲ್ಲ. ಶೂದ್ರನಿಗೆ ಸನ್ಯಾಸಾಶ್ರಮದ ಅಧಿಕಾರವಿಲ್ಲ. ಈ ಪ್ರಕಾರ ವರ್ಣಾಶ್ರಮಗಳ ಕಟ್ಟುಗಳಿಂದ ದ್ವಿಜರು, ಸ್ತ್ರೀಯರು, ಶೂದ್ರರು ನಾನಾ ಭಿನ್ನ ಭೇದಗಳಿಗೆ ಒಳಗಾಗಿ ಜನಾಂಗದಲ್ಲಿ ಅನೇಕ ಪಂಗಡಗಳನ್ನುಂಟುಮಾಡುತ್ತಿದ್ದಾರೆ.

## ಆಚಾರ.

**ಆರ್ಯಸಮಾಜವು** ಯಜ್ಞೋಪವೀತವನ್ನು ಧರಿಸಿ ಸಂಧ್ಯಾವಂದನೆಮಾಡಬೇಕೆಂತಲೂ ಅಗ್ನಿಯಲ್ಲಿ ತುಪ್ಪ ಮೊದಲಾದ ವುಗಳಿಂದ ಆಹುತಿಯನ್ನು ಕೊಡಬೇಕೆಂತಲೂ ಮಾಂಸಹಾರಿಗಳು ಮುಟ್ಟಿದ ಪದಾರ್ಥಗಳನ್ನು ಸೇವಿಸಕೂಡದೆಂತಲೂ ಹಿಂಸೆ ಕಳವು, ವಿಶ್ವಾಸಘಾತ ಕಪಟ ಮೊದಲಾದ ದುರ್ಗುಣಗಳಿಂದ ಸಂಪಾದಿಸಿದ ಸಸ್ಯಾಹಾರವು ಕೂಡಾ ಅಭಕ್ಷ್ಯವಾದುದೆಂದೂ ಹೇಳುತ್ತಿದೆ.

(ಸ. ಗಂ. ಪಮುಲ್ಲಾಸ)

**ವೀರಶೈವ ಮತವು** ಲಿಂಗಧಾರಣ ಹೊಂದಿ ಲಿಂಗಪೂಜೆಯನ್ನು ಮಾಡಬೇಕೆಂತಲೂ ಅಗ್ನಿಯಲ್ಲಿ ತುಪ್ಪ ಮೊದಲಾದವುಗಳನ್ನು ಹಾಕಿ ವ್ಯರ್ಥ ಮಾಡದೆ ಶಿವಜ್ಞಾನಿಗಳ ತೃಪ್ತಿಗಾಗಿ ವಿನಿಯೋಗಿಸಬೇಕೆಂತಲೂ ಶಿವಭಕ್ತರಲ್ಲದವರು ಮುಟ್ಟಿದ ಆಹಾರಗಳನ್ನು ಸೇವಿಸಬಾರದೆಂತಲೂ ಹೇಳುತ್ತದೆ. ಆರ್ಯ ಸಮಾಜವು ನಾಲಿಗೆಯನ್ನು ಬಿಗಿ ಹಿಡಿಯಲು ಈಗಿನ ಪದ್ಧತಿಯಂತೆ ಗೊತ್ತು ಮಾಡಿದೆ. ವೀರಶೈವ ಮತವಾದರೋ ಪ್ರಾಚೀನ ರೀತಿಗನುಸರಿಸಿ ಗೊತ್ತುಮಾಡಿದೆ.

ಆರ್ಯಸಮಾಜಕ್ಕೆ ವೇದಗಳ ವಿಷಯದಲ್ಲಿರುವ ಅಂಧ ಶ್ರದ್ಧೆ, ಯಜ್ಞಗಳ ಪ್ರಯೋಜನದ ವಿಷಯದಲ್ಲಿ ತಪ್ಪು ತಿಳುವಳಿಕೆ, ಮೊದಲಾದವುಗಳು ವಿಚಾರಪರರಿಗೆಂದೂ ಮಾನ್ಯವಾಗುವಂತಿಲ್ಲ. ಬಸವಾದಿ ಪ್ರಮಥರು ಮಾಡಿರುವ ಅದ್ಭುತವಾದ ಸಮಾಜ ಸುಧಾರಣೆಯನ್ನು ನೋಡಿಯಾದರೂ ಶಿವಶರಣರ ನಿಜಾಚರಣೆಯ ಗುಟ್ಟನ್ನು ತಿಳಿದುಕೊಳ್ಳಬೇಕಲ್ಲದೆ ಸ್ವೇಚ್ಛೆಯಾಗಿರಲು ಬರುತ್ತದೆಂದು ಭಾವಿಸಿ ಆರ್ಯ ಸಮಾಜದ ಬಲೆಯಲ್ಲಿ ಯಾವ ಲಿಂಗಾಂಗಿಗಳೂ ಬೀಳಬಾರದಾಗಿ ಕೋರಿಕೆ.

## ಮಿಸ್ ಮಾರ್ಗರೆಟ್ ಸ್ಪಿಗಲ್

ಮಹಾತ್ಮಾಜಿಯವರ ಜರ್ಮನ್ ಶಿಷ್ಯಳಾದ ಡಾ. ಮಾರ್ಗರೇಟ್ ಸ್ಪಿಗಲ್ ಇವರು ಅಹಮದಾಬಾದದಲ್ಲಿ ಮಾಯವಾಗಿದ್ದಾರೆಂದು ಪ್ರಕಟವಾಗಿದೆ. ಆದರೆ ಅವರಿಂದ್ದ ಕೋಣೆಯಲ್ಲಿ ಒಂದು ಪತ್ರವು ದೊರಕಿದೆ. ಅದರಲ್ಲಿ ಈ ಪ್ರಕಾರವಿದೆ—

"ಗಾಂಧೀಜಿಯವರ ಉಪವಾಸ ವ್ರತದ ಕಾಲಕ್ಕೆ ವರ್ಧಾದಲ್ಲಿರಬೇಕೆಂದು ಪಾದಚಾರಿಯಾಗಿ ಹೊರಟಿದ್ದೇನೆ. ಆಗಷ್ಟ ೧೯ನೆಯ ತಾರೀಖಿನವರೆಗೆ ಪಾದಚಾರಿಯಾಗಿ ಅನಂತರ ಉಗಿಬಂಡಿಯಿಂದ ವರ್ಧಾಕ್ಕೆ ಹೋಗುವೆನು"

—ಶ್ರೀಮಾನ್ ಕೆ. ಎಫ್. ನರಿಮನ್ನರು ಮುಂಬೈ ನಗರದ ಪರವಾಗಿ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಸಭಾಸದರಾಗಿ ನಿಲ್ಲುವವರಿದ್ದಾರೆ.

—ಶಹಪುರದಲ್ಲಿಯ ಹಿಂದು ಮುಸಲ್ಮಾನರ ಸಂಬಂಧವಾದ ಕಲಹದಲ್ಲಿ ಮುಸಲ್ಮಾನರ ಪರವಾಗಿ ತೀರ್ಮಾನವಾದುದಕ್ಕೆ ಶಹಾಪುರದ ನಾಗರಿಕರು ಅಸಂತುಷ್ಟರಾಗಿದ್ದಾರೆಂತಲೂ ಹಿಂದು ಮುಂದಾಳುಗಳಿಗೆ ನೀವು ೧೫ ದಿನಗಳಲ್ಲಿ ಮುಸಲ್ಮಾನರಾಗದಿದ್ದರೆ ನಿಮ್ಮ ಕೊಲೆಮಾಡುವೆವೆಂದು ಅಂಜಿಕೆಯ ಪತ್ರವನ್ನು ಯಾರೋ ಬರೆದಿದ್ದಾರೆಂತಲೂ ಪ್ರಕಟವಾಗಿದೆ.

ಮಗನು ಶೂದ್ರನೆಂತಲೂ ತಿಳಿದೇ ಆನೆಯ ವರುಷದಲ್ಲಿ ಕೆಲವರಿಗೆ ಸಂಸ್ಕಾರ ಕೊಟ್ಟು ಕೆಲವರು ಅಸಂಸ್ಕಾರಿಗಳಾಗುವಂತೆ ಮಾಡುವರಷ್ಟೆ. ಎಂದಮೇಲೆ ಜನ್ಮದಿಂದಲೇ ವರ್ಣವನ್ನು ಅನುಸರಿಸಿದಂತಾಗಲಿಲ್ಲವೆ?

ಆನೆಯ ವರುಷದ ದ್ವಿಜರ ಮಗನು ಆಜನೆಯ ವರುಷದಲ್ಲಿ ಶೂದ್ರನಾಗಬಹುದು. ಮತ್ತು ಆನೆಯ ವರುಷದಲ್ಲಿರುವ ಶೂದ್ರನ ಮಗನು ಆಜನೆಯ ವರುಷದಲ್ಲಿ ಬ್ರಾಹ್ಮಣನಾಗಬಹುದು. ಎಂದ ನೇಲೆ ಮೊದಲಿನ ಸಂಸ್ಕಾರಗಳೆಲ್ಲ ವ್ಯರ್ಥವಲ್ಲವೆ? ಮತ್ತು ಶೂದ್ರರ ಮಕ್ಕಳ ವಿಷಯದಲ್ಲಿ ಪಕ್ಷಪಾತ ಮಾಡಿದಂತಾಗಲಿಲ್ಲವೆ?

ಆಡಿಗೆ ಮಾಡುವುದು ಶೂದ್ರರ ಕೆಲಸವಾದಮೇಲೆ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯರೆಲ್ಲಾ ಆಡಿಗೆಯನ್ನು ಮಾಡಬಾರದಾಯಿತು. ಬ್ರಾಹ್ಮಣ ಸ್ತ್ರೀಯಳು ವಿದ್ಯಾಭ್ಯಾಸ ಮಾಡಿಸಬೇಕು. ಕ್ಷತ್ರಿಯ ಸ್ತ್ರೀಯಳು ಕತ್ತಿಯನ್ನೇ ಹಿಡಿಯಬೇಕು. ಬೇರೆ ಕೈಕಸಬನ್ನು ಇವರು ಮಾಡಬಾರದಾಯಿತು. ಏಕೆಂದರೆ ಈ ಎಲ್ಲಾ ವರ್ಣಗಳ ಸ್ತ್ರೀ ಪುರುಷರೂ ತಮ್ಮ ತಮ್ಮ ವರ್ಣಗಳಿಗುಚಿತವಾಗಿರುವ ಕಾರ್ಯಗಳನ್ನೇ ಮಾಡುತ್ತಿರಬೇಕಂತೆ.

**ವೀರಶೈವ ಮತದಲ್ಲಿ** ಈ ಅತ್ಯಂತ ಅನರ್ಥಕಾರಿಯಾದ ವರ್ಣ ವಿಚಾರವೇ ಇಲ್ಲ. ಮನುಷ್ಯರಲ್ಲಿ ಭಕ್ತ, ಭವಿ ಎಂಬೆರಡೇ ವರ್ಗಗಳಿವೆ. ಲಿಂಗಾಂಗಿಯಾದ ಚಾಂಡಾಲ ಮೊದಲುಗೊಂಡು ಬ್ರಾಹ್ಮಣನವರೆಗಿನವರೆಲ್ಲರೂ ಭಕ್ತರು. ಲಿಂಗಧಾರಿಗಳಾಗದಿದ್ದವರೆಲ್ಲರೂ ಒಂದು ವರ್ಗದವರು.

ಭಕ್ತರಾದ ಸಕಲ ಸ್ತ್ರೀಪುರುಷರೂ ಧಾರ್ಮಿಕ ಸಂಸ್ಕಾರಗಳಿಗೆ ಸಮಾನಾಧಿಕಾರಿಗಳು. ಜೀವಿತಕ್ಕೆ ಆವಶ್ಯಕವಾದ ಎಲ್ಲ ಕೈಕಸಬುಗಳನ್ನೂ ಬೇಕಾದವರು ಮಾಡಬಹುದು. ಇಷ್ಟೇ ಅಲ್ಲ. ಏನಾದರೊಂದು ಕೈಕಸಬನ್ನು ಮಾಡಲೇಬೇಕಾದುದು ಲಿಂಗಾಂಗಿಗಳ ಕರ್ತವ್ಯ.

ಒಬ್ಬ ಶಿವಶರಣನು ಶಿವಾನುಭವ ಮಂಟಪದಲ್ಲಿ ಧರ್ಮೋಪದೇಶವನ್ನು ಮಾಡುತ್ತಿರಬಹುದು. ಆ ಶರಣನು ಮನೆಯಲ್ಲಿ ತನ್ನ ಪತಿಪುತ್ರರಿಗೂ ಅತಿಥಿಗಳಿಗೂ ಆಡಿಗೆ ಮಾಡಿ ನೀಡಿ ಅವರ ಸೇವೆಯನ್ನು ಮಾಡಬಹುದು. ಅನಂತರ ರಾಟೆಯಲ್ಲಿ ನೂಲು ತೆಗೆಯುತ್ತಲೂ ಕಾಲ ಕಳೆಯಬಹುದು. ಇದೇ ಪ್ರಕಾರ ಒಬ್ಬ ಶರಣನು ಧರ್ಮೋಪದೇಶಕನಾಗಿಯೂ ಪ್ರತಿನಿತ್ಯ ಆಡವಿಯಿಂದ ಕಟ್ಟಿಗೆಯನ್ನು ತೆಗೆದುಕೊಂಡು ಬಂದು ಶಿವಭಕ್ತರಿಗೆ ಮಾರಿ ತಾನು ಸ್ವಾವಲಂಬನೆಯಿಂದ ಜೀವಿಸಬಹುದು.

ಈ ಪ್ರಕಾರ ವರ್ಣಗಳ ಸಂಕೋಲೆಯಿಲ್ಲದೆ ಸ್ವಾವಲಂಬನೆಯಿಂದ ಜೀವಿಸುವ ವೀರಶೈವ ಸಮಾಜ ವ್ಯವಸ್ಥೆಗೂ ಆರ್ಯಸಮಾಜದ ಅನರ್ಥಕಾರಿಯಾದ ವರ್ಣ ವ್ಯವಸ್ಥೆಗೂ ಮಹದಂತರವಿದೆಯೆಂಬುದು ಈ ಸಂಕ್ಷಿಪ್ತ ವಿವೇಚನೆಯಿಂದಲೇ ಚತುರ ವಾಚಕರಿಗೆ ವ್ಯಕ್ತವಾಗಿರಬಹುದು.

ಆರ್ಯರ ಈ ವರ್ಣ ವ್ಯವಸ್ಥೆಯೇ ಹಿಂದು ಜನಾಂಗದ ಈಗಿನ ರಾಜಕೀಯ, ಸಾಮಾಜಿಕ, ಸಾಂಪತ್ತಿಕ ಮೊದಲಾದ ಎಲ್ಲ ದುರವಸ್ಥೆಗಳಿಗೂ ಮೂಲವು. ಈ ವರ್ಣ ಕಲ್ಪನೆಯು ನಿರ್ಮೂಲವಾದ ವಿನಾ ಕ್ರೈಸ್ತ, ಮುಸಲ್ಮಾನ, ಬೌದ್ಧ ಧರ್ಮಗಳಂತೆ ಹಿಂದು ಧರ್ಮವು ಸುಸಂಘಟಿತವೂ ತೇಜೋಮಯವೂ ಆಗಲಾರದು.

ಇವರ ಆಶ್ರಮ ಧರ್ಮದಲ್ಲಿ ಸ್ತ್ರೀಯರಿಗೆ ಏನೂ ಸಮಾನತ್ವವಿಲ್ಲ. ಪುರುಷನು ವಾನಪ್ರಸ್ಥ ಮತ್ತು ಸನ್ಯಾಸಾಶ್ರಮಗಳನ್ನು ವಹಿಸಿದಾಗ ಸತಿಯು ಆತನ ಇಷ್ಟದಂತೆಯೇ ವರ್ತಿಸಬೇಕು. ಸ್ತ್ರೀಯಳಿಗೆ ಈ ಆಶ್ರಮಗಳನ್ನು ಸ್ವೀಕರಿಸುವ ಅಧಿಕಾರವಿಲ್ಲ. ಶೂದ್ರನಿಗೆ ಸನ್ಯಾಸಾಶ್ರಮದ ಅಧಿಕಾರವಿಲ್ಲ. ಈ ಪ್ರಕಾರ ವರ್ಣಾಶ್ರಮಗಳ ಕಟ್ಟುಗಳಿಂದ ದ್ವಿಜರು, ಸ್ತ್ರೀಯರು, ಶೂದ್ರರು ನಾನಾ ಭಿನ್ನ ಭೇದಗಳಿಗೆ ಒಳಗಾಗಿ ಜನಾಂಗದಲ್ಲಿ ಅನೇಕ ಪಂಗಡಗಳನ್ನುಂಟುಮಾಡುತ್ತಿದ್ದಾರೆ.

### ಆಚಾರ.

**ಆರ್ಯಸಮಾಜವು** ಯಜ್ಞೋಪವೀತವನ್ನು ಧರಿಸಿ ಸಂಧ್ಯಾವಂದನೆಮಾಡಬೇಕೆಂತಲೂ ಅಗ್ನಿಯಲ್ಲಿ ತುಪ್ಪ ಮೊದಲಾದ ವುಗಳಿಂದ ಆಹುತಿಯನ್ನು ಕೊಡಬೇಕೆಂತಲೂ ಮಾಂಸಹಾರಿಗಳು ಮುಟ್ಟಿದ ಪದಾರ್ಥಗಳನ್ನು ಸೇವಿಸಕೂಡದೆಂತಲೂ ಹಿಂಸೆ ಕಳವು, ವಿಶ್ವಾಸಘಾತ ಕಪಟ ಮೊದಲಾದ ದುರ್ಗುಣಗಳಿಂದ ಸಂಪಾದಿಸಿದ ಸಸ್ಯಾಹಾರವು ಕೂಡಾ ಅಭಕ್ಷ್ಯವಾದುದೆಂದೂ ಹೇಳುತ್ತಿದೆ.

(ಸ. ಗಂ. ಪಮುಲ್ಲಾಸ)

**ವೀರಶೈವ ಮತವು** ಲಿಂಗಧಾರಣ ಹೊಂದಿ ಲಿಂಗಪೂಜೆಯನ್ನು ಮಾಡಬೇಕೆಂತಲೂ ಅಗ್ನಿಯಲ್ಲಿ ತುಪ್ಪ ಮೊದಲಾದವುಗಳನ್ನು ಹಾಕಿ ವ್ಯರ್ಥ ಮಾಡದೆ ಶಿವಜ್ಞಾನಿಗಳ ತೃಪ್ತಿಗಾಗಿ ವಿನಿಯೋಗಿಸಬೇಕೆಂತಲೂ ಶಿವಭಕ್ತರಲ್ಲದವರು ಮುಟ್ಟಿದ ಆಹಾರಗಳನ್ನು ಸೇವಿಸಬಾರದೆಂತಲೂ ಹೇಳುತ್ತದೆ. ಆರ್ಯ ಸಮಾಜವು ನಾಲಿಗೆಯನ್ನು ಬಿಗಿ ಹಿಡಿಯಲು ಈಗಿನ ಪದ್ಧತಿಯಂತೆ ಗೊತ್ತು ಮಾಡಿದೆ. ವೀರಶೈವ ಮತವಾದರೋ ಪ್ರಾಚೀನ ರೀತಿಗನುಸರಿಸಿ ಗೊತ್ತುಮಾಡಿದೆ.

ಆರ್ಯಸಮಾಜಕ್ಕೆ ವೇದಗಳ ವಿಷಯದಲ್ಲಿರುವ ಅಂಧ ಶ್ರದ್ಧೆ, ಯಜ್ಞಗಳ ಪ್ರಯೋಜನದ ವಿಷಯದಲ್ಲಿ ತಪ್ಪು ತಿಳುವಳಿಕೆ, ಮೊದಲಾದವುಗಳು ವಿಚಾರಪರರಿಗೆಂದೂ ಮಾನ್ಯವಾಗುವಂತಿಲ್ಲ. ಬಸವಾದಿ ಪ್ರಮಥರು ಮಾಡಿರುವ ಅದ್ಭುತವಾದ ಸಮಾಜ ಸುಧಾರಣೆಯನ್ನು ನೋಡಿಯಾದರೂ ಶಿವಶರಣರ ನಿಜಾಚರಣೆಯ ಗುಟ್ಟನ್ನು ತಿಳಿದುಕೊಳ್ಳಬೇಕಲ್ಲದೆ ಸ್ವೇಚ್ಛೆಯಾಗಿರಲು ಬರುತ್ತದೆಂದು ಭಾವಿಸಿ ಆರ್ಯ ಸಮಾಜದ ಬಲೆಯಲ್ಲಿ ಯಾವ ಲಿಂಗಾಂಗಿಗಳೂ ಬೀಳಬಾರದಾಗಿ ಕೋರಿಕೆ.

---

## ಮಿಸ್ ಮಾರ್ಗರೆಟ್ ಸ್ಪಿಗಲ್

ಮಹಾತ್ಮಾಜಿಯವರ ಜರ್ಮನ್ ಶಿಷ್ಯಳಾದ ಡಾ. ಮಾರ್ಗರೇಟ್ ಸ್ಪಿಗಲ್ ಇವರು ಅಹಮದಾಬಾದದಲ್ಲಿ ಮಾಯವಾಗಿದ್ದಾರೆಂದು ಪ್ರಕಟವಾಗಿದೆ. ಆದರೆ ಅವರಿಂದ ಕೋಣೆಯಲ್ಲಿ ಒಂದು ಪತ್ರವು ದೊರಕಿದೆ. ಅದರಲ್ಲಿ ಈ ಪ್ರಕಾರವಿದೆ—

"ಗಾಂಧೀಜಿಯವರ ಉಪವಾಸ ವ್ರತದ ಕಾಲಕ್ಕೆ ವರ್ಧಾದಲ್ಲಿರಬೇಕೆಂದು ಪಾದಚಾರಿಯಾಗಿ ಹೊರಟಿದ್ದೇನೆ. ಆಗಷ್ಟ ೧೬ನೆಯ ತಾರೀಖಿನವರೆಗೆ ಪಾದಚಾರಿಯಾಗಿ ಅನಂತರ ಆಗಿಬಂಡಿಯಿಂದ ವರ್ಧಾಕ್ಕೆ ಹೋಗುವೆನು"

—ಶ್ರೀಮಾನ್ ಕೆ. ಎಫ್. ನರಿಮನ್ನರು ಮುಂಬೈ ನಗರದ ಪರವಾಗಿ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಸಭಾಸದರಾಗಿ ನಿಲ್ಲುವವರಿದ್ದಾರೆ.

—ಶಹಪುರದಲ್ಲಿಯ ಹಿಂದು ಮುಸಲ್ಮಾನರ ಸಂಬಂಧವಾದ ಕಲಹದಲ್ಲಿ ಮುಸಲ್ಮಾನರ ಪರವಾಗಿ ತೀರ್ಮಾನವಾದುದಕ್ಕೆ ಶಹಾಪುರದ ನಾಗರಿಕರು ಅಸಂತುಷ್ಟರಾಗಿದ್ದಾರೆಂತಲೂ ಹಿಂದು ಮುಂದಾಳುಗಳಿಗೆ ನೀವು ೧೫ ದಿನಗಳಲ್ಲಿ ಮುಸಲ್ಮಾನರಾಗದಿದ್ದರೆ ನಿಮ್ಮ ಕೊಲೆಮಾಡುವೆವೆಂದು ಅಂಜಿಕೆಯ ಪತ್ರವನ್ನು ಯಾರೋ ಬರೆದಿದ್ದಾರೆಂತಲೂ ಪ್ರಕಟವಾಗಿದೆ.

## ಸಮಾಚಾರ ಸಂಗ್ರಹ.

—ಇಂಗ್ಲಂಡಿನ ಮುಖ್ಯ ಮಂತ್ರಿಗಳಾದ ಮಿ. ಮ್ಯಾಕೊಡ್ನಾಲ್ಡರು ಕಾನಡಾಕ್ಕೆ ಹೋಗುವಾಗ್ಗೆ ಅವರ ವಿಮಾನವು ಕಳಚಿ ಬಿದ್ದು ಕೆಲವರಿಗೆ ಭಯಂಕರ ಗಾಯಗಳಾಗಿವೆ.

—ಹೈದರಾಬಾದಿನಲ್ಲಿ ವರ್ತಮಾನಪತ್ರ, ಮಾಸಿಕ ಮುಂತಾದ ವುಗಳ ಸಂಪಾದಕರ ಮತ್ತು ಆ ವ್ಯವಸಾಯದಲ್ಲಿರುವವರ ಸಂಘ ವೊಂದು ಸ್ಥಾಪಿತವಾಗಿದೆ.

—ಕಳೆದ ೧೪ನೆಯ ತಾರೀಖಿನ ದಿವಸ ಹೈದರಾಬಾದಿನ ಯುವರಾಜರಾದ ಪ್ರಿನ್ಸ ಆಝಮ್‌ಜಾಹ ಇವರು ಸೇನಾಪತಿಯ ವಸ್ತ್ರಗಳನ್ನು ಧಾರಣಮಾಡಿದರು. ಆ ಕಾಲಕ್ಕೆ ೧೧ ತೋಪುಗಳು ಹಾರಿಸಲ್ಪಟ್ಟವು.

—ಬೆಳಗಾವ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ವಿಶೇಷ ಮಳೆ ಯಾಗಿರುವುದರಿಂದ ಬೆಳೆಗಳೆಲ್ಲ ಕೆಟ್ಟುಹೋಗಿವೆ.

—ರವೀಂದ್ರನಾಥ ಟಾಗೋರರವರು ಮಹಾತ್ಮಾಜಿಯವರು ಕಲಕತ್ತೆಗೆ ಬಂದಾಗ್ಗೆ ತಮ್ಮ ಶಾಂತಿನಿಕೇತನಕ್ಕೆ ಆಗಮಿಸಬೇಕೆಂದು ತಂತಿ ಮಾಡಿದ್ದರು. ಆದರೆ ಕಾರ್ಯ ವಿಪುಲತೆಯ ಕಾರಣ ಬರುವ ದಾಗುವದಿಲ್ಲವೆಂದು ಗಾಂಧೀಜಿಯವರು ತಿಳಿಸಿರುವರು.

—ತಿನ್ನೆವೆಲ್ಲಿ ಎಂಬಲ್ಲಿ ಒಂದು ದೇವಾಲಯಕ್ಕೆ ಬೆಂಕಿ ಹತ್ತಿ ದ್ದರಿಂದ ೩೯ ಜನರು ಸುಟ್ಟುಕೊಂಡು ಸತ್ತರು.

—ಜರ್ಮನಿಯ ೭೭ ಜನ ದೊಂಬಿಗಾರರನ್ನು ಯಮಸದನಕ್ಕಟ್ಟಿ ದೊಂಬಿಯನ್ನಡಗಿಸಿದೆನೆಂದು ಹೇರ ಹಿಟ್ಲರರು ರಾಯ ಸ್ಟ್ಯಾಗದಲ್ಲಿ ಭಾಷಣ ಮಾಡುತ್ತ ಹೇಳಿದರು.

—ಮುಂದಿನ ವರುಷ ಹೈದರಾಬಾದ ನಿಝಾಮ ಸಾಹೇಬರ ರಾಜ್ಯಾರೋಹಣ ರೌಪ್ಯ ಮಹೋತ್ಸವವು ಒಂದು ವಾರದ ವರೆಗೆ ನಡೆಯುವದು.

—ಮುಂಬಯಿಯಲ್ಲಿ ಅಲ್ಯಾರ್ಕ ಆಶಡೌನ ಕಂಪನಿಯ ಎಣ್ಣೆಯ ಭಂಡಾರಕ್ಕೆ ಬೆಂಕಿ ಬಿದ್ದು ಭಯಂಕರ ಸ್ಫೋಟ ವಾಯಿತು. ಆದರ ರಭಸಕ್ಕೆ ಸಿಮೆಂಟಿನಿಂದ ಕಟ್ಟಿದ ಆ ಭಂಡಾರವು ಕಿತ್ತುಬಿದ್ದುದಲ್ಲದೆ ಅಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ಆಕಾಶಕ್ಕೆ ತೂರಲ್ಪಟ್ಟರು. ಒಬ್ಬನು ಸತ್ತನು.

—ಸಿಮಲಾದಲ್ಲಿ ಒಬ್ಬ ಸಂಸ್ಥಾನಿಕರು ತಮ್ಮ ಬೇಟೆಯ ನಾಯಿಗಳೊಡನೆ ವಾಸಿಸುತ್ತಿರಲು ಅವರ ಆಪ್ತರಲ್ಲೊಬ್ಬರು ಒಂದು ರಾತ್ರಿ ಹೊರಗೆ ಹೋಗಲು ಆ ನಾಯಿಗಳೆಲ್ಲ ಅವರನ್ನು ಹರಿದು ತಿಂದುಹಾಕಿದವು. ಮರುದಿವಸ ನೋಡಲು ೩-೪ ಎಲು ಪುಗಳು ಮಾತ್ರ ಬಿದ್ದಿದ್ದವಂತೆ.

—ನಡಿಯಾದ ಎಂಬಲ್ಲಿ ಸಾಲೆಯ ೧೦೦೦ ಸಣ್ಣ ಹುಡುಗರು ೧೦೦೦ ದುಡ್ಡುಗಳನ್ನು ಮಹಾತ್ಮಾಜಿಯವರಿಗೆ ಅರ್ಪಿಸಿದರು.

—ಪಲ್ಯಾಣ ಗ್ರಾಮ ಎಂಬಲ್ಲಿ ಒಬ್ಬ ಗಿರಣಿಯ ಒಡೆಯರ ಅನಸೂಯಾ ಬೆನ್ ಎಂಬ ಕುಮಾರಿಯು ತಮ್ಮ ಗಿರಣಿಯಲ್ಲಿ ಕೆಲಸ ಮಾಡುವ ಆದಿಜನ ಕೂಲಿಕಾರರ ೧೨೭ ಮಕ್ಕಳಿಗೆ ಸ್ವತಃ ಶಾಲೆ ಯನ್ನು ಕಟ್ಟಿಸಿ ಶಿಕ್ಷಣವನ್ನು ಕೊಡುತ್ತಿರುವರು.

—ದೇವಾಸ ಸಂಸ್ಥಾನದ ರಾಜಪುತ್ರರಾದ ವಿಕ್ರಮಸಿಂಹ ರವರು ಇಲ್ಲಿಯವರೆಗೆ ಕೊಲ್ಲಾಪುರ ಅರಮನೆಯಲ್ಲಿದ್ದುಕೊಂಡು, ವಿದ್ಯಾಭ್ಯಾಸಗಳನ್ನು ತೀರಿಸಿ, ರಾಜ್ಯ ಸೂತ್ರವನ್ನು ಕೈಕೊಳ್ಳಲು ಪುನಃ ದೇವಾಸಕ್ಕೆ ಹೊರಡುವರು. ಅವರ ಹೆಸರಿನ ವಾಟರ ವರ್ಕ್ಸದ ಅನಾವರಣ ಸಮಾರಂಭವಾಯಿತು.

### ಯಾದಗಿರಿ ಶಂಕರ ಸಂಸ್ಕೃತ ಕಾಲೇಜಿನ ಪರೀಕ್ಷಾ-ಪರಿಣಾಮ.

ಮದ್ರಾಸ ಯುನಿವರ್ಸಿಟಿ ಬಿ. ವಿದ್ವಾನ್ ಪರೀಕ್ಷೆಯಲ್ಲಿ

(೧) ರುದ್ರಮೂರ್ತಿ ನಾಗೇನ ಹಳ್ಳಿ.

ಕಲಕತ್ತಾ ಕಾವ್ಯ ಮಧ್ಯಮ ಪರೀಕ್ಷೆಯಲ್ಲಿ

(೧) ಬಸವರಾಜ ಭೇರಿಗೆ
(೨) ಮಲ್ಲಿಕಾರ್ಜುನ ಗುಳೇದಗುಡ್ಡ
(೩) ವೀರಭದ್ರ ಶರ್ಮ ಎಡ್ರಾಮಿ
(೪) ಗುಂಡಾರಾಧ್ಯ ಮೇದನಾಪುರ

ಕಲಕತ್ತಾ ವ್ಯಾಕರಣಾದ್ಯ ಪರೀಕ್ಷೆಯಲ್ಲಿ

(೧) ಷಣ್ಮುಖಾರ್ಯ ಇಳಯಾಳು

ಕಲಕತ್ತಾ ಕಾವ್ಯಾದ್ಯ ಪರೀಕ್ಷೆಯಲ್ಲಿ

(೧) ಗುರುಶಿದ್ಧಯ್ಯಾ ನಾಯ್ಕಲ್
(೨) ಗುರುಲಿಂಗಯ್ಯಾ

ಇದೇ ವರ್ಷದಿಂದಲೇ ಮದ್ರಾಸ್ ಯುನಿವರ್ಸಿಟಿ ಪರೀಕ್ಷೆಯ ಅಭ್ಯಾಸವು ಕಾಲೇಜಿನಲ್ಲಿ ಪ್ರಾರಂಭಿಸಲ್ಪಟ್ಟದ್ದು, ಪರೀಕ್ಷೆಗೆ ಹೋದ ಇಬ್ಬರಲ್ಲಿ. ಒಬ್ಬ ವಿದ್ಯಾರ್ಥಿಯು ಬಿ. ವಿದ್ವಾನ್ ಪರೀಕ್ಷೆಯಲ್ಲಿ ಪಾಸಾದುದು ಶ್ರೇಯಸ್ಕರವಾಮದಾಗಿದೆ.

ಪ್ರಿನ್ಸಿಪಾಲ,
ಶಂಕರ ಸಂಸ್ಕೃತ ಕಾಲೇಜ ಯಾದಗಿರಿ.


## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವನ್ನೆಯ್ದುವಂತೆ ಅನಂತ ಸುಗಂಧಮಯ ಕುಸುಮಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—
ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,
ತುಮಕೂರು. (ಮೈಸೂರು ಸ್ಟೇಟ್)

# ಪ ತ್ರ ಗ ಳ ಸಾ ರಾ ಂ ಶ .

**ಈ "ಶರಣಸಂದೇಶ" ಸಂಪಾದಕರ ಸನ್ನಿಧಿಗೆ-**

ತಾವು ತಮ್ಮ ಪ್ರಸಿದ್ಧ ಪತ್ರಿಕೆಯಲ್ಲಿ ಈ ಕೆಳಗಿನ ಸಂಗತಿಯನ್ನು ಪ್ರಸಿದ್ಧಿಸುವಿರೆಂದು ನಂಬುತ್ತೇನೆ.

ವಿಜಾಪುರ ಜಿಲ್ಲಾ ಮುದ್ದೇಬಿಹಾಳ ತಾಲೂಕ ಪೈಕೆ ನಾಲತವಾಡದ ಹತ್ತರ ದಕ್ಕಸಿಗ ಎಂಬ ಒಂದು ಗ್ರಾಮವಿದೆ. ಅಲ್ಲಿ ಕನಕವ್ವನೆಂಬ ಒಬ್ಬ ಶಿಂತ್ಯಜ ಹೆಣ್ಣುಮಗಳು ಸಾಬು ಎಂಬ ಹೆಸರಿನ ಬಾಲಕನನ್ನು ಹಡೆದಿರುವಳು. ಈ ಹುಡುಗನು ತನಗೆ ಪುರುಷ ಸಂಯೋಗವಿಲ್ಲದೆ ಹುಟ್ಟಿದನೆಂದು ಅಕೆಯು ಹೇಳುತ್ತಾಳೆ. ಆ ಹುಡುಗನು ಈಗ ೬ ವರ್ಷದವನಿದ್ದು ಬೇಕಾದವರು ಬೇಕಾದ ಲೆಕ್ಕಗಳನ್ನು ಹೇಳಿದರೂ ಅವುಗಳ ಉತ್ತರವನ್ನು ಕೂಡಲೇ ಹೇಳಿ ಬಿಡುತ್ತಾನೆ. ವ್ಯಾಪಾರಸ್ಥರು ಸಹ ತಮ್ಮ ವ್ಯವಹಾರದ ಲೆಕ್ಕಗಳನ್ನು ಅವನ ಕಡೆಯಿಂದಲೇ ಮಾಡಿಸುತ್ತಾರೆ. ಅವನನ್ನು ಪರೀಕ್ಷಿಸಲು ನಾಲತವಾಡದ ಹೆಡ್‌ಮಾಸ್ತರರಾದ ವೀರಪ್ಪ ರಾಚಪ್ಪ ಹೂಲಿಗೇರಿ (೩ನೇ ವರ್ಷ ಟ್ರೇಂಡ) ಇವರು ಅವನಿಗೆ ಲೆಕ್ಕ ಹೇಳಿದರು. ಅವನು ಸರಿಯಾಗಿ ಉತ್ತರ ಹೇಳಿದ್ದರಿಂದ ಸಂತುಷ್ಟರಾಗಿ ಅವನಿಗೆ ನಾಲ್ಕು ಆಣೆಗಳನ್ನು ಕೊಟ್ಟರು. ಇದರಂತೆ ಸ್ಥಳೀಯ ಸುಬ್ಬಣ್ಣ ಮಾಸ್ತರರೂ ಲೆಕ್ಕಗಳನ್ನು ಹೇಳಿದರು. ಇಷ್ಟೇ ಅಲ್ಲದೆ ಈ ಮಾಸ್ತರರಿಗೆ ಅವನೂ ಕೆಲವು ಲೆಕ್ಕಗಳನ್ನು ಕೇಳಿದನು. ಅವನು ಹೇಳಿದ ಲೆಕ್ಕವು ಹೀಗೆ ಇದೆ—

ನಾಲ್ಕು ಮೊಲೆಯ ನಾಲ್ಕು ಎಮ್ಮೆಗಳಿವೆ. ಮೂರು ಮೊಲೆಯ ನಾಲ್ಕು ಎಮ್ಮೆಗಳಿವೆ. ೨ ಮೊಲೆಯ ನಾಲ್ಕು ಎಮ್ಮೆಗಳಿವೆ. ಇವುಗಳೆಲ್ಲವನ್ನು ಮೂರು ಮಂದಿ ಅಣ್ಣತಮ್ಮಂದಿರಿಗೆ ಎಮ್ಮೆಗಳೂ ಮತ್ತು ಮೊಲೆಗಳೂ ಸರಿಯಾಗಿ ಬರುವಂತೆ ಹಂಚಿಕೊಡಿರಿ.

ಹುಡುಗನ ಬುದ್ಧಿ ಚಾತುರ್ಯವನ್ನು ಕಂಡು ಎಲ್ಲರಿಗೆ ಇವನೊಬ್ಬನು ಮಹಾಪುರುಷನೆಂಬ ಭಾವನೆಯಾಗಿದೆ. ಬೇಕಾದವರು ಬಂದು ಪರೀಕ್ಷೆ ಮಾಡಿದರೂ ಅಡ್ಡಿಯಿಲ್ಲ. ಮತ್ತು ಅಂಥವರು ಅವಶ್ಯವಾಗಿ ಬರಬೇಕೆಂದು ನಮ್ಮ ವಿನಂತಿ ಅದೆ.

ಇತಿ ತಮ್ಮ ವಿಶ್ವಾಸಿಕ,

ತಾರೀಖು ೧೩-೭-೧೯೩೪. } **ಅಮೀನಸಾ ರಾಜೇಸಾ ಮಾಗಿ**

---

**ಹಿಂಡುವ ದನಗಳ ಸಂರಕ್ಷಣೆ ಬಿಲ್ಲು.**
**ಧರ್ಮದ ಹೆಸರಿನಲ್ಲಿ ಕ್ರೂರವಾದ ಅತ್ಯಾಚಾರವು.**

ಗದಗ ನಾಂಜರಪೋಳ ಸಂಘದ ಸಾಧಾರಣ ಸಭೆಯು ತಾ. ೧೦-೭-೩೪ನೆಯ ದಿವಸ ಶ್ರೀಯುತ ಕುಬೇರಪ್ಪ ಪರಪ್ಪ ಗದಗ ಇವರ ಅಧ್ಯಕ್ಷತೆಯಲ್ಲಿ ಸೇರಿ ಮೇಲೆ ಕಾಣಿಸಿದ ವಿಷಯಗಳ ವಿಚಾರ ಮಾಡಿ ಕೆಳಗಿನಂತೆ ಸರ್ವಾನುಮತದಿಂದ ಠರಾವುಗಳು ಪಾಸಾದವು.

ರಾಯಬಹದ್ದೂರ ರಘುವೀರಸಿಂಹ ಇವರು ದಿಲ್ಲಿ ಎಸೆಂಬ್ಲಿಯಲ್ಲಿ ತಂದಿರುವ "ಹಿಂಡುವ ದನಗಳ ಸಂರಕ್ಷಣೆಯ ಬಿಲ್ಲು" ದೇಶದ ಸಾರ್ವತ್ರಿಕ ಕಲ್ಯಾಣವನ್ನು ಚಿಂತಿಸುವದರಿಂದ ಅದನ್ನು ಈ ನಮ್ಮ ಸಂಸ್ಥೆಯು ಸಮರ್ಥಿಸುವದಲ್ಲದೆ ಎಸೆಂಬ್ಲಿಯ ಎಲ್ಲ ಸದಸ್ಯರೂ ಇದಕ್ಕೆ ಬೆಂಬಲಕೊಡಬೇಕೆಂದು ಆವರಿಗೆ ಆಗ್ರಹಪೂರ್ವಕ ಕೇಳಿಕೊಳ್ಳುತ್ತದೆ. (ಇದನ್ನು ಎಸೆಂಬ್ಲಿ ಸೆಕ್ರೆಟರಿಯವರಿಗೆ ತಾರಿನಿಂದ ಕಳುಹಿಸಲಾಯಿತು.)

ಈ ಠರಾವಿನ ಪ್ರತಿಯನ್ನು ಕರ್ನಾಟಕ ಎಸೆಂಬ್ಲಿ ಪ್ರತಿನಿಧಿಗಳಾದ ರಾ. ಬ ಬಿ. ಎಲ್. ಪಾಟೀಲ ಇವರಿಗೆ ಕಳುಹಿಸಿ ಅವರು ಅದನ್ನು ಪೂರ್ಣವಾಗಿ ಸಮರ್ಥಿಸಬೇಕೆಂದು ಈ ಸಂಸ್ಥೆಯು ವಿಜ್ಞಾಪಿಸುತ್ತದೆ.

"ಮದರಾಸ ಇಲಾಖಾ ಕುಂಭಕೋಣಂ ಮತ್ತು ಎಲ್ಲೂರು ಮೊದಲಾದ ಸ್ಥಳಗಳಲ್ಲಿ ಧರ್ಮದ ಹೆಸರಿನಿಂದಾದ ಅಮಾನುಷ ಅತ್ಯಾಚಾರವನ್ನು ಈ ಸಭೆಯು ತೀವ್ರವಾಗಿ ನಿಷೇಧಿಸುವದಲ್ಲದೆ ಮದ್ರಾಸ ನಾಮದಾರ ಗವ್ಹರ್ನರ ಸಾಹೇಬರು ಜನತೆಯ ನೈತಿಕ ಮತ್ತು ಆರೋಗ್ಯಕ್ಕೆ ವಿರೋಧವಾದ ಈ ಕ್ರೂರ ಪದ್ಧತಿಗಳನ್ನು ನಿಲ್ಲಿಸಲು ಕೇಳಿಕೊಳ್ಳುತ್ತದೆ" (ಈ ಠರಾವು ಮದರಾಸ ನಾಮದಾರ ಗವ್ಹರ್ನರ ಖಾಯಮ್ಮೆಟ ಸೆಕ್ರೇಟರಿಯವರಿಗೆ ತಾರಿನಿಂದ ಕಳುಹಿಸಲಾಯಿತು.)

---

**ಈ ಶಿವಯೋಗ ಮಂದಿರ.**

ಈ ವರ್ಷ ಈ ಸಂಸ್ಥೆಯಿಂದ ಕಲಕತ್ತಾ ಸಂಸ್ಕೃತ ಪರೀಕ್ಷೆಗೆ (ಬಾಂಬೆ ಸೆಂಟರಕ್ಕೆ) ಕಳುಹಿಸಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆ ೧೨. ಇದರಲ್ಲಿ ತೇರ್ಗಡೆ ಹೊಂದಿದವರು ಕೆಳಗೆ ಬರೆದಂತೆ.

**ವ್ಯಾಕರಣ ಮಧ್ಯಮ ಮತ್ತು ಕಾವ್ಯ ಆದ್ಯ.**

ಸೀಟ ನಂಬರು ಳಿಗಲಜ ರೇಣುಕಾಚಾರ್ಯರು ಅಂಳಿ

| | | | |
|---|---|---|---|
| | | ಕಟ್ಟೆ | ೨ ನೆ ಕ್ಲಾಸ |
| | ಜಗಲಲ ಬಸವಲಿಂಗ ದೇಶಿಕರು | | |
| | ಶಿ. ಮಂದಿರ | ೨ | ೧ ,, |

**ವ್ಯಾಕರಣ ಆದ್ಯ.**

| | | | |
|---|---|---|---|
| ೫೦ | ಗುರುಸಿದ್ಧ ದೇವರು ಬೊಮ್ಮನ ಹಳ್ಳಿ | ೧ | ,, |
| ೫೨ | ಮಲ್ಲಿಕಾರ್ಜುನದೇವರು ಹುಬ್ಬಳ್ಳಿ | ೧ | ,, |
| ೫೧ | ಶಿವಬಸವದೇವರು ಶಿ. ಮಂದಿರ | ೧ | ,, |
| ೫೩ | ರುದ್ರದೇಶಿಕರು ಎಡಹಳ್ಳಿ | ೧ | ,, |

**ವೇದಾಂತ ಆದ್ಯ.**

| | | | |
|---|---|---|---|
| ೨೩೫ | ನೀಲಕಂಠ ದೇವರು ಶಿರಸಂಗಿ | ೨ | ,, |
| ೨೩೬ | ಬಸವಲಿಂಗದೇವರು ಕೊಪ್ಪ | ೨ | ,, |
| ೨೩೭ | ಗಂಗಾಧರದೇವರು ಹಾಳಕೇರಿ | ೨ | ,, |
| ೨೩೮ | ಚಂದ್ರಶೇಖರದೇವರು ಅಡ್ನೂರ | ೨ | ,, |
| ೨೩೯ | ಸಂಗಮೇಶ್ವರದೇವರು ಕುರಹಟ್ಟಿ | ೨ | ,, |

ಈ ರೀತಿಯಾಗಿ ೧೧ ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವದು ಆನಂದದ ಸಂಗತಿಯು. ಕಳೆದ ವರುಷವಾದರೂ ಇಲ್ಲಿಂದ ೭ ಜನ ವಿದ್ಯಾರ್ಥಿಗಳು ಕುಳಿತು ಎಲ್ಲರೂ ಉತ್ತೀರ್ಣರಾಗಿದ್ದಾರೆ. ಈ ಕಲಕತ್ತಾ ಸಂಸ್ಕೃತ ಪರೀಕ್ಷೆಯ ಅಭ್ಯಾಸದ ತರಗತಿಯಲ್ಲಿಯು ನಿನ್ನಿವ್ಹರ್ಸಿಟಿ ಪದ್ಧತಿಯಂತೆ ಮೇಲಿಂದಮೇಲೆ ಹೊಸಹೊಸ ಗ್ರಂಥಗಳು ನಿಯೋಜಿಸಲ್ಪಡುತ್ತವೆ. ಆ ಪ್ರಕಾರ ಈ ವರ್ಷದ ಪರೀಕ್ಷಾ ಗ್ರಂಥಗಳನ್ನು ಅಭ್ಯಾಸಮಾಡಿ ಮೇಲ್ಕಂಡಂತೆ ಎಲ್ಲರೂ ಪಾಸಾಗಿದ್ದಾರೆ. ಇದರಿಂದ ಈ ಸಂಸ್ಥೆಯಲ್ಲಿಯ ಅಭ್ಯಾಸ ಹಾಗು ಶಿಕ್ಷಣ ಕ್ರಮ ಇವುಗಳ ಪರಿಸ್ಥಿತಿಯ ಹ್ಯಾಗಿದೆ ಎಂಬುದನ್ನು ಸಮಾಜಾಭಿಮಾನಿಗಳು ಸಹಜವಾಗಿ ಊಹಿಸಬಹುದು.

ಶಿವಯೋಗಮಂದಿರ, } **ಈ. ಬಸವಲಿಂಗ ದೇಶಿಕರು**
ತಾ. ೧೬-೭-೩೪. } **ಶಿ. ಮಂದಿರ,**
**ವ್ಹಾ. ಪ್ರೆಸಿಡೆಂಟ.**

---

## ಜಾತ್ರಿ ಕಮಿಟಿಯ ಸೆಕ್ರೆಟರಿಯಿಂದ

ಶ್ರೀಮನ್ಮಹಾ ಅಥಣಿ ಶಿವಯೋಗಿಗಳ ರಥೋತ್ಸವವು ಪ್ರತಿ ವರ್ಷ ಶ್ರಾವಣ ಶುಕ್ಲ ೧೩ ದಿವಸ ಧಾರವಾಡ ಶ್ರೀ. ಜ. ಮುರುಘ ರಾಜೇಂದ್ರ ಫ್ರೀಬೋರ್ಡಿಂಗಿನಲ್ಲಿ ಜರುಗತಕ್ಕದ್ದು ಆದರೆ ಆ ಸಮಯಕ್ಕೆ ಮಳೆಯು ವಿಶೇಷವಾಗಿರುವದರಿಂದ ಉತ್ಸವಕ್ಕೂ ದರ್ಶನಕ್ಕೆಂದು ಬರುವ ಭಕ್ತಾದಿಗಳಿಗೂ ಉಪನ್ಯಾಸ ಕೀರ್ತನಕಾರರಿಗೂ ಮತ್ತು ಭಜನಾ, ವಾದ್ಯ, ಕುಸ್ತಿ ಸಂಘದವರ ಕಾರ್ಯಕ್ರಮಗಳಿಗೆ ಆಗುವ ಅನಾನುಕೂಲತೆಗಳನ್ನೇ ತಿಳಿದು ಈ ರಥೋತ್ಸವವನ್ನು ಮಾಘ ಶುದ್ಧ ೫ ಗೆ ಮಾಡುವದಾಗಿ ಜಾತ್ರಿ ಕಮಿಟಿಯವರೂ ಮತ್ತು ಸ್ಥಳ ಪರಸ್ಥಳ ಭಕ್ತ ಮಾಹೇಶ್ವರರೂ ಬೋರ್ಡಿಂಗ ಕಮಿಟಿಯವರ ಅನುಮತಿ ಪ್ರಕಾರ ನಿಶ್ಚಯಿಸಿರುವರು.

ತಾರೀಖು ೨೩-೭-೧೯೩೫ ಸೆಕ್ರೆಟರಿ ರಥೋತ್ಸವ ಕಮಿಟಿ, ಮುರುಘಾರಾಜೇಂದ್ರ ಬೋರ್ಡಿಂಗ ಹಾವೇರಿಪೇಟೆ ಧಾರವಾಡ.





ದಿ ಸ್ವರಾಜ್ಯ

# ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಆಕ್ಟಿನ ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ.)

## ಬೇಕಾಗಿದ್ದಾರೆ! ತಾಲೂಕ, ಜಿಲ್ಲಾ ಆರ್ಗನಾಯಿಝರರು ಪಗಾರದ ಮೇಲೆ ಬೇಕಾಗಿದ್ದಾರೆ!!

ಸ್ವರಾಜ್ಯ ಕಂಪನಿಯ ವಿಮಾ ಕಾರ್ಯವು ಪ್ರಾರಂಭವಾಗಿ ಇಂದಿಗೆ ೬ ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿ ವಿಮಾ ಪ್ರಪಂಚದಲ್ಲಿಯೂ, ಜನತೆಯಲ್ಲಿಯೂ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿರುವದೆಂಬುದು ಇದರ ಪ್ರತಿ ತಿಂಗಳ ಬೆಳವಣಿಗೆಯ ಮೇಲಿಂದ ತಾನೇ ಸಿದ್ಧವಾಗುವುದು. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇರುವದು.

೧೯೩೫ನೆಯ ಜನವರಿಯಿಂದ ಮಾರ್ಚ ೩೧ ರವರೆಗೆ ೪೬೦೦೦ ರೂ.
" ಏಪ್ರಿಲ್‌ದಿಂದ ಜೂನ ೩೦ ರವರೆಗೆ ೧,೧೬೦೦೦ ರೂ.
ಅಂತೂ ೬ ತಿಂಗಳಲ್ಲಿ ೧,೫೯.೦೦೦ ರೂ.

ಇಷ್ಟು ಬೆಲೆ ಬಾಳುವ ಪಾಲಸಿಗಳು ಜಾರಿಯಲ್ಲಿವೆ. ಸಮರ್ಥರಾದ ಏಜಂಟರೂ, ಆರ್ಗನಾಯಿಝರರೂ ಕಮಿಶನ್ ಮತ್ತು ಪಗಾರದ ಮೇಲೆ ಕೆಲಸ ಮಾಡಲು ಬೇಕಾಗಿದ್ದಾರೆ—

| ಆರ್ಗನಾಯಿಝರರ ಪಗಾರ ಸ್ಕೇಲು. | ಪ್ರತಿ ತಿಂಗಳ ಪಗಾರ. | ಪ್ರತಿ ತಿಂಗಳ ಅಲಾವನ್ಸ. |
|---|---|---|
| ಜಿಲ್ಲಾ ಆರ್ಗನಾಯಿಝರ | ೫೦ ರಿಂದ ೧೨೦ ರೂ. | ೨೫ ರೂ. |
| ತಾಲೂಕ ಆರ್ಗನಾಯಿಝರ | ೨೫ ರಿಂದ ೫೦ ರೂ. | ೧೦ ರೂ. |

ಏಜಂಟರಿಗೆ ಭರಪೂರ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿಯ ಬಗ್ಗೆ ಕಂಪನಿಯ ಕೂಡ ಪತ್ರ ವ್ಯವಹಾರ ಮಾಡಿರಿ.

ಮ್ಯಾನೇಜಿಂಗ ಏಜಂಟ್ಸ.

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೩-೦-೦.

**ಜೀವಾಮೃತ ಲೇಹ್ಯವು**— ಶಾಪ್ರಜ್ಞರಿಗೆ ಕಪ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪು ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುವಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭೂಪಿನ ಹುರುಕಿನ ಔಷಧನನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೩-೦ | ಕಡಪೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆ ೧೨ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತೀಚ್ಚಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟ ಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯ ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ನೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಅದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ **ವ್ಯವಸ್ಥೆ**ಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ,** ಪೋಸ್ಟ— **ಹುಮನಾಬಾದ ಜಿ. ಗುಲ್‌ಬರ್ಗಾ.**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವ ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಮಿರಿದ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧ ವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು. ಆಗ ನಿಮಗೆ ಖಂಡಿತವಾಗಿಯೂ ಅತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕಾ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೫-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
**ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
**ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಸೈಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

**" ಕಚ್ಯೂ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಪ್ರಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ರಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ರಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಸನ್ನ,**
**ಬಾಗಲಕೋಟೆ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮುಶಿಚೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಚೇಳಿನ ನಾಶ— | ೧೧ | ,, |
| ೧೨ ತಗಣಿ ಶತ್ರು ಚಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. ಹಂಚಿಲಿ.
ಜಿ. ವಿಜಾಪುರ.



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯರಹಿತನಲ್ಲ। ಲೋಕವಿರೋಧಿ। ಶರಣನಾರಾಧಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಲಿಸಿದ ॥ ವ. ೨೨೬ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲವ[illegible]ಸೋಮವಾರ ತಾರೀಖು ೩೦ ನೆಯ [illegible]ಲ್ಲಿ | ಸಂಚಿಕೆ ೪೮.

ಜನಸೇವೆಯೇ ದೇವರ ಸೇವೆ.

## ಬನಾರಸದಲ್ಲಿ
## ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧಿವೇಶನ.

ಮ. ಗಾಂಧಿ
ಸರದಾರ ವಲ್ಲಭಭಾಯಿ
ಇವರ ಸಂದರ್ಶನ.

೨೭ನೆಯ ತಾರೀಖಿನ ದಿವಸ ಬನಾರಸ (ಕಾಶಿ) ದಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧಿವೇಶನವು ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಷ್ಟ್ರೀಯ ಪ್ರಮುಖರೆಲ್ಲರು ಜಯಮಾಡಿಸಿದ್ದರು.

ಅಧಿವೇಶನದ ಕಾರ್ಯವು ಪ್ರಾರಂಭವಾಗುವ ಪೂರ್ವದಲ್ಲಿ ಮ. ಗಾಂಧಿ ಮತ್ತು ಸರದಾರ ವಲ್ಲಭಭಾಯಿಯವರ ಪರಸ್ಪರ ದರ್ಶನವಾದ ಕೂಡಲೆ ಅತಿ ಪ್ರೇಮದಿಂದ ಗಾಢಾಲಿಂಗನ ಮಾಡಿದರು. ಈ ೧೪ ತಿಂಗಳುಗಳಲ್ಲಿ ಇದೇ ಅವರ ಮೊದಲನೆಯ ಸಂದರ್ಶನವಾಗಿದೆ.

ದೇಹತೇ ಕೇಶಾಲಯ.

SANGAM CLOTH STORES
Prop: M. S. Hunaekar & Sons,
P.O: TERDAL - 587 315

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಬಿ. ಎಸ್. ಸಿ. ಪರೀಕ್ಷೆ
ಪದವಿ ಪರೀಕ್ಷೆಯಲ್ಲಿ ಅಂಕ
ಬಿ. ಎಸ್. ಸಿ. ಪರೀಕ್ಷೆ
ಬ್ರಹ್ಮರ್ಷಿ ನಾರಾಯಣರು.
ಈ ಪರೀಕ್ಷೆಯಲ್ಲಿ
ಶ್ರೀಸ್ವಯಂಭಾ ಗೋಪಿ
ಬಂದಾಳೆಯ ಪೆಳಗಾಂವ

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿಡ್ಡಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಗಂಟಾಂತರಕೊಮ್ಮೆಳಗಾಗಬೇಡಿರಿ!

ತಿಜೋರಿಯನ್ನೇ ಕೊಂಡುಕೊಳ್ಳಿರಿ.

**ರಾಮಜಿ**— ಯಾಕರೀ ಶೆಟ್ಟರೇ? ಮಕಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

**ಶೆಟ್ಟರು**— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

**ರಾಮಜಿ**—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

**ಶೆಟ್ಟರು**—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

**ರಾಮಜಿ**—ಹಾಗಾದರೆ ಹೀಗ್ಯಾಕಾಯಿತು?

**ಶೆಟ್ಟರು**—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

**ರಾಮಜಿ**—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇಮು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ. ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲು ಬಿದ್ರು ಯಾರ ಏನ ಮಾಡೂದು.

**ಶೆಟ್ಟರು**—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ದೇವೀಪುರಾಣ ಬೆಲೆ ರೂ. ೪-೦-೦ (ರೋಣದ ಪ್ರತಿ)

# ಚಿತ್ರ) ವೀರಶೈವ ಕರದರ್ಪಣವು. (೩೦೦ ಚಿತ್ರ

ಈ ಪುಸ್ತಕದಲ್ಲಿ ವೀರಶೈವ ಮತತತ್ವ ನಿರೂಪಣೆ, ವೀರಶೈವ ಧರ್ಮದ ವಿಶಾಲತ್ವ, ವೀರಶೈವ ಬ್ರಾಹ್ಮಣ್ಯ ಸಿದ್ಧಾಂತ, ವೀರಶೈವ ಪಂಚಸೀತಗಳು, ಪಂಚಪೀಠಗಳು, ಶ್ರೀ ಬಸವೇಶ್ವರ, ಮಹಾನುಭಾವರಾದ ಶ್ರೀ ಬಸವಣ್ಣನವರು ಮಹಿಮಾಶಾಲಿಯಾದ ಬಸವೇಶ್ವರರು, ಬಸವಜಯಂತಿ, ಜಗದ್ಗುರು ಜಯದೇವ ಮುರುಘಾರಾಜೇಂದ್ರ ಸ್ವಾಮಿಗಳು, ಜಗದ್ಗುರು ಜಗದಾಚಾರ್ಯಸ್ವಾಮಿ ವಿರೂಪಾಕ್ಷ ಒಡೆಯರವರು, ಅ. ಭಾ. ವೀರಶೈವ ಮಹಾಸಭೆಯು, ವೀರಶೈವ ಮಹಿಳೆಯರು, ವೀರಶೈವ ಸಂಸ್ಥೆಗಳು ಮೊದಲಾದ ವಿಷಯ ಸಂಗ್ರಹವಿರುವುದರಿಂದ ಇದನ್ನು ಸರ್ವರೂ ಸಂಗ್ರಹಿಸತಕ್ಕದ್ದು. ಬೆಲೆ ರೂ. ೧-೪-೦.

ಹಾನಗಲ್ ಕು. ಸ್ವಾಮಿ ಸ್ಮಾರಕಗ್ರಂಥಕ್ಕೆ ೧ ರೂ ವಿದ್ಯಾಭಂಡಾರ (೧-೩ ಭಾಗ) ೩-೦-೦ ಗುಪ್ತ ಪ್ರಶ್ನೆ ಸಿದ್ಧಾಂಜನ ೧-೦-೦ ಆರೂಢ ಪ್ರಶ್ನ ಚಂದ್ರಿಕೆ ೨-೦-೦ ಸಂಪೂರ್ಣ ಲಗ್ನವಿಧಿ ೦-೧೦-೦.

**ಸೂಚನೆ:**— ಮೇಲಿನ ಒಂದಾದರೂ ಪುಸ್ತಕವನ್ನು ತರಿಸಿದರೆ ಮುಂಬರುವ ಭಾವನಾಮ ಸಂವತ್ಸರದ ಶ್ರೀ ಹೂಲಿ (ಗದಗ) ಸಿದ್ಧಾಂತ ಪಂಚಾಂಗವನ್ನು ಉಚಿತ ಕಳುಹಿಸುವೆವು.

ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಜುಲೈ ತಾರೀಖು ೩೦ನೆಯ ಸೋಮವಾರ | ಸಂಚಿಕೆ ೪೮.


# ಹೊಸ ವರುಷದ ಹೊಸ ವ್ಯವಸ್ಥೆ.

## ಚಂದಾದಾರರಲ್ಲಿ ವಿಜ್ಞಾಪನೆ.

**ನಾಲ್ಕನೆಯ ವರುಷದ ಮೊದಲನೆಯ ಸಂಚಿಕೆಯು ಆಗಸ್ಟ್ ೨೦ನೆಯ ತಾರೀಖಿನ ದಿನ ಪ್ರಕಟವಾಗುವುದು. ಈ ಹೊಸ ವರುಷದಿಂದ ಶರಣಸಂದೇಶವು ಇಪ್ಪತ್ತು ಪುಟಗಳುಳ್ಳದ್ದಾಗುವದು. ವಾರ್ಷಿಕ ಚಂದಾ ಮಾತ್ರ ಈಗಿನಂತೆ ಮೂರೇ ರೂಪಾಯಿಗಳು.**

ಧಾರ್ಮಿಕ ಮೂಢ ಕಲ್ಪನೆಗಳು ಮತ್ತು ಸಾಮಾಜಿಕ ದುಷ್ಟ ರೂಢಿಗಳು ನಿವಾರಣೆಯಾದ ವಿನಾ ಹಿಂದು ಜನಾಂಗದಲ್ಲಿ ನಿಜವಾದ ಶಕ್ತಿಸಂಘಟನೆಗಳುಂಟಾಗುವುದಿಲ್ಲ. ಹಿಂದು ಜನಾಂಗವು ಬಲ ಶಾಲಿಯಾದ ವಿನಾ ಹಿಂದುಸ್ಥಾನದಲ್ಲಿ ಸುಖಶಾಂತಿಗಳು ನೆಲೆಸುವುದಿಲ್ಲ. ಆದಕಾರಣ ಪ್ರತಿಯೊಬ್ಬ ಹಿಂದು ಈ ವಿಷಯಗಳ ಕಡೆಗೆ ಲಕ್ಷಿಸಿ ತನ್ನಲ್ಲಿರುವ ಸಾಮಾಜಿಕ ಮತ್ತು ಧಾರ್ಮಿಕ ದೋಷಗಳನ್ನು ತೆಗೆದುಹಾಕಲು ಸಿದ್ಧನಾಗಬೇಕು.

ಈ ವಿಷಯಗಳ ನಿಜಜ್ಞಾನನಾಗಲು ನಾಲ್ಕನೆಯ ವರುಷದಿಂದ ವೇದಗಳ ಸಂಬಂಧವಾದ ಮಹಾಮಹಾ ವಿದ್ವಾಂಸರ ವಿಚಾರಾತ್ಮಕ ಲೇಖನಗಳು, ಪಾರ್ಶ್ಚಾತ್ಯರ ಸಾಮಾಜಿಕ ವಿಚಾರ ಕ್ರಾಂತಿಯ ವಿವೇಚನೆಗಳು ಆದಿಜನ ಸುಧಾರಣೆ, ಸ್ತ್ರೀ ದಾಸ್ಯ ವಿಮೋಚನೆ, ಮತ್ತು ಹಿಂದು ಸಂಘಟನೆಗಳ ಸಂಬಂಧವಾದ ಮಹತ್ವದ ಸಂಗತಿಗಳು ಪ್ರಕಟವಾಗುವ ವ್ಯವಸ್ಥೆ ಮಾಡಿದ್ದಾಗಿದೆ.

ವೀರಶೈವ ಮತತತ್ವ ಮತ್ತು ವೀರಶೈವ ಏಕೀಕರಣಗಳ ಸಂಬಂಧವಾಗಿ ಈ ಮೂರು ವರುಷಗಳಂತೆಯೇ ಹೊಸ ವರುಷದಲ್ಲಿಯೂ ವಿಶೇಷವಾಗಿಯೇ ಪ್ರಕಟವಾಗುವುದು.

ಆದುದರಿಂದ ಸಕಲರೂ ಈ ಪತ್ರಿಕೆಯ ಚಂದಾದಾರರಾಗಿ ಇದರ ಪ್ರಯೋಜನವನ್ನು ಹೊಂದಬೇಕಾಗಿ ಪ್ರಾರ್ಥನೆ.

ಮ್ಯಾನೇಜರ್ 'ಶರಣಸಂದೇಶ.'

### ಚಂದಾದಾರರಲ್ಲಿ ವಿಜ್ಞಾಪನೆ,

ಶರಣಸಂದೇಶ ಪತ್ರಿಕೆಯ ಮೂರನೆಯ ವರುಷವು ಇದೇ ಆಗಸ್ಟ್ ೬ನೆಯ ತಾರೀಖಿನ ೪ನೆಯ ಸಂಚಿಕೆಗೆ ಪೂರೈಸುವುದು. ಪದ್ಧತಿಯ ಪ್ರಕಾರ ಮುಂದೆ ಆಗಸ್ಟ ೧೩ನೆಯ ತಾರೀಖಿನ ಪತ್ರಿಕೆ ಪ್ರಕಟವಾಗದೆ ನಾಲ್ಕನೆಯ ವರುಷದ ಮೊದಲನೆಯ ಸಂಚಿಕೆಯು ಆಗಸ್ಟ್ ೨೦ನೆಯ ತಾರೀಖಿಗೆ ಪ್ರಕಟವಾಗುವುದು.

ನಾಲ್ಕನೆಯ ವರುಷದಲ್ಲಿ ಚಂದಾದಾರರಾಗಲು ಇಷ್ಟವಿಲ್ಲದ ಮಹಾಶಯರು ಆಗಸ್ಟ್ ೧೦ನೆಯ ತಾರೀಖಿನೊಳಗಾಗಿ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಮನಿಯಾರ್ಡರ್ ಮೂಲಕ ೩ ರೂ. ಚಂದಾ ಹಣವನ್ನು ತಾವೇ ಕಳುಹಿಸಿದರೆ ಅನುಕೂಲ, ವೆಚ್ಚ ಕಡಿಮೆಯಾಗುತ್ತದೆ. ವ್ಹಿ. ಪಿ. ತಿರುಗಿ ಬರುವ ಸಂಭವವೂ ತಪ್ಪುತ್ತದೆ.

ಆಷ್ಟರೊಳಗಾಗಿ ಪತ್ರ ಅಥವಾ ಹಣ ಬಾರದಿದ್ದರೆ ಈ ವರುಷದಂತೆಯೇ ತಾವು ನಾಲ್ಕನೆಯ ವರುಷದಲ್ಲಿಯೂ ಚಂದಾದಾರರಾಗಲು ಇಷ್ಟವುಳ್ಳವರಾಗಿದ್ದೀರೆಂದು ನಂಬಿ ಯಾನ ಚಂದಾದಾರರ ಚಂದಾ ಅವಧಿಯು ಆಗಸ್ಟ್ ೩ಂಗಳ ಅಂತ್ಯಕ್ಕೆ ಮುಗಿಯುತ್ತದೆಯೋ ಅವರಿಗೆ ಆಗಸ್ಟ ೩ಂಗಳ ಕಡೆಯ ವಾರದಲ್ಲಿ ವಾರ್ಷಿಕ ಚಂದಾ ಹಣಕ್ಕೆ ಪತ್ರಿಕೆಯನ್ನು ವ್ಹಿಂ. ಪಿ. ಮಾಡಲಾಗುವುದು.

ಆಗ ವ್ಹಿ. ಪಿ. ಬಿಡುವದರಿಂದ ತುಂಬಾ ನಷ್ಟವಾಗುತ್ತದೆ. ಆದಕಾರಣ ಇಷ್ಟವಿಲ್ಲದವರು ಈಗಲೇ ದಯವಿಟ್ಟು ತಿಳಿಸಬೇಕಾಗಿ ಈ ಪ್ರಕಾರ ಮುಂಚೆಯೇ ವಿಜ್ಞಾಪಿಸಿಕೊಂಡದ್ದಾಗಿದೆ.

ಮ್ಯಾನೇಜರ್ 'ಶರಣಸಂದೇಶ'

## ನಿರುದ್ಯೋಗ ರೋಗಕ್ಕೆ ಸಂಜೀವಿನಿ ಮಾತ್ರೆ.

ಸಾಂಪತ್ತಿಕ ಕೊರತೆಯಿಂದ ಪ್ರಪಂಚವೇ ಈಗ ಬಳಲುತ್ತಿದೆಯಷ್ಟೆ. ಇಂತಹ ಕಷ್ಟ ಕಾಲದಲ್ಲಿ ಹಿಂದುಸ್ಥಾನದವರ ಗತಿಯನ್ನೇನು ಹೇಳಬೇಕು? ಬೇರೆ ರಾಷ್ಟ್ರಗಳು ಉದ್ಯೋಗ ಶೀಲತೆಯಿಂದ ಸುಖ ಸಮಾಧಾನಗಳಲ್ಲಿರುವಾಗಲೇ ಹಿಂದುಸ್ಥಾನದಲ್ಲಿನ ನಾಲ್ಕನೆಯ ಒಂದು ಭಾಗದ ಜನರಿಗೆ ಒಂದೇ ಹೊತ್ತು ಊಟ ದೊರೆಯುತ್ತಿತ್ತು. ಈಗ ಇಂಗ್ಲಂಡ್, ಫ್ರಾನ್ಸ್, ಜರ್ಮನಿ ಆಮೇರಿಕಾ ಮುಂತಾದ ಉದ್ಯೋಗ ಮಗ್ನ ರಾಷ್ಟ್ರಗಳಲ್ಲಿಯೇ ನಿರುದ್ಯೋಗದ ರೋಗವು ಹಬ್ಬುತ್ತಿರುವಾಗ ಹಿಂದುಸ್ಥಾನದಲ್ಲಂತೂ ಈ ರೋಗವು ಭಯಂಕರವಾಗಿ ವ್ಯಾಪಿಸಿರುವುದೇನಾಶ್ಚರ್ಯ?

ಎಲ್ಲೆಲ್ಲಿಯೂ **ಉದ್ಯೋಗವಿಲ್ಲ; ಏನುಮಾಡಬೇಕು?** ಎಂಬ ರಡೇ ಶಬ್ದಗಳು ಕೇಳುತ್ತಿವೆ. ಈ ನಿರುದ್ಯೋಗ ರೋಗಕ್ಕೆ ಸಂಜೀವಿನಿ ಮಾತ್ರೆಯನ್ನು ಕಂಡು ಹಿಡಿದು ಸೇವಿಸದಿದ್ದರೆ ಪ್ರಪಂಚಕ್ಕೆ ಕ್ಷೇಮವಿಲ್ಲ. ಮಹಾತ್ಮಾ ಗಾಂಧೀಜಿಯವರು ಈ ಸಂಜೀವಿನಿ ಮಾತ್ರೆಯನ್ನು ಕಂಡು ಹಿಡಿದಿದ್ದಾರೆ. ಆದರೆ ಜಗತ್ತಿಗೆ ಇದು ಇನ್ನೂ ಪ್ರಯೋಗಾವಸ್ಥೆಯಲ್ಲಿದೆಯೆಂದೇ ತಿಳಿದಿದೆ. ಆದುದರಿಂದ ಇನ್ನೂ ಸೇವಿಸಲೊಲ್ಲದು.

ಮನುಷ್ಯನಿಗೆ ಅನ್ನಬಟ್ಟೆಗಳೆರಡು ಆವಶ್ಯಕವಾದವುಗಳು. ಇವು ಜೀವಿತದ ಮುಖ್ಯಾಂಶಗಳು. ಇವುಗಳಿಲ್ಲದೆ ಮನುಷ್ಯನು ಜೀವಿಸಲಾರನು. **ಅಂಬಲಿ ಕಂಬಳಿ ರಾಸ್ತಾ, ಮಿಕ್ಕದ್ದೆಲ್ಲಾ ಜಾಸ್ತಿ** ಎಂಬುದು ಮನುಷ್ಯ ಜೀವಿತದ ಮುಖ್ಯ ಸೂತ್ರವು.

ಆದಕಾರಣ ಈ ಎರಡು ವಿಷಯಗಳಲ್ಲಿ ಮಾತ್ರ ಯಂತ್ರ ರಾಕ್ಷಸಿಯ ಆಧೀನವಾಗಬಾರದು. ಧಾನ್ಯ ಬಟ್ಟೆಗಳು ಯಾಂತ್ರಿಕ ಶಕ್ತಿಯಿಂದುಂಟಾಗಬಾರದು. ಈ ಉಭಯ ವಿಷಯಗಳಲ್ಲಿ ಯಂತ್ರವನ್ನುಪಯೋಗಿಸುವದೆಂದರೆ ಮನುಷ್ಯನ ರಕ್ತ ಹೀರುವ ಭೀಕರ ಕಾರ್ಯವನ್ನು ಪ್ರಾರಂಭಿಸುವಂತೆಯೇ ಸರಿ. ಜಗತ್ತಿನ ನಿರುದ್ಯೋಗ ರೋಗಕ್ಕೆ ಯಾಂತ್ರಿಕ ಶಕ್ತಿಯೇ ಮೂಲವಾಗಿದೆ. ಬಟ್ಟೆಯು ಯಾಂತ್ರಿಕ ಶಕ್ತಿಯಿಂದುಂಟಾಗುತ್ತಿರುವುದೇ ಈ ರೋಗದ ಭಯಂಕರ ಸ್ವರೂಪಕ್ಕೆ ಮುಖ್ಯ ಕಾರಣವು.

ಅಖಿಲಭಾರತ ರಾಟೆ ಸಂಘವು ೪೫ ಲಕ್ಷ ರೂ. ಗಳ ಬಂಡವಾಳದಿಂದ ೭ ಸಾವಿರ ಹಳ್ಳಿಗಳಲ್ಲಿ ೫ ಲಕ್ಷ ಜನರಿಗೆ ಕೆಲಸವನ್ನು ಕೊಟ್ಟು ಒಂದು ತುತ್ತು ರೊಟ್ಟಿಯಿಂದಾದರೂ ತೃಪ್ತಿಗೊಳಿಸಿತು. ಆದರೆ ೨೪ ಕೋಟಿ ರೂ. ಗಳ ಬಂಡವಾಳವನ್ನು ತಿಂದಿರುವ ಗಿರಣಿಗಳು ೪ ಲಕ್ಷ ಜನರಿಗೆ ಸರಿಯಾದ ಕೆಲಸಕೊಟ್ಟು ಹೊಟ್ಟೆ ತುಂಬಾ ಅನ್ನವನ್ನು ಹಾಕಲಾರದವುಗಳಾಗಿವೆ. ಆಗಾಗ್ಗೆ ಕೂಲಿಕಾರರ ಕಲಹ ದೊಂಬಿಗಳುಂಟಾಗುತ್ತಲೇ ಇವೆ.

ಯಂತ್ರ ರಾಕ್ಷಸಿಯ ಬಾಯಲ್ಲಿ ಬಿದ್ದಿರುವ ೨೪ ಕೋಟಿ ರೂಪಾಯಿಗಳು ರಾಟೆಯ ಕಾರ್ಯದಲ್ಲಿ ವಿನಿಯೋಗವಾಗಿದ್ದರೆ ನಾಲ್ಕು ಲಕ್ಷಕ್ಕೆ ಪ್ರತಿಯಾಗಿ ನಾಲ್ಕು ಕೋಟಿ ಜನರು ತಮ್ಮತಮ್ಮ ಮನೆಗಳಲ್ಲಿ ಉದ್ಯೋಗಮಾಡಿ ಉಂಡುಟ್ಟು ಬದುಕುತ್ತಿದ್ದರು. ಆದುದರಿಂದ ನಿರುದ್ಯೋಗ ರೋಗಕ್ಕೆ ಕೈಕಸಬೇ ಸಂಜೀವಿನಿ ಮಾತ್ರೆ. ಅನ್ನ ವಸ್ತ್ರಗಳ ವಿಷಯದಲ್ಲಾದರೂ ಈ ಮಾತ್ರೆಯನ್ನು ಸೇವಿಸದೆ ಈ ರೋಗವು ಹೋಗುವುದಿಲ್ಲ. ಜಗಕ್ಕೆ ಸುಖ ಶಾಂತಿಗಳು ದೊರೆಯುವುದಿಲ್ಲ.

## ಜರ್ಮನಿಯ ಹತ್ತು ಆಜ್ಞೆಗಳು.

ಜರ್ಮನಿಯು ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದೆ. ರಾಷ್ಟ್ರದ ಸಾಮರ್ಥ್ಯಕ್ಕೆ ಸಂಪತ್ತು ಮುಖ್ಯವಾಗಿದೆ. ಸಂಪತ್ತಿಗೆ ಸ್ವದೇಶಿ ವ್ರತವೇ ಮೂಲವು. ಆದಕಾರಣ ಜರ್ಮನ್ ಸರಕಾರವು ಸ್ವದೇಶಿ ವ್ರತವನ್ನೇ ತನ್ನ ರಾಷ್ಟ್ರದವರೆಲ್ಲಾ ಅನುಸರಿಸಬೇಕೆಂದು ಹತ್ತು ಆಜ್ಞೆಗಳನ್ನು ಎಲ್ಲೆಲ್ಲಿಯೂ ಪ್ರಕಟಗೊಳಿಸಿದೆ. ಆ ಆಜ್ಞೆಗಳು ಈ ಪ್ರಕಾರ ಇವೆ—

(೧) ನಿಮ್ಮ ದೇಶ ಮತ್ತು ನಿಮ್ಮ ದೇಶ ಬಾಂಧವರನ್ನು ಮರೆಯಬೇಡಿರಿ. (೨) ಪರದೇಶಗಳ ವಸ್ತುಗಳನ್ನು ಕೊಳ್ಳಲು ಹೋಗುವಾಗ ನೀವು ಕೊಡುವ ಒಂದು ಕಾಸಾದರೂ ನಿಮ್ಮ ಕೈಬಿಟ್ಟು ಹೋಗುತ್ತದೆಂಬುದನ್ನು ಜ್ಞಾಪಕದಲ್ಲಿಡಿರಿ. (೩) ನಿಮ್ಮ ಹಣವಿನ ಉಪಯೋಗವು ನಿಮ್ಮ ದೇಶಬಾಂಧವರಿಗೇನೇ ಆಗಬೇಕು. (೪) ಪರದೇಶಗಳ ಪದಾರ್ಥಗಳನ್ನು ಉಪಯೋಗಿಸಿ ನೀವು ನಿಮ್ಮ ಮನೆ ಕಾರ್ಯಾಲಯ ಮತ್ತು ಮಾತೃಭೂಮಿಯನ್ನು ಕಲಂಕಗೊಳಿಸಬೇಡಿರಿ. ಜರ್ಮನ್ ರಾಷ್ಟ್ರಭೂಮಿಯು ಸ್ವದೇಶಿ ವ್ರತದಿಂದಲೇ ಪವಿತ್ರವಾಗಿರುವುದು. (೫) ನಿಮ್ಮ ಊಟದ ಪದಾರ್ಥಗಳಲ್ಲಿ ಜರ್ಮನಿಯ ಹೊರಗಿನ ಫಲಮೂಲಾಹಾರಗಳು ಕೂಡಾ ಇರಕೂಡದು. ಪರದೇಶಗಳ ಹಣ್ಣು ಹಂಪಲಗಳಿಂದ ನಿಮ್ಮಲ್ಲಿಯ ತೋಟಗರ ನಷ್ಟವಾಗುವುದಲ್ಲದೆ ನಿಮ್ಮ ಆರೋಗ್ಯವೂ ನಷ್ಟವಾಗುವದು.

(೬) ಬರೆಯುವಾಗ ಜರ್ಮನ್ ಕಾಗದ ಮತ್ತು ಜರ್ಮನ್ ಲೆಕ್ಕಣಿಕೆಗಳನ್ನೇ ಉಪಯೋಗಿಸಿರಿ. (೭) ನೀವು ಜರ್ಮನಿಯ ಬಟ್ಟೆಗಳನ್ನೇ ಉಪಯೋಗಿಸಬೇಕು. ಪರದೇಶಗಳ ಬಟ್ಟೆಯನ್ನು ಮುಟ್ಟುವುದು ಕೂಡಾ ಮೈಲಿಗೆಯು. (೮) ನಿಮಗೆ ಆರೋಗ್ಯ, ಸಂಪತ್ತು, ವಿದ್ಯೆಗಳು ಬೇಕಾಗಿದ್ದರೆ ನೀವು ಸ್ವದೇಶೀ ವ್ರತವನ್ನೇ ಕೈಕೊಳ್ಳಿರಿ. (೯) ನಿಮಗೆ ಜರ್ಮನ್ ಕಾಫಿ ಸೇರದಿದ್ದರೆ ಕಾಫಿ ಕುಡಿಯುವದನ್ನೇ ಬಿಟ್ಟುಬಿಡಿರಿ. ಅದಕ್ಕೆ ಪ್ರತಿಯಾಗಿ ಸ್ವದೇಶಿ ಪೇಯವನ್ನು ಉಪಯೋಗಿಸಿರಿ. (೧೦) ಅಂತರ ರಾಷ್ಟ್ರೀಯ ಅಥವಾ ವಿಶ್ವಬಂಧುತ್ವದ ಮೋಸಿನ ಮಾತಿಗೊಳಗಾಗಬೇಡಿರಿ. ಕೇವಲ ನಿಮ್ಮ ದೇಶದ ಮೇಲೆಯೇ ನಿಮ್ಮ ದೃಷ್ಟಿಯನ್ನು ಏಕಾಗ್ರಗೊಳಿಸಿರಿ.

ಈ ಹತ್ತು ನಿಯಮಗಳು ಹಿಂದುಸ್ಥಾನಕ್ಕೂ ಈಗ ಆಗತ್ಯವಾಗಿಲ್ಲವೆ? ಆದಕಾರಣ **ಜರ್ಮನ್** ಎಂಬ ಶಬ್ದಕ್ಕೆ ಪ್ರತಿಯಾಗಿ **ಹಿಂದುಸ್ಥಾನ** ಎಂದು ಪ್ರಯೋಗಿಸಿ ಮತ್ತೊಮ್ಮೆ ಓದಿ ಆದರಂತೆ ಆಚರಿಸಿರಿ.

---

—ಮಹಾತ್ಮಾಜಿಯವರು ಲಾಹೋರಿನಲ್ಲಿ ತಮ್ಮ ಪ್ರಕೃತಿಯನ್ನು ಪರೀಕ್ಷಿಸಲು ಇಚ್ಛಿಸಿದ ಇಬ್ಬರು ಡಾಕ್ಟರರಿಂದ ಆದಿಜನ ಸಹಾಯಾರ್ಥವಾಗಿ ಫೀಯನ್ನು ತೆಗೆದುಕೊಂಡರು ಮತ್ತು ಪತ್ರಿಕೆಗಳಿಗೆ ಸಂದೇಶ ಕೊಡುವುದಕ್ಕಾಗಿ ಅವರಿಂದ ೫೦ ರೂ. ತೆಗೆದು ಕೊಂಡರು.

—ಹರನಾಮ ಸಿಂಗನೆಂಬವನು ಯಕ್ಷಿಣಿಯನ್ನು ವಶಮಾಡಿಕೊಂಡಿದ್ದು ಹಗ್ಗವನ್ನು ನೆಟ್ಟಗೆ ನಿಲ್ಲಿಸಿ ಅದರಮೇಲೆ ತನ್ನ ಸ್ತ್ರೀ ಸಹಾಯಕಳನ್ನು ಏರಹಚ್ಚುವನಂತೆ. ಬೇಕಾದರೆ ಆಪಳ ಅವಯವಗಳು ಒಂದೊಂದೇ ಕೆಳಗೆ ಬೀಳಬಲ್ಲವು. ಈ ಪ್ರಯೋಗವನ್ನು ತೋರಿಸಲು ಅವನು ತೀವ್ರವೇ ಲಂಡನ್ನಿಗೆ ಹೋಗುವವನಿದ್ದಾನೆ.

# ಶ್ರೀ ರಂಭಾಪುರಿ ಜಗದ್ಗುರುಗಳವರ ಸನ್ನಿಧಿಯಲ್ಲಿ-

ಮಹಾಸ್ವಾಮಿ:—

ತಾವು ಬಾಳೆಹೊನ್ನೂರು ಬಿಟ್ಟು ದೇಶಾಟನೆ ಮಾಡಲು ನಿಶ್ಚಯಿಸಿದ್ದನ್ನು ಕೇಳಿ ವೀರಶೈವರು ಆನಂದಪಟ್ಟರು. ತಾವು ಶಿಷ್ಯಕೋಟಿಗೆ ತಮ್ಮ ಅವಿಚ್ಛಿನ್ನವಾದ ಸಂದೇಶವಿತ್ತು ದೇಶದ ಕಲ್ಯಾಣ ಮಾಡುವಿರೆಂದು ವೀರಶೈವರು ನಂಬಿದ್ದರು. ತಮ್ಮ ಸಂಚಾರದಲ್ಲಿ ಪ್ರಾಪ್ತವಾಗುತ್ತಿರುವ ವಿಶ್ಲವವನ್ನು ನೋಡಿ ವೀರ ಶೈವರ ನಂಬಿಕೆಯು ಹಾರಿಹೋಯಿತು. ಆನಂದವು ದುಃಖವಾಗಿ ಪರಿಣಮಿಸಿತು. ಸುಖಶಾಂತಿಗೆ ತಿಲೋದಕವನ್ನು ಕೊಟ್ಟಂತಾ ಯಿತು. ತಾವು ವಿದ್ಯಾವಂತರು, ಬುದ್ಧಿವಂತರು, ಪೀಠಾಧಿಪತಿಗಳು. ಹೀಗಿದ್ದರೂ ದುಡ್ಡಿಗೆ ಬಲಿಬಿದ್ದಿದ್ದೀರಿ. ಉತ್ಸವಗಳಿಗೆ ಆಶೆಪಟ್ಟಿದ್ದೀರಿ. ಕೆಲವು ಸ್ವಾರ್ಥಪರರ ಅಭಿಸ್ರಾಯದಂತೆ ವೀರಶೈವ ಮತದ ಒಗ್ಗ ಟ್ಟನ್ನು ಮುರಿಯುತ್ತಿದ್ದೀರಿ. ನಮ್ಮ ದೇಶದ ನಾನಾ ಪಟ್ಟಣಗಳಲ್ಲಿ ಸಹಸ್ರಾರು ಜನ ವೀರಶೈವರು ಸಭೆಸೇರಿ ತಮ್ಮ ರೀತಿನೀತಿಗಳನ್ನು ಖಂಡಿಸಿದ್ದಾರೆ. ತಮ್ಮನ್ನು ತಿರಸ್ಕರಿಸಿದ್ದಾರೆ. ಬಹಿಸ್ಕರಿಸಿದ್ದಾರೆ. ತಾವು ಪಟ್ಟಣಕ್ಕೆ ಬಂದ ದಿವಸ ಅಶುಭದಿವಸವೆಂದೂ, ತಾವು ವೀರ ಶೈವ ಮತಕ್ಕೆ ಕುಠಾರ ಪ್ರಾಯರೆಂದೂ, ಆ ದಿವಸ ಪಟ್ಟಣಗಳನ್ನು ಬಿಟ್ಟು ಹೊರಗೆ ಹೋಗಿ ತಮ್ಮ ಅಸಮಾಧಾನಗಳನ್ನು ವ್ಯಕ್ತ ಪಡಿಸಿದ್ದಾರೆ.

ತಾವು ದುಡ್ಡುಕೊಟ್ಟು ವೀರಶೈವ ಮತದ ಆಚಾರ್ಯ ಪುರು ಷನೂ, ಮಹಾಮಹಿಮನೂ, ದೇಶೋದ್ಧಾರಕನೂ ಆದ ಶ್ರೀ ಬಸ ವೇಶ್ವರನನ್ನು ಖಂಡಿಸಲು ಪಂಚಾಚಾರ್ಯ ಪತ್ರಿಕೆಯನ್ನು ಬೆಳೆಸು ತ್ತಿದ್ದೀರಿ. ಆ ಪತ್ರಿಕೆಯ ಸಂಪಾದಕರು ಮನಸ್ಸೀ ಬರೆದು ದೇಶ ದಲ್ಲಿ ಗದ್ದಲವನ್ನು ಹೂಡುತ್ತಿದ್ದಾರೆ. ಮತ್ತು ಅಧಿಕವಾಗಿ ದೇಶ ದಲ್ಲಿ ಅಶಾಂತಿಯನ್ನುಂಟುಮಾಡಲು ತಮ್ಮ ಸಹಾಯವನ್ನು ಪಡೆ ಯುವ ಸಲುವಾಗಿ ಈಗಲೂ ಕೂಡ ಸುಳ್ಳು ಸುಳ್ಳು ಪ್ರಚಾರ ಮಾಡಿ ತಮ್ಮ ವೈಭವದ ಮೆರವಣಿಗೆಯ, ಸ್ವಾಗತ ಸಂಭ್ರಮದ, ಆಡಂಬ ರದ ವ್ಯಾಖ್ಯಾನದ ಡೋಲು ಬಾರಿಸುತ್ತಿದ್ದಾರೆ. ಇವೆಲ್ಲಾ ಶುಭ ಚಿನ್ಹೆಯಲ್ಲ. ಇವರ ಸಂಕುಚಿತ ಭಾವನೆಯೆಲ್ಲಿ? ಶ್ರೀ ಬಸವೇಶ್ವರನ ಉದಾರ ಭಾವನೆಯೆಲ್ಲಿ? ತಾವು ಬಸವೇಶ್ವರನನ್ನು ದೂಷಿಸುವ ದೆಂದರೆ, ತಮಗೂ ಪೀಠಕ್ಕೂ ಅವಮಾನವನ್ನು ಮಾಡಿಕೊಂಡಂ ತೆಯೇ ಸರಿ.

ಮೈಸೂರು ಪಟ್ಟಣದ ವೀರಶೈವ ಸಭೆ ಸೇರಿ (೧) ಬಸವೇಶ್ವ ರನ ದೂಷಣೆ ಕೂಡದು. (೨) ವಿರಕ್ತರ ನಿಂದೆಕೂಡದು. (೩) ಪಂಚಾಚಾರ್ಯ ಪತ್ರಿಕೆಯ ಸಂಪಾದಕರಿಗೆ ಬಲವಾದ ಎಚ್ಚರಿಕೆ ಕೊಡಬೇಕು. ಇವೇ ನಾವು ಸ್ವಾಮಿಗಳಿಗೆ ಹಾಕುವ ಪ್ರಶ್ನೆಗಳು. ಅದಕ್ಕೆ ಅವರು ಸಮ್ಮತಿ ಕೊಡುವುದಾದರೆ ರಾಜಧಾನಿಗೆ ಬರಬ ಹುದು. ವೀರಶೈವರ ಆದರ ಆತಿಥ್ಯಗಳನ್ನು ಪಡೆಯಬಹುದು; ಎಂಬುದಾಗಿ ನಿರ್ಧರಿಸಿ ತಮ್ಮ ಸನ್ನಿಧಿಗೆ ಕಳುಹಿಸಿದೆವು. ಅದಕ್ಕೆ ಇದುವರೆಗೂ ಉತ್ತರ ದೊರೆಯಲಿಲ್ಲ. ನಮ್ಮ ಮುಖಂಡರುಗಳು ಬೆಂಗಳೂರಿಗೇ ಬಂದು ತಮ್ಮ ಭೇಟಿಯನ್ನು ತೆಗೆದುಕೊಂಡು ಪ್ರತ್ಯಕ್ಷವಾಗಿ ಪ್ರಾರ್ಥಿಸಿಕೊಂಡರೂ ತಾವು ಸದುತ್ತರವನ್ನು ಕೊಡ ಲಿಲ್ಲ. ಎಲ್ಲ ಕಡೆಗಳಂತೆ ನಮ್ಮ ರಾಜಧಾನಿಯಲ್ಲೂ ಕೆಲವು ಸ್ವಾರ್ಥಪರರು, ಯಾರು ಬಾರದಿದ್ದರೂ ಚಿಂತೆಯಿಲ್ಲ; ಸರಕಾರ ದವರು ಆ ಸ್ವಾಮಿಗಳಿಗೆ ಮಾಡುವ ಮರ್ಯಾದೆಯನ್ನು ಮಾಡಿಯೇ ಮಾಡುತ್ತಾರೆ. ಆ ಓಲಗ, ಆ ವೈಭವ, ಆ ಮೆರವಣಿಗೆ, ಆ ಅಲಂಕಾರ ಇವುಗಳನ್ನು ನೋಡಿದರೆ ತನ್ನಷ್ಟಕ್ಕೆ ತಾನೇ ಬೀದಿ ಹಾದಿಯಲ್ಲಿ ಹೋಗುವ ಜನರು ಸೇರುತ್ತಾರೆ. ಟವನ್ ಹಾಲಿನಲ್ಲಿ ಅನೇಕ ಜನರು ಬಂದು ಬಹಿರಂಗ ಸಭೆ ಮಾಡುವುದಿಲ್ಲವೇ? ಆವಾಗ ಜನರು ಸೇರುವುದಿಲ್ಲವೇ? ಹೀಗೆ ಸೇರಿಯೇ ಸೇರುತ್ತಾರೆ. ವೀರ ಶೈವರು ಬರಲೇಬೇಡ. ನಾವು ಕರೆಸಿಯೇ ಕರೆಸುತ್ತೇವೆಂದು ಓಡಾಡುತ್ತಿದ್ದಾರೆ. ಹಾಗೆ ಮಾಡಿಕೊಂಡರೆ ಮಾಡಿಕೊಳ್ಳಲಿ,

ಮಹಾಸ್ವಾಮಿ, ತಾವು ಸ್ವಾರ್ಥಪರರ ಬಲೆಗೆ ಬಿದ್ದು ವೀರ ಶೈವ ಮತದಲ್ಲಿ ಒಡಕನ್ನು ತಂದು ಹಾಕುತ್ತೀರೋ ಅಥವಾ ವೀರ ಶೈವ ಮತಾನುಯಾಯಿಗಳ ಬೇಡಿಕೆಯನ್ನು ಸಲ್ಲಿಸಿ ವೀರಶೈವ ಮತ ದಲ್ಲಿ ಒಗ್ಗಟ್ಟನ್ನುಂಟುಮಾಡುವಿರೋ? ಎಂಬುದನ್ನು ಬಹಿರಂಗವಾಗಿ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ.

[ಈ ಪತ್ರವನ್ನು ಸ್ವಾಮಿಯವರಿಗೆ ರವಾನಿಸಲಾಗಿದೆ. ಇನ್ನು ಮುಂದಿನ ಪತ್ರವ್ಯವಹಾರಗಳನ್ನೆಲ್ಲಾ ಮಹಾಜನರ ಮಧ್ಯದಲ್ಲಿ ನಿರ್ಭಯವಾಗಿ ಬೆಳಸುತ್ತೇವೆ.]

**ಮೈಸೂರ ವೀರಶೈವ ಮಂಡಳಿ.**

---

—ಇಂಗ್ಲೆಂಡಿನಲ್ಲಿ ನೈಮಾನಿಕ ಶಿಕ್ಷಣವನ್ನು ಪಡೆಯುತ್ತಿದ್ದ ಶ್ರೀ ಕೃಷ್ಣ ಪಂತ ವೈದ್ಯ ಎಂಬವನು ತನ್ನ ವಿಮಾನವನ್ನು ನಡೆಸು ತ್ತಿರುವಾಗ ಅದು ಕಳಚಿ ಬಿದ್ದು ಸತ್ತನು.

—ಮಹಾತ್ಮಾಜಿಯವರಿಗೆ ಕಲಕತ್ತೆಯಲ್ಲಿ ಆದಿಜನ ಸಹಾ ಯಾರ್ಥವಾಗಿ ೭೧ ಸಾವಿರ ರೂಪಾಯಿಗಳು ದೊರೆತವು.

—ಆಗ್ರಾದಲ್ಲಿ ಹಿಂದು ದೇವಾಲಯದಲ್ಲಿ ಆರತಿ ಪೂಜೆಯು ನಡೆದಿರಲು ಮುಸಲ್ಮಾನರು ಬಂದು ಅಡ್ಡಿ ಮಾಡಿದ್ದರಿಂದ ಹೊಡೆ ದಾಟವಾಗಿ ೩೦ ಜನರಿಗೆ ಗಾಯಗಳಾಗಿವೆ.

—ನಾ. ಆಗಾಖಾನರು ಹಿಂದುಸ್ಥಾನದಲ್ಲಿ ತಮಗೊಂದು ಸಂಸ್ಥಾನವನ್ನು ಕೊಡಬೇಕೆಂದು ಗುಪ್ತವಾಗಿ ಕೇಳಿಕೊಂಡಿದ್ದ ರಂತೆ. ಅದಕ್ಕೆ ಬ್ರಿಟಿಶ ಸರಕಾರದವರು ಸಮ್ಮತಿಸಲಿಲ್ಲವಂತೆ.

—ಮಧ್ಯಪ್ರಾಂತ ಪ್ರಾಂತಿಕ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾದ ಜನರಲ್ ಆಚಾರಿಯವರು ಎರಡು ಕಡೆ ಕೂಸಿದ ರಾಷ್ಟ್ರೀಯ ಕೆಲ ಕಾರ್ಯಕರ್ತರ ಸಭೆಗಳನ್ನು ನಿಲ್ಲಿಸಿದರು. ಆವಾಗ್ಗೆ ಒಬ್ಬನು ಅವರು ಕುಳಿತ ಉಚ್ಚ ಸ್ಥಾನದಿಂದ ಅವರನ್ನು ಕೆಳಗೆಳೆದನು.

# 'ಪ್ಲೇಗ್ ಸಂಜೀವಿನಿಯ' ಗುಣವರ್ಣನೆ.

[ಚಿಟಗುಪ್ಪಿಯ ಸುಪ್ರಸಿದ್ಧ ಡಾಕ್ಟರರಾದ ಶ್ರೀ ಎನ್ ಬಿ. ಶಾಲಿಗ್ರಾಮು ಎಂ ಬಿ ಬಿ ಎಸ್ ಇವರು ನಮ್ಮ 'ಪ್ಲೇಗ್ ಸಂಜೀವಿನಿಯ' ಮಾತ್ರೆಗಳನ್ನು ಉಪಯೋಗಿಸಿ ಸಂತೋಷಪಟ್ಟು ಈ ಕೆಳಗಿನಂತೆ ಪತ್ರ ಬರೆದಿದ್ದಾರೆ]

ಡಾ. ಎನ್. ಬಿ. ಶಾಲಿಗ್ರಾಮು,
ಎಂ ಬಿ ಬಿ. ಎಸ್. (ಮುಂಬೈ)

ಚಿಟಗುಪ್ಪಾ (ಮೊಯಿನಾಬಾದ)
ತಾ ೧೭-೨-೧೯೩೪.

ಶ್ರೀಮನ್ನಿರಂಜನ ಗುರುಮುತಕಲ್ಲ ಶ್ರೀ ಶಾಂತವೀರ ಸ್ವಾಮಿಗಳವರಿಂದ
ಸಿದ್ಧಗೊಳಿಸಲ್ಪಟ್ಟ

## "ಪ್ಲೇಗ್ ಸಂಜೀವಿನಿ ಮಾತ್ರೆಯು"

ಒಳ್ಳೇ ತೃಪ್ತಿಕರವಾದ ಗುಣಕಾರಿಯಾಗಿರುವದೆಂಬುದನ್ನು ತಿಳುಹಿಸಲು ನನಗೆ ಅತ್ಯಾನಂದವೆನಿಸುತ್ತಿದೆ.

ಪ್ಲೇಗ ಹಾವಳಿಯು ಕಾಲದಲ್ಲಿ ಚಿಟಗುಪ್ಪಿಯ ಮಿ ಹುಪ್ಪಿಕರ, ವಾಗ್ಯ್, ಜಿ ಇವರು ಇದನ್ನು ನನ್ನ ಕಡೆಗೆ ಕಳುಹಿಸಿದ್ದರು ನಾನು ಇದನ್ನೇ ಅನೇಕ ಕಡೆಗಳಲ್ಲಿ ಉಪಯೋಗಿಸಿ, ಇದು ಪ್ಲೇಗ ಉಂಟಾ ಗುವುದನ್ನು ಪ್ರತಿಬಂಧಿಸುವದಲ್ಲದೆ ಒಹ್ವಂಶವ ಗಿ ಪ್ಲೇಗ ಬೇನೆ ಬಂದ ಮೇಲೆಯೂ ಗುಣಪಡಿಸಬಲ್ಲುದೆಂದು ಕಂಡುಕೊಂಡಿದ್ದೇನೆ ಇದನ್ನೇ ಉಪಯೋಗಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸೂಚಿಸು ತ್ತೇನೆ ಮತ್ತು ಇದರ ಜೊತೆಗೆ ಕಳುಹಿಸಲ್ಪಡುವ ಸೂಚನೆಗಳ ಪ್ರಕಾರ ಇದನ್ನು ಉಪಯೋಗಿಸಿದರ ಇದು ಸಂಪೂರ್ಣವಾಗಿ ಗುಣಪಡಿಸುವದೆಂದು ನಾನು ನಿಶ್ಚಯವಾಗಿ ಹೇಳುತ್ತೆನೆ

(ರುಜು) ಎನ್. ಬಿ. ಶಾಲಿಗ್ರಾಮ,
ಎಮ್. ಬಿ ಬಿ ಎಸ್.
ಪ್ಲೇಗಿನ ಮುಖ್ಯಾಧಿಕಾರಿ, ಮೋಯಿನಾಬಾದ
(ಹೈದಿಗಾ)

(ಮೂಲ ಪ್ರತಿಯ ಭಾವಾಂತರ)

---

DR. N. B. SHALIGRAM,
M. B B S (BOM.)

CHITAGOPA (Moinabad)
D 17th February 1934.

IT GIVES ME IMMENSE PLEASURE TO STATE HERE THAT THE RESULTS OF

## *"PLAGUE SANJIWINI MATRA"*

MANUFACTURED BY

## SHANTWIR SWAMI OF GURUMATKAL

ARE QUITE SATISFACTORY

This was sent to me by Mr Hupikar Y. G of Chitagopa, during the plague epidemic I have used the same in many cases and found preventive as well as curative to a great extent I strongly recommend to use the same, which, I assure will give complete relief if it is used according to the instructions accompanying it.

Sd/- N B SHALIGRAM.
M. B. B S (BOM.)
Special Plague Officer, Moinabad.
(Paigah.)

(True copy)

# ರಾಷ್ಟ್ರೀಯ ಸಭೆಯ ಚಟುವಟಿಕೆಗಳು.

### ಸರಕಾರದವರ ಉತ್ತರ.

ಕೇಂದ್ರ ಶಾಸನ ಸಭೆಯಲ್ಲಿ ಮಿ. ಅಬ್ದುಲ ಮತೀನ ಚೌಧರಿ ಇವರು ಶಾಸನೋಲ್ಲಂಘನೆಯ ಚಟುವಟಿಕೆಯಲ್ಲಿ ಶಿಕ್ಷೆಯನ್ನು ಭೋಗಿಸಿದ ರಾಷ್ಟ್ರಸಭೆಯ ಕಾರ್ಯಕರ್ತರಿಗೆ ಶಾಸನ ಸಭೆಗಳ ಆಯ್ಕೆಯಲ್ಲಿ ಉಮೇದುವಾರರಾಗಲು ತಕ್ಕವರಲ್ಲವೆಂಬ ನಿರ್ಬಂಧವನ್ನು ಸರಕಾರದವರು ತೆಗೆದುಹಾಕುವರೇ ಎಂದು ಕೇಳಲು ಗೃಹ ಮಂತ್ರಿಗಳಾದ ನಾ. ಸರ ಹ್ಯಾರಿ ಹೇಗ ಇವರು— ಯಾವನೊಬ್ಬ ಮನುಷ್ಯನಿಗೆ ಫೌಜದಾರಿ ಕೋರ್ಟಿನಲ್ಲಿ ೬ ತಿಂಗಳ ಶಿಕ್ಷೆಯಾದರೆ ಅವನಿಗೆ ೫ ವರುಷಗಳವರೆಗೆ ಆಯ್ಕೆಗೆ ನಿಲ್ಲಲು ಬರುವದಿಲ್ಲ. ಒಂದು ವೇಳೆ ಅವನು ಪ್ರಾಂತಿಕ ಸರಕಾರಕ್ಕೆ ವಿನಂತಿ ಪತ್ರವನ್ನು ಬರೆದು ಕೊಂಡರೆ ಹಿಂದುಸ್ಥಾನ ಸರಕಾರದವರು ಪರ್ಯಾಲೋಚಿಸಿ ಅದನ್ನು ಮಾನ್ಯ ಮಾಡುವರು.

ಮಿ. ನಿಯೋಗಿ—ರಾಜಕೀಯ ಚಟುವಟಿಕೆಯಿಂದ ಶಿಕ್ಷೆಯಾದ ಜನರ ಸಲುವಾಗಿ ಒಂದು ಸರ್ವಸಾಧಾರಣ ಅಪ್ಪಣೆಯನ್ನು ಸರಕಾರದವರು ಮಾಡಲು ಯೋಚಿಸಲಿಲ್ಲವೆಂದು ನಾವು ತಿಳಿಯ ಬಹುದೇನು?

ನಾ. ಹ್ಯಾ. ಹೇಗ—ಸದ್ಯಕ್ಕಿರುವ ನಿಯಮದಲ್ಲಿ ಯಾವದೇತರದ ತಿದ್ದುಪಡಿಯನ್ನು ಮಾಡಬಾರದೆಂದು ಸರಕಾರದವರು ನಿಶ್ಚೈಸಿದ್ದಾರೆ. ಆದರೆ ಇಂಥ ವಿನಂತಿ ಪತ್ರಗಳ ಸಲುವಾಗಿ ಸದ್ಯಃ ಹಿಂದುಸ್ಥಾನ ಮತ್ತು ಪ್ರಾಂತಿಕ ಸರಕಾರಗಳ ಮಧ್ಯದಲ್ಲಿ ಪತ್ರವ್ಯವಹಾರವು ನಡೆದಿದೆ.

ಕೆಂಪಂಗಿಯವರ ಮೇಲಿನ ನಿರ್ಬಂಧವನ್ನು ತೆಗೆದು ಹಾಕುವದಕ್ಕಾಗಿ ವಿಚಾರಿಸಲು ನಾ. ಹ್ಯಾರಿ ಹೇಗ ಸಾಹೇಬರು— ಕೆಂಪಂಗಿಯವರು ಕ್ರಾಂತಿಕಾರಕರೆಂದು ಸರಕಾರದವರು ತಿಳಿದಿಲ್ಲ. ಆದರೂ ಅವರ ಉದ್ದೇಶವು ಬ್ರಿಟಿಶ ಸರಕಾರವನ್ನು ಹಿಂದುಸ್ಥಾನದಿಂದ ತಳ್ಳಿಬಿಡುವುದಾಗಿದೆ. ಅವರು ಅ. ಪೋ. ಕಮಿಶನರರ ಕೊಲೆ ಮಾಡಿದ್ದಾರೆ. ಆದುದರಿಂದ ಸದ್ಯಕ್ಕೆ ಸರಕಾರದವರು ಸರಹದ್ದ ಗಾಂಧಿಯವರನ್ನು ತಿರುಗಿ ಕಳುಹಿಸಲಿಕ್ಕೆ ಸಿದ್ಧರಿಲ್ಲ.

### ಪ್ರಾಂತಿಕ ರಾಷ್ಟ್ರೀಯ ಸಮಿತಿಗಳಲ್ಲಿ ಭೇದ

ಬಂಗಾಲ ಪ್ರಾಂತಿಕ ರಾಷ್ಟ್ರೀಯ ಸಮಿತಿಯಲ್ಲಿಯ ಭೇದವನ್ನು ನಿವಾರಿಸುವುದಕ್ಕಾಗಿ ಮಹಾತ್ಮಾಜಿಯವರು ಮತ್ತು ಶ್ರೀಯುತ ಮಾಧವರಾವ ಅಣೆ ಇವರು ರಾಷ್ಟ್ರೀಯ ಕಾರ್ಯಕರ್ತರ ಸಭೆ ಕೂಡಿಸಿದ್ದರು. ಎರಡೂ ಪಕ್ಷಗಳಲ್ಲಿ ಒಪ್ಪಂದವನ್ನು ಮಾಡುವ ಕುರಿತು ಈ ಸಭೆಯಲ್ಲಿ ಚರ್ಚೆಯಾಯಿತು. ಪ್ರಾಂತಿಕ ಸಭಾಸದರು ತನ್ನ ಅಧ್ಯಕ್ಷರನ್ನು ತಾವೇ ನಿಯಮಿಸಬೇಕೆಂದೂ ಇಲ್ಲದೆ ಹೋದರೆ ಅವರ ಸಭೆಗಳಲ್ಲಿ ತಾವು ಇನ್ನು ಮುಂದೆ ಉಪಸ್ಥಿತರಾಗುವದಿಲ್ಲವೆಂದೂ ಮಹಾತ್ಮಾಜಿಯವರು ತಿಳಿಸಿದರು. ಆ ಮೇಲೆ ಅವರು ಈ ರೀತಿ ಪ್ರಸಿದ್ಧಿಸಿದ್ದಾರೆ. ಪಕ್ಷಭೇದವು ಹೋಗಬೇಕೆಂದಿದ್ದರೆ ಹಣಕೊಟ್ಟು ಮತಗಳನ್ನು ದೊರಕಿಸುವ ಪದ್ಧತಿಯು ರಾಷ್ಟ್ರೀಯ ಸಂಸ್ಥೆಗಳಿಂದ ನಿವಾರಣೆಯಾಗಬೇಕು. ಉಮೇದುವಾರರು ಸ್ವತಃ ಮತದಾರರ ಪೆಟ್ಟಿಯನ್ನು ಮಾಡುವ ಪದ್ಧತಿಯು ಸರಿಯಾದುದಲ್ಲ ರಾಷ್ಟ್ರೀಯ ಸಂಸ್ಥೆಗಳಲ್ಲಿ ಪಾವಿತ್ರ್ಯ ಮತ್ತು ಸ್ವಾಮಾಣಿಕತನವಿಲ್ಲದೆ ಬಂಗಾಲದ ಕ್ಷುಬ್ಧ ವಾತಾವರಣವು ಶಾಂತವಾಗುವದಿಲ್ಲ.

ರಾಜಪುತಾನಾ ವ್ಯಾಂತಿಕ ರಾಷ್ಟ್ರೀಯ ಸಮಿತಿಯವರ ಶ್ರೀ. ಜಮನಾಲಾಲ ಬಜಾಜ ಇವರ ಅಧ್ಯಕ್ಷತೆಯಲ್ಲಿ ಅಜಮೀರದಲ್ಲಿ ಸಭೆ ಸೇರಿ ತಮ್ಮಲ್ಲಿರುವ ಪಕ್ಷಭೇದವನ್ನು ನಿವಾರಣೆ ಮಾಡುವ ಕುರಿತು ಚರ್ಚೆಗಳಾದವು.

### ಕರ್ನಾಟಕ.

ಧಾರವಾಡ ಜಿಲ್ಲಾ ರಾಷ್ಟ್ರೀಯ ಸಮಿತಿಯ ಅಧಿವೇಶನವು ಹುಬ್ಬಳ್ಳಿಯಲ್ಲಿ ಕೂಡಿದ್ದಿತು. ಶ್ರೀ. ಹೊಸಮನಿ ಸಿದ್ಧಪ್ಪನವರು ಅಧ್ಯಕ್ಷರಾಗಿಯೂ, ಶ್ರೀ|| ಜಾಲಿಹಾಳ ಅನಂತರಾಯರು ಮತ್ತು ಶ್ರೀ|| ಕುಂದಾಪುರದ ಉಮಾಬಾಯಿಯವರು ಉಪಾಧ್ಯಕ್ಷರಾಗಿಯೂ, ಶ್ರೀ|| ಮಾಗಡಿ ಮತ್ತು ಶ್ರೀ|| ಚವಟಿಯವರು ಕಾರ್ಯದರ್ಶಿಗಳಾಗಿಯೂ, ಹಾಗೂ ಶ್ರೀ|| ಹಳ್ಳಿಕೇರಿ ಗುದ್ಲೆಪ್ಪನವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಶ್ರೀ. ಸಿದ್ಧಪ್ಪ ಹೊಸಮನಿ ಇವರು ದಕ್ಷಿಣ ಭಾಗದ ಪರವಾಗಿ ಕೇಂದ್ರ ಶಾಸನ ಸಭೆಯ ಆಯ್ಕೆಗೆ ನಿಲ್ಲುವರು. ಅವರು ರಾಷ್ಟ್ರೀಯ ಶಪಥ ಪತ್ರಿಕೆಯ ಮೇಲೆ ಸಹಿಯನ್ನೂ ಮಾಡಿರುವರು.

### ಉಪವಾಸ ವ್ರತ.

ಅಮೃತಸರ ರಾಷ್ಟ್ರೀಯ ಸಮಿತಿಯಲ್ಲಿ ಭಿನ್ನಭೇದವಿದ್ದುದಕ್ಕಾಗಿ ಕೆಲವು ದಿವಸಗಳ ಹಿಂದೆ ಡಾ. ಕಿಚಲು ಇವರು ಭಾಷಣ ಮಾಡುವಾಗ್ಗೆ ಸಭೆಯಲ್ಲಿ ಗಲಭೆಯನ್ನೆಬ್ಬಿಸಿದುದಕ್ಕಾಗಿ ಡಾ. ಕಿಚಲು ರವರು ೭ ದಿವಸಗಳವರೆಗೂ ಮತ್ತು ಶ್ರೀ. ಆನಂದಾನಂದರು ಪ್ರಾಣಾಂತಿಕವೂ ಉಪೋಷಣೆ ನಡೆಸಿದ್ದಾರೆ. ಅವರು ಜಾಲಿಯಾನವಾಲಾಬಾಗಿನ ಒಂದು ಗಿಡದ ಬುಡದಲ್ಲಿ ಕುಳಿತಿದ್ದು ಶಾಂತವಾಗುವ ಲಕ್ಷಣವಿನ್ನೂ ಉಂಟಾಗಿರುವುದಿಲ್ಲ.

### ಕಾರ್ಯಕಾರಿ ಸಮಿತಿಯಲ್ಲಿ ಜಾತಿ ತತ್ವ ನಿರ್ಣಯ.

ಶ್ರೀ. ಮಾಧವರಾವ ಅಣೆ ಮತ್ತು ಪಂ. ಮಾಲವಿಯ ಇವರು ಜಾತಿ ನಿರ್ಣಯದ ವಿಷಯವಾಗಿ ತಮ್ಮ ಕೆಲ ನಿರ್ಬಂಧಗಳನ್ನು ಸೂಚಿಸಿದ್ದಾರೆ. ಅವನ್ನು ಗುಪ್ತವಾಗಿರಿಸಲಾಗಿದೆ. ಜಾತಿ ನಿರ್ಣಯದ ವಿಷಯಕ್ಕೆ ೫ ಗಂಟೆಗಳ ವರೆಗೆ ಚರ್ಚೆ ನಡೆಯಿತು. ಆದರೆ ಏನೂ ನಿರ್ಣಯವಾಗಲಿಲ್ಲ.

ಡಾ. ಆಲಮ್ ರವರು ತಮ್ಮ ಸದಸ್ಯತ್ವದ ಸ್ಥಾನವನ್ನು ತ್ಯಜಿಸಿದ ಬಗ್ಗೆ ಕೊಟ್ಟ ತ್ಯಾಗಪತ್ರವು ಸ್ವೀಕೃತವಾಯಿತು.

ದೇಶೀ ಸಂಸ್ಥಾನಗಳು ಮತ್ತು ಹಿಂದುಸ್ಥಾನ ಸರಕಾರ ಇವುಗಳ ಮುಂದಿನ ಸಂಬಂಧವನ್ನು ವಿಚಾರಿಸಿ ಸಂಸ್ಥಾನದ ಪ್ರಜೆಗಳ ಹಕ್ಕಿನ ಸಂರಕ್ಷಣೆಗಾಗಿ ರಾಷ್ಟ್ರೀಯ ಕಾರ್ಯ ಘಟನೆಯಲ್ಲಿ ಯಾವ ಪ್ರಯತ್ನ ಮಾಡಬೇಕೆಂದು ಶ್ರೀ ಅಮೃತಲಾಲ ಶೇಠರು, ಮಿ. ಗಾಂಧಿ ಮತ್ತು ಸರದಾರ ಪಟೇಲರೊಡನೆ ಚರ್ಚೆಸಿದರು. ಅವರ ಆಭಿಪ್ರಾಯವನ್ನು ಕಾರ್ಯಕಾರಿ ಸಮಿತಿಯ ಮುಂದಿಡುವದಾಗಿ ಉಭಯತರು ಹೇಳಿದರು.

---

—ಸರ್ ಕೌಸಾಜಿ ಜಹಾಂಗೀರರು ಲಗ ನೇ ವಯಸ್ಸಿನಲ್ಲಿ ಮರಣ ಹೊಂದಿದರು.





ಶಾ. ಶ. ೧೮೫೬ ನೆಯ ಆಷಾಢ ಬ|| ೪ ಸೋಮವಾರ.

# ಜಗದ್ಗುರುಗಳ ದಿವ್ಯ ಆಜ್ಞಾಪತ್ರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರು ಘಾರಾಜೇಂದ್ರ ಮಹಾಸ್ವಾಮಿಗಳವರಿಗೆ ಬೆಂಗಳೂರು ಪಂಡಿತ ರೇವ ಣಾರಾಧ್ಯರು ೨೫ ಪ್ರಶ್ನೆಗಳನ್ನು ಅರಿಕೆಮಾಡಿಕೊಂಡುದಕ್ಕೆ ಜಗದ್ಗು ರುಗಳು ಪ್ರಕಟಿಸಿದ ಆಜ್ಞಾ ಪತ್ರವನ್ನು ಇದೇ ಸಂಚಿಕೆಯ ಬೇರೊಂದುಕಡೆ ಉದಾಹರಿಸಿದ್ದಾಗಿದೆ. ಆ ೨೫ ಪ್ರಶ್ನೆಗಳ ಒಂದು ಪುಸ್ತಕವು ನಮ್ಮ ಕಡೆಗೂ ವಿಮರ್ಶೆಗಾಗಿ ಯಾರಿಂದಲೋ ಕಳುಹಿ ಸಲ್ಪಟ್ಟಿದೆ. ಆ ಪ್ರಶ್ನೆಗಳು ಜಗದ್ಗುರು ಸನ್ನಿಧಿಯಲ್ಲಿ ಅರಿಕೆ ಮಾಡಿ ಕೊಂಡವುಗಳಾಗಿರುವುದರಿಂದ ನಾವು ಅವುಗಳ ವಿಮರ್ಶೆಮಾಡು ವುದು ಅಸಂಗತವಾಗಿದೆ.

ಆದರೆ ಶರಣಸಂದೇಶ ಪತ್ರಿಕೆಗೆ ಶ್ರೀ ಜಗದ್ಗುರು ಸನ್ನಿಧಿ ಯಿಂದ ಧನಸಹಾಯ ಮಾಡಲ್ಪಟ್ಟಿದೆಯೆಂದು ಈ ಪಂಡಿತರು ಆ ಪುಸ್ತಕದಲ್ಲಿ ಬರೆದುದನ್ನು ಮಾತ್ರ ನಾವು ತುಂಬಾ ನಿಷೇಧಿಸದಿರಲಾ ರೆವು. ಅನ್ಯರ ನಡತೆಗಳ ಸಂಬಂಧವಾಗಿ ಹೀಗೆ ನಿಂದ್ಯವಾದ ಆಕ್ಷೇಪಣೆ ಮಾಡಲು ಮುಂದೆ ಬಂದಿರುವ ಈ ಪಂಡಿತ ರೇವಣಾ ರಾಧ್ಯರು ಈ ತಮ್ಮ ವಿಧಾನಕ್ಕಿರುವ ಆಧಾರಗಳನ್ನು ತಿಳಿಸಬೇ ಕೆಂದು ಈ ಮೂಲಕ ಅವರಿಗೆ ಆಹ್ವಾನಗೊಳಿಸುತ್ತೇವೆ. ಹಾಗೆ ಅವರು ತಿಳಿಸದಿದ್ದರೆ ದುಷ್ಟ ಬುದ್ಧಿಯಿಂದಲೇ ಹೀಗೆ ಸಲ್ಲದ ಸಂಗತಿ ಯನ್ನು ಪ್ರಕಟಿಸಿದ್ದಾರೆಂದು ಯಾರು ತಾನೆ ತಿಳಿಯಲಿಕ್ಕಿಲ್ಲ?

ಶ್ರೀ ಜಗದ್ಗುರು ಸನ್ನಿಧಿಗೆ ಮಾತ್ರವೇ ರೇವಣಾರಾಧ್ಯರು ಪ್ರಶ್ನೆಗಳನ್ನು ಅರಿಕೆಮಾಡಿಕೊಂಡಿದ್ದರೂ ಜಗದ್ಗುರು ಸನ್ನಿಧಿಯಿಂದ ಆಜ್ಞಾಪತ್ರದ ಮೂಲಕ ಪ್ರಕಟವಾದ ಉತ್ತರಗಳು ಮಾತ್ರ ಅವರಿ ಗೇನೇ ಇರದೆ ಅಶೇಷ ವೀರಶೈವರಿಗೂ ಅನ್ವಯಿಸಿರುವುದರಿಂದ ಇದು ವೀರಶೈವ ಸಮಾಜಕ್ಕೇನೇ ಸಂಬಂಧಿಸಿದ ಅತ್ಯಂತ ಮಹತ್ವದ ಆಜ್ಞಾಪತ್ರವಾಗಿ ಪರಿಣಮಿಸಿದೆ. ಆದಕಾರಣ ಈ ವಿಷಯದಲ್ಲಿ ಪ್ರಸ್ತಾಪಿಸುವುದು ಅಗತ್ಯವಾಯಿತು.

ಶ್ರೀ ಜಗದ್ಗುರು ಪೀಠದ ಸಂಬಂಧವಾಗಿಯು ಮತ್ತು ತಮ್ಮ ಕಾರ್ಯಗಳ ವಿಷಯದಲ್ಲಿಯಷ್ಟೇ ಅಲ್ಲ; ವೀರಶೈವ ಮತತತ್ವಗ ಳನ್ನು ಕುರಿತು ಸಹ ಬೇಕಾದವರು ತಮ್ಮಲ್ಲಿ ಬಂದು ಸಂಭಾಷಿಸಿ ತಮ್ಮ ತಮ್ಮ ಸಂಶಯಗಳನ್ನು ನಿವಾರಣೆಮಾಡಿಕೊಳ್ಳಬಹುದೆಂ ತಲೂ ಈ ವಿಷಯಗಳಲ್ಲಿ ಯಾವ ತಡೆಯೂ ಇಲ್ಲವೆಂತಲೂ ಮಹಾ ಸ್ವಾಮಿಗಳು ತಮ್ಮ ಈ ಆಜ್ಞಾಪತ್ರದಲ್ಲಿ ಅಪ್ಪಣೆ ಕೊಡಿಸಿರುವುದು ಬಹು ಸಮಂಜಸವಾಗಿದೆ.

ಇದು ಸ್ವಾತಂತ್ರ್ಯ ಯುಗ, ಆದುದರಿಂದ ಸಮಾಜದ ಇಂತಹ ಶ್ರೇಷ್ಠ ಸ್ಥಾನದಲ್ಲಿರುವವರು ಹೀಗೆ ಸಮಾಜದ ಪ್ರತಿ ಯೊಂದು ವ್ಯಕ್ತಿಗೂ ಸಾರ್ವಜನಿಕವಾದ ಸಂಗತಿಯನ್ನು ತಿಳಿದು ಕೊಳ್ಳಲು ತುಂಬಾ ಅವಕಾಶವನ್ನು ಕೊಡಬೇಕಾದುದು ಎಷ್ಟು ಯುಕ್ತವೂ ಭೂಷಣಪ್ರದವೂ ಆಗಿದೆ ಎಂಬುದನ್ನು ಈ ಪ್ರಜಾ ಪ್ರಭುತ್ವದ ಕಾಲದಲ್ಲಂತೂ ವಿವರಿಸಿ ಹೇಳಬೇಕಾದುದೇ ಇಲ್ಲ.

ಯಾರೋ ಒಬ್ಬರು ಏನೇನೋ ಪ್ರಶ್ನೆಗಳನ್ನು ಕೇಳಿದ್ದರೂ ಶ್ರೀ ಜಗದ್ಗುರುಗಳು ಅವುಗಳನ್ನು ಉಪೇಕ್ಷಿಸದೆ ತಮ್ಮ ಮೇಲಿರುವ ಮಹತ್ವದ ಹೊಣೆಗಾರಿಕೆಯನ್ನು ಚಿತ್ತಕ್ಕೆ ತಂದು ಈಗಿನ ಪದ್ಧತಿ ಗನುಸರಿಸಿ ಕೂಡಲೆ ಒಂದು ಆಜ್ಞಾ ಪತ್ರವನ್ನು ಪ್ರಕಟಿಸಿದ್ದಲ್ಲದೆ ಬಸವೇಶನು ತಮಗೆ ಅಪೂಜ್ಯನು, ವೀರಶೈವರಲ್ಲಿಯೂ ಬ್ರಾಹ್ಮ ಣಾದಿ ಜಾತ್ಯವರ್ಣಗಳುಂಟೆಂದು ಕೆಲವರು ಹೇಳುತ್ತ ಸಮಾಜದಲ್ಲಿ ಅತ್ಯಂತ ಘಾತಕವಾದ ಕಲಹವನ್ನೆಬ್ಬಿಸಿರುವ ಈ ಕಠಿಣ ಪ್ರಸಂಗ ದಲ್ಲಿ ಅವರ ದುರ್ವಾದವನ್ನು ಖಂಡಿಸಿ ಬಸವೇಶನು ಸಮಸ್ತ ವೀರ ಶೈವರಿಗೂ ಪರಮಪೂಜ್ಯನು ಮತ್ತು ವೀರಶೈವರು ಅತಿವರ್ಣ ಗಳು ಎಂದು ಸ್ಪಷ್ಟವಾಗಿ ಅದರಲ್ಲಿ ವಿವೇಚಿಸಿರುವುದನ್ನು ನೋಡಿ ದರೆ ಯಾವ ಸುಜ್ಞರು ತಾನೆ ಇದಕ್ಕೆ ದಿವ್ಯ ಆಜ್ಞಾಪತ್ರವೆಂದು ಹೇಳಲಾರರು? ಇದಲ್ಲವೆ ಜಗದ್ಗುರುತ್ವಕ್ಕೆ ಶೋಭಿಸುವ ರೀತಿ ನೀತಿಯು?

ಈ ಜಗದ್ಗುರುಗಳ ಪದ್ಧತಿಯನ್ನೇ ಬಾಳೆಹಳ್ಳಿಯ ಈಗಿನ ಶ್ರೀಗಳೂ ಅನುಸರಿಸಿದ್ದರೆ ಸಮಾಜದಲ್ಲಿ ಇಷ್ಟು ಅಸಂತೋಷವುಂ ಟಾಗುತ್ತಿದ್ದಿತೆ? ಸಮಾಜಕ್ಕೂ ಶ್ರೀಗಳಿಗೂ ತುಂಬಾ ವಿಷಾದವ ನ್ನುಂಟುಮಾಡುವಂತಹ ಇದೇ ಸಂಚಿಕೆಯ ಬೇರೊಂದು ಕಡೆ ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯ ಸಂಗತಿಗಳನ್ನು ಮೈಸೂರು ವೀರಶೈವ ಮಹಾಜನಗಳು ಬಾಳೆಹಳ್ಳಿ ಶ್ರೀಗಳಿಗೆ ಅರಿಕೆಮಾಡಿಕೊ ಳ್ಳುವ ದುಃಖ ಪ್ರಸಂಗವು ಬರುತ್ತಿದ್ದಿತೇ?

ಬಾಳೆಹಳ್ಳಿ ಶ್ರೀಗಳು ಈಗಲಾದರೂ ಜಗದ್ಗುರುಗಳ ಈ ರೀತಿ ನೀತಿಗಳನ್ನನುಸರಿಸಿ ಸಮಾಜದ ಕಲಹಾಗ್ನಿಯನ್ನು ಶಾಂತಗೊಳಿಸ ಲೆಂದು ಹಾರೈಸಿ ಈ ಗುರುಪೀಠದವರಿಗೆ ಮೇಲ್ಪಂಕ್ತಿಯಾಗಿಯೂ ವೀರಶೈವ ಸಿದ್ಧಾಂತದ್ಯೋತಕವಾಗಿಯೂ ಇರುವ ಇಂತಹ ದಿವ್ಯ ಆಜ್ಞಾಪತ್ರವನ್ನು ಪ್ರಕಟಿಸಿದುದಕ್ಕೋಸ್ಕರ ಶ್ರೀಜಗದ್ಗುರು ಜಯದೇವ ಮುರಳಿರಾಜೇಂದ್ರ ಮಹಾಸ್ವಾಮಿಗಳವರಿಗೆ ನಮ್ಮ ಹೃದಯಪೂರ್ವಕವಾದ ಅಭಿನಂದನಗಳನ್ನು ಸಮರ್ಪಿಸುತ್ತೇವೆ.

---

—ದಕ್ಷಿಣಾಪ್ರಿಕಾ ಮತ್ತು ಝಾಂಝಿಬಾರಗಳಲ್ಲಿರುವ ಹಿಂದೀ ವ್ಯಾಪಾರಸ್ಥರ ತೊಂದರೆಯನ್ನು ನಿವಾರಿಸುವದಕ್ಕೆ ಏರ್ಪಾಟುಮಾಡಿಕೊ ಳ್ಳುವದಕ್ಕಾಗಿ ವ್ಯಾಯಿಸರಾಯರ ಕಡೆಗೆ ಒಂದು ಶಿಷ್ಟ ಮಂಡಲ ವನ್ನು ಕಳಿಸಲು ನಾ. ಗಾಂಧೀಜಿಯವರು ಧರ್ಮಾತ್ಮಾ ಮೂಲವೀಜಿಯವ ರಿಗೆ ತಂತಿ ಮೂಲಕ ವಿನಂತಿಮಾಡಿಕೊಂಡಿದ್ದಾರೆ. ಪಂಡಿತಜಿ ಯವರೂ ಬೆಂಬಲರಾಗುವರಂತೆ.

ವ್ಯಾಪಾರಸ್ಥರಿಗೆ ನಿತ್ಯವೂ ಉಪಯೋಗ ಬೀಳುವ

# ರೇಲ್ವೆ ಸಂಬಂಧದ ಮಾಹಿತಿಯು.

(ಕರ್ನಾಟಕ ಚೇಂಬರ ಆಫ್ ಕಾಮರ್ಸದ ಗೌರವ ಕಾರ್ಯದರ್ಶಿಗಳಿಂದ)

**ಓದಿರಿ! ವ್ಯಾಪಾರಸ್ಥರಲ್ಲಿ ಹಂಚಿರಿ!! ಮತ್ತು ಹೆಚ್ಚಿಗೆ ಬೇಕಾದರೆ ತರಿಸಿಕೊಳ್ಳಿರಿ.**

—( ಕಳೆದ ಸಂಚಿಕೆಯಿಂದ ಮುಂದುವರಿದುದು )—

### ರೇಲ್ವೆಯ ಮೇಲೆ ಫಿರ್ಯಾದಿಯನ್ನು ಹೇಗೆ ಮಾಡಬೇಕು?

ರೇಲ್ವೆ ಕಂಪನಿಯ ಮೇಲೆ ದಿವಾಣಿ ದಾವೆಯನ್ನು ತರುವ ದಕ್ಕಿಂತ ಮುಂಚೆ ಆ ಕಂಪನಿಗೆ ಮಾಲಿನ ಲುಕ್ಸಾನದ ವಿಷಯದಲ್ಲಿ ಮೊದಲಿಗೊಂದು ನೋಟೀಸು ಕೊಡಬೇಕಾಗುತ್ತದಷ್ಟೇ. ಈ ಪ್ರಕಾರ ಕಾಯಿದೇಶೀರ ರಜಿಸ್ಟರ ನೋಟೀಸನ್ನು ಕೊಟ್ಟರೂ ಕೂಡ ಕಂಪನಿಯವರು ಲುಕ್ಸಾನವನ್ನು ತುಂಬದಿದ್ದರೆ ದಾವೆಯನ್ನು ತರ ಬೇಕಾಗುತ್ತದೆ. ಈ ದಾವೆಯನ್ನು ತರುವಾಗ್ಗೆ ಪ್ರತಿವಾದಿಯ ವರ್ಣನೆಯನ್ನು ಕೊಡುವ ಕಾಲಕ್ಕೆ 'ಏಜಂಟ ಅಥವಾ ಜನರಲ್ ಟ್ರಾಫಿಕ್ ಮ್ಯಾನೇಜರ ಇಂಥ ಕಂಪನಿ' ಹೀಗೆ ವರ್ಣನೆಯನ್ನು ಕೊಡುವದು ಬಹಳ ಕಡೆಗೆ ಇಂದಿಗೆ ರೂಢಿಯಲ್ಲಿದೆ. ಆದರೆ ಇದು ತಪ್ಪೆಂದು ಪಾಟಣಾ ಹಾಯಕೋರ್ಟನವರು ನಿರ್ಣಯಿಸಿದ್ದಾರೆ. ಇಷ್ಟೇ ಅಲ್ಲ, ವಿಶಿಷ್ಟ ಪರಿಸ್ಥಿತಿಯ ಮೂಲಕ ಇದರಲ್ಲಿ ತಿದ್ದು ಪಡೆಯನ್ನು ಕೂಡ ಮಾಡಲಿಕ್ಕೆ ಬರುವದಿಲ್ಲೆಂದು ಆ ಹಾಯಕೋರ್ಟನ ಅಭಿಪ್ರಾಯವಿದೆ. ಮತ್ತು ಆ ನಿರ್ಣಯಕ್ಕನುಸರಿಸಿ ಒಂದು ಕೋರ್ಟನಲ್ಲಿ ಇಂಥದೊಂದು ದಾವೆಯು ರದ್ದಾದದ್ದು ನಮಗೆ ಗೊತ್ತಿದೆ. ಸಿವಿಲ್ ಪ್ರೋಸೀಜರ ಕೋಡದ ಪರಿಶಿಷ್ಟದಲ್ಲಿ **ಇಂಥ ಕಂಪನಿ ಲಿಮಿಟೆಡ್, ರಜಿಸ್ಟರ್ಡ ಹೆಡ್‌ಆಫೀಸ ಇಂಥದು** ಹೀಗೆ ವರ್ಣನೆಯಿರಬೇಕೆಂದು ಯಾವ ಸಿಯಮವು ಹೇಳುತ್ತದೆಯೋ ಅದರ ಪ್ರಕಾರವೇ ಪೂರ್ಣ ವರ್ಣನೆಯಿರಬೇಕು. ಹಾಗು ಸಮನ್ಸು ಬಜಾಯಿಸುವ ಮೊದಲಾದ ಕಾರ್ಯಗಳನ್ನು ಕೂಡ ಅದೇ ಕೋಡದ ೪೯ನೇ ಆರ್ಡರ ಪ್ರಕಾರ ಮಾಡತಕ್ಕದ್ದೆಂಬದಾಗಿ ಪಾಟಣಾ ಹಾಯ ಕೋರ್ಟನವರ ಅಭಿಪ್ರಾಯವಿದೆ. ಅಸಲರ್ಜಿಯ ತಿದ್ದುಪಡೆಯ ಸಂಬಂಧದಲ್ಲಿ ಮುಂಬಯಿ ಹಾಯಕೋರ್ಟನವರು ಮಾಡಿದ ಒಟ್ಟು ನಿಕಾಲೆಗಳ ಕಾಯಿದೆಯ ಘೋರಣವನ್ನು ನಿಚಾರಿಸಿ ನೋಡ ಲಾಗಿ 'ಏಜೆಂಟ ಅಥವಾ ಮ್ಯಾನೇಜರ ಇಂಥ ರೇಲ್ವೆ' ಹೀಗೆ ವರ್ಣ ನೆಯಿದ್ದಾಗ ಈ ಶಬ್ದಗಳನ್ನು ತೆಗೆದು ಅವಶ್ಯವಿದ್ದ ತಿದ್ದುಪಡೆಯನ್ನು ಮಾಡಬಹುದೆಂಬ ಅಭಿಪ್ರಾಯವು ಒಡೆದು ಕಾಣುತ್ತದೆ. ಹೀಗಿದ್ದರೂ ಕೂಡ, ಇಂಥ ರೀತಿಯ ವಾದವಿವಾದವನ್ನು ಮಾಡುತ್ತ ಕೂಡುವ ಪ್ರಸಂಗವೇ ಬರಬಾರದೆಂದು ಇನ್ನು ಮುಂದೆ ರೇಲ್ವೆ ಕಂಪನಿಗಳ ಮೇಲೆ ಫಿರ್ಯಾದಿಯನ್ನು ದಾಖಲೆ ಮಾಡುವವರೆಲ್ಲರೂ ಸಿ. ಪ್ರೋ. ಕೋಡದ ಪರಿಶಿಷ್ಟದಲ್ಲಿ ಕೊಟ್ಟಂಥ ರೀತಿಯ ಪ್ರಕಾರವೇ ವರ್ಣನೆಯನ್ನು ಕೊಡುವದು ಬಹಳ ಒಳ್ಳೇದು. ಮತ್ತು ಮೇಲಿನ ಸೂಚನೆಗಳ ಕಡೆಗೆ ನಾವಿಗಳೂ ಅವರ ವಕೀಲರೂ ಲಕ್ಷ್ಯ ವನ್ನು ಕೊಡತಕ್ಕದ್ದೆಂದು ನಮ್ಮ ಸೂಚನೆಯಿರುತ್ತದೆ.

### ೭. ವ್ಯಾಪಾರಸ್ಥರಿಗೆ ಎಚ್ಚರಿಕೆ.

ರೇಲ್ವೆಯ ಕಾರಭಾರದಲ್ಲಿ ವ್ಯಾಪಾರಸ್ಥರಿಗೆ ಅಡ್ಡಿಯನ್ನೊಡ್ಡುವ ಬಂಡೆಗಲ್ಲುಗಳಲ್ಲಿ ಕಂಪನಿಯ ಮೇಲೆ ದಿವಾಣಿ ಕೋರ್ಟನಲ್ಲಿ ಫಿರ್ಯಾದಿಯನ್ನು ಮಾಡುವ ಮೊದಲು ರೇಲ್ವೆ ಆಕ್ಟಿನ ೭೭ ಮತ್ತು ೧೪೦ ಕಲಮುಗಳ ಪ್ರಕಾರ ಯಾವ ನೋಟೀಸನ್ನು ಕೊಡ ಬೇಕಾಗುತ್ತದೋ ಅದೊಂದು ದೊಡ್ಡ ಬಂಡೆಗಲ್ಲಾಗಿರುತ್ತದೆ. ರೇಲ್ವೆಯ ಮೇಲಿಂದ ಬರುವ ಮಾಲಿಗೆ ಲುಕ್ಸಾನವು ತಟ್ಟಿದ್ದರೆ ಇದರ ಸಂಬಂಧವಾಗಿ ಮೊದಲನೇ ರಿಪೋರ್ಟನ್ನು ಸಾಧಾರಣವಾಗಿ ಸ್ಟೇಶನ್ ಮಾಸ್ತರರು ಮಾಡುತ್ತಾರೆ; ಮತ್ತು ಮುಂದೆ ಪ್ರಕರಣವು ನಡೆದು ಲುಕ್ಸಾನದ ವಿಚಾರಣೆಯಾಗುವದು. ಇಂಥ ಚೌಕಶಿಯಲ್ಲಿ ಟ್ರಾಫಿಕ್ ಇನ್ಸ್‌ಪೆಕ್ಟರರಂಥ ಅಧಿಕಾರಿಗಳು ಮೇಳೆ ಮೇಳೆಗೆ ಬಂದು ಲುಕ್ಸಾನದ ಅಂಕೆಯನ್ನು ಸಹ ಎಷ್ಟೋ ಸಾರೆ ಗೊತ್ತು ಮಾಡುತ್ತಾರೆ, ಮತ್ತು ಆ ಪ್ರಕಾರ ಎಷ್ಟೋ ಸಾರೆ ಹಣ ವಾದರೂ ಶಿಗುತ್ತದೆ. ಇದರಿಂದ ಇಷ್ಟನ್ನು ಹೊರತುಪಡಿಸಿ ಹೆಚ್ಚಿ ನದೇನನ್ನೂ ಕಾಯಿದೆ ಪ್ರಕಾರ ತಮಗೆ ಮಾಡಲಿಕ್ಕೆ ಬರುವದಿಲ್ಲ ವೆಂದು ವ್ಯಾಪಾರಸ್ಥರ ತಿಳುವಳಿಕೆಯಾಗುತ್ತದೆ. ಅಲ್ಲದೆ ಮಾಲಿನ ಸಂಬಂಧದಲ್ಲಿ ಏನಾದರೂ ತಕರಾರು ಮಾಡುವದಿದ್ದರೆ ಅದನ್ನು ಮ್ಯಾನೇಜರ ಅಥವಾ ಸುಪರಿಂಟೆಂಡೆಂಟ್‌ನ ಕಡೆಗೆ ಮಾಡತಕ್ಕದ್ದೆಂಬ ದಾಗಿ ಕಂಪನಿಯವರಿಂದ ಪುಸಿದ್ದ ಮಾಡಲ್ಪಟ್ಟ ಗುಡ್ಸ ಟ್ಯಾರಿಫ್ ದಂಥ ಪುಸ್ತಕದಲ್ಲಿರುವದರಿಂದ ಆ ಅಧಿಕಾರಿಗಳ ಕಡೆಗೆ ಮೇಳೆಮೇಳೆಗೆ ತಕರಾರು ಮಾಡಿಬಿಟ್ಟರೆ ಮುಗಿಯಿತೆಂದು ವ್ಯಾಪಾರಸ್ಥರ ಭಾವ ನೆಯು ಸಹಜವಾಗಿ ಆಗುತ್ತದೆ. ಈ ಎರಡು ಮೋಸಗಳಲ್ಲದೆ ಇನ್ನೊಂದು ಬಗೆಯ ಮೋಸಕ್ಕೆ ವ್ಯಾಪಾರಸ್ಥರು ಈಡಾಗುತ್ತಾರೆ. ಮೂರು ನಾಲ್ಕು ರೇಲ್ವೆಗಳ ಮೇಲಿಂದ ಮಾಲು ಹಾದು ಬಂದಿದ್ದರೂ, ಯಾವ ರೇಲ್ವೆಯವರು ಡಿಲಿವ್ಹರಿ ಕೊಟ್ಟರುತ್ತಾರೋ ಅವರ ಕಡೆಗೆ ತಕರಾರು ಮಾಡಿದರೆ ತಮ್ಮ ಲುಕ್ಸಾನದ ಹಣವು ಸಿಗುತ್ತದೆಂಬದು ಹಲವು ಸಾರೆ ಸಂಭವಿಸುವದರಿಂದ ಉಳಿದ ರೇಲ್ವೆ ಯವರೊಡನೆ ತಾವು ಮಾಡಬೇಕಾದ ಕರ್ತವ್ಯವು ಯಾವದೂ ಇರು ವದಿಲ್ಲವೆಂದು ವ್ಯಾಪಾರಸ್ಥರಿಗೆ ಅನಿಸುತ್ತದೆ. ಅಲ್ಲದೆ, ಡಿಲಿವ್ಹರಿ ಕೊಡುವ ರೇಲ್ವೆಯವರನ್ನು ಬಿಟ್ಟು ಬೇರೆಯವರಿಗೆ ಬರೆದರೆ, 'ಡಿಲಿವ್ಹರಿಯ ರೇಲ್ವೆಯವರು ನಿಮ್ಮ ಎಲ್ಲ ವಿಚಾರಣೆಗಳನ್ನು ಮಾಡುವರು, ಕಾರಣ ಅವರೊಡನೆ ನೀವು ಪತ್ರವ್ಯವಹಾರ ಮಾಡ ತಕ್ಕದ್ದೆಂಬವಾಗಿ ಆ ಬೇರೆ ಕಂಪನಿಯವರಿಂದ ಉತ್ತರವು ಬರುವದು; ಆದ್ದರಿಂದ ಈ ಕಾರಣದ ಮೂಲಕವೂ ಬೇರೆ ರೇಲ್ವೆ ಯವರೊಡನೆ ತಮಗೆ ಯಾವ ಸಂಬಂಧವೂ ಇಲ್ಲವೆಂದು ವ್ಯಾಪಾ ರಸ್ಥರಿಗೆ ಸ್ವಾಭಾವಿಕವಾಗಿ ಅನಿಸುತ್ತದೆ. ಈ ಪ್ರಕಾರ ವ್ಯಾಪಾ

ರಸ್ಥರು ಮೂರು ರೀತಿಯಿಂದ ಮೋಸಹೋಗುತ್ತಾರೆ. ಮತ್ತು ಮೇಲಣ ಅಧಿಕಾರಿಗಳೊಡನೆ ನಡೆಸಿದ ಪತ್ರವ್ಯವಹಾರದಲ್ಲಯೇ ಎಷ್ಟೋ ಸಾರೆ ಆರು ತಿಂಗಳುಗಳಿಗಿಂತ ಹೆಚ್ಚಿಗೆ ಅವಧಿಯು ಹೋಗಿಬಿಡುವದರಿಂದ ವ್ಯಾಪಾರಸ್ಥರಿಗೆ ಲುಕ್ಸಾನವಾಗುವ ಸಂಭವ ವಿರುತ್ತದೆ. ಕಾರಣ ಅವರು ಮುಂದೆ ಹೇಳಿದ ಮಾತುಗಳ ಕಡೆಗೆ ಪೂರ್ಣ ಲಕ್ಷ್ಯವನ್ನು ಕೊಡತಕ್ಕದ್ದು.

ರೇಲ್ವೆ ಅಕ್ಟಿನ ಅಂದೇ ಕಲಮಿನ ಸ್ರಕಾರ ಯಾವ ರೇಲ್ವೆಯ ಮೇಲೆ ಮಾಲು ಹೇರಲ್ಪಟ್ಟಿತೋ ಅಥವಾ ಯಾವ ರೇಲ್ವೆಯ ಮೇಲೆ ಮಾಲಿಗೆ ಲುಕ್ಸಾನವು ತಟ್ಟಿತೋ ಅವರ ಮೇಲೆ ದಾವೆಯನ್ನು ತರಲಿಕ್ಕೆ ವಾನಿಗೆ ಅಧಿಕಾರವಿಲ್ಲವೆಂದೂ ಮತ್ತು ಯಾವ ಕಂಪನಿಯ ಮೇಲೆ ದಾವೆಯನ್ನು ಮಾಡುವನಿನೆಯೋ ಅದಕ್ಕೆ ಇನ್ವ್ಯಾಯಿಸಿನ ತಾರೀಪಿನಿಂದ ೬ ತಿಂಗಳುಗಳೊಳಗಾಗಿ ರಜಿಸ್ಟರ್ಡ ನೋಟೀಸನ್ನು ರೇಲ್ವೆ ಅಕ್ಟಿನ ೭೨ ಮತ್ತು ೧೮೦ನೇ ಕಲಮುಗಳ ಪ್ರಕಾರ ಕೊಡಬೇಕಾಗುತ್ತದೆಯೆಂದೂ ಮತ್ತು ೩-೪ ರೇಲ್ವೆಗಳ ಮೇಲಿನ ವ್ಯವಹಾರ ಮಾಲು ಹಾದು ಬಂದಿರುವದೋ ಆಗ್ಗೆ ಯಾವ ಕಂಪನಿಯವರಿಂದ ಮಾಲಿಗೆ ಲುಕ್ಸಾನವು ತಟ್ಟಿತೆಂಬದನ್ನು ಮುಂಗಡವಾಗಿ ಸ್ಪಷ್ಟ ರೀತಿಯಿಂದ ತಿಳಿದುಕೊಳ್ಳುವದಕ್ಕೆ ವ್ಯಾಪಾರಸ್ಥರಿಗೆ ಸಾಧನವಿಲ್ಲದಿರುವದರಿಂದ ಎಷ್ಟು ರೇಲ್ವೆಗಳ ಮೇಲಿಂದ ಮಾಲು ಹಾದು ಬಂದಿವೆವದೋ ಅವೆಲ್ಲವುಗಳಿಗೆ ರಜಿಸ್ಟರ್ಡ ನೋಟೀಸನ್ನು ಕೊಟ್ಟಿರುವದು ಕಾಯಿದೆಯ ದೃಷ್ಟಿಯಿಂದ ಇಷ್ಟ ವಿರುತ್ತದೆಯೆಂದೂ ಈ ನೊದಲು ಹೇಳಿದ್ದೇವಷ್ಟೆ. ಈ ರಜಿಸ್ಟರ್ಡ ನೋಟೀಸನ್ನು ಎನ್. ಡಬ್ಲ್ಯು ಆ. ಬಿ. ಇ. ಆಯ್. ಮತ್ತು ಜಿ. ಆಯ್. ಪಿ. ಇವು ಸರಕಾರಿ ರೇಲ್ವೆಗಳಿರುವುದರಿಂದ ಇವುಗಳ ಮತ್ತು ನೇಟಿವ್ ಸ್ಟೇಟ್ ರೇಲ್ವೆಗಳ ಮ್ಯಾನೇಜರನಿಗೆ ಕೊಡತಕ್ಕದ್ದೆಂದು ಶೀರ್ಷಿಕೆ ರೇಲ್ವೆ ಅಕ್ಟಿನಲ್ಲಿ ನಮೂದಿಸಲ್ಪಟ್ಟಿರುತ್ತದೆ. ಆದರೆ ಸದ್ಯಕ್ಕೆ ಬಹುಶಃ ಸರಕಾರಿ ರೇಲ್ವೆಗಳ ಮೇಲೆ ಮ್ಯಾನೇಜರ ಎಂಬ ಹೆಸರಿನ ಅಧಿಕಾರಿಯಿರದೆ ಏಜಂಟನೇ ಇರುವದರಿಂದ ಸರಕಾರಿ ರೇಲ್ವೆ ಇದ್ದರೆ ಈ ಇಬ್ಬರ ಹೆಸರಿಗೂ ನೋಟೀಸು ಕೊಡುವದು ಒಳ್ಳೇದು. ಮತ್ತು ಇತರ ರೇಲ್ವೆಗಳಿದ್ದರೆ ಅವುಗಳ ಏಜಂಟರಿಗೇ ನೋಟೀಸು ಕೊಡಬೇಕು. ಏಜಂಟನ ಬದಲು ಮ್ಯಾನೇಜರನಿಗೆ ಅಥವಾ ಮ್ಯಾನೇಜರನ ಬದಲು ಏಜಂಟನಿಗೆ ನೋಟೀಸು ಕೊಟ್ಟರೆ ಅದು ಕಾಯಿದೇಶೀರ ಆಗುವದಿಲ್ಲವೆಂದು ಸ್ಥೂಲಮಾನದಿಂದ ಕಾಯಿದೆಯಿರುವದೆಂಬದನ್ನು ವ್ಯಾಪಾರಸ್ಥರು ಚೆನ್ನಾಗಿ ಲಕ್ಷದಲ್ಲಿಡತಕ್ಕದ್ದು. ಆದ್ದರಿಂದ ಲುಕ್ಸಾನವ ಸಂಬಂಧವಾಗಿ ಮಾಡಬೇಕಾದ ತಕರಾರಿನ ಅರ್ಜಿಯನ್ನು ಮೇಲಿನ ನಿಯಮದ ಪ್ರಕಾರ ಯಾರಿಗೆ ರಜಿಸ್ಟರ್ಡ ನೋಟೀಸು ಕೊಡಬೇಕಾಗಿರುತ್ತದೋ ಅವರಿಗೆ ರಜಿಸ್ಟರ್ಡ ಮಾಡಿ ಕಳಿಸಿದರಾಯ್ತು. ಇಲ್ಲದಿದ್ದರೆ ತಪ್ಪು ಅಧಿಕಾರಿಗಳೊಡನೆ ಪತ್ರವ್ಯವಹಾರ ಮಾಡುವದರಲ್ಲಯೇ ಮೇಲಿನ ಆರು ತಿಂಗಳುಗಳನ್ನು ಕಳೆದುಬಿಟ್ಟಿವೆಂದರೆ ವ್ಯಾಪಾರಸ್ಥರು ದಿವಾಣಿ ಕೋರ್ಟಿನಲ್ಲಿ ದಾವೆಯನ್ನು ಮಾಡಲಕ್ಕೆ ಬಾಧೆ ಬರುತ್ತದೆ.

ಎಷ್ಟೋ ಸಾರೆ ಆರು ತಿಂಗಳುಗಳ ಮೇಲೆ ಮಾಲು ಬಂದು ಮುಟ್ಟುತ್ತದೆ. ಮತ್ತು ಮಾಲು ನೋಡಿಕೊಂಡು ನೋಟೀಸನ್ನು ಕೊಡೋಣವೆಂಬ ಭಾವನೆಯಿಂದ ವ್ಯಾಪಾರಸ್ಥರು ಅಲ್ಲಿಯವರೆಗೆ ತಡೆಯುತ್ತಾರೆ. ಆದರೆ ಇದು ತೀರ ತಪ್ಪು ಭಾವನೆಯಾಗಿರುತ್ತದೆ. ಯಾಕೆಂದರೆ ಇನ್ವ್ಯಾಯಿಸಿನ ತಾರೀಪಿನಿಂದ ೬ ತಿಂಗಳುಗಳೊಳಗೆ ಎಲ್ಲ ನೋಟೀಸುಗಳನ್ನು ಕೊಡಬೇಕಾಗುತ್ತದೆ. ಕಾರಣ ಮಾಲು ಕೈಗೆ ಬರುವ ವಾಡಿಕೆಯ ವೇಳೆಯು ಕಳೆಯುತ್ತಲೇ ಎಲ್ಲ ಮಾಲು ನಷ್ಟವಾಯಿತೆಂದು ತಿಳಿದು ಆಗಿಂದಾಗ್ಗೆ ಎಲ್ಲ ಪೈಲ್ವೆಗಳಿಗೆ ಮೇಲೆ ಉಲ್ಲೇಖಿಸಿದ ಪ್ರಕಾರ ರಜಿಸ್ಟರ್ಡ ನೋಟೀಸನ್ನು ಕೊಡತಕ್ಕದ್ದು. ಮತ್ತು ಆ ಇನ್ವ್ಯಾಯಿಸಿನ ತಾರೀಪಿನಿಂದ ಆರು ತಿಂಗಳುಗಳೊಳಗೇ ಆ ನೋಟೀಸು ರೇಲ್ವೆ ಕಂಪನಿಗೆ ಮುಟ್ಟುವ ಬೇಕೆಂಬ ಹಂಬಿಕೆಯಿಂದ ಕೆಲಸವನ್ನು ಮಾಡತಕ್ಕದ್ದು.

**ಆ ನೋಟೀಸಿನಲ್ಲಿ ನಿಮ್ಮ ಲೈನಿನ ಮೇಲೆ ಲುಕ್ಸಾನವಾಗಿರ ದಿದ್ದರೆ ತಿಳಿಸಬೇಕೆಂದು ಸ್ಪಷ್ಟವಾಗಿ ಉಲ್ಲೇಖಿಸತಕ್ಕದ್ದು.** ಈ ಪ್ರಕಾರ ನೋಟೀಸು ಕೊಟ್ಟಮೇಲೆ ಕಂಪನಿಯವರು ಲುಕ್ಸಾನ ತುಂಬಿಕೊಡದಿದ್ದರೆ ದಿವಾಣಿ ಕೋರ್ಟಿನಲ್ಲಿ ಫಿರ್ಯಾದೆಯನ್ನು ಮಾಡಬೇಕು. ಮತ್ತು ಅದರಲ್ಲಿ ಯಾವ ರೇಲ್ವೆಯ ಮೇಲೆ ಮಾಲು ಹೇರಲ್ಪಟ್ಟಿತೋ ಅದನ್ನು ಅವಶ್ಯವಾಗಿ ಪ್ರತಿವಾದಿಯನ್ನಾಗಿ ಮಾಡಬೇಕು. **ದಿಲಿವ್ಹರಿ ತಾರೀಪಿನಿಂದ ಆರು ತಿಂಗಳುಗಳೊಳಗೆ ನೋಟೀಸು ಕೊಟ್ಟರೆ ನಡೆಯುವದೆಂಬದಾಗಿ ಎಷ್ಟೋ ಜನರು ತಿಳಿದುಕೊಂಡಿರುತ್ತಾರೆ. ಆದರೆ ಅದು ತೀರ ತಪ್ಪು ತಿಳುವಳಿಕೆಯೇ ಸರಿ.**

ಇನ್ನು ಈ ವಿಷಯದಲ್ಲಿ ಮಾಡಬೇಕಾದ ದಾವೆಯನ್ನು ಮುದ್ದತಿ ಕಾಯಿದೆಯ ೩೦ ಮತ್ತು ೩೧ನೆಯ ಆರ್ಟಿಕಲ್ ಪ್ರಕಾರ ಲುಕ್ಸಾನದ ತಾರೀಪಿನಿಂದ ಇಲ್ಲವೆ ಮಾಲು ವಾಸ್ತವಿಕವಾಗಿ ಯಾವ ವೇಳೆಗೆ ಮುಟ್ಟಬೇಕಾಗಿರುತ್ತದೋ ಆ ವೇಳೆಯಿಂದ **೧ ವರ್ಷ ದೊಳಗಾಗಿಯೇ** ಮಾಡತಕ್ಕದ್ದು. ಇಲ್ಲದಿದ್ದರೆ ಮುದ್ದತು ಮೀರಿ ಬಾಧೆಯುಂಟಾಗುತ್ತದೆ. **ಮೂರು ವರುಷಗಳೊಳಗಾಗಿ ಫಿರ್ಯಾದಿಯನ್ನು ಮಾಡಿದರೆ ಅಡ್ಡಿಯಿಲ್ಲವೆಂದು ವ್ಯಾಪಾರಸ್ಥರು ಮಾಡಿಕೊಂಡಿರುವ ಗ್ರಹಿಕೆಯು ತೀರ ತಪ್ಪಾಪದ್ದು** ಇರುತ್ತದೆ. ಮುದ್ದತಿನ ಎಲ್ಲ ಬಾಧೆಯನ್ನು ತಪ್ಪಿಸುವದಕ್ಕೋಸ್ಕರ, ಇನ್ವ್ಯಾಯಿಸಿನ ತಾರೀಪಿನಿಂದ ೬ ತಿಂಗಳುಗಳೊಳಗಾಗಿ ಹೇಗೆ ನೋಟೀಸನ್ನು ಕೊಡಬೇಕಾಗಿರುತ್ತದೋ ಹಾಗೆಯೇ ಅದೇ **ತಾರೀಪಿನಿಂದ ಒಂದು ವರ್ಷದೊಳಗಾಗಿ** ಫಿರ್ಯಾದಿಯನ್ನು ತರಬೇಕೆಂಬ ಸ್ಥೂಲಮಾನದ ನಿಯಮವನ್ನು ವ್ಯಾಪಾರಸ್ಥರು ಲಕ್ಷ್ಯದಲ್ಲಿಟ್ಟರೆ ಸಾಕು.

ಸಾರಾಂಶ, ರೇಲ್ವೆಯಿಂದ ಆಗುವ ಲುಕ್ಸಾನದ ಕಡೆಗೆ ಇನ್ನು ಮುಂದೆ ವ್ಯಾಪಾರಸ್ಥರು ದುರ್ಲಕ್ಷ್ಯವನ್ನು ಮಾಡಬಾರದು. ಸಾಲವನ್ನೊಯ್ದವರ ಮೇಲೆ ಯಾವ ಪ್ರಕಾರ ದಾವೆ ಮಾಡಲಾಗುವದೋ ಅದೇ ಪ್ರಕಾರ ರೇಲ್ವೆಯವರ ಮೇಲೆ ದಾವೆಯನ್ನು ಹೂಡಿ ಅವರಿಂದ ಲುಕ್ಸಾನವನ್ನು ತುಂಬಿಸಿಕೊಳ್ಳುವದನ್ನು ವ್ಯಾಪಾರಸ್ಥರು ಕಲಿಯತಕ್ಕದ್ದು. ಈ ಬಾಬತಿನಲ್ಲಿ ಯಾವ ರೀತಿಯಿಂದಲೂ ಹೆದರುವ ಕಾರಣವಿಲ್ಲ. (ಮುಂದುನರಿಯುವದು.)

## ಜಾತ್ರಿ ಕಮಿಟಿಯ ಸೆಕ್ರೆಟರಿಯಿಂದ

ಶ್ರೀಮನ್ಮಹಾ ಅಥಣಿ ಶಿವಯೋಗಿಗಳ ರಥೋತ್ಸವವು ಪ್ರತಿ ವರ್ಷ ಶ್ರಾವಣ ಶುಕ್ಲ ೧೩ ದಿವಸ ಧಾರವಾಡ ಶ್ರೀ. ಜ. ಮುರುಘೆ ರಾಜೇಂದ್ರ ಫ್ರೀಬೋರ್ಡಿಂಗಿನಲ್ಲಿ ಜರುಗತಕ್ಕದ್ದು ಆದರೆ ಆ ಸಮಯಕ್ಕೆ ಮಳೆಯು ವಿಶೇಷವಾಗಿರುವದರಿಂದ ಉತ್ಸವಕ್ಕೂ ದರ್ಶನಕ್ಕೆಂದು ಬರುವ ಭಕ್ತಾದಿಗಳಿಗೂ ಉಪನ್ಯಾಸ ಕೀರ್ತನಕಾರರಿಗೂ ಮತ್ತು ಭಜನಾ, ವಾದ್ಯ, ಕುಸ್ತಿ ಸಂಘದವರ ಕಾರ್ಯಕ್ರಮಗಳಿಗೆ ಆಗುವ ಅನಾನುಕೂಲತೆಗಳನ್ನೇ ತಿಳಿದು ಈ ರಥೋತ್ಸವವನ್ನು ಮಾಘೆ ಶುದ್ಧ ೫ ಗೆ ಮಾಡುವದಾಗಿ ಜಾತ್ರೆ ಕಮಿಟಿಯವರೂ ಮತ್ತು ಸ್ಥಳ ಪರಸ್ಥಳ ಭಕ್ತ ಮಾಹೇಶ್ವರರೂ ಬೋರ್ಡಿಂಗ ಕಮಿಟಿಯವರ ಅನುಮತಿ ಪ್ರಕಾರ ನಿಶ್ಚಯಿಸಿರುವರು.

ತಾರೀಖು ೨-೮-೧೯೩೪ } ಸೆಕ್ರೆಟರಿ ರಥೋತ್ಸವ ಕಮಿಟಿ,
ಮುರುಘಾರಾಜೇಂದ್ರ ಬೋರ್ಡಿಂಗ
ಹಾನೇರಿಪೇಟೆ ಧಾರವಾಡ.

# ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿ ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದ ಏಜಂಟರ ಆಫೀಸಿನಿಂದಾ-



ಸಮಸ್ತ ವೀರಶೈವ ಭಕ್ತಾದಿಗಳಿಗೆ ಈ ಮೂಲಕ ಅಪ್ಪಣೆ ಯಾಗುವದೇನಂದರೆ— ಇದೇ ತಿಂಗಳ ೨೨ನೇ ವಾರದಲ್ಲಿ ಬೆಂಗಳೂರಿನ ಪಂಡಿತ ದೇವಣಾರಾಧ್ಯರೆಂಬವರು ಶ್ರೀ ಮಹಾ ಸನ್ನಿಧಿಗೆ ೨೫ ಪ್ರಶ್ನೆಗಳನ್ನು ಪ್ರಜಾಬಂಧು ಪತ್ರಿಕೆಯಲ್ಲಿ ಮತ್ತು ಒಂದು ಪುಸ್ತಕದ ಮೂಲಕ ಬಹಿರಂಗವಾಗಿ ವಿಜ್ಞಾಪಿಸಿಕೊಂಡಿದ್ದಾರೆ. ಈ ಪ್ರಶ್ನೆಗಳಲ್ಲಿರತಕ್ಕ ಸಂಗತಿಗಳು ನಮ್ಮಂತೆಯೇ ಅನೇಕ ವೀರಶೈವ ಜನಗಳ ಸಂಶಯದ ಸಂಗತಿಗಳಾಗಿವೆಯೆಂತಲೂ ಅರಿಕೆ ಮಾಡಿಕೊಂಡಿದ್ದಾರೆ. ಇವರಂಗಲಿ ಅಥವಾ ಇವರಂತೆ ಸಂಶಯ ಗ್ರಸ್ತರಾದ ಬೇರೆಯವರಾಗಲಿ ಶ್ರೀ ಮಹಾ ಸನ್ನಿಧಿಗೆ ಬಂದು ಪ್ರತ್ಯಕ್ಷ ಸಂಭಾಷಿಸಿ ತಮಗುಂಟಾದ ಸಂಶಯ ನಿರಸನ ಮಾಡಿಕೊಳ್ಳಬಹುದಾಗಿತ್ತು. ಆ ವಿಷಯದಲ್ಲಿ ಯಾವ ತಡೆಯೂ ಇರಲಿಲ್ಲ. ಹೀಗಿದ್ದರೂ ಈ ವರೆಗೂ ಆ ಸಂಶಯಗಳನ್ನು ಶ್ರೀ ಮಹಾ ಸನ್ನಿಧಿಯಲ್ಲಿ ಯಾರೂ ಬಿನ್ನೈಸಿಕೊಳ್ಳದೆ ಒಮ್ಮೆಲೇ ಇವರು ಈ ಪ್ರಕಾರ ಪ್ರಕಟಿಸಿರುವದರಿಂದ ಜನಗಳಲ್ಲಿ ತಪ್ಪು ತಿಳುವಳಿಕೆಯುಂಟಾಗುವ ಸಂಭವವಿದೆ. ಆದುದರಿಂದ ಇವರಾಗಲಿ ಅಥವಾ ಇವರಂತೆ ಸಂಶಯವುಳ್ಳವರಾಗಲಿ ಶ್ರೀ ಮಹಾ ಸನ್ನಿಧಿಗೆ ಬಂದು ಪ್ರತ್ಯಕ್ಷ ಸಂಭಾಷಿಸಿ ತಮ್ಮ ತಮ್ಮ ಸಂಶಯಗಳನ್ನು ನಿವಾರಣೆ ಮಾಡಿಕೊಳ್ಳಬೇಕು. ಇವರ ೨೫ ಪ್ರಶ್ನೆಗಳ ಮುಖ್ಯಾಂಶಗಳನ್ನು ಕುರಿತು ಆ ವಿಷಯಗಳಲ್ಲಿ ಶ್ರೀ ಮಹಾ ಸನ್ನಿಧಿಯ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಈ ಮೂಲಕ ವ್ಯಕ್ತಗೊಳಿಸೋಣವಾಗಿದೆ—

ಈ ೨೫ ಪ್ರಶ್ನೆಗಳಲ್ಲಿ ಮುಖ್ಯವಾಗಿ ಮೂರು ಸಂಗತಿಗಳಿವೆ.
೧ ಶ್ರೀ ಮಹಾ ಸಂಸ್ಥಾನಕ್ಕೆ ಸಂಬಂಧಪಟ್ಟ ಸಂಗತಿಗಳು.
೨ ಖಾಸ ಶ್ರೀ ಮಹಾಸನ್ನಿಧಿಗೆ ಸಂಬಂಧಪಟ್ಟ ವಿಷಯಗಳು.
೩ ವೀರಶೈವ ಮತ ವಿಷಯಗಳು.

ಒಂದನೇ ಸಂಗತಿಯಲ್ಲಿ ಶ್ರೀ ಮಹಾ ಸಂಸ್ಥಾನವು ವೀರಶೈವ ಸಮಾಜಕ್ಕೇನೇ ಸಂಬಂಧಪಟ್ಟದ್ದಾಗಿರುವದರಿಂದ ಅದಕ್ಕೆ ಪೂರ್ವದಿಂದಲೂ ಇದ್ದಂಥ ಮತ್ತು ಅನಂತರ ಉಂಟಾದಂಥ ಕೊರತೆ ಸೌಲಭ್ಯ ಕುನತೆಗಳೆಲ್ಲಾ ಇಡೀ ಸಮಾಜಕ್ಕೇನೇ ಸಂಬಂಧಪಟ್ಟವುಗಳಾಗಿವೆ. ಆದಕಾರಣ ಆ ವಿಷಯವಾಗಿ ಯಾರಿಂದ ಯಾವ ವಿಧವಾದ ಪ್ರಯತ್ನಗಳು ಸಂಭವಿಸಿದ್ದರೂ ಅವುಗಳೆಲ್ಲಾ ಇಡೀ ವೀರಶೈವ ಸಮಾಜಕ್ಕೇನೇ ಸೇರಿದವುಗಳಾಗಿವೆಯೆಂದು ತಿಳಿಯುವುದು ಯುಕ್ತವಾಗಿದೆ.

೨. ಶ್ರೀ ಮಹಾ ಸನ್ನಿಧಿಯು ನಡೆಸಿದ ಕಾರ್ಯಗಳ ನಿಜ ಸಂಗತಿಗಳನ್ನು ಪ್ರಸ್ತಾಪಿಸಿದ್ದಾದರೆ ಆಯಾಯ ವ್ಯಕ್ತಿಗಳ ಕರ್ತವ್ಯ ಶೂನ್ಯತೆ ದೋಷಗಳು ವ್ಯಕ್ತವಾಗುವ ಮೂಲಕ ಶ್ರೀ ಮಹಾ ಸನ್ನಿಧಿಯ ಆತ್ಮ ಶ್ಲಾಘನೆಯಾಗಿ ಜನರಿಂದ ಪರಿಗಣಿಸಲ್ಪಡುವದಾದ ಕಾರಣ ಆ ವಿಷಯಗಳನ್ನು ಉದಾಹರಿಸಲಾಗುವದಿಲ್ಲ.

೩ ಹೊಸದಾಗಿಯೆ ಒಂದು ಮತವನ್ನುಂಟುಮಾಡಿದಾತನೇ ಮತಸ್ಥಾಪಕನೆಂದು ತಿಳಿಯುವುದುಂಟು. ಆದರೆ ಇದರ ಅರ್ಥವು ಹಾಗಲ್ಲ. ಪರಮತ ನಿರಾಕರಣ ಪೂರ್ವಕ ಸ್ವಮತ ಸಿದ್ಧಾಂತ ಕಥನವೇ ಸ್ಥಾಪನೆ ಪದಕ್ಕೆ ಅರ್ಥವು. ತತ್ ಕರ್ತೃವೆ ಸ್ಥಾಪನ ಪದಕ್ಕೆ ಈ ವಿಧವಾದ ಅರ್ಥವಾಗುವುದರಿಂದ ಶ್ರೀ ಬಸವೇಶನು ಉಪನಯನ ಮೊದಲಾದ ಸಂಸ್ಕಾರಗಳನ್ನು ನಿರಾಕರಿಸಿದ್ದೇ ಪರಮತ ನಿರಾಕರಣೆಯು. ಲಿಂಗಧಾರಣಾದಿ ಸಂಸ್ಕಾರ ಮತ್ತು ಷಟ್‌ಸ್ಥಲ ಸಿದ್ಧಾಂತ ಕಥನವೇ ಸ್ವಮತ ಸಿದ್ಧಾಂತವು. ಆದುದರಿಂದ ಶ್ರೀ ಬಸವೇಶನು ವೀರಶೈವ ಮತಸ್ಥಾಪಕನಾಗುತ್ತಾನೆ.

ಅನಾದಿ ಸಂಸಿದ್ಧವಾದ ಈ ವೀರಶೈವ ಮತವನ್ನು ನಂದಿಯ ಅವತಾರಿಯಾದ ಶ್ರೀ ಬಸವೇಶನು ೧೨ನೇ ಶತಮಾನದಲ್ಲಿ ಸಂಸ್ಥಾಪಿಸಿದನು. ಆಗಿನ ಶಿವಶರಣರೂ ಅಂದಿನಿಂದ ಈ ವರೆಗಾದ ಅಸಂಖ್ಯಾತ ವೀರಶೈವ ಪರಮಪೂಜ್ಯ ವಿಭೂತಿಗಳೂ ಮಹಾ ಮಹಾ ಕವಿಗಳೂ ಇದೇ ಪ್ರಕಾರ ತಿಳಿದು ಆಚರಿಸಿರುವವಾಗಿ ಅನೇಕ ಗ್ರಂಥಗಳಿಂದಲೂ ಅಂದಿನಿಂದ ಈ ವರೆಗಿನ ಯಾವ ಬದಲಾವಣೆಯೂ ಇಲ್ಲದ ವೀರಶೈವರ ಆಚರಣೆಗಳಿಂದಲೂ ಸ್ಪಷ್ಟವಾಗುತ್ತವೆ. ಇಂತಹ ಶ್ರೀ ಬಸವೇಶ್ವರನು ಸಮಸ್ತ ವೀರಶೈವರಿಗೂ ಪರಮ ಪೂಜ್ಯನು. ಇಂಥ ಅವತಾರಿಗಳ ಪೂಜ್ಯತ್ವಕ್ಕೆ ಅವರು ಜನಿಸಿದ ವರ್ಣಾದಿಗಳೇನೂ ಅವಶ್ಯಕವಾದವುಗಳಲ್ಲವೆಂಬುದಕ್ಕೆ ವರ್ಣವಾದಿಗಳಾದ ಬ್ರಾಹ್ಮಣರು ಕೂಡಾ ಕ್ಷತ್ರಿಯ ವರ್ಣದಲ್ಲಿ ಜನಿಸಿದ ಶ್ರೀ ರಾಮ ಚಂದ್ರನನ್ನು ಪರಮಪೂಜ್ಯನನ್ನಾಗಿ ತಿಳಿದಿರುವುದೇ ದೃಷ್ಟಾಂತವಾಗಿರುವಾಗ ಅತಿವರ್ಣಿಗಳಾದ ವೀರಶೈವರಂತೂ ಶ್ರೀ ಬಸವೇಶನನ್ನು ಪೂಜ್ಯನನ್ನಾಗಿ ತಿಳಿದಿರುವದು ವಿಹಿತವೂ ಧರ್ಮವೂ ಆಗಿದೆಯೆಂದು ಬೇರೆ ಹೇಳಬೇಕಾದುದಿಲ್ಲ. ವೀರಶೈವ ಮತಸಂಬಂಧವಾದ ಸಿದ್ಧಾಂತಗಳ ನಿಜಜ್ಞಾನವಾಗಿ ತಪ್ಪು ತಿಳುವಳಿಕೆಗಳೂ, ಸಂಶಯಗಳೂ ನಿವಾರಣೆಯಾಗಬೇಕಾದರೆ ಶಾಸ್ತ್ರಾಧಾರಗಳಿಂದ ಸವಿಸ್ತಾರವಾಗಿ ಸಮಕ್ಷಮ ಸಂಭಾಷಿಸುವದೇ ವಿಹಿತವಾದ ಮಾರ್ಗವಾಗಿರುವುದರಿಂದ ಅಂತಹ ಶಂಕಿತರು ಶ್ರೀ ಮಹಾ ಸನ್ನಿಧಿಗೆ ಬಂದು ಸಂಭಾಷಿಸಿ ತಿಳಿದುಕೊಳ್ಳಬೇಕಲ್ಲದೆ ಹೀಗೆ ಅಸಂಬದ್ಧವಾಗಿ ಪ್ರಕಟಿಸುವ ಲೇಖನಗಳು ಗಮನಿಸಲು ಯೋಗ್ಯಗಳಲ್ಲವೆಂಬುದನ್ನು ಲಕ್ಷ್ಯಕ್ಕೆ ತಂದು ಅಂಥ ಲೇಖನಗಳನ್ನು ಪ್ರಕಟಿಸಬಾರದಾಗಿ ಈ ಮೂಲಕ ತಿಳಿಸೋಣವಾಗಿದೆ.

ತಾ. ೧೫-೭-೩೪ ಮುಕ್ಕಾಂ—ಹಾವೇರಿ.

---

—ಹೈದರಾಬಾದದ ನಿಝಾಮ ಸಾಹೇಬರು ಒಂದು ಫರ್ಮಾನ್ ಹೊರಡಿಸಿದ್ದು ಅದರಲ್ಲಿ ಸೇನಾಪತಿ ಪದಕ್ಕಾಗಿ ಪ್ರಿನ್ಸ ಅಝಮ ಶಹಾರವರಿಗೆ ತಿಂಗಳಿಗೆ ೨೫೦೦ ರೂ. ಮತ್ತು ನಗರ ಸುಧಾರಕರ ಅಧ್ಯಕ್ಷಪದಕ್ಕಾಗಿ ಪ್ರಿನ್ಸ ಮೋಅಝಮ್ ಶಹಾರವರಿಗೆ ತಿಂಗಳಿಗೆ ೩೦೦೦ ರೂ. ಕೊಡುವದಾಗಿ ಪ್ರಕಟವಾಗಿದೆ.

—ಅಸಾಮದ ದೇಶಭಗಿನಿಯರು ವಸ್ತ್ರವಿಹೀನರಾಗಿರುವುದರಿಂದ ಸಹಾಯ ಮಾಡಬೇಕೆಂದು ಮುಂಬಯಿ ಭಗಿನಿಯರಿಗೆ ಸೌ|| ಅನ್ನತ ಕುವರ ಇವರು ವಿನಂತಿ ಮಾಡಿಕೊಂಡರೂ ಯಾರೂ ಲಕ್ಷಿಸದಿದ್ದುದರಿಂದ ಉಪವಾಸವನ್ನು ಆರಂಭಿಸಿದ್ದರು. ಆದರೆ ಪ್ರಮುಖರು ಸಹಾಯದ ಹೊಣೆಯನ್ನು ತೆಗೆದುಕೊಂಡದ್ದರಿಂದ ಉಪವಾಸವನ್ನು ನಿಲ್ಲಿಸಿದರು.

## ಆಸ್ಟ್ರಿಯಾದಲ್ಲಿ ದೊಂಬಿ.

### ದೊಂಬಿಗೆ ಕಾರಣ.

ಜರ್ಮನಿಯ ನಾಝಿ ಪಂಥವು ಆಸ್ಟ್ರಿಯಾದಲ್ಲಿ ಪ್ರಸಾರವಾಗು ತ್ತಿದ್ದುದನ್ನು ಡಾ. ಡಾಲ್ಫುಸರ ನೇತೃತ್ವದಲ್ಲಿ ಮಂತ್ರಿಮಂಡಲವು ಒತ್ತಾಯಪೂರ್ವಕವಾಗಿ ನಿಲ್ಲಿಸಿದ್ದಿತು. ಆದಕಾರಣ ನಾಝಿಗಳು ಕಾರಸ್ಥಾನ ನಡೆಸಿರುವರೆಂದು ಸ್ವಲ್ಪ ದಿವಸಗಳ ಕೆಳಗೆ ೪೮ ಗಂಟೆಗ ಳಲ್ಲಿ ಸಾವಿರ ಜನರನ್ನು ಬಂಧಿಸಲಾಯಿತು. ಆದುದರಿಂದ ನಾಝಿ ಗಳು ದೊಂಬಿಯನ್ನೆಬ್ಬಿಸಿ ವಾರ್ತಾವಾಹಕ ಕೇಂದ್ರವನ್ನು ವಶಪಡಿಸಿ ಕೊಂಡು ಮಂತ್ರಿಮಂಡಲವು ತನ್ನ ಸ್ಥಾನಕ್ಕೆ ಶರಣು ಹೊಡೆಯು ವಂತೆ ಮಾಡಿ ಸರ್ವಾಧಿಕಾರಿಗಳಾದ ಡಾ. ಡಾಲ್ಫುಸ ಮತ್ತು ಮೇಜರ ಫೆ. ಇವರನ್ನು ಬಂಧಿಸಿದರು. ಅವರನ್ನು ಬಿಡುಗಡೆ ಮಾಡಲಿಕ್ಕೆ ಸರಕಾರಿ ತೋಪು ಗಾಡಿಗಳು, ಸೈನಿಕರು ಬರಲು ದೊಂಬಿಗಾರರು ಸರ್ವಾಧಿಕಾರಿಗಳಾದ ಡಾ. ಡಾಲ್ಫುಸರವರಿಗೆ ಗುಂಡುಹಾಕಿದರು. ಸಾಯುವಾಗ ಅವರು ನನ್ನ ಕುಟುಂಬದವರನ್ನು ಸಂರಕ್ಷಿಸಿರೆಂದು ಉಸುರ್ಗರೆದರಂತೆ.

ನಂತರ ನಾಝಿಗಳು ತಮ್ಮ ಬಂಧಿತರಾದ ಇಬ್ಬರು ಪ್ರಮುಖ ರನ್ನು ಶೂಲಕ್ಕೇರಿಸಿದರೆ ಸೆಂಟ್ ಸ್ಟೀಫನ್ಸ ಕೆಥೆಡ್ರಲ್ ಎಂಬ ದೇವಾ ಲಯವನ್ನು ಹಾರಿಸಿ ಬಿಡುವೆವೆಂದು ಹೆದರಿಕೆ ಹಾಕಿದರಂತೆ. ಅಷ್ಟರಲ್ಲಿ ಪೋಲೀಸರು ದೊಂಬಿಗಾರರನ್ನು ಹಿಮ್ಮೆಟ್ಟಿಸಿ ಮೇ. ಫೆ. ಮೊದಲಾದವರನ್ನು ಮುಕ್ತ ಮಾಡಿದರು. ಆಸ್ಟ್ರಿಯಾದ ಉಳಿದ ಕಡೆಗಳಲ್ಲಿಯೂ ಹೀಗೆಯೇ ದೊಂಬಿಗಳೆದ್ದು ಅನೇಕ ಪ್ರಾಣ ಹಾನಿಗಳಾಗಿವೆ.

### ಸರ್ವಾಧಿಕಾರಿಯು ಹೇಗೆ ಸತ್ತನು?

ಡಾ. ಡಾಲ್ಫುಸ್, ಮೇ. ಫೆ. ಮೊದಲಾದ ಮಂತ್ರಿಮಂಡಲದ ವರು ಕುಳಿತಿದ್ದ ಸಭಾ ಮಂಟಪದೊಳಗೆ ೫೦ ಜನ ನಾಝಿಗಳು ಪೋಲೀಸ ವೇಷದಿಂದ ಪ್ರವೇಶಿಸಿ ಮೇ. ಫೆ, ಹೇರ ಕಾರವಾನ್ಸಿ ಮೊದ ಲಾದವರನ್ನು ಕೈಸೆರೆ ಮಾಡಿದರು. ಡಾ. ಡಾಲ್ಫುಸರು ಅಲ್ಲಿದ್ದಿಲ್ಲ. ಅವರನ್ನು ಹುಡುಕಿ ಕುರ್ಚಿಯನೇಲೆ ಕುಳಿತವರನ್ನೇ ಹೊಡೆದಿ ದ್ದಾರೆ. ಅವರ ಕುತ್ತಿಗೆಯೊಳಗಿಂದ ಗುಂಡು ಪಾರಾಗಿ ಹೋಗಿದೆ.

### ಅಂತ್ಯವಿಧಿ.

ಡಾಲ್ಫುಸರ ಪತ್ನಿಯು ಶವದ ಹತ್ತಿರವೇ ಕುಳಿತಿದ್ದಳು. ಇಟಲಿಯ ಸರ್ವಾಧಿಕಾರಿಗಳಾದ ಸಿ. ಮುಸೋಲಿನಿಯವರು ಅಂತ್ಯ ವಿಧಿಗೆ ಬರುವದಾಗಿ ತಿಳಿಸಿದ್ದರು. ಇಂಗ್ಲೆಂಡಿನ ರಾಜನೂ, ಇಟ ಲಿಯ ಪೋಪನೂ ದುಃಖ ಸೂಚನೆಗಳನ್ನು ಕಳುಹಿಸಿದ್ದಾರೆ. ಕೊಲೆಯ ಕಾರಣದಿಂದ ೪೦ ನಾಝಿಗಳನ್ನು ಗಲ್ಲಿಗೇರಿಸಲಾಯಿತು. ಜರ್ಮನಿಯ ನಾಝಿಗಳು ಇದು ತಮಗೇನೂ ಸಂಬಂಧವಿಲ್ಲವೆಂದು ತಿಳಿಸಿರುವರು. ಎರಡೇ ದಿನಗಳಲ್ಲಿ ಇಂಥ ಭಯಂಕರ ಅನಾಹುತ ವಾಯಿತು. ಆಸ್ಟ್ರೀಯಾ ದೇಶಕ್ಕೆ ಸ್ವಾತಂತ್ರ್ಯವನ್ನೊದಗಿಸಿ ಕೊಡಲು ಸಹಾಯಮಾಡುವೆವೆಂದು ಸಿ. ಮುಸೋಲಿನಿಯವರು ಹೇಳಿರುವರು. ಇಂಗ್ಲಂಡವೂ ತನ್ನ ಪ್ರಮಾಣ ಪತ್ರಿಕೆಯಂತೆ ಅದಕ್ಕೆ ಸಹಾನುಭೂತಿಯನ್ನು ತೋರಿಸಿದೆ.

---

—ಮೃತಪಟ್ಟ ಆಸ್ಟ್ರಿಯಾದ ಸರ್ವಾಧಿಕಾರಿಗಳ ಶವವನ್ನು ೬ ಕವ್ವು ಕುದುರೆಗಳ ರಥದಲ್ಲಿ ಮೆರವಣಿಗೆಯಲಾಯಿತು. ಅವರು ಸತ್ತ ಸುದ್ದಿಯನ್ನು ಸಿ. ಮುಸೋಲಿನಿಯವರ ಮನೆಯಲ್ಲಿರುವ ಅವರ ಮಕ್ಕಳಿಗೆ ತಿಳಿಸಿಲ್ಲ.

—ಕಲ್ಲಬುರ್ಗಿಯ ಗದ್ದಿಗಿ ಮಠದಲ್ಲಿ ವೀರಶೈವರ ಶ್ರೀ ಬಸವೇ ಶ್ವರ ಫ್ರೀ ಬೋರ್ಡಿಂಗು ಸ್ಥಾಪಿಸಲ್ಪಟ್ಟಿದೆ.

—ನಿಝಾಮ ರಾಜ್ಯದ ನಾಂದೇಡ ತಾಲೂಕಿನ ಪೂರ್ಣಾ ಎಂಬಲ್ಲಿ ಹನುಮಂತದೇವರ ಮೋರೆಯು ಕವ್ವಾಗಿರುವುದ ರಿಂದ ದೇವರು ಸಿಟ್ಟಾಗಿದ್ದಾನೆಂದು ಗ್ರಹಿಸಿ ಊರಲ್ಲಿ ಪಟ್ಟೇ ಕೂಡಿಸಿ ಉತ್ಸವ ಮಾಡಬೇಕೆಂದು ದೇವರ ಅಭಿಷೇಕ ಮಾಡಿಸಲು ಮಸಿಯು ಹೊರಟು ಹೋಗಿ ಸ್ವಚ್ಛವಾಯಿತಂತೆ. ಇದೇನು ಪೂಜಾರಿಗಳ ಪೋಸಲೀಲೆಯೋ ಮೂಢಭಕ್ತರ ವಂಚನೆಯೋ?

—ಹೈದರಾಬಾದದ ಪ್ರೊ. ಮೊಅಝುಮ ಶಹಾ ಇವರು ೭೦೦ ಕವಿತೆಗಳ ಒಂದು ಕಾವ್ಯ ಸಂಗ್ರಹವನ್ನು ರಚಿಸಿದ್ದು ಸ್ವತಃ ನಿಝಾಮ ಸಾಹೇಬರ ಪ್ರಸ್ತಾವನೆಯೊಂದಿಗೆ ೨ ಭಾಗಗಳಲ್ಲಿ ಶೀಘ್ರವೇ ಪ್ರಕಟಿಸಲಾಗುವದು. ಅದರ ಹೆಸರು 'ಸಮತೀರ ಸೋಜಾತ' ಎಂದಿರುವದು.

—ಪೋಲಂಡದಲ್ಲಿ ಮಹಾಪೂರದಿಂದ ೧೦ ಕೋಟಿ ರೂ. ಗಳ ಹಾನಿಯಾಗಿದೆ. ಒಂದು ಶಾಲೆಯ ವರ್ಗದಲ್ಲಿ ಅಕಸ್ಮಾತ್ತಾಗಿ ನೀರು ಸೇರಿದ್ದರಿಂದ ೩೦ ಹುಡುಗರೂ ಶಿಕ್ಷಕನೂ ಮುಳುಗಿದರು. ಖಣಿಯಲ್ಲಿದ್ದ ೫೦ ಜನರೂ ತೇಲಿಹೋದರು.

---


## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾ ರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾ ನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾ ರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂ ದವನ್ನು ತಮ್ಮ ಬಹುಮಾನ ಪತ್ರದ್ವಾರ ಅತಿರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿ ರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡ ವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,

ತುಮಕೂರು. (ಮೈಸೂರು ಸ್ಟೇಟ್)

## ಅರವತ್ತುಮೂರು ಪುರಾತನರ ಮಂಟಪ ಪೂಜಾ ಕವಿತಾಳ— ಜಾಹೀರ್ ಪ್ರಕಟನೆ.

**ಕವಿತಾಳ**—ನಿಜಾಮ ಇಲಾಖಾ ಜಿಲ್ಲಾ ರಾಯಚೂರು ತಾಲೂಕು **ಮಾನ್ವಿ** ಕಸಬಾ ಕವಿತಾಳ ಶ್ರೀಮದ್ವಾಗಿನ ಗಿರಿ ಶಿವಾನು ಭವ ದೇಶಿಕವರೇಣ್ಯರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಕರು ಮರಾಧ್ಯಕ್ಷ ಇವರ ಸನ್ನಿಧಿಯಿಂದ—

ಅಖಿಲ ವೀರಶೈವ ಮತ ಬಾಂಧವರಿಗೆ ಶುಭ ಸೂಚನಾ— ಇದೇ ಭಾವ ಸಂ. ದ ಶ್ರಾವಣ ಬ|| ೧೫ ರಿಂದ ಆರವತ್ತುಮೂರು ಪುರಾತನರ ಪುರಾಣ ಪ್ರಾರಂಭವಾಗಿ ಕಾರ್ತಿಕ ಬ|| ೧೩ಗೆ ಸಮಾಪ್ತಿ, ಅದೇ ದಿವಸ ಉದಯಕ್ಕೆ **ಮಂಟಪ** ಪೂಜಾ ಈ ಪುಕ ರ ನಿಯಮಿಸಿ ರುವದು. ಪ್ರತಿಯೊಂದು ಮಂಟಪಕ್ಕೆ ಐನತ್ತೊಂದು ರೂಪಾ ಯಿಯಂತೆ ಕಾಣಿಕೆ ಹತ್ತುವದು.

ಈ ನಿಯಮಕ್ಕೆ ಕೆಲವು ಭಕ್ತ ಮಹಾಶಯರು ಐನತ್ತೊಂದು ರೂಪಾಯಿಯಂತೆ ಕಾಣಿಕೆಯನ್ನು ಕೊಟ್ಟು ಪೂಜಾ ಮಾಡಲು ಸಮ್ಮತಿಸಿ ಒಪ್ಪಿಗೆ ಪತ್ರಿಕೆಯ ನ್ನು ಬರೆದು ಕೊಟ್ಟಿರುವರು. ಒಪ್ಪಿದ ವರ ಹೆಸರುಗಳನ್ನು ಇವರಡಿಯಲ್ಲಿ ಕೊಟ್ಟಿದೆ—

(೧) ಗಲಗಿನ ಮಲ್ಲೇಶಪ್ಪ ಕೋರಿಶೆಟ್ಟಿ ಸಾಹುಕಾರ ಇವರು ಒಂದು ಮಂಟಪಪೂಜೆಯ ನ್ನು ಕೈಕೊಳ್ಳುವದಲ್ಲದೆ ೬೩ ಆಕಳ ಗಳನ್ನು ಹಾಗೂ ಪೂಜಾ ಸಾಮಗ್ರಿಗಳ ಖರ್ಚನ್ನು ಕೊಡುವುದಕ್ಕೆ ಒಪ್ಪಿರುವರು (೨) ಚನ್ನಬಸಪ್ಪ ಕೊ|| ಪಾ|| ವಟಗಲ್ಲು ತಾ|| ಮಾನ್ವಿ ಜಿ ರಾಯಿಚೂರು (೩) ಶಿವಪ್ಪ ಮಹಾಂತಿಪ್ಪ ಸಾಹು ಕಾರ ಸಂತೆಕೆಲೂರು ತಾ ಲಿಂಗಸೂಗೂರು (೪) ಶಿವಲಿಂಗಪ್ಪ ವೆಂ. ಬಸವಯ್ಯ ಚಿಂಚರಿಕಿ ತಾಲೂಕ ಮಾನ್ವಿ (೫) ವೆಂಕನಗೌಡ ಮಾ|| ಪಾ|| ಪಲಕನ ಮರ್ಡಿ ತಾ|| ದೇವದುರ್ಗ (೬) ಚನ್ನಬಸಪ್ಪ ಮಾ|| ಪಾ|| ಕಮಲದಿನ್ನಿ ತಾ|| ದೇವದುರ್ಗ (೭) ಮಹಾದೇವಪ್ಪ ಅಮರಪ್ಪ ಮಾ|| ವಾ|| ಚಿಂಡರ ಗಣೇಕಲ್ಲು ತಾ|| ದೇವದುರ್ಗ (೮) ಲಿಂಗನಗೌಡಾ ಬೀಮನಗೌಡಾ ಕೊಣಚಪ್ಪಳಿ ತಾ|| ದೇವದುರ್ಗ (೯) ಬಸವಂತರಾವ್ ಮಾ|| ವಾ|| ಹೊನ್ನಪ್ಪ ಬಿರಾದರ್ ಮಾ|| ವಾ|| ಜೋಳದ ಹೆಡ್ಗಿ ತಾ|| ದೇವದುರ್ಗ (೧೦) ಲಿಂಗಪ್ಪ ಗೌಡ ಜೋಳದ ಹೆಡ್ಗಿ ತಾ|| ದೇವದುರ್ಗ (೧೧) ಹನ ಮಂತರಾವ ಪಾಟೀಲ ಅಂಚೆಸೂಗೂರು ತಾ|| ದೇವದುರ್ಗ

(೧೨) ಪುರಪ್ಪ ಸಾಹುಕಾರ ಪಟವಾರಿ ರಾಮರಾವ್ ಕೊ|| ವಾ|| ಬಸವಂತರಾವ ಮಾ|| ವಾ|| ಲಿಂಗಣ್ಣ ದೊಂಡಂಬಳಿ ತಾ|| ದೇವದುರ್ಗ (೧೩) ಬಸವಲಿಂಗಪ್ಪ ಅಳ್ಳೊಳ್ಳಿ ದೇವದುರ್ಗ ತಾ|| ದೇವದುರ್ಗ (೧೪) ವೀರನಗೌಡ ಮಾ|| ವಾ|| ಕೊಳ್ಳೂರು ಗುರುನಾಥ ರಡ್ಡಿ ಮಾ|| ವಾ|| ಟೋಣೂರು ತಾ|| ಶಹಾಪೂರ ಜಿ|| ಗುಲ್ಬರ್ಗಾ (೧೫) ಬಸವನಗೌಡ ಮಾ|| ವಾ|| ಮದರಕಲ್ಲು ತಾ|| ಶಹಾಪೂರ (೧೬) ಸಿದ್ದರಾಮಪ್ಪ ಮಾ|| ಪಾ|| ದೊಡ್ಡಬಸವನಗೌಡ ಕೊ|| ವಾ|| ಚನ್ನೂರು ಜಹಾಗಿರಿ ಪೋಸ್ಟ ವಡಿಗೇರಿ ತಾ|| ಶಹಾಪೂರ.

ಇಂತಿಷ್ಟು ಭಕ್ತಾದಿಗಳು ಪುರಾತನರ ಸೇವೆಗೆ ಶ್ರೀಕರಣಪೂರ್ವ ಕವಾಗಿ ಸಿದ್ಧರಿರುವರು. ಈ ಮಹಾಶಯರಿಗೆ ಪರಮಾತ್ಮನು ಚಿರಾ ಯುರಾರೋಗ್ಯವನ್ನು ಕರುಣಿಸಲಿ. ಇವರಂತೆ ಉಳಿದ ಭಕ್ತಾದಿ ಗಳು ಸದಭಿಮಾನವಂಹಿಸಿ ಮುಂದೆ ಮಂಟಪಪೂಜೆಗೆ ಒಪ್ಪಿಗೆ **ಕೊಡತಕ್ಕವರು** ಮೇಲಿನ ವಿಳಾಸಿಗೆ ತಿಳುಹಿಸಬೇಕು. ಸದರಿ ಕವಿತಾಳದಲ್ಲಿರುವ ಕಂದಗಲ್ಲು ಬಸಮ್ಮ ಕೋಮ್ ಸಿದ್ಧಪ್ಪ ಗಲಗ ಮೊಗಲಿ ಇವರು ಪುರಾತನರ ಸೇವೆಗಾಗಿ ತಮ್ಮ ಸ್ವಂತ ಜಮೀನು ಐಂದರಿ ವಟಗಲ್ಲು ಅಡವಿ ಪೈಕಿ ಇರುವ ನಂಬರ ಉತ್ತಮವಾ ದದ್ದು ನಾಲ್ಕು ಕೂರಿಗೆ ಹೊಲವನ್ನು ತ್ರಿಕರಣಶುದ್ಧಿಯಿಂದ ದಾನ ರೂಪವಾಗಿ ಸಮರ್ಪಿಸಿರುತ್ತಾರೆ. ಇದಲ್ಲದೆ ಕೆಲವು ಭಾಂಡೆ ಸಾಮಾನುಗಳನ್ನು ಕೂಡ ಅರ್ಪಿಸಿರುವರು. ಇಂತಹ ದಾನವೀರರಿಗೆ ಶಿವನು ಮಂಗಳಾಯುಃಪೈಶ್ವರ್ಯಗಳನ್ನೀಯಲಿ. ಇದೇ ಗ್ರಾಮದ ಮಾ|| ವಾ|| ದೇವರೆಡ್ಡಿಪ್ಪ, ಸಟವಾರಿ ಗೂವಿಂದರಾವ್, ಇಲ್ಲೂರ ಲಕ್ಷ್ಮಯ್ಯ ಧದೇದ ಸರನುಸಿಂಗ ಜಮಾದಾರ. ಈ ಮಹಾಶ ಯರು ೨೦ ಹೇರು ಜೋಳ, ಕುದ್ರಿ ದಾನೆ ಮುಂತಾದ ವೆಚ್ಚಕ್ಕಾಗಿ ಕೊಡಲೊಪ್ಪಿರುತ್ತಾರೆ. ಇವರಿಗೂ ಕೂಡ ಈಶನು ನಿತ್ಯ ಕಲ್ಯಾಣ ವನ್ನೀಯಲಿ— **ಶಿವಂಭೂಯಾತ್.**

## ಪತ್ರಗಳ ಸಾರಾಂಶ.

**ಗೋಕಾವಿ**—ಇಲ್ಲಿಯ ವ್ಯವಹಾರೋತ್ತೇಜಕ ಲಾಯಬ್ರರಿ ಯಲ್ಲಿ ಶಿವಾನುಭವ ಮಂಟಪದ ಮೂರನೆಯ ವ್ಯಾಖ್ಯಾನವು ಕಳೆದ ಸೋಮವಾರ ಶ್ರೀ ಕಾಮೋಜಿಯವರಿಂದ ಜರುಗಿತು. ವಿಷಯವು ಶಿವಭಕ್ತಿ. ಅಧ್ಯಕ್ಷರು ಶ್ರೀಯುತ ಪಟ್ಟದದೇವರು. ವ್ಯಾಖ್ಯಾತರು ಒಂದು ತಾಸಿನವರೆಗೆ ಸರಸವಾಗಿ ವಿಷಯ ವಿವೇಚನೆ ಮಾಡಿದರು. ಮುಂದಿನ ಸೋಮವಾರ ಶ್ರೀ ಎಂ ಎಚ್ ಪಾಟೀಲ ವಕೀಲರ ಭಾಷಣವಾಗುವದಿದೆ.

**ಚಡಚಣ**—ಇಲ್ಲಿಗೆ ಕೀರ್ತನಕೇಸರಿ ಕವಿರತ್ನ ಶ್ರೀ ಶಿವ ಮೂರ್ತಿ ಶಾಸ್ತ್ರಿಗಳು ಒಂದು ಧಾರ್ಮಿಕ, ಸಾಮಾಜಿಕ ಮತ್ತು ನೈತಿಕ ಸಂಬಂಧವಾದ ಆ ಕೀರ್ತನೆಗಳನ್ನು ಮಾಡಿದರು. ಇವರು ತಮ್ಮ ಕೀರ್ತನದಲ್ಲಿ ಅದಿಜನ ಸುಧಾರಣೆ, ಖಾದಿ ಪ್ರಸಾರ, ಕರ್ನಾಟಕ ಏಕೀಕರಣ ಮತ್ತು ಚಡಚಣದಲ್ಲಿ ಶಿವಾನುಭವ ಮಂಟಪಸ್ಥಾಪನೆಯ ಅಗತ್ಯ ಮೊದಲಾದ ವಿಷಯಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದರು. ನೆರೆಯ ಹಾವಿನಾಳ ಮೊದಲಾದ ಸ್ಥಳಗಳಲ್ಲಿಯೂ ಇವರ ಕೀರ್ತನವಾಯಿತು ಅದಿಜನೋದ್ಧಾರದ ವಿಷಯವಾಗಿ ತಾ. ೧೬ನೆಯ ದಿವಸ ಮಹತ್ವವಾದ ವ್ಯಾಖ್ಯಾನ ಮಾಡಿದರು.

**ಮುಂಬೈ**— ಬರುವ ಅಕ್ಟೋಬರ್ ತಿಂಗಳ ಕೊನೆಯ ವಾರ ದಲ್ಲಿ ಅಖಿಲಭಾರತ ರಾಷ್ಟ್ರೀಯ ಸಭೆಯು ಮುಂಬೈಯಲ್ಲಿ ಕೂಡುವ ದಷ್ಟೆ. ಅದೇ ಕಾಲಕ್ಕೆ ಮುಂಬೈಯಲ್ಲಿ ವೀರಶೈವ ಮಹಾ ಸಭೆಯನ್ನು ಕೂಡಿಸಬೇಕೆಂತಲೂ ಆಗ ಬಾರತೀಯ ಮುಖಂಡರು ಇಲ್ಲಿಗೆ ಬರುತ್ತಾರಾದುದರಿಂದ ನಮ್ಮ ಸಮಾಜದ ಪರಿಚಯವು ಅವರಿಗಾಗಲು ಅನುಕೂಲವಾಗುತ್ತದೆಂತಲೂ ಈ ವಿಷಯವನ್ನು ಮುಖ್ಯವರ್ತಿ ಮಂಡಲದವರು ಯೋಚಿಸಿ ಈ ಸಾರಿ ಆ ಕಾಲಕ್ಕೆ ಮುಂಬೈಯಲ್ಲಿ ಮಹಾಸಭೆ ಜರುಗುವಂತೆ ಮಾಡಬೇಕೆಂತಲೂ ಈ ಕೆಳಗೆ ಕಾಣಿಸಿದಂತೆಯೂ ಒಬ್ಬ ಮಹಾಶಯರು ತಿಳಿಸುತ್ತಾರೆ.

ದೇಶಭಕ್ತ ಗಂಗಾಧರರಾವ ದೇಶವಾಂಡೆ ಮತ್ತು ದೇಶಭಕ್ತ ರೇವಣಸಿದ್ಧಪ್ಪ ಕವಲಿ ಮುನಳ್ಳಿ ಇವರು ಸರದಾರ ವಲ್ಲಭಭಾಯಿ ಪಟೇಲ ಇವರನ್ನು ತಾ. ೩೦ನೆಯ ದಿವಸ ಸಂದರ್ಶಿಸಿದರು. ಸರ ದಾರರ ಆರೋಗ್ಯವು ಚೆನ್ನಾಗಿದೆ. ಬಸವೇಶನು ಮಾಡಿದ ಸುಧಾ ರಣೆ ಮತ್ತು ಅಸ್ಪೃಶ್ಯತಾ ನಿವಾರಣೆ ಮೊದಲಾದ ಸಂಗತಿಗಳನ್ನು ಸರದಾರರು ವಿಚಾರಿಸಿದರು.

ಶ್ರೀ. ಮಲಕಪ್ಪ ಚನ್ನಪ್ಪ ಹೆಂದಿಗುಂದ ಮತ್ತು ಶ್ರೀ ರೇವಣ ಸಿದ್ಧಪ್ಪ, ಇವರು ಶ್ರೀ. ನರಿಮನ್, ಸರದಾರ ವಲ್ಲಭಭಾಯಿ ಮತ್ತು ಸೌ. ಸರೋಜಿನಿದೇವಿ ಇವರನ್ನು ಸಂದರ್ಶಿಸಿ ಶ್ರೀಯುತ ರೇವಣಸಿದ್ಧಪ್ಪನವರ ವಿವಾಹದ ನಿಮಿತ್ತವಾಗಿ ಫಲ ಪುಷ್ಪಗಳನ್ನು ಅರ್ಪಿಸಲು ಆ ಮಹಾಶಯರು ಶುಭಚಿಂತನೆಗಳನ್ನು ಕೋರಿದರು.

## ಕೇಳಿರಿ! ಆಶ್ಚರ್ಯ!!

ಹಿಂದುಸ್ಥಾನದಲ್ಲಿ ಹಿಂದುಗಳೇ ಬಹು ಸಂಖ್ಯಾಕರಿದ್ದರೂ ಇವು ಮುಸಲ್ಮಾನರ ರಾಜ್ಯವಾವೀತೆಂದು ಇವರಿಗೆ ಭೀತಿಯುಂಟೆ!

ಹಿಂದುಸ್ಥಾನದಲ್ಲಿ ಬ್ರಾಹ್ಮಣೇತರರೇ ಬಹು ಸಂಖ್ಯಾಕರಾಗಿದ್ದರೂ ಬ್ರಾಹ್ಮಣರೇ ತಮ್ಮನ್ನು ತುಳಿಯುವರೆಂದು ಬ್ರಾಹ್ಮಣೇತರರಿಗೆ ಅಂಜಿಕೆಯುಂಟೆ!

ಹಿಂದುಸ್ಥಾನದಲ್ಲಿ ಒಕ್ಕಲಿಗರನವೇ ಬಹು ಹೆಚ್ಚಾಗಿದ್ದರೂ ಹೊಟ್ಟೆಗಿಲ್ಲದೆ ಬಳಲುವವರು ಇದೇ ದೇಶದಲ್ಲಿ ಹೆಚ್ಚುಂಟೆ!

ಹಿಂದುಸ್ಥಾನದಲ್ಲಿ ಹತ್ತಿಯು ವಿಪುಲವಾಗಿ ಬೆಳೆಯುತ್ತಿದ್ದರೂ ಬಟ್ಟೆಗಾಗಿ ೬೦ ಕೋಟಿ ರೂಪಾಯಿಗಳನ್ನು ಕೊಡುತ್ತಿರುಂಟೆ!

ಅನೈಕ್ಯತೆ, ಅಶಕ್ತತೆ, ಅಜ್ಞಾನಗಳ ಅದ್ಭುತ ದೃಶ್ಯಗಳೇ ಇವಲ್ಲವೆ?

---

—ನಾ ದಿ. ಬ. ಕಂಬಳಿಯವರ ಪ್ರಯತ್ನದಿಂದ ಸರಕಾರದವರು ನೇಕಾರರ ಮಾರಾಟವಾಗದೇ ಇದ್ದ ಸನಗುಗಳನ್ನು ಕೊಳ್ಳುವ ದಕ್ಕಾಗಿ ಅಲ್ಲಲ್ಲಿ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಮಾಡಿದ್ದಾರೆ. ಸದ್ಯಕ್ಕೆ ೬೦ ಸಾವಿರ ರೂ. ಮೊತ್ತವನ್ನು ಹಾಕಿ ೫ ವರ್ಷಗಳವರೆಗೆ ಹೆಚ್ಚಿಸುವರು.





ದಿ ಸ್ವರಾಜ್ಯ

# ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ.)

## ಬೇಕಾಗಿದ್ದಾರೆ! ತಾಲೂಕ, ಜಿಲ್ಲಾ ಆರ್ಗನಾಯಿಝರರು ಪಗಾರದ ಮೇಲೆ ಬೇಕಾಗಿದ್ದಾರೆ!!

ಸ್ವರಾಜ್ಯ ಕಂಪನಿಯ ವಿಮಾ ಕಾರ್ಯವು ಪ್ರಾರಂಭವಾಗಿ ಇಂದಿಗೆ ೬ ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿ ವಿಮಾ ಪ್ರಪಂಚದಲ್ಲಿಯೂ. ಜನತೆಯಲ್ಲಿಯೂ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿರುವದೆಂಬುದು ಇದರ ಪ್ರತಿ ತಿಂಗಳ ಬೆಳವಣಿಗೆಯ ಮೇಲಿಂದ ತಾನೇ ಸಿದ್ಧವಾಗುವುದು. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇರುವದು.

೧೯೩೪ನೆಯ ಜಾನೇವರಿಯಿಂದ ಮಾರ್ಚ ೩೧ರವರೆಗೆ ೪೬೦೦೦ ರೂ.
" ಎಪ್ರಿಲ್‌ದಿಂದ ಜೂನ ೩೦ ರವರೆಗೆ ೧,೧೩೦೦೦ ರೂ.
ಅಂದಾಜ ೬ ತಿಂಗಳಲ್ಲಿ ೧,೫೯,೦೦೦ ರೂ.

ಇಷ್ಟು ಬೆಲೆ ಬಾಳುವ ಪಾಲಸಿಗಳು ಜಾರಿಯಲ್ಲಿವೆ. ಸಮರ್ಥರಾದ ಏಜಂಟರೂ, ಆರ್ಗನಾಯಿಝರರೂ ಕಮಿಶನ್ ಮತ್ತು ಪಗಾರದ ಮೇಲೆ ಕೆಲಸ ಮಾಡಲು ಬೇಕಾಗಿದ್ದಾರೆ—

| ಆರ್ಗನಾಯಿಝರರ ಪಗಾರ ಸ್ಕೇಲು. | ಪ್ರತಿ ತಿಂಗಳ ಪಗಾರ. | ಪ್ರತಿ ತಿಂಗಳ ಅಲಾವನ್ಸ. |
|---|---|---|
| ಜಿಲ್ಲಾ ಆರ್ಗನಾಯಿಝರ | ೫೦ ರಿಂದ ೧೦೦ ರೂ. | ೨೫ ರೂ. |
| ತಾಲೂಕ ಆರ್ಗನಾಯಿಝರ | ೨೫ ರಿಂದ ೫೦ ರೂ. | ೧೦ ರೂ. |

ಏಜಂಟರಿಗೆ ಭರಪೂರ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿಯ ಬಗ್ಗೆ ಕಂಪನಿಯ ಕೂಡ ಪತ್ರವ್ಯವಹಾರ ಮಾಡಿರಿ.

ಮ್ಯಾನೇಜಿಂಗ ಏಜಂಟ್ಸ.

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಲ್ಪತರುವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗಳಿಡೇಶ್ವರ ಕೊಳ್ಳವು ಪ್ರಸಿದ್ಧವಿರುವದು ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೪-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಛಾಪಿನೆ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
# ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಯ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (**ಪ್ಲೇಗ ಮಾರಿಕಾ,**) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ವೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಪಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯ ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಸ್ವಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೂಡಬೇಕಾಗುವದು.

ಅಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ,** ಪೋಸ್ಟ— **ಹುಮನಾಬಾದ ಜಿ. ಗುಲ್‌ಬರ್ಗಾ.**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು, ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವ ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಮಿಂದ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧ ವಾಗಿದೆ. **ಈ ಸಂಜೀವಿನಿ** ಚೂರ್ಣವನ್ನು ಒಂದೇಸಾರಿ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು ಆಗ ನಿಮಗೆ ಖಂಡಿತವಾಗಿಯೂ ಆತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ..... ..... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**



# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹೆಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬರಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

**" ಕಚ್ಯೆ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮೊಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮೆತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಆಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕೆಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ವಿಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

( ಕಂದನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ವಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ್. ಮುಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮುಶಿಚೇಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಚೇಳಿನ ನಾಶ— | ೧೧ | ,, |
| ೧೨ ತಗಣಿ ಕತ್ತು ಬಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
**ಪೋ. ಹಂಚಿಲಿ.**
**ಜಿ. ರತ್ನಾಗಿರಿ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. 2891.

# ಶರಣ ಸಂದೇಶ

# The Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಲ್ಲ। ಲೋಕವಿರೋಧಿ। ಶರಣನಾರಾಧಿಗ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜ ಪ್ರಭಾವಿ ॥ ವ. ೨೨೫ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೭ ನೆಯ ಅಗಸ್ಟ ೧೯೩೪. | ಸಂಚಿಕೆ ೪೯.

ಜನಸೇವೆಯೇ ದೇವರ ಸೇವೆ.

## ಮಹಾತ್ಮಾಜಿಯವರ
## ಮಹಾಯಾತ್ರೆಯು ಸಮಾಪ್ತಿ.

### ೮ ಲಕ್ಷರೂ. ಗಳ ಆದಿಜನ ನಿಧಿ.

### ಸನಾತನಿಗಳ ವಿಚಿತ್ರ ಲೀಲೆ!

ಮಹಾತ್ಮರ ಮಹಾಯಾತ್ರೆಯು ಕಳೆದ ೨ ನೆಯ ತಾರೀಖಿನ ಮಧ್ಯಾಹ್ನಕ್ಕೆ ಶ್ರೀ ಕಾಶಿ ಕ್ಷೇತ್ರದಲ್ಲಿ ಪರಿಸಮಾಪ್ತಿಯಾಯಿತು. ಕಾಶಿಯಲ್ಲಿ ಅವರಿಗೆ ೧೦ ಸಾವಿರ ರೂ. ಗಳು ದೊರೆತವು. ಅವರಿಗೆ ೧೦೨ ಅಂಶ ತಾಪ ವಿದ್ದರೂ ಆದಿಜನ ಕೇರಿಗಳನ್ನು ನಿರೀಕ್ಷಿಸಿ ಪಾಟಣಾದ ಕಡೆಗೆ ಪ್ರಯಾಣ ಮಾಡಿದರು.

ಕಾಶಿಯಲ್ಲಿ ಸನಾತನಿಗಳು 'ದರ್ಬಾರ' ನೆರೆಯಿಸಿ ಮಣಿರಾಮ ಶರ್ಮಾ ಎಂಬ 'ಇನ್ಸ್‌ಪೆಕ್ಟರ' ರೊಡನೆ ಗಾಂಧೀಜಿಯವರ ಬಂಧನಕ್ಕಾಗಿ ಆಜ್ಞಾಪತ್ರ (ವಾರಂಟ) ವನ್ನು ಕಳಿಸಿದರು. ಮಹಾತ್ಮರು ಅದರ ಮೇಲೆ ಇದು ಅನ್ಯಾಯವಾದುದೆಂದು ಬರೆದು ಕೊಡಲು ಸನಾತನಿ ಸರಕಾರವು ಗಾಂಧೀಜಿಯವರ ಭಾವ ಚಿತ್ರವನ್ನು ೫ ಗಂಟೆಗಳ ವರೆಗೆ ತಲೆಕೆಳಗೆ ಮಾಡಿ ಕಟ್ಟಿ ಕಡೆಗೆ ಸುಟ್ಟುಬಿಡಲು ನಿರ್ಣಯಿಸಿತು.

SANGAM CLOTH STORES
Prop: M S Hundekar & Sons,
P.O: TERDAL - 587 315
Dt. Bijapur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾನುಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾನುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಸಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜ್ಜೀ ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾನುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಆಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳಿಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ** ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾನಿ ಹೆಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಅತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

**ಸಿದ್ಧೇಶ್ವರ ಮತ್ತು ಕಂಪನಿ.**
ತಿಜೋರಿ ಮೇಕರ್ಸ
ಬಮ್ಮಾಪುರಗಲ್ಲಿ, **ಹುಬ್ಬಳ್ಳಿ.**
ಬ್ರಾಂಚ್ ಆಫೀಸ್:-
**ಅಬಿಡ್ಸ ಬಿಲ್ಡಿಂಗ್**
**ಹೈದ್ರಾಬಾದ** ( ಡೆಕ್ಕ )

ಒ ಎ. ಎಂ. ದಿನಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.
ಖ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.



**ದೇವೀಪುರಾಣ ಬೆಲೆ ರೂ. ೪-೦-೦ (ರೋಣದ ಪ್ರತಿ)**

# ಚಿತ್ರ) ವೀರಶೈವ ಕರದರ್ಪಣವು. (೩೦೦ ಚಿತ್ರ

ಈ ಪುಸ್ತಕದಲ್ಲಿ ವೀರಶೈವ ಮತತತ್ವ ನಿರೂಪಣೆ, ವೀರಶೈವ ಧರ್ಮದ ವಿಶಾಲತ್ವ, ವೀರಶೈವ ಬ್ರಾಹ್ಮಣ್ಯ ಸಿದ್ಧಾಂತ, ವೀರಶೈವ ಪಂಚಪೀಠಗಳು, ಪಂಚಪೀಠಗಳು, ಶ್ರೀ ಬಸವೇಶ್ವರ, ಮಹಾನುಭಾವರಾದ ಶ್ರೀ ಬಸವಣ್ಣನವರು ಮಹಿಮಾಶಾಲಿಯಾದ ಬಸವೇಶ್ವರರು, ಬಸವಜಯಂತಿ, ಜಗದ್ಗುರು ಜಯದೇವ ಮುರುಘಾರಾಜೇಂದ್ರ ಸ್ವಾಮಿಗಳು, ಜಗದ್ಗುರು ಜಗದಾಚಾರ್ಯಸ್ವಾಮಿ ವಿರುಪಾಕ್ಷ ಒಡೆಯರವರು, ಅ. ಭಾ. ವೀರಶೈವ ಮಹಾಸಭೆಯು, ವೀರಶೈವ ಮಹನೀಯರು, ವೀರಶೈವ ಸಂಸ್ಥೆಗಳು ಮೊದಲಾದ ವಿಷಯ ಸಂಗ್ರಹವಿರುವುದರಿಂದ ಇದನ್ನು ಸರ್ವರೂ ಸಂಗ್ರಹಿಸತಕ್ಕದ್ದು. ಬೆಲೆ ರೂ. ೧-೪-೦.

ಹಾನಗಲ್ ಶ್ರೀ ಸ್ವಾಮಿ ಸ್ಮಾರಕಚಂದ್ರಿಕೆ ೧ ರೂ ವಿದ್ಯಾಭಾಂಡಾರ (೧-೩ ಭಾಗ) ೩-೦-೦ ಗುಪ್ತ ಪ್ರಶ್ನೆ ಸಿದ್ಧಾಂಜನ ೧-೦-೦ ಅರೂಢ ಪ್ರಶ್ನ ಚಂದ್ರಿಕೆ ೨-೦-೦ ಸಂಪೂರ್ಣ ಲಗ್ನವಿಧಿ ೦-೧೦-೦.

**ಸೂಚನೆ:—** ಮೇಲಿನ ಒಂದಾದರೂ ಪುಸ್ತಕವನ್ನು ತರಿಸಿದರೆ ೧೮೫೬ನೇ ಭಾವನಾಮ ಸಂವತ್ಸರದ ಶ್ರೀ ಹೂಲಿ (ಗದಗ) ಸಿದ್ಧಾಂತ ಪಂಚಾಂಗವನ್ನು ಉಚಿತ ಕಳಿಸುವೆವು.

**ಶ್ರೀ ಲಕ್ಷ್ಮೀನಿಲಾಸ ಪುಸ್ತಕಾಲಯ ಗದಗ.**

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. ಆಲಮಟ್ಟಿ ಅಗಸ್ಟ ತಾರೀಖು ೬ ನೆಯ ಸೋಮವಾರ ಸಂಚಿಕೆ ೪೯.


# ಹೊಸ ವರುಷದ ಹೊಸ ವ್ಯವಸ್ಥೆ.

## ಚಂದಾದಾರರಲ್ಲಿ ವಿಜ್ಞಾಪನೆ.

**ನಾಲ್ಕನೆಯ ವರುಷದ ಮೊದಲನೆಯ ಸಂಚಿಕೆಯು ಅಗಸ್ಟ ೨೦ನೆಯ ತಾರೀಖಿನ ದಿನ ಪ್ರಕಟವಾಗುವುದು. ಈ ಹೊಸ ವರುಷದಿಂದ ಶರಣಸಂದೇಶವು ಇಪ್ಪತ್ತು ಪುಟಗಳುಳ್ಳದ್ದಾಗುವದು. ವಾರ್ಷಿಕ ಚಂದಾ ಮಾತ್ರ ಈಗಿನಂತೆ ಮೂರೇ ರೂಪಾಯಿಗಳು.**

ಧಾರ್ಮಿಕ ಮೂಢ ಕಲ್ಪನೆಗಳು ಮತ್ತು ಸಾಮಾಜಿಕ ದುಷ್ಟ ರೂಢಿಗಳು ನಿವಾರಣೆಯಾದ ವಿನಾ ಹಿಂದು ಜನಾಂಗದಲ್ಲಿ ನಿಜವಾದ ಶಕ್ತಿಸಂಘಟನೆಗಳುಂಟಾಗುವುದಿಲ್ಲ. ಹಿಂದು ಜನಾಂಗವು ಬಲ ಶಾಲಿಯಾದ ವಿನಾ ಹಿಂದುಸ್ಥಾನದಲ್ಲಿ ಸುಖಶಾಂತಿಗಳು ನೆಲೆಸುವು ದಿಲ್ಲ. ಆದಕಾರಣ ಪ್ರತಿಯೊಬ್ಬ ಹಿಂದು ಈ ವಿಷಯಗಳ ಕಡೆಗೆ ಲಕ್ಷಿಸಿ ತನ್ನಲ್ಲಿರುವ ಸಾಮಾಜಿಕ ಮತ್ತು ಧಾರ್ಮಿಕ ದೋಷಗಳನ್ನು ತೆಗೆದುಹಾಕಲು ಸಿದ್ಧನಾಗಬೇಕು.

ಈ ವಿಷಯಗಳ ನಿಜಜ್ಞಾನವಾಗಲು ನಾಲ್ಕನೆಯ ವರುಷ ದಿಂದ ವೇದಗಳ ಸಂಬಂಧವಾದ ಮಹಾಮಹಾ ವಿದ್ವಾಂಸರ ವಿಚಾ ರಾತ್ಮಕ ಲೇಖನಗಳು, ಪಾಶ್ಚಾತ್ಯರ ಸಾಮಾಜಿಕ ವಿಚಾರ ಕ್ರಾಂತಿಯ ವಿವೇಚನೆಗಳು ಆದಿಜನ ಸುಧಾರಣೆ, ಸ್ತ್ರೀ ದಾಸ್ಯ ವಿಮೋಚನೆ, ಮತ್ತು ಹಿಂದು ಸಂಘಟನೆಗಳ ಸಂಬಂಧವಾದ ಮಹ ತ್ವದ ಸಂಗತಿಗಳು ಪ್ರಕಟವಾಗುವ ವ್ಯವಸ್ಥೆಮಾಡಿದ್ದಾಗಿದೆ.

ವೀರಶೈವ ಮತತತ್ವ ಮತ್ತು ವೀರಶೈವ ಏಕೀಕರಣಗಳ ಸಂಬಂಧವಾಗಿ ಈ ಮೂರು ವರುಷಗಳಂತೆಯೇ ಹೊಸ ವರುಷ ದಲ್ಲಿಯೂ ವಿಶೇಷವಾಗಿಯೇ ಪ್ರಕಟವಾಗುವುದು.

ಆದುದರಿಂದ ಸಕಲರೂ ಈ ಪತ್ರಿಕೆಯ ಚಂದಾದಾರರಾಗಿ ಇದರ ಪ್ರಯೋಜನವನ್ನು ಹೊಂದಬೇಕಾಗಿ ಪ್ರಾರ್ಥನೆ.

ಮ್ಯಾನೇಜರ್, 'ಶರಣಸಂದೇಶ'

### ಚಂದಾದಾರರಲ್ಲಿ ವಿಜ್ಞಾಪನೆ,

ಶರಣಸಂದೇಶ ಪತ್ರಿಕೆಯ ಮೂರನೆಯ ವರುಷವು ಇದೇ ಅಗಸ್ಟ ೬ನೆಯ ತಾರೀಖಿನ ೪೯ನೆಯ ಸಂಚಿಕೆಗೆ ಪೂರೈಸುವುದು. ಪದ್ಧತಿಯ ಪ್ರಕಾರ ಮುಂದೆ ಅಗಸ್ಟ ೧೩ನೆಯ ತಾರೀಖಿನ ಪತ್ರಿಕೆ ಪ್ರಕಟವಾಗದೆ ನಾಲ್ಕನೆಯ ವರುಷದ ಮೊದಲನೆಯ ಸಂಚಿಕೆಯು ಅಗಸ್ಟ ೨೦ನೆಯ ತಾರೀಖಿಗೆ ಪ್ರಕಟನಾಗುವುದು.

ನಾಲ್ಕನೆಯ ವರುಷದಲ್ಲಿ ಚಂದಾದಾರರಾಗಲು ಇಷ್ಟವಿಲ್ಲದ ಮಹಾಶಯರು ಅಗಸ್ಟ ೧೦ನೆಯ ತಾರೀಖಿನೊಳಗಾಗಿ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಮನಿಯಾರ್ಡರ್ ಮೂಲಕ ೩ ರೂ. ಚಂದಾ ಹಣವನ್ನು ತಾನೇ ಕಳುಹಿಸಿದರೆ ಅನುಕೂಲ, ವೆಚ್ಚ ಕಡಿಮೆಯಾಗುತ್ತದೆ. ವ್ಹಿ. ಪಿ. ತಿರುಗಿ ಬರುವ ಸಂಭವವೂ ತಪ್ಪುತ್ತದೆ.

ಆಸ್ಟರೊಳಗಾಗಿ ಪತ್ರ ಅಥವಾ ಹಣ ಬಾರದಿದ್ದರೆ ಈ ವರುಷ ದಂತೆಯೇ ತಾವು ನಾಲ್ಕನೆಯ ವರುಷದಲ್ಲಿಯೂ ಚಂದಾದಾರರಾಗಲು ಇಷ್ಟವುಳ್ಳವರಾಗಿದ್ದೀರೆಂದು ನಂಬಿ ಯಾವ ಚಂದಾವಾರರ ಚಂದಾ ಅವಧಿಯು ಅಗಸ್ಟ ೩೦ಗಳ ಅಂತ್ಯಕ್ಕೆ ಮುಗಿಯುತ್ತದೆಯೋ ಅವರಿಗೆ ಅಗಸ್ಟ ೩೦ಗಳ ಕಡೆಯ ವಾರದಲ್ಲಿ ವಾರ್ಷಿಕ ಚಂದಾ ಹಣಕ್ಕೆ ಪತ್ರಿಕೆಯನ್ನು ವ್ಹಿ. ಪಿ. ಮಾಡಲಾಗುವುದು.

ಆಗ ವ್ಹಿ. ಪಿ. ಬಿಡುವದರಿಂದ ತುಂಬಾ ನಷ್ಟವಾಗುತ್ತದೆ. ಆದಕಾರಣ ಇಷ್ಟವಿಲ್ಲದವರು ಈಗಲೇ ದಯವಿಟ್ಟು ತಿಳಿಸಬೇಕಾಗಿ ಈ ಪ್ರಕಾರ ಮುಂಚೆಯೇ ವಿಜ್ಞಾಪಿಸಿಕೊಂಡಿದ್ದಾಗಿದೆ.

ಮ್ಯಾನೇಜರ್ 'ಶರಣಸಂದೇಶ'

# ಹಿಂದು ತರುಣರ ಗುರಿ.

ಹಿಂದುಸ್ಥಾನವು ಹಿಂದುಗಳ ದೇಶವಾಗಿದೆ. ಇನ್ನು ಮುಂದೆಯೂ ಇದು ಹಿಂದುಗಳ ದೇಶವಾಗಿಯೇ ಇರಬೇಕಾಗಿದೆ. ದೇಶದ ಭವಿತವ್ಯವು ಆ ದೇಶದ ತರುಣರ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುವುದರಿಂದ ಹಿಂದು ತರುಣರಿಗೆ ಹಿಂದುಸ್ಥಾನದ ಹಿತವೇ ಗುರಿಯಾಗಿರಬೇಕಾದುದು ವಿಹಿತವಲ್ಲವೇ?

ಹಿಂದು ತರುಣರನ್ನು ಅನೇಕರು ಅನೇಕ ರೀತಿಗಳಿಂದ ಹುರಿದುಂಬಿಸುತ್ತಿದ್ದಾರೆ. ಅವರನ್ನು ನಾನಾ ದಿಕ್ಕುಗಳ ಕಡೆಗೆ ತಿರುಗಿಸುತ್ತಿದ್ದಾರೆ. ಅವರ ಮುಂದೆ ಬೇರೆಬೇರೆ ಗುರಿಗಳನ್ನು ಇಡುತ್ತಿದ್ದಾರೆ. ಬಿಸಿ ರಕ್ತವು ಕೆಚ್ಚೆದೆಯು ಉಬ್ಬುಬ್ಬಿ ಬರುವಾಗ ಮುಂದಾಲೋಚನೆ ತಪ್ಪುವುದು ಸ್ವಾಭಾವಿಕ. ಆದುದರಿಂದ ಹಿಂದು ತರುಣರು ತಮ್ಮ ಮುಂದೆ ಬರುವ ವಿಷಯಗಳನ್ನು ಚೆನ್ನಾಗಿ ವಿಮರ್ಶಿಸಿಯೇ ಮುಂದಡಿಯಿಡಬೇಕಾದುದು ಅತ್ಯಾವಶ್ಯಕ.

ಹಿಂದು ತರುಣರ ಮುಂದೆ ಈಗ ರಾಷ್ಟ್ರ ಧರ್ಮ ಮತ್ತು ಹಿಂದು ಧರ್ಮ ಎಂಬೆರಡು ವಿಷಯಗಳು ಆಗಾಗ್ಗೆ ಬರುತ್ತಲಿವೆ. ಧರ್ಮದ ಹುಚ್ಚನ್ನು ಬಿಟ್ಟು ನಿಚ್ಚಳಾಗಿರಿ. ರಾಷ್ಟ್ರದ ಕಡೆಗೆ ನೋಡಿರಿ. ಹಿಂದು ಎಂದು ಹೇಳಿಕೊಳ್ಳಲು ನಾಚಿರಿ. ಹಿಂದಿ ಎಂದು ಹೇಳಿಕೊಳ್ಳಲು ಅಭಿಮಾನ ಪಡಿರಿ. ಧರ್ಮವನ್ನು ನಿಮಗೆ ಬೋಧಿಸುವವರು ರಾಷ್ಟ್ರಘಾತಕರು. ಸ್ವಾರ್ಥಿಗಳು. ಧರ್ಮದ ಮಬ್ಬಿಗೆ ಬಿದ್ದೇ ನಮ್ಮ ರಾಷ್ಟ್ರ ಪರಾಧೀನನಾಯಿತು. ಆದಕಾರಣ ಊಟ, ಉಡಿಗೆ, ಆಚಾರ ಮೊದಲಾದ ಅನೇಕ ಸಂಗತಿಗಳಲ್ಲಿರುವ ಹಿಂದು ಧರ್ಮದ ನಿಯಮ ನಿರ್ಬಂಧಗಳನ್ನೆಲ್ಲಾ ಕಿತ್ತೊಗೆದು ರಾಷ್ಟ್ರ ಧರ್ಮಿಗಳಾಗಿರಿ.

ವಿಶ್ವಬಂಧುತ್ವವನ್ನು ಸಾಧಿಸಿರಿ. ಹಿಂದುಗಳೆಂಬ ಸಂಕುಚಿತ ಭಾವನೆಯನ್ನು ತೆಗೆದುಹಾಕಿರಿ. ರಾಷ್ಟ್ರ ಧರ್ಮವನ್ನು ಸ್ವೀಕರಿಸಿದರೆ ಬೇಕಾದಲ್ಲಿ ಬೇಕಾದುದನ್ನು ಊಟಮಾಡಬಹುದು. ಯಾವ ಗುರುದೇವತೆಗಳ ಕಾಟವೂ ಇಲ್ಲದಾಗುವುದು. ಮತಾಚಾರಗಳ ಸಂಕೋಲೆಗಳು ತಾವೇ ಕಳಚಿ ಹೋಗುವವು. ಮನುಷ್ಯರೆಲ್ಲರೂ ಒಂದೇ ಎಂಬುದನ್ನು ನಡೆನುಡಿಗಳಲ್ಲಿ ಅನುಭವಕ್ಕೆ ತಂದುಕೊಳ್ಳಬಹುದು. ಆದರಿಂದ ಸಾಮಾಜಿಕ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯಗಳು ತಾನೇ ಮುಂದೆ ಬಂದು ನಿಲ್ಲುವವು.

ಎಂಬುದಾಗಿ ಕೆಲವರು ಹಿಂದು ತರುಣರಿಗೆ ರಾಷ್ಟ್ರ ಧರ್ಮವನ್ನು ಬೋಧಿಸುತ್ತಿದ್ದಾರೆ.. ಹಿಂದು ತರುಣರೇ? ಎಚ್ಚರ. ಈ ರಾಷ್ಟ್ರ ಧರ್ಮದ ಮಾತಿನ ಮಾತಿಗೆ ಮೋಸ ಹೋಗಬೇಡಿರಿ. ಈ ವಿಶ್ವಬಂಧುತ್ವದ ಮಾತಿನ ಮಾಧುರ್ಯಕ್ಕೊಳಗಾಗಬೇಡಿರಿ. ನಮ್ಮ ಪೂರ್ವಜರಲ್ಲಿ ದೇಶಾಭಿಮಾನವಿಲ್ಲದಿದ್ದುದರಿಂದ ಈಗ ನಾವು ಜೀಗೆ ಪರಾಧೀನರಾಗಿದ್ದೇವೆಯೋ ಹಾಗೆಯೇ ಈಗಿನವರಾದ ನಮ್ಮಲ್ಲಿ ಧರ್ಮಾಭಿಮಾನವಿಲ್ಲದಿದ್ದರೆ ಮುಂದಿನ ಹಿಂದುಗಳು ಹಿಂದುಗಳಾಗಿರದೆ ಮುಸಲ್ಮಾನರೋ ಅಥವಾ ಕ್ರೈಸ್ತರೋ ಆಗಿರಬೇಕಾಗುವುದು.

ನಮಗೆ ನಮ್ಮ ಜನ್ಮ ಭೂಮಿಯು ಎಷ್ಟು ಪವಿತ್ರವಾದುದೋ ಅಷ್ಟೇ ನಮ್ಮ ಹಿಂದು ಧರ್ಮವೂ ನಮಗೆ ಪೂಜ್ಯವಾದುದಾಗಿರಬೇಕು. ರಾಷ್ಟ್ರಾಭಿಮಾನ ಮತ್ತು ಧರ್ಮಾಭಿಮಾನಗಳೆಂಬವೇ ನಮ್ಮಿಬ್ಬರೆರಡು ಕಣ್ಣುಗಳೆಂದು ತಿಳಿಯಿರಿ. ಇವುಗಳಲ್ಲಿ ಯಾವುದಿಲ್ಲದಿದ್ದರೂ ಕೊರತೆಯೇ ಸರಿ. ಹಿಂದುತ್ವವನ್ನೇ ಬಿಟ್ಟನಂತರ ಇದು ಮುಸಲ್ಮಾನ್ ಸ್ಥಾನವಾದೀತು? ಕ್ರೈಸ್ತ ದೇಶವಾದೀತು? ಈ ದೇಶದ ರಾಜ್ಯ ಸೂತ್ರವನ್ನು ಈ ದೇಶದ ಪ್ರಜೆಗಳಾದ ಯಾವ ಧರ್ಮದವರು ಹಿಡಿದರೂ ಅಭ್ಯಂತರವೇನು? ಎಂಬ ರಾಷ್ಟ್ರ ಧರ್ಮದ ಹುಚ್ಚು ನಿಮಗೆ ಹಿಡಿದರೆ ಇದು ಹಿಂದುಸ್ಥಾನವಾಗಿರದೆ ಮುಸಲ್ಮಾನ್ ದೇಶವಾಗುವುದೆಂದು ಕೆಲವರು ಎಚ್ಚರಿಸುತ್ತಿದ್ದಾರೆ.

ಕಾಲ ಸ್ಥಿತಿಗನುಸರಿಸಿ ಬಾಹ್ಯ ಆಚಾರವಿಚಾರಗಳಲ್ಲಿ ಯುಕ್ತವಾದ ವ್ಯತ್ಯಾಸಗಳನ್ನು ಹಿಂದು ತರುಣರು ಧಾರಾಳವಾಗಿ ಮಾಡಿಕೊಳ್ಳಬೇಕು. ಅನಾವಶ್ಯಕ ಮತ್ತು ಅಹಿತಕರವಾದ ರೂಢಿಯ ಬಲಿಯಲ್ಲಿ ಸಿಕ್ಕಿಕೊಂಡು ನರಳದೆ ಅಂಥ ರೂಢಿಯ ಬೇಡಿಗಳನ್ನು ಮುರಿದುಹಾಕಬೇಕು. ಆದರೆ ಹಿಂದು ಧರ್ಮಕ್ಕೇನೇ ತಿಲಾಂಜಲಿ ಕೊಡಬಾರದು. ಹಿಂದು ಸಂಸ್ಕೃತಿಯಿಂದಲೇ ಜಿಗಿದು ಪರ ಸಂಸ್ಕೃತಿ ಪೋಷಣೆಗೆ ಆಹುತಿಯಾಗಬಾರದು.

ಹಿಂದು ಸಂಸ್ಕೃತಿಯೇ ಹಿಂದು ತರುಣರ ಗುರಿಯಾಗಿರಲಿ. ಅದನ್ನು ಸಾಧಿಸಲು ಹಿಂದು ಧರ್ಮ ಮತ್ತು ರಾಷ್ಟ್ರ ಧರ್ಮಗಳೆರಡೂ ಮುಖ್ಯೋಪಾಯಗಳು. ಹಿಂದು ಧರ್ಮವನ್ನು ಪೇಕ್ಷಿಸಿ ರಾಷ್ಟ್ರ ಧರ್ಮದಲ್ಲಿಯೇ ಮಗ್ನವಾದರೂ ಹಿಂದು ಸಂಸ್ಕೃತಿ ಕಡೆಗೇನೇ ಹೋಗಬೇಕು. ಹಿಂದು ಸಂಸ್ಕೃತಿ ರಕ್ಷಣೆಗೆ ರಾಜಕೀಯ ಸ್ವಾತಂತ್ರ್ಯವು ಅವಶ್ಯಕವಾದುದರಿಂದ ಅದಕ್ಕೆ ವಿರೋಧವಾಗಿ ಅಚರಿಸಬಾರದು.

## ಏಶಿಯಾಖಂಡದ ಯುದ್ಧವೆಂದು?

ಶಸ್ತ್ರ ಸನ್ಯಾಸ ಪರಿಷತ್ತು ಜಗತ್ತಿನಲ್ಲಿ ಯುದ್ಧವಾಗಬಾರದೆಂದು ಬೋಧಿಸುತ್ತಿದ್ದರೂ ಈ ಪುರಾಣವನ್ನು ಕೈಲಾಗದ ರಾಷ್ಟ್ರಗಳೇ ಕೇಳುತ್ತಲಿವೆಯಲ್ಲದೆ ಪ್ರಯಲ್ಲಿ ಶಕ್ತಿಯುಳ್ಳ ರಾಷ್ಟ್ರಗಳು ಮುಂದರಿದು ನೆರೆಯ ರಾಷ್ಟ್ರಗಳನ್ನು ಆಕ್ರಮಣ ಮಾಡುವುದರಲ್ಲಿಯೇ ಮಗ್ನವಾಗಿವೆ.

ಜಪಾನ ರಾಷ್ಟ್ರವು ಮಾಂಚುರಿಯಾ ಭಾಗವನ್ನು ನುಂಗಿ ತನ್ನಲ್ಲಿರುವ ಶಕ್ತಿಸಾಹಸಗಳನ್ನು ಪ್ರಪಂಚಕ್ಕೆ ತೋರಿಸಿತು. ಚೀನ ದೇಶದ ಮೇಲೆ ಜಪಾನ ಮತ್ತು ರಶಿಯಾ ದೇಶಗಳು ಕಣ್ಣಿಟ್ಟಿವೆ. ಜಗತ್ತಿನಲ್ಲಿ ಕ್ರಾಂತಿಯನ್ನುಂಟುಮಾಡಲು ರಶಿಯಾ ದೇಶವು ಚೀನ ರಾಷ್ಟ್ರವನ್ನು ಆಕ್ರಮಣ ಮಾಡಬೇಕೆಂದಪೇಕ್ಷಿಸುತ್ತಿದೆ. ಜಪಾನ ರಾಷ್ಟ್ರವಾದರೋ ಸಾಮ್ರಾಜ್ಯಾಭಿಲಾಷೆಯಿಂದ ಚೀನ ದೇಶವನ್ನು ನುಂಗಬೇಕೆಂದಿಚ್ಛಿಸಿದೆ.

ಈ ಪ್ರಕಾರ ಒಂದೇ ದೇಶದ ಮೇಲೆ ಎರಡು ರಾಷ್ಟ್ರಗಳು ಕಣ್ಣಿಟ್ಟಿರುವುದರಿಂದ ಈ ಉಭಯ ರಾಷ್ಟ್ರಗಳು ಯಾವ ಕಾಲದಲ್ಲಿ ರಣಭೇರಿಯನ್ನು ಹೊಡೆಯುವವೋ ತಿಳಿಯದು. ರಶಿಯಾ ದೇಶವು ಪೂರ್ವ ಸೈಬೀರಿಯಾ ದೇಶದ ಗಡಿಯಲ್ಲಿ ೩ ಲಕ್ಷ ಸೈನ್ಯವನ್ನು ಕಾದಿಟ್ಟಿದೆ. ಜಪಾನ ದೇಶವು ಕೂಡಾ ಮಾಂಚುರಿಯಾದಲ್ಲಿ ಸೈನ್ಯವನ್ನು ಹೆಚ್ಚಿಸುತ್ತಿದೆ. ರಶಿಯಾ ಮತ್ತು ಜಪಾನ ದೇಶಗಳ ಮಹತ್ವಾಕಾಂಕ್ಷೆಯಿಂದಲೂ ಚೀನ ದೇಶದ ದೌರ್ಬಲ್ಯದಿಂದಲೂ ಏಶಿಯಾ ಖಂಡದಲ್ಲಿ ಎಂದು ಯುದ್ಧ ಪ್ರಾರಂಭವಾಗುವುದೋ ಎಂದು ಬೇರೆ ರಾಷ್ಟ್ರಗಳು ಎದುರು ನೋಡುತ್ತಿವೆ.

# ಮಹಮ್ಮದೀಯರು ಹಿಂದುಗಳಾಗುತ್ತಿದ್ದುದಕ್ಕೆ ಐತಿಹಾಸಿಕ ಆಧಾರ.

ಹಿಂದುಗಳು ಮುಸಲ್ಮಾನ್, ಕ್ರೈಸ್ತ ಮೊದಲಾದ ಬೇರೆ ಧರ್ಮಗಳಿಗೆ ಹೋಗಬಹುದೇ ವಿನಾ ಅನ್ಯ ಧರ್ಮದವರು ಹಿಂದು ಧರ್ಮದಲ್ಲಿ ಮಾತ್ರ ಬರಲಿಕ್ಕಾಗುವುದಿಲ್ಲವೆಂದು ಅನೇಕರು ತಿಳಿದುಕೊಂಡಿದ್ದಾರೆ. ಹಿಂದು ಧರ್ಮದಲ್ಲಿ ವೆಚ್ಚವೊಂದೇ ಇದೆಯೇ ವಿನಾ ಆದಾಯವಿಲ್ಲವೇ ಇಲ್ಲವೆಂದು ಇವರ ತಿಳುವಳಿಕೆ. ಮಾವು ಬೇವು ಮೊದಲಾದ ಬೇರೆಬೇರೆ ಜಾತಿಯ ಗಿಡಗಳು ಹೇಗಿರುತ್ತವೆಯೋ ಹಾಗೆಯೇ ಹಿಂದು, ಮುಸಲ್ಮಾನ್, ಧರ್ಮಗಳೆಲ್ಲಾ ಬೇರೆ ಬೇರೆ ಗಿಡಗಳಂತಿವೆಯೆಂದೇ ಇವರ ಭಾವನೆ.

ಆದಕಾರಣ ಮುಸಲ್ಮಾನ ಮೊದಲಾದ ಅನ್ಯ ಧರ್ಮದವರನ್ನು ಹಿಂದು ಧರ್ಮದಲ್ಲಿ ತೆಗೆದುಕೊಂಡರೆ ಅದು ಅಸಂಗತವಾಯಿತೆಂತಲೂ ಅಧರ್ಮ ಅನ್ಯಾಯಗಳೆಂತಲೂ ಹಿಂದೆಂದೂ ಹೀಗಾಗಿರಲಿಲ್ಲವೆಂತಲೂ ಇದು ಕಲಿಕಾಲವಾದುದರಿಂದ ಜಾತಿ ಸಂಕರವಾಯಿತೆಂತಲೂ ನಾನಾ ರೀತಿಗಳಿಂದ ಹೇಳುತ್ತ ತಮ್ಮ ಅಜ್ಞಾನವನ್ನು ಪ್ರಪಂಚಕ್ಕೆ ತೋರಿಸಿ ಆಪಹಾಸ್ಯಕ್ಕೀಡಾಗುತ್ತಿದ್ದಾರೆ. ಇಂತಹ ಅಜ್ಞರು ಪ್ರಾಚೀನ ಸಂಗತಿಗಳನ್ನು ನೋಡಲಿ. ಮುಸಲ್ಮಾನರನ್ನು ಹಿಂದು ಧರ್ಮದಲ್ಲಿ ತೆಗೆದುಕೊಂಡ ಐತಿಹಾಸಿಕ ಆಧಾರಗಳನ್ನು ಓದಲಿ. ಧಾರ್ಮಿಕ ಗ್ರಂಥಗಳ ಆಧಾರ ಬೇಕಾಗಿದ್ದರೂ ಇದೆ.

ಮುಸಲ್ಮಾನ್ ಧರ್ಮದ ಆಘಾತವು ಎಂಟನೆಯ ಶತಮಾನದಲ್ಲಿ ಸಿಂಧು ಪ್ರಾಂತದಲ್ಲುಂಟಾಗಲು ಅದರಿಂದ ಹಿಂದು ಧರ್ಮವನ್ನು ರಕ್ಷಿಸುವುದಕ್ಕಾಗಿ ದೇವಲ ಸ್ಮೃತಿ ಎಂಬ ಸ್ಮೃತಿ ಗ್ರಂಥವುಂಟಾಯಿತು. ಅದರಲ್ಲಿ ಅನ್ಯ ಧರ್ಮದವರನ್ನು ಹಿಂದು ಧರ್ಮದಲ್ಲಿ ತೆಗೆದುಕೊಳ್ಳಲು ತುಂಬಾ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾಯಿತು. ಸಿಂಧ ಪ್ರಾಂತದಲ್ಲಿ ಮುಸಲ್ಮಾನರಾಗಿದ್ದ ಹಿಂದುಗಳೆಲ್ಲಾ ಪುನಃ ಹಿಂದು ಧರ್ಮದಲ್ಲಿ ಸೇರಿದರೆಂದು ಮುಸಲ್ಮಾನ್ ಗ್ರಂಥಕಾರರೇ ಸ್ಪಷ್ಟವಾಗಿ ಬರೆದಿದ್ದಾರೆ.

"ತುಝುಕ್-ಇ-ಜಹಂಗಿರಿ" ಎಂಬ ಜಹಂಗೀರ ಬಾದಶಹನ ಆತ್ಮಚರಿತ್ರೆಯಲ್ಲಿ ಈ ಬಾದಶಹನ ಐದನೆಯ ವರುಷದ ಆಳ್ವಿಕೆಯಲ್ಲಿ ಕೌಕಬ್ ಎಂಬ ಹುಡುಗನ ಧರ್ಮಾಂತರದ ವಿಷಯವಿದೆ. ಈ ಕೌಕಬ್ ಎಂಬಾತನು ಒಬ್ಬ ಹಿಂದು ಯೋಗಿಯ ಶಿಷ್ಯನಾಗಿ ಆತನಲ್ಲಿ ಯೋಗ ವಿದ್ಯೆಯನ್ನು ಕಲಿತು ಅನಂತರ ತಾನೂ ತನ್ನ ಸಹೋದರನೂ ಹಿಂದು ಧರ್ಮವನ್ನು ಸ್ವೀಕರಿಸಲು ಕೆಲವು ದಿನಗಳ ನಂತರ ಈ ಸಂಗತಿಯು ಮುಸಲ್ಮಾನರಿಗೆ ಗೊತ್ತಾಗಿ ಅವರು ಬಾದಶಹನ ಕಡೆಗೆ ದೂರು ಹೇಳಲು ಬಾದಶಹನು ಅವರನ್ನು ಹಿಡಿಸಿ ಸೆರೆಮನೆಯಲ್ಲಿಟ್ಟನು. ಮತ್ತು ಒಬ್ಬಾತನಿಗೆ ತನ್ನ ಸಮಕ್ಷಮ ಫಟಕಿ ಹೊಡೆಯುವ ಶಿಕ್ಷೆಯನ್ನು ವಿಧಿಸಿದನು.

ಹೀಗೆ ಶಿಕ್ಷೆ ವಿಧಿಸಿದ ಕಾರಣವನ್ನು ಕೂಡಾ ಆ ಪುಸ್ತಕದಲ್ಲಿ ಬರೆದಿದೆ. "ಹೀಗೆ ಧರ್ಮಾಂತರ ಆಗಲು ಅವಕಾಶ ಕೊಟ್ಟರೆ ಎಲ್ಲ ಮುಸಲ್ಮಾನರೂ ಹಿಂದುಗಳಾಗಬಹುದು. ಅದಕ್ಕೆ ಅವಕಾಶವಾಗಬಾರದೆಂದೇ ಈ ಪ್ರಕಾರ ಭಯಪ್ರದವಾದ ಶಿಕ್ಷೆಯನ್ನು ವಿಧಿಸಿದ್ದಾಗಿದೆ."

ಶಹಾಜಹಾನ್ ಬಾದಶಹನ ಕಾಲದಲ್ಲಿ ದಬಿಸ್ತಾನ್-ಇ-ಮಜಹಿಬ್ ಎಂಬ ಗ್ರಂಥ ರಚನೆಯಾಗಿದೆ. ಈ ಪುಸ್ತಕವನ್ನು ಬರೆದಾತನು ಮುಸಲ್ಮಾನರು ಹಿಂದುಗಳಾಗುತ್ತಿದ್ದ ಅನೇಕ ಸಂಗತಿಗಳನ್ನು ಬರೆದಿದ್ದಾನೆ. ಅಕಬರ, ಜಹಾಂಗಿರ, ಶಹಾಜಹಾನ್ ಈ ಬಾದಶಹರ ಕಾಲದಲ್ಲಿ ನಡೆದ ಇಂಥ ಶುದ್ಧಿ ಸಂಗತಿಗಳನ್ನು ಆ ಗ್ರಂಥಕಾರನು ಎಷ್ಟೋ ಬರೆದಿದ್ದಾನೆ.

ಕ್ರಿ. ಶ. ೧೬೩೭ನೆಯ ಇಸವಿಯಲ್ಲಿ ಮರಣ ಹೊಂದಿದ ಛತ್ರಪಾಲ ಗೋಸಾವಿ ಎಂಬ ನಗರ ಬ್ರಾಹ್ಮಣನು ಬಹು ಪ್ರಸಿದ್ಧಿಯನ್ನು ಹೊಂದಿದ್ದನು. ಅನೇಕ ಮುಸಲ್ಮಾನರಿಗೆ ಸೂರ್ಯ ಸ್ತೋತ್ರ ಕಲಿಸಿದ್ದನು. ಕ್ರಿ. ಶ. ೧೬೪೫ರಲ್ಲಿದ್ದ ಕಲ್ಯಾಣಭಾರತಿ ಎಂಬ ಸನ್ಯಾಸಿಯು ಇರಾಣ ಮೊದಲಾದ ದೇಶಗಳಲ್ಲಿ ಸಂಚರಿಸಿ ಬಂದಿದ್ದನು. ಈತನು ಮುಸಲ್ಮಾನ ಧರ್ಮವನ್ನು ಆಗ ಸ್ವೀಕರಿಸಿದ್ದನು. ಅನಂತರ ಪುನಃ ಹಿಂದು ಧರ್ಮವನ್ನು ಸ್ವೀಕರಿಸಿದನು.

ಜಲಾಲಿ ಎಂಬ ಹೆಸರಿನ ಶಿಯಾ ಪಂಥದ ಮತ್ತು ಮದಾರಿ ಎಂಬ ಹೆಸರಿನ ಸುನ್ನೀ ಪಂಥದ ಅನೇಕ ಮುಸಲ್ಮಾನರು ಹಿಂದುಗಳಾದ ಸಂಗತಿಯು ಆ ಗ್ರಂಥದಲ್ಲಿದೆ. ಗೋವಧೆಯ ವಿಷಯದಲ್ಲಿ ಸನ್ಯಾಸಿಗಳಿಗೂ ಇವರಿಗೂ ಕಲಹವಾಗಿ ೭೦ ಮುಸಲ್ಮಾನರು ಕೊಲ್ಲಲ್ಪಟ್ಟ ನಂತರ ಅವರಿಗೆ ವಿಜಯ ಹೊಂದಿದ ಮುಸಲ್ಮಾನರ ಮುಕ್ಕಳನ್ನು ಹಿಡಿದು ಹಿಂದು ಧರ್ಮದಲ್ಲಿ ಸೇರಿಸಿಕೊಂಡರು.

ಮೊಗಲರು ಕ್ರಿ. ಶ. ೧೬೪೫ರಲ್ಲಿ ಕಿರಾತಪುರವನ್ನು ಗೆದ್ದುಕೊಂಡರು. ಆ ಮುಂಚೆ ಅಲ್ಲಿದ್ದ ಮುಸಲ್ಮಾನರೆಲ್ಲಾ ಹಿಂದುಗಳಾಗಿದ್ದರು. ಮೊಗಲರ ವಿಜಯದ ನಂತರ ಪುನಃ ಮುಸಲ್ಮಾನರ ಸಂಖ್ಯೆ ಹೆಚ್ಚಿತು. ಈ ಎಲ್ಲಾ ಸಂಗತಿಗಳಿಂದ ಅನೇಕ ದೂರದರ್ಶಿಗಳೂ ಹಿಂದು ಧರ್ಮಜ್ಞರೂ ಮುಸಲ್ಮಾನರನ್ನು ಹಿಂದು ಧರ್ಮದಲ್ಲಿ ಮೊದಲಿನಿಂದಲೂ ತೆಗೆದುಕೊಳ್ಳುತ್ತ ಬಂದಿದ್ದಾರೆಂದು ಸ್ಪಷ್ಟವಾಗುವದಿಲ್ಲವೆ? ಮುಸಲ್ಮಾನರ ರಾಜ್ಯಸ್ಥಾಪನೆಯಾದುದರಿಂದ ಅವರ ಧರ್ಮವೇ ಪ್ರಸಾರವಾಗಲವಕಾಶವಾಯಿತು, ಮತ್ತು ಹಿಂದು ಧರ್ಮದ ಗುರುಗಳು ತನ್ನ ಅಧೋಗತಿಯ ಜ್ಞಾನವಿಲ್ಲದೆ ಶುದ್ಧಿ ಚಟುವಟಿಕೆಯನ್ನು ಪ್ರಾರಂಭಿಸಲಿಲ್ಲ. ಇಷ್ಟೇ ಅಲ್ಲ. ಪರಧರ್ಮದವರನ್ನು ಹಿಂದು ಧರ್ಮದಲ್ಲಿ ತೆಗೆದುಕೊಳ್ಳುವುದು ಅಧರ್ಮವೆಂದು ತಿಳಿದರು. ಈ ಅಜ್ಞಾನದಿಂದಲೇ ಈಗ ಹಿಂದು ಧರ್ಮಕ್ಕೆ ಶೋಚನೀಯ ಸ್ಥಿತಿ ಬಂದಿದೆ. ಈಗಲಾದರೂ ಇವರ ಅಜ್ಞಾನ ದೂರಾಗುವುದೇ?

---

—ಕೊಲ್ಹಾಪುರದಲ್ಲಿ ಕೇಸಕರ ಮಹಾರಾಜರು ಮಿಸ್ ಆ್ಯಡಲೆ ಅಲ್ಮಾ ಸ್ಯಾಕ್ವಿಲಂಡ ಎಂಬ ಸ್ವಿಸ್ ಯುವತಿಗೆ ಹಿಂದು ಧರ್ಮ ದೀಕ್ಷೆ ಕೊಟ್ಟು ಸುಮತೀದೇವಿ ಎಂದು ಹೆಸರಿಟ್ಟರು.

—ಅಕೋಲಾ ಹಿಂದು ಮಹಾಸಭೆಯ ಪರವಾಗಿ ಮುಸಲ್ಮಾನರಾದಂಥ ರಂಗೂತಾಯಿ ಮತ್ತು ಫೋಟೂಬಾಯಿ ಎಂಬವರನ್ನು ಶುದ್ಧಮಾಡಿ ಹಿಂದು ಧರ್ಮದಲ್ಲಿ ತೆಗೆದುಕೊಳ್ಳಲಾಯಿತು. ಫೋಟೂಬಾಯಿಯು ೨೦ ವರ್ಷಗಳ ಹಿಂದೆ ಮುಸಲ್ಮಾನಳಾಗಿದ್ದಳಂತೆ.

# ಪ್ಲೇಗ್ ಸಂಜೀವಿನಿಯ' ಗುಣವರ್ಣನೆ.

[ಚಿಟಗುಪ್ಪಿಯ ಸುಪ್ರಸಿದ್ಧ ಡಾಕ್ಟರರಾದ ಶ್ರೀ. ಎನ್. ಬಿ. ಶಾಲಿಗ್ರಾಮ ಎಂ. ಬಿ. ಬಿ. ಎಸ್ ಇವರು ನಮ್ಮ 'ಪ್ಲೇಗ್ ಸಂಜೀವಿನಿಯ' ಮಾತ್ರೆಗಳನ್ನು ಉಪಯೋಗಿಸಿ ಸಂತೋಷಪಟ್ಟು ಈ ಕೆಳಗಿನಂತೆ ಪತ್ರ ಬರೆದಿದ್ದಾರೆ.]

ಡಾ. ಎನ್. ಬಿ. ಶಾಲಿಗ್ರಾಮ,
ಎಂ ಬಿ. ಬಿ. ಎಸ್. (ಮುಂಬೈ)

ಚಿಟಗುಪ್ಪಾ (ಮೊಯಿನಾಬಾದ)
ತಾ. ೧೭-೨-೧೯೩೪.

ಶ್ರೀಮನ್ನಿರಂಜನ ಗುರುಮಹಕಲ್ಲ ಶ್ರೀ ಶಾಂತವೀರ ಸ್ವಾಮಿಗಳವರಿಂದ
ಸಿದ್ಧಗೊಳಿಸಲ್ಪಟ್ಟ

## "ಪ್ಲೇಗ್ ಸಂಜೀವಿನಿ ಮಾತ್ರೆಯು"

ಒಳ್ಳೇ ತೃಪ್ತಿಕರವಾದ ಗುಣಕಾರಿಯಾಗಿರುವದೆಂಬುದನ್ನು ತಿಳುಹಿಸಲು ನನಗೆ ಅತ್ಯಾನಂದವೆನಿಸುತ್ತಿದೆ.

ಪ್ಲೇಗ ಹಾವಳಿಯ ಕಾಲದಲ್ಲಿ ಚಿಟಗುಪ್ಪಿಯ ಮಿ. ಹುಪ್ರಿಕರ, ವಾಯ್, ಜಿ. ಇವರು ಇದನ್ನು ನನ್ನ ಕಡೆಗೆ ಕಳುಹಿಸಿದ್ದರು. ನಾನು ಇದನ್ನೇ ಅನೇಕ ಕಡೆಗಳಲ್ಲಿ ಉಪಯೋಗಿಸಿ, ಇದು ಪ್ಲೇಗ ಉಂಟಾಗುವುದನ್ನು ಪ್ರತಿಬಂಧಿಸುವದಲ್ಲದೆ ಬಹ್ವಂಶನಾಗಿ ಪ್ಲೇಗ ಬೇನೆ ಬಂದ ಮೇಲೆಯೂ ಗುಣಪಡಿಸಬಲ್ಲುದೆಂದು ಕಂಡುಕೊಂಡಿದ್ದೇನೆ. ಇದನ್ನೇ ಉಪಯೋಗಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸೂಚಿಸುತ್ತೇನೆ. ಮತ್ತು ಇದರ ಜೊತೆಗೆ ಕಳುಹಿಸಲ್ಪಡುವ ಸೂಚನೆಗಳ ಪ್ರಕಾರ ಇದನ್ನು ಉಪಯೋಗಿಸಿದರೆ ಇದು ಸಂಪೂರ್ಣವಾಗಿ ಗುಣಪಡಿಸುವದೆಂದು ನಾನು ನಿಶ್ಚಯವಾಗಿ ಹೇಳುತ್ತೇನೆ.

(ರುಜು) ಎನ್. ಬಿ. ಶಾಲಿಗ್ರಾಮ,
ಎಮ್. ಬಿ. ಬಿ ಎಸ್.
ಪ್ಲೇಗಿನ ಮುಖ್ಯಾಧಿಕಾರಿ, ಮೋಯಿನಾಬಾದ
(ಪಾಯಿಗಾ)

(ಮೂಲ ಪ್ರತಿಯ ಭಾಷಾಂತರ.)

---

DR. N. B. SHALIGRAM,
M. B. B. S. (BOM.)

CHITAGOPA (Moinabad)
D. 17th February 1934.

IT GIVES ME IMMENSE PLEASURE TO STATE HERE THAT THE RESULTS OF

## *"PLAGUE SANJIWINI MATRA"*

MANUFACTURED BY

## SHANTWIR SWAMI OF GURUMATKAL

ARE QUITE SATISFACTORY.

This was sent to me by Mr. Huprikar Y. G. of Chitagopa, during the plague epidemic. I have used the same in many cases and found preventive as well as curative to a great extent. I strongly recommend to use the same, which, I assure will give complete relief, if it is used according to the instructions accompanying it.

Sd/- N. B. SHALIGRAM.
M. B. B. S. (BOM.)
Special Plague Officer, Moinabad.
(Paigah.)

(True copy.)

# ಮೈಸೂರಿನಲ್ಲಿ ಚಟುವಟಿಕೆ.

ವೀರಶೈವ ಮತದಲ್ಲಿ ಇತ್ತೀಚೆಗೆ ಗುರುವರ್ಗದವರಿಗೂ, ವಿರಕ್ತ ವರ್ಗದವರಿಗೂ ಉಂಟಾಗಿರುವ ಪರಸ್ಪರ ವೈಷಮ್ಯದಿಂದಲೂ, ಸರ್ವರಿಂದಲೂ ಪೂಜ್ಯರೆಂದು ಗಣಿಸಲ್ಪಟ್ಟಿರುವ ಬಸವಾದಿ ಪ್ರಮಥರನ್ನು ನಿಂದಿಸುವ ಚಳವಳಿಗೆ ಶ್ರೀಮದ್ರಂಭಾಪುರಿ ಸಿಂಹಾಸನಾಧೀಶ್ವರರಿಂದ ಪ್ರೋತ್ಸಾಹ ದೊರೆಯುತ್ತಿರುತ್ತದೆಂಬ ಶಿಷ್ಯ ವರ್ಗದಲ್ಲುಂಟಾಗಿರುವ ಶಂಕೆಯನ್ನು ಹೋಗಲಾಡಿಸಲು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಶ್ರೀಮದ್ರಂಭಾಪುರಿಯವರಲ್ಲಿ ಶಿಷ್ಯವರ್ಗದಲ್ಲಿ ಅನೇಕರು ಅನೇಕ ವಿಧದಿಂದ ಬಿನ್ನೈಸಿಕೊಂಡಾಗ್ಯೂ ತತ್ಸಂಬಂಧದಲ್ಲಿ ಶ್ರೀಮದ್ರಂಭಾಪುರಿಯವರು ತಾತ್ಸಾರ ಭಾವವನ್ನು ತೋರ್ಪಡಿಸುತ್ತಿರುವುದರಿಂದಲೂ, ಶ್ರೀ ಬಸವೇಶ್ವರನನ್ನು ಶ್ರೀ ಮಹಾಸ್ವಾಮಿಗಳವರು ತಮಗೂ ಪೂಜಾರ್ಹನೆಂದು ಒಪ್ಪಲು ಅಸಮ್ಮತಿಸಿರುವುದರಿಂದಲೂ ಶ್ರೀ ಮಹಾಸ್ವಾಮಿಗಳವರನ್ನು ರಾಜಧಾನಿಯಾದ ಮೈಸೂರಿಗೆ ಬಿಜಯಂಗೈಸಿಕೊಂಡು ಏಕಮತ್ಯದಿಂದ ಸತ್ಕರಿಸುವ ವಿಚಾರದಲ್ಲಿ ರಾಜಧಾನಿಯ ವೀರಶೈವರಲ್ಲಿ ಭಿನ್ನಾಭಿಪ್ರಾಯವು ಸ್ಪಷ್ಟವಾಗಿ ವ್ಯಕ್ತಪಟ್ಟ ಕಾರಣ ವೀರಶೈವರಲ್ಲಿ ಏಕಮತ್ಯವನ್ನೇ ಲಕ್ಷ್ಯವಾಗಿಟ್ಟುಕೊಂಡು ಅನೈಕ್ಯತೆಗೆ ದಾರಿಕೊಡಬಾರದೆಂಬ ಸದುದ್ದೇಶದಿಂದ ರಿಟೈರ್ಡ್ ಜೈಲ್ ಸೂಪರೆಂಟ್. ಆರ್. ಮಲ್ಲಿಕಾರ್ಜುನಪ್ಪನವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಸಮಸ್ತ ವೀರಶೈವರಿಗೂ ಆಹ್ವಾನ ಕೊಟ್ಟು ತಾ. ೩೧-೭-೧೯೩೪ ಮಂಗಳವಾರ ಸಾಯಂಕಾಲ ಒಂದು ಸಭೆಯು ಸೇರಿ ಮೈಸೂರು ಡಿಸ್ಟ್ರಿಕ್ಟಿನ ಸಮಸ್ತ ವೀರಶೈವರಿಗೂ ಆಹ್ವಾನ ಕೊಟ್ಟು ಮೈಸೂರು ಡಿಸ್ಟ್ರಿಕ್ಟಿನ ವೀರಶೈವ ಮಹಾಸಭೆಯನ್ನು ಜರುಗಿಸಬೇಕೆಂತಲೂ ಆ ಸನ್ಮೇಳನದಲ್ಲಿ ಈ ವಿಷಯಗಳನ್ನೆಲ್ಲಾ ಕೂಲಂಕುಶವಾಗಿ ನಿಷ್ಪಕ್ಷಪಾತದಿಂದ ಚರ್ಚಿಸಬೇಕೆಂತಲೂ, ಆ ಸಭೆಯವರ ತೀರ್ಮಾನಕ್ಕೆ ರಾಜಧಾನಿಯ ವೀರಶೈವರು ಬದ್ಧರಾಗಿ ನಡೆದುಕೊಳ್ಳತಕ್ಕದೆಂತಲೂ, ಈ ಸಭೆಯು ಇದೇ ಆಗಸ್ಟ್ ತಿಂಗಳಲ್ಲಿ ಆದಷ್ಟು ಜಾಗ್ರತೆಯಾಗಿ ಜರುಗಿಸಲ್ಪಡಿಸತಕ್ಕದೆಂತಲೂ ಸರ್ವಾನುಮತದಿಂದ ತೀರ್ಮಾನವಾಯಿತು.

ತತ್ಕಾರ್ಯವನ್ನು ಆದಷ್ಟು ಜಾಗ್ರತೆಯಿಂದ ಜರುಗಿಸುವದಕ್ಕಾಗಿ ಅದೇ ಮಿಟಿಂಗಿನಲ್ಲಿ ಸ್ವಾಗತ ಸಭೆಯ ವ್ಯವಸ್ಥಾಪಕರನ್ನು ಈ ಕೆಳಗೆ ಕಂಡಂತೆ ರಚಿಸಲಾಯಿತು. ಸ್ವಾಗತ ಸಭೆಯ ಸದಸ್ಯರು ಈಗಾಗಲೇ ಅತ್ಯುತ್ಸಾಹದಿಂದ ಕೆಲಸಮಾಡಲು ಪ್ರಾರಂಭಿಸಿರುತ್ತಾರೆ.

ಸ್ವಾಗತ ಸಭೆಯ ಅಧ್ಯಕ್ಷರು,

ಮು|| ರಾ|| ಆರ್. ಮಲ್ಲಿಕಾರ್ಜುನಪ್ಪ,
ರಿಟೈರ್ಡ್ ಜೈಲ್ ಸುಪರಿಂಟೆಂಡೆಂಟ್.

ಉಪಾಧ್ಯಕ್ಷರು,

೧. ಕುಂಬನೇರಳೆ ಸಾಹುಕಾರ್ ಟಿ. ಎಸ್. ಮಾದಪ್ಪನವರು,
ಮೆಂಬರ್- ಆರ್. ಎ.

೨. ಕಬ್ಬಳ್ಳಿ ಸಾಹುಕಾರ್ ಕೆ. ಸಿ. ಸುಬ್ಬಣ್ಣನವರು,
ಮೆಂಬರ್- ಆರ್. ಎ. ಡಿಸ್ಟ್ರಿಕ್ಟ್ ಬೋರ್ಡು
ಮತ್ತು ಡಿ. ಸ್ಕೂಲ್ ಬೋರ್ಡು.

೩. ನಗರಲೆ ಸಾಹುಕಾರ್ ಸಿದ್ಧಪ್ಪನವರು,
ಮೆಂಬರ್- ಆರ್. ಎ. ಮತ್ತು ಡಿ. ಬೋರ್ಡು,

೪. ಎಡತೊರೆ ಸಾಹುಕಾರ್ ಬಳೆ ಭದ್ರಶೆಟ್ಟರು.

೫. ವೈ ವಿರೂಪಾಕ್ಷಯ್ಯನವರು.

ಕಾರ್ಯದರ್ಶಿಗಳು.

೧. ಬಿ. ಎಸ್. ಪುಟ್ಟಸ್ವಾಮಿ, ಬಿ. ಎ. ಬಿ. ಎಲ್. ಎಂ. ಎಲ್. ಸಿ.
ಮತ್ತು ಮೈಸೂರು ಯುನಿವರ್ಸಿಟಿಯ ಸಿನೆಟ್ ಮೆಂಬರು
ಮತ್ತು ಡಿ. ಬೋರ್ಡು ಪ್ರೆಸಿಡೆಂಟ್.

೨. ಎಂ. ಎಸ್. ಚನ್ನಬಸಪ್ಪನವರು ಮರ್ಚಂಟ್.

೩. ಮು|| ರಾ|| ತಿಮ್ಮಪ್ಪಯ್ಯನವರು ರಿ|| ಪೋಲೀಸ್ ಇನಸ್ಪೆಕ್ಟರ್,
ಎಗ್ಸಿಕ್ಯೂಟಿವ್ವ ಮೆಂಬರುಗಳು.

೧. ಮು|| ರಾ|| ಎಂ. ಪಿ. ಚನ್ನಪ್ಪನವರು.
೨. ,, ,, ಪುಟ್ಟಬಸಪ್ಪನವರು.
೩ ,, ,, ವೀರಭದ್ರಪ್ಪನವರು.
೪. ,, ,, ನಂ|| ಬಸಪ್ಪನವರು.
೫. ,, ,, ಗೌಡರು ಸಿದ್ಧಪ್ಪನವರು.
೬. ,, ,, ಮಹದೇವಪ್ಪನವರು ಕಲ್ಯಾಣಿ.
೭. ,, ,, ಟಿ. ಮಲ್ಲಪ್ಪನವರು.
೮. ,, ,, ದ. ಮಾದಪ್ಪನವರು.
೯. ,, ,, ರೇವಣ್ಣನವರು.
೧೦. ,, ,, ಎಂ. ಎಸ್. ಮಾದಪ್ಪನವರು.
೧೧. ,, ,, ಭಕ್ಷಿ ಸೋಮಶೇಖರಯ್ಯನವರು.
೧೨. ,, ,, ಗುರುಕಾರ್ ಬಸವಲಿಂಗಪ್ಪನವರು.
೧೩. ,, ,, ನೆಲಮಂಗಲದ ಬಸಪ್ಪನವರು.
೧೪. ,, ,, ಎನ್. ಭರಮಯ್ಯನವರು.
೧೫. ,, ,, ಕಾಳ ಲಿಂಗಪ್ಪನವರು.
೧೬. ,, ,, ನಂಜುಂಡಪ್ಪ ಅಂಡ್ ಸನ್ಸ್.

B. S. Puttaswamy.

---

## ಹುಲಿಯು ಮಾಯವಾಯಿತು.

ಜರ್ಮನಿಯ ಅಧ್ಯಕ್ಷರಾದ ವ್ಹಾನ್ ಹಿಂಡೆನ್ ಬರ್ಗರವರು ೨ನೆಯ ತಾರೀಖಿಗೆ ನಿಧನ ಹೊಂದಿದರು. ಮಹಾಯುದ್ಧದಲ್ಲಿ ಜರ್ಮನಿಯ ಸೇನಾಪತಿಗಳಾದ ಇವರು ೨೦ ವರುಷಗಳ ಹಿಂದೆ ತಾವು ಮಹಾಯುದ್ಧವನ್ನು ಪ್ರಾರಂಭಿಸಿದ ತಾರೀಖಿಗೇನೇ ಸರಿಯಾಗಿ ಮೃತ ಪಟ್ಟದ್ದು ಆಶ್ಚರ್ಯಕರವಾಗಿದೆ. ತಮ್ಮ ತಂದೆಯಂತೆಯೇ ಇವರಿಗೂ ಸಾಯುವಾಗ್ಗೆ ೮೬ ವರುಷ ೯ ತಿಂಗಳ ವಯಸ್ಸಾಗಿದ್ದಿತು.

ಇವರು ತಮ್ಮ ೧೭ನೆಯ ವರುಷದಲ್ಲಿ ಸೈನ್ಯ ಖಾತೆಯಲ್ಲಿ ಸೇರಿದರು, ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತ ಮಹಾಯುದ್ಧದ ಕಾಲಕ್ಕೆ ಪೂರ್ವಭಾಗದ ಸೈನ್ಯಾಧಿಪತಿಗಳಾದರು. ೧೯೨೫ನೆಯ ಇಸವಿಯಲ್ಲಿ ಇವರಿಗೆ ೬ ಲಕ್ಷ ಮತಗಳು ಹೆಚ್ಚಿಗೆ ಬಿದ್ದು ಜರ್ಮನಿಯ ಅಧ್ಯಕ್ಷರಾದರು. ಇವರ ನಿಧನದಿಂದ ಜರ್ಮನಿಯೆಲ್ಲ ಶೋಕಿಸುತ್ತಲಿದೆ. ಹಿಂದಿನ ಕೈಸರ್ ಬಾದಶಹನು ದುಃಖಸೂಚಕ ಸಂದೇಶವನ್ನು ಕಳುಹಿಸಿರುವನು. ಇವರ ಸ್ಥಾನವನ್ನು ಹೇರ ಹಿಟ್ಲರರು ಸ್ವೀಕರಿಸುವರು. ಮೃತರ ಶಾಂತ್ಯರ್ಥವಾಗಿ ಪ್ರಾರ್ಥನೆಯೂ ಒಂದು ನಿಮಿಷದ ಮೌನವೂ ಆಚರಿಸಲ್ಪಟ್ಟವು





ಶಾ. ಶ. ೧೮೫೬ ನೆಯ ಆಷಾಢ ಬ|| ೧೩ ಸೋಮವಾರ.

## ಕಳೆದ ಮೂರು ವರುಷ.

ಈ ಶರಣಸಂದೇಶವು ಪ್ರಕಟವಾಗಿ ಇಂದಿಗೆ ಮೂರು ವರ್ಷ ಗಳಾದವು. ಈ ಕಳೆದ ಮೂರು ವರುಷಗಳಲ್ಲಿ ಇದು ತನ್ನ ಉದ್ದೇಶ ದಂತೆ ಧಾರ್ಮಿಕ ಮತ್ತು ಸಾಮಾಜಿಕ ಜಾಗೃತಿಗಳನ್ನು ಅಕ್ಕಲ್ಪ ಪ್ರಮಾಣದಲ್ಲಾದರೂ ತಾಡಿತೆಂದು ಧಾರಾಳವಾಗಿ ಹೇಳಬಹುದು.

ವೀರಶೈವ ಮತಸಂಬಂಧವಾದ ಸತ್ಯ ಸಿದ್ಧಾಂತಗಳ ಪ್ರಸಾರವೇ ಇದರ ಧಾರ್ಮಿಕ ಜಾಗೃತಿಯಲ್ಲಿ ಮುಖ್ಯವಾಗಿದ್ದಿತಷ್ಟೆ. ಮುಂದಣ ವರುಷದಿಂದ ಇದೇ ವಿಷಯವನ್ನು ವಿಸ್ತಾರಗೊಳಿಸಿ ಹಿಂದು ಧರ್ಮದ ಸಂಬಂಧವಾಗಿ ವಿಶೇಷ ವಿವೇಚಿಸಲಾಗುವುದು.

ಶ್ರುತಿ, ಸ್ಮೃತಿ, ಪುರಾಣಗಳ ಸಂಬಂಧವಾಗಿ ಜನಸಾಮಾನ್ಯ ರಲ್ಲಿರುವ ತಪ್ಪು ತಿಳುವಳಿಕೆಗಳನ್ನು ದೂರಮಾಡಲು ಐತಿಹಾಸಿಕ ಮತ್ತು ತುಲನಾತ್ಮಕ ದೃಷ್ಟಿಯಿಂದ ವಿಮರ್ಶಿಸಿದ ಲೇಖನಗಳನ್ನು ಪ್ರಕಟಗೊಳಿಸುವೆವು.

ಧಾರ್ಮಿಕ ವಿಷಯದಲ್ಲಿರುವ ಮೂಢ ಕಲ್ಪನೆ ಮತ್ತು ಅಂಧ ಶ್ರದ್ಧೆಗಳು ಹಿಂದು ಜನಾಂಗದ ಅಧೋಗತಿಗೂ, ಹಿಂದುಸ್ಥಾನದ ದುರವಸ್ಥೆಗೂ ಬಲವಾದ ಕಾರಣಗಳಾಗಿರುವುದರಿಂದ ಇವುಗಳನ್ನು ತೆಗೆದುಹಾಕಲು ಪ್ರಯತ್ನಿಸುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿದೆ.

ಶ್ರೀ ಬಸವಾದಿ ಪ್ರಮಥರು ಮಾಡಿದ ಸಾಮಾಜಿಕ ಸುಧಾರಣೆಗಳನ್ನೇ ಕಳೆದ ಮೂರು ವರುಷ ವಿಶೇಷವಾಗಿ ಪ್ರಸ್ತಾಪಿಸಿದ್ದಾಗಿದೆಯಷ್ಟೆ. ಇವರ ಆಗಿನ ಸುಧಾರಣೆಗಳು ಈಗಲು ಕೂಡಾ ಸುಜ್ಞರಿಂದ ಶ್ಲಾಘಿಸಲ್ಪಡತಕ್ಕವುಗಳಾಗಿರುವುದರಿಂದ ಅವುಗಳನ್ನೇ ಹೆಚ್ಚಾಗಿ ವಿವೇಚಿಸುವುದು ಹಿಂದು ಸಮಾಜ ಸುಧಾರಣೆಗು ಕೂಡಾ ಪೋಷಕವಾದುದೆಂದೇ ಹೇಳಲು ಅಡ್ಡಿಯಿಲ್ಲ.

ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿರುವ ಸಂಕುಚಿತವಾದ ಮೆಲಿನ ವಿಚಾರಗಳು ಲೋಪವಾದ ವಿನಾ ಹಿಂದುಸ್ಥಾನದ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳಿಗೆ ನಿಜವಾದ ಬಲವು ಪ್ರಾಪ್ತವಾಗುವುದಿಲ್ಲ. ಆದಕಾರಣ ಈ ಪತ್ರಿಕೆಯು ತನ್ನ ಉದ್ದೇಶದಂತೆ ಜನಸೇವೆಗೆ ಮುಂದಡಿಯಿಡುತ್ತಾ ಹೋಗಲು ಪರಮಾತ್ಮನು ಇದಕ್ಕೆ ಶಕ್ತಿಯನ್ನು ದಯಪಾಲಿಸಲೆಂತಲೂ ವಾಚಕ ಮಹಾಶಯರು ಇತೋಪ್ಯತಿಶಯವಾದ ಸಹಾಯದಿಂದ ಈ ಸೇವೆಯನ್ನು ಹೊಂದಲೆಂತಲೂ ಹಾರೈಸುತ್ತೇವೆ.

## ವಿರಕ್ತರು ಪಟ್ಟಾಧಿಕಾರಿಗಳಿಂದಲೂ ನಮಸ್ಕೃತರು.

( ೧೧ ನೆಯ ಪುಟದಿಂದ ಬಂದುದು. )

ಯಿಂದ ಸರ್ವರೂ ಕುತ್ಸಿತಬುದ್ಧಿಯನ್ನೂ, ಭಿನ್ನಭಾವಗಳನ್ನೂ, ರಾಗಾಸೂಯೆಗಳನ್ನೂ ವರ್ಜಿಸಿ, ಜಗದೀಶ್ವರನ ಆರಾಧನೆಯಲ್ಲಿಯೇ ನಿರತರಾಗುತ್ತಾ ಐಕಮತ್ಯದಿಂದ ನಡೆದುಕೊಳ್ಳಲು ಅವಕಾಶವನ್ನುಂಟುಮಾಡಿದರು. ಪೂರ್ವದಲ್ಲಿ ಜಾತಿದ್ವೇಷ, ಮತದ್ವೇಷಗಳು ಮೂರ್ತಿಮತ್ತಾಗಿ, ಆಯಾ ಜಾತಿಯವರೂ ಮತಸ್ಥರೂ ತಮ್ಮ ಜಾತಿಯೇ ಶ್ರೇಷ್ಠವೆಂಬದಾಗಿಯೂ ತಮ್ಮ ಮತವೇ ಅತ್ಯುತ್ತಮವಾದುದೆಂಬದಾಗಿಯೂ, ತಮಗೊಬ್ಬರಿಗೇನೇ ಜಗದೀಶ್ವರನ ಸಾನ್ನಿಧ್ಯವು ಲಭ್ಯವಾಗುವುದೆಂಬದಾಗಿಯೂ, ಇತರ ಮತಾವಲಂಬಿಗಳೆಲ್ಲರೂ, ಕೇವಲ ನಿಕೃಷ್ಟರೆಂಬದಾಗಿಯೂ, ಬಾಹಿರರೆಂಬದಾಗಿಯೂ, ಸಂಪರ್ಕಾನರ್ಹರೆಂಬದಾಗಿಯೂ, ದುರ್ವಾದಗಳನ್ನು ಮಾಡುತ್ತಿದ್ದ ಆ ದುಷ್ಕಾಲದಲ್ಲಿ ಶ್ರೀ ಬಸವೇಶ್ವರ ಸ್ವಾಮಿಗಳವರು ಜಗದೀಶ್ವರನು ಒಬ್ಬನೇ ಎಂಬದಾಗಿಯೂ ಯಾವ ಯಾವ ಮಾರ್ಗದಲ್ಲಿ ದೇವರನ್ನು ಆರಾಧಿಸಿದರೂ ಅದು ಜಗದೀಶ್ವರನಿಗೇನೇ ಅರ್ಪಿತವಾಗುವುದೆಂಬದಾಗಿಯೂ, ಬೋಧಿಸುತ್ತಾ ಬಂದರೆಂಬುದನ್ನು ಹೇಳಿದರೆ ಈಗಿನ ಕಾಲದ ಅಧುನಿಕರಾದ ನೂತನ ಭರತಖಂಡವಾಸಿಗಳಾದ ನಮ್ಮಗಳೆಲ್ಲರಿಗೂ ಆತ್ಯಾಶ್ಚರ್ಯಕರವಾಗಿಯೇ ತೋರುವುದು. ಭಗವಂತನು ಹೇಗೆ ಗೌತಮ ಬೌದ್ಧಾವತಾರವನ್ನೆತ್ತಿ ಪ್ರಪಂಚವನ್ನುದ್ಧರಿಸಿದನೋ ಅದರಂತೆಯೇ ಶ್ರೀ ಬಸವೇಶ್ವರ ಸ್ವಾಮಿಗಳವರು ಪಾಷಂಡಿ ಮತಗಳನ್ನೆಲ್ಲಾ ಖಂಡಿಸಿ ಸುಲಭೋಪಾಯದಿಂದಲೇ ಸರ್ವರಿಗೂ ಸಾಕ್ಷಾತ್ಕಾರವು ಲಭ್ಯವಾಗುವ ಸದುಪಾಯಗಳನ್ನೆಲ್ಲಾ ಕಲ್ಪಿಸಿ ಪ್ರಪಂಚವನ್ನುದ್ಧಾರ ಮಾಡಿದರು.

### ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ.

"ಈಚೆಗೆ ನಾಲ್ಕು ಸಂವತ್ಸರಗಳಿಂದ ಮಾನಸಿಕವಾಗಿದ್ದ ಈ ಮಹಾಸಭೆಯು ಈ ಸಲ ನಮ್ಮ ವೀರಶೈವ ಮತದ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳವರ ಪೋಷ್ಯವರ್ಗದಲ್ಲಿ ಪುನರುದ್ಧಾರಣೆಯಾದುದು ಈ ಮಹಾಸಭೆಯು ಚಿರಸ್ಥಾಯಿಯಾಗಿರುವುದೆಂಬುದಕ್ಕೆ ಶುಭಸೂಚನೆಯಾಗಿರುವುದು. ಶ್ರೀ ಜಗದ್ಗುರುಗಳವರ ಪರಿಣತ ಪಾಂಡಿತ್ಯವೂ, ಅನನ್ಯ ಸಾಧಾರಣವಾದ ದೈವ ಭಕ್ತಿಯೂ, ಪರಮಪವಿತ್ರವಾಗಿಯೂ, ನಿಷ್ಕಳಂಕವಾಗಿಯೂ ಇರುವ ಶೀಲ ಸ್ವಭಾವವೂ ಮತ್ತು ಶ್ರೀ ಸ್ವಾಮಿಗಳವರಿಗೆ ತಮ್ಮ ಮತಕ್ಕೆ ಸೇರಿರುವವರ ಅಭ್ಯುದಯ ಪುರೋನ್ನದ್ಧಿಗಳಲ್ಲಿ ಇರತಕ್ಕ ಅಸದೃಶವಾದ ಆಶಯವೂ ಶ್ರೀ ಜಗದ್ಗುರುಗಳವರ ಹೆಸರು ಅಜರಾಮರವಾಗಿ ಸ್ಥಾಯಿಯಾಗಿರುವಂತೆ ಮಾಡತಕ್ಕವುಗಳಾಗಿರುತ್ತವೆ. ಇಂಥಾ ಅಸಮಾನೋದಾರ್ಯ ಪರೋಪಕಾರ ಕಾರ್ಯಗಳಿಗಾಗಿ ನಾವು ಶ್ರೀ ಸ್ವಾಮಿಗಳವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ." ಎಂದು ಮೇಲ್ಕಂಡ ಸಭಾಧ್ಯಕ್ಷತೆಯ ಭಾಷಣದಲ್ಲಿ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಅಪ್ಪಣೆ ಕೊಡಿಸಿರುವರು.

ಮೈಸೂರು, ತಾ|| ೨೬-೭-೧೯೩೪. } ವೀರಭದ್ರಪ್ಪ, C/o ಸಂಜುಂಡಪ್ಪ ಅಂಡ್ ಸನ್ಸ್.

## ವ್ಯಾಪಾರಸ್ಥರಿಗೆ ನಿತ್ಯವೂ ಉಪಯೋಗ ಬೀಳುವ

# ರೇಲ್ವೆ ಸಂಬಂಧದ ಮಾಹಿತಿಯು.

(ಕರ್ನಾಟಕ ಚೇಂಬರ ಆಫ್ ಕಾಮರ್ಸದ ಗೌರವ ಕಾರ್ಯದರ್ಶಿಗಳಿಂದ)

**ಓದಿರಿ! ವ್ಯಾಪಾರಸ್ಥರಲ್ಲಿ ಹಂಚಿರಿ!! ಮತ್ತು ಹೆಚ್ಚಿಗೆ ಬೇಕಾದರೆ ತರಿಸಿಕೊಳ್ಳಿರಿ.**

--( ಕಳೆದ ಸಂಚಿಕೆಯಿಂದ ನುಂದುನರಿದುದು )—

**ನಂ. ೮. ಸರಪಳಿಯನ್ನು ಎಳೆಯಿರಿ; ಗದ್ದಲವನ್ನು ಕಳೆಯಿರಿ.**

ಹಿಂದುಸ್ಥಾನದೊಳಗಿನ ರೇಲ್ವೆಗಳಿಗೆ ಪ್ರಯಾಣಿಕರಿಂದಾಗುವ ಉತ್ಪನ್ನದಲ್ಲಿ ೧ನೇ ವರ್ಗದ ಪ್ರಯಾಣಿಕರಿಂದ ಪ್ರತ್ಯಕ್ಷ ಲುಕ್ಸಾನವೇ ತಟ್ಟುತ್ತದೆ. ೨ನೇ ವರ್ಗದವರಿಂದ ಕೆಲವು ಸಾರೆ ಲುಕ್ಸಾನವೂ ಕೆಲವು ಸಾರೆ ಕಟಾನುಕಟೆ ಲಾಭವೂ ಆಗುತ್ತದೆ. ಮತ್ತು ೩ನೇ ವರ್ಗದ ಪ್ರಯಾಣಿಕರಿಂದ ಯಾವಾಗಲೂ ದೊಡ್ಡ ಲಾಭವೇ ಆಗುತ್ತದೆ. ವಾಸ್ತವಿಕವಾಗಿ ಈ ಉತ್ಪನ್ನದ ಮಾನದಿಂದ ಎಲ್ಲರಿಗೂ ಅನುಕೂಲತೆಯನ್ನು ರೇಲ್ವೆಯವರು ಮಾಡಿಕೊಡತಕ್ಕದ್ದು. ಆದರೆ ಪ್ರಮಾಣದಲ್ಲಿ ಮಾತ್ರ ತೀರ ವಿಪರೀತವೇ ಸರಿ. ೧ನೇ ವರ್ಗದ ಎಲ್ಲ ಡಬ್ಬಿಗಳಲ್ಲಿ ಕೂಡಿ ೧ರಿಂದ ೧| ಪ್ರಯಾಣಿಕನು, ೨ನೇ ವರ್ಗದಲ್ಲಿ ೨ರಿಂದ ೨|| ಮತ್ತು ೩ನೇ ವರ್ಗದಲ್ಲಿ ಎಷ್ಟೋ ಸಾರೆ ನಿಂತೇ ನೆಂದರೆ ಸ್ಥಳವಿಲ್ಲ.

ಗದ್ದಲವನ್ನು ಮಾಡಗೊಡಬಾರದೆಂದು ಜಿ. ಆಯ್. ಪಿ. ಮೊದಲಾದ ರೇಲ್ವೆಯ ನೌಕರರಿಗೆ ಕಟ್ಟಪ್ಪಣೆಯನ್ನು ಕಂಪನಿಯವರು ಮಾಡಿರುತ್ತಾರೆ, ಆದರೆ ಈ ಅಪ್ಪಣೆಯನ್ನು ನೌಕರರು ಪಾಲಿಸುತ್ತಾರೋ ಇಲ್ಲವೋ ಎಂಬದನ್ನು ಮಾತ್ರ ಕಂಪನಿಯವರು ವಿಚಾರಿಸುವುದಿಲ್ಲ. ಗದ್ದಲವಾದದ್ದು ಕಂಡು ಬಂದರೆ ಪ್ರತಿಡಬ್ಬಿಗೆ ಪ್ರತಿ ದಿವಸಕ್ಕೆ ೨೦ ರೂ. ದಂಡನನ್ನು ಕಂಪನಿಯವರಿಂದ ಇಸಗೊಳ್ಳಲಿಕ್ಕೆ ಸರಕಾರಕ್ಕೆ ಅಧಿಕಾರವಿರುತ್ತದೆ. ಆದರೆ ಕಳೆದ ೭೫ ವರುಷಗಳಲ್ಲಿ ಈ ಅಧಿಕಾರವನ್ನು ಸರಕಾರದವರು ನಡಿಸಿಯೇ ಇರುವದಿಲ್ಲ. ಇಂಥ ಸ್ಥಿತಿಯಲ್ಲಿ ಪ್ರಯಾಣಿಕರಿಗೆ ಸ್ವಾವಲಂಬನವನ್ನು ಬಿಟ್ಟರೆ ಬೇರೊಂದು ಗತಿಯೇ ಇಲ್ಲ. ಈ ಸ್ವಾವಲಂಬನದಲ್ಲಿ ೨ ಮಾರ್ಗಗಳುಂಟು. ಗದ್ದಲವಾದ ಕೂಡಲೇ ಅಪಾಯದ ಸರಪಳಿಯನ್ನು ಎಳೆದು ಗದ್ದಲವನ್ನು ಕಡಿಮೆಮಾಡುವುದಕ್ಕಾಗಿ ಗಾಡಿಯನ್ನು ನಿಲ್ಲಿಸಿ ಬಿಡುವದು ೧ನೇ ಮಾರ್ಗವು. ಇದೇ ಸದ್ಯಕ್ಕೆ ಫಲಕಾರಿಯಾಗಿರುತ್ತದೆ. ಇನ್ನು ೨ನೇ ಮಾರ್ಗವೆಂದರೆ ಗದ್ದಲದಿಂದ ಆಗುವಂಟಾದ ಅನಾನುಕೂಲತೆಯ ಸಂಬಂಧವಾಗಿ ಕಂಪನಿಯ ಮೇಲೆ ನ್ಯಾಯಾಧಿಕಾರಿಯಲ್ಲಿ ದಾವೇ ಮಾಡಿ ಲುಕ್ಸಾನವನ್ನು ತುಂಬಿಸಿಕೊಳ್ಳುವದು. ಆದರೆ ಇದು ಬಹಳ ತ್ರಾಸದಾಯಕವೂ ಖರ್ಚಿನದೂ ಆಗಿರುತ್ತದೆ. ೨ ಸಾರೆ ಸರಪಳಿಯ ಪ್ರಯೋಗವನ್ನು ಮಾಡಿದ ಬಳಿಕ ೩ನೇ ಎರಡನೆಯ ಮಾರ್ಗವನ್ನು ಖಾನದೇಶ ಜಿಲ್ಲೆಯೊಳಗಿನ ಧುಳೆಯ ಶ್ರೀ. ವಿ. ಹೆ. ಜಾವಡೇಕರರೆಂಬವರು ಅವಲಂಬಿಸಿ ಕಂಪನಿಯ ಕಡೆಯಿಂದ ತಮಗಾದ ಲುಕ್ಸಾನವನ್ನು ತುಂಬಿಸಿಕೊಂಡರು.

ಶ್ರೀ. ಜಾವಡೇಕರರು ಒಮ್ಮೆ ಚಾಳೀಸಗಾಂವದಿಂದ ಧುಳೆಗೆ ಬರುತ್ತಿದ್ದರು. ಹಾದಿಯಲ್ಲಿ ಶಿರೂಡ್ ಸ್ಟೇಶನ್ನು ಹೆಕ್ಕುತ್ತದೆ. ಅಲ್ಲಿಗೆ ಬರುವವರೆಗೆ ಡಬ್ಬಿಯಲ್ಲಿ ಪ್ರಯಾಣಿಕರ ಪೂರ್ಣ ಸಂಖ್ಯೆ ಅಂದರೆ ೧೦ ಜನರಾಗಿದ್ದರು. ಶಿರೂಡದಲ್ಲಿ ಈ ಡಬ್ಬಿಯಲ್ಲಿ ಮತ್ತೆ ೫ ಜನರು ನುಗ್ಗಿದರು. ಆಗ ಶ್ರೀ. ಜಾವಡೇಕರರು ಗಾರ್ಡನಿಗೆ ಹೆಚ್ಚಿನ ಜನರನ್ನು ಹೊರಗೆ ಕಳಸಲಿಕ್ಕೆ ಹೇಳಿದರು. ಆದರೆ ಗಾರ್ಡನು ಅದರಂತೆ ಮಾಡದೆ ಶ್ರೀ. ಜಾವಡೇಕರರನ್ನು ಡಬ್ಬಿಯಲ್ಲಿ ನೂಕಿ ಬಾಗಿಲಿಗೆ ಕೀಲಿಯನ್ನು ಹಾಕಿಕೊಂಡನು; ಮತ್ತು ಇಂಥ ಸ್ಥಿತಿಯಲ್ಲಿ ಗಾಡಿಯು ಧುಳೆಗೆ ಬಂದಿತು.

ಆ ಮೇಲೆ ಈ ಎಲ್ಲ ಸಂಗತಿಯನ್ನು ಕಂಪನಿಗೆ ತಿಳಿಸಿ ಲುಕ್ಸಾನದ ಸಂಬಂಧವಾಗಿ ಕನಿಷ್ಠ ೫ ರೂ. ಗಳನ್ನು ಕೊಡಬೇಕೆಂದು ಕಂಪನಿಯವರಿಗೆ ಶ್ರೀ. ಜಾವಡೇಕರರು ಕೇಳಿಕೊಂಡರು. ಆದರೆ ಅದರಿಂದೇನೂ ಉಪಯೋಗವಾಗಲಿಲ್ಲ. ಕೂಡಲೇ **೧೦ ಜನರ ಡಬ್ಬಿಯಲ್ಲಿ ಕಾಯಿದೇ ಪ್ರಕಾರ ಹತ್ತೇ ಜನರು ಕೂತರೆ ತಮಗೆ ಯಾವ ಸುಖ ಸಿಗುತ್ತಿತ್ತೋ ಅಂಥ ತನ್ನು ಕಾಯಿದೇ ವೀರ ಸುಖದಲ್ಲಿ ಕಡಿಮೆಯಾಯಿತು.** ಮತ್ತು ಮೇಲಿನ ಗದ್ದಲದಲ್ಲಿ ಕಾಲುಗಳನ್ನು ಹೆಚ್ಚಿಗೆ ಮಡಿಚಿಕೊಂಡು ಕೂಡಬೇಕಾದ್ದರಿಂದ ಪ್ರತ್ಯಕ್ಷವಾಗಿ ಕಷ್ಟವನ್ನನುಭವಿಸಬೇಕಾಯಿತು. ಎಂದು ಮೊದಲಾಗಿ ಸಂಗತಿಗಳನ್ನೆಲ್ಲ ಬರೆದು ಅದೆಲ್ಲದರ ಸಲುವಾಗಿ ಕನಿಷ್ಠ ೫ ರೂ. ಗಳನ್ನು ಕಂಪನಿ ಮತ್ತು ಆದರ ನೌಕರನಾದ ಗಾರ್ಡನ ಕಡೆಯಿಂದ ಕೊಡಿಸಬೇಕೆಂಬದಾಗಿ ದಿವಾಣಿ ಕೋರ್ಟಿನಲ್ಲಿ ಶ್ರೀ. ಜಾವಡೇಕರರು ಫಿರ್ಯಾದಿಯನ್ನು ದಾಖಲ ಮಾಡಿದರು. ಮತ್ತು ಕೋರ್ಟಿನವರು ಶ್ರೀ. ಜಾವಡೇಕರರ ದಾವೆಗೆ ಒಪ್ಪಿ ಅವರಿಗೆ ಇಬ್ಬರು ಪ್ರತಿವಾದಿಗಳ ಕಡೆಯಿಂದ ಲುಕ್ಸಾನವನ್ನು ಕೊಡಿಸಿದರು.

ಆಂಗ್ಲೋ ಇಂಡಿಯನ್ ಜನರ ಸಲುವಾಗಿ ೩ನೇ ವರ್ಗದ ಡಬ್ಬಿಗಳನ್ನು ಕಾದಿಡಬಾರದೆಂಬ ಎಲ್ಲ ಪ್ರಯತ್ನಗಳು ನಿಷ್ಫಲವಾದದ್ದನ್ನು ನೋಡಿ ಭುಸಾವಳದ ಕೆಲವು ಸ್ವಯಂಸೇವಕರು ಇಂಥ ಡಬ್ಬಿಯಲ್ಲಿ ಒಳನುಗ್ಗಿ ಕೂಡುವ ಕೊನೆಯ ಉಪಾಯವಾದ ಸತ್ಯಾಗ್ರಹವನ್ನು ಮಾಡಿದರು. ಆಗ್ಗೆ ಪ್ಯಾಸೆಂಜರ ಗಾಡಿಗೆ ಈ ಡಬ್ಬಿಗಳನ್ನು ಹಚ್ಚುವದನ್ನು ನಿಲ್ಲಿಸಬಿಟ್ಟರು.

ಗದ್ದಲವನ್ನು ಕಳೆಯುವದಕ್ಕೆ ಬೇರೆಬೇರೆ ಸ್ಥಳಗಳ ಪ್ರಯಾಣಿಕರು ಸರಪಳಿಯನ್ನೆಳೆದು ವೇಳೆವೇಳೆಗೆ ಗಾಡಿಯನ್ನು ನಿಲ್ಲಿಸಿಬಿಡುವ ಸತ್ಯಾಗ್ರಹವನ್ನು ಮಾಡದ ಹೊರತು ಈ ಗೈರ್‌ಸೋಯಿಯ ದಾದನ್ನು ತಾವು ಕೇಳುವದಿಲ್ಲವೆಂದು ಕಂಪನಿಯವರ ಮತ್ತು ಸರಕಾರದವರ ಇಚ್ಛೆ ಇರುವದೋ ಏನೋ!

ಡಬ್ಬಿಗಳೊಳಗಿನ ಪಾಯಖಾನೆಗಳಲ್ಲಿ ನೀರು ಇರದಿದ್ದರೆ ಆ ಸಂಗತಿಯನ್ನು ರೇಲ್ವೆ ಅಧಿಕಾರಿಗಳ ಕಣ್ಣಿಗೆ ಹಾಕಬೇಕು. ಮತ್ತು

ಅವರು ಕೇಳದೆ ಇದ್ದರೆ ಅಂಥ ಸ್ಥಿತಿಯಲ್ಲಿ ಸರಪಳಿಯನ್ನೆಳೆಯುವದು ಕಾಯಿದೇಶೀರ ಇರುವದೆಂದು ಭಂಡಾರಾ ಕೋರ್ಟಿನವರು ನಿರ್ಣಯಿಸಿದ್ದಾರೆ.

### ನಂ. ೯ ರೇಲ್ವೆ ಸಂಬಂಧದಲ್ಲಿ ಐದು ಮಹತ್ವದ ಮಾತುಗಳು.

(೧) ಭಾರತಮಾತೆಯ ಸತ್ಪುತ್ರನೆಮೇಲೆ ಅಬ್ಬಗಟ್ಟಿ ರೂ. ಗಳ ಸಾಲತೆಗೆದು ಸುರಕ್ಷಿತ ಬಡ್ಡಿಯೊಂದಿಗೆ ಇಂಗ್ಲೀಷ್ ಕಂಪನಿಗಳಿಗೆ ಕೋಟ್ಯಾವಧಿ ರೂ ಗಳನ್ನು ಕೊಟ್ಟು ಹಿಂದುಸ್ಥಾನದೊಳಗೆ ರೇಲ್ವೆ ಗಳನ್ನು ಸರಕಾರದವರು ಹಾಕಿಸಿದ್ದಾರೆ. ಆದ್ದರಿಂದ ಅವುಗಳ ಕಡೆ ಯಿಂದ ತಮಗೆ ಬೇಕಾದ ಸುಖಸೋಯಿಗಳನ್ನು ಮಾಡಿಸಿಕೊಳ್ಳು ವದಕ್ಕೆ ವೈಯಕ್ತಿಕ ಭಾರತೀಯ ಪ್ರಯಾಣಿಕನಿಗೂ ವ್ಯಾಪಾರಸ್ಥನಿಗೂ ಅಧಿಕಾರವುಂಟು.

(೨) ಹಗಲು ಬೇಕಾದಾಗ ಮತ್ತು ರಾತ್ರಿಯಲ್ಲಿ ಗಾಡಿಯ ವೇಳೆಗಿಂತ ೫ ತಾಸು ಮುಂಚೆ ಪ್ರಯಾಣಿಕರಿಗೆ ಟಿಕೇಟು ಸಿಗಬೇ ಕೆಂದೂ ಮತ್ತು ಅವರಿಗೆ ತಣ್ಣೀರನ್ನು ಪೂರೈಸಬೇಕೆಂದೂ ಜಿ. ಜಿ. ಆಯ್. ಪಿ. ರೇಲ್ವೆಯಲ್ಲಿ ನಿಯಮವಿರುತ್ತದೆ.

(೩) ಡಬ್ಬಿಯ ಮೇಲೆ ಬರೆದಿರುವ ಸಂಖ್ಯೆಗಿಂತ ಹೆಚ್ಚಿನ ಜನರನ್ನು ಡಬ್ಬಿಯೊಳಗೆ ಬರಗೊಡದಿರಲಿಕ್ಕೆ ಪ್ರಯಾಣಿಕರಿಗೆ ಹಕ್ಕು ಉಂಟು. ಗದ್ದಲವಾದಾಗ ಹೆಚ್ಚಿನ ಜನರನ್ನು ರೇಲ್ವೆ ನೌಕರರು ಹೊರಗೆ ಕಳಿಸುವದಿಲ್ಲವೆಂದು ತಿಳಿದ ಕೂಡಲೇ ಅವ ರನ್ನು ಹೊರಗೆ ಹಾಕಿಸುವದಕ್ಕೋಸ್ಕರ ಆವಾಯದ ಸರಪಳಿಯ ನ್ನೆಳೆದು ಗಾಡಿಯನ್ನು ನಿಲ್ಲಿಸಲಿಕ್ಕೆ ಅಡ್ಡಿಯಿಲ್ಲ. ಅದರಂತೆ ಸಿನೇ ವರ್ಗದ ಡಬ್ಬಿಯ ನಾಯಖಾನೆಯಲ್ಲಿ ನೀರು ಇರದಿದ್ದರೆ ರೇಲ್ವೆ ನೌಕರರಿಗೆ ಈ ಅಡಚಣೆಯನ್ನು ತಿಳಿಸಿ ಮೇಲೆ ದಾದು ಹತ್ತದಿದ್ದರೆ ಆವಾಯದ ಸರಪಳಿಯನ್ನೆಳೆದು ದಾದು ಹತ್ತುವಂತೆ ಮಾಡುವದು ಕಾಯಿದೇಶೀರ ಇರುತ್ತದೆ.

(೪) ಪ್ಯಾಸೆಂಜರ ಗಾಡಿಯ ಬಾಡಿಗೆಯನ್ನು ವಸೂಲಮಾಡಿ ಜಾತ್ರೆಗಳಂಥ ಪ್ರಸಂಗಗಳಲ್ಲಿ ಕಂಪನಿಯವರು ಮಾಲಗಾಡಿಯ ಡಬ್ಬಿಯೊಳಗಿಂದ ಪ್ರಯಾಣಿಕರನ್ನು ಒಯ್ಯುತ್ತಾರೆ. ಇದು ಕಾಯಿದೆಗೆ ವಿರುದ್ಧವಾಗಿರುತ್ತದೆ. ಕಾರಣ ಇಂಥ ಅನ್ಯಾಯದ ಸಂಬಂಧದಲ್ಲಿ ಕಂಪನಿಯಮೇಲೆ ದಿವಾಣಿಯಲ್ಲಿ ದಾವೆಯನ್ನು ತರಬಹುದು.

(೫) ಭಾರತೀಯ ವ್ಯಾಪಾರಸ್ಥರು ಮತ್ತು ಪ್ರಯಾಣಿಕರು ಇಲ್ಲದ ಸಮಸ್ಯೆಯನ್ನು ಬಿಟ್ಟು ಕೊಡಬೇಕು. ಮತ್ತು ರೇಲ್ವೆ ಯಲ್ಲಿ ಯಾವ ಮೋಸವಾದರೂ ಜುಲುಮಿಯಾಗುತ್ತಿದ್ದರೆ ಆಗ್ಗೆ ಒಬ್ಬ ರಿಗೊಬ್ಬರು ಸಹಾಯವನ್ನು ಮಾಡಬೇಕು. ರೇಲ್ವೆ ನೌಕರರ ಸ್ಥಿರ ವರ್ತನೆಯ ಸಂಬಂಧದಲ್ಲಿಯೂ ಮತ್ತು ಲಕ್ಷ್ಯಕ್ಕೆ ಬಂದ ಎಲ್ಲ ಅಹಜತೆಗಳ ವಿಷಯದಲ್ಲಿಯೂ ಆಗಿಂದಾಗ್ಗೆ ಯೋಗ್ಯ ಅಧಿಕಾರಿ ಗಳ ಕಿವಿಗೆ ತಕರಾರು ಮಾಡಿ ಅಂಥ ಪ್ರಕರಣಗಳನ್ನು ಚಿಗಟುತನ ದಿಂದ ನಡಿಸಿ ಕೊನೆಮುಟ್ಟಿಸಬೇಕು. ತಮ್ಮತಮ್ಮೊಳಗೇ ವಾದ ವಿವಾದ ಮಾಡುತ್ತ ಕೂಡಬಾರದು. ವ್ಯಾಪಾರಸ್ಥರೂ ಪ್ರಯಾಣಿ ಕರೂ ಆಲ್ಲಲ್ಲಿ ಸಂಘಗಳನ್ನು ಮಾಡಿಕೊಂಡು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕು.

ಮುರಿಗೆಯ್ಯ ಸೋಮಯ್ಯ ಜಂಗಿನ,
ವೀರಭದ್ರಪ್ಪ ಬಸವಪ್ಪ ಬಳ್ಳಾರಿ.
ಗೌ. ಕಾರ್ಯದರ್ಶಿಗಳು.

## ಜಾತ್ರಿ ಕಮಿಟಿಯ ಸೆಕ್ರೆಟರಿಯಿಂದ

ಶ್ರೀಮನ್ಮಹಾ ಅಥಣಿ ಶಿವಯೋಗಿಗಳ ರಥೋತ್ಸವವು ಪ್ರತಿ ವರ್ಷ ಶ್ರಾವಣ ಶುಕ್ಲ ೧೩ ದಿವಸ ಧಾರವಾಡ ಶ್ರೀ. ಜ. ಮುರುಘ ರಾಜೇಂದ್ರ ಫ್ರೀಬೋರ್ಡಿಂಗಿನಲ್ಲಿ ಜರುಗತಕ್ಕದ್ದು ಆದರೆ ಆ ಸಮಯಕ್ಕೆ ಮಳೆಯು ವಿಶೇಷವಾಗಿರುವದರಿಂದ ಉತ್ಸವಕ್ಕೂ ದರ್ಶ ನಕ್ಕೆಂದು ಬರುವ ಭಕ್ತಾದಿಗಳಿಗೂ ಉಪನ್ಯಾಸ ಕೀರ್ತನಕಾರರಿಗೂ ಮತ್ತು ಭಜನಾ, ವಾದ್ಯ, ಕುಸ್ತಿ ಸಂಘದವರ ಕಾರ್ಯಕ್ರಮಗ ಳಿಗೆ ಆಗುವ ಅನಾನುಕೂಲತೆಗಳನ್ನೇ ತಿಳಿದು ಈ ರಥೋತ್ಸವ ವನ್ನು ಮಾಘ ಶುದ್ಧ ೫ ಗೆ ಮಾಡುವದಾಗಿ ಜಾತ್ರೆ ಕಮಿಟಿಯ ವರೂ ಮತ್ತು ಸ್ಥಳ ಪರಸ್ಥಳ ಭಕ್ತ ಮಾಹೇಶ್ವರರೂ ಬೋರ್ಡಿಂಗ ಕಮಿಟಿಯವರ ಅನುಮತಿ ಪ್ರಕಾರ ನಿಶ್ಚಯಿಸಿರುವರು.

ತಾರೀಖು ೨-೭-೧೯೩೪ }
ಸೆಕ್ರೆಟರಿ ರಥೋತ್ಸವ ಕಮಿಟಿ,
ಮುರುಘರಾಜೇಂದ್ರ ಬೋರ್ಡಿಂಗ
ಹಾವೇರಿಪೇಟೆ ಧಾರವಾಡ.


## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾ ರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾ ನಂದನುಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾ ರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಭಯೋಗಿಸಿ ಇದರ ನಿರ್ಮಾ ದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೇಶ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ

ನಮ್ಮ ಸುಗಂಧರಾಜ ದಶಾಂಗವನ್ನು ಬಳಸಿ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗಿದೆ.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—
ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,
ತುಮಕೂರು, (ಮೈಸೂರು ಸ್ಟೇಟ್)

# ವಿರಕ್ತರು ಪಟ್ಟಾಧಿಕಾರಿಗಳಿಂದಲೂ ನಮಸ್ಕೃತರು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು, ಕೊಡಗಿಗೆ ಸೇರಿದ ಮಾದಾಪುರ ಮಠಾಧಿಕಾರಿಯಾಗಿದ್ದ ಸ್ವತಂತ್ರಪ್ಪನವರಿಗೆ ಒಂದು ಕ್ರಿಮಿನಲ್ ನೊಕದ್ದಮೆಯಲ್ಲಿ ಸಜವಾಗಿದ್ದುದರ ಮೇಲೆ ಅವರನ್ನು ಅಧಿಕಾರ ದಿಂದ ತೆಗೆದುಬಿಟ್ಟು ಅವರ ಸ್ವಾಧೀನದಲ್ಲಿದ್ದ ಆಸ್ತಿಯನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಲು ಮಡಕೇರಿಯ ಸಬ್ ಜಡ್ಜಿಯವರ ಕೋರ್ಟನಲ್ಲಿ ಮಾಡಿದ್ದ O. S. No. ೧೪-೧೯೧೩ನೇ ಮೊಕದ್ದಮೆ ಯಲ್ಲಿ ೧ನೇ ಸಾಕ್ಷಿ ರಾಜಸಭಾ ಭೂಷಣ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ೧೯೧೩ನೆ ಡಿಸೆಂಬರ್ ತಾ|| ೧೪ರಲ್ಲಿ ಬೆಂಗಳೂರು ೧ನೇ ಮುನ್ಸೀಫ್ ಕೋರ್ಟನಲ್ಲಿ ಕೊಟ್ಟ ವಾಜ್ಮೂಲದಲ್ಲಿ ಹೀಗೆ ಹೇಳುತ್ತಾರೆ—

ನನ್ನ ವಯಸ್ಸು ೫೯. ನನ್ನ ಹೆಸರು ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ. ಜಾತಿಯಲ್ಲಿ ವೀರ ಶೈವ. ಉದ್ಯೋಗದಲ್ಲಿ ಮೈಸೂರು ಗೌರ್ನಮೆಂಟ ರಿಟೈರ್ಡ್ ೧ನೇ ಕೌನ್ಸಿಲರು ಮತ್ತು ಬೆಂಗಳೂರು ಮುನಸಿಪಾಲಿಟಿಯ ಆನರರಿ ಪ್ರೆಸಿ ಡೆಂಟು. ಬೆಂಗಳೂರು ಸಿಟಿಯಲ್ಲಿ ವಾಸಿಸುತ್ತೇನೆ. ೧೯೧೦ರಲ್ಲಿ ಸೊಲ್ಲಾಪುರದಲ್ಲಿ ನಡೆದ ವೀರಶೈವ ಮಹಾಸಭಾಧ್ಯಕ್ಷನಾಗಿದ್ದೆ. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷನಾಗಿದ್ದೇನೆ. ಚಿತ್ರದುರ್ಗದ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳನ್ನು ಬಲ್ಲೆ....

ಲಿಂಗಾಯತ ಸಮಾಜದಲ್ಲಿ ಪಟಸ್ಥಲ ಅಥವಾ ವಿರಕ್ತ ಮತ್ತು ಗುರುಸ್ಥಲ ಅಥವಾ ಸಿಂಹಾಸನ ಮಠ ಮತ್ತು ಅವುಗಳ ಶಾಖಾ ಮಠ ಎಂದು ಎರಡು ವಿಧವಾದ ಮಠಗಳಿರುತ್ತವೆ. ಈ ಎರಡು ವಿಧಗಳ ಮಠಗಳ ಮೇಲೆ ವಾದಿಗೆ ಅಧಿಕಾರವಿರುತ್ತದೆ. ಗುರುಸ್ಥಲ ಮಠಾಧಿಕಾರಿಗಳು ಬ್ರಹ್ಮಚಾರಿಗಳು. ಗುರುಸ್ಥಲ ಮಠಗಳು ಸಿಂಹಾ ಸನ ಮಠಗಳಿಗೆ ಅಧೀನವಾಗಿರುತ್ತವೆ. ಕಡೂರು ಡಿಸ್ಟ್ರಿಕ್ಟು ಬಾಳೆ ಹೊನ್ನೂರು, ಬಳ್ಳಾರಿ ಡಿಸ್ಟ್ರಿಕ್ಟು ಉಜ್ಜಿನಿ, ಕರ್ನೂಲು ಡಿಸ್ಟ್ರಿಕ್ಟು ಶ್ರೀಶೈಲ, ಹಿಮಾಲಯದಲ್ಲಿ ಕೇದಾರ ಈ ೫ ಸ್ಥಳಗಳಲ್ಲಿ ೫ ಸಿಂಹಾ ಸನ ಮಠಗಳಿರುತ್ತವೆ. ಈ ಮಠಗಳ ಸ್ವಾಮಿಗಳು ಬ್ರಹ್ಮಚಾರಿ ಗಳಲ್ಲದೆ ಸನ್ಯಾಸಿಗಳಲ್ಲ. ವಿರಕ್ತ ಮಠಗಳಿಗೆ ಪ್ರಾಶಸ್ತ್ಯವು ಹೆಚ್ಚು. ಈ ಮಠಾಧಿಕಾರಿಗಳು ನಿರಾಭಾರಿ ಅಥವಾ ಸನ್ಯಾಸಿಗಳಾಗಿರುತ್ತಾರೆ. ಪಟ್ಟಾಧಿಕಾರಿಗಳು ಸನ್ಯಾಸಿ (ನಿರಾಭಾರಿ ಅಥವಾ ವಿರಕ್ತರು) ಗಳಿಗೆ ನಮಸ್ಕರಿಸುವರು.

೯ನೆಯ ಸಾಕ್ಷಿ ಪಟ್ಟದ ಪರಮೇಶ್ವರ ಸ್ವಾಮಿಯವರ ಹೇಳಿಕೆ ಯಲ್ಲಿ ಕೆಲ ಭಾಗ—

ಶ್ರೀ ಉಜ್ಜಿನಿ ಮಠದ ಸ್ವಾಮಿಗಳು ನಮ್ಮ ಗುರುಗಳು. ನನ್ನ ವಯಸ್ಸು ೬೦, ಜಾತಿ ವೀರಶೈವ, ಉದ್ಯೋಗ ಮಠಾಧಿಕಾರ ಮತ್ತು ಶಿಷ್ಯಾರ್ಜನೆ, ವಾಸ ಚಿತ್ರದುರ್ಗ.

ನಾನು ಪಟ್ಟದ ದೇವರು, ನಾನು ಉಜ್ಜಿನೀ ಮಠಕ್ಕೆ ಸೇರಿದ ವನೇನೆ. ಉಜ್ಜಿನಿ ಪಟ್ಟದ ಸ್ವಾಮಿಗಳು ನನ್ನ ಗುರುಗಳು. ವಾದಿ ವಿರಕ್ತ ಮಠಗಳಿಗೆ ಮುಖ್ಯ ಗುರುಗಳು. ವಾದಿ ನನಗೂ ಉಜ್ಜಿನಿ ಪಟ್ಟದ ಗುರುಗಳಿಗೂ ಗುರುವಾಗಿರುತ್ತಾರೆ.....

೧೦ನೆಯ ಸಾಕ್ಷಿ ಪಟ್ಟದ ದೇವರು ಕೊಟ್ಟೂರಪ್ಪನವರ ಹೇಳಿ ಕೆಯಲ್ಲಿ ಕೆಲ ಭಾಗ—

ನನ್ನ ಗುರುಗಳು ಬಾಳೆಹೊನ್ನೂರು ಮಠದ ಗುರುಗಳು. ನನ್ನ ವಯಸ್ಸು ೫೫, ಜಾತಿ ವೀರಶೈವ, ಉದ್ಯೋಗ ಶಿಷ್ಯಾರ್ಜನೆ, ವಾಸ ಈಸಮುದ್ರ.

ನಾನು ಪಟ್ಟದ ದೇವರು, ಬಾಳೆಹೊನ್ನೂರ ಪಟ್ಟದ ಸ್ವಾಮಿ ಗಳು ನನ್ನ ಗುರುಗಳು. ನಾನು ಗುರುಸ್ಥಲಕ್ಕೆ ಸೇರಿದವನು. ವಾದಿ (ಮುರುಘರಾಜೇಂದ್ರ ಸ್ವಾಮಿಗಳು) ನನಗೂ ಬಾಳೆಹೊನ್ನೂರು ಪಟ್ಟದ ಸ್ವಾಮಿಗಳಿಗೂ ಗುರುಗಳಾಗಿರುತ್ತಾರೆ .....

## ೫ನೇ ಬಸವೇಶ್ವರ ಸ್ವಾಮಿಗಳು ಪ್ರಪಂಚವನ್ನುದ್ಧಾರ ಮಾಡಿದರು.

೧೯೧೭ರಲ್ಲಿ ಡಾವಣಗೆರೆಯೊಳಗೆ ನೆರೆದಿದ್ದ ಶ್ರೀಮದ್ವೀರಶೈವ ಎಂಟನೆಯ ಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದಾಗ್ಗೆ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಅಪ್ಪಣೆ ಕೊಡಿಸಿದ ಭಾಷಣದಲ್ಲಿ ಶ್ರೀ ಬಸವೇಶ್ವರರ ವಿಚಾರವಲ್ಲಿ ಹೀಗೆ ಹೇಳಿರು ತ್ತಾರೆ.

ಶ್ರೀ ಬಸವೇಶ್ವರ ಸ್ವಾಮಿಗಳವರು ಈ ಮತವನ್ನು ಉಜ್ಜೀವಿಸಿ ಬೀಕಾದಮ್ಮ ಉತ್ತೇಜನವನ್ನು ಕೊಟ್ಟು ಸರ್ವವ್ಯಾಪಕವಾಗುವಂತೆ ಮಾಡಿದುದಲ್ಲದೆ ಈ ಮತ ಸಂಬಂಧವಾದ ಆಚಾರ ವ್ಯವಹಾರ ಗಳನ್ನೆಲ್ಲಾ ಸಂಸ್ಕರಿಸಿ ಸರಿಯಾದ ವಿಧಿಗಳನ್ನೇರ್ಪಡಿಸಿ ಇತರ ಪಂಗ ಡಗಳವರೂ ಸಹಾ ಈ ವೈವ ಮತವನ್ನವಲಂಬಿಸಿ ಶ್ರೇಷ್ಯತೆಯನ್ನು ಹೊಂದಿ ಧನ್ಯರೂ ಕೃತಕೃತ್ಯರೂ ಆಗುವಂತೆ ಮಾಡಿದರು. ಶ್ರೀ ಬಸವೇಶ್ವರ ಸ್ವಾಮಿಗಳವರು ನಮ್ಮ ಪಂಚಾಚಾರ್ಯರ ಮತ ವ್ಯಾಪಕತೆಗಾಗಿ ಅತ್ಯುತ್ಸಾಹಕರಾದ ಬೋಧಕರಾಗಿದ್ದರು. ಶ್ರೀ ಬಸವೇಶ್ವರ ಸ್ವಾಮಿಗಳವರು ಮತೋದ್ಧಾರಕರಾಗಿದ್ದುದೂ ಅಲ್ಲದೆ ಪ್ರಜೆಗಳ ಅಭ್ಯುದಯ ವಿಚಾರದಲ್ಲಿ ಅತ್ಯಂತ ಆಸಕ್ತರಾಗಿಯೂ ಇದ್ದರು. ಇದಕ್ಕೆ ಇವರು ನಿಮ್ನ ಜಾತ್ಯುದ್ಧರಣದಲ್ಲಿಯೂ ನಿರತ ರಾಗಿ ಕೀಳು ಜಾತಿಯವರನ್ನೆಲ್ಲಾ ಲಿಂಗಧಾರಿಗಳನ್ನಾಗಿಯೂ ದೈವ ಭಕ್ತಿ ಪರಾಯಣರಾಗುವಂತೆಯೂ ಮಾಡಿದುದೇ ದೃಷ್ಟಾಂತವಾಗಿ ರುತ್ತದೆ. ಪ್ರಪಂಚದಲ್ಲಿ ಸರ್ವರೂ ಸರ್ವಶಕ್ತನಾದ ಜಗದೀಶ್ವರನ ಅಂಶಭೂತರೆಂಬವರಾಗಿಯೂ, ಆ ಮಹಾಮಹಿಮನ ಪ್ರೀತಿಗೆ ಪಾತ್ರ ರೆಂಬವರಾಗಿಯೂ ಈಶ್ವರನ ಸೃಷ್ಟಿಯಲ್ಲಿ ಒಬ್ಬರು ಹೆಚ್ಚು ಮತ್ತೊ ಬ್ಬರು ಕಡಿಮೆಯೆಂಬ ವೈಲಕ್ಷಣ್ಯವೇ ಇಲ್ಲವೆಂಬವರಾಗಿಯೂ ಕಾರ್ಯತಃ ಸರ್ವಸಮಾನತ್ವವನ್ನು ಸರ್ವತೋಮುಖವಾಗಿ ಪ್ರದ ರ್ಶಿಸುತ್ತಾ ಬಂದುದಲ್ಲದೆ ನಿಕೃಷ್ಟ ವರ್ಣದವರೆಂದು ನಿರಾಕರಿಸ ಲ್ಪಟ್ಟು ನಿವರ್ತಿಸಲ್ಪಟ್ಟು ಇದ್ದವರನ್ನೆಲ್ಲಾ ತಮ್ಮ ಮತಕ್ಕೆ ಸೇರಿ ಸಿಕೊಂಡು ಅವರನ್ನು ಪರಮಪವಿತ್ರರನ್ನಾಗಿಯೂ ಭಕ್ತರನ್ನಾ ಗಿಯೂ ಮಾಡಿ ಉದ್ಧರಿಸುತ್ತಾ ಬಂದರು. ಇಂಥಾ ಪರಿವರ್ತನೆ

( ೮ನೆಯ ಪುಟಕ್ಕೆ ಮುಂದುವರಿದುದು. )

# ರಾಷ್ಟ್ರೀಯ ಸಭೆಯ ಚಟುವಟಿಕೆಗಳು.

### "ಜಾತಿ ನಿರ್ಣಯ."

ಬನಾರಸದಲ್ಲಿ ಕೂಡಿದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಜಾತಿಯ ನಿರ್ಣಯದ ಬಗ್ಗೆ ಏನೊಂದೂ ವಿಧಾನವನ್ನು ಸ್ವೀಕರಿಸದಿದ್ದುದರಿಂದ ಶ್ರೀ. ಆಣೆಯವರು ಮತ್ತು ಧರ್ಮಾತ್ಮಾ ಮಾಲವೀಜಿಯವರು ತಮ್ಮ ಸ್ಥಾನಗಳನ್ನು ಬಿಟ್ಟುಕೊಟ್ಟಿದ್ದರಷ್ಟೆ. ಮುಸಲ್ಮಾನರಿಲ್ಲ ಈ ಜಾತಿ ನಿರ್ಣಯಕ್ಕೆ ಸಮ್ಮತವಿದ್ದುದರಿಂದ ರಾಷ್ಟ್ರೀಯ ಸಭೆಯು ಮುಸಲ್ಮಾನರನ್ನು ಪುರಸ್ಕರಿಸುತ್ತಿರುವದೆಂಬ ತಿಳುವಳಿಕೆಯು ಬಹು ಜನರಲ್ಲಿ ಉತ್ಪನ್ನವಾಗಿಬಹುದೆಂದು ಅನೇಕ ಮುಂದಾಳುಗಳು ಸ್ಪಷ್ಟವಾಗಿ ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ಪ್ರಸಿದ್ಧಿಪಡಿಸಿದ್ದಾರೆ. ಬಾಬು ರಾಜೇಂದ್ರ ಪ್ರಸಾದರು ಹೀಗೆ ಪ್ರಸಿದ್ಧಿಪಡಿಸಿದ್ದಾರೆ— ಜಾತಿಯ ನಿರ್ಣಯವು ರಾಷ್ಟ್ರೀಯ ಸಭೆಗೆ ಮಾನ್ಯವಿರುವದೆಂದಲ್ಲ. ಎಲ್ಲ ಜಾತಿಯವರಿಗೆ ಒಪ್ಪಿಗೆಯಾಗುವ ಒಂದು ಹೊಸ ಯೋಜನೆ ಮಾಡಬೇಕೆಂದೇ ಅದರ ಮತವಿದೆ. ರಾಷ್ಟ್ರೀಯ ಸಭೆಯಲ್ಲಿ ಮುಸಲ್ಮಾನರಿರುವವರೆಷ್ಟು ಎಂದು ಪ್ರಶ್ನೆ ಮಾಡಲ್ಪಡುತ್ತದೆ. ಆದರೆ ರಾಷ್ಟ್ರೀಯ ಸಭೆಯು ಪ್ರಾತಿನಿಧಿಕ ಸಂಸ್ಥೆಯಾಗಿರುವದರಿಂದ ಅದರಲ್ಲಿ ಒಬ್ಬನೂ ಮುಸಲ್ಮಾನನಿರದಿದ್ದರೂ ಅದು ತನ್ನ ಪ್ರಾತಿನಿಧಿಕ ವಿಚಾರವನ್ನೇ ಅನುಸರಿಸುವದು.

### ಗಾಂಧಿ ಮಾಲವೀಯ ಸಂಧಾನ.

ಬರುವ ಶಾಸನ ಸಭೆಗಳ ಆಯ್ಕೆಯಲ್ಲಿ ಹಿಂದು ಮಹಾಸಭೆಯು ರಾಷ್ಟ್ರೀಯ ಸಭೆಗೆ ಎದೆಗೊಟ್ಟು ನಿರರ್ಥಕವಾಗಿ ಗಲಭೆಯನ್ನುಂಟುಮಾಡಬಾರದೆಂದೂ, ಹಿಂದು ಮಹಾಸಭೆಯ ವತಿಯಿಂದ ರಾಷ್ಟ್ರೀಯ ಕಾರ್ಯದರ್ಶಿ ಉಮೇದುವಾರರನ್ನೇ ನಿಲ್ಲಿಸಬೇಕೆಂದೂ ಗಾಂಧೀಜಿಯವರು ಕೇಳಲು, ಪಂ. ಮಾಲವೀಯವರು ಸಮ್ಮತಿಸಿದ್ದಾರೆ. ಮತ್ತು ಅಸೆಂಬ್ಲಿಗೆ ಹೋಗುವ ರಾಷ್ಟ್ರೀಯ ಸದಸ್ಯರಿಗೆ ಜಾತಿನಿರ್ಣಯದ ಬಗ್ಗೆ ಮತಸ್ವಾತಂತ್ರ್ಯವಿರಬೇಕೆಂದು ಪಂಡಿತ ಮಾಲವೀಯರು ರಾಷ್ಟ್ರೀಯ ಸಭೆಯಲ್ಲಿ ಒಂದು ಗೊತ್ತುವಳಿಯನ್ನು ತರುವರೆಂದೂ ಅದು ಮಾನ್ಯವಾದರೆ ತಾವು ಹಿಂದು ಮಹಾಸಭೆಯ ಪ್ರತಿನಿಧಿಗಳನ್ನಾರಿಸುವದನ್ನು ಬಿಡುವರೆಂದೂ ತಿಳಿಯುತ್ತದೆ.

### ಗಾಂಧೀಜಿಯವರೂ ಸಮಾಜ ಸತ್ತಾವಾದವೂ.

ಸಂಯುಕ್ತ ಪ್ರಾಂತದ ಕೆಲ ಭೂಮಿಯೊಡೆಯರು ಮಹಾತ್ಮಾಜಿಯವರನ್ನು ಕಂಡು ಸಮಾಜಸತ್ತಾವಾದಿಗಳ ದೂರು ಹೇಳಿದರು. ಅದಕ್ಕೆ ಗಾಂಧೀಜಿಯವರು—ಸ್ವಂತ ಆಸ್ತಿಯನ್ನು ಹರಣ ಮಾಡಲು ನಾನು ಎಂದೂ ಸಮ್ಮತಿಸಲಾರೆನು. ಆದರೆ ನೀವು ನಿಮ್ಮ ಸ್ವಂತ ಆಸ್ತಿಯೂ ನಿಮ್ಮ ರೈತರದೆಂದೇ ಭಾವಿಸಿ ಅವರ ಹಿತಕ್ಕಾಗಿಯೇ ಉಪಯೋಗಿಸಬೇಕು. ನೀವು ನಿಮ್ಮ ಧನವನ್ನು ಸೊಗಸಿನ ಸಲುವಾಗಿ ವೆಚ್ಚಮಾಡದಿದ್ದರೆ ನಾನೂ ಮತ್ತು ಪಂ. ಜವಾಹರಲಾಲರೂ ನಿಮ್ಮ ಧನವನ್ನು ರಕ್ಷಿಸಲು ಸಹಾಯ ಮಾಡುವೆವು ಎಂದರು.

### ಗಾಂಧೀಜಿಯವರು ಕಾರಾಗೃಹಕ್ಕೆ ಹೋಗುವುದಿಲ್ಲ.

ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ನಿರ್ಣಯಗಳು ತಮಗೆ ಮಾನ್ಯವಿರುವವಾದುದರಿಂದ ಮಹಾತ್ಮಾಜಿಯವರು ಕಾರಾಗೃಹಕ್ಕೆ ಹೋಗಲು ಅವಸರ ಮಾಡದೆ ಅದಕ್ಕೆ ಸಹಾಯ ಮಾಡುವೆನೆಂದು ಒಂದು ಕಡೆಯಲ್ಲಿ ಹೇಳಿದರು.

---

## ವಿನಂತಿ.

ಶ್ರೀಮದ್ವೀರಶೈವ ಮಹಾಸಭೆಯ ಮಧ್ಯವರ್ತಿ ಕಮಿಟಿಯ ಸಭಾಸದರ ಸಭೆಯನ್ನು ಬಾಗಲಕೋಟೆಯಲ್ಲಿ ತಾ|| ೨೬-೨೭ ಆಗಷ್ಟ ೧೯೩೪ ಈ ದಿವಸಗಳಲ್ಲಿ ನೆರಿಸುವುದು ಗೊತ್ತಾಗಿದೆ. ಆ ಕಾಲಕ್ಕೆ ತರುಣಸಂಘ, ವೀರಶೈವ ಶಿಕ್ಷಣ ಪರಿಷತ್ತು, ಧಾರ್ಮಿಕ ಪರಿಷತ್ತು ಇವುಗಳ ಮಧ್ಯವರ್ತೀ ಕಮಿಟಿಗಳೂ ಸಹ ಕೂಡತಕ್ಕವಿರುವವು. ಈ ಸಭೆಗಳಲ್ಲಿ ಸಮಾಜಕ್ಕೆ ಸಂಬಂಧಿಸಿದ ಅನೇಕ ಮಹತ್ವದ ವಿಷಯಗಳು ಚರ್ಚಿಸಲ್ಪಡುವವು. ಇಲ್ಲಿ ಗೊತ್ತಾದ ನಿರ್ಣಯಗಳಂತೆ ವಿಜಾಪುರ ಜಿಲ್ಲೆಯಲ್ಲಿ ಕಾರ್ಯಗಳು ಜರಗುವಂತೆ ವ್ಯವಸ್ಥೆಯನ್ನು ಮಾಡುವದು ಎಷ್ಟು ಅವಶ್ಯ ಎಂಬದು ತಮಗೆ ಗೊತ್ತಾಗದೆ ಇರದು. ಇದರಿಂದ ನಮ್ಮ ಜಿಲ್ಲೆಯಲ್ಲಿಯ ಸಾರ್ವಜನಿಕ ಕಾರ್ಯಗಳು ಸುಸಂಘಟಿತ ರೀತಿಯಿಂದ ನಡೆಯಲಿಕ್ಕೆ ಅಸ್ಪದವಾಗುವದು. ಆದ್ದರಿಂದ ವಿಜಾಪುರ ಜಿಲ್ಲಾ ಸಭೆಯನ್ನು ಇದೇ ಸಮಯದಲ್ಲಿ ಕರೆಯಬೇಕೆಂದು ಗೊತ್ತಾಗಿದ್ದು ಈ ಸಭೆಗೆ ತಾವು ಅವಶ್ಯವಾಗಿ ಬರಬೇಕೆಂದು ನಮ್ಮ ಸವಿನಯ ವಿನಂತಿ ಇದೆ.

ಮೊದಲನೆಯ ದಿವಸ ಸಭೆಯು ಬಾಗಲಕೋಟೆಯಲ್ಲಿ ಸಂಜೆಯ ೪|| ಘಂಟೆಗೆ ಅಲ್ಲಿಯ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ನೆರೆಯುವುದು. ತಾವು ಬರತಕ್ಕ ದಿವಸವನ್ನು ಮಹಾಸಭೆಯ ಮಧ್ಯವರ್ತೀ ಕಮಿಟಿಯ ಸಭಾಸದರಾದ ಶ್ರೀ|| ಮುರಿಗೆಯ್ಯ ಜಂಗಿನ ಮು. ಬಾಗಲಕೋಟೆ ಇವರಿಗೆ ತಿಳಿಸಬೇಕು. ಸಭೆಯು ನೆರೆಯುವ ದಿವಸಗಳಲ್ಲಿ ತಮ್ಮ ಅಲ್ಲಿಯ ಊಟದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕಾಗುವುದು. ಆದರೆ ಇಳಿಯತಕ್ಕ ಸ್ಥಳದ ವ್ಯವಸ್ಥೆಯು ಮಾತ್ರ ಅಲ್ಲಿ ಮಾಡಲ್ಪಡುವದು.

ಪಿ. ಜಿ. ಹಳಕಟ್ಟಿ,
ನುಂಜಪ್ಪ ಹರ್ದೇಕರ,
ವಿಜಾಪುರ, ಬಿ. ಡಿ. ತಾಳೀಕೋಟಿ,
ತಾ|| ೨೨-೭-೩೪. ಮುರಿಗೆಯ್ಯ ಜಂಗಿನ,

ಶ್ರೀಮದ್ವೀರಶೈವ ಮಹಾಸಭೆಯ ಮಧ್ಯವರ್ತಿ ಕಮಿಟಿಯ ವಿಜಾಪುರ ಜಿಲ್ಲೆಯ ಸಭಾಸದರು.

---

—ಕೊಲ್ಹಾಪುರದಲ್ಲಿ ಮಸೀದಿಯ ಮುಂದೆ ವಾದ್ಯ ಬಾರಿಸುವ ಕಾರಣವಾಗಿ ಹಿಂದು ಮುಸಲ್ಮಾನರಲ್ಲಿ ಗಲಭೆಯುಂಟಾಗಿದೆ. ಕೊಲ್ಹಾಪುರದಲ್ಲಿ ವಾದ್ಯ ವಾದನಕ್ಕೆ ಇಲ್ಲಿಯವರೆಗೆ ಅಡ್ಡಿ ಇದ್ದಿಲ್ಲ. ಆದರೆ ಈಗ ಹೊರಗಿನಿಂದ ಬಂದ ಮುಸಲ್ಮಾನ ಚಟುವಟಿಗೆಗಾರರು ಹೀಗೆ ಮಾಡಿದ್ದಾರಂತೆ.

—ತುಳಜಾಪುರ ಭವಾನಿ ದೇವಿಯ ಕೆಲವು ಆಭರಣಗಳನ್ನು ದೇವಾಲಯದ ಕೃಷ್ಣಾ ಜವಾದಾರನೆಂಬವನು ಕದ್ದನೆಂದು ಬಂಧಿಸಿದ್ದಾರೆ.

## ಧರ್ಮಾಂಧರ ರೂಢಿಯ ಶೂಲ!

ಜಗತ್ತಿನಲ್ಲಿ ಈ ವರೆಗೆ ಅಸಂಖ್ಯ ಜನರು ಅನೇಕ ಅಪರಾಧಗಳನ್ನು ಮಾಡಿ ಶೂಲವನ್ನೇರಿ ಘೋರ ಹಿಂಸೆಗೊಳಗಾಗಿರಬಹುದು. ಆದರೆ ಆ ಎಲ್ಲ ಅಪರಾಧಗಳಿಗಿಂತ ಧರ್ಮದ ತಪ್ಪು ತಿಳುವಳಿಕೆಯಿಂದ ಕುರುಡರಾಗಿ ರೂಢಿಯ ಶೂಲವನ್ನೇರಿ ಭಯಂಕರ ಯಾತನೆಗೊಳಗಾದವರೇ ಅತ್ಯಧಿಕ. ಬೇರೆ ಶೂಲಗಳಂತೆ ರೂಢಿಯ ಶೂಲವು ಒಮ್ಮೆಲೇ ಪ್ರಾಣವನ್ನು ಹರಣ ಮಾಡುವುದಿಲ್ಲ. ದಿನೇ ದಿನೇ ನಾನಾ ಯಾತನೆಗಳ ಮೂಲಕ ಪ್ರಾಣವನ್ನು ಹೀರುತ್ತದೆ. ಆದಕಾರಣ ಬೇರೆ ಶೂಲಗಳಿಗಿಂತ ಈ ರೂಢಿಯ ಶೂಲವು ಹೆಚ್ಚು ಘೋರವಾದುದು.

ಈಗಿನ ತರುಣರು ಧರ್ಮಲಂಡರೆಂದು ಮುಪ್ಪಿನ ಧರ್ಮ ಮಾರ್ತಾಂಡರು ಹೇಳುವುದುಂಟು. ಆದರೆ ತಾವು ಧರ್ಮಾಂಧರಾಗಿ ರೂಢಿಯ ಶೂಲವನ್ನೇರಿದ್ದೇವೆಂಬುದನ್ನು ಮಾತ್ರ ಇವರರಿಯರು. ಧರ್ಮವು ಕರ್ಮಕಾಂಡದಲ್ಲಿಯೇ ಇದೆಯೆಂದೂ ಅದು ಮಡಿಯನ್ನು ಉಟ್ಟುಕೊಂಡು ಮೈಲಿಗೆಯ ಭಯದಿಂದ ಜನಮಧ್ಯದಲ್ಲಿ ಹೋಗುವುದಿಲ್ಲವೆಂದೂ ಇವರು ತಿಳಿದಿದ್ದಾರೆ. ಅಸತ್ಯ, ಅನ್ಯಾಯ, ವ್ಯಭಿಚಾರಾದಿ ಅನೀತಿಯ ಕಾರ್ಯಗಳನ್ನು ಕರ್ಮಕಾಂಡದ ಮಡಿಯಲ್ಲಿ ಮುಚ್ಚಿಕೊಂಡು ತಾವೇ ಧರ್ಮಾತ್ಮರೆಂದು ಇವರು ತಿಳಿದಿದ್ದಾರೆ.

ಈಗಿನ ತರುಣರು ರೂಢಿಯ ಶೂಲವನ್ನು ಕೀಳಲುಪಕ್ರಮಿಸಿದ್ದಾರೆ. ನೀತಿಯೇ ಇವರ ಧರ್ಮದ ನೆಲಗಟ್ಟು. ಮಡಿಮೈಲಿಗೆಗಳೆಂಬ ಕರ್ಮಕಾಂಡದ ಆಡಂಬರವು ಇವರಲ್ಲಿಲ್ಲ. ಆಧುನಿಕ ವಿಚಾರಗಳಿಂದಲೂ, ವಿಜ್ಞಾನದ ಶೋಧದಿಂದಲೂ ಇವರ ದೃಷ್ಟಿ ತೆರೆದಿದೆ. ಧರ್ಮಾಂಧರನ್ನು ಇವರು ಕಣ್ಣುಮುಚ್ಚಿಕೊಂಡು ಹಿಂಬಾಲಿಸುವದಿಲ್ಲ. ಆದುದರಿಂದ ಇವರು ಧರ್ಮಲಂಡರೆಂದು ಹಳಬರು ತಿಳಿಯುತ್ತಾರೆ. ತರುಣರೇ ನೀತಿಯ ಬಲದಿಂದ ರೂಢಿಯ ಶೂಲವನ್ನು ಕಿತ್ತು ನಮ್ಮ ಹಿರಿಯರ ಹಿಂಸೆಯನ್ನು ಕಳೆಯೋಣ ಬನ್ನಿರಿ.

## ಚೀನಿ ತರುಣರ ಸಾಹಸ.

ಹಿಂದುಸ್ಥಾನದಂತೆ ಚೀನದೇಶವೂ ಬಹು ವಿಸ್ತಾರವಾದುದೂ ಪ್ರಾಚೀನವಾದುದೂ ಆಗಿದೆ. ಆದರೆ ಪರತಂತ್ರ ಪಾಶದಲ್ಲಿ ಮಾತ್ರ ಸಿಲುಕಿಲ್ಲ. ಚೀನದೇಶದಲ್ಲಿ ಕೂಡಾ ಹಿಂದುಸ್ಥಾನದಂತೆಯೇ ಧಾರ್ಮಿಕ ಮೂಢ ಕಲ್ಪನೆಗಳೂ ನಡತೆಗಳೂ ವಿಶೇಷವಾಗಿವೆ. ಆದುದರಿಂದಲೇ ಅದು ಜಪಾನ ದೇಶಕ್ಕೆ ಅಂಜಿಕೊಂಡಿರಬೇಕಾಗಿದೆ. ಅದಕ್ಕೆ ಆತ್ಮಗೌರವ ಶಕ್ತಿ ಸಾಹಸಗಳ ಅರುವೇ ಇಲ್ಲ.

ಚೀನಿಜನಗಳ ಧಾರ್ಮಿಕ ಕರ್ಮಗಳಲ್ಲಿ ಲಗ್ನ ಮತ್ತು ಅಂತ್ಯವಿಧಿ ಇವೆರಡು ಬಹು ಮುಖ್ಯವಾದವುಗಳಾಗಿವೆ. ಇವೆರಡು ಕಾರ್ಯಗಳಿಗಾಗಿ ವಿಪರೀತ ದುಂದುಗಾರಿಕೆಯಿಂದ ಹಣವನ್ನು ಸೂರೆಮಾಡುತ್ತಾರೆ. ಲಗ್ನ ಮತ್ತು ಅಂತ್ಯವಿಧಿಗಳಿಗಾಗಿ ಹೊಲಮನೆಗಳನ್ನು ಮಾರಿಕೊಂಡು ಇಲ್ಲವೆ ಸಾಲಗಾರರಾಗಿ ಹಣವನ್ನು ವೆಚ್ಚ ಮಾಡುತ್ತಾರೆ.

ಈ ಮೂಢ ಕಲ್ಪನೆಯಿಂದ ಚೀನಿ ಜನಾಂಗವು ದಿನೇ ದಿನೇ ಆರ್ಥಿಕ ದುರವಸ್ಥೆಗೀಡಾಗುತ್ತಲಿದೆ. ಈ ಶೋಚನೀಯ ದುರವಸ್ಥೆಯನ್ನು ನಿವಾರಣೆಮಾಡಬೇಕೆಂದು ಚೀನಿ ತರುಣರು ಒಂದು ಸಂಘವನ್ನು ಸ್ಥಾಪಿಸಿ ಆ ಮೂಲಕ ಜನರಲ್ಲಿ ವಿಚಾರಕ್ರಾಂತಿಯನ್ನುಂಟುಮಾಡುತ್ತಿದ್ದಾರೆ. ಚೀನಿ ತರುಣರು ೨೦ ವರುಷಗಳಿಂತರವೇ ೧೮ ವರುಷಗಳ ಕನ್ಯೆಯನ್ನು ಲಗ್ನವಾಗಬೇಕು, ಲಗ್ನದಲ್ಲಿ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಬೇಕು. ವಾದ್ಯ ಮದ್ದು ಸುಡುವುದು ಮೊದಲಾದ ದುಂದುಗಾರಿಕೆಗಳನ್ನು ಬಿಡಬೇಕು. ಬಳಗದ ಊಟ ಮೊದಲಾದ ಅನಾವಶ್ಯಕವಾದ ವೆಚ್ಚಗಳನ್ನು ನಿಲ್ಲಿಸಬೇಕು. ಪುರೋಹಿತರೇ ಮೊದಲಾದ ಆವಶ್ಯಕವಿದ್ದವರ ವಿನಾ ಇನ್ನಿತರ ತಿರುಪಿ ಬೇಡುವವರಾರೂ ಬರದಂತೆ ಮಾಡಬೇಕು.

ಹಿಂದುಸ್ಥಾನದಲ್ಲಿಯೂ ಇಂತಹ ತರುಣರ ಆವಶ್ಯಕವಿದೆ. ಲಗ್ನ ಮೊದಲಾದವುಗಳಲ್ಲಾಗುವ ದುಂದು ವೆಚ್ಚಗಳನ್ನು ನಿಲ್ಲಿಸಬೇಕು. ಈ ವಿಷಯದಲ್ಲಿ ಕ್ಷಾತ್ರ ಜಗದ್ಗುರುಗಳ ಉಪದೇಶವು ಅತ್ಯಂತ ಆಚರಣೀಯವಾದುದು. ಮೂರು ರೂಪಾಯಿಗಳಲ್ಲಿಯೇ ವಿವಾಹವನ್ನು ಮಾಡಬಹುದು. ಶಾಸ್ತ್ರೋಕ್ತವಾದ ನಿಧಿಗಳಿಗೆ ಇಷ್ಟೇ ವೆಚ್ಚವು ಸಾಕು.

ಈ ದೇಶದ ರೈತರು ಈಗಲೇ ಹಣ್ಣಾಗಿದ್ದಾರೆ. ಹಿಂದೆ ಗಳಿಸಿದ ಹಣವನ್ನೆಲ್ಲ ಲಗ್ನಾದಿ ಕಾರ್ಯಗಳಲ್ಲಿ ದುಂದುಗಾರಿಕೆಯಿಂದ ವೆಚ್ಚ ಮಾಡಿ ಬರಿಗೈಯವರಾಗಿದ್ದಾರೆ. ಈಗಲಾದರೂ ದುಂದುಗಾರಿಕೆಯನ್ನು ಬಿಡುವ ಬುದ್ಧಿ ಬಂದಿರಬಹುದು. ವಿವಾಹವ್ಯಯದ ಅಂಕುರಾರ್ಪಣೆಗೆ ಇದೇ ಸುಸಮಯ.

## ಜಪಾನ ದೇಶದ ಪ್ರಾಬಲ್ಯ.

ಜಗತ್ತಿನ ಸುಧಾರಿಸಿದ ರಾಷ್ಟ್ರಗಳಲ್ಲಿ ಜಪಾನ ದೇಶವು ಒಂದು ಮುಖ್ಯವಾದುದಾಗಿದೆ. ಏಶಿಯಾ ಖಂಡದ ಭವಿತವ್ಯವನ್ನು ತನ್ನ ಕಡೆಗೇನೇ ಇದೆಯೆಂಬ ಹಮ್ಮು ಜಪಾನ ದೇಶಕ್ಕೆ ಈಗ ಬಂದಿದೆ. ಆದುದರಿಂದ ಒಂಬತ್ತು ರಾಷ್ಟ್ರಗಳ ತೀರ್ಮಾನವನ್ನು ಕೂಡಾ ನಿರಾಕರಿಸಿ ಚೀನ ದೇಶದ ಮಂಚುರಿಯಾ ಭಾಗವನ್ನು ಸೆಳೆದುಕೊಂಡು ಅದನ್ನೊಂದು ಪ್ರತ್ಯೇಕವಾದ ದೇಶವನ್ನೇ ಮಾಡಿ ರಾಜವಂಶದ ಒಂದು ವ್ಯಕ್ತಿಗೆ ರಾಜಪಟ್ಟವನ್ನು ಕಟ್ಟಿತು.

ಈ ಪ್ರಕಾರ ಚೀನ ದೇಶದ ನೆರೆಯಲ್ಲಿಯೇ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದರೂ ಅದು ಮಂಚುರಿಯಾ ಭಾಗದ ಜನತೆಯವಾಗಿದೆಯೇ ವಿನಾ ಜಪಾನದ ಏಳಿಗೆಗಲ್ಲವಂತೆ! ಮಂಚುರಿಯಾ ಭಾಗವು ಶಿಕ್ಷಣ, ಪ್ರವಾಸ ಸೌಲಭ್ಯ, ಯುದ್ಧವಿದ್ಯೆ ಮೊದಲಾದ ಆಧುನಿಕ ಎಲ್ಲ ಸುಧಾರಣೆಗಳಲ್ಲಿಯೂ ಮುಂದರಿಯುವಂತೆ ಜಪಾನ ದೇಶವು ತನ್ನ ಧನ ಮತ್ತು ಜನ ಬಲಗಳಿಂದ ಈಗ ವಿಶೇಷವಾಗಿ ಪ್ರಯತ್ನಿಸಲಾರಂಭಿಸಿದೆ. ಮಾಂಚುರಿಯಾ ಜನಗಳ ಸುಧಾರಣೆಗಾಗಿ ಪ್ರತಿ ವರುಷ ೧೫ ಕೋಟಿ ಯೆನ್ ಎಂಬ ನಾಣ್ಯವನ್ನು ವೆಚ್ಚಮಾಡಲು ನಿರ್ಧರಿಸಿದೆ.

ಈ ಪ್ರಕಾರ ಮಾಂಚುರಿಯಾ ಭಾಗವನ್ನು ಅಭಿವೃದ್ಧಿಗೊಳಿಸುವುದೆಂದರೆ ಜಪಾನ ದೇಶವು ತನ್ನ ಪ್ರಾಬಲ್ಯವನ್ನು ಅಲ್ಲಿಯವರೆಗೂ ಹೆಚ್ಚಿಸಿಕೊಂಡಂತೆಯೇ ಸರಿ. ಇದರಿಂದ ಚೀನ ಮತ್ತು ರಶಿಯಾದೇಶಗಳು ಭಯಪಟ್ಟಿವೆ. ಜಪಾನದ ಆಕ್ರಮಣವು ನಮ್ಮ ಮೇಲೆ ಯಾವಾಗ ಬರುವುದೋ ಎಂದು ಚಿಂತಿಸುತ್ತ ಪ್ರತೀಕಾರಣ ಸಿದ್ಧತೆಯಲ್ಲಿವೆ. ಈ ಪ್ರಯತ್ನಗಳು ಏಶಿಯಾಖಂಡದ ಮುಂದಣ ಭೀಕರ ಯುದ್ಧದ ಲಕ್ಷಣಗಳೇ ಆಗಿವೆ

## ವಿನಂತಿ.

ಶ್ರೀಮದ್ವೀರಶೈವ ಮಹಾಸಭೆಯ ಮಧ್ಯವರ್ತೀ ಕಮಿಟಿಯ ಸಭಾಸದರ ಸಭೆಯನ್ನು ಬಾಗಲಕೋಟೆಯಲ್ಲಿ ತಾ|| ೨೬-೨೭ ಆಗಷ್ಟ ೧೯೩೪ ಈ ದಿವಸಗಳಲ್ಲಿ ನೆರಿಸುವದು ಗೊತ್ತಾಗಿದ್ದು ಆ ಕಾಲಕ್ಕೆ ತಾವು ಅವಶ್ಯವಾಗಿ ಬರಬೇಕೆಂದು ನಮ್ಮ ಸವಿನಯ ವಿನಂತಿ ಅದೆ. ಆಗ ಸಮಾಜಕ್ಕೆ ಸಂಬಂಧಿಸಿದ ಅನೇಕ ಮಹತ್ವದ ವಿಷಯಗಳು ಚರ್ಚಿಸಲ್ಪಡುವವು. ಚರ್ಚಿಸತಕ್ಕ ವಿಷಯಗಳನ್ನು ಸೂಚಿಸುವದಿದ್ದರೆ ಅವುಗಳನ್ನು ತಾವು ೧೫ನೇ ಆಗಷ್ಟದ ಒಳಗಾಗಿ ನಮ್ಮ ಕಡೆಗೆ ಕಳಿಸಬೇಕೆಂದು ವಿನಂತಿ ಇದೆ.

ಮೊದಲನೆಯ ದಿವಸ ಸಭೆಯು ಬಾಗಲಕೋಟೆಯಲ್ಲಿ ವೀರ ಶೈವ ಸಂಸ್ಕೃತ ಪಾಠಶಾಲೆಯಲ್ಲಿ ಸಂಜೆಯ ೪|| ಗಂಟೆಗೆ ಪ್ರಾರಂಭವಾಗುವದು.

ತಾವು ಬಾಗಲಕೋಟೆಗೆ ಬರುವ ದಿವಸವನ್ನು ಶ್ರೀ|| ಮೂ|| ಮುರಿಗೆಯ್ಯ ಜಂಗಿನ ಮು. ಬಾಗಲಕೋಟೆ ಇವರಿಗೆ ತಿಳಿಸಬೇಕೆಂದು ವಿನಂತಿ ಇದೆ.

ಪಿ. ಜಿ. ಹಳಕಟ್ಟಿ,
ಜೇವರ್ಜನ್ನ,
ಶ್ರೀಮದ್ವೀರಶೈವ ಮಹಾಸಭೆಯ
ಮಧ್ಯವರ್ತೀ ಕಮಿಟಿ.

ವಿಜಾಪುರ,
ತಾ|| ೨೨-೭-೩೪.




ದಿ ಸ್ವರಾಜ್ಯ

# ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ.)

## ಬೇಕಾಗಿದ್ದಾರೆ! ತಾಲೂಕ, ಜಿಲ್ಲಾ ಆರ್ಗನಾಯಿಝರರು ಪಗಾರದ ಮೇಲೆ ಬೇಕಾಗಿದ್ದಾರೆ!!

ಸ್ವರಾಜ್ಯ ಕಂಪನಿಯ ನಿಮಾ ಕಾರ್ಯವು ಪ್ರಾರಂಭವಾಗಿ ಇಂದಿಗೆ ೬ ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿ ನಿಮಾ ಪ್ರಪಂಚದಲ್ಲಿಯೂ. ಜನತೆಯಲ್ಲಿಯೂ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿರುವದೆಂಬುದು ಇದರ ಪ್ರತಿ ತಿಂಗಳ ಬೆಳವಣಿಗೆಯ ಮೇಲಿಂದ ತಾನೇ ಸಿದ್ಧವಾಗುವುದು. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇರುವದು.

೧೯೩೪ನೆಯ ಜಾನೇವರಿಯಿಂದ ಮಾರ್ಚ ೩೧ರವರೆಗೆ ೪೬೦೦೦ ರೂ.
" ಎಪ್ರಿಲ್‌ದಿಂದ ಜೂನ ೩೦ ರವರೆಗೆ ೧,೧೩೦೦೦ ರೂ.
ಆಂತೂ ೬ ತಿಂಗಳಲ್ಲಿ ೧,೫೯,೦೦೦ ರೂ.

ಇಷ್ಟು ಬೆಲೆ ಬಾಳುವ ವಾಲಸಿಗಳು ಜಾರಿಯಲ್ಲಿವೆ. ಸಮರ್ಥರಾದ ಏಜಂಟರೂ, ಆರ್ಗನಾಯಿಝರರೂ ಕಮಿಶನ್ ಮತ್ತು ಪಗಾರದ ಮೇಲೆ ಕೆಲಸ ಮಾಡಲು ಬೇಕಾಗಿದ್ದಾರೆ—

| ಆರ್ಗನಾಯಿಝರರ ಪಗಾರ ಸ್ಕೇಲು. | ಪ್ರತಿ ತಿಂಗಳ ಪಗಾರ. | ಪ್ರತಿ ತಿಂಗಳ ಅಲಾವನ್ಸ. |
|---|---|---|
| ಜಿಲ್ಲಾ ಆರ್ಗನಾಯಿಝರ | ೫೦ ರಿಂದ ೧೨೦ ರೂ. | ೨೫ ರೂ. |
| ತಾಲೂಕ ಆರ್ಗನಾಯಿಝರ | ೨೫ ರಿಂದ ೫೦ ರೂ. | ೧೦ ರೂ. |

ಏಜಂಟರಿಗೆ ಭರಪೂರ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿಯ ಬಗ್ಗೆ ಕಂಪನಿಯ ಕೂಡ ಪತ್ರ ವ್ಯವಹಾರ ಮಾಡಿರಿ.

ಮ್ಯಾನೇಜಿಂಗ ಏಜಂಟ್ಸ.

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್|
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ||

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಲ್ಪತರುವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲೆ ಡಬ್ಬಿಗೆ ೧-೮-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಕೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಆಂಪರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಆರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಷಿನ ಹುರುಕಿನ ಔಷಧನನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾಃ—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ನುಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗೆ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸಃ- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮತಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತೀತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ವಿಪರೀತವಾಗಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಪಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯ ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧವೂಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ನೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ,** ಪೋಸ್ಟ— **ಹುಮನಾಬಾದ ಜಿ. ಗುಲ್‌ಬರ್ಗಾ.**

---

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು, ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಅತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ,

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ವಿಂಧಿ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ಸುಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು ಆಗ ನಿಮಗೆ ಖಂಡಿತವಾಗಿಯೂ ಆತ್ಯಾಶ್ಚರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ ಪ್ರಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೫೫-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ನಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಸೈಪಾರ್ಯ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

**" ಕರ್ಚ್ಯೂ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕೆಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ವಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಆಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣಾ ಕುಪಸ್ತ,**
**ಬಾಗಲಕೋಟೆ.**

**ಶ್ರೀರಾಮ ವೀವ್ವಿಂಗ್ ಮಿಲ್ಸ್ ಇಚಲಕರಂಜಿ.**

( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟನಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧೫ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಕಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮಶಿಚೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಜೇಳಿನ ನಾಶ— | ೧೧ | ,, |
| ೧೨ ತಗಣಿ ಶತ್ರು ಬಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. **ಹಂಚಿಲಿ**
**ಜಿ. ವಿಜಾಪುರ.**



ಈ ಪತ್ರಿಕೆಯು ಅಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಅಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B 289

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕನಿರೋಧಿ| ಚರಣನಾರಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ ವಚನ ॥ ಮಡಿವಾಳಯ್ಯ ಬಸವಣ್ಣನವರು

ಸಂಪಾದಕರು:-
ಆ. ಹರ್ಡೀಕರ ನುಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ- ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೨೦ ನೆಯ ಅಗಸ್ಟ ೧೯೩೩. | ಸಂಚಿಕೆ ೧

ಜನಸೇವೆಯೇ ದೇವರ ಸೇವೆ

ಗಾಂಧೀಜಿಯವರ ವಾದ ಉಪವಾಸ

ವಿಜಯಪ್ರದವಾಯಿತು.

ಈ ವಾರದ
ಉಪದೇಶಸೆಯಲ್ಲಿರುವ
ಕಾರ್ಯಕರ್ತರು
ಪರಿಶುದ್ಧರಾದ ವಿನಾ
ಅಸ್ಪೃಶ್ಯತೆ
ನಿವಾರಣೆಯಾಗುವದಿಲ್ಲ
ಎಂದು
ಮನಗಂಡೆನು

ಈ ವಾರದ
ಉಪವಾಸ ವ್ರತವು
ನನಗೆ
ಅತ್ಯಧಿಕವಾದ
ಆತ್ಮಿಕ
ಪ್ರಯೋಜನವನ್ನುಂಟು
ಮಾಡಿತು.

ಗಾಂಧೀಜಿಯವರು ಈ ತಿಂಗಳ ತಾ. ೬ ರಿಂದ ೧೪ ರವರೆಗೆ ವರ್ಧಾವೆಲ್ಲಿ
ಉಪವಾಸ ವ್ರತವನ್ನಾಚರಿಸಿದರು

ದೇವನೇ ದೇವಾಲಯ.

SANGAM CLOTH STORES
Prop: M. S Hundeka & Sons,
P.O: TERDAL - 587115

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ !

ಠ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.

ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟು.
ರವಿವಾರಪೇಟೆ ಬೆಳಗಾಂವ.

ಬ್ಯಾಂಜ್ ಆಫೀಸ್:-
ಅಬಿಡ್ದಬಿಲ್ಡಿಂಗ್
ಹೈದ್ರಾಬಾದ ( ಡೆಕ್ಕ )

## ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

**ರಾಮಜಿ**— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

**ಶೆಟ್ಟರು**— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

**ರಾಮಜಿ**—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ವಾಪ ಆ ತಿಜೋರಿ ಏನುಮಾಡೀತು?

**ಶೆಟ್ಟರು**—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

**ರಾಮಜಿ**—ಹಾಗಾದರೆ ಹೀಗ್ಯಾಕಾಯಿತು?

**ಶೆಟ್ಟರು**—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

**ರಾಮಜಿ**—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಹುಬ್ಬಳಿಗಾದರಿಪಾ, ಇದಕ ನ್ಹೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಈಗ ಹೆತ್ತ ಹೆನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

**ಶೆಟ್ಟರು**—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.



ದೇವೀಪುರಾಣ ಬೆಲೆ ರೂ. ೪-೦-೦ (ರೋಣದ ಪ್ರತಿ)

# ಚಿತ್ರ) ವೀರಶೈವ ಕರದರ್ಪಣವು. (೫೦೦ ಚಿತ್ರ

ಈ ಪುಸ್ತಕದಲ್ಲಿ ವೀರಶೈವ ಮತತತ್ವ ನಿರೂಪಣೆ, ವೀರಶೈವ ಧರ್ಮದ ವಿಶಾಲತ್ವ, ವೀರಶೈವ ಬ್ರಾಹ್ಮಣ್ಯ ಸಿದ್ಧಾಂತ, ವೀರಶೈವ ಪಂಚಸೀರಗಳು, ಪಂಚಸೀರಗಳು, ಶ್ರೀ ಬಸವೇಶ್ವರ, ಮಹಾನುಭಾವರಾದ ಶ್ರೀ ಬಸವಣ್ಣನವರು ಮಹಿಮಾಶಾಲಿಯಾದ ಬಸವೇಶ್ವರರು, ಬಸವಜಯಂತಿ, ಜಗದ್ಗುರು ಜಯದೇವ ಮುರುಘಾರಾಜೇಂದ್ರ ಸ್ವಾಮಿಗಳು, ಜಗದ್ಗುರು ಜಗದಾಚಾರ್ಯಸ್ವಾಮಿ ವಿರುಪಾಕ್ಷ ಒಡೆಯರವರು, ಅ. ಭಾ ವೀರಶೈವ ಮಹಾಸಭೆಯು, ವೀರಶೈವ ಮಹನೀಯರು, ವೀರಶೈವ ಸಂಸ್ಥೆಗಳು ಮೊದಲಾದ ವಿಷಯ ಸಂಗ್ರಹವಿರುವುದರಿಂದ ಇದನ್ನು ಸರ್ವರೂ ಸಂಗ್ರಹಿಸತಕ್ಕದ್ದು. ಬೆಲೆ ರೂ. ೧-೪-೦.

ಹಾನಗಲ್ ಕು. ಸ್ವಾಮಿ ಸ್ಮಾರಕಚಂದ್ರಿಕೆ ೧ ರೂ ವಿದ್ಯಾಭಾಂಡಾರ (೧-೩ ಭಾಗ) ೨-೦-೦ ಗುಪ್ತ ಪ್ರಶ್ನೆ ಸಿದ್ಧಾಂಜನ ೧-೦-೦ ಆರೂಢ ಪ್ರಶ್ನ ಚಂದ್ರಿಕೆ ೨-೦-೦ ಸಂಪೂರ್ಣ ಲಗ್ನವಿಧಿ ೦-೧೦-೦.

ಸೂಚನೆ:— ಮೇಲಿನ ಒಂದಾದರೂ ಪುಸ್ತಕವನ್ನು ತರಿಸಿದರೆ ೧೮೫೬ನೇ ಭಾವನಾಮ ಸಂವತ್ಸರದ ಶ್ರೀ ಹೊಲಿ (ಗದಗ) ಸಿದ್ಧಾಂತ ಪಂಚಾಂಗವನ್ನು ಉಚಿತ ಕಳಿಸುವೆವು.

ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. ಆಲಮಟ್ಟಿ ಅಗಸ್ಟ ತಾರೀಖು ೨೦ ನೆಯ ಸೋಮವಾರ ಸಂಚಿಕೆ ೧.


# ಪಂ. ಜವಾಹರಲಾಲರ ಬಿಡುಗಡೆ.

## ಪಂ. ಮಾಲವೀಜಿಯವರ ಪಕ್ಷ. ಬ್ಯಾ. ಜಿನ್ನಾ? ಗವ್ಹರ್ನರ ಜಿನ್ನಾ?

**ಪಂಡಿತ ಜವಾಹರಲಾಲ ನೆಹರು**

ಪಂಡಿತ ಜವಾಹರಲಾಲ ನೆಹರುರ ವರ ಧರ್ಮಪತ್ನಿಯವರಾದ ಸೌ|| ಕಮಲಾದೇವಿಯವರು ಜ್ವರದಿಂದ ತುಂಬಾ ಅಸ್ವಸ್ಥರಾದ ಕಾರಣ ಇವರನ್ನು ನೋಡಲು ಕಳೆದ ತಾ. ೧೫ ನೆಯ ರಾತ್ರಿ ಪಂ. ಜವಾಹರಲಾಲರನ್ನು ಸರಕಾರದವರು ಬಿಟ್ಟುದುದು ತುಂಬಾ ಸಂತೋಷಕರವಾದ ಸಂಗತಿಯು.

ತಮ್ಮ ಪತಿಯನ್ನು ನೋಡಿದನಂತರ ಸೌ|| ಕಮಲಾದೇವಿಯವರಿಗೆ ತುಂಬಾ ಸಮಾಧಾನವಾಯಿತು. ಪಂಡಿತಜಿಯವರು ಯಾವ ಕಟ್ಟುವಾಡುಗಳಿಗೂ ಒಳಪಡದೆ ಬಿಡುಗಡೆ ಹೊಂದಿದುದರಿಂದ ದೇಶದ ರಾಜಕೀಯ ಸ್ಥಿತಿಯ ವಿಷಯವಾಗಿ ಪ್ರಸ್ತಾಪಿಸಲು ಅಧಿಕಾರವುಳ್ಳವರಾಗಿದ್ದರೂ ತಮ್ಮ ಪತ್ನಿಯ ಚಿಂತಾಜನಕ ಸ್ಥಿತಿಯಲ್ಲಿ ಇವರ ಮನಸ್ಸು ವ್ಯಗ್ರವಾಗಿರುವದರಿಂದ ಬೇರೆ ಸಂಗತಿಗಳನ್ನು ಲಕ್ಷಿಸಿಲ್ಲ.

**ಪಂಡಿತ ಮಾಲವೀಜಿಯವರು.**

ಪಂಡಿತ ಮದನ ಮೋಹನ ಮಾಲವಿಯವರು ಆಧುನಿಕ ಭೀಷ್ಮಾಚಾರ್ಯರೆಂದು ಹೇಳಬಹುದು ರಾಷ್ಟ್ರೀಯ ಸಭೆಯ ಏಕನಿಷ್ಠ ರಾಷ್ಟ್ರಭಕ್ತರಲ್ಲಿ ಇವರಂತಹ ಯಜಮಾನರು ಈಗ ಬೇರೆ ಯಾರು ಇಲ್ಲವೇ ಇಲ್ಲ ಇಂತಹ ರಾಷ್ಟ್ರೀಯ ಸಭೆಯ ಪರಮ ಭಕ್ತರು ಈಗ ರಾಷ್ಟ್ರೀಯ ಸಭೆಯಿಂದ ಬೇರೆಯಾಗಿ ಮತ್ತೊಂದು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿದ್ದಾರೆ

ಈ ರಾಷ್ಟ್ರೀಯ ಪಕ್ಷದ ಕಾರ್ಯವು ಇದೇ ವಾರದಲ್ಲಿ ಕಲಕತ್ತೆಯಲ್ಲಿ ಪ್ರಾರಂಭವಾಗುವದರಿಂದ ಅಲ್ಲಿಗೆ ತಮ್ಮ ಸಹಕಾರಿಗಳೊಂದಿಗೆ ತೆರಳಿದರು.

ರಾಷ್ಟ್ರೀಯ ಸಭೆಯು ಮುಸಲ್ಮಾನರ ಪೆಚ್ಚಿಗೆಗಾಗಿ ಮನಸೋತುದರಿಂದ ಇವರು ರಾಷ್ಟ್ರೀಯ ಸಭೆಯನ್ನು ಬಿಡಬೇಕಾಯಿತು.

**ಬ್ಯಾರಿಸ್ಟರ್ ಜಿನ್ನಾರವರು.**

ರಾಷ್ಟ್ರೀಯ ಸಭೆ ಮತ್ತು ಸರಕಾರಗಳ ಹೋರಾಟದಲ್ಲಿ ಮುಸಲ್ಮಾನರ ಹಿತವನ್ನು ಮುಂದೆ ಚಾಚಿದ ಜಿನ್ನಾರವರು ಒಳ್ಳೆಯ ರಾಜಕಾರಣ ಪಟುಗಳು.

ಇವರು ಈಗ ಲಂಡನ್ನಿನಲ್ಲಿದ್ದು ಮುಸಲ್ಮಾನರ ಧೋರಣವನ್ನು ನಿರ್ಧರಿಸಲು ನಾ ಆಗಾಖಾನರೊಂಗಿಗೆ ಆಗಾಗ್ಗೆ ಸಂಭಾಷಿಸುತ್ತಿದ್ದಾರೆ. ಶುಭ್ರ ಪತ್ರಿಕೆಯ ವಿಷಯದಲ್ಲಿ ಮುಸಲ್ಮಾನರು ಅಸಮ್ಮತವನ್ನು ವ್ಯಕ್ತಗೊಳಿಸದೆ ಅನುಕೂಲಾಭಿಪ್ರಾಯವುಳ್ಳವರಾಗುವಂತೆ ಮಾಡಿದರೆ ಜಿನ್ನಾರವರು ಗವ್ಹರ್ನರ್ ಸಾಹೇಬರಾಗುವ ಸಂಭವವಿದೆಯೆಂದು ಲಂಡನ್ನಿನಲ್ಲಿ ಸುದ್ದಿ!

ಮುಸಲ್ಮಾನರು ಶುಭ್ರ ಪತ್ರಿಕೆಗೆ ವಿರೋಧಿಸಿದರೆ ಜಾತಿ ನಿರ್ಣಯವು ಈಗಿನ ರೀತಿಯಲ್ಲಿರುವ ಸಂಭವವಿಲ್ಲೆಂಬ ಸುದ್ದಿಯೂ ಲಂಡನ್ನಿನಲ್ಲಿದೆ!

# ವಿಚಾರ ತರಂಗ.

## ನೇಹಬಿಟ್ಟ ಜೀವಿಗಳ ಸಂಗಡ ಸಂಭಾಷಣೆ!

ಜೀವನು ಈ ಜಡದೇಹವನ್ನು ಬಿಟ್ಟ ನಂತರ ಸೂಕ್ಷ್ಮದೇಹ ವನ್ನು ಧರಿಸಿ ಕೆಲವು ಕಾಲ ಆಕಾಶದಲ್ಲಿರುತ್ತಾನೆಂದು ಬಹುಕಾಲ ದಿಂದಲೂ ಜನರು ತೀರ್ಮಾನಿಸಿಕೊಂಡಿದ್ದಾರೆ. ಅನೇಕ ಧರ್ಮಶಾಸ್ತ್ರ ಗಳು ಕೂಡಾ ಜನರ ಈ ನಂಬಿಕೆಯನ್ನು ದೃಢಗೊಳಿಸುತ್ತಲಿವೆ.

ಇತ್ತೀಚಿನ ವಿಜ್ಞಾನ ವಾಸ್ತವಜ್ಞರೂ ಈ ವಿಷಯದಲ್ಲಿ ಶೋಧ ಮಾಡುತ್ತಿದ್ದಾರೆ. ಸರ್. ಆಲಿವರ್ ಲಾಜ್ ಮೊದಲಾದ ಪರ ಮೋಕ್ಷ ವಿದ್ಯಾನಿಪುಣರು ದೇಹಬಿಟ್ಟ ಜೀವಿಗಳ ಸಂಗಡ ಸಂಭಾ ಷಿಸುವ ಸಾಧನೆಗಳನ್ನೂ ಕಂಡು ಹಿಡಿದಿದ್ದಾರೆ. ಪರಲೋಕ ವಿದ್ಯಾ ವಿಷಯದಲ್ಲಿ ಶ್ರೀ. ಋಷಿ ಎಂಬುವವರು ತುಂಬಾ ಬಲ್ಲವರು. ಅವರು ಮುಂಬೈ ಗಿರಗಾಂವ ಮಾರ್ಗದ ಖಟಾವಾ ಭವನದಲ್ಲಿ ಪರಲೋಕ ವಿದ್ಯಾಪ್ರಸಾರದ ಒಂದು ಸಂಸ್ಥೆಯನ್ನು ಸ್ಥಾಪಿಸಿ ದೇಹ ಬಿಟ್ಟ ಜೀವಿಗಳ ಸಂಗಡ ಸಂಭಾಷಿಸುವ ಪ್ರಯೋಗವನ್ನು ನಡೆಸುತ್ತಿದ್ದಾರೆ.

ಮೈಸೂರು ಭಾಗದಲ್ಲಿ ಕೂಡಾ ಶ್ರೀ ಋಷಿ ಇವರು ಬಂದು ತಮ್ಮ ಪರಲೋಕ ವಿದ್ಯೆಯ ಸಂಗತಿಗಳನ್ನು ವ್ಯಾಖ್ಯಾನಗಳ ಮೂಲಕ ತಿಳಿಸಿದ್ದಾರೆ. ಮುಂಬೈಯಲ್ಲಿ ಇವರ ಪ್ರಯೋಗ ಶಾಲೆಗೆ ಹೋಗಿ ಈ ವಿಷಯದಲ್ಲಿರುವ ಸಂಶಯಗಳನ್ನು ನಿವಾರಣೆ ಮಾಡಿ ಕೊಳ್ಳಬಹುದು. "ಪ್ಲಾಂಚೆಟ್" ಅಥವಾ ಪ್ರಯೋಗದ ಒಂದು "ಟೀಪಲ್" ಮೇಲೆ ಹಸ್ತವನ್ನಿಟ್ಟು ನಾವು ಆಪೇಕ್ಷಿಸುವ ಜೀವ ನನ್ನು ಕರೆದದ್ದಾದರೆ ಆ ಆತ್ಮವು ಬಂದು ನಮ್ಮಲ್ಲಿ ಗತಿಯನ್ನುಂಟು ಮಾಡಿ ನಮ್ಮ ಪ್ರಶ್ನೆಗೆ ಉತ್ತರವನ್ನು ನಮ್ಮ ಹಸ್ತದಿಂದ ಆ ಟೇಬಲ್ ಮೇಲೆ ಬರೆಸುತ್ತದಂತೆ ಈ ಪ್ರಕಾರ ಅನೇಕರು ಮೃತಜೀವಿಗಳ ಸಂಗಡ ಸಂಭಾಷಿಸಿದ್ದಾರೆ. ಶ್ರೀ. ಮಂಡಲೀಕ ಎಂಬುವವರು ೧೭ ವರುಷಗಳ ಹಿಂದೆ ಮೃತರಾದ ತಮ್ಮ ತಂದೆಯ ಸಂಗಡ ಮತ್ತು ಪತ್ನಿ ಪುತ್ರರ ಸಂಗಡ ಮಾತನಾಡಿದುದನ್ನು ಪ್ರಕಟ ಮಾಡಿದ್ದಾರೆ. ಈ ವಿಷಯದಲ್ಲಿ ಸಂದೇಹವುಳ್ಳವರು ಮುಂಬೈಯಲ್ಲಿ ಪ್ರತ್ಯಕ್ಷ ಅನುಭವ ಹೊಂದಬೇಕು.

ಜೀವನು ಈ ದೇಹ ಬಿಟ್ಟ ನಂತರ ಕೆಲವು ಕಾಲವಾದರೂ ಸೂಕ್ಷ್ಮ ದೇಹದಿಂದಿರುವುದು ಶಕ್ಯವಿದೆ. ಆದರೆ ಅದರ ಅಸ್ತಿತ್ವ ವನ್ನು ಈ ಪ್ರಕಾರ ಶಾಸ್ತ್ರೀಯ ದೃಷ್ಟಿಯಿಂದ ನಿರ್ಧರಿಸುವುದು ಅತ್ಯಂತ ಮಹತ್ವವಾದುದು ಮತ್ತು ಮರಣೋತ್ತರದ ವಿಷಯದಲ್ಲಿ ದೃಢ ವಿಶ್ವಾಸವನ್ನು ಹುಟ್ಟಿಸುವುದು ಆಗಿದೆ.

## ಜರ್ಮನಿಯಲ್ಲಿ ರಾಜ್ಯ ಕ್ರಾಂತಿಯೆ?

ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಜರ್ಮನಿಯು ಒಂದಾ ಗಿದೆ. ಜರ್ಮನಿಯ ಅಶಾಂತತೆಯು ಜಗತ್ತಿನ ಅಶಾಂತತೆಗೆ ಕಲ್ಪಾದರೂ ಕಾರಣವಾಗದಿರಲಾರದು! ಜರ್ಮನಿಯು ಒಳ ಜಗಳದಿಂದ ಬೇಯುತ್ತಲಿದೆ. ಈ ತಿಂಗಳ ಆದಿಯಲ್ಲಿ ಜರುಗಿದ ಅಮಾನುಷ ಹತ್ಯವು ಮುಂದಣ ಘೋರ ಕ್ರಾಂತಿಯನ್ನು ನಿಲ್ಲಿಸು ವುದಾಗಿದ್ದಿತೆಂಬುದು ಹಿಟ್ಲರ್ ಪಂಗಡದ ಅಭಿಪ್ರಾಯವು.

ಈಗ ಜರ್ಮನಿಯಲ್ಲಿರುವ ನಾಝಿ ರಾಜ್ಯ ಪದ್ಧತಿಯನ್ನು ತೆಗೆದುಹಾಕಿ ರಶಿಯಾದೇಶದಂತೆ ಕಮ್ಯುನಿಸ್ಟ ರಾಜ್ಯ ಪದ್ಧತಿಯನ್ನು ಸ್ಥಾಪಿಸಬೇಕೆಂದು ಒಂದು ಪಂಗಡವು ಯೋಚಿಸಿದ್ದಿತೆಂತಲೂ ಅದ ಕ್ಕಾಗಿ ಇಸ್ಪರಲ್ಲೇ ಜರ್ಮನಿಯಲ್ಲಿ ಭಯಂಕರವಾದ ದೊಂಬಿ ಸ್ಫೋರಂಭವಾಗುವುದಿದ್ದಿತೆಂತಲೂ ಹಿಟ್ಲರ್‌ರವರು ತಮ್ಮ ಭಾಷಣ ದಲ್ಲಿ ತಿಳಿಸಿದ್ದಾರೆ. ಮುಂದಣ ಅನರ್ಥವನ್ನು ನಿಲ್ಲಿಸಲು ಹಿಟಲರ್ ರವರು ವಿರೋಧ ಪಂಗಡದ ಸಾಧಾರಣ ೨೦೦ ಪ್ರಮುಖರನ್ನು ಕೊಲ್ಲಿಸಿದರೆಂದು ಪ್ರಕಟವಾಗಿದೆ.

ಈ ಭಯಂಕರ ಕೊಲೆಯಿಂದ ಜರ್ಮನಿಯಲ್ಲಿಯ ಒಳಜಗ ಳದ ಭೀಕರ ಸ್ವರೂಪವು ವ್ಯಕ್ತವಾಗುತ್ತದೆ. ಕೆಲವು ಪ್ರಮುಖ ರನ್ನು ಗುಂಡು ಹಾಕಿ ಕೊಲ್ಲುವಾಗ ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಆದರೂ ಕ್ಷಮಾಪಣೆ ಬೇಡಿಕೊಂಡು ಬದುಕುವ ಆಶೆಮಾಡದೆ ನಾವು ನಮ್ಮ ಜನ್ಮಭೂಮಿಯಾದ ಜರ್ಮನಿಯ ಹಿತಾರ್ಥವಾಗಿಯೂ ನಮ್ಮ ಮುಂದಾಳುಗಳಲ್ಲಿಯ ಭಕ್ತಿಗಾಗಿಯೂ ಈ ಆತ್ಮಾಹುತಿ ಕೊಡುತ್ತಿದ್ದೇವೆಂದು ಹೇಳಿದರಂತೆ. ಈ ಪ್ರಕಾರ ಮಾತೃಭೂಮಿಯ ಹಿತಕ್ಕೆಂದೇ ಉಭಯ ಪಂಗಡಗಳೂ ಘೋರ ಕಾರ್ಯವನ್ನು ಮಾಡುತ್ತಲಿವೆ. ಹಿಟಲರ್‌ರವರ ಈ ದಬ್ಬಾಳಿಕೆಯು ನಿಜವಾದ ಶಾಂತಿಯನ್ನುಂಟುಮಾಡಲಾರದೆಂತಲೂ ಇಂತಹ ಕ್ರೂರ ಕಾರ್ಯಗಳು ಮುಂದಣ ರಾಜ್ಯಕ್ರಾಂತಿಗೆ ಭಯಂಕರ ಸ್ವರೂಪವುಂಟಾಗಲು ಕಾರಣವಾಗುವವೆಂತಲೂ ಅನೇಕರು ಯೋಚಿಸಿದ್ದಾರೆ.

## ಕರ್ನಾಟಕಕ್ಕೆ ಅಗತ್ಯವಾಗಿರುವ ಉದ್ಯೋಗ.

ಜಗತ್ತಿನಲ್ಲಾಗುತ್ತಿರುವ ನಾನಾ ಶೋಧಗಳ ಪ್ರಯೋಜನ ವನ್ನು ಹಿಂದುಸ್ಥಾನವು ಹೊಂದಲೇಬೇಕು. ಹಿಂದುಸ್ಥಾನದ ಬೇರೆ ಭಾಗದವರು ಮುಂದರಿಯುವ ಉದ್ಯೋಗಗಳಲ್ಲಿ ಕನ್ನಡಿಗರೂ ಪ್ರವೇಶಿಸಿ ತಮ್ಮ ಉನ್ನತಿಯನ್ನು ಮಾಡಿಕೊಳ್ಳಬೇಕು. ಇಂತಹ ಆಧುನಿಕ ಕಲಾ ಕೌಶಲ್ಯ ಉದ್ಯೋಗಗಳಲ್ಲಿ ಕನ್ನಡಿಗರು ಬಹು ಹಿಂದುಳಿದಿದ್ದಾರೆ. ಈಗ ಜಗತ್ತಿನಲ್ಲಿಯೇ ಅತ್ಯಂತ ಮುಖ್ಯವಾದ ಸಿನೇಮಾ ಉದ್ಯೋಗದಲ್ಲಿ ಕನ್ನಡಿಗರು ಇನ್ನೂ ಪ್ರವೇಶಿಸದೆ ಇದ್ದದ್ದು ಅತ್ಯಂತ ವಿಷಾದದ ಸಂಗತಿಯು. ಆಧುನಿಕ ಪ್ರಪಂಚ ವನ್ನು ನೋಡುವುದರಲ್ಲಿ ಕನ್ನಡಿಗರು ಎಷ್ಟು ದೂರದಲ್ಲಿದ್ದಾರೆಂಬು ದಕ್ಕೆ ಇದೊಂದು ದೊಡ್ಡ ದೃಷ್ಟಾಂತ.

ನಮ್ಮ ನೆರೆಯಲ್ಲಿರುವ ಮಹಾರಾಷ್ಟ್ರದಲ್ಲಿ ೧೦-೧೨ ಸಿನೇಮಾ ಕಂಪನಿಗಳಿದ್ದರೂ ಕರ್ನಾಟಕದಲ್ಲಿ ಒಂದಾದರೂ ಅಂತಹ ಸ್ವತಂತ್ರ ಕಂಪನಿಯಿರಬಾರದೆ? ಜನಾಂಗದ ಶಿಕ್ಷಣಕ್ಕೆ ಸಿನೇಮಾ ಕಲೆಯು ಒಂದು ಮುಖ್ಯವಾದುದಾಗಿ ಪರಿಣಮಿಸಿದೆ. ಜಗತ್ತಿನ ಎಲ್ಲ ಆಧು ನಿಕ ಉದ್ಯೋಗಗಳಿಗಿಂತಲೂ ಈ ಉದ್ಯೋಗದಲ್ಲಿ ವಿಶೇಷ ಭಂಡ ವಾಳ ಹಾಕಲ್ಪಟ್ಟಿರುವದೇ ಇದರ ಮಹತ್ವವನ್ನು ವ್ಯಕ್ತಗೊಳಿಸತಕ್ಕ ದ್ದಾಗಿದೆ.

ಎರಡು ಲಕ್ಷ ರೂ. ಗಳಿಗೆ ಮೇಲ್ಪಟ್ಟು ಬಂಡವಾಳ ಬೇಕಾಗು ತ್ತದೆ. ಇಂತಹ ಕಂಪನಿಯಲ್ಲಿ ೫೦-೬೦ ಜನ ನಾನಾ ಕಲಾ ಪ್ರವೀಣರಿಗೆ ಉದ್ಯೋಗ ದೊರೆಯುತ್ತದೆ. ಕರ್ನಾಟಕದ ಅನೇಕ ಕಲಾಕೌಶಲ್ಯಗಳು ಅಭಿವೃದ್ಧಿಯಾಗಲು ಅನುಕೂಲವಾಗುತ್ತದೆ. ಕನ್ನಡ ಸಂಸ್ಕೃತಿಯ ನಾನಾ ಭಾಗಗಳನ್ನು ಪ್ರಸಾರಗೊಳಿಸಲು ಈ ಕಾಲದಲ್ಲಿ ಇದೊಂದು ಹೆಚ್ಚಿನ ಸೌಲಭ್ಯ. ಶಿವಶರಣರ ಸಾಮಾ ಜಿಕ ಸುಧಾರಣೆಯ ಮತ್ತು ವಿಜಯನಗರದ ರಾಜಕೀಯ ಸುಧಾ ರಣೆಯ ನಾನಾ ದಿವ್ಯ ಪ್ರಸಂಗಗಳ ಕಡೆಗೆ ಭಾರತೀಯರ ಲಕ್ಷ್ಯ ವನ್ನು ಎಳೆಯಬಹುದು. ಧನಿಕರೂ, ಸಾಹಸಿಗಳೂ, ಈ ಕಡೆಗೆ ಲಕ್ಷಿಸಬಾರದೆ?

## ಮೃತಾತ್ಮಗಳ ಸಂಭಾಷಣೆ.

ಶ್ರೀ. ರಾ. ನಾ. ಮಂಡಲೀಕ ಮುಂಬೈ ಇವರು ತಾ. ೨೪ನೆಯ ಕೇಸರೀ ಪತ್ರಿಕೆಯಲ್ಲಿ ತಮ್ಮ ಅನುಭವದ ಎರಡನೆಯ ಲೇಖನವನ್ನು ಪ್ರಕಟಿಸಿದ್ದಾರೆ. ಅದರಲ್ಲಿರುವ ಮುಖ್ಯಾಂಶಗಳು—

(೧) ಪ್ಲ್ಯಾಂಚೆಟ ಅಥವಾ ಶ್ರೀ. ಋಷಿ ಇವರಲ್ಲಿಯ ಟಿಬಲ್ ಇವುಗಳ ವಿನಾ ನಮ್ಮ ಮನೆಯಲ್ಲಿಯೇ ನಾವು "ಸ್ಪೆವ್ಹ್ಹಾ" ಮೇಲೆ ಒಂದು ದಪ್ಪಾದ ರಟ್ಟನ್ನಿಟ್ಟು ಅದರ ಮೇಲೆ ಕಾಗದವನ್ನಿಟ್ಟು ೧೨ ವರುಷಗಳ ಬನುಬಾಯಿ ಎಂಬ ಹುಡಿಗಿಯಿಂದಲೂ ಭಡಕಮಕರ ಎಂಬ ಈ ವರುಷ ಮ್ಯಾಟ್ರಿಕ್ ಪರೀಕ್ಷೆ ತೇರ್ಗಡೆಹೊಂದಿದ ವಿದ್ಯಾರ್ಥಿಯಿಂದಲೂ ಪತ್ನಿಯ ಸಂದೇಶವನ್ನು ಬರೆಸಿದೆವು.

(೨) ನಾವು ಕರೆಯದಿದ್ದ ಆತ್ಮಗಳು ಕೂಡಾ ತಾವಾಗಿಯೇ ಬರುತ್ತವೆ. ಎರಡು ವರುಷ ವಯಸ್ಸಿನ ಒಂದು ಮಗು ಕೂಡಾ ಬಂದು ತನ್ನ ಹೆಸರನ್ನು ಬರೆಸಿತು. ಅದಕ್ಕೆ ಬರಹ ಬರುತ್ತಿರಲಿಲ್ಲ. ಇಂಥ ಆತ್ಮಗಳು ಕೂಡಾ ತಮ್ಮ ಇಂಗಿತವನ್ನು ಬರೆಸುತ್ತಿವೆ.

(೩) ನಾವು ಮಾತಾಡುವ ಶಬ್ದಗಳು ಅವುಗಳಿಗೆ ಕೇಳುತ್ತಿರುವಂತೆಯೇ ಅವುಗಳಿಗೆ ನಾವು ಕೂಡಾ ಕಾಣುತ್ತಿದ್ದೇವೆ. ಏಕೆಂದರೆ ನಮ್ಮ ತಂದೆಯೇ ಈ ಪ್ರಯೋಗ ನಡೆದಾಗ ತಾನು ೪ ಗಂಟೆ ೪೫ ನಿಮಿಷಕ್ಕೆ ಇಲ್ಲಿಗೆ ಬಂದೆನೆಂದು ಬರೆಸಿದನು.

(೪) ಬರೆಯುವವರಿಗೂ ಪ್ರಶ್ನೆ ಮಾಡುವವರಿಗೂ ಯಾವ ಸಂಬಂಧವೂ ಇರಲಿಲ್ಲ. ಇಬ್ಬರು ಪರಸ್ಪರ ಕೂಡಿ ಸಹ ಕುಳಿತಿರಲಿಲ್ಲ. ಪ್ರಶ್ನೆ ಮಾಡುವವರ ಯಾವ ವಿಚಾರಗಳೂ ಬರೆಯುವ ಹುಡಿಗಿಗೆ ಗೊತ್ತಿರಲಿಲ್ಲ.

(೫) ಬರೆಯುವಾಗ ಆ ಹುಡಿಗೆಗೆ ತನ್ನ ಅರಿವು ಇರುತ್ತಿರಲಿಲ್ಲ. ಬರೆದ ನಂತರ ನೀನು ಬರೆದುದೇನೆಂದು ಕೇಳಿದರೆ ಆವಳಿಗೆ ಗೊತ್ತಿರುತ್ತಿದ್ದಿಲ್ಲ ಕೈಮೇಲೆ ಇರುವಿ ಹರಿದಂತಾಗುತ್ತದೆಂದು ಹೇಳಿದಳು. ಆ ವಿದ್ಯಾರ್ಥಿಯು ಕೂಡಾ ಬರೆಯುವಾಗ ತನ್ಮಯನಾಗುತ್ತಿದ್ದನು. ಕೈಯಲ್ಲಿ ವಿದುಚ್ಛಕ್ತಿ ಸುಳಿದಂತಾಗುತ್ತದೆಂದು ಹೇಳಿದನು.

ಮೃತಾತ್ಮಗಳ ಉತ್ತರಗಳಲ್ಲಿ ಕೆಲವು ತಪ್ಪುತ್ತವೆ. ಇದರ ಕಾರಣವೇನೋ ತಿಳಿಯದು. ಅಂತೂ ದೇಹಬಿಟ್ಟ ನಂತರ ಜೀವಿಗಳು ಬೇರೆ ಲೋಕದಲ್ಲಿರುತ್ತವೆಂತಲೂ ಅವು ಈ ಲೋಕದ ಎಲ್ಲ ಸಂಗತಿಗಳನ್ನೂ ತಿಳಿದುಕೊಳ್ಳುತ್ತವೆಂತಲೂ ಅನುಕೂಲದೊರೆತರೆ ಅವು ತಮ್ಮ ಸ್ಥಿತಿಯನ್ನು ತಿಳಿಸುತ್ತವೆಂತಲೂ ಹೇಳಬಹುದು.

## ಹಿಂದುಸ್ಥಾನದಲ್ಲಿಯ ವಿಮಾನ ಮಾರ್ಗ.

ಜಗತ್ತಿನಲ್ಲಿ ಸಂಚಾರದ ಸೌಲಭ್ಯಗಳು ದಿನೇದಿನೇ ಹೆಚ್ಚುತ್ತಲಿವೆ. ನೆಲದ ಮೇಲೆ ತಿರುಗಾಡಲು ಉಗಿಯ ಬಂಡಿ ಮತ್ತು ಮೋಟಾರ್ ಗಾಡಿಗಳಾದಂದಿನಿಂದ ದೇಶ ಸಂಚಾರವು ಎಷ್ಟೋ ಅನುಕೂಲವಾಯಿತು. ಹಡಗಗಳ ಮೂಲಕ ಪ್ರಪಂಚವನ್ನೇ ಸುತ್ತಲು ಜಲಮಾರ್ಗವಂತೂ ತುಂಬಾ ಅನುಕೂಲವಾಗಿದೆ. ಈ ಪ್ರಕಾರ ಜಲ ಸ್ಥಲ ಮಾರ್ಗಗಳಿಗಿಂತಲೂ ಆಕಾಶ ಮಾರ್ಗವು ಈಗ ಹೆಚ್ಚು ಅನುಕೂಲವಾಗಿದೆ.

೧೯೩೩ನೆಯ ಇಸವಿ ಡಿಶಂಬರ್ ೧೭ನೆಯ ತಾರೀಖಿನ ದಿನ ಓರವಿಲ್ ರೈಟ್ ಎಂಬವರು ವಿಮಾನಿನಲ್ಲಿ ಕುಳಿತು ೬೫೦ ಅಡಿ ಎತ್ತರ ಮಾತ್ರ ಹೋಗಿದ್ದರು. ಅಂದಿನಿಂದ ಕಳೆದ ಮೂವತ್ತು ವರುಷಗಳಲ್ಲಿ ಈ ವಿಮಾನ ವಿದ್ಯೆಯು ಅತ್ಯಂತ ಅಭಿವೃದ್ಧಿಗೆ ಬಂದು ಇಂಗ್ಲೆಂಡ್, ಅಮೇರಿಕಾ ರಾಷ್ಟ್ರಗಳಲ್ಲಿ ಇದು ಬಹು ಬಳಕೆಯಲ್ಲಿ ರತಕ್ಕೆ ಪ್ರಯಾಣದ ಉಪಕರಣವಾಗಿದೆ. ಈ ದೇಶದಲ್ಲಿ ಮೋಟಾರ್ ಬಂಡಿಗಳು ಪ್ರಸಾರವಾಗಿರುವಷ್ಟು ಆ ರಾಷ್ಟ್ರಗಳಲ್ಲಿ ವಿಮಾನುಗಳು ಪ್ರಸಾರವಾಗಿವೆಯೆಂದು ಹೇಳಬಹುದು.

ಈ ಪ್ರಕಾರ ಜಲ, ಸ್ಥಲ, ಆಕಾಶಗಳಲ್ಲಿ ಮನುಷ್ಯನು ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಾನೆ. ಈ ಮೂರು ಲೋಕಗಳು ಆತನ ಆಧೀನವಾಗಿವೆ. ಬರುವ ೨೦ನೆಯ ಶತಮಾನವು ಮುಖ್ಯವಾಗಿ ಆಕಾಶಯಾನದಯುಗವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಹಿಂದುಸ್ಥಾನದಲ್ಲಿಯೂ ಈಗ ಟಪಾಲು ಮತ್ತು ಪ್ರಯಾಣಿಕರ ವಿಮಾನಗಳ ಸಂಚಾರ ಪ್ರಾರಂಭವಾಗಿದೆ. ಕರಾಚಿ, ದಿಲ್ಲಿ, ಕಲಕತ್ತಾ, ಮದ್ರಾಸ್, ಮತ್ತು ಮುಂಬೈಗಳಿಗೆ ಈಗ ಇಂತಹ ವಿಮಾನುಗಳು ಹೋಗುತ್ತಿವೆ. ಟಾಟಾ ಕಂಪನಿಯವರು ಈ ಕಾರ್ಯವನ್ನು ವಹಿಸಿಕೊಂಡಿದ್ದಾರೆ ಇನ್ನು ನೇಲೆ ಈ ದೇಶದ ಬೇರೆ ಪ್ರಮುಖ ಪಟ್ಟಣಗಳಲ್ಲಿಯೂ ವಿಮಾನಗಳ ನಿಲ್ದಾಣಗಳು ಏರ್ಪಟ್ಟು ಸಂಚಾರಕ್ಕೆ ಅನುಕೂಲವಾಗುವುದು.

ಈ ದೇಶದ ಹವೆಯು ಆಕಾಶಯಾನಗಳ ಸಂಚಾರಕ್ಕೆ ಬಹು ಅನುಕೂಲವಾದುದಾಗಿರುವುದರಿಂದಲೂ ಈ ವಿದ್ಯೆಯನ್ನು ಭಾರತೀಯ ತರುಣರು ಕಲಿಯಲು ಇನ್ನುಮೇಲೆ ಮುಂದಿರಿಯುವುದರಿಂದಲೂ ೧೫-೨೦ ವರುಷಗಳಲ್ಲಿ ಹಿಂದುಸ್ಥಾನದ ಆಕಾಶವು ವಿಮಾನಗಳ ಸುಳಿದಾಟದಿಂದ ಶೋಭಿಸುವುದರಲ್ಲಿ ಸಂದೇಹವಿಲ್ಲ. ಪುರಾಣಗಳಲ್ಲಿ ವರ್ಣಿಸಲ್ಪಟ್ಟ ದೇವತೆಗಳ ವಿಮಾನುಗಳು ಆಗ ಎಲ್ಲೆಲ್ಲಿಯೂ ಕಾಣುವವು. ಆದರೆ ಆ ಕಾಲದ ಸಂಪತ್ತು ಮಾತ್ರ ಭರತಖಂಡದಲ್ಲೆಲ್ಲ ಕಾಣಲಾರದು.

## ಹಿಂದುಸ್ಥಾನದಲ್ಲಿ ಕೈಮಗ್ಗಗಳ ವ್ಯವಸಾಯ.

ಹಿಂದುಸ್ಥಾನದಲ್ಲಿ ಪರದೇಶದಿಂದ ಅನೇಕ ಕೋಟಿ ರೂಪಾಯಿಗಳ ಬಟ್ಟೆ ಬರುತ್ತಿದ್ದರೂ ಕೈಮಗ್ಗವು ಇನ್ನೂ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಉಳಿದಿದೆ. ೧೯೮೬ರಿಂದ ೧೯೧೧ ರವರೆಗೆ ೫ ವರುಷಗಳಲ್ಲಿ ನಮ್ಮ ದೇಶದಲ್ಲಿ ಕೈಮಗ್ಗದಿಂದ ೪೪೬ ಕೋಟಿ ಗಜ ಅರಿವೆಯು ತಯಾರಿಸಲ್ಪಟ್ಟಿತು. ೧೯೪೬ ರಿಂದ ೧೯೪೭ ರವರೆಗೆ ಒಂದು ವರುಷದಲ್ಲಿ ಹಿಂದಿ ಕೈಮಗ್ಗಗಳಲ್ಲಿ ೭ ಕೋಟಿ ೪೦ ಲಕ್ಷ ಪೌಂಡು ನೂಲು ಉಪಯೋಗಿಸಲ್ಪಟ್ಟಿತು. ಹಾಗೆಯೇ ೧೯೧೦ರಿಂದ ೧೯೧೧ರವರೆಗೆ ೨೧ ಕೋಟಿ ೯೦ ಲಕ್ಷ ಪೌಂಡುಗಳನ್ನು ೧೯೨೦-೨೧ರಲ್ಲಿ ೩೨ ಕೋಟಿ ೮೦ ಲಕ್ಷ ಪೌಂಡುಗಳನ್ನು ಮತ್ತು ೧೯೩೦ ರಿಂದ ೩೧ರಲ್ಲಿ ೫೨ ಕೋಟಿ ೭೦ ಲಕ್ಷ ಪೌಂಡು ನೂಲನ್ನೂ ಕೈಮಗ್ಗಗಳಲ್ಲಿ ಉಪಯೋಗಿಸಲಾಯಿತು. ಇದರ ಮೇಲಿಂದ ಕಂಡುಬರುವದೇನೆಂದರೆ ಕಳೆದ ೩೫-೩೭ ವರುಷಗಳಿಂದಲೂ ಗಿರಣಿಯ ಏರಿಕೆಗೆ ಕುಗ್ಗದೆ ಕೈನುಗ್ಗವು ತನ್ನ ವ್ಯವಸಾಯವನ್ನು ವಿಸ್ತರಿಸುತ್ತಲೇ ಇದೆ. ಗಿರಣಿಗಳಾದರೋ ಎಷ್ಟು ಹೆಚ್ಚಾಗಿದ್ದರೂ ೪ ಲಕ್ಷದಕ್ಕಿಂತ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಲು ಶಕ್ಯವಿಲ್ಲ. ಶದ್ವಿರುದ್ಧವಾಗಿ ಈ ಕೈಮಗ್ಗದ ಉದ್ಯೋಗದಿಂದ ಮುಕ್ಕಾಲುಕೋಟಿ ಜನಗಳ ಉದರ ನಿರ್ವಾಹವಾಗುತ್ತಿರುವುದಕ್ಕೆ ಆಧಾರಗಳುಂಟು. ಇನ್ನು ಕೈಮಗ್ಗ ಮತ್ತು ಗಿರಣಿಗಳಲ್ಲಿ ಹಾಕಿದ ಧನದ ಪ್ರಮಾಣವು ಭೂಮ್ಯಾಕಾಶದಷ್ಟು ಅಂತರವಿದೆ. ಸ್ವಲ್ಪೇ ಭಾಂಡವಲದಿಂದ ಅಸಂಖ್ಯ ಜನರ ಉದರ ನಿರ್ವಾಹವಾಗುತ್ತಿರುವ ಈ ವ್ಯವಸಾಯವನ್ನು ಎತ್ತಿ ಹಿಡಿಯುವದು ಜನತೆಯ ಮತ್ತು ಸರಕಾರದ ಕರ್ತವ್ಯವಲ್ಲವೇ?

# ವೇದಗಳ ವಿಚಾರ ನಿಮಗೇನು ಗೊತ್ತು?

ವೇದಗಳು ಹಿಂದುಗಳ ದಿವ್ಯ ಗ್ರಂಥ ಇವು ದೇವರಿಂದ ಂದವು. ಇವುಗಳಲ್ಲಿರುವ ಎಂಎಕ್ಸ್‌ಟಾ ಕೂಡಾ ಸುಳ್ಳಾಗುವು ಲ್ಲ. ಈ ವೇದ ವಾಕ್ಯದಂತೆ ನಡೆದರೇನೇ ಮನುಷ್ಯನಿಗೆ ಇಹ ಲ್ಲಿ ಸುಖ. ಪರದಲ್ಲಿ ಮೋಕ್ಷ

ಈ ವೇದ ವಾಕ್ಯಗಳಿಗೆ ವಿರೋಧವಾಗಿ ನಡೆಯುವವರು ನಸ್ತಿಕರು. ಧರ್ಮಲಂಡರು. ಅವರಿಗೆ ಇಹದಲ್ಲಿ ದುಃಖವೇ ಂ. ಪರದಲ್ಲಿ ನರಕವೇ ಗತಿ.

ಆದಕ್ಕಾಗಿ ವೇದವಿರೋಧವಾಗಿ ನಡೆಯಬಾರದು. ವೇದ ತ್ಯರಾಗಬಾರದು. ವೇದ ಧರ್ಮವೇ ಶ್ರೇಷ್ಠ ಧರ್ಮ. ವೇದದಲ್ಲಿ ೀಳಿರುವ ಆಚಾರವಿಚಾರಗಳು ಯಾವ ಕಾಲದಲ್ಲಿಯೂ ಎಳ್ಳಷ್ಟಾ ರೂ ವ್ಯತ್ಯಾಸವಾಗದಂಥವುಗಳೇ ಇವೆ. ಅವುಗಳಂತೆ ನಡೆದರಾ ುತ್ತು. ಸುಖಶಾಂತಿಗಳು ಬೆನ್ನು ಹತ್ತಿ ತಾವೇ ಬರುತ್ತವೆ.

ಬ್ರಹ್ಮನ ನಾಲ್ಕು ಮುಖಗಳಿಂದ ನಾಲ್ಕು ವೇದಗಳುಂಟಾದ ಂದು ಕೆಲವರು ಹೇಳುತ್ತಾರೆ. ಶಿವನ ಪಂಚ ಮುಖಗಳಿಂದ ುದು ವೇದಗಳುಂಟಾದವೆಂದು ಹೇಳುವವರೂ ಕೆಲವರಿದ್ದಾರೆ! ಐದನೆಯ ವೇದ ಅಜಪವೇದವಂತೆ! ಅದು ಹಾಗೆ ಹೇಳುವವರ ಕೆತ್ತಿರಿದೆಯೇ ವಿನಾ ಬೇರೆಯವರಿಗೆ ಇನ್ನೂ ಅದು ದೊರೆತಿಲ್ಲ. ಸ್ಮೃಗ್ವೇದದಲ್ಲಿ ಕೃಷ್ಣ ಮತ್ತು ಶುಕ್ಲ ಎಂಬೆರಡು ಭೇದಗಳಿವೆ. ಇವುಗಳಲ್ಲಿಯೇ ಒಂದಕ್ಕೆ ಅಜಪವೆಂಬ ಹೆಸರಿಂದು ಇತ್ತೀಚೆಗೆ, ಕೆಲವರು ತರ್ಕಿಸಿದ್ದಾರೆ!

ಛೇ! ಛೇ! ವೇದಗಳು ಹೀಗೆ ನಾಲ್ಕು ಐದು ಮೋರೆಗಳ ೀವರಿಂದ ಹುಟ್ಟಲ್ಲಿ. ಅಗ್ನಿ, ಪ್ರಜಾಪತಿ, ಮೊದಲಾದ ನಾಲ್ಕು ಜನ ಋಷಿಗಳಲ್ಲಿ ದೇವರು ಮೊದಲು ಪ್ರೇರೇಪಣೆ ಮಾಡಿ ನಾಲ್ಕು ೀದಗಳನ್ನುಂಟುಮಾಡಿದನೆಂದು ಕೆಲವರು ಹೇಳುತ್ತಾರೆ. ಇಷ್ಟರ ುಟ್ಟಿಗೆ ವೇದಗಳ ವಿಚಾರವನ್ನು ತಿಳಿದವರೇ ಹೆಚ್ಚು.

ಈ ಪ್ರಕಾರ ವೇದಗಳೇ ತಮ್ಮ ಧರ್ಮಗ್ರಂಥವೆಂದು ಹಿಂದು ಳು ತಿಳಿದಿದ್ದರೂ ಲಕ್ಷ ಹಿಂದುಗಳಲ್ಲಿ ಒಬ್ಬರ ಹತ್ತಿರಾದರೂ ೀದಗಳಿಲ್ಲ. ಇದ್ದರೂ ಅವರಿಗೆ ತಿಳಿಯುವಂತಿಲ್ಲ. ಅದುದರಿಂದ ೀದಗಳ ವಿಚಾರದಲ್ಲಿ ಹಿಂದಿನವನು ಹೇಳುತ್ತಾ ಬಂದುದನ್ನೇ ೀಳುವವರು ಹೆಚ್ಚೇ ವಿನಾ ಅವುಗಳಲ್ಲಿಯ ಸಂಗತಿಗಳನ್ನು ಸರಿ ುಗಿ ತಿಳಿದುಕೊಂಡವರಾಗಲಿ ಅಥವಾ ಹಾಗೆ ತಿಳಿದುಕೊಂಡವ ಂದ ಅವುಗಳ ಸಂಬಂಧವಾದ ವಿಚಾರವನ್ನು ಬಲ್ಲನಂತಾಗಲಿ ೊರೆಯುವುದು ವಿರಳ.

ವೇದಗಳು ಪ್ರಚಾರದಲ್ಲಿರದ ಸಂಸ್ಕೃತ ಭಾಷೆಯಲ್ಲಿನೆ. ೊದಲೇ ಸಂಸ್ಕೃತ ಭಾಷೆಯು ಪ್ರಚಾರದಲ್ಲಿಲ್ಲ. ಕಾಶಿಗೆ ಹೋಗ ೀಲಿತು ಬಂದ ಅಂತಿಂತಹ ಶಾಸ್ತ್ರಿಗಳಿಗೆ ವೇದಭಾಷೆಯ ಜ್ಞಾನವೇ ಿಗುವುದಿಲ್ಲ. ಎಂದಮೇಲೆ ಅವುಗಳ ನಿಜ ಸ್ಥಿತಿಯು ಜನ ಾಮಾನ್ಯರಿಗೆ ಗೊತ್ತಾಗುವುದೆಂತು?

ವೇದಗಳನ್ನೇ ಆರಿಯದ ಅನೇಕ ಗುರುಗಳು, ಶಾಸ್ತ್ರಿಗಳು ಸಪದೇಶಕರು ತಮಗೆ ಬರುವ ಸಂಸ್ಕೃತ ಶ್ಲೋಕಗಳನ್ನೇ ವೇದ ಾಕ್ಯಗಳೆಂದು ಅಜ್ಞಜನರಿಗೆ ಹೇಳಿ ವೇದಗಳಲ್ಲಿ ಹಾಗಿದೆ, ಹೀಗಿದೆ, ಂದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದಾರೆ.

ಇತ್ತೀಚಿಗೆ ಅನೇಕ ಪಾಶ್ಚಾತ್ಯ ಮಹಾಮಹಾ ಪಂಡಿತರು ವೇದಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿರುವ ಸಂಗತಿಗಳನ್ನು ಹೊರಗೆ ಹಾಕಿದ್ದಾರೆ. ಕನ್ನಡ ಭಾಷೆಯಲ್ಲಂತೂ ಆ ಸಂಬಂಧವಾದ ವಿವೇಚನೆಗಳು ಇಲ್ಲವೇ ಇಲ್ಲ. ಎಂದಮೇಲೆ ವೇದಗಳ ಸಂಬಂಧವಾಗಿ ಜನ ಸಾಮಾನ್ಯರಲ್ಲಿರುವ ತಪ್ಪು ತಿಳುವಳಿಕೆ, ಅಜ್ಞಾನಗಳೆಲ್ಲ ನಿವಾರಣೆಯಾಗುವುದೆಂತು? ಧಾರ್ಮಿಕ ಮೂಢ ನಂಬಿಕೆಗೂ ಅನೇಕ ಸ್ವಾರ್ಥಿಗಳ ದುರುಪದೇಶ ಪ್ರಸಾರಣೆಗೂ ವೇದಗಳ ನಿಜಜ್ಞಾನವು ಜನಸಾಮಾನ್ಯರಲ್ಲಿರದಿದ್ದುದೇ ಮುಖ್ಯ ಕಾರಣ.

ವೇದಗಳು ನಾಲ್ಕು. ಅವುಗಳಿಗೆ ಋಕ್, ಯಜು, ಸಾಮ ಮತ್ತು ಅಥರ್ವಣ ಎಂಬ ಹೆಸರು. ಇವುಗಳಲ್ಲಿ ಋಗ್ವೇದವೇ ಬಹು ಪ್ರಾಚೀನವಾದುದು. ಆರ್ಯರೆಂಬ ಒಂದು ಗುಂಪಿನ ಜನರು ತಮ್ಮ ಅನುಭವಕ್ಕೆ ಬಂದ ಅನೇಕ ಸಂಗತಿಗಳನ್ನು ಕೂಡಿಸಿಟ್ಟ ದ್ದಾರೆ.

ಅವುಗಳಲ್ಲಿ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮೊದ ಲಾದ ಅನೇಕ ಸಂಗತಿಗಳಿವೆ. ಆರ್ಯ ಜನರು ಪಂಜಾಬ ಪ್ರಾಂ ತಕ್ಕೆ ಬಂದ ನಂತರ ಈಗ ೭ ಸಾವಿರ ವರುಷಗಳ ಹಿಂದೆ ಕೆಲವು ಸಂಗತಿಗಳನ್ನು ಕೂಡಿಸಿದರು. ಅದಕ್ಕೆ ಋಗ್ವೇದವೆನ್ನುತ್ತಾರೆ. ಆ ಮೇಲೆ ಯಜುಃ ಸಾಮವೇದಗಳನ್ನು ರಚಿಸಿದರು. ಅಥರ್ವಣ ವೇದವು ಈಗ ೨|| ಸಾವಿರ ವರುಷಗಳಾಚೆಗೆ ರಚನೆಯಾಯಿತು. ಅದರಲ್ಲಿ ದಕ್ಷಿಣ ಹಿಂದುಸ್ಥಾನದ ದ್ರಾವಿಡರ ಸಮಾಚಾರಗಳೂ ಇವೆ.

ವಾಮದೇವ, ಅತ್ರಿ, ಭರದ್ವಾಜ, ಅಂಗಿರಸ ಮೊದಲಾದ ಅನೇಕ ಋಷಿಗಳು ವಿಶ್ವವಾರಾ, ಘೋಷೆ, ಇಂದ್ರಾಣಿ, ಲೋಪಾ ಮುದ್ರಾ ಮೊದಲಾದ ಅನೇಕ ಸ್ತ್ರೀಯರೂ ಹೇಳಿದ ವಚನಗಳೇ ಈ ವೇದ ಮಂತ್ರಗಳು. ಆದಕಾರಣ **ವೇದಗಳೆಂದರೆ ಹಲವರ ಹಳೆಯ ಹೆಬ್ಬೊತಿಗ.**

ಈ ಪ್ರಕಾರ ಅನೇಕ ಸ್ತ್ರೀ ಪುರುಷರಿಂದ ಈಗ ೬-೭ ಸಾವಿರ ವರುಷಗಳೀಚೆಯಲ್ಲಿ ರಚನೆಯಾದ ಅನೇಕ ಸಂಗತಿಗಳಿಂದ ಕೂಡಿದ ವಾಕ್ಯಗಳ ಸಂಗ್ರಹಕ್ಕೇನೇ ವೇದಗಳೆಂದು ಹೇಳುತ್ತಾರೆ. ಅವು ಆಗಿನ ಕಾಲದ ಸ್ಥಿತಿಗತಿಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಅನೇಕ ವಿಷಯಗಳು ಯುಕ್ತವಾಗಿರುವಂತೆಯೇ ಅನೇಕ ಸಂಗತಿ ಗಳು ಅಯುಕ್ತವಾಗಿಯೂ ಇವೆ. ಇದೇ ವೇದಗಳ ನಿಜ ಸಂಗತಿ. ದೇವರಿಂದ ಬಂದವು, ಅವುಗಳಲ್ಲಿ ತ್ಯಾಜ್ಯವಾದ ಸಂಗತಿಗಳೇ ಇಲ್ಲ, ಎಂಬ ತಿಳುವಳಿಕೆಗಳೆಲ್ಲ ಅಜ್ಞಾನದಿಂದುಂಟಾದವುಗಳು.

ಪಂಡಿತ ಮ್ಯಾಕ್ಸ್‌ಮುಲ್ಲರ್, ಡಾಕ್ಟರ್ ಹೌ, ಮೊದಲಾದ ಪಾಶ್ಚಾತ್ಯ ಮತ್ತು ಲೋ. ಟಿಳಕ, ಡಾಕ್ಟರ ಅವಿನಾಶಚಂದ್ರದಾಸ, ಮೊದಲಾದ ಪೌರ್ವಾತ್ಯ ವೇದಜ್ಞರು ವೇದಗಳನ್ನು ಆಮೂಲಾಗ್ರವಾಗಿ ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿ ಅವುಗಳನ್ನು ಬೆಳಕಿಗೆ ತಂದಿದ್ದಾರೆ. ಅದರಿಂದ ಹಿಂದಿ ಬಂಗಾಲಿ ಮೊದಲಾದ ದೇಶಭಾಷೆಗಳಲ್ಲಿಯೂ ವೇದಗಳ ವಿಚಾರವಾಗಿ ಅನೇಕ ಪಂಡಿತರು ವಿವರಿಸಿ ಜನಸಾಮಾನ್ಯರಲ್ಲಿರುವ ತಪ್ಪು ಕಲ್ಪನೆಗಳನ್ನು ತೆಗೆದು ಾಕುತ್ತಿದ್ದಾರೆ.

ಇತ್ತೀಚಿನ ಅನೇಕ ಶೋಧಗಳಿಂದಲೂ ವೇದಗಳ ತಿರುಳು ತಿಳಿಯಲಾರಂಭಿಸಿದೆ. ಕನ್ನಡ ಭಾಷೆಯಲ್ಲಿ ಈ ಸಂಬಂಧವಾದ ವಿವೇಚನೆಗಳೇ ಇಲ್ಲದಿರುವುದು ಅತ್ಯಂತ ದುಃಖದ ಸಂಗತಿಯು.

# ಕ್ರಾಂತಿಯ ಕಿಡಿಗಳು!

( ಬರೆದವ— ಬಿಜಲಿ ಬೆನಕಪ್ಪ. )

ಇದು ಇಪ್ಪತ್ತನೆಯ ಶತಮಾನ. ಹತ್ತನೆಯ ಶತಮಾನವಲ್ಲ. ಒಂದು ಸಾವಿರ ವರುಷಗಳ ಹಿಂದಿನ ಆ ಕತ್ತಲೆ ಈಗಿಲ್ಲ. ಅದು ಹರಿದು ಹೋಗಿದೆ ಕಣ್ಣು ತೆರೆಯಿರಿ. ಬೆಳಕು ನೋಡಿರಿ.

ಎಲ್ಲೆಲ್ಲಿಯೂ ಸ್ವಾತಂತ್ರ್ಯದ ಸುಳಿಗಾಳಿ. ಹಿಂದಕ್ಕಿದ್ದಂತೆ ಅರಮನೆಯ ಭಯವಿಲ್ಲ ಗುರುಮನೆಯ ಅಂಜಿಕೆಯಿಲ್ಲ. ಗುರು ಹಿರಿಯರ ಗೊಳ್ಳು, ಪೊಳ್ಳು ಜೊಳ್ಳು ಮಾತುಗಳೆಲ್ಲಾ ಈಗಿನ ಸ್ವಾತಂತ್ರ್ಯ ಗಾಳಿಯಲ್ಲಿ ಹಾರಿಹೋಗುತ್ತಿವೆ.

ಆ ನಿಮ್ಮ ಹಳೆಯ ಹೊತ್ತಿಗೆಯಲ್ಲಿ ಬರೆದ ದೇವರ ಮಾತಿಂಬ ಕಟ್ಟು ಕಥೆಯನ್ನು ಈಗ ಕೇಳುವವರಿಲ್ಲ. ಸುಮ್ಮ ಸುಮ್ಮನೆ ಕಾಣದ ಸ್ವರ್ಗಕ್ಕೆ ಕೈನೀಡಿ ನಗೆಗೀಡಾಗಬೇಡಿರಿ. ಕಾಣುವ ಸ್ವರ್ಗ ವಿಜ್ಞಾನ ಶೋಧದ ಸೌಲಭ್ಯದಲ್ಲಿದೆ.

ವಿಜ್ಞಾನ ಶಾಸ್ತ್ರದ ಬೆಳಕು ಇಪ್ಪತ್ತನೆಯ ಶತಮಾನದ ಹೊಳಪು. ಕಲ್ಪನೆಯ ಧರ್ಮವನ್ನು ಬಿಟ್ಟು ವ್ಯಾವಹಾರಿಕ ಧರ್ಮದ ಬೆನ್ನುಹತ್ತಿರಿ. ದೇವರನ್ನು ಕಾಣುವ ಹುಚ್ಚನ್ನು ಬಿಟ್ಟು ಜನಸೇವೆ ಮಾಡುವ ಹುಚ್ಚಿನಿಂದ ವೈಮರೆಯಿರಿ

ಗುರುಗಳು, ಉಪದೇಶಕರು ಸ್ವಾರ್ಥ ಸಾಧನೆಗೆ ಆಕಾಶ ಪುರಾಣ ಹೇಳಿ ನಿಮ್ಮ ಕಣ್ಣಲ್ಲಿ ಮಣ್ಣು ತೂರುತ್ತಿದ್ದಾರೆ. ಅವರು ಈಗಿನ ಬೆಳಕನ್ನೇ ಕಂಡಿಲ್ಲ. ಕ್ರಾಂತಿಯ ಸುದ್ದಿಯೇ ಅವಂಗೆ ಕೇಳಿಸಿಲ್ಲ. ಕತ್ತಲೆ ಕಾಲದ ಆ ಹತ್ತನೆಯ ಶತಮಾನದ ಹಿಂದಿನ ಕಗ್ಗತ್ತಲೆಯಲ್ಲಿ ನಡೆದಂತೆಯೆ ಈಗಲೂ ನಡೆಯುತ್ತ ನಾನಾ ದುಃಖ ಪಡುತ್ತಿದ್ದಾರೆ. ಅನ್ಯರು ಇವರನ್ನು ನೋಡಿ ನಗುತ್ತಿದ್ದರೂ ಇವರು ಕಣ್ಣು ಮುಚ್ಚಿರುವುದರಿಂದ ಅರಿಯರು.

ಆಗೋ; ಪಶ್ಚಿಮ ದೇಶದಲ್ಲಿ ಮಹಾ ಕ್ರಾಂತಿ ಪ್ರಾರಂಭವಾಗಿದೆ. ಅದು ರಾಜಕಾರಣದಲ್ಲಿ ಅರಸೊತ್ತಿಗೆಯನ್ನು ಸುಟ್ಟು ಎಲ್ಲೆಲ್ಲಿಯೂ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಬೇಕೆಂದಿದೆ. ಆರ್ಥಿಕ ವಿಷಯದಲ್ಲಿ ಪ್ರವೇಶಿಸಿ ಬಂಡವಾಳಗಾರರನ್ನು ಬಗ್ಗು ಬಡಿದಿದೆ.

ಸಾಮಾಜಿಕ ವಿಷಯದಲ್ಲಿ ನುಗ್ಗಿ ಹೆಂಗಳೆಯರನ್ನು ಬೈಲಿಗೆ ತಂದು ನಾನಾ ಸುಖಸಂತೋಷಗಳನ್ನುಂಟುಮಾಡಿದೆ. ಧಾರ್ಮಿಕ ಸಂಗತಿಯಲ್ಲಿ ಸೇರಿ ದೇವರ ಹುಚ್ಚನ್ನು ಬಿಡಿಸಿ ನಿಚ್ಚಳ ಮಾಡಿದೆ. ಗುರುಗಳ ಸದ್ದೇ ಇಲ್ಲದಂತೆ ಮಾಡಿದೆ.

ಸ್ತ್ರೀ ಪುರುಷರ ಸಂಬಂಧವಾದ ನೀತಿ ನಡತೆಗಳಲ್ಲಿಯ ದೋಷಗಳನ್ನು ಬೈಲಿಗೆ ತಂದಿದೆ. ಸಂತಾನ ಸಂಬಂಧವಾದ ಹೊಸ ಕಟ್ಟು ಪಾಡುಗಳನ್ನು ಮಾಡಿದೆ. ಕಾಮ ತೃಪ್ತಿಯ ಅನೇಕ ಹೊಸ ರೀತಿ ನೀತಿಗಳನ್ನು ತೋರಿಸಿಕೊಟ್ಟಿದೆ.

ಈ ಪ್ರಕಾರ ಕೋಟ್ಯಾಂತರ ಜನಗಳಲ್ಲಿ ನಡೆವಿರುವ ಕ್ರಾಂತಿಯ ನಾನಾ ರೀತಿಗಳು ಅನೇಕ ಕನ್ನಡಿಗರಿಗೆ ಗೊತ್ತೇ ಇಲ್ಲ. ಅವುಗಳ ಹಿತಾಹಿತಗಳನ್ನೇನು ಬಲ್ಲರು? ಆ ಕ್ರಾಂತಿಯ ಕಿಡಿಗಳು ಈ ದೇಶಕ್ಕೂ ಹಾರಿಬರುತ್ತವೆ. ಅವುಗಳನ್ನು ತಿಳಿದುಕೊಂಡಿದ್ದರೆ ಸುಡುವುದನ್ನು ಸುಟ್ಟು ಇಡುವುದನ್ನು ಮುಚ್ಚಿಡಲು ಅನುಕೂಲವಾಗುವುದು.

ಇಲ್ಲದಿದ್ದರೆ ಎಲ್ಲವೂ ಸುಟ್ಟುಹೋಗುವವು. ಕ್ರಾಂತಿಯ ಕಿಡಿಗಳಗಂಜಿ ಓಡಿಹೋದರೆ ಸುಟ್ಟುಹೋಗಬೇಕಾಗಿರುವ ಅನೇಕ ದುರ್ವಿಷಯಗಳು ನಿಮ್ಮಲ್ಲಿಯೇ ಉಳಿದು ನೀವು ಕತ್ತಲೆಯಲ್ಲಿಯೇ ಇರಬೇಕಾಗುವುದು. ಅದಕ್ಕಾಗಿ ಕಣ್ಣು ತೆರೆದು ಪ್ರಪಂಚವನ್ನು ನೋಡಿರಿ. ಬೆಳಕು ಬಂದಿದೆ.

### ಬೋಲ್ ಸೇವಿಜಂ.

ಜಗತ್ತಿನಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡುತ್ತಿರುವ ಪಂಗಡವೆಂದರೆ ಬೋಲ್‌ಸೇವಿಜರು. ಇದು ರಸಿಯಾ ದೇಶದಲ್ಲಿ ಕ್ರಿ. ಶ. ೧೯೦೩ರಲ್ಲಿ ತಲೆದೋರಿತು. ಮೆಲ್ಲಗೆ ಬೆಳೆದು ೧೯೧೭ ರಲ್ಲಿ ರಸಿಯಾ ದೇಶದಲ್ಲಿ ರಾಜ್ಯ ಕ್ರಾಂತಿಯನ್ನುಂಟುಮಾಡಿ ಅರಸು ಪಟ್ಟವನ್ನೇ ಸುಟ್ಟುಬಿಟ್ಟು ಸಾಮಾನ್ಯ ಜನರ ರಾಜ್ಯವನ್ನು ಸ್ಥಾಪಿಸಿತು.

ಇದು ರಸಿಯಾ ದೇಶದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಲ್ಲದೆ ಜಗತ್ತಿನಲ್ಲೆಲ್ಲಾ ಪ್ರಸಾರವಾಗುವ ಹವಣಿಕೆಯಲ್ಲಿದೆ.

ರಾಜಕಾರಣ ಪಟುಗಳಿಗೂ ಬಂಡವಾಳಗಾರರಿಗೂ ದಿಕ್ಕು ತೋರದಂತೆ ಮಾಡಿದೆ. ಇಷ್ಟೇ ಅಲ್ಲ, ಗುರುಗಳಿಗೂ ಧರ್ಮೋಪದೇಶಕರಿಗೂ ಕಣ್ಣೀರು ಬರುವಂತೆ ಮಾಡಿದೆ. ರಾಜ್ಯಮದ, ಧನಮದ, ಕುಲಮದಗಳಿಂದ ಉಬ್ಬಿ ಮೆರೆದು ಒಡವರನ್ನೂ ಬಲ ಹೀನರನ್ನೂ, ಅಜ್ಞರನ್ನೂ ಗೋಳಿಗೀಡುಮಾಡಿದ್ದ ಮಹಾ ಪಾಪದ ಪ್ರಾಯಶ್ಚಿತ್ತವನ್ನೇ ಈಗ ನೀವು ಅನುಭವಿಸಿರೆಂದು ಆಡಿಕೊಳ್ಳುವಂತೆ ಮಾಡಿದೆ.

ಇಷ್ಟೇ ಅಲ್ಲ; ದೇವರಿಗೂ ಚಿಂತೆಯುಂಟಾಗುವಂತೆ ಮಾಡಿದೆ! ಏಕೆಂದರೆ ದೇವರನ್ನು ಕುರಿತು ಸ್ತುತಿಸುವುದಾಗಲಿ ಯೋಚಿಸುವುದಾಗಲಿ ಹುಚ್ಚುತನ, ಮಬ್ಬುತನ ವೆಂದು ಈ ಪಂಥವು ಸಾರಿ ಸಾರಿ ಹೇಳಿ ಕೊಟ್ಯಾಂತರ ಜನಗಳು ದೇವರ ಸುದ್ದಿಗೆ ಹೋಗದಂತೆ ಮಾಡಿದೆ

**ಈ ಪಂಥಕ್ಕೆ** ಕ್ರಿ. ಶ. ೧೮೧೮ರಿಂದ ೧೮೮೩ ರವರೆಗಿದ್ದ ಕಾರ್ಲಮಾರ್ಕ್ಸ್ ಎಂಬ ಜರ್ಮನ್ ಮಹಾ ತತ್ವಜ್ಞಾನಿಯೇ ಮೂಲ ಪುರುಷನು. ಪ್ರಪಂಚದ ಸಮಾಜ ರಚನೆಯಲ್ಲಿ ಇಂಥ ಅದ್ಭುತ ವ್ಯತ್ಯಾಸಗೊಳಿಸಿದ ಮಹಾಪುರುಷನು ಈ ವರೆಗೆ ಜಗತ್ತಿನಲ್ಲಿ ಯಾರೂ ಆಗಿಲ್ಲ.

ಧರ್ಮದ ನೀತಿ ಆಚಾರ ಮೊದಲಾದಸಂಗತಿಗಳ ಸಂಬಂಧವಾಗಿ ಈ ಪಂಗಡವು ಮಾಡಿರುವ ಕ್ರಾಂತಿಯನ್ನು ನೋಡಿದರೆ ಪ್ರಪಂಚದ ಲ್ಲಿರುವ ಎಷ್ಟೋ ಮಬ್ಬು ಹರಿದು ಹೋಗಬೇಕಾದುದು ಅಗತ್ಯವೆಂದೂ ಹಿಂದಿನ ಕತ್ತಲೆ ಹರಿದು ಇಂದಿನ ಬೆಳಕು ತೋರುವ ಕಾಲ ಸಮೀಪಿಸಿದೆಯೆಂದೂ ಸ್ಪಷ್ಟವಾಗುತ್ತದೆ.

---

—ಕ್ರಿಸ್ತೋ ಸಾಧು ಜೀವರತ್ನಮ್ ಎಂಬವನು ಆಹವ್ಮದನಗರದಲ್ಲಿ ಬೇನೆ ಬಿದ್ದವರ ಬೇನೆಯನ್ನು ಕಳೆಯುವುದು ಕುರುಡರಿಗೆ ಕಣ್ಣು ಕೊಡುವದು ಮೊದಲಾದವನ್ನು ಮಾಡುತ್ತಾನೆಂದು ಹೂಲಿ ಎದ್ದಿದೆ. ಶ್ರೀ. ಭೂಪೆ ಎಂಬುವವರು ಇವನ್ನು ಯಾರೂ ನಂಬ ಕೂಡದೆಂದೂ ತಾವು ತೋರಿಸಿದ ಮೂಕನಿಗೆ ಮಾತಾಡಹಚ್ಚುವರಿ ೧೦೦೦ ರೂ. ಬಹುಮಾನ ಕೊಡುವೆವೆಂದೂ ತಿಳಿಸಿರುವರು.

—ಮದ್ರಾಸ ಕಾರ್ಪೋರೇಶನ್ನಿನವರು ಶ್ರೀ. ಸರೋಜಿನಿ ದೇವಿಯವರಿಗೆ ಮಾನಪತ್ರ ಕೊಟ್ಟರು. ಅವನ್ನು ಕಾರ್ಪೊರೇಶನ್ನಿನ ಒಬ್ಬ ಯುರೋಪಿಯನ್ ಸಾಹೇಬರು ಓದಿದರು.

# ಮಹಿಳಾ ಪ್ರಪಂಚ.

## ಜಪಾನದ ಸ್ತ್ರೀಯರು ಮಹಿಳಾ ಪ್ರಪಂಚದಲ್ಲಿ ಮೇಲು.

'ಆರ್ಯ ಮಹಿಳಾ' ಎಂಬ ಪದವಿಯು ಯಾವ ಸ್ತ್ರೀಯರಿಗಾದರೂ ಸಾರ್ಥಕವಾಗಿ ಅನ್ವಯಿಸುವಂತಿದ್ದರೆ ಅದು ಜಪಾನ ಸ್ತ್ರೀಯರಿಗೇ ಎಂದೆನ್ನಬಹುದು. ಅವರು ಸ್ವಂತ ಕುಟುಂಬದ ಹೆಚ್ಚಳವನ್ನು ಅಪೇಕ್ಷೋ ಗೌರವಿಸುತ್ತಾರೆ. ಮತ್ತು ತೌರ ಮನೆಗಿಂತಲೂ ಅತ್ತೆಯ ಮನೆಯ ವಿಷಯಕ್ಕೇನೇ ಹೆಚ್ಚು ಅಭಿಮಾನಶಾಲಿಗಳಾಗಿರುತ್ತಾರೆ. ಅವರ ಪತಿಭಕ್ತಿ ಪರಾಯಣತೆಯು ಪರಿಪೂರ್ಣವಾದದ್ದು. ತಮ್ಮ ಕುಲದ ಪ್ರತಿಷ್ಠೆಗಾಗಿ ಶಾಂತ ರೀತಿಯಿಂದ ಆತ್ಮಾರ್ಪಣೆಯನ್ನು ಕೂಡಾ ಮಾಡಲು ಸಿದ್ಧರಿರುತ್ತಾರೆ. ತಮ್ಮ ಹಿರಿಯರ ಮುಂದೆ ಅವರು ವಿಧೇಯರಾಗಿರುವಂತೆಯೇ ತಮ್ಮ ಮಕ್ಕಳನ್ನು ಅತ್ಯಂತವಾಗಿ ಪ್ರೀತಿಸುವರು. ಸ್ವಾರ್ಥತ್ಯಾಗದಲ್ಲಿ ಜಪಾನಿ ಸ್ತ್ರೀಯು ಉಳಿದ ದೇಶಗಳ ಸ್ತ್ರೀಯರಿಗಿಂತ ಮಿಗಿಲಾಗಿದ್ದಾಳೆ. ಅವಳಿಗೆ ತನಗಾಗಿ ಮಾನಮನ್ನಣೆಗಳು ಬೇಕಾಗಿರುವುದಿಲ್ಲ. ಆದರೆ ತನ್ನ ಕುಲದ ದೊಡ್ಡಸ್ತಿಕೆಗಾಗಿ ಅವಳು ಯಾವಾಗಲೂ ಪ್ರಯತ್ನಿಸುತ್ತಿದ್ದಾಳೆ.

ಜಪಾನಿ ಸ್ತ್ರೀಯರು ಸುಗೃಹಿಣಿಯರಾಗಿರುತ್ತಾರೆ. ಪ್ರತಿಯೊಬ್ಬ ಬಾಲಿಕೆಗೆ ಗೃಹವ್ಯವಸ್ಥೆಯ ಶಿಕ್ಷಣವು ಚಿಕ್ಕಂದಿನಿಂದಲೇ ಕೊಡಲ್ಪಡುತ್ತದೆ. ಅಂದರೆ ಬಾಲಿಕೆಯರನ್ನು ನಾಲ್ಕು ಗೋಡೆಗಳ ಮಧ್ಯದಲ್ಲಿರಿಸಿ ಅವರನ್ನು ಶಕ್ತಿ ವಿಹೀನೆಯರನ್ನಾಗಿ ಮಾಡುತ್ತಾರೆಂದು ತಿಳಿಯಬಾರದು. ಹೊರಗಿನ ಯಾವದೇ ಕೈಕೆಲಸವಿದ್ದರೂ ಬಾಲಿಕೆಯರಾಗಲಿ ತರುಣಿಯರಾಗಲಿ ಹೋಗಿ ಅಂಜದೆ ಉತ್ಸಾಹದಿಂದ ಅದನ್ನು ಅವರು ಮಾಡಬಲ್ಲರು.

ಜಪಾನಿ ನಾರಿಯರು ಹೊಲಗಳಲ್ಲಿ ಮುಂಜಾವಿನ ನಸುಕಿನಿಂದ ಸಂಜೆಯ ಮಸುಕಿನವರೆಗೆ ಒಂದೇ ಸವನೆ ಕೆಲಸ ಮಾಡಲು ಶಕ್ತರಾಗಿರುತ್ತಾರೆ. ಕೆಲಕೆಲವು ಉದ್ಯೋಗಗಳಲ್ಲಿಯಂತೂ ಪುರುಷರಿಗಿಂತಲೂ ಸ್ತ್ರೀಯರೇ ಹೆಚ್ಚು ಕೆಲಸ ಮಾಡುತ್ತಾರೆಂಬುದು ಕಂಡುಬರುತ್ತದೆ. ಉದಾಹರಣಾರ್ಥವಾಗಿ ಸಮುದ್ರದಲ್ಲಿ ಮುಳುಗಿ ಸಿಂಪಿಗಳನ್ನು ತರುವ ಜಪಾನಿ ಜಾಲಗಾರ್ತಿಯರು ಪುರುಷರಿಗಿಂತಲೂ ಹೆಚ್ಚಿನ್ನಬಹುದು. ಆ ಉದ್ಯೋಗವನ್ನು ಬಹುತರ ಸ್ತ್ರೀಯರೇ ಮಾಡುತ್ತಾರೆ. ಶರೀರ ಸಾಮರ್ಥ್ಯದಲ್ಲಿ ಜಪಾನಿ ಸ್ತ್ರೀಯರು ಪುರುಷರಿಗಿಂತಲೂ ಸ್ವಲ್ಪವೂ ಕಡಿಮೆಯವರಲ್ಲ.

ಬುದ್ಧಿವಿಷಯದಲ್ಲಿಯೂ ಜಪಾನಿ ಸ್ತ್ರೀಯರು ಜಗತ್ತಿನ ಯಾವದೇ ಜನಾಂಗದ ಸ್ತ್ರೀಯರಿಗಿಂತಲೂ ಸ್ವಲ್ಪವೂ ಕಡಿಮೆಯಾಗಿರುವುದಿಲ್ಲ. ಸಾವಿರ ವರುಷಗಳ ಪೂರ್ವದಲ್ಲಿ ಜಪಾನಿ ಸ್ತ್ರೀಯರು ತಮ್ಮ ಸಂಸ್ಕೃತಿಯಲ್ಲಿ ಉಚ್ಚ ಸ್ಥಾನವನ್ನು ಪಡೆದಿದ್ದರೆಂದು ಹೇಳಿದರೆ ಸರದೇಶಸ್ಥರು ಈಗ ವಿಶ್ವಾಸವನ್ನೇ ಇಡಲಿಕ್ಕಿಲ್ಲ. ಆ ಕಾಲಕ್ಕೆ ಬಾದಶಹನ ಓಲಗದಲ್ಲಿಯ ಲೆಕ್ಕ ಪತ್ರಗಳ ವ್ಯವಹಾರವನ್ನು ಕೇವಲ ಸ್ತ್ರೀಯರೇ ಮಾಡುತ್ತಿದ್ದರು. ಯಾವುದಕ್ಕೆ ಈಗ ಅವಶ್ಯಕವಾದ ಇತಿಹಾಸ ಸಂಗ್ರಹವೆಂದು ಬೆಲೆಯನ್ನು ಕಟ್ಟುತ್ತಿದ್ದಾರೆಯೋ ಅಂಥ ಅಲ್ಲಿಯ ರಾಜನ ಮತ್ತು ರಾಣಿಯ ಪ್ರತಿನಿತ್ಯದ ದಿನಚರ್ಯೆಯನ್ನು ಆಗಿನ ಕಾಲದ ಸ್ತ್ರೀಯರೇ ಬರೆದಿಡುತ್ತಿದ್ದರು. ಜಪಾನಿಗಳಲ್ಲಿ ೫೧ ಅಕ್ಷರಗಳುಳ್ಳ ಒಂದು ಕಾವ್ಯ ಪದ್ಧತಿಯಿದೆ. ಅದಕ್ಕೆ ಅವರು ವಾಕಾ ಅನ್ನುತ್ತಾರೆ. ಈ ತರದ ಕಾವ್ಯಗಳನ್ನು ರಚಿಸುವದು ಸ್ತ್ರೀಯರ ಕಡೆಗೇನೇ ಇದ್ದಿತು. ಓಲಗದಲ್ಲಿರುವ ಸರ್ವ ಸ್ತ್ರೀಯರೂ ಆ ಕಾಲಕ್ಕೆ ಕಾವ್ಯಗಳನ್ನು ರಚಿಸುತ್ತಿದ್ದರು. ಆ ಕಾಲದಲ್ಲಿ ಸ್ತ್ರೀಯರು ರಚಿಸಿದ ಕಾವ್ಯಗಳು ಈಗಿನ ಕಾಲದಲ್ಲಿಯೂ ಹಳ್ಳೇ ಪ್ರಶಂಸೆಗೆ ಪಾತ್ರವಾಗಿವೆ.

ಸದ್ಯದಲ್ಲಿ ಜಪಾನವು ಜಗತ್ತಿನ ಉದ್ಯೋಗ ಕ್ಷೇತ್ರದಲ್ಲಿಯೇ ಭಯಂಕರ ಕ್ರಾಂತಿಯನ್ನುಂಟುಮಾಡಿದೆ. ಅದರ ಗಟ್ಟಿಗತನ, ಕಾರ್ಯದಲ್ಲಿ ಕುಶಲತೆ, ಚಟುವಟಿಕೆ, ಆಲಸ್ಯರಾಹಿತ್ಯವನ್ನು ಕಂಡು ಜಗತ್ತೆಲ್ಲ ಬೆರಗಾಗಿದೆ. ಈ ಕೀರ್ತಿಯು ಜಪಾನ ಸ್ತ್ರೀಯರಿಗೇನೇ ಸಲ್ಲುವದು. ಹಿಂದು ಮಹಿಳೆಯರೂ ಜಾಗೃತರಾಗಿ ತಮ್ಮ ಉದ್ಧಾರವನ್ನು ಈ ರೀತಿ ಮಾಡಿಕೊಳ್ಳುವರೇ?

### ಮೈಸೂರಿನಲ್ಲಿ ಶ್ರೀಮತಿ ಸರೋಜಿನಿ ದೇವಿಯವರು



ಶ್ರೀ ಸರೋಜಿನಿ ದೇವಿ.

ಶ್ರೀಮತಿ ಸರೋಜಿನಿ ದೇವಿಯವರು ಮೈಸೂರಿನಲ್ಲಿ ಅಲ್ಲಿಯ ಮಹಿಳಾ ಸಮಾಜದ ೧೬ನೆಯ ವಾರ್ಷಿಕೋತ್ಸವ ಸಮಾರಂಭದ ಕಾಲಕ್ಕೆ ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟಾಗ ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ— ಸ್ತ್ರೀಯರು ಸಂಸ್ಕೃತಿಗೂ ವಿದ್ಯಾಭ್ಯಾಸಕ್ಕೂ ಇರುವ ವ್ಯತ್ಯಾಸವನ್ನು ತಿಳಿದು ಸರಳತೆ, ಸ್ವಾರ್ಥತ್ಯಾಗ, ಸೇವೆ ಮುಂತಾದವುಗಳನ್ನು ಕಲಿಯಬೇಕು. ಸಂಸ್ಕೃತಿಯಿಲ್ಲದ ಬರಿ ವಿದ್ಯಾಭ್ಯಾಸವು ನಿಷ್ಪ್ರಯೋಜನವು. ಹಿಂದು ದೇವತೆಗಳೆಲ್ಲ ಒಂದೊಂದು ಭಾವನೆಯ ದ್ಯೋತಕವಾಗಿರುವರು. ಲಕ್ಷ್ಮಿಯು ಅನುಗ್ರಹವನ್ನೂ, ಸರಸ್ವತಿಯು ಸಂಸ್ಕೃತಿಯನ್ನೂ, ಪಾರ್ವತಿಯು ಧೈರ್ಯ ಸ್ಥೈರ್ಯವನ್ನೂ ಸೂಚಿಸುತ್ತಿರುವರು. ಅವರೆಲ್ಲರೂ ತಮ್ಮ ಪತಿಗಳಿಗೆ ಗುಲಾಮರಾಗಿರದೆ ಅವರೊಡನೆ ಸಮಭಾಗಿಗಳಾಗಿರುವುದರಿಂದ ಅವರಂತೆಯೇ ಎಲ ಸ್ತ್ರೀಯರೂ ಇರಬೇಕು."

---

—ಮೈಸೂರಿನಲ್ಲಿ ಶ್ರೀಮತಿ ಸರೋಜಿನಿಯವರು ಸಭಿಕರಿಗೆ ಸರಸವಾದ ಮತ್ತು ಮಾತೃಭಾಷೆಯಾದ ಕನ್ನಡವನ್ನು ಆಸ್ಥೆಯಿಂದ ಕಲಿಯಲು ಉಪದೇಶಿಸಿದರು.

—ಜಪಾನಿನಲ್ಲಿ ೨೦ ಲಕ್ಷ ಜಪಾನಿ ಸ್ತ್ರೀಯರು ಸ್ವಂತ ವೃತ್ತಿಯಲ್ಲಿಯೇ ಉಪಜೀವನ ಮಾಡಿಕೊಂಡಿರುವರು.

# ಶಿವಶರಣರ ದಿವ್ಯ ವಾಣಿ.

ಮಹಾನುಭಾವರಾದ ಬಸವಣ್ಣನವರು ಶಿವಶರಣರಲ್ಲಿ ಹಿರೀ ಮಣಿ. ಇವರ ನುಡಿ ವೇದ ವಾಕ್ಯಕ್ಕಿಂತ ಹೆಚ್ಚಿನದು. ಇವರ ನಡೆ ಅನೇಕ ಮಹಾತ್ಮರಿಗಿಂತ ಮೇಲು.

ನಾನಾ ಯಜ್ಞ ಯಾಗಾದಿ ಕರ್ಮ ಮಾರ್ಗಗಳಲ್ಲಿ ತೊಳಲಿ ಬಳಲುವವರನ್ನು ಬಿಡಿಸಲು ಬಸವಣ್ಣನು ಬಂದನು. ವಾಗ್ದೈತ ದಿಂದ ಭ್ರಮಿತರಾದವರ ಭ್ರಮೆಯನ್ನಿಳಿಸಲು ಬಸವಣ್ಣನು ಬಂದನು. ಕುಲಮದದಿಂದ ಬೆಂದು ಬೆಂಡಾಗುವುದನ್ನು ಬಿಡಿಸಲು ಬಸವಣ್ಣನು ಬಂದನು.

ಅಂದು ಬಸವಣ್ಣ ಬಂದು ನಡೆದು ತೋರಿಸಿದುದನ್ನು ಇಂದು ನಾವೂ ನಡೆದರೆ ನಮಗೆ ಹಿತ. ಅಂದು ಬಸವಣ್ಣ ಬಂದು ನುಡಿದುದನ್ನು ಇಂದು ನಾವು ಕೇಳಿ ಅದರಂತೆ ನಡೆದರೆ ಒಳ್ಳೆಯದು. ಹಾಗೆ ನಾವು ನಮ್ಮ ನಡೆನುಡಿಗಳಲ್ಲಿ ತಿದ್ದುಪಾಟು ಮಾಡಿಕೊಳ್ಳದೆ ಬಸವ, ಬಸವ, ಬಸವ, ಎಂದು ಎಷ್ಟು ಸಾರಿ ನೆನೆದರೂ ಫಲವೇನು?

**ಕೆಂಚಕರಿಕನ ನೆನೆದರೆ ಕರಿಕನಾಗಬಲ್ಲನೆ? ಕರಿಕ ಕೆಂಚನ ನೆನೆನರೆ ಕೆಂಚನಾಗ ಬಲ್ಲನೆ? ದರಿದ್ರ ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೆ? ಸಿರಿವಂತ ದರಿದ್ರನ ನೆನೆದರೆ ದರಿದ್ರನಾಗಬಲ್ಲನೆ? ಮುನ್ನಿನ ಪುರಾತನರ ನೆನೆದು ಧನ್ಯನಾದಿಹೆನೆಂಬ ಮಾತಿನ ರಂಜಕರನೇನೆಂಬೆ ಕೂಡಲ ಸಂಗಮ ದೇವ?**

ಕರಿಯ ಮನುಷ್ಯನು ಕೆಂಪು ಮನುಷ್ಯನನ್ನು ನೆನೆದರೆ ಆತ ನೇನು ಕೆಂಪಾಗುವನೆ? ಕೆಂಪು ಮನುಷ್ಯನು ಕಪ್ಪು ಮನುಷ್ಯನನ್ನು ಧ್ಯಾನಿಸಿದರೆ ಆತನೇನು ಕಪ್ಪಾಗುವನೇ? ಬಡವನನ್ನು ಧನಿಕನು ಸ್ಮರಿಸಿದರೆ ಬಡವನಾಗುವನೇ? ಅಥವಾ ಧನಿಕನನ್ನು ಬಡವನು ನೆನೆದರೆ ಆತನೇನು ಧನಿಕನಾಗುವನೆ? ಇಲ್ಲವೇ ಇಲ್ಲ.

ಎಂದಮೇಲೆ ಹಿಂದಿನ ಮಹಾ ಮಹಾ ಶಿವಶರಣರನ್ನು ನೆನೆದ ಮಾತ್ರದಲ್ಲಿ ನಾವು ಉದ್ಧಾರವಾಗುವುದೆಂತು? ಆನು ರಹ್ಯನೇ ಇಲ್ಲ. ಹಾಗೆ ನೆನೆದ ಮಾತ್ರದಿಂದ ಉದ್ಧಾರವಾವೆವೆಂದು ಹೇಳುವವರ ಮಾತನ್ನು ನಂಬಲಾಗದು. ಅದು ಸುಳ್ಳು. ಆ ಪುರಾತನರಂತೆ ನಡೆದರೆ ಮಾತ್ರ ನಾವು ಅಭಿವೃದ್ಧಿಯನ್ನು ಹೊಂದುತ್ತೇವೆ.

ಆ ಬಸವ ಮಹಾನುಭಾವರ ಈ ದಿವ್ಯ ವಾಣಿಯು ನಮ್ಮ ಕಣ್ಣು ಮುಂದೇ ಇರಲಿ. ನಾವು ಆ ಬಸವಾದಿ ಪ್ರಮಥರನ್ನು ನೆನೆದ ಮಾತ್ರದಲ್ಲಿ ಉದ್ಧಾರವಾಗುವುದಿಲ್ಲ. ಅವರ ನಡೆನುಡಿಗಳಂತೆ ನಾವು ಆಚರಿಸಿದಾಗಲೇ ಪವಿತ್ರರೂ ಸುಖಿಗಳೂ ಪರಮಾತ್ಮನ ಕೃಪೆಗೆ ಪಾತ್ರರೂ ಆಗುತ್ತೇವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿರಬೇಕು.

ನಡೆಯಿಲ್ಲದ ನೆನವು ವ್ಯರ್ಥವೇನೋ ಸರಿ. ನೆನವೂ ಇಲ್ಲದಿರುವುದಂತೂ ಬಹು ಹೀನವಾದುದು. ಮಕ್ಕಳಮೇಲೆ ತಾಯಿತಂದೆಗಳ ಋಣವು ಹೇಗೆ ಇದ್ದೇ ಇರುತ್ತದೆಯೋ ಹಾಗೆಯೇ ತಾನು ಯಾವ ಮತವನ್ನಾಚರಿಸಿ ಆ ಮೂಲಕವಾದ ಸುಖಶಾಂತಿಗಳನ್ನನುಭವಿಸುತ್ತಿರುತ್ತಾನೆಯೋ ಅಂತಹ ಮತದ ಮೂಲಪುರುಷನ ಋಣವೂ ಕನ್ನಮೇಲೆ ಅತ್ಯಧಿಕವಾಗಿಯೇ ಇರುತ್ತದೆ.

ಅಂತಹ ಮೂಲ ಪುರುಷನಲ್ಲಿ ಭಕ್ತಿ ಭಾವನೆಯುಳ್ಳವನಾಗಿ ಯಾವಾತನು ಆತನನ್ನು ನೆನೆಯಲು ಕೂಡಾ ಮರೆಯುತ್ತಾನೆಯೋ ಅಂಥ ಅಧಮ ಆತನಲ್ಲದೆ ಬೇರೆಯವರಾರು? ಆ ನೆನವು ತನ್ನ ನಡೆನುಡಿಗಳ ಸುಧಾರಣೆಗೆ ಎಚ್ಚರಿಕೆಯನ್ನು ಕೊಡುವುದಾಗಿರಬೇಕು. ಆ ನೆನವೇ ಪುಣ್ಯವಲ್ಲ. ಆ ನೆನವಿನಿಂದ ತನ್ನ ನಡೆಯಲ್ಲುಂಟಾಗುವ ಸುಧಾರಣೆಯೇ ಪುಣ್ಯದ ಪುತ್ಥಳಿ.

ಇದನ್ನರಿಯದೆ ಬಸವ ಬಸವ ಎಂದು ಹೇಳಿದ ಮಾತ್ರದಲ್ಲಿ ನವ್ಮ ಕರ್ತವ್ಯ ಪೂರೈಸಿತೆಂದು ತಿಳಿಯಬಾರದು. ಹಾಗೆ ಹೇಳಿದ ಮಾತ್ರುವಲ್ಲಿ ಬಸವೇಶನ ಅನುಯಾಯಿಗಳಾಗುವುದಿಲ್ಲ. ಆತನು ನಡೆದು ನುಡಿದಿರುವಂತಹ ದಿವ್ಯ ತತ್ವಗಳನ್ನನುಸರಿಸಿ ನಾವೂ ನಡೆಯಲು ಪ್ರಯತ್ನಿಸಬೇಕು.

ಇಷ್ಟಲಿಂಗದ ವಿನಾ ಇನ್ನಾವ ದೇವರನ್ನೂ ಪೂಜಿಸಬಾರದಾಗಿಯೇ ಶಿವಶರಣರು ಸಾರಿಸಾರಿ ಹೇಳಿದರೂ ನಾನಾ ದೇವರ ಪೂಜೆಯ ಮಬ್ಬು ಇನ್ನೂ ಅಸಂಖ್ಯ ಲಿಂಗಾಂಗಿಗಳಿಗಿಲ್ಲವಲ್ಲಾ! ಅನ್ಯ ದೈವದೆಂಜಲವ ತಿಂಬವರನೇನೆಂಬೆ? ಎಂದು ಆ ಬಸವ ಮಹಾನುಭಾವನು ಹೇಳಿದುದು ಇನ್ನೂ ತಿಳಿಯದೆ ಮನೆತುಂಬ ದೇವರನ್ನಿಟ್ಟು ಪೂಜಿಸುವರಲ್ಲಾ!

ವೀರಭದ್ರ, ಬಸವಣ್ಣ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ ನಮ್ಮ ಕೂಲ ದೈವಂಗಳೆಂದು ಹೇಳುವವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲ ಕೂಡಲ ಚೆನ್ನ ಸಂಗಮ ದೇವ. ಎಂದು ಚೆನ್ನ ಬಸವಣ್ಣನವರು ಹೇಳಿದುದನ್ನಾದರೂ ಕೇಳಿರಿ.

ಕರಸ್ಥಲದ ಲಿಂಗವ ಬಿಟ್ಟು ಧರೆಯ ಮೇಲಣ ಪ್ರತಿಷ್ಠೆಗೆರಗುವ ನರಕಿನಾಯಿಗಳನೇನೆಂಬೆನಯ್ಯ ಪರಮಗುಣ ಶಾಂತ ಮಲ್ಲಿಕಾರ್ಜುನಾ?

ಕಾಳಿಕಾ, ಚಾಮುಂಡಿ, ಗಂಗೆ, ಗೌರಿ, ಬನಶಂಕರಿ, ಎಲ್ಲಿ, ಎಕ್ಕನಾದಿ, ಹುಲಿಗೆ, ಹೊಸೂರು, ಸತ್ತವರು, ಹೆತ್ತವರು ಇಂತೀ ಹಲವು ಪಿಶಾಚಿಗಳ ಹೆಸರಿನಿಂದ ಇದಿರಿಟ್ಟು ಆರಾಧಿಸಿ ಅವರಾ ನೈವೇದ್ಯನೆಂದು ಶ್ರೀ ಗುರುವಿತ್ತ ಲಿಂಗಕ್ಕೆ ತೋರಿ ಭುಂಜಿಸುವ ಶಿವದ್ರೋಹಿಗಳಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮ ಪಾದೋದಕ ಪ್ರಸಾದವಿಲ್ಲ ಕಾಣಾ ಸಂಗನ ಬಸವಣ್ಣ.

ಈ ಪ್ರಕಾರ ಶ್ರೀ ಬಸವಾದಿ ಶಿವಶರಣರ ಅನೇಕ ದಿವ್ಯ ವಚನಗಳನ್ನು ಉದಾಹರಿಸಬಹುದು. ವೀರಶೈವನು ಇಷ್ಟಲಿಂಗದ ವಿನಾ ಇನ್ನಾವ ದೇವರ ಪೂಜೆ, ಧ್ಯಾನ, ಮೊದಲಾದವುಗಳನ್ನು ಮಾಡಲೇ ಬಾರದಾಗಿ ಹೇಳುತ್ತಿದ್ದರೂ ನಾನಾ ದೇವರನ್ನು ಪೂಜಿಸಿ ಸಾಲದೆ ಮತ್ತೆ ಲಿಂಗ ಪ್ರತಿಷ್ಠೆ ಮಾಡಿಸಿ, ಗುಡಿಕಟ್ಟಿಸಿ ಸಲ್ಲದ ಕಾರ್ಯಗಳಲ್ಲಿ ತನುಮನಧನಗಳನ್ನು ವ್ಯರ್ಥಮಾಡಿಕೊಳ್ಳುವವರು ಪುರಾತನರನ್ನು ನೆನೆದ ಮಾತ್ರದಲ್ಲಿ ಉದ್ಧಾರವಾಗುವರೇ? ಈ ಅನ್ಯ ದೇವತಾರಾಧನೆಯನ್ನು ಮೊದಲು ಬಿಡಬಾರದೇ?

ಶಾ. ಶ. ೧೮೫೬ ನೆಯ ಶ್ರಾವಣ ಶು|| ೧೦ ಸೋಮವಾರ.

## ರಾಷ್ಟ್ರೀಯ ಸಭೆಯಲ್ಲಿ ಅನೈಕ್ಯವೇಕೆ?

ರಾಷ್ಟ್ರೀಯ ಸಭೆಯಲ್ಲಿ ಈ ವರೆಗೆ ಏಕಮತ್ಯವಿದ್ದಿತು. ಆದರೆ ಈಗ ಅನೈಕಮತ್ಯವುಂಟಾಗಿದೆ. ಪಂಡಿತ ಮಾಲವೀಜಿಯವರಂತಹ ರಾಷ್ಟ್ರೀಯ ಸಭೆಯ ಪ್ರಮುಖರು ಅದರಿಂದ ಬೇರೆಯಾಗಿದ್ದಾರೆ ಇಂತಹ ಸ್ಥಿತಿ ಬಂದುದೇಕೆಂಬುದನ್ನು ಸಕಲರೂ ತಿಳಿದುಕೊಳ್ಳುವುದು ಅತ್ಯಾವಶ್ಯಕ.

ಹಿಂದುಸ್ಥಾನದಲ್ಲಿ ಭಿನ್ನಭಿನ್ನ ಸಂಸ್ಕೃತಿಯ ಬೇರೆಬೇರೆ ಜಾತಿಗಳು ನೆಲೆಸಿರುವುದರಿಂದ ಇಲ್ಲಿ ಜಾತಿ ಮತ್ಸರ, ಜಾತಿಯ ಮೇಲು ಕೀಳು ಭಾವನೆ, ಜಾತಿಯ ಜಗಳಗಳು ಅತ್ಯಧಿಕ. ಇವು ಗಳನ್ನು ಮುಚ್ಚುಮರೆಮಾಡಿ ರಾಜ್ಯ ಸೂತ್ರವೊಂದನ್ನು ಮೊದಲು ಕೈಯಲ್ಲಿ ತೆಗೆದುಕೊಳ್ಳೋಣವೆಂದು ಹಲವರು ಹಲವು ಪ್ರಯತ್ನ ಗಳನ್ನು ಮಾಡುತ್ತ ಬಂದಿದ್ದರೂ ಅವು ಫಲಕಾರಿಯಾಗಿಲ್ಲ.

ಏಕೆಂದರೆ ಈ ದೇಶದಲ್ಲಿ ಮತಪ್ರೇಷಾಸೂಯೆಗಳು ಎಷ್ಟು ರೀತಿಗಳಿಂದ ವ್ಯಾಪಿಸಿವೆಯೆಂಬುದು ಪ್ರಪಂಚಕ್ಕೇನೇ ಗೊತ್ತಿದೆ. ಅದರಲ್ಲಿ ಇಂಗ್ಲೀಷ್ ಸರಕಾರಕ್ಕಂತೂ ಚೆನ್ನಾಗಿ ಗೊತ್ತು. ಎಂದ ಮೇಲೆ ನಮ್ಮ ತೋಟಿಕೆಯ ರಾಷ್ಟ್ರೀಯ ಭಾವನೆಯು ಎಷ್ಟು ಕಾಲ ತಾನೆ ತಾಳುವುದು? ಅದು ಮೆಲ್ಲಗೆ ಜಾತಿಯ ಜಗಳದಿಂದ ಹೊರ ಬಿದ್ದೇ ಬೀಳುವುದು.

ಈಗ ರಾಷ್ಟ್ರೀಯ ಸಭೆಯಲ್ಲುಂಟಾಗಿರುವ ಅನೈಕ್ಯಮತ್ಯಕ್ಕೆ ಜಾತಿಯ ಜಗಳವೇ ಮೂಲ ಕಾರಣ. ಮುಸಲ್ಮಾನರನ್ನು ಒಳಗೆ ಮಾಡಿಕೊಂಡು ಹಿಂದು ಮುಸಲ್ಮಾನರು ಐಕಮತ್ಯವುಳ್ಳವರಾಗಿ ದ್ದೇನೆಂದು ಸರಕಾರಕ್ಕೆ ತೋರಿಸಿ ರಾಜ್ಯ ಸೂತ್ರವನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಈ ಮುಂಚೆ ಅನೇಕ ಸಾರೆ ಪ್ರಯತ್ನಿಸಿ ದಂತೆ ಈಗಲೂ ಇದೊಂದು ಪ್ರಯತ್ನ.

ರಾಷ್ಟ್ರೀಯ ಸಭೆ ಹುಟ್ಟಿದಂದಿನಿಂದಲೂ ಮುಸಲ್ಮಾನರನ್ನು ಸಂತೋಷಗೊಳಿಸಲು ಇದು ಪ್ರಯತ್ನಿಸುತ್ತಲೇ ಬಂದಿದೆ. ಇಂಗ್ಲಿಷ ಸರಕಾರವೂ ಇದನ್ನು ಚೆನ್ನಾಗಿ ತಿಳಿದಿದೆ. ಒಂದು ಕಡೆ ರಾಷ್ಟ್ರೀಯ ಸಭೆ ಇನ್ನೊಂದು ಕಡೆ ಇಂಗ್ಲಿಷ್ ಸರಕಾರ. ಮಧ್ಯದಲ್ಲಿ ಮುಸ ಲ್ಮಾನ್ ಸಮಾಜ ಇದನ್ನು ಸಂತೋಷಪಡಿಸಿ ತನ್ನಾಧೀನ ಇಟ್ಟುಕೊಳ್ಳಬೇಕೆಂದು ಇತ್ತ ರಾಷ್ಟ್ರೀಯ ಸಭೆ, ಅತ್ತ ಸರಕಾರ ಪ್ರಯತ್ನಿಸುತ್ತಲೇ ಬಂದಿವೆ.

ಮುಸಲ್ಮಾನ್ ಸಮಾಜವಾದರೋ ಎರಡೂ ಕಡೆಯಿಂದ ದೊರೆಯುವದನ್ನು ಹೊಂದಿ ಅದು ದಿನೇದಿನೇ ಪ್ರಬಲವಾಗುತ್ತಲೇ ಬಂದಿದೆ. ಹೀಗಿದ್ದರೂ ಮುಸಲ್ಮಾನರನ್ನು ಸಂತೋಷಗೊಳಿಸುವ ಹವ್ಯಾಸ ರಾಷ್ಟ್ರೀಯ ಸಭೆಗೆ ಇನ್ನೂ ಹೋಗಿಲ್ಲ. ಅದು ಈ ಸಾರೆ ಡಾ. ಅನ್ಸಾರಿಯವರನ್ನು ಆಪ್ತಿಕೊಳ್ಳಲು ಹೋಯಿತು. ಅದ ಕ್ಕಾಗಿ ಧರ್ಮಾತ್ಮಾ ಮಾಲವೀಜಿ, ಶ್ರೀ. ಆಣೆ ಮೊದಲಾದವರು ದೂರಾಗಬೇಕಾಯಿತು.

ರಾಷ್ಟ್ರೀಯ ಸಭೆಗೆ ಜಾತಿ ವಿಶಿಷ್ಟವಾದ ನಿರ್ಣಯವು ಯಾವಾ ಗಲೂ ನಿಷೇಧವಾದುದಷ್ಟೆ. ಎಂದಮೇಲೆ ಮೆಕಡೊನೆಲ್ಡರವರು ಗೊತ್ತು ಮಾಡಿದ ಜಾತಿ ನಿರ್ಣಯವನ್ನು ರಾಷ್ಟ್ರೀಯ ಸಭೆಯು ಅದೇಕೆ ನಿಷೇಧಿಸಬಾರದಾಗಿದ್ದಿತು? ಹಾಗೆ ಮಾಡಿದರೆ ಮುಸ ಲ್ಮಾನ ಸಮಾಜಕ್ಕೆ ಅಸಂತೋಷವುಂಟಾಗುತ್ತದಲ್ಲಾ!

ಅದಕ್ಕಾಗಿ ಈ ಜಾತಿ ನಿರ್ಣಯವನ್ನು ನಿಷೇಧಿಸುವುದೂ ಇಲ್ಲ. ಒಪ್ಪುವುದೂ ಇಲ್ಲ ಎಂಬ ಒಂದು ವಿಚಿತ್ರ ನಿರ್ಣಯವನ್ನು ಮಾಡಿತು. ಮುಸಲ್ಮಾನರನ್ನು ಸಂತೋಷಗೊಳಿಸಿದ ಈ ಘಾತಕ ಪದ್ಧತಿಯನ್ನು ನೋಡಿ ಧರ್ಮಾತ್ಮಾ ಮಾಲವೀಜಿ ಮೊದಲಾದವರು ರಾಷ್ಟ್ರೀಯ ಸಭೆಯಿಂದ ಬೇರೆಯಾದರು. ಆದಕಾರಣ ಜಾತಿಯ ಜಗಳವೇ ಈ ಅನೈಕಮತ್ಯದ ಮೂಲ.

## ಸ್ಫುಟ ವಿಚಾರ.

### ರಾಷ್ಟ್ರೀಯ ಪಕ್ಷದ ದೋಷ.

ರಾಷ್ಟ್ರೀಯ ಸಭೆಯು ಕೆಲವು ಮುಸಲ್ಮಾನರನ್ನಾದರೂ ತನ್ನೊಳಗಿಟ್ಟುಕೊಳ್ಳಬೇಕೆಂದು ಜಾತಿಯ ನಿರ್ಣಯವನ್ನು ನಿಷೇಧಿಸ ಲಿಲ್ಲ. ಇದನ್ನು ನೋಡಿ ಹೊರಗೆ ಬಂದ ಮಾಲವೀಜಿಯವರು ಸ್ಥಾಪಿಸಿದ ರಾಷ್ಟ್ರೀಯ ಪಕ್ಷದಲ್ಲಾದರೋ ಜಾತಿಯ ಮೇಲು ಕೀಳದ ವಿಷ ಬೀಜವು ಇದ್ದೇ ಇದೆ.

ಈ ನೂತನ ಪಕ್ಷವು ಸನಾತನಿಗಳ ಕೈ ಹಿಡಿಯುವಂತೆ ಕಾಣು ತ್ತದೆ. ಅಸೆಂಬ್ಲಿಯು ಧಾರ್ಮಿಕ ವಿಷಯದಲ್ಲಿ ಪ್ರವೇಶಿಸಬಾರ ದೆಂಬುದು ಈ ಪಕ್ಷದ ಅಭಿಪ್ರಾಯ. ಅದಿಜನರು ಮಂದಿರ ಪ್ರವೇ ಶಿಸುವ ಶಾಸನವು ಏರ್ಪಡಬಾರದೆಂಬುದೇ ಈ ಪಕ್ಷದ ಇಂಗಿತ. ಧರ್ಮದ ಹೆಸರಿನಿಂದ ಬೇಕಾದ ಅನ್ಯಾಯ ನಡೆದರೂ ಅದು ರಾಜ ಕೀಯ ಶಾಸನದಿಂದ ನಿವಾರಣೆಯಾಗಬಾರದೆಂಬುದು ಈ ಪಕ್ಷದ ಉದ್ದೇಶ.

ರಾಷ್ಟ್ರೀಯ ಸಭೆ ಮುಸಲ್ಮಾನರನ್ನು ಹಿಂದುಗಳ ಮೈಮೇಲೆ ಹತ್ತಿಸಿದರೆ ಈ ರಾಷ್ಟ್ರೀಯ ಪಕ್ಷವು ಅದಿಜನರನ್ನು ಹಿಂದುಗ ಳಿಂದ ಹೊರದೂಡಲು ಹವಣಿಸುತ್ತದೆ. ಅಂತೂ ಜಾತಿಯ ಮದ ಮತ್ಸರಗಳ ವಿಷಬೀಜಗಳೇ ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯಿಂದ ಮೊಳೆಯುತ್ತಿರುವವು.

ಈ ರಾಷ್ಟ್ರೀಯ ಪಕ್ಷವನ್ನು ತನ್ನಲ್ಲಿ ಕೂಡಿಸಿಕೊಳ್ಳಬೇ ಕೆಂದು ಹವಣಿಸುತ್ತಿರುವ ಮಹಾರಾಷ್ಟ್ರದ ಲೋಕಶಾಹಿ ಸ್ವರಾಜ್ಯ

ಪಕ್ಷದ ಮುಖಪತ್ರವಾದ ಪುಣೆಯ ಕೇಸರೀ ಪತ್ರಿಕೆಯ ತಾ. ೧೦ ನೆಯ ಸಂಚಿಕೆಯ ಅಗ್ರಲೇಖನದಲ್ಲಿ ಸಂಪಾದಕ ಮಹಾಶಯರು ಹೀಗೆ ಹೇಳಿದ್ದಾರೆ.

"ಹರಿಜನರು ಹಿಂದು ಸಮಾಜದ ಘಟಕವಾಗಿರುವುದರಿಂದ ಅವರನ್ನು ಸ್ಪೃಶ್ಯ ಹಿಂದುಗಳಲ್ಲಿ ಶೀಘ್ರಾತಿ ಕೂಡಿಸಬೇಕೆಂದೇ ಮಂದಿರ ಪ್ರವೇಶ ಗೊತ್ತುವಳಿಯ ಉದ್ದೇಶವೆಂಬುದು ಯಾಂಗೆ ಗೊತ್ತಿಲ್ಲ? ಇದರ ಹೆಸರನ್ನು ತೆಗೆದ ಕೊಡಲೆ ಹಿಂದು ಸಮಾಜವು ಇಬ್ಭಾಗವಾಗುತ್ತದೆ"

ಈ ಪ್ರಕಾರ ಅದಿಜನಗಳ ವಿಷಯದಲ್ಲಿ ಸಹಾನುಭೂತಿಯುಳ್ಳವರು ಅಸೆಂಬ್ಲಿಯಲ್ಲಿ ಸೇರಿ ರಾಷ್ಟ್ರದ ಉದ್ಧಾರವನ್ನು ಎಷ್ಟು ಪ್ರಮಾಣದಲ್ಲಿ ಮಾಡುವರು? ಅಸೆಂಬ್ಲಿಯು ಧಾರ್ಮಿಕ ವಿಷಯಗಳಲ್ಲಿ ಪ್ರವೇಶಿಸಬಾರದೆಂಬ ಈ ರಾಷ್ಟ್ರೀಯ ಪಕ್ಷದ ಅಭಿಪ್ರಾಯವು ತುಂಬಾ ದೋಷಯುಕ್ತವಾದುದು. ಆದುದರಿಂದಲೇ ಪುಣೆಯ ಜ್ಞಾನ ಪ್ರಕಾಶ ಪತ್ರಿಕಾಕರ್ತರು ಶಾರದಾಬಿಲ್, ಮಂದಿರ ಪ್ರವೇಶದ ಬಿಲ್ ಮೊದಲಾದ ಅತ್ಯುಪಯುಕ್ತವಾದ ಗೊತ್ತುವಳಿಗಳು ಕೂಡಾ ಧರ್ಮದ ಹೆಸರಿನಿಂದ ದೂರಾಗುವ ಸಂಭವವಿರುವ ಕಾರಣ ಈ ದೋಷವನ್ನು ತೆಗೆದುಹಾಕಬೇಕಾಗಿ ಮಾಲವೀಜಿಯವರ ನೂತನ ಪಕ್ಷಕ್ಕೆ ಸೂಚಿಸಿದ್ದಾರೆ.

## ಗಾಂಧೀಜಿಯವರ ಎರಡು ವರುಷ.

ಮಹಾತ್ಮಾ ಗಾಂಧಿಯವರು ಕಳೆದೆರಡು ವರುಷಗಳಲ್ಲಿ ಅದಿಜನ ಹಿತಾರ್ಥವಾಗಿ ಒಂದೊಂದು ವಾರದಂತೆ ಮೂರು ಸಾರೆ ಮತ್ತು ೨೧ ದಿನ ಒಂದು ಸಾರೆ ಈ ಪ್ರಕಾರ ನಾಲ್ಕು ಸಾರೆ ೪೩ ದಿನ ಅತ್ಯುಗ್ರವಾದ ಉಪವಾಸ ವ್ರತವನ್ನಾಚರಿಸಿದುದು ಕೇವಲ ಅವರ ದಿವ್ಯ ಚರಿತ್ರೆಯಲ್ಲಿಯೇ ಹೊಸದಲ್ಲ, ಹಿಂದು ಜನಾಂಗದ ಚರಿತ್ರೆಯಲ್ಲಿಯೂ ಅಪೂರ್ವವಾದುದು.

ಸವರ್ಣೀಯರಾದ ಕೋಟ್ಯಾಂತರ ಹಿಂದುಗಳು ಸಾವಿರಾರು ವರುಷಗಳಿಂದ ಕೋಟ್ಯಾಂತರ ಅದಿಜನಗಳ ವಿಷಯದಲ್ಲಿ ಮಾಡಿರುವ ಮಹತ್ತರವಾದ ಅನ್ಯಾಯಕ್ಕೆ ಈ ಜಗದ್ವಂದ್ಯ ವಿಭೂತಿಯು ಈ ಪ್ರಕಾರ ಪ್ರಾಯಶ್ಚಿತ್ತ ಹೊಂದುವ ಪ್ರಸಂಗ ಬಂದುದು ಮನುಷ್ಯಜಾತಿಯ ಚರಿತ್ರೆಯಲ್ಲಿಯೇ ಹೊಸದೆಂದರೂ ಅತ್ಯುಕ್ತಿಯಾಗಲಾರದು.

ಸವರ್ಣೀಯರಾದ ಹಿಂದುಗಳು ಈಗಲಾದರೂ ಎಚ್ಚತ್ತು ತಮ್ಮ ಧರ್ಮ ಬಾಂಧವರಾದ ಅದಿಜನಗಳಿಗೆ ಮಾಡುತ್ತಿರುವ ಸಾಮಾಜಿಕ ಅನ್ಯಾಯವನ್ನು ನಿವಾರಣೆ ಮಾಡುವುದು ಯುಕ್ತವಲ್ಲವೇ? ಹಿಂದು ಸಮಾಜದ ಒಂದು ಮುಖ್ಯಾಂಗವಾದ ಈ ಅದಿಜನ ಸಮೂಹವು ಸಕಲ ಸಂಗತಿಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಿ ಹಿಂದು ಜನಾಂಗದಲ್ಲಿ ಸಮಾನವಾದ ಸ್ವಾತಂತ್ರ್ಯ ಸೌಲಭ್ಯಗಳುಳ್ಳದ್ದಾಗುವುದು ಹಿಂದು ಜನಾಂಗ ರಕ್ಷಣೆಗೇನೇ ಅತ್ಯಾವಶ್ಯಕವಾಗಿಲ್ಲವೇ? ಈ ದೃಷ್ಟಿಯಿಂದಲಾದರೂ ಗಾಂಧೀಜಿಯವರ ಈ ಅಪಾರವಾದ ಆತ್ಮಶಕ್ತಿಯ ಮಹತ್ಕಾರ್ಯವು ಸವರ್ಣೀಯನಾದ ಪ್ರತಿಯೊಬ್ಬ ಹಿಂದುವಿನ ಮುಂದಿರಬೇಕಾಗಿಲ್ಲವೆ?

## ಬಾಳೆಹಳ್ಳಿ ಶ್ರೀಗಳ ಕರ್ತವ್ಯ.

ಬಾಳೆಹಳ್ಳಿ ಶ್ರೀಗಳು ಇದೇ ಭಾದ್ರಪದದಲ್ಲಿ ಮೈಸೂರಿಗೆ ಹೋಗಬೇಕೆಂದು ಹವಣಿಸುತ್ತಿದ್ದಾರಂತೆ. ಆದರೆ ಅಲ್ಲಿಯ ವೀರಶೈವ ಮಹಾಜನರಾದರೋ ಜಿಲ್ಲಾ ಸಭೆಯನ್ನು ಸೇರಿಸಿ ಜಿಲ್ಲೆಯ ವೀರಶೈವ ಮಹಾಜನಗಳ ಬಹುಮತದಂತೆ ಶ್ರೀಗಳಿಗೆ ಮನ್ನಣೆ ಮಾಡಬೇಕೆಂದು ನ್ಯಾಯವಾದ ಪದ್ಧತಿಯನ್ನೇ ಅನುಸರಿಸಿದ್ದಾರೆ.

ಹೀಗಿರುವಾಗ ಆ ಜಿಲ್ಲೆಯ ವೀರಶೈವರ ಬಹುಮತ ಹೇಗಿದೆಯೆಂಬುದನ್ನು ತಿಳಿದುಕೊಳ್ಳದೆ ಶ್ರೀಗಳು ಮುಂಚೆಯೇ ಯಾರೋ ನಾಲ್ಕು ಜನರು ಕರೆದಿದ್ದಾರೆಂದು ಹೋಗುವುದು ಅನುಚಿತವಲ್ಲವೆ? ಹಾಗೆ ಮಾಡಿದರೆ ಬೆಂಗಳೂರು ವೀರಶೈವ ಮಹಾಜನಗಳು ನಿಷೇಧಿಸಿ ಅಸಹಕಾರ ಮಾಡಿದಂತೆ ಮೈಸೂರವರೂ ಮಾಡುವ ಪ್ರಸಂಗ ಬರುವುದಿಲ್ಲವೆ? ಇದು ತುಂಬಾ ಅಗೌರವವಲ್ಲವೆ? ಆದುದರಿಂದ ಮೈಸೂರು ಜಿಲ್ಲಾ 'ವೀರಶೈವ ಮಹಾಜನಗಳ ಬಹುಮತವನ್ನರಿತ ನಂತರವೇ ಇವರು ಅಲ್ಲಿಗೆ ಹೋಗಲು ಯೋಚಿಸುವುದು ವಿಹಿತ. ತಮ್ಮ ದುರಾಗ್ರಹದಿಂದ ಆ ಗುರುಪೀಠದ ಘನತೆಯನ್ನು ಕಳೆಯಲು ಪ್ರಯತ್ನಿಸಬಾರದು. ಈ ವಿಚಾರವಾಗಿ ಮೈಸೂರು ಜಿಲ್ಲಾ ವೀರಶೈವ ಸಭೆಯ ಸ್ವಾಗತ ಸಂಘಾಧ್ಯಕ್ಷರು ಬಾಳೆಹಳ್ಳಿ ಶ್ರೀಗಳಿಗೆ ತಿಳಿಸಿದಂತೆ ನಡೆಯುವುದೇ ಶ್ರೀಗಳ ಕರ್ತವ್ಯವಾಗಿದೆ.

## ಮಹಾಸಭೆಯ ಮಧ್ಯವರ್ತಿ ಮಂಡಲ.

ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಲವು ಇದೇ ತಿಂಗಳು ೨೬-೨೭ ನೆಯ ತಾರೀಖುಗಳಲ್ಲಿ ಬಾಗಲಕೋಟೆಯಲ್ಲಿ ಕೂಡುವುದಷ್ಟೆ. ಆ ಕಾಲಕ್ಕೆ ಮಧ್ಯವರ್ತಿ ಮಂಡಲದ ಸಕಲ ಸದಸ್ಯರೂ ಅಗತ್ಯವಾಗಿ ಆಗಮಿಸುವುದಲ್ಲದೆ ಸಮಾಜ ಹಿತಚಿಂತಕರೆಲ್ಲರೂ ಆಗಮಿಸಿ ತಮ್ಮ ಸಹಾಯ ಸಲಹೆಗಳಿಂದ ಈ ಸಮಾಜ ಕಾರ್ಯವು ಪರಿಣಾಮಕಾರಿಯಾಗುವಂತೆ ಮಾಡಬೇಕಾದುದು ಕರ್ತವ್ಯವಾಗಿದೆ.

ಇದೇ ಕಾಲಕ್ಕೆ ವಿಜಾಪುರ ಜಿಲ್ಲಾ ವೀರಶೈವರ ಸಭೆಯೂ ಸೇರುವುದರಿಂದ ಈ ಜಿಲ್ಲೆಯ ವೀರಶೈವ ಮಹಾಜನರೂ ತಪ್ಪದೇ ಆಗಮಿಸಿ ಜಿಲ್ಲೆಯ ಸಮಾಜ ಜಾಗೃತಿಯ ಕಾರ್ಯಕ್ಕೆ ನೆರವಾಗಬೇಕು. ದೇಶದ ಎಲ್ಲ ಸಮಾಜಗಳೂ ಜಾಗೃತವಾಗಿರುವುದನ್ನು ನೋಡಿ ವೀರಶೈವರೂ ತಮ್ಮ ಕರ್ತವ್ಯವನ್ನು ಮಾಡಲು ಮುಂದೆ ಬರಲು ಇದು ಸುಸಮಯವಲ್ಲವೆ? ಈ ಕಾಲದಲ್ಲಿ ಹಿಂದುಳಿದರೆ ಮುಂದೆ ಯಾವಾಗಲೂ ಹಿಂದುಳಿದು ದೇಶಕ್ಕೆ ಭಾರವಾಗಿ ಜೀವಿಸಬೇಕಾಗಬಹುದು.

## ಹೆಸರಿಲ್ಲದ ಪತ್ರ.

ಇದೇ ತಿಂಗಳು ತಾ. ೧೫ನೆಯ ದಿನ ಗದಗ ಪೋಸ್ಟಿನಲ್ಲಿ ಒಂದು ಕಾರ್ಡು ಹಾಕಲ್ಪಟ್ಟು ಆದರಲ್ಲಿ ಬಸವ ಮಹಾಮಭಾವನನ್ನು ಮನಬಂದಂತೆ ದೂಷಿಸಿ ವಿರಕ್ತರನ್ನೂ ಬಸವ ಮಹಾತ್ಮನ ತತ್ವ ಪ್ರಸಾರಕರಾದ ಈ ಪತ್ರಿಕಾ ಕರ್ತರನ್ನೂ ಸ್ವೇಚ್ಛೆಯಾಗಿ ನಿಂದಿಸಿ ಇನ್ನು ಮೇಲೆ ಬಸವಾದಿ ಪ್ರಮಥರ ತತ್ವ ಪ್ರಸಾರಗೊಳಿಸಬಾರದಾಗಿ ಎಚ್ಚರಿಸಲ್ಪಟ್ಟಿದೆ!

ಅದನ್ನು ಬರೆದವರು ತಾವು ನೈಜಾಮ ಪ್ರಾಂತದ ಪಂಡಿತರಿಂತಲೂ ಸತ್ಯ ಸಿದ್ಧಾಂತವಾದಿ ಗುರುವರ್ಗ ಶೈವಾಕಾಂಪ್ಲೆ ಪಂಡಿತರಿಂದೂ ಏನೇನೋ ಬರೆದುಕೊಂಡು ರಾಯಚೂರು ಜಿಲ್ಲಾ ಎಂದೂ ಬರೆದಿದ್ದಾರೆ.

ಶ್ರೀ ಬಸವಾದಿ ಪ್ರಮಥರ ತತ್ವ ಪ್ರಚಾರದ ವಿಚಾರವಾಗಿ ಕಳೆದ ವರುಷ ಅತ್ಯಲ್ಪ ಸೇವೆ ಮಾಡಿದುದಕ್ಕೆ ಇದು ಬಹುಮಾನವೆಂದು ತಿಳಿದು ಈ ವರುಷ ಅದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಪ್ರಕಟಿಸುವೆನೆಂದು ಈ ಪತ್ರ ಲೇಖಕರಿಗೆ ತಿಳಿಸುವುದಲ್ಲದೆ ಬಾಳೆಹಳ್ಳಿ ಶ್ರೀಗಳೇ ಮೊದಲಾಗಿ ಈ ಪತ್ರ ಬರೆದವರವರೆಗಿನ ಬಸವ ಸ್ತವನ ಮಾಡದ ವೀರಶೈವರೆಂದು ಹೇಳಿಕೊಳ್ಳುವವರಿಗೆಲ್ಲಾ ಆ ಬಸವೇಶನು ಸುಬುದ್ಧಿಯನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

# ರಾಷ್ಟ್ರೀಯ ಚಟುವಟಿಕೆಗಳು.

### ಹೊಸ ಸ್ವರಾಜ್ಯ ಪಕ್ಷ.

ಧರ್ಮಾತ್ಮಾ ಮಾಲವೀಯ ಮತ್ತು ಶ್ರೀ. ಅಣೆ ಇವರು ಸ್ಥಾಪಿಸಿವ ಹೊಸ ಸ್ವರಾಜ್ಯ ಪಕ್ಷದ ಅಧಿವೇಶನವು ಕಲಕತ್ತೆಯಲ್ಲಿ ಕೂಡಲಿರುವುದು. ಅದರಲ್ಲಿ ಉಪಸ್ಥಿತರಾಗಲು ಶ್ರೀ. ನ. ಚಿ. ಕೇಳಕರ ಮೊದಲಾದವರು ಕಲಕತ್ತೆಯ ಕಡೆಗೆ ಪ್ರಯಾಣ ಬೆಳೆಸಿದರು.

ಶ್ರೀ. ಮಾಧವರಾವ ಅಣೆ ಇವರು ಅಮರಾವತಿಗೆ ಆಗಮಿಸಿದರು. ಅವರೊಡನೆ ವೀರ ವಾಮನರಾವ ಜೋಶಿ ಮೊದಲಾದ ರಾಷ್ಟ್ರೀಯ ಕಾರ್ಯಕರ್ತರು ಸ್ವರಾಜ್ಯ ಪಕ್ಷದ ವಿಷಯವಾಗಿ ಮತ್ತು ಅದನ್ನು ಸ್ಥಾಪಿಸುವ ಉದ್ದೇಶದ ವಿಷಯವಾಗಿ ಚರ್ಚೆ ಮಾಡಿದರು. ಅಣೆ ಮಾಲವೀಯ ಪಕ್ಷಕ್ಕೆ ಪಂಜಾಬದ ಪ್ರಬಲ ಬೆಂಬಲವಿರುವದೆಂದು ತಿಳಿಯುತ್ತದೆ.

### ಪಂ. ಜವಾಹರಲಾಲರು.

ಪಂ. ಜವಾಹರಲಾಲರ ಮುಕ್ತತೆಯಾದೊಡನೆಯೇ ಒಬ್ಬ ಪತ್ರಿಕಾ ಪ್ರತಿನಿಧಿಯು ಅವರನ್ನು ಕಂಡು ಸದ್ಯದ ರಾಷ್ಟ್ರೀಯ ಚಟುವಟಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಕೇಳಲು ಪಂಡಿತರು ತಮಗೆ ಕಾರಾಗೃಹದಲ್ಲಿ ದೊರೆಯುತ್ತಿದ್ದ 'ಸ್ಟೇಟ್ಸಮನ್' ಪತ್ರಿಕೆಯ ಮುಖಾಂತರ ಸದ್ಯದ ಪರಿಸ್ಥಿತಿಯ ಬಗ್ಗೆ ಕಲ್ಪನೆಯಾಗಿದ್ದರೂ ಸದ್ಯಕ್ಕೆ ರಾಜಕೀಯ ವಿಷಯದ ಬಗ್ಗೆ ಏನನ್ನೂ ಹೇಳಲಾರೆನು ಎಂದು ಹೇಳಿದರು.

ಮಿ. ರಫಿ ಅಹಮ್ಮದ ಕಿಡವಾಯಿ ಇವರು ಶಾಸನ ಸಭಾ ಪ್ರವೇಶಕ್ಕೆ ವಿರೋಧವಾಗಿ ಆಂದೋಲನ ನಡೆಯಿಸಿರುವರಾದ್ದರಿಂದ ಅವರ ವಿಷಯಕ್ಕೆ ತಮ್ಮ ಅಭಿಪ್ರಾಯವೇನೆಂಬುದನ್ನು ಒಬ್ಬರು ಪಂಡಿತರನ್ನು ಕೇಳಲು ಅವರು—ನಾನು ಮಿ. ಕಿಡವಾಯಿಯವರನ್ನು ಇನ್ನೂ ಕಂಡಿಲ್ಲ. ಆದ್ದರಿಂದ ಈಗೇನೂ ಹೇಳಲಾರೆನು ಎಂದರು.

ಪಂ. ಜವಾಹರಲಾಲರು ಮಹಾತ್ಮಾಜಿಯವರ ಉಪೋಷಣೆಯ ಕೊನೆಯ ದಿನ ತಂತೀ ಮೂಲಕ ತಮ್ಮ ಆರೋಗ್ಯವು ಸರಿಯಾಗಲೆಂದು ತಿಳಿಸಿರುವರು.

### ಮುಸಲ್ಮಾನರಿಗೆ ಉಪದೇಶ.

ಶ್ರೀಮತಿ ಸರೋಜಿನಿ ದೇವಿಯವರು ಮೈಸೂರಿನ ಮುಸಲ್ಮಾನರ ಸಭೆಯಲ್ಲಿ ಭಾಷಣ ಮಾಡುವಾಗ್ಗೆ ಹೇಳಿದುದೇನೆಂದರೆ—ಮುಸಲ್ಮಾನರು ಅಬ್ದುಲ್‌ಕಲಮ್ ಆಝಾದರಂಥ ನಿಸ್ಪೃಹ ದೇಶಸೇವಕರನ್ನು ತಮ್ಮ ಆದರ್ಶವಾಗಿಟ್ಟುಕೊಂಡು ಹಿಂದು ಮುಸಲ್ಮಾನರು ಕೂಡಿಯೇ ಬ್ರಿಟಿಶ್ ಸರಕಾರವು ಕೊಟ್ಟಿರುವ 'ಕಮ್ಯುನಲ್ ಅವಾರ್ಡ'ವನ್ನು ನಿಷೇಧಿಸಬೇಕೆಂದು ಹೇಳಿದರು.

### ಜಾತಿನಿರ್ಣಯವೂ ಕರ್ನಾಟಕದ ಮುಂದಾಳುಗಳೂ

ಶ್ರೀ. ಗಂಗಾಧರರಾವ ದೇಶಪಾಂಡೆ ಮತ್ತು ಶ್ರೀ. ರಂಗರಾವ ದಿವಾಕರ ಇವರು ಜಾತಿ ನಿರ್ಣಯದ ಬಗ್ಗೆ ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ಬೇಗೆ ತಿರುಚಿದರು—ಕಾಂಗ್ರೆಸವು ಜಾತಿ ನಿರ್ಣಯವನ್ನು ಬದಲಿಸುವ ಪ್ರಯತ್ನವನ್ನು ಕೈಬಿಟ್ಟಿದೆ ಎಂದು ಮಾಡಿಲ್ಲ. ಕಳೆದ ನಾಲ್ಕು ವರುಷಗಳಿಂದ ಸರಕಾರದವರು ಕಾಂಗ್ರೆಸ್ಸಿನ ಸಪ್ಲವನ್ನು ಕಡಿಮೆ ಮಾಡಲು ದೀರ್ಘ ಪ್ರಯತ್ನ ಮಾಡಿದ್ದಾರೆ. ಇಂಥ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ಪಕ್ಷಗಳನ್ನುಂಟುಮಾಡುವದು ಪಂ. ಮಾಲವೀಜಿ ಮತ್ತು ಶ್ರೀ. ಅಣೆ ಇವರಿಗೆ ಯೋಗ್ಯವಾಗಲಾರದು. ನಮ್ಮ ಪ್ರಾಂತದಲ್ಲಿ ಬ್ರಾಹ್ಮಣೇತರ ಮುಂದಾಳುಗಳಾದ ದಿ. ಬ. ಲಕ್ಷ್ಮಿಯಯವರು ಶಾಸನೋಲ್ಲಂಘನೆಗೆ ಬೆಂಬಲ ಕೊಡದಿದ್ದರೂ ಈಗ ತಮ್ಮ ಭಿನ್ನ ಭೇದಗಳನ್ನು ಬದಿಗಿರಿಸಿ ಅಸೆಂಬ್ಲಿಯ ಅಯ್ಕೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಸಹಾಯ ಮಾಡುವವರಿದ್ದಾರೆ. ಆದ್ದರಿಂದ ಬರುವ ಅಸೆಂಬ್ಲಿಯ ಅಯ್ಕೆಯಲ್ಲಿ ಎಲ್ಲರೂ ರಾಷ್ಟ್ರೀಯ ಪಕ್ಷಕ್ಕೆ ಸಹಾಯವಾಡಬೇಕೆಂದು ವಿನಂತಿಮಾಡಿಕೊಂಡಿರುವರು.

### ಹಿಂದುಸ್ಥಾನಿ ಸೇವಾದಲವು ಇನ್ನೂ ಕಟ್ಟಳೆಗೆಟ್ಟಿದೆ?

ರಾಷ್ಟ್ರೀಯ ಎಲ್ಲ ಸಂಸ್ಥೆಗಳೂ ನಿರ್ಬಂಧದಿಂದ ಮುಕ್ತವಾಗಿರಲು ಹಿಂದುಸ್ಥಾನೀ ಸೇವಾದಲವು ಇನ್ನೂ ಪ್ರತಿಬಂಧದಲ್ಲಿರುತ್ತದೆ. ಈ ಸಂಗತಿಯನ್ನು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯವರು ವಿಚಾರಿಸುವವರಿದ್ದಾರೆ.

### ಜಾತ್ಯಂಧರು ಲಾಭ ಹೊಂದಕೂಡದು.

ಹೊಸ ಸ್ವರಾಜ್ಯ ಪಕ್ಷವು ಕಾಂಗ್ರೆಸೇತರರೊಡನೆಯೂ ಸಹಕರಿಸಿದ್ದು ಕಾಂಗ್ರೇಸಿಗೂ ಈ ಸ್ವರಾಜ್ಯ ಪಕ್ಷಕ್ಕೂ ಇದೊಂದೇ ಮತ ಭೇದವಿದ್ದರೂ ಇದು ಅತ್ಯಂತ ಮಹತ್ವದ್ದಾಗಿದೆ. ಜಾತಿ ನಿರ್ಣಯದ ಪ್ರಶ್ನೆಯು ಕೇಂದ್ರ ಶಾಸನ ಸಭೆಯಲ್ಲಿ ಬಂದೇ ಬರುವದು. ಅದನ್ನು ತಪ್ಪಿಸಲು ಕಾಂಗ್ರೆಸ್ಸಿನವರು ಎಷ್ಟೇ ಪ್ರಯತ್ನ ಮಾಡಲಿ; ಆದರೆ ಅವರು ತಟಸ್ಥರಾಗಿರುವದೇ ಅಪ್ರತ್ಯಕ್ಷ ರೀತಿಯಿಂದ ತಮ್ಮ ಮಾನ್ಯತೆಯನ್ನು ಮಾಡಿದಂತಾಗುವುದು. ಇದರಿಂದ ಜಾತ್ಯಂಧರ ಲಾಭವಾಗಬಾರದೆಂಬುದೇ ನಮ್ಮ ಇಚ್ಛೆ ಎಂದು ಶ್ರೀ. ಅಣೆಯವರು ತಮ್ಮ ಭೆಟ್ಟಿಯಲ್ಲಿ ಹೇಳಿದರು.

### ವರ್ಧಾದಲ್ಲಿ ಪಾರ್ಲಿಮೆಂಟರಿ ಬೋರ್ಡು.

ಗಾನೆಯ ತಾರೀಖಿನ ಮಧ್ಯಾಹ್ನ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧಿವೇಶನವು ವರ್ಧಾದಲ್ಲಿ ನೆರೆಯುವದು. ಇದಕ್ಕೆ ಮಹಾತ್ಮಾಜಿಯವರು ಮಾತ್ರ ಉಪಸ್ಥಿತರಾಗುವುದಿಲ್ಲ.

### ಅಯ್ಕೆಯ ಹೋರಾಟದಲ್ಲಿ ಆಂತರ್ಯ ಶುದ್ಧಿ.

ರಾಷ್ಟ್ರೀಯ ಕಾರ್ಯಕರ್ತರ ಅಯ್ಕೆಯಲ್ಲಿ ಯಾವ ಮಾರ್ಗವನ್ನು ಅವಲಂಬಿಸುವ ಬಗ್ಗೆ ಅನೇಕ ದೂರುಗಳು ನನ್ನ ಕಡೆಗೆ ಬಂದಿವೆ. ರಾಷ್ಟ್ರೀಯ ಕಾರ್ಯಕರ್ತರು ಒಬ್ಬರ ಮೇಲೊಬ್ಬರು ಏರಾಟ ಮಾಡುವದು ಮತ್ತು ಅಪಾದನೆ ಹೊರಿಸುವುದು ಇವುಗಳ ಅರ್ಥವೇ ನನಗೆ ತಿಳಿಯುವದಿಲ್ಲ. ರಾಷ್ಟ್ರೀಯ ಸೇವಕರಲ್ಲಿ ಅಂತಃಶುದ್ಧಿಯಿಲ್ಲದಿದ್ದರೆ ರಾಷ್ಟ್ರ ಸಭೆಯು ತೀವ್ರವೇ ನಾಶವಾಗುವುದು.

### ಕಾರವಾರ ಜಿಲ್ಲೆಯ ಸಂತ್ರಸ್ತ ಒಕ್ಕಲಿಗರು.

ರಾಷ್ಟ್ರೀಯ ಆಂದೋಲನದಲ್ಲಿ ಕಾರವಾರ ಜಿಲ್ಲೆಯ ಮುಖವಾಗಿ ಅಂಕೋಲಾ ಸಿದ್ದಾಪುರ ತಾಲೂಕುಗಳ ರೈತರು ನಿರ್ಗತಿಕರಾಗಿದ್ದಾರೆ. ಅವರಿಗೆ ಒಂದು ಲಕ್ಷ ರೂಪಾಯಿ ಕೂಡಿಸಿ ಕೊಡುವ ಅಗತ್ಯವಿದೆ. ಮುಂಬಯಿಯಲ್ಲಿ ಕೆಲವು ಧನನಿಧಿಯು ಕೂಡಿದೆ.

### ರಾಷ್ಟ್ರೀಯ ಪಕ್ಷ.

ಕಲಕತ್ತೆಯಲ್ಲಿ ಪಂ. ಮಾಲವೀಜಿಯವರ ನೂತನ ರಾಷ್ಟ್ರೀಯ ಪಕ್ಷದ ಪರಿಷತ್ತು ತಾ. ೨೦ನೆಯ ಆಗಸ್ಟ್ ದಿನಸ ಕೂಡುವುದು.

ಇದಕ್ಕೆ ಡಾ. ಮುಂಜೆ, ಶ್ರೀ. ಅಣೆ, ಕೇಳಕರ್ ಮೊದಲಾದ ಎಲ್ಲ ಭಾಗಗಳ, ವಿಶೇಷವಾಗಿ ಪಂಜಾಬ ಬಂಗಾಲಗಳ ಪ್ರಮುಖರು ಕೂಡುವರು.

# ಸಮಾಚಾರ ಸಂಗ್ರಹ.

—ಬಾಬು ಸುಭಾಷಚಂದ್ರ ಬೋಸರವರು ನೀಲ ಕಿರಣಗಳಿಂದ ತಮ್ಮ ಪ್ರಕೃತಿಯು ಸುಧಾರಿಸದಿದ್ದರೆ ಪುನಃ ಶಸ್ತ್ರ ಕ್ರಿಯೆ ಮಾಡಬೇಕಾಗುತ್ತದೆಂದು ಕಲಕತ್ತೆಯ ತಮ್ಮ ಒಬ್ಬ ವಿಶ್ವರಿಗೆ ತಿಳಿಸಿರುವರು.

—ಹೇರ ಹಿಟ್ಲರರ ಪ್ರಯತ್ನದಿಂದ ಜರ್ಮನಿಯಲ್ಲಿ ವಿವಾಹಿತರ ಪ್ರಮಾಣವು ನೂರಕ್ಕೆ ೨೦ರಷ್ಟು ಬೆಳೆದಿದೆ.

—ಬಂಗಾಲ, ಬಿಹಾರ, ಆಸಾಮದ ಅತಿವೃಷ್ಟಿಯಿಂದ ನದಿಗಳೆಲ್ಲ ಭಯಂಕರ ಮಹಾಪೂರ ಬಂದಿದೆ. ದಾರ್ಜಿಲಿಂಗದ ಪೂಲು ಹರಿದು ಹೋಗಿದೆ. ಭೂಕಂಪದ ತಗ್ಗುಗಳು ಪುನಃ ತೆರೆಯಲ್ಪಟ್ಟಿವೆ.

—ವಿಯೆನ್ನಾದಲ್ಲಿ ಒಬ್ಬ ಪೋಲೀಸನ ಮನೆ ಶೋಧ ಮಾಡಲು ನಾಝಿ ಕಾಗದ ಪತ್ರಗಳು ದೊರೆತದ್ದರಿಂದ ಆದೇ ಸಂಶಯದ ಮೇರೆಗೆ ೨೬೦ ಪೋಲೀಸರನ್ನು ಬಂಧಿಸಲಾಗಿದೆ.

—ಉತ್ತರ ಧ್ರುವವನ್ನು ಶೋಧಿಸಲು ಹೋದ ಪ್ರಸಿದ್ಧ ಸಂಶೋಧಕ ಲ್ಯಿಡ್ಮಿರಲ್ ವರ್ಡ್‌ರವರು ಬೇಲ ಉಪಸಾಗರದ ಹತ್ತರ ಕಾಯಿಲೆಯಾಗಿ ಬಿದ್ದಿರುವರಂತೆ.

—ಡೆಕ್ಕನ್ ಕಾಲೇಜದ ಸ್ಥಳವನ್ನು ಫಾರಸಿ ಪಬ್ಲಿಕ್ ಸ್ಕೂಲು ಸೊಸಾಯಿಟಿಯವರು ಕೊಂಡುಕೊಂಡಿದ್ದಾರೆ.

—ಜವ ಶೇಟಜಿ ಜಿಜೀ ಭಾಯಿಯವರು ಡೆಕ್ಕನ್ ಕಾಲೇಜಿಗೆ ಸಹಾಯ ಮಾಡಿದ ೧¼ ಲಕ್ಷ ಧನ ನಿಧಿಯನ್ನು ಔದ್ಯೋಗಿಕ, ಶಾಸ್ತ್ರೀಯ, ಮೊದಲಾದ ಉಚ್ಚ ಶಿಕ್ಷಣದ ವಿದ್ಯಾರ್ಥಿ ವೇತನೆಗಾಗಿ ಉಪಯೋಗಿಸುವರು.

—ಮುಸ್ಲಿಮ್ ಲೀಗ ಮತ್ತು ಅಖಿಲಭಾರತ ಮುಸ್ಲಿಮ್ ಅಧಿವೇಶನಗಳು ಶುಭ್ರ ಪತ್ರಿಕೆ ಮತ್ತು ಜಾತಿ ನಿರ್ಣಯಗಳು ತ್ಯಾಜ್ಯವಿದ್ದರೂ ತಮ್ಮ ಸಮ್ಮತಿಯಿಲ್ಲದ ಮತ್ತೊಂದು ಯೋಜನೆಯನ್ನು ತಾವು ಮಾನ್ಯ ಮಾಡುವುದಿಲ್ಲವೆಂದು ನಿರ್ಣಯಿಸಿದವು

—ಅಂದಮಾನ ದ್ವೀಪದಲ್ಲಿ ಸದ್ಯಕ್ಕೆ ೧೯೯ ರಾಜಕೀಯ ಬಂಧಿತರಿರುವರಂತೆ.

—ಫಾನ್ ಹಿಂಡೆನ್ ಬರ್ಗರವರು ತಮ್ಮ ಮೃತ್ಯು ಪತ್ರದಲ್ಲಿ ಜರ್ಮನಿಗೆ ಹಿಟ್ಲರ ಆಡಳಿತದಲ್ಲಿ ಹೋಸ ಜೀವ ಬಂದುದನ್ನು ಕಾಣುವವರೆಗೆ ತಾವು ಜೀವಿಸಿದೆವೆಂದೂ ತೀವ್ರವೇ ಜರ್ಮನಿಗೆ ರಾಜಕೀಯ ಶಾಂತಿಯು ದೊರೆಯಲೆಂದೂ ಬರೆದಿದ್ದಾರೆ

—ಹಿಂದೀ ಪ್ರಸಿದ್ಧ ವೈನಾನಿಕರಾದ ಮಿ|| ಚಾವಲಾರವರು ಲಂಡನ್ನಿಗೆ ಹೊರಟಿದ್ದಾರೆ. ಬಗದಾದ ದಾಟಿದ ಮೇಲೆ ಅವರ ಸಮಾಚಾರವು ತಿಳಿಯದ್ದರಿಂದ ಜನಗಳಿಗೆ ಚಿಂತೆಯುಂಟಾಗಿತ್ತು. ಈಗ ಅವರು ಸುರಕ್ಷಿತವಾಗಿದ್ದಾರೆ.

—ಸಾಂಗಲಿ ಸಂಸ್ಥಾನಿಕರ ತಮ್ಮಂದಿರ ಪತ್ನಿಯವರು ತಮಗೆ ವಿವಾಹ ವಿಚ್ಛೇದನ ಅನುಜ್ಞೆ ದೊರೆಯಬೇಕೆಂದು ನ್ಯಾಯ ಸಭೆಗೆ ಕೇಳಿಕೊಳ್ಳಲು ಅವರ ವಿನಂತಿಯನ್ನು ಮಾನ್ಯಮಾಡಲಾಯಿತು.

—ಆಗ್ರಾದಲ್ಲಿ ರೋಮನ್ ಕ್ಯಾಥೊಲಿಕ ಚರ್ಚಿನ ಗೋಡೆಯ ಮೇಲೆ ಒಂದು ಬಾಂಬು ಇಟ್ಟಿದ್ದಿತು. ಅದನ್ನು ಒಬ್ಬನು ತೆಗೆಯಲು ಅದು ಕೂಡಲೇ ಸಿಡಿದದ್ದರಿಂದ ಆ ಮನುಷ್ಯನಿಗೆ ತೀರ ಅಪಾಯವಾಗಿದೆ.

—ಮಾಲೇಗಾಂವ ಎಂಬಲ್ಲಿ ಪಾರ್ವತೀಬಾಯಿ ಎಂಬ ಸ್ತ್ರೀಯಳು ಒಂದು ಮಗುವನ್ನು ಹೆತ್ತಿದ್ದಳು. ಆದರ ಮುಖವು ತಲೆಯ ಒಂದು ಕಡೆಗೂ ಕಣ್ಣುಗಳೆಲ್ಲವೂ ಮತ್ತೊಂದು ಕಡೆಗೂ ಇದ್ದವು.

—ಮೈಸೂರು ಸಂಸ್ಥಾನದ ಆಂಚನಹಳ್ಳಿ ಎಂಬ ಗ್ರಾಮದಲ್ಲಿ ಜವರನೆಂಬವನೊಬ್ಬನು ಒಂದು ಕಂಬಳಿಯನ್ನು ಕದ್ದ ತಪ್ಪಿಗಾಗಿ ಬೆಂಚ ಮ್ಯಾಜಿಸ್ಟ್ರೇಟರು ೧ ತಿಂಗಳ ಶಿಕ್ಷೆಯನ್ನು ವಿಧಿಸಿದರು.

—ಧಾರವಾಡದಲ್ಲಿ 'ಅಭ್ಯುದಯ' ವೆಂಬ ಕನ್ನಡ ವಾರಪತ್ರಿಕೆಯು ಹೊರಡಿಸ್ಪಟ್ಟಿದೆ. ಅದು ವಾಚಕರಿಗೆ ಉಚಿತವಾಗಿ ಕೊಡಲ್ಪಡುವದು.

—ಡಾ. ಡಾಲ್ಫುಸರ ಕೊಲೆಯ ವಿಷಯದಲ್ಲಿ ನಾಲ್ಕು ಜನ ಪೋಲೀಸರು ಅಂಗವಿದ್ದುದರಿಂದ ಅವರಿಗೆ ದೇಹಾಂತ ಶಾಸನವು ಮಾಡಲ್ಪಟ್ಟಿತು.

—ಡಾ. ಬಿಧನಚಂದ್ರರಾಯ ಇವರು ಸೌ. ಕಮಲಾನೆಹರು ಇವರ ಆರೋಗ್ಯವನ್ನು ಪರೀಕ್ಷಿಸಿ ಅವರು ಬಹಳೇ ಕ್ಷೀಣರಾಗಿರುವುದರಿಂದ ವಿಶ್ರಾಂತಿಯ ಆವಶ್ಯಕತೆ ಇರುತ್ತದೆಂದೂ ಮತ್ತು ಸರ್ವ ಔಷಧಗಳು ಸಿಗುವ ಸ್ಥಾನಕ್ಕೆ ಅವರನ್ನು ತೀವ್ರವೇ ಒಯ್ಯಬೇಕೆಂದೂ ಪ್ರಕಟಿಸಿರುವರು.

—ಮಹಾತ್ಮಾಜಿಯವರ ಪ್ರಕೃತಿಯು ಈಗ ತೀವ್ರತರವಾಗಿ ಸುಧಾರಿಸಹತ್ತಿದೆ. ಹಾಲು ಹಣ್ಣು ಮತ್ತು ಕಾಯಿಪಲ್ಯಗಳ ಆಹಾರವನ್ನು ಸೇವಿಸುತ್ತಾರೆ.

—ಮುಜಫರಪೂರದ ಹತ್ತರ ಗಂಗಾನದಿಯಲ್ಲಿ ೬ ದೊಡ್ಡ ಡೋಣಿಯಲ್ಲಿ ೨೦೦ ಜನ ಸ್ತ್ರೀ ಪುರುಷರು ಕುಳಿತಿರಲು ಸಂಗಡ ತಂದ ಒಂದು ಎತ್ತು ಬೆದರಿ ನದಿಯಲ್ಲಿ ಹಾರಲು ಜನರೆಲ್ಲ ಅಂಜಿ ಒಂದೇ ಬದಿಗೆ ಸರಿದದ್ದರಿಂದ ನಾವೆಯು ಮುಳುಗಿ ೧೭೦ ಜನರು ಸತ್ತರು.

—೨೪ನೆಯ ತಾರೀಖಿನ ದಿವಸ ಸಾಂಗಲಿ ವೀರಶೈವ ಬೋರ್ಡಿಂಗಿನಲ್ಲಿ ದಾನಶೂರ ಕೈ| ವಾ| ಲಿಂಗರಾಜರ ಮತ್ತು ಕರ್ನಾಟಕದ ಪಿತಾಮಹ ಕೈ| ವಾ| ರುದ್ರಗೌಡರು ಅರ್ಟಾಳ ಇವರ ಭಾವಚಿತ್ರಗಳ ಅನಾವರಣ ಸಮಾರಂಭವೂ ಮತ್ತು ವೀರಶೈವ ತರುಣ ಸಂಘದ ಸ್ಥಾಪನೆಯೂ ಸೊಲ್ಲಾಪುರದ ಬ್ಯಾ. ಸರದಾರರ ಅಧ್ಯಕ್ಷತೆಯಲ್ಲಿ ನೆರವೇರುವದು.

—ಆಥಣಿ ತಾಲೂಕಿನಲ್ಲಿ ಜಯವಂತ ಹತ್ತಿಯ ಬೆಳೆಯು ಸರಿಯಾಗಿ ಬರುತ್ತಿರುವದಂತೆ.

—ಮದ್ರಾಸದ ತಾತ್ಕಾಲಿಕ ಗವ್ಹರ್ನರರಾಗಿರುವ ಸರ ಮೆಹಮ್ಮದ ಉಸ್ಮಾನರವರು ಹೈದರಾಬಾದ ಸಂಸ್ಥಾನದ ದಿವಾಣರಾಗುವರೆಂದು ಸುದ್ದಿ ಅದೆ. ಸರ್. ಕಿಶನ್ ಪ್ರಸಾದರವರು ತಮ್ಮನ್ನು ಸೇವಾ ನಿವೃತ್ತರನ್ನು ಮಾಡುವದಕ್ಕಾಗಿ ನಿಝಾಮ ಸಾಹೇಬರಿಗೆ ವಿನಂತಿ ಮಾಡಿಕೊಂಡಿದ್ದಾರೆ.

—ಸೊಲ್ಲಾಪುರದ ಶ್ರೀಮತಿ ಕೃಷ್ಣಾಬಾಯಿಯವರು ಪುಣೆಯಲ್ಲಾದ ಕುಸ್ತಿಯಲ್ಲಿ ಜಯಶಾಲಿಗಳಾದರು.

—ಇಟಾಲಿಯಲ್ಲಿ ಜಗತ್ತಿನ ಮೋಟಾರುಗಳ ಶರ್ಯತ್ತು ನಡೆಯಿತು. ಆನರಲ್ಲಿ ಫ್ರಾನ್ಸಿನ ಮೋಟಾರಿಗೆ ಅಪಘಾತವಾಗಿ ಡ್ರಾಯವ್ಹರನು ಕೊಲ್ಲಲ್ಪಟ್ಟನು. ಅವನು ಗಂಟೆಗೆ ೧೦೦ ಮೈಲು ವೇಗ ಬಿಟ್ಟದ್ದನಂತೆ.

# ವಿವಿಧ ವಿಷಯ.

### ಚೇಳ ರಾಜ.

ಬ್ರಹ್ಮದೇಶದಲ್ಲಿ ಮಾಂಗ ಟೂಸಯಿನ ಎಂಬ ಹೆಸರಿನ ಒಬ್ಬ ಹುಡುಗನಿದ್ದಾನೆ. ಅವನಿಗೆ ಚೇಳುಗಳ ಮೇಲೆ ಬಹು ಪ್ರೀತಿ. ಅವುಗಳನ್ನು ಹುಡುಕಿ ತನ್ನ ಮೈಮೇಲೆ ಹಚ್ಚಿಕೊಳ್ಳುವನು. ಎಂಥ ವಿಷಮಯ ಚೇಳುಗಳಿರಲಿ; ಅವನು ಅವನ್ನು ಪ್ರೀತಿಯಿಂದ ಮೈಮೇಲೆ ಹರಿದಾಡಿಸಿಕೊಳ್ಳುವನು. ಅವೂ ಅವನನ್ನು ಎಂದೂ ಕಚ್ಚುವುದಿಲ್ಲ. ಅವನು ಬಟ್ಟು ಬಿಟ್ಟ ಮೇಲೆಯೂ ಅವುಗಳ ಕೊಂಡಿಯ ವಿಷವು ಹಾಗೇ ಇರುತ್ತದೆ. ಚೇಳು ಮೆಚ್ಚಬೇಕಾದರೆ ಇವನು ಅದೇನು ಅಚ್ಚರಿ ಮಾಡಿರುವನೋ!

### ನಿಮಗೆ ಸೌಂದರ್ಯ ಬೇಕೊ?

ಸುರೂಪೂ ಕುರೂಪೂ ಬ್ರಹ್ಮ ನಿರ್ಮಿತವಾದವು. ಅವನ್ನು ಯಾರು ಹೆಚ್ಚು ಕಡಿಮೆ ಮಾಡಬಲ್ಲರು? ಎಂದು ಅನೇಕರ ಗ್ರಹಿಕೆ. ಆದರೆ ಶಾಸ್ತ್ರೀಯ ಪ್ರಗತಿಯು ಬ್ರಹ್ಮ ನಿರ್ಮಾಣವನ್ನೂ ಸಹ ವಿರೂಪಿಸಹತ್ತಿದೆ. ಶಸ್ತ್ರಕ್ರಿಯೆಯಿಂದ ಕುರೂಪವು ಸುರೂಪವಾಗಬಲ್ಲುದೆಂಬುದನ್ನು ಕೇಳಿ ಅನೇಕರಿಗೆ ಆಶ್ಚರ್ಯವಾಗಬಲ್ಲುದು. ಇಂಥ ಆಶ್ಚರ್ಯಕರವಾದ ಶೋಧನೆಯನ್ನು ನ್ಯೂಯಾರ್ಕಿನ ಸುಪ್ರಸಿದ್ಧ ಶಸ್ತ್ರ ವೈದ್ಯರಾದ ಡಾ. ಬ್ಲೆಅರ ಇವರು ಸಿದ್ಧಪಡಿಸಿರುವರು. ಇವರು ಮೊದಲು ಪ್ಲಾಸ್ಟಿಸ್ಟರಿನ ಒಂದು ಮುಖದ ಸುಂದರ ಪ್ರತಿಮೆಯನ್ನು ಮಾಡಿ ಅದರಂತೆಯೇ ಜೀವಂತ ಮನುಷ್ಯರ ಮುಖಗಳಲ್ಲಿ ಅಂದರೆ ಗಲ್ಲ. ಮೂಗು, ತುಟಿ, ಕಣ್ಣು ಮೊದಲಾದವುಗಳ ಪ್ರಮಾಣವನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸಿ ಅವುಗಳನ್ನು ಸುಂದರ ಮಾಡುತ್ತಾರೆ.

ಮನುಷ್ಯನು ಸ್ವಭಾವಸಿದ್ಧವಾಗಿ ಸೌಂದರ್ಯ ಪ್ರೇಮಿಯಾಗಿರುವುದರಿಂದ ತನ್ನ ಅಂಗದಲ್ಲಿರುವ ವ್ಯಂಗಗಳನ್ನು ತಿದ್ದಿಕೊಳ್ಳಲು ಇಂಥ ಶೋಧಕನನ್ನು ಹರಿಸದಿರಲಾರನೆ?

### ರಾತ್ರಿಯಲ್ಲಿ ಕುದುರೆ ಶರ್ಯತ್ತು.

ಫ್ರಾನ್ಸ ದೇಶದ ಲಾಗ್ ಶಮ್ ಎಂಬಲ್ಲಿ ಒಂದು ಹೊಸ ಪದ್ಧತಿಯು ಆರಂಭವಾಗಿದೆ. ಅದೇನೆಂದರೆ ರಾತ್ರಿಯಲ್ಲಿ ಕುದುರೆಯ ಶರ್ಯತ್ತು ಹಗಲಿನಕಿಂತಲೂ ಸೊಗಸಾಗುವುದರಿಂದ ವಿದ್ಯುದ್ದೀಪಗಳ ತೇಜೋಮಯ ಪ್ರಕಾಶದಲ್ಲಿ ಮೊದಲನೆಯ ಶರ್ಯತ್ತು ಪ್ರಾರಂಭವಾಯಿತು. ಇಡೀ ಯುರೋಪ ಖಂಡದಲ್ಲಿ ಇದೇ ಮೊದಲನೆಯ ಉಪಕ್ರಮವು. ಇದು ರಾತ್ರಿ ೧೦ ಘಂಟೆಗೆ ಪ್ರಾರಂಭವಾಯಿತು. ಶರ್ಯತ್ತಿನ ವಿಸ್ತೀರ್ಣವಾದ ಬೈಲಿನಲ್ಲೆಲ್ಲ ಅಲ್ಲಲ್ಲಿಗೆ ಪ್ರಕಾಶವಾನವಾದ ಸಣ್ಣ ದೊಡ್ಡ ವಿದ್ಯುದ್ದೀಪಗಳನ್ನು ಅಸಂಖ್ಯವಾಗಿ ಹಚ್ಚಿದ್ದರಿಂದ ಶರ್ಯತ್ತನ್ನು ನೋಡಲಿಕ್ಕೆ ಆಕಾಶದೊಳಗಿನ ನಕ್ಷತ್ರಗಳೆಲ್ಲ ರಜಸಿನಾಧನೊಡನೆ ಆಗಮಿಸಿದಂತೆ ಕಂಡುಬರುತ್ತಿತ್ತು. ಶರ್ಯತ್ತು ಮುಗಿಯುವವರೆಗೆ ಅಲ್ಲಲ್ಲಿ ಗಾನ ನೃತ್ಯಗಳೂ, ಆಟಕೂಟಗಳೂ, ಹಾಸ್ಯ ವಿನೋದಗಳೂ ಸಾಗಿದ್ದವು. ಇದಕ್ಕೆ ಫ್ರಾನ್ಸಿನ ಅಧ್ಯಕ್ಷರೇ ಮೊದಲಾದ ವರಿಷ್ಠ ಅಧಿಕಾರಿಗಳೆಲ್ಲ ಆಗಮಿಸಿದ್ದರಿಂದ ಇಂಥ ಸಂಸ್ಮರಣೀಯ ಪ್ರಸಂಗವು ಹಿಂದೆ ಎಂದೂ ಉಂಟಾಗಿದ್ದಿಲ್ಲವಂತೆ. ರಾತ್ರಿ ಎರಡು ಗಂಟೆಗೆ ಶರ್ಯತ್ತು ಮುಗಿದು ಜನರು ತಮ್ಮ ತಮ್ಮ ಮನೆಗಳ ಕಡೆಗೆ ತೆರಳಿದರು. ಆದರೆ ಪ್ರೇಕ್ಷಕರು ತಂದ ೩೦ ಸಾವಿರ ಮೋಟಾರುಗಳು ಹೋಗುವುದಕ್ಕಾಗಿ ಜನರು ಮಾರ್ಗ ಕೊಡಲು ಕಾಲು ನಡಿಗೆಯಿಂದ ಹೋಗುವವರಿಗೆ ಮನೆಮುಟ್ಟಬೇಕಾದರೆ ಸೂರ್ಯೋದಯವೇ ಆಯಿತು.

ಜರ್ಮನಿಯಂಥ ರಾಷ್ಟ್ರಗಳಲ್ಲಿ ಈಗಿನ ಕಠಿಣ ಪರಿಸ್ಥಿತಿಯ ಕಾಲದಲ್ಲಿ ಅನೇಕ ದೇಶ ಹಿತೈಷಿಗಳು ತಾವು ಅರೆ ಹೊಟ್ಟೆಯಿಂದಿದ್ದು ತಮ್ಮ ಬಡದೇಶ ಬಾಂಧವರಿಗೆ ಅನ್ನ ಕೊಡುತ್ತಾರೆ. ಆದರೆ ಈ ಕುದುರೆ ಜೂಜುಗಾರರಿಗೆ ಬಡವರ ಪರಿವೇ ಇಲ್ಲ. ಹಸಿದವನ ಸ್ಥಿತಿ ಉಂಡವನಿಗೇನು ಗೊತ್ತು!

### ಕಮ್ಯುನಿಸ್ಟ ಸಂಸ್ಥೆಗಳು ಕಟ್ಟಳಿಗೆಟ್ಟವೆಂದು ಏಕೆ ತೀರ್ಮಾನವಾಯಿತು?

ಕೇಂದ್ರ ಶಾಸನ ಸಭೆಯಲ್ಲಿ ಮಿ. ಗಯಾ ಪ್ರಸಾದ ಸಿಂಗ ಇವರು ಕೇಳಿದ ಮೇರೆಗೆ ನಾ. ಸರ ಹೆನ್ರಿ ಕ್ರೇಕರವರು ಹೇಳಿದುದೇನೆಂದರೆ, 'ಅಲಾಹಾಬಾದ ಹಾಯಕೋರ್ಟಿನ ನಿರ್ಣಯವನ್ನೂ ಮತ್ತು ಕಮ್ಯುನಿಸ್ಟ ಪಕ್ಷದ ಚಟುವಟಿಕೆಯನ್ನೂ ನೋಡಿ ಸರಕಾರದವರಿಗೆ ಅವು ಕಟ್ಟಳೆ ಮತ್ತು ಸುವ್ಯವಸ್ಥೆಗಳಿಗೆ ವಿಘಾತಕವಾಗುವವೆಂದು ನಿಶ್ಚಯವಾಯಿತು. ಈ ಸಂಸ್ಥೆಯ ಮುಂದಾಳುಗಳು ಯಾರಿರುವರೆಂಬುದನ್ನು ಹೇಳುವದು ಸಾರ್ವಜನಿಕ ಹಿತದೃಷ್ಟಿಯಿಂದ ಯೋಗ್ಯವಾಗಲಾರದು."


# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೈಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಆದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

**ಜಿ. ಎಸ್. ಗಂಗಾಧರಯ್ಯ,**
**ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,**
**ತುಮಕೂರು. (ಮೈಸೂರು ಸ್ಟೇಟ್)**

# ಪತ್ರಗಳ ಸಾರಾಂಶ.

## ಶ್ರೀಮದ್ವೀರಶೈವ ಬಸವರಾಜ ಫ್ರೀ ಬೋರ್ಡಿಂಗಿನ ಅನಾವರಣ ಸಮಾರಂಭವು.

ಗುಲಬರ್ಗಾ ವೀರಶೈವ ತರುಣರ ಅಪೂರ್ವ ಉತ್ಸಾಹದಿಂದ ಶ್ರೀಮನ್ನಿರಂಜನ ಶಿವಮೂರ್ತಿ ಮಹಾಸ್ವಾಮಿಗಳು ಸಂಸ್ಥಾನ ಗದ್ದಿಗಿ ಮಠ ಗುಲಬರ್ಗಾ ಇವರು ತಮ್ಮ ಮಠದಲ್ಲಿ "ರಾಜಕೀಯ ವಿದ್ಯಾಭ್ಯಾಸ ಮಾಡುವ ವೀರಶೈವ ಬಡ ವಿದ್ಯಾರ್ಥಿಗಳಿಗಾಗಿ ಶ್ರೀಮದ್ವೀರಶೈವ ಬಸವರಾಜ ಫ್ರೀ ಬೋರ್ಡಿಂಗ್ ಸ್ಥಾಪಿಸಿರುವರು ಈ ಬೋರ್ಡಿಂಗಿನ ಅನಾವರಣ ಸಮಾರಂಭವು ತಾ. ೨೭-೭-೩೪ನೆಯ ದಿವಸ ಶ್ರೀಮಂ. 'ವೈದ್ಯರತ್ನ' ನವಣಿ ಸೋಮಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾರಂಭದಲ್ಲಿ ಗುಲಬರ್ಗಾ ವೀರಶೈವ ತರುಣರೂ ಮತ್ತು ಕಾಲೇಜಿನ ವೀರಶೈವ ವಿದ್ಯಾರ್ಥಿಗಳೂ ಅಪೂರ್ವ ಉತ್ಸಾಹದಿಂದ ಭಾಗಿಗಳಾಗಿದ್ದರು.

ಸೆಕ್ರೆಟರಿ,
ವೀರಶೈವ ತರುಣ ಸಂಘ,
ಗುಲಬರ್ಗಾ.

## ಕೊಪ್ಪಳ.

ತಾ. ೩೧-೭-೩೪ನೆಯ ದಿವಸ ಇಲ್ಲಿ ಒಂದು ಹರಿಜನ ಸೇವಾ ಸಂಘವು ಸ್ಥಾಪಿತವಾಗಿದೆ. ಶ್ರೀ. ತಮ್ಮನಗೌಡಾ ಪಾಟೀಲ ವಕೀಲ ಇವರು ಅಧ್ಯಕ್ಷರಾಗಿಯೂ, ವೀರಭದ್ರಪ್ಪ ಶಿರೂರು ಮತ್ತು ಯಜ್ಞ. ಕೊಟ್ರಪ್ಪ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. ಈ ಸಂಘದಿಂದ ಕೊಪ್ಪಳದ ಹರಿಜನ ವಿದ್ಯಾರ್ಥಿಗಳ ಶಾಲೆಯು ನಡೆಸಲ್ಪಡುವುದು. ಸದ್ಯಕ್ಕೆ ವಿದ್ಯಾರ್ಥಿಗಳ ಸಂಖ್ಯೆಯು ೪೭ ಇದ್ದು ಇನ್ನೂ ವಿದ್ಯಾರ್ಥಿಗಳು ಕೂಡಲಿರುವರು. ಸ್ಥಳದ ಅಭಾವವಿದ್ದು ಮೊದಲು ಅದರ ನಿವಾರಣೆ ಮಾಡಬೇಕಾಗಿದೆ.

ವೀರಭದ್ರಪ್ಪ ಶಿರೂರು.

## ಬಾಗೇವಾಡಿ.

ಶ್ರೀ. ಶಿವಯೋಗಮಂದಿರದ ಉದ್ದೇಶ ಪ್ರಕಾರ ಶ್ರೀಮನ್ ಮಹಾಂತ ಸ್ವಾಮಿಗಳು ಇದೇ ತಾಲೂಕಿನ ಕದಡಗಿ, ಗೊಳಸಂಗ, ನೆಲತ್ತಗಿ ವಗೈರೆ ಗ್ರಾಮಗಳಲ್ಲಿ ಸಂಚರಿಸಿ ಧರ್ಮೋಪದೇಶವನ್ನು ಮಾಡುತ್ತಿದ್ದು ಈ ಗ್ರಾಮದ ಬಿನ್ನಹದ ಪ್ರಕಾರ ತಾ. ೩೦-೭-೩೪ಕ್ಕೆ ಇಲ್ಲಿಗೆ ದಯಮಾಡಿಸಿ ಶ್ರೀ ಬಸವೇಶ್ವರ ದೇವಾಲಯದಲ್ಲಿ ಶ್ರೀ ಮು. ನಿ. ಶಿವಲಿಂಗ ಸ್ವಾಮಿಗಳವರ ಅಧ್ಯಕ್ಷತೆಯು ಕೆಳಗೆ ೩ ದಿವಸ ಮಾನವ ಜೀವನ, ಭಕ್ತಿ, ಧರ್ಮ ಈ ವಿಷಯಗಳ ಬಗ್ಗೆ ಸಭಿಕರಿಗೆ ಆನಂದವಾಗುವಂತೆ ಉಪದೇಶ ಮಾಡಿದರು ಬಳಿಕ ಆ ವಿಷಯಗಳನ್ನು ಸಂಕ್ಷಿಪ್ತವಾಗಿ ಪಂಡಿತ ರಾಜಶೇಖರ ಶಾಸ್ತ್ರಿಗಳು ಹೇಳಿ ಸಭಿಕರ ವತಿಯಿಂದ ಪೂಜ್ಯಪಾದ ಶ್ರೀಗಳವರಿಗೆ ಶ್ರೀ ಜಗದೀಶನು ಆಯುರಾರೋಗ್ಯ ದಯಪಾಲಿಸಲೆಂದು ಪ್ರಾರ್ಥಿಸಿದ ನಂತರ ಜಯ ಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ತಮ್ಮ,
ಸಂಗನಗೌಡ ಪಾಟೀಲ.

---

—ಭದ್ರಾವತಿಯಲ್ಲಿ ಉಕ್ಕನ್ನು ತಯಾರಿಸುವ ಕೈಗಾರಿಕೆಗೆ ೩೫ ಲಕ್ಷ ರೂ. ಗಳು ಬೇಕಾಗುವವಂತೆ ಕೈಗಾರಿಕೆಯ ಸಲಕರಣೆಗಳನ್ನು ಜರ್ಮನಿಯಿಂದ ತರಿಸುತ್ತಾರಂತೆ.

# ಸಕಲ ವೀರಶೈವಾಭಿಮಾನಿಗಳಲ್ಲಿ ವಿಜ್ಞಾಪನೆಗಳು.

ವೀರಶೈವ ಮತ ಸಂಬಂಧವಾಗಿ ಸಂಪೂರ್ಣ ರೀತಿಯಿಂದ ಇಂಗ್ಲೀಷ ಭಾಷೆಯಲ್ಲಿ ಈ ವರೆಗೆ ಯಾವ ಪುಸ್ತಕವು ವೀರಶೈವರಿಂದ ಬರೆಯಲ್ಪಟ್ಟು ಪ್ರಸಿದ್ಧವಾಗಿಲ್ಲ. ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ಹೊಗಲ್ಹಾಡಿಸಲು ಪ್ರಯತ್ನ ಪಟ್ಟಿರುತ್ತೇನೆ. ಇದರಲ್ಲಿ ೧೦ ಅಧ್ಯಾಯ-ಪ್ರಕರಣಗಳಿದ್ದು ಶ್ರುತಿಯು ವೀರಶೈವ ಮತಕ್ಕೆ ಆಧಾರಭೂತವಾಗಿದ್ದು ೨೮ ಶಿವಾಗಮ-ಗಳು ಶ್ರುತಿಗಳಲ್ಲಿ ಸಮಾವೇಶವಾಗುತ್ತವೆಂದು ಸಂಸ್ಕೃತ ಮತ್ತು ಇಂಗ್ಲೀಷ ಗ್ರಂಥಗಳ ಆಧಾರಗಳನ್ನು ಕೊಟ್ಟಿದೆ. ಅಷ್ಟಾವರಣ ಪಂಚಾಚಾರಗಳ ಸ್ವರೂಪ, ಅವುಗಳ ರಹಸ್ಯಾರ್ಥ ಮತ್ತು ಮೇಲ್ಮೆಯನ್ನು ಕುರಿತು ಚರ್ಚಿಸಿದೆ. ಈ ಸಂದರ್ಭದಲ್ಲಿ ಯಾವ ವರ್ಣದವನಾದರೂ ಲಿಂಗಧಾರಣ ದೀಕ್ಷೆಯಿಂದ ಅತಿವರ್ಣಿಯಾಗಿ ಶಿವಕುಲ-ಶಿವಗೋತ್ರ ಸಂಪನ್ನನಾಗುವುದರಿಂದ ಅಂಧ ವಿಧ್ಯುಕ್ತ ಶಿವದೀಕ್ಷಾ ಸಂಪನ್ನನಿಗೆ ಸಾಂಕರ್ಯ ದೋಷವು ಉಂಟಾಗುವುದಿಲ್ಲೆಂದು ಸಪ್ರಮಾಣವಾಗಿ ನಿರ್ಧರಿಸಿದೆ. ಮತ್ತು ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ ಶರಣ ಐಕ್ಯ ವೆಂಬ ಷಟ್‌ಸ್ಥಳಗಳ ವಿವೇಚನೆಯು ಸವಿಸ್ತಾರವಾಗಿ ಮಾಡಲ್ಪಟ್ಟಿದೆ. ಈ ಸಂದರ್ಭದಲ್ಲಿ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳಿಂದ ಷಟ್‌ಸ್ಥಳಗಳ ಆಧಿಕ್ಯವು ತೋರಿಸಲ್ಪಟ್ಟಿದೆ. ಮತ್ತು ವೀರಶೈವರ ವಿಶಿಷ್ಟ ಆಚಾರಗಳು ಶೀಲಗಳು ಅಂದರೆ ಪಂಚಸೂತಕ ನಿಷೇಧ ಇಷ್ಟಲಿಂಗ ಪೂಜೆಯ ಹೊರ್ತು ಬೇರೆ ದೇವತಾ ಪೂಜಾ ನಿರಸನ ಮುಂತಾದ ವೀರಶೈವ ಮತದ ವೈಶಿಷ್ಟ್ಯವು ಮತದ ಪ್ರಮಾಣ ಪೂರ್ವಕವಾಗಿ ನಿರ್ಧರಿಸಲ್ಪಟ್ಟಿದೆ. ಇದಲ್ಲದೆ ಸಂಕ್ಷಿಪ್ತವಾಗಿ ಇದರ ತಾತ್ವಿಕ ವಿಚಾರವು ಮಾಡಲ್ಪಟ್ಟಿದೆ. ಇದಕ್ಕೆ ೫ ಅನುಬಂಧ (Appendices) ಗಳನ್ನು ಸೇರಿಸಿದೆ. ಪ್ರಸ್ತಾವನೆಯಲ್ಲಿ ಈಗ ಮುಂಬೈ, ಮದ್ರಾಸ್, ಅಲ್ಹಾಬಾದ ಹಾಯಕೋರ್ಟ್‌ಗಳ ತರಾವಿನಲ್ಲಿ ವೀರಶೈವರು ಶೂದ್ರರೆಂದು ತಿಳಿದುದು ಎಷ್ಟು ನಿರಾಧಾರವಾದದ್ದು ಎಂಬುದನ್ನು ಜೈನ, ಮರಾಠಾ, ಮತ್ತು ಕಾಯಸ್ಥರ ಬಗ್ಗೆ ಇದ್ದ ಹಾಯಕೋರ್ಟುಗಳ ತರಾವನ್ನು ಹೋಲಿಸಿ ನಮ್ಮ ವಿಷಯವಾಗಿ ಇದ್ದ ತರಾವುಗಳು ಹೇಗೆ ಅಬದ್ಧವಾದವೆಂಬದನ್ನು ಆಯಾ ಪ್ರಮಾಣದ ಸಂಗತಿಗಳಿಂದ ಸಿದ್ಧಮಾಡಿ ತೋರಿಸಿದೆ.

ಒಟ್ಟಿಗೆ ಫುಲಿಸ್ಕೇಪ ಅರ್ಧ ಹಾಳೆಯ ಒಂದು ಮಗ್ಗಲಿನ ಟಾಯಿಪ ಮಾಡಿಸಿದ ೨೦೦ ಪುಟಗಳುಳ್ಳ ಪುಸ್ತಕಕ್ಕೆ ಮುದ್ರಣ ಬೆಲೆಯು ನಿಧಾನ ರೂಪಾಯಿ ೪೦೦ (ನಾಲ್ಕು ನೂರು) ಬೀಳುವದು, ಯಾರಾದರೊಬ್ಬ ವೀರಶೈವ ಮಹನೀಯರು ಇದರ ಖರ್ಚಿನ ಭಾರವನ್ನು ವಹಿಸಲಿಕ್ಕೆ ಮುಂದಾದರೆ ಬಹಳ ಉಪಕೃತನಾಗುವೆನು. ಹಾಗಿಲ್ಲದಲೆ ಎರಡು ರೂಪಾಯಿ ಮುಂಗಡವಾಗಿ ಕಳುಹಿಸಿ ಇನ್ನೂರು ಗ್ರಾಹಕರು ಮುಂದಾದರೆ ಅಂದರೆ ಸಪ್ಟಂಬರದೊಳಗಾಗಿ ಚಂದಾದಾರರು ಕೂಡಿನಲ್ಲಿ ಅಕ್ಟೋಬರದಲ್ಲಿ ಅವನ್ನು ಮುದ್ರಿಸಲು ಅನುವಾಗುವೆನು. ಇದು ಸಮಾಜ ಕಾರ್ಯವಾದ್ದರಿಂದ ಎಲ್ಲ ವೀರಶೈವ ಅಭಿಮಾನಿಗಳು ಇತ್ತ ಗಮನಿಸಬೇಕಾಗಿ ಪ್ರಾರ್ಥಿಸುವ,

ತಮ್ಮ ದೀನ ಬಂಧು,

ವೀರಪ್ಪ ಬಸವಪ್ಪ ಬಿಳಿ ಅಂಗಡಿ,
ಬಿ. ಎ. ಎಲ್‌ಎಲ್. ಬಿ. ವಕೀಲ
ಹುಬ್ಬಳ್ಳಿ.

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತೀಚ್ಚಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ವಿಪರೀತವಾಗಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟ ಬೇನೆಯು (**ಪ್ಲೇಗ ಮಾರಿಕಾ,**) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯ ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅವಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ **ವ್ಯವಸ್ಥೆ**ಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ,** ಪೋಸ್ಟ— **ಹುಮನಾಬಾದ ಜಿ. ಗುಲ್‌ಬರ್ಗಾ.**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ,

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ **ಮಲಾಮಿನ** ಗುಳಿಗೆಗಳಿಗೆ ೧೫ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ **ತರಿಸಿಕೊಳ್ಳುವವ** ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಮಿಂಚಿದ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧ ವಾಗಿದೆ. ಈ **ಸಂಜೀವಿನಿ ಚೂರ್ಣ**ವನ್ನು ಒಂದೇಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು. ಆಗ ನಿಮಗೆ ಖಂಡಿತವಾಗಿಯೂ ಆತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ. ವ್ಯಾಣಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

**ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್|**
**ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ||**

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಪ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ವಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಪಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಆರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಪಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ-೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ತಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೇಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗಾಗಿ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ. ಪೋ. ಅಲಮಟ್ಟಿ ಜಿ. ವಿಜಾಪುರ.**




ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—
ಕರ್ಲಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೮ ಆಣೆ.

ಮ್ಯಾನೇಜರ— ಶರಣ ಸಂದೇಶ

ದಿ ಸ್ವರಾಜ್ಯ

# ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ.)

## ಬೇಕಾಗಿದ್ದಾರೆ! ತಾಲೂಕ, ಜಿಲ್ಲಾ ಆರ್ಗನಾಯಿಝರರು ಪಗಾರದ ಮೇಲೆ ಬೇಕಾಗಿದ್ದಾರೆ!!

ಸ್ವರಾಜ್ಯ ಕಂಪನಿಯ ವಿಮಾ ಕಾರ್ಯವು ಪ್ರಾರಂಭವಾಗಿ ಇಂದಿಗೆ ೬ ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿ ವಿಮಾ ಪ್ರಪಂಚದಲ್ಲಿಯೂ. ಜನತೆಯಲ್ಲಿಯೂ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿರುವದೆಂಬುದು ಇದರ ಪ್ರತಿ ತಿಂಗಳ ಬೆಳವಣಿಗೆಯ ಮೇಲಿಂದ ತಾನೇ ಸಿದ್ಧವಾಗುವುದು. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇರುವದು.

೧೯೩೪ನೆಯ ಜಾನೇವರಿಯಿಂದ ಮಾರ್ಚ ೩೧ರವರೆಗೆ ೪೬೦೦೦ ರೂ.
,, ಎಪ್ರಿಲ್‌ದಿಂದ ಜೂನ ೩೦ ರವರೆಗೆ ೧,೧೩೦೦೦ ರೂ.
ಆಂಕೂ ೬ ತಿಂಗಳಲ್ಲಿ ೧,೫೯,೦೦೦ ರೂ.

ಇಷ್ಟು ಬೆಲೆ ಬಾಳುವ ಪಾಲಸಿಗಳು ಜಾರಿಯಲ್ಲಿವೆ. ಸಮರ್ಥರಾದ ಏಜಂಟರೂ, ಆರ್ಗನಾಯಿಝರರೂ ಕಮಿಶನ್ ಮತ್ತು ಪಗಾರದ ಮೇಲೆ ಕೆಲಸ ಮಾಡಲು ಬೇಕಾಗಿದ್ದಾರೆ—

| ಆರ್ಗನಾಯಿಝರರ ಪಗಾರ ಸ್ಕೇಲು. | ಪ್ರತಿ ತಿಂಗಳ ಪಗಾರ. | ಪ್ರತಿ ತಿಂಗಳ ಅಲಾವನ್ಸ. |
|---|---|---|
| ಜಿಲ್ಲಾ ಆರ್ಗನಾಯಿಝರ | ೫೦ ರಿಂದ ೧೦೦ ರೂ. | ೨೫ ರೂ. |
| ತಾಲೂಕ ಆರ್ಗನಾಯಿಝರ | ೨೫ ರಿಂದ ೫೦ ರೂ. | ೧೦ ರೂ. |

ಏಜಂಟರಿಗೆ ಭರಪೂರ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿಯ ಬಗ್ಗೆ ಕಂಪನಿಯ ಕೂಡ ಪತ್ರ ವ್ಯವಹಾರ ಮಾಡಿರಿ.

ಮ್ಯಾನೇಜಿಂಗ ಏಜಂಟ್ಸ.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ!** **ಉತ್ತಮ ಸೌಕರ್ಯ.** ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಶು ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**



# ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಸ್ಯೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಅಕ್ಷೇವಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

**" ಕಚ್ಚೆರ್ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮು ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣಾ ಕುಪಸ್ತ,**
**ಬಾಗಲಕೋಟೆ.**

**ಶ್ರೀರಾಮು ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಸಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ಸಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| **ನೀಲೀ ಮಶಿಜೀಟು—** | ೪ | ರೂಪಾಯಿ |
| **ಭಾಸ್ಕರ ಪ್ರಕಾಶ—** | ೧೧ | ,, |
| **ಗುಂಗಾಡ ನಾಶಕ—** | ೧೧ | ,, |
| **ಜೇಳಿನ ನಾಶ—** | ೧೧ | ,, |
| ೧೨ ತಗಣಿ ಶತ್ರು ಬಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. **ಹಂಚಲಿ.**
**ಜಿ. ವಿಜಾಪುರ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 289

# ಶರಣ ಸಂದೇಶ

The Sharana Sandesh

ನ್ಯಾಯನಿಷ್ಠುರಿ ದಾಕ್ಷಿಣ್ಯಪರನಾನಲ್ಲ। ಬೀಳುವರೋ। ಶರಣಸಾರಂಗನ ಅಂಕುವವನಲ್ಲ।
ಕೂಡಲಸಂಗಮದೇವರ ಶಾಖತೀಜವಲ್ಲಿಪ್ಪನಾಗಿ ॥ ಪ. ೨೨೪ । ಮುಗ್ಧಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಪ್ರಕಾಶಕರು
ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪೪. | ಆಲಮಟ್ಟಿ- ಸೋಮವಾರ ತಾರೀಖು ೨೬ ನೆಯ ಸೆಪ್ಟೆಂಬರ್ ೧೯೩೪. | ಸಂಚಿಕೆ ೧೪.

ಜನಸೇವೆಯೇ

ದೇವರ ಸೇವೆ

## ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಬೆಳಕು!

### ಕಾಂಗ್ರೆಸ್ಸಿಗೆ ಅಪೂರ್ವ ಎಡಯು!

**ದಕ್ಷಿಣ ಭಾಗದ ಅಸೆಂಬ್ಲಿ ಚುನಾವಣೆಯ ಪರಿಣಾಮವು ತಾ. ೨೨ ನೆಯ ಸಾಯಂಕಾಲ ಬೆಳಗಾವಿಯಲ್ಲಿ ಪ್ರಕಟವಾಯಿತು.**

ಶ್ರೀಮಾನ್ ಹೊಸಮನಿ ಸಿದ್ಧಪ್ಪನವರಿಗೆ
೧೪೯೧೭ ಮತಗಳು.

ಶ್ರೀ ವಿ. ನಾ. ಜೋಗರವರಿಗೆ
೪೦೬೪ ಮತಗಳು.

ರಾ। ಬ। ಬಿ. ಎಲ್. ಪಾಟೀಲರಿಗೆ
೩೧೭೦ ಮತಗಳು.

**ಈ ಪ್ರಕಾರ ಕಾಂಗ್ರೆಸ್ಸಿನ ಪ್ರತಿನಿಧಿಗಳಾದ ಶ್ರೀ. ಹೊಸಮನಿ ಸಿದ್ಧಪ್ಪನವರು ಅತ್ಯಧಿಕ ಮತಗಳನ್ನು ಹೊಂದಿ ಜಯಶಾಲಿಗಳಾದರು.**

ದೇಹವೇ

ದೇವಾಲಯ.

SANGAM CLOTH STORES
Prop: M S Hundekar & Sons,
P.O: TERDAL - 587 315
Dt Bijapur (Karnataka)

ಕಳಹುಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೂಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು [illegible] ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತ್ತ.

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲನೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು [illegible] ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಿಕೊಡತಾರ ಇಂಥಾದ್ಕ ನೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪ್ಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಅದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಸೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕದಾಗ** ಬ್ಯಾಂಕಿನವರ ಅನ್ರಿ ಸರಾಫರ್ನ ಅನ್ರಿ ಶ್ರೀಮಂತ ಜನರ ಳನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಅತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರಾಂಚ್ ಆಫೀಸ್:-
**ಅಬಿಡ್ಸ ಬಿಲ್ಡಿಂಗ್**
**ಹೈದ್ರಾಬಾದ** ( ಡೆಕ್ಕನ್ )

ಸಿ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.
ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟು.
ರವಿವಾರಪೇಟೆ ಬೆಳಗಾಂವ



ಶ್ರೀ ಹೂಲಿ ಸಿದ್ಧಾಂತ ಪಂಚಾಂಗದಲ್ಲಿ

# ಜಾಹೀರಾತ

ಕೊಡುವವರು ಜರೂರ ಕಳಿಸಿರಿ.

**ಪಂಚಾಂಗವು ಅಚ್ಚಾಗುತ್ತಲಿದೆ. ಕಾರಣ ತಡಮಾಡದೆ ಕಳಿಸಿರಿ.**

ವಿಶೇಷ— ಹೆಚ್ಚಿನ ಮಾಹಿತಿಯ ಬಗ್ಗೆ ಪತ್ರ ಬರೆಯಿರಿ.

**ಪಂಚಾಂಗ ಪ್ರಕಾಶಕರು,**
**ಸಿ. ಕೆ. ಲಿಂಗಯ್ಯಾಸ್ವಾಮಿ**
**ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.**

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

# ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ

## ಆ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ಮ ಕ್ಯಾಶ್ ಬಾಕ್ಸ ಮರ್ಚಂಟ್ಸ

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ಯಾಂಚ್ ಆಫಿಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಸೆಂಬರ ೧೯೩೭ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ನಂಕೆ ಒಂದು ಸರ ಸಳ ಜತಿ ಒಂದು ಪತ್ತು ರೂಪಾಯಿದ ನೋಟು ಒಂದು ನಂ. K. 11, 370[illegible] ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧॥ ಖಂಡಿ—

—ಕಟ್ಟಿಗೆಯಲ್ಲಿ ೧॥ ತಾಸಿನ ವರೆಗೆ (೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಜೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು. ಆ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮತರಗತಿಯ ತ್ರಿಜೋರಿಯಕಾರ್ಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಿಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ದೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ದೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2801

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ ರಾಕ್ಷಿಪ್ಪರ ನಾನಲ್ಲ; ಲೋಕವೆಲ್ಲರೊಳಗೆ ಲೆಕ್ಕಿಸಿನೋಡಿರಿಂತೆಂಬ ಉಪವನ್ನು।

ಕೂಡಲಸಂಗನುಮೇಲೆರ ರಾಜತೇಜದಲ್ಲಿಪ್ಪನಾಗಿ ॥ ಮ. ೨೨೪ ॥ ಸುಹಾನುಭಾವ ಬಸವಣ್ಣನವರು.

ಸಂಪಾದಕರು:-

ಶ್ರೀ. ಹರ್ಡೇಕರ ಮಂಜಪ್ಪನವರು.

ಚಂದಾ:-ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೩ ನೆಯ ಎಪ್ರಿಲ್ ೧ [illegible] ಚಕೆ ೩೩

ಜನಸೇವೆಯೇ ದೇವರ ಸೇವೆ

## ಭಾರತ ಭೂಷಣ

## ಧರ್ಮಾತ್ಮ ಮದನಮೋಹನ ಮಾಲವೀಯರವರನ್ನು ಹಿಡಿದರು!

ಕಲಕತ್ತಾ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗಿ ಹೋಗುತ್ತಿದ್ದ ಧರ್ಮಾತ್ಮ ಮದನಮೋಹನ ಮಾಲವೀಯವರನ್ನು ತಾ. ೩೧ನೆಯ ರಾತ್ರೆ ಗಾಡಿಯಲ್ಲಿ ಹಿಡಿದರು.

[illegible] ಸಂಗಡ ಶ್ರೀ. ಗೋವಿಂದ ಮಾಲವೀಯ, ಶ್ರೀಧರ ಮಾಲವೀಯ, ಶ್ರೀ. ಕೇಶವದೇವ ಮಾಲವೀಯ, ಮಿ, ರಫಿ ಅಹಮ್ಮದ ಕಿಡ್ವಾಯಿ ಶ್ರೀ. ಸಿ. ಬಿ. ಗುಪ್ತ, ಮತ್ತು ೭ ಜನರಿದ್ದರು. ಇವರೆಲ್ಲರನ್ನೂ ಹಿಡಿದರು.

ಕೈ. ಮೋತಿಲಾಲ ನೆಹರುರವರ ಧರ್ಮಪತ್ನಿ ಶ್ರೀ. ಸ್ವರೂಪ ರಾಣಿ ನೆಹರು ಇವರನ್ನೂ ಕಲಕತ್ತೆಯ ಮಾರ್ಗದಲ್ಲಿ ಹಿಡಿದರು.

ದೇಹವೇ ದೇವಾಲಯ

# ೫॥ ರೂಪಾಯಿಗೆ ೬ ಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

## ತಿರುವಾಂಕೂರು ಅಲ್ಶೈಯನ್ಸ್ ಬ್ಯಾಂಕಿನ

ರೂ. ೫॥ **ಬೋನಸ್ ಬಾಂಡ್.** ರೂ. ೫॥

ಈ ಒಂದು ಬಾಂಡಿನಿಂದ ರೂ. ೫೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

## ೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧। ಆಣೆಯ ಸ್ಟ್ಯಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ ಎಸ್ ಕುರುನತ್ತಿ ದಾವಣಗೆರೆ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ

--೧೦೦೦--

ನೀಲೀ ಮಶಿಜೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಚೇಳಿನ ನಾಶ— ೧೧ ,,
೧೨ ತಗಣಿ ಶತ್ರು ಬಾಟ್ಲಿ— ೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು.

ಭಾಸ್ಕರ ಪ್ರಕಾಶ ವರ್ಕ್ಸ್,
ಪೋ. ಹಂಜಲಿ.
ಜಿ. ವಿಜಾಪೂರ.

## ಮೋಹಿನಿ ಹೇರ್ ಆಯಿಲ್
ಮತ್ತು
## ಕಮಲಾ ಹೇರ್ ಆಯಿಲ್.

ಬಹು ಶ್ರೇಷ್ಠವಾದ ಸುಲಭ ಕ್ರಯದ ಅತಿ ಸುಗಂಧದ ಕೇಶ ತೈಲಗಳು ನಮ್ಮಲ್ಲಿ ತಯಾರಾಗುತ್ತವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಶನ್ ಕೊರೆಯುವುದು. ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಂಡು ವ್ಯಾಪಾರಿಗಳು ಹೆಚ್ಚಾದ ಲಾಭ ಹೊಂದಬಾರದೇ?

ಬಿ. ಎಚ್. ಹಾಗರಗಿಕರ್,
ಗುಲಬರ್ಗಾ.

## ಬೀಜಗಳು.

೫॥ ವ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೫॥ ,, ಯುರೋಪ ,, ,, ೫-೦-೦
೫॥ ,, ಹೂವಿನ ಬೀಜಗಳು ೫-೦-೦

## ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ ೧೫ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚೀಪೆ, ವನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೇವು, ಪಿಚ್ಚೇಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ ೧ಕ್ಕೆ ೯-೦-೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾತಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೊರ್ಟ್ ರೋಡ್,
ಬೆಂಗಳೂರ ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!



ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ನುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿವಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕದಾಗ** ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಜೆಗಲ ಬಿದ್ರಿ ಯಾರ ಏನ ಮಾಡೂದು.

ಶೆಟ್ಟರು—ಆತಕಪ್ಪಾ ರಾಮಜಿ, ಗಂಟ ಕಳೆದುಕೊಂಡು ಬುದ್ಧಿಗಲಿತೆನು. ನಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

**ಶಿ ಎ. ಎಂ. ದಿವಾಕರ**
ಸರಾಫ ಶಹಾಪೂರ ಬೆಳಗಾಂವ
**ಬಿ. ಎಸ್. ಕುರವತ್ತಿ**
**ಬ್ರದರ್ಸ, ಡಾವಣಗೇರಿ.**
**ಶಿ ಚೆನಬಸನಪ್ಪಾ**
**ಶ್ರೀಶೈಲಪ್ಪಾ ಗೋಟಿ.**
ರವಿವಾರಪೇಟೆ ಬೆಳಗಾಂವ.

**ಸಿದ್ಧೇಶ್ವರ ಮತ್ತು ಕಂಪನಿ.**
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
**ಅಬಿಡ್ಡ ಬಿಲ್ಡಿಂಗ್**
**ಹೈದ್ರಾಬಾದ** ( ಡೆಕ್ಕ )

ಚಾಗ್ರತೆ ತರಿಸಿಕೊಳ್ಳಿರಿ! ಚಾಗ್ರತೆ ತರಿಸಿಕೊಳ್ಳಿರಿ!


---


ಹರ್ಡೀಕರ ಮಂಜಪ್ಪನವರು ಬರೆದ

# ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇತಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆ ೧೨ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಬಸವ ಬೋಧಾಮೃತ | ೦-೬-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ಭಜನಾವಳಿ | ೦-೧-೬ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅಕ್ಕಮಹಾದೇವಿಯ ಚರಿತ್ರೆ | ೦-೧-೬ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ** ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ

## ಶಿವಶರಣರ ಬಸವಣ್ಣ.

"ಎನಗಿಂತ ಕಿರಿಯರಾರಿಲ್ಲ, ಶಿವಭಕ್ತರಿಗಿಂತ ಹಿರಿಯರಾರಿಲ್ಲ. ನಿಮ್ಮ ಪಾದ ಸಾಕ್ಷಿ ಎನ್ನ ಮನ ಸಾಕ್ಷಿ ಕೂಡಲಸಂಗಮದೇವಾ ಎನಗಿದೇ ದಿವ್ಯ."

ಶಿವಶರಣರು ಮಹಾನುಭಾವನಾದ ಬಸವಣ್ಣನನ್ನು ಅಣ್ಣನೆಂದು ಸಂಬೋಧಿಸಿ ತಮ್ಮ ಹೃದಯದಲ್ಲಿಯ ಭಕ್ತಿರಸದ ಕಾರಣಿಯನ್ನು ಅವನಿಗೆ ಅರ್ಪಿಸಿದ್ದಾರೆ. ಬಸವಣ್ಣನು ಶಿವಶರಣರ ಮನೋಮಂಡಲದ ಚಕ್ರವರ್ತಿಯು, ಶಿವಶರಣರ ಭಕ್ತಿ ಕೋಶಾಧ್ಯಕ್ಷನು, ಶಿವಭಕ್ತರ ಭಕ್ತಿ ಪುಸ್ತಳಿಯು. ಶಿವಧ್ಯಾನಿಗಳ ಮೂಲ ಮಂತ್ರನು, ಮುಕ್ತಿ ರಾಜ್ಯದ ಅಧಿದೇವತೆಯು ಈ ಪ್ರಕಾರವಾಗಿ ಶಿವಶರಣರು ಆ ಮಹಾತ್ಮನನ್ನು ಕೊಂಡಾಡಿರುತ್ತಾರೆ.

ಬಸವಣ್ಣನವರ ಅನಂಬ್ಯ ಗುಣಮಾಲಾಮಣಿಗಳು ಈಗೀಗ ನಮ್ಮ ನಿದರ್ಶನಕ್ಕೇ ಅಲ್ಲದೆ ನರಧರ್ಮದವರ ನಿದರ್ಶನಕ್ಕೂ ಬರಹತ್ತಿವೆಯಷ್ಟೆ. ಅವನ ಕಾರ್ಯ ಗೌರವನ್ನು ನಾವು ಅರಿಯಲು ವಕ್ರಮಿಸಿದ್ದೇವೆ. ಬಸವೇಶ್ವರನು ಕಾಯದಿಂದ ಅಕಾಯವನ್ನು ಬೋಧಿಸಿ, ಕಾಮದಿಂದ ನಿಃಕಾಮಿಯಾಗುವ ಹೊಲಬು ತೋರಿಸಿ, ಇಷ್ಟಲಿಂಗದಿಂದ ಪ್ರಾಣಲಿಂಗ ಸಂಬಂಧಿಸಿ ಮಹಾಲಿಂಗಿಯಾಗುವ ವರಿಯನ್ನರುಹಿದನು. ಸಾವಿರಾರು ವರುಷಗಳಿಂದಲೂ ಕ್ಷೀಣಿಸಿ ನಾಮಮಾತ್ರವಾಗಿದ್ದ ಶಿವಮತವು ಈ ಮಹಾನುಭಾವನಿಂದ ಉದ್ಧರಿಸಲ್ಪಟ್ಟಿತು. ಕರ್ಮಮಾರ್ಗಕ್ಕಿಂತಲೂ ಜ್ಞಾನಮಾರ್ಗಕ್ಕಿಂತಲೂ ಭಕ್ತಿಮಾರ್ಗವೇ ಆ ಪರಮಾತ್ಮನನ್ನರಿಯಲು ಶ್ರೇಷ್ಠತರವಾದ ಸಾಧನವೆಂದು ಯಾವ ಪುರಾತನರ ಪದ್ಧತಿಯಿದ್ದಿತೋ ಆ ಭಕ್ತಿ ಧ್ವಜವನ್ನೇ ಶ್ರೀ ಬಸವೇಶ್ವರನು ಎತ್ತಿ ಹಿಡಿದನು. ಮುಸ್ಲಿಮಾನಾದಿಗಳೂ, ಜಾತಿ ಸೂತಕಗಳೂ, ಹರಿದುಕಿರದುಗಳೂ, ಕುಲವರ್ಣಗಳೂ ಪರಮಾತ್ಮನನ್ನು ಕಾಣಲು ವ್ಯರ್ಥವಾಗಿ ತೊಂದರೆ ಕೊಡುವವು ಇಷ್ಟೇ ಅಲ್ಲದೆ ಧರ್ಮಬಾಂಧವನನ್ನು ಬಿಡಿಬಿಡಿ ಮಾಡಿ ಅಧಃಪಾತವನ್ನು ಮುಂದೊಡ್ಡುವವೆಂದು ಯಾವ ಪುರಾತನನು ಅವಗಳನ್ನು ನಿರಾಕರಿಸಿದರೋ ಅದೇ ಪದ್ಧತಿಯನ್ನು ಬಸವೇಶ್ವರನು ಪುನಃ ಮನಗಾಣಿಸಿಕೊಟ್ಟನು. "ಧರತೀತಿ ಧರ್ಮಃ" ಎಂದಲ್ಲ ಸರ್ವಸಮಾನತೆಯಿಲ್ಲದೆ ಅದೆಂತು ಉದ್ಧಾರವಾಗಲು ಶಕ್ಯವು? ಪರಸ್ಪರ ಸಹಾಯವು, ಪರಸ್ಪರ ಪ್ರೇಮವು, ಪರಸ್ಪರ ಸಂಬಂಧವು ಯಾವ ಧರ್ಮದಿಂದ ಆಗಲು ಶಕ್ಯವಿಲ್ಲವೋ ಆ ಧರ್ಮಕ್ಕೆ ಧರ್ಮವೆಂದೇನು ಪ್ರಯೋಜನ? ಧರ್ಮವೆಂದಲ್ಲಿ ಇವೆಲ್ಲವೂ ಬೇಕೇಬೇಕು. ಅರ್ಥಾತ್ ಧರ್ಮವೆಂದಲ್ಲಿ ಸಮಾನತೆ, ಕಾಯಕ, ದಾಸೋಹ, ಭಕ್ತಿ ಪಕ್ಷ ಇವೆಲ್ಲವೂ ಬೇಕೇಬೇಕು. ಇವುಗಳ ತಳಹದಿಯ ಮೇಲೆಯೇ ಧರ್ಮದೇವಾಲಯವನ್ನು ಕಟ್ಟಿ ಆ ಮಹಾನುಭಾವನು ಕೀರ್ತಿ ಧ್ವಜವನ್ನೇರಿಸಿದನು. ಶಿವಭಕ್ತರು ನಮ್ಮವರು. ಶಿವಭಕ್ತರು ಮಾನ್ಯರು. ವೃದ್ಧರಿರಲಿ, ಬಾಲಕರಿರಲಿ, ಸ್ತ್ರೀಯರಿರಲಿ. ಪುರುಷರಿರಲಿ ಶಿವಭಕ್ತರಿಂದಲೇ ಪೂಜ್ಯರು. ಶಿವಭಕ್ತಿಯು ಶಂಕರನ ಸೋಪಾನ. ಶಿವಭಕ್ತಿಯು ಲಿಂಗದರುವಿನ ಕುರುಹು. ಶಿವಭಕ್ತಿಯು ಕರ್ಮಜ್ಞಾನಗಳಿಗಾಧಾರ. ಶಿವಭಕ್ತಿಯೊಂದಿಲ್ಲದಿದ್ದರೆ ತರುಮರಗಳಿಗಿಂತಲೂ ಕರಕಷ್ಟ. ಇತ್ಯಾದಿ ಶಿವಭಕ್ತಿ ಪ್ರತಾಪವನು ಪ್ರಜುರಪಡಿಸಿದ ಪುಮಥಪುಂಗವನು ಆ ಮಹಾನುಭಾವನಾದ ಬಸವಣ್ಣನು. ಶಿವಭಕ್ತಿಗೆ ಹಿರಿದುಕಿರಿದೆಂಬುದಿಲ್ಲ. ಅವೆಲ್ಲ ಮರುವಿನ ಮಾಟ, ಶಿವಭಕ್ತಿಗೆ ಒಳಗು ಹೊರಗು ಎಂಬುದಿಲ್ಲ. ಅವೆಲ್ಲ ಅಜ್ಞಾನದ ಫಲ. ಶಿವಭಕ್ತಿಗೆ ಚ್ಯುತಿಯಿಲ್ಲ ಅದಿಲ್ಲ ಅಸತ್ಯದ ಬೇಟ. ಆದುದರಿಂದ ಶಿವಭಕ್ತಿ ಪಥವನರುಹಿದ ಶ್ರೀ ಬಸವೇಶ್ವರನು ಜಗನ್ಮಾನ್ಯನಾಗಿ ಶಿವಶರಣರ ಹೃದಯ ಜ್ಯೋತಿಯನಾಗಿರುವನು. ಪಾಟೀಲ ಲಿಂಗನಗೌಡ.

## ಸಮಾಚಾರ ಸಂಗ್ರಹ

—ಅಸೆಂಬ್ಲಿಯಲ್ಲಿ ಅಸ್ಪೃಶ್ಯತಾ ವಿಷಯಕನಾದ ಗೊತ್ತುವಳಿಯನ್ನು ಶ್ರೀ ರಂಗ ಅಯ್ಯರ ಮೊದಲಾದವರು ತರಲಿರುವುದನ್ನು ನಿಲ್ಲಿಸಬೇಕೆಂದು ಶ್ರೀ. ಹರಕರೆ ಇವರು ಪುಣೆಯ ಕೋರ್ಟನಲ್ಲಿ ಅರ್ಜಿ ಹಾಕಿಕೊಂಡಿದ್ದರು. ಆದರೆ ಅದು ಕೆತ್ತೊಗೆಯಲ್ಪಟ್ಟಿತು.

—ಬಜೋದಾ ಪಟ್ಟಣದ ಸಾವಿರ ಜನ ಗಿರಣಿಯ ಕೂಲಿಕಾರರು ಸಂಪು ಮಾಡಿದ್ದಾರೆ. ವೇತನ ಕೊಡದಿದ್ದುದೇ ಕಾರಣವಂತೆ.

—ಕ್ಯಾಲಿಫೋರ್ನಿಯಾವೆಲ್ಲ ಮಾರ್ಚ ೨೫ನೆಯ ತಾರೀಖಿನ ದಿವಸ ಒಂದು ವಿಮಾನವು ಭೂಮಿಯ ಮೇಲೆ ಅಪ್ಪಳಿಸಿತು. ಮತ್ತು ಅದರೊಳಗಿನ ೧೨ ಜನರು ಕೊಲ್ಲಲ್ಪಟ್ಟರು.

—ಬ್ರಹ್ಮದೇಶದಲ್ಲಿ ೧೦ ವರ್ಷದ ವರೆಗೆ ನಿದ್ರಿಸುತ್ತಿದ್ದ ಕೌಕಪ್ಯ ಜ್ವಾಲಾಮುಖಿಯು ಮಾರ್ಚ ೨೫ನೆಯ ತಾರೀಖಿನ ದಿವಸ ಎಚ್ಚರಗೊಂಡಿತು. ಜ್ವಾಲೆಯು ೩೦೦ ಘೂಟು ಎತ್ತರದ ವರೆಗೆ ಏಳುತ್ತಿದ್ದಿತು. ಸುತ್ತಲೂ ೫ ಮೈಲುಗಳವರೆಗೆ ಅದರ ಪ್ರಕಾಶವು ಬಿದ್ದಿತ್ತು.

—ನಮಾಜಸತ್ತಾವಾದದ ಸುದ್ದಿಗಳ ಮೇಲೆ ಸರಕಾರವು ನಿಯಂತ್ರಣ ಮಾಡಿರುವುದರಿಂದ ಅದರ ನಿಷೇಧಾರ್ಥವಾಗಿ ವಿಯೆನ್ನಾದಲ್ಲಿಯ ಎಲ್ಲ ವೃತ್ತ ಪತ್ರಿಕೆಗಳೂ ತಮ್ಮ ಒಂದು ಅಂಕನ್ನು ಹೊರಡಿಸಲೇ ಇಲ್ಲ.

—ಆಕ್ಸ್‌ಫರ್ಡ ವಿದ್ಯಾಪೀಠವು ತೆಗೆದುಕೊಳ್ಳುವ ಕಾಲಕ್ಕೆ ೧೨ ಪೌಂಡು ದಕ್ಷಿಣೆಕೂಡಬೇಕಾಗುತ್ತಿದ್ದ. ಆದುದರಿಂದ ಈಗ ಎಷ್ಟೋ ವರ್ಷಗಳಿಂದ ನೂರಾರು ಪದವೀಧರರು ಆ ಪದವಿಯನ್ನು ಹೊಂದೇ ಇಲ್ಲ. ಆ ದಕ್ಷಿಣೆಯನ್ನು ೫ ಪೌಂಡು ಇಡಬೇಕೆಂದು ವಿದ್ಯಾ ಪೀಠದವರು ವಿಚಾರಣೆ ನಡೆಸಿದ್ದಾರೆ.

—ರಶಿಯನ್ ಸರಕಾರದವರು ಮೆಟ್ರೊಪೊಲಿಟನ್ ವ್ಹಿಕರ್ಸ ಕಂಪನಿಯ ಕೆಲವು ಇಂಗ್ಲಿಶ್ ನೌಕರರನ್ನು ವಿದ್ಯುದ್ಯಂತ್ರವನ್ನು ಮುರಿಯುವ ಆರೋಪದ ಮೇಲೆ ಬಂಧಿಸಿರಿವರು. ಈ ಸಮಾಚಾರವು ತಿಳಿದೊಡನೆಯೇ ಇಂಗ್ಲಂಡದ ಪರರಾಷ್ಟ್ರ ಮಂತ್ರಿಯು ಆ ಇಂಗ್ಲೀಷ ಕೈದಿಗಳನ್ನು ಬಿಟ್ಟುಬಿಡಿರೆಂದು ವಿಜ್ಞಾಪಿಸಿಕೊಂಡನು. ರಶಿಯನ ಸರಕಾರವು ಈ ಬಿನ್ನಹವನ್ನು ಅಮಾನ್ಯ ಮಾಡಿ ತಿಳಿಸಿದುದೇನೆಂದರೆ— "ಯಾವ ಜನರ ಮೇಲೆ ಸಂಶಯವಿರುವದೋ ಅಂಥ ಜನರನ್ನು ವಿಚಾರಿಸದೆ ಬಿಡುವುದೆಂದರೆ ರಶಿಯಾದಲ್ಲಿ ರಶಿಯನ್ನ ಸರಕಾರವಿರದೆ ಇಂಗ್ಲಂಡದ ಸರಕಾರವಿರುವುದೆಂದು ಒಪ್ಪಿಕೊಂಡಂತೆಯೇ ಸರಿ." ಈ ಪ್ರಕಾರದ ಉತ್ತರದಿಂದ ಇಂಗ್ಲಂಡದಲ್ಲಿ ಬಹಳೇ ಗಡಿಬಿಡಿಯುಂಟಾಗಿರುವದು. ೨೫ನೆಯ ತಾರೀಖಿನ ದಿವಸ ಪರರಾಷ್ಟ್ರೀಯ ವಿಭಾಗದ ಎರಡನೇ ಚೀಟಣೀಸರಾದ ಕ್ಯಾಪ್ಟನ್ ಏಡನ್ನ ಇವರು ಪಾರ್ಲಿಮೆಂಟಿನಲ್ಲಿ ಒಂದು ದೊಡ್ಡ ಭಾಷಣ ಮಾಡಿ ಮೊದಲನೆಯ ಉಪಾಯವೆಂದು ಈ ಪ್ರಕಾರ ಪ್ರಕಟಪಡಿಸಿದರು. "ರಶಿಯದ ಸಂಗಡ ವ್ಯಾಪಾರಿ ಸಂಬಂಧವನ್ನು ಮುರಿದು ಹಾಕಲು ಬ್ರಿಟಿಶ ಸರಕಾರದವರು ನಿರ್ಣಯಿಸಿದ್ದು ಆ ಪ್ರಕಾರ ರಶಿಯನ್ನ ಸರಕಾರಕ್ಕೆ ತಿಳಿಸಿಬಿಟ್ಟಿದೆ." ವ್ಯಾವಾರೀ ಸಂಬಂಧವನ್ನು ಮುರಿಯುವದೆಂದರೆ ತೀವ್ರ ಮತಭೇದದ ಲಕ್ಷಣವು. ಆದುದರಿಂದ ಈ ಪ್ರಕರಣವು ಮುಂದೆ ಎಷ್ಟು ವಿಕೋವಕ್ಕೆ ಹೋಗುವದೋ ನೋಡಬೇಕು.

## ಅಖಿಲಭಾರತ ಹರಿಜನ ಸೇವಾ ಸಂಘ

(ಏಪ್ರಿಲ್ ೧ ನೆಯ ತಾರೀಖಿನ ವರೆಗೆ ೧ ವಾರದ ಕಾರ್ಯಕ್ರಮ.)

**ದೇವಾಲಯ.**

೧ ರಾಜಮಹೇಂದ್ರಿ ಜಿಲ್ಲೆಯಲ್ಲಿ ಆದಿಜನರಿಗಾಗಿ ಒಂದು ಹೊಸ ಶ್ರೀ ರಾಮ ದೇವಾಲಯವು ಕಟ್ಟಿಸಲ್ಪಟ್ಟಿದೆ

**ಶಾಲೆಗಳು**

೧ ದಿಲ್ಲಿ ದರ್ಯಾಗಂಜದಲ್ಲಿ ಆದಿಜನರಿಗಾಗಿ ಒಂದು ರಾತ್ರಿ ಶಾಲೆಯು ಪ್ರಾರಂಭಿಸಲ್ಪಟ್ಟಿದೆ

೨ ರಘುಮಲ ಚಾರಿಟೆಬ್ಲ ಟ್ರಸ್ಟ ಕಲಕತ್ತಾ ಬೋರ್ಡಿನವರು ಬಂಗಾಲದ ಆದಿಜನ ವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ೧೦೦ ರೂ ಶಿಷ್ಯವೃತ್ತಿಯನ್ನು ಕೊಡಲು ಮಂಜೂರು ಮಾಡಿದ್ದಾರೆ

೩ ಸಿಂಧ ಪ್ರಾನ್ವಿನ್ಸಿಯಲ ಬೋರ್ಡಿನವರು ಕರಾಚಿಯಲ್ಲಿ ಆದಿಜನರಿಗಾಗಿ ಎಂಟು ರಾತ್ರಿ ಶಾಲೆಗಳನ್ನು ಸ್ಥಾಪಿಸಿದ್ದು ಅವು ಗಳಲ್ಲಿ ೫೫ ಜನ ಮಾಸ್ತರರು ಆದಿಜನರೇ ಇರುತ್ತಾರೆ.

೪ ಕಾಶಿ ಹಿಂದೂ ಯುನಿವರ್ಸಿಟಿಯ ಸುತ್ತಲಿರುವ ಹಳ್ಳಿಗ ಳಲ್ಲಿಯ ಆದಿಜನರಲ್ಲಿ ಶಿಕ್ಷಣ ಪ್ರಸಾರಮಾಡಲು ಹಿಂದೂ ಯುನಿ ವರ್ಸಿಟಿಯಲ್ಲಿ ಒಂದು ಸಂಘವು ಏರ್ಪಟ್ಟಿದೆ.

೫ ದಿಲ್ಲಿ ಸ್ಕೂಲ ಬೋರ್ಡಿನವರು ಆದಿಜನ ವಿದ್ಯಾರ್ಥಿಗಳ ಶಿಷ್ಯವೃತ್ತಿಗಾಗಿ ತಿಂಗಳಿಗೆ ೫೫ ರೂ.ಯಂತೆ ಕೊಡುತ್ತಾರ

## ಅಭಿನಂದನೆ.

—ಶ್ರೀ. ಕಳಕನಗೌಡ್ರು ಪೋಲೀಸ ಪಾಟೀಲ ಮಲಕಸಮುದ್ರ ಸಾ. ಸಂಗನಹಾಳ ಇವರು ಶ್ರೀಶೈಲ ಮಹಾಕ್ಷೇತ್ರದಲ್ಲಿ ಲಿಂಗೈಕ್ಯ ರಾದ ಅಡಿವೆಮ್ಮನವರ ಸ್ಮರಣಾರ್ಥವಾಗಿ ಕ್ಷೇತ್ರದಲ್ಲಿ ಒಂದು ಮಂಟಪವನ್ನು ಕಟ್ಟಿಸುವದಾಗಿಯೂ ಮತ್ತು ಅನ್ನ ಛತ್ರಕ್ಕಾಗಿ ಪ್ರತಿವರುಷವೂ ೫೦ (ಐವತ್ತು ರೂಪಾಯಿ)ಗಳನ್ನೂ ಕಲವು ಭಾಂಡೆ ಸಾಮಾನುಗಳನ್ನೂ ಕೊಡುವದಾಗಿಯೂ ವಾಗ್ದಾನವನ್ನಿತ್ತಿರುವರು. ಅಲ್ಲದೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ಪೂಜಾ ಸಮಿತಿಯ ಸಭಾಸದರಾಗಿಯೂ ನೇಮಿಸಲ್ಪಟ್ಟಿರುವರು. ದೇವರು ಇವರಿಗೆ ಸರ್ವ ದಾ ಮಂಗಲವನ್ನಿತ್ತು ಇದಕ್ಕಿಂತ ಹೆಚ್ಚಿನ ಕರ್ತವ್ಯವನ್ನು ಮಾಡಿ ಸಿಕೊಳ್ಳಲೆಂದು ನನ್ನ ಪ್ರಾರ್ಥನೆ.

ಆಡೂರ.
ತಾ. ೩೧-೩-೧೯೩೩ } **ವೀರಭದ್ರಪ್ಪ ವೀರಪ್ಪ ಶಿರೂರ.**

—ಮಹಾತ್ಮಾ ಗಾಂಧಿಯವರ ಸತ್ಯಾಗ್ರಹಾಶ್ರಮದ ಟ್ರಸ್ಟಿ ಗಳಲ್ಲೊಬ್ಬರಾದ ಮಹದೇವ ಭಾಯಿ ದೇಸಾಯಿ ಇವರಿಗೆ ಆಶ್ರಮದ ಭೂಮಿಯ ತೆರಿಗೆಯನ್ನು ತುಂಬಬೇಕೆಂದು ನೋಟೀಸ ಕೊಡಲಾ ಗಿದೆ.

—ದಕ್ಷಿಣ ಅಮೇರಿಕೆಯ ಪೇರೂ ದೇಶದಲ್ಲಿ ಭೂಕಂಪದ ಹೊಡ ತದಿಂದ ಒಂದೇ ಒಂದು ಹಳ್ಳಿಯ ೧೦೦೦ ಜನರು ಮರಣ ಹೊಂದಿ ದರೆಂಬ ಸುದ್ದಿಯಿದೆ

—ದಕ್ಷಿಣ ಹೈದರಾಬಾದದಲ್ಲಿ ಶ್ರೀ ವಾಮನ ನಾಯಿಕ ಇವರ ಅಧ್ಯಕ್ಷತೆಯಲ್ಲಿ ಹರಿಜನ ಸೇವಾ ಸಂಘವು ಸ್ಥಾಪಿಸಲ್ಪಟ್ಟಿದೆ

—ಪ್ರಸಿದ್ಧ ಹಿಂದೀ ಕವ್ಯುನಿಷ್ಟರಾದ ಶ್ರೀ. ನಾರಾಯಣ ನಂಬಿ ಯಾರ ಇವರಿಗೆ ಜರ್ಮನಿಯ ನಾಝಿ ಪಕ್ಷದವರು ಒಂದು ವಾರ ದೊಳಗಾಗಿ ಜರ್ಮನಿಯಿಂದ ಹೊರಟುಹೋಗಬೇಕೆಂದು ತಿಳ ಸಿದ್ದಾರೆ.

## ಸಮಾಚಾರ ಸಂಗ್ರಹ.

—ಬೆಲ್ಜಿಯದಲ್ಲಿ ಲಿವ್ವರ್ಪೂಲ ವಿಮಾನಿಗೆ ಬೆಂಕಿ ಹತ್ತಿ ೧೫ ಜನರು ಮರಣ ಹೊಂದಿದರು ಅವರಲ್ಲಿ ಕೆಲವರು ವಾಯುಚೀಲದ ಸಹಾಯದಿಂದ ವಾರಾಗಲು ಯತ್ನಿಸಿದರು. ಆದರೆ ಅದು ವ್ಯರ್ಥ ವಾಯಿತು

—ಯುದ್ಧ ಮಾಡುತ್ತಿರುವ ರಾಷ್ಟ್ರಗಳಿಗೆ ಶಸ್ತ್ರ ಪುರವರೆ ಮಾಡುವದನ್ನು ನಿಲ್ಲಿಸುವ ಅಧಿಕಾರವನ್ನು ಅಮೇರಿಕೆಯ ಪರ ರಾಷ್ಟ್ರ ಖಾತೆಯವರು ಅಧ್ಯಕ್ಷರಾದ ಮಿ. ರೂಝುವಲ್ಟರವರಿಗೆ ಒಪ್ಪಿಸಿದ್ದಾರೆ

—ಜಪಾನ ಸರಕಾರವು ತಾನು ಜಿನೆವಾ ರಾಷ್ಟ್ರಸಂಘದಿಂದ ಹೊರಟು ಹೋಗಿದ್ದರೂ ಜಗತ್ತಿನ ಶಾಂತ್ಯರ್ಥವಾಗಿ ರಾಷ್ಟ್ರ ಸಂಘದ ಕೂಡ ಸಹಕಾರ ಮಾಡಲು ತಾನು ಸಿದ್ಧವಿರುವದಾಗಿ ತಿಳಿಸಿದ.

—ಕಲಕತ್ತೆಯಲ್ಲಿ ರಾಷ್ಟ್ರೀಯ ಸಭೆಯ ನಿಮಿತ್ತವಾಗಿ ೪೦೦ ಜನರನ್ನು ಬಂಧಿಸಿದ್ದಾರೆ

—ಪೌರಾ ಪಟ್ಟಣದಲ್ಲಿ ಕಾಂಗ್ರೆಸ ಪತ್ರಿಕೆಗಳನ್ನು ಹಂಚಿದು ದಕ್ಕಾಗಿ ೧೦ ಜನ ಸ್ವಯಂ ಸೇವಕರನ್ನು ಒಂಧಿಸಿದ್ದಾರೆ

—ಅರುನಸೋಲ ಎಂಬಲ್ಲಿ ರಾಷ್ಟ್ರೀಯ ಸಭೆಗ ಹೋಗುತ್ತಿ ದ್ದ ೧೧ ಜನ ಪ್ರತಿನಿಧಿಗಳನ್ನು ರೇಲ್ವೆ ಗಾಡಿಯಲ್ಲಿ ಬಂದಿಸಿದರು.

—ಕೃಷ್ಣ ನಗರದಿಂದ ೧೯ ಜನ ಪುರುಷರೂ ೬ ಜನ ಸ್ತ್ರೀಯರೂ ವಾದಚಾರಿಗಳಾಗಿ ಕಲಕತ್ತೆಗೆ ಹೋಗುತ್ತಿರುವಾಗ ಮಾರ್ಗದಲ್ಲಿಯೇ ಬಂಧಿಸಲ್ಪಟ್ಟರು

—ಸಂಯುಕ್ತ ಪ್ರಾಂತದಿಂದ ಹೊರಟ ೧೩ ಜನ ಪ್ರತಿನಿಧಿಗ ಳನ್ನು ಪೌರಾ ಪೊಲಿಸ ಪಟ್ಟಿರ ಬಂಧಿಸಿದರು.

—ಗೋರಖಪುರದಿಂದ ಹೊರಟ ೧೨ ಜನ ಸ್ವಯಂಸೇವಕರು ಹಿಡಿಯಲ್ಪಟ್ಟರು.

—ಪುರಿ ಕಾಂಗ್ರೆಸ ಕಮಿಟಿಯ ಸರ್ವಾಧಿಕಾರಿಣಿಯಾದ ಶ್ರೀಮತಿ ಸುನಾಮತಿ ದೇವಿ ಇವರನ್ನು ಬಂದಿಸಿದ್ದಾರೆ.

—ಬೆಳಗಾಂವಿಯಲ್ಲಿ ಸಂಯುಕ್ತ ಕರ್ನಾಟಕವು ದೈನಿಕವಾ ಗುವದಿದೆ. ಅದರ ಕಡೆಯಿಂದ ೬೫೦ ರೂ, ಜಾಮೀನೆಯನ್ನು ಮೊದಲೇ ಕೇಳಲಾಯಿತು. ಮತ್ತು ಇಷ್ಟು ರೂಪಾಯಿಗಳನ್ನೂ ಅದರ ಕಾರ್ಯನಿರ್ವಾಹಕರು ತುಂಬಿದ್ದಾರೆ

—ರಾಷ್ಟ್ರೀಯ ಸಭೆಯ ಸ್ವಾಗತಾಧ್ಯಕ್ಷರಾದ ಡಾ. ಪ್ರಫುಲ್ಲ ಘೋಷ ಇವರನ್ನೂ ಅವರ ತರುನಾಯ ಮಾಡಲ್ಪಟ್ಟ ಡಾ. ನಲಿ ನಾಖ್ಯ ಸನ್ಯಾಲ ಇವರನ್ನೂ ಮಾರ್ಚ ೨೮ನೆಯ ತಾರೀಖಿನ ದಿವಸ ಕೈಸೆರೆ ಮಾಡಿದ್ದಾರೆ.

—ಏಪ್ರಿಲ ೫ನೆಯ ತಾರೀಖಿನಿಂದ ದಕ್ಷಿಣ ಹೈದರಾಬಾದದ ರೆಸಿಡೆನ್ಸಿ ಬಾಜಾರದ ಅರ್ಧ ಚೌರನ ಮೈಲು ಪ್ರದೇಶವು ನಿಝಾಮ ಸಾಹೇಬರಿಗೆ ತಿರುಗಿ ಕೊಡಲ್ಪಡುವದು.

—ಮುಂಬಯಿಯ ಪ್ರಸಿದ್ಧ ವ್ಯಾಪಾರಸ್ಥರು, ಧನಾಢ್ಯ ಗಿರಣಿ ಯಜಮಾನರೂ ಆದ ಸರ್ ದಿನಶಾ ಮಾಣಿಕಜಿ ಪೇಟೀಟ ಇವರು ನಿಧನ ಹೊಂದಿದರು.

—ನಾಗಪುರದಲ್ಲಿ ಕಲ್ಕತ್ತಾ ರಾಷ್ಟ್ರೀಯ ಸಭೆಗೆ ಹೊರಡಲುದ್ಯು ಕ್ತರಾದ ೬೬ ಜನರು ಬಂಧಿಸಲ್ಪಟ್ಟಿದ್ದಾರೆ.

—ವರ್ಷ ಪ್ರತಿವರ್ಷದಂತೆ ಸುಮುಹೂರ್ತದಲ್ಲಿ ಬೆಳಗಾಂವ ಇಲೆ ಕ್ಟ್ರಿಕ ಸಪ್ಲಾಯ ಕಂಪನಿಯವರು ಬೆಳಗಾವಿಯಲ್ಲಿ ವಿದ್ಯುತ್ತಿನ ದೀವಿ ಗೆಗಳನ್ನು ಕೊಡಲು ಪ್ರಾರಂಭಿಸಿದ್ದಾರೆ.

REGISTEREL

# ಶರಣ ಸಂದೇಶ

The

Sharana Sandesh.

ನ್ಯಾಯನುಡಿಗೆ| ದಾಕ್ಷಿಣ್ಯಕರನಾಗಲ್ಲ| ಕೋಳಿವರೋಧಿ| ಕರಣಾಕಾರಂಗೆ ಅಂಜುವವನಲ್ಲ|
ಕೂಡಲಸಂಗಮದೇವರ ಶಾಖೋಪಶಾಖವಲ್ಲನ್ನವಾಗಿ ॥ ಶ. ೨೨೪ ॥ ಮಹಾನ-ಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೆಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೫. | ಆಲನುಟ್ಟಿ- ಸೋಮವಾರ ತಾರೀಖು ೨ ನೆಯ ಮಾರ್ಚ ೧೯೪೬. | ಸಂಚಿಕೆ ೨೬

ಸೋನಯೇ

ಶೇವದ ಶೇವೆ

# ಜಪಾನದಲ್ಲಿ ಭಂಡಾಯ!

ಮುಖ್ಯ ಮಂತ್ರಿ, ಯುದ್ಧ ಮಂತ್ರಿ
ಮೊದಲಾದವರ ಕೊಲೆ!!

ಕಳೆದ ತಾ. ೨೪-೨-೪೬ ನೆಯ ದಿವಸ ಜಪಾನದ ರಾಜಧಾನಿ
ಟೋಕಿಯೊ ಪಟ್ಟಣದಲ್ಲಿ ೪೦೦೦ ಸೈನಿಕರ ಒಂದು ತಂಡವು ದೊಂಬೆಯೆಬ್ಬಿಸಿ
ಮನೆಯಲ್ಲಿ ಮಲಗಿಕೊಂಡಿದ್ದ ಮುಖ್ಯ ಮಂತ್ರಿಗಳನ್ನು
ಎಬ್ಬಿಸಿ ಗುಂಡಿಟ್ಟು ಕೊಂದಿತು.

ಅನಂತರ ಲೆಕ್ಕವಿಭಾಗದ ಮಂತ್ರಿ, ನೌಕಾವಿಭಾಗದ ಮಂತ್ರಿ,
ದಂಡಿನವಿಭಾಗದ ಸೇನಾಪತಿ ಎಲ್ಲರನ್ನು
ಕೊಂದು ಹಾಕಿದರು.

ಈ ಮುಖ್ಯಾಧಿಕಾರಿಗಳೆಲ್ಲ ರಾಷ್ಟ್ರವನ್ನು ಅಧೋಗತಿಗೆ ಒಯ್ಯುತ್ತಿರುವರೆಂದು
ದೊಂಬೆಯೆಬ್ಬಿಸಲಾಯಿತಂತೆ. ಈ ದೊಂಬೆಯಲ್ಲಿ ಒಟ್ಟಿಗೆ
೪೦ ಜನರ ಕೊಲೆಯಾಗಿದೆ.

ಶೇವದ

ಶೇವಾಲಯ.

SANGAM CLOTH STORES
Prop: M S Hunde & Sons,
P.O: TEK[illegible] 2813
Dt. Bijapur, [illegible]

## ಶಿರಸಿಯಲ್ಲಿ

# ಸಿದ್ದೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ದೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ ( ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು ) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವು. ಅದೇ ದಿವಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋರಿ ತೆರೆಯಲಿಕ್ಕೆ ವಡೆಯಲಿಕ್ಕೆ ಹೊಡೆದು ಬಡೆದು ಕಚ್ಚು ಹಾಕಿ ಅನೇಕ ತರ ಪದಿಂದಾ ಪ್ರಯತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೋರಿಗೆ ಪೆಟ್ಟುಗಳು ಮಾತ್ರ ಬಹಳ ಬಿದ್ದಿವೆ. ಮಾರಿಯ ಬಣ್ಣ ಎಲ್ಲವೂ ಹಾರಿ ಹೋಗಿದೆ. ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ನುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹ್ಹೊಂದಿದಂತಾಗಿದೆ ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿನ್ನು ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ವರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮೀಕ್ಷೆಯನು ನೋಡಲಿಕ್ಕೆ ಬರಬಹುದು. ಇಂತೀ ನಮಸ್ಕಾರಗಳು.

ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಸಿ.


## ಹರ್ಡೀಕರ ಮಂಜಪ್ಪನವರು ಬರೆದ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಸುಕಲಾದೇವಿಯ ಕಥೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಲಜಪತರಾಯರ ಚರಿತ್ರೆ | ೦-೧-೬ | ವಿಜಯವಾಣಿ | ೦-೨-೦ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಸ್ವೀಕರಿಸಿದ ಜನರೇ ಹೆಚ್ಚು. ಇಂಥ ಜನರಿಗೆ ಪಶ್ಚಾತ್ತಾಪವಾದದ್ದು ಕಂಡುಬಂದರೆ ಅವರನ್ನು ಶುದ್ಧಿಮಾಡುವದು ಈಗಿನವರ ಆದ್ಯಕರ್ತವ್ಯವಲ್ಲವೇ? ಇಷ್ಟೇ ಅಲ್ಲ. ಎರಡನೇ ನಮಾಜದೊಳಗಿನ ಜನರಿಗೆ ನಮ್ಮ ಉದಾತ್ತ ತತ್ವದ ಮಹತ್ವವನ್ನು ತಿಳಿಸಿ ಹೇಳಿ, ಅವರಿಗೆ ಲಿಂಗ ದೀಕ್ಷಾ ಮಾಡುವುದು ಯೋಗ್ಯವು. ಇಸ್ಲಾಮು ಮತ್ತು ಕ್ರಿಸ್ತಿ ಸಮಾಜದವರು ಮೇಲಿನ ಉಪಕ್ರಮಣವನ್ನು ಮಾಡುತ್ತಿರುವದನ್ನು ನೋಡಿ, ನಾವು ಸ್ವಸ್ಥ ಇರುವದು ನಾಮರ್ದತನವಲ್ಲವೇ? ಉಚ್ಚ ನೀಚ ಮಾನಾಪಮಾನದ ಶಾಬ್ದಿಕ ಆಡಂಬರಕ್ಕೆ ಬಲಿಬೀಳದೆ, ರೇಣುಕಾಚಾರ್ಯ, ಬಸವೇಶ್ವರರಂತೆ ಸಮಾಜೋದ್ಧಾರದ ಕಾರ್ಯ ಸ್ವೀಕರಿಸಿದರೆ ಶ್ರೇಷ್ಠತ್ವವು ತಾನೇ ಬರುವದು. **ನಂದಗಡದ ಶ್ರೀಮನ್ ನಿರಂಜನ ಮಹಾಂತ ಸ್ವಾಮಿ**ಯವರು ಚಿಕ್ಕೋಡಿ ತಾಲೂಕಿನಲ್ಲಿ ೮೦೦ ಜನರಿಗೆ ಲಿಂಗದೀಕ್ಷೆಯನ್ನು ಕೊಟ್ಟು ಶುದ್ಧಿ ಕಾರ್ಯವನ್ನು ಮಾಡಿದ್ದು ಸಮಾಜಕ್ಕೆ ಭೂಷಣವೇ ಸರಿ. ಇಂಥ ಕಾರ್ಯವನ್ನು ಅಲ್ಲಲ್ಲಿ ಮಾಡಿ ಸಮಾಜವನ್ನು ವೃದ್ಧಿಗೊಳಿಸಿರಿ. ಇನ್ನಾವರೂ ಎಲ್ಲ ಧರ್ಮಾಧಿಕಾರಿಗಳು ಮೇಲಿನ ಕಾರ್ಯದ ಕಡೆಗೆ ಲಕ್ಷ ಕೊಡುವರೋ? ಇತ್ತಕಡೆಗೆ ಎಲ್ಲ ಜನರ ಲಕ್ಷವಿರಲೆಂದು ನನ್ನ ವಿನಂತಿ.

ತಮ್ಮ,
**ಗಂಗಾಧರ ಸಂಗಪ್ಪ ಗಿರಿಗೌಡ, ನಂದಗಡ.**

## ಶಿವಶರಣರ ಅಸ್ತೇಯ ವ್ರತ.

ಊರ ಮುಂದೆ ಹಾಲಹಳ್ಳ ಹರಿವುತ್ತಿರಲಿ, ನಾಳೆ ಅವಿನ ಬೆನ್ನ ಮೇಲೆ ಹರಿಯಲಿ. ಅದೇಕಯ್ಯ ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಾಂಡಾರ ಎನಗೇತಕಯ್ಯ? ಎಂಬ ಬಸವಣ್ಣನವರ ವಚನವು ನಮಗೆ ಬೋಧಿಸುವುದೇನು?

ಒಬ್ಬರ ಪದಾರ್ಥವನ್ನು ಅವರಿಗೆ ತಿಳಿಯದಂತೆ ತೆಗೆದು ಕೊಂಡರೆ ಕಳವುಮಾಡಿದಂತಾಗುವುದೆಂಬದಿಷ್ಟೇ ಅಲ್ಲ. ಆವರೆ ತನಗೆ ಬೇಕಾಗುವುದಕ್ಕಿಂತಲೂ ಹೆಚ್ಚು ಧನವನ್ನು ಸಂಗ್ರಹಿಸುವದು ಇಲ್ಲವೆ ಪದಾರ್ಥಗಳನ್ನು ಸಂಗ್ರಹಿಸುವದೂ ಅಸ್ತೇಯ ವ್ರತಕ್ಕೆ ವಿರುದ್ಧವಾಗಿರುತ್ತದೆ. ಒಂದು ವೇಳೆ ನಾವು ಆ ರೀತಿ ಸಂಗ್ರಹಿಸಿದುದಾದರೆ ಇರುವೆ ಮೊದಲುಗೊಂಡು ಆನೆ ಕಡೆಯಾಗಿ ಸರ್ವ ಜೀವಿಗಳಿಗೂ ಆಯಾ ಪ್ರಕಾರ ಆಹಾರವನ್ನು ಕ್ಷಣಕ್ಷಣಕ್ಕೆ ಒದಗಿಸಿ ಕೊಡುವ ಪರಮಾತ್ಮನ ಶಕ್ತಿಯನ್ನೂ ಕರುಣೆಯನ್ನೂ ಧಿಕ್ಕರಿಸಿದಂತಾಗಲಿಕ್ಕಿಲ್ಲವೇ? ಕಾಯಕವನ್ನವಲಂಬಿಸಿದ ಪ್ರತಿಯೊಬ್ಬ ವೀರ ಶೈವನು ತನಗೆ ನಿತ್ಯದ ಪ್ರಸಾದವನ್ನು ಪರಮಾತ್ಮನು ನಿಶ್ಚಯವಾಗಿ ಅನುಗ್ರಹಿಸುತ್ತಾನೆಂದು ತಿಳಿಯುತ್ತಾನೆ. ಆದುದರಿಂದ ಕಳವಿನ ಹೊಲಬನರಿದು ಪ್ರತಿಯೊಬ್ಬನು ಆಚರಿಸಿದರೆ, ಪರಮಾತ್ಮನ ಪ್ರೀತಿಗೆ ಪಾತ್ರನಾಗುವನು. ಈ ರೀತಿಯಾಗಿರದೆ ಪರರು ವ್ಯವಪರಿಹರಿಸಿ ಅವನೆಷ್ಟೋ ದೇವರ ಪೂಜೆಮಾಡಲಿ, ಎಷ್ಟೋ ತೀರ್ಥಯಾತ್ರೆ ಮಾಡಲಿ, ದೇವನು ಒಲಿಯನು, ಆದುದರಿಂದಲೇ ಮಹಾನುಭಾವರಾದ ಬಸವಣ್ಣನವರು ತೊರೆಯಮೀವಣ್ಣಗಳರಾ ತೊರೆಯಿರೋ ಪರಧನವ! ಪರದ್ರವ್ಯವ ಬಿಡದೆಹೋಗಿ ತೊರೆಯಲ್ಲಿ ಮಿಂದರೆ ಆ ತೊರೆ ಎಲ್ಲಾ ಬರುದೊರೆ ಕಂಡಯ್ಯ! ಕಳವತೊರೆದು ಮಿಂದರೆ ಒಲಿದು ಕೂಡಿಕೊಂಬ ನಮ್ಮ ಕೂಡಲಸಂಗಮದೇವಾ ಎಂದು ಹೇಳಿರುವರು. **ಪಾಟೀಲ ಲಿಂಗನಗೌಡರು.**

---

—ಮಿ. ಜೆ. ಡಿಸಿಲವ್ವಾ ಇವರು ರಜೆಯ ಮೇಲೆ ಹೋಗುತ್ತಿರುವುದರಿಂದ ರಾ. ದತ್ತಾತ್ರೆಯ ಲಕ್ಷ್ಮಣ ಕರ್ಣೇಕ ಇವರು ಆ್ಯಕ್ಟಿಂಗ ಡೆಪ್ಯುಟಿ ಸುಪರಿಂಟೆಂಡಂಟ ಆಫ್ ಪೋಲೀಸರನ್ನಾಗಿ ನಿಯಮಿಸಿದ್ದಾರೆ.

## ಅಸ್ಪೃಶ್ಯತಾ

### ಮ. ಗಾಂಧಿಯವರ 'ಹರಿಜನ' ಪತ್ರಿಕೆಯಲ್ಲಿಯ ಲೇಖನದ ಸಾರಾಂಶ.

ಸದ್ಯಕ್ಕೆ ಪ್ರಚಲಿತವಿರುವ ಅಸ್ಪೃಶ್ಯತೆಯು ಹಿಂದೂ ಧರ್ಮದ ಮಹತ್ತರವಾದ ಕುಂದು ಆಗಿರುತ್ತದೆ. ಈ ಅಸ್ಪೃಶ್ಯತೆಯು ಶಾಸ್ತ್ರ ವಿರುದ್ಧವಾಗಿದೆ. (ಸನಾತನಿಗಳ ಕ್ಷಮೆಯಾಚೆಕೊಂಡು) ಕೇವಲ ಜನ್ಮದಿಂದಲೇ ಒಬ್ಬನಿಗೆ ಅಸ್ಪೃಶ್ಯನೆಂದು ತಿಳಿದು ಅವನನ್ನು ಪತ್ತರ ಬರಗೊಡದಿರುವುದು ಅಥವಾ ಅವನ ಮುಖವನ್ನಾದರೂ ನೋಡದಿರುವುದು ಮಾನವ ಜಾತಿಯ ತತ್ವದ ವಿರುದ್ಧವಾಗಿದೆ. ಹಾಗೆಯೇ ವಿಜ್ಞಾನಶಕ್ತಿಯ ಪ್ರೇರಣೆಗೂ ವಿರುದ್ಧವಾಗಿದೆ. ಸ್ಪರ್ಶವಾಗುವದು, ವಿಶಿಷ್ಟ ಅಂತರದ ಮೇಲೆ ಬರುವದು, ಮುಖ ಕಾಣಿಸುವದು ಅಪರಾಧವೆಂದು ಎಣಿಸಲ್ಪಡುತ್ತದೆ. ಅತಿ ನಿಃಖದ ಮಾತೆ ಏನೆಂದರೆ ಸದ್ಯದ ಅಸ್ಪೃಶ್ಯತೆಯ ಹಿಂದೂಧರ್ಮಕ್ಕೆ ಸಂಬಂಧವಿಲ್ಲದಿದ್ದು ಲಕ್ಷಾವಧಿ ಜನರು ತಿಳಿಯುತ್ತಾರೆ. ಆದರೆ ಹಿಂದೂ ಸುಧಾರಕರ ಈ ದೃಷ್ಟಿಯಿಂದ ವಿರುದ್ಧವಾಗಿರುವದನ್ನು ನೋಡಿ ಆನಂದವೆನಿಸುತ್ತದೆ

ಅಸ್ಪೃಶ್ಯತೆಯನ್ನು ಬಾಹ್ಯತಃ ನಾಶಮಾಡುವದರಲ್ಲಿ ಮಂದಿರ ಪ್ರವೇಶವು ಒಂದಾಗಿದೆ. ಭಿನ್ನ ಭಿನ್ನ ಧರ್ಮದವರು ಭಿನ್ನ ಭಿನ್ನ ರೂಢಿಗಳನ್ನುತ್ತಾರೆ. ಆ ರೂಢಿಗಳನ್ನು ಪಾಲಿಸುವದು ಆಯಾ ಧರ್ಮದ ನಿಯಮಕ್ಕೆ ವಿರೋಧವಾಗಿದ್ದರೂ ಕಾಯಿದೆಯಿಂದ ಅದು ಅಪರಾಧವಾಗುವದಿಲ್ಲ. ಹಿಂದುಗಳು ಗೋಮಾಂಸ ಭಕ್ಷಿಸುವದು ಹಿಂದೂ ಧರ್ಮದ ನಿಯಮದಿಂದ ಅಪರಾಧವಾಗಿದೆ. ಆದರೆ ಇಂಡಿಯನ್ ಪೀನಲ್ ಕೋಡ ಪ್ರಕಾರ ಅದು ಅಪರಾಧವೆಂದು ತಿಳಿದು ಶಿಕ್ಷೆಯಾಗುವದಿಲ್ಲ.

ಆದರೆ ಅಸ್ಪೃಶ್ಯತೆಯೆಂಬ ರೂಢಿಯನ್ನು ಕಿತ್ತೊಗೆಯುವಾಗ್ಗೆ ಕಾಯಿದೆಯು ಅಡ್ಡಬರುತ್ತದೆ. ಹಿಂದೂ ದೇವಾಲಯದಲ್ಲಿ ಒಂದು ವೇಳೆ ಅಸ್ಪೃಶ್ಯನು ಪ್ರವೇಶಿಸುವದು, ಇ. ಪಿ. ಕೋಡ ಪ್ರಕಾರ ಅಪರಾಧವೆನಿಸಿ ಅವನು ಶಿಕ್ಷೆಗೆ ಪಾತ್ರನಾಗುತ್ತಾನೆ. ಇದಾವ ಕಾರಣದಿಂದಲೊ ದೇವರೇ ಬಲ್ಲ ಆದುದರಿಂದಲೇ ಈ ಮುಂದಿರ ಪ್ರವೇಶವನ್ನು ಮುಂದಕ್ಕೆ ನಾಗಿಸುವ ಮೊದಲು ಮೇಲಿನ ಕಾಯಿದೆಯ ಆತಂಕವು ದೂರವಾಗಬೇಕಾಗಿದೆ. ಈ ಕಾರಣ ಅಸೆಂಬ್ಲಿಯಲ್ಲಿ ಶ್ರೀ ರಂಗ ಅಯ್ಯರವರು ಎರಡು ಗೊತ್ತುವಳಿಗಳನ್ನು ತಂದಿರುವರು.

## ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು. ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ಶಿಕ್ಷಣ ವಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪರಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ವೀರಶೈವನು, ದಿಕ್ಷಾಬಳಿಕ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ವೀರಶೈವರ ಅವ ಪಂಗಡದವರಾದರೂ ಪ್ರಯತ್ನಿಸಬಹುದು. ೬. ಬಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲ್ ಸ್ಕೂಲ್ ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ**
ತಾ. ಮಕ್ತಲ ಜಿ. ಮಹಾಬೂಬನಗರ.

# ವೀರಶೈವರ ಕರ್ತವ್ಯ.

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।**
**ಆತ್ಮೈವಹ್ಯಾತ್ಮನೋ ಬಂಧುರಾತ್ಮೈವರಿಪುರಾತ್ಮನಃ ॥**

ಸಂಸಾರಚಕ್ರದಲ್ಲಿ ಹಗಲಿರುಳು ಬರುತ್ತಿರುವ ಸುಖದುಃಖಗಳನ್ನು ದೂರ ಮಾಡಿ ವರ್ಷದೊಳಗಿನ ನಾಲ್ಕೈದು 'ದಿವಸಗಳಾದರು ವಲ್ಲವೇಕೆ, ವೀರಶೈವ ಆಬಾಲವೃದ್ಧರು ಶ್ರೀ ಬಸವನಾಮದ ಜಯ ಘೋಷವನ್ನು ಹಗಲಿರುಳು ಮಾಡುತ್ತಾರೆ. ಅಹಹ! ಈ ಆನಂದವನ್ನು ನೋಡಿ ನಮ್ಮ ಸಮಾಜವು ಊರ್ಜಿತಾವಸ್ಥೆಗೆ ಬರುತ್ತಿರುವದೆಂದು ತಿಳಿಯಲಿಕ್ಕೆ ಸಂದೇಹವಿಲ್ಲ. ಆ ದಿವಸ ಎಲ್ಲಿ ಕೇಳಿದರೂ ಆ ಮಹಾನುಭಾವ ಬಸವೇಶ್ವರರ ಭಜನ, ಪೂಜನ, ಕೀರ್ತನ, ಉತ್ಸವ ನಡೆದಿರುವದೆಂದು ಕಂಡುಬರುತ್ತದೆ. ಎಷ್ಟೋ ವರ್ಷಗಳ ಹಿಂದೆ, ಆಗಿಹೋದ ಬಸವೇಶ್ವರರ ಲೀಲೆ ಮತ್ತು ಮಹಿಮೆ ಗದ್ಯ ಪದ್ಯರೂಪದಿಂದ ಕೇಳಿ, ಆನಂದದ ಲಹರಿಗಳು ಬರದೆ ಇರಲಾರವು.

ಈಗ ಶ್ರೀ. ಮಾಹಾನುಭಾವರು ಹಾಕಿಕೊಟ್ಟ ಯೋಗ್ಯ ಮಾರ್ಗದ ಉಪದೇಶವನ್ನು ಮಾಡದೆ, ಎಷ್ಟೋ ಸ್ಥಳಗಳಲ್ಲಿ ಕೀರ್ತನಕಾರರು ಬಸವೇಶ್ವರರ ಕಾಲದೊಳಗಿನ ಇತಿಹಾಸಗಳ ಆಖ್ಯಾನವನ್ನು ಗಾಯನವಾದನದಿಂದ ಕೀರ್ತನ ಹೇಳಿದ್ದು ಜನರ ಮನರಂಜನವೇ ಸರಿ. ಭಕ್ತಿಭಾವದಿಂದ ಪ್ರೇರಿತರಾಗಿ ಬಸವಣ್ಣನವರ ಲೀಲೆಯನ್ನು ನಾನಾ ರೀತಿಯಿಂದ ರಚನಾ ಮಾಡಿ ಪುರಾಣಿಕರು ಪ್ರವಚನವನ್ನು ಹೇಳುತ್ತಾರೆ, ಮತ್ತೆ ಎಷ್ಟೋ ಉದರಂಭರಣದ ಜಂಗಮರು ಜನರಲ್ಲಿ ಧಾರ್ಮಿಕ ಭಾವನೆಯನ್ನು ಉತ್ಪನ್ನ ಮಾಡಿ ಶ್ರೀ. ಬಸವೇಶ್ವರರ ಹಾಗೆ ದಾನಧರ್ಮ ಮಾಡಿರಿ, ಅಂತ ಉಪದೇಶದ ಜಂಬು ಬಡೆದು ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ; ನೂರಾರು ವರ್ಷಗಳಿಂದ ಇದೇ ಪ್ರಕಾರ ಕಾರ್ಯಕ್ರಮವು ನಡೆದದೆ. ವರ್ಷದೊಳಗಿನ ನಾಲ್ಕಾರು ದಿವಸ ಉತ್ಸವದ ಕಾಲಕ್ಕೆ ಭಕ್ತಿಗೆ ಉಕ್ಕು ಬಂದು, ಉತ್ಸವ ಸಮಾಪ್ತಿ ಆದಕೂಡಲೆ ಬಂದು ಆಗುವದು ಶೋಚನೀಯವಲ್ಲವೆ?

ಈಗಿನ ಉತ್ಸವಗಳು ಶುದ್ಧ ಕವಾಯತಿ ಅಂದರೂ ಅಡ್ಡಿ ಇಲ್ಲ. ಯಾಕಂದರೆ, ಮೇಲಿನ ಪ್ರಕಾರದಲ್ಲಿ ಭಾವನಾವಶ ಅಜ್ಞ ಜನರಿಗೆ ಕಿಂಚಿತ್ ಕಾಲ ಆಧ್ಯಾತ್ಮ ವಿಷಯ ಜುಳುಕು ಹೊಳೆದರೂ, ಇಡೀ ಮಾನವಜಾತಿಯ ಉತ್ಕ್ರಾಂತಿ ಸಲುವಾಗಿ ಮತ್ತು ರಾಷ್ಟ್ರಧರ್ಮದ ಪ್ರಸಾರದ ದೆಶೆಯಿಂದ ಮಹಾನುಭಾವ ಬಸವೇಶ್ವರರು ಧರ್ಮವೀರ, ರಾಷ್ಟ್ರವೀರ ಇಂಥ ಪದವಿಗಳನ್ನು ತಮ್ಮ ಸ್ವಂತ ಆಚರಣೆಯಿಂದ ಪಡೆದುಕೊಂಡು ಧಾರ್ಮಿಕ, ಸಾಮಾಜಿಕ, ರಾಜಕೀಯ ಬಾಬದಲ್ಲಿ ಜಗದ್ಗುರುತ್ವವನ್ನು ಸಂಪಾದಿಸಿದರೋ, ಆ ಕರ್ತಬಗಾರಿಯ ವಿಚಾರವನ್ನು ಈಗಿನ ಉತ್ಸವ ಪ್ರಸಂಗದಲ್ಲಿ ಯಾರೂ ಮಾಡುವದಿಲ್ಲ. ಈಗಿನ ಕರ್ತವ್ಯಪರಾನ್ಮುಖ ಧರ್ಮಾಧಿಕಾರಿಗಳ ಭಾವನಾ ಪ್ರಧಾನ ಉಪದೇಶದ ಪರಿಣಾಮವು ಅಂಧ ಶ್ರದ್ಧಾಳು ಜನರ ಮೇಲೆ ಆಗಿ ಪ್ರಮಥರು ಹಾಕಿಕೊಟ್ಟಿದ್ದ ಯೋಗ್ಯ ಮಾರ್ಗಕ್ಕೆ ನಾವು ವಿಮುಖರಾಗಿ ಬರೇ ಬಾಯಿಂದ ಬಸವ ಬಸವ ಅಂತಾ ಭಜನೆ ಮಾಡುತ್ತ ಕೈಯಿಂದ ಚಪ್ಪಾಳಿ ಮಾತ್ರ ಬಾರಿಸುತ್ತಿದ್ದೇವೆ. **ಧರ್ಮಾಧಿಕಾರಿಗಳು** ವೀರಶೈವ ಆಚಾರ, ವಿಚಾರ, ನೀತಿಗಳನ್ನು ಸುಧಾರಿಸುವ ಪ್ರಯತ್ನವನ್ನು ಯಾಕೆ ಮಾಡಬಾರದು? ಮತ್ತು ಅವರಿಗೆ ಅವರ ಕರ್ತವ್ಯದ ಎಚ್ಚರಿಕೆಯನ್ನು **ಮೇಲಾಧಿಕಾರಿಗಳು** ಯಾಕೆ ಕೊಡಬಾರದು?

ಅಜ್ಞಾನ, ಇಬ್ಬಣ, ಆಲಸ್ಯ ಮುಂತಾದ ದುರ್ಗುಣಗಳಿಂದ ಸಮಾಜವು ಅಧೋಗತಿಗೆ ನಡೆಯುದ್ದು ಜನರ ಮುಂದೆ ಇಟ್ಟು ರಾಷ್ಟ್ರ ಪೋಷಕವಾದ ಸಮಾಜ ಸಂಘಟನೆಯ ಕಾರ್ಯವನ್ನು ಸುಶಿಕ್ಷಿತರು ಕೈಕೊಂಡರೆ ಯೋಗ್ಯವಾಗಲಿಕ್ಕಿಲ್ಲವೇ? ಉಚ್ಚನೀಚವೆಂಬ ಹುಚ್ಚು ತನದಿಂದ (ಸ್ಪಷ್ಟವಾಗಿ ಹೇಳಬೇಕಾದರೆ ವಿರಕ್ತ ಮತ್ತು ಪಂಚಾಚಾರ್ಯರ ವೈಷಮ್ಯಾಗ್ನಿಯಿಂದ) ನಮ್ಮ ಸಮಾಜವು ತಳಮಳಿಸುತ್ತಿರುವದನ್ನು ಕಂಡು, ವೀರಶೈವರೇ ನಿಮ್ಮ ಅಂತಃಕರಣದಲ್ಲಿ ಲವ ಲವಿಕೆಯು ಹುಟ್ಟಬಾರದೇ? ಇಂಥ ಪರಿಸ್ಥಿತಿಯಲ್ಲಿ ಸುಮ್ಮನೆ ಕೂಡ್ರುವದು ಯೋಗ್ಯವಲ್ಲ. ಎಚ್ಚರಾಗಿರಿ. ಯಾಕೆಂದರೆ ದೀನ ದಾರ ಶಿದ್ದೀಕನಂಥ ಪರಧರ್ಮಿ ಮನುಷ್ಯನು ಶ್ರೀ. ಮಹಾನುಭಾವರಾದ **ಚನ್ನಬಸವಣ್ಣ**ನವರ ಅವತಾರವೆಂದು ಹೇಳುತ್ತ ಇಡೀ ಕರ್ನಾಟಕದಲ್ಲಿ ಕುಣಿದಾಡುತ್ತಿರುವುದನ್ನೂ ಅವನೂ ಮತ್ತು ಅವನ ಹಸ್ತಕರೂ ಪ್ರತಿಯೊಂದು ಹಳ್ಳಿಹಳ್ಳಿಗಳಿಗೆ ಹೋಗಿ ಇಸ್ಲಾಮಿ ಧರ್ಮದ ದೀಕ್ಷೆ ತಕ್ಕೊಳ್ಳಿರೆಂದು ಉಪದೇಶ ಮಾಡುತ್ತಿರುವದನ್ನೂ, ಮೊನ್ನೆ ಹೈದರಾಬಾದದಲ್ಲಿ ಶಿದ್ದಿಕನು ಕೂಡಿಸಿದ ಸಭೆಯೊಳಗೆ ವೀರಶೈವರೆಂದು ನಾಮಧಾರಣ ಮಾಡಿದ ಮುಸಲ್ಮಾನರು ಭಾಷಣ ಮಾಡಿದ್ದನ್ನೂ ತಿರುಪತಿ ತಿಮ್ಮಪ್ಪನಲ್ಲಿಯೂ ಹಂಪಿ ವಿರುಪಾಪ್ಪನ ಲ್ಲಿಯೂ ಬಹಳ ಧನವಿದ್ದು ಕಾಲಜ್ಞಾನದ ಮೇಲೆ ಮುಸಲ್ಮಾನರಿಗೇ ದೊರೆಯುವದು ಕಾರಣ ನನಗೆ ಸಹಾಯ ಮಾಡಲಿಕ್ಕೆ ಒಂದು ಲಕ್ಷ ಮುಸಲ್ಮಾನರು ತಯಾರಾಗಬೇಕೆಂದು ಮೈಸೂರು ಸ್ಟೇಟದಲ್ಲಿ ಜಾಹೀರ ಮಾಡಿದ್ದನ್ನೂ, ಬನವಾಸಿ ಪ್ರಕರ್ಣದಲ್ಲಿ (ಕಾರವಾರ ಜಿಲ್ಲಾ) ವೀರಶೈವರಿಗೆ ಪೂಜೆಯ ಅಧಿಕಾರವಿಲ್ಲ. ಅವರು ಶೂದ್ರರೆಂದು ಶರಾಯಿಸಿದ್ದನ್ನೂ ನಾವು ಕಣ್ಣಾರೆ ನೋಡುತ್ತಿದ್ದರು ಕೂಡ ಇಬ್ಬಣವನ್ನು ಮುರಿಯಲಿಕ್ಕೆ ಪ್ರಯತ್ನವಾಡದೆ ಇರುವದು ಶುದ್ಧ ಮೂಢತ್ವವಲ್ಲವೇ? ಉಚ್ಚನೀಚವೆಂಬ ಸ್ವಾರ್ಥ ಮನೋವೃತ್ತಿಗೆ ಬಲಿಬಿದ್ದು ಸಮಾಜಘಾತಕದ ಮಹತ್ಪಾತಕವನ್ನು ತಲೆಯಮೇಲೆ ತಕ್ಕೊಳ್ಳಬೇಡಿರಿ!

ಬಾಂಧವರೇ, ಗುರುವರ್ಗದಲ್ಲಿ ಬೆಳೆದ ಪಂಗಡಗಳಂತೆ ಇಡೀ ಸಮಾಜದಲ್ಲಿ ಬೆಳೆದದೆ. ನಮ್ಮೊಳಗಿನ ಬಣಜಿಗ, ಹವಲಿ, ಪಂಚಮ ತಿಳವಿ, ಶಿವಶಿಂಪಿಗ, ಬಣಗಾರ, ಗಾಣಿಗ ಮುಂತಾದ ಎಷ್ಟೋ ಒಳಪಂಗಡಗಳು ಸಮಾಜೋನ್ನತಿಗೆ ತೊಂದರೆಗಳಾಗುತ್ತಿವೆ. ಒಳ ಪಂಗಡಗಳು ಉದ್ಯೋಗದಿಂದಲೇ ಹೊರ್ತು ಹುಟ್ಟನ್ನವಲಂಬಿಸಿಲ್ಲ ವೆಂಬುದು ಇತಿಹಾಸದಿಂದ ಕಂಡುಬರುತ್ತದೆ. ಯಾವನಿಗೆ ಅಷ್ಟಾವರಣವು ಮಾನ್ಯವೋ ಅವನೇ ವೀರಶೈವನು. ಈ ಭಾವನೆಯನ್ನು ಮನದೊಳಗೆ ತಂದು ಐಕ್ಯಮಾಡುವದು ನಮ್ಮ ಕರ್ತವ್ಯವಲ್ಲವೇ? ಈಗಿನ ಪರಿಸ್ಥಿತಿಯ ಮೇಲಿಂದ ವಿಚಾರಮಾಡುತ್ತಿರಲಾಗಿ ಸಮಾಜವು ಬಲವುಳ್ಳದ್ದಾಗಲಿಕ್ಕೆ ಸಂಘಟನೆಯೇ ಮುಖ್ಯ ಕಾರಣವು ಆದ್ದರಿಂದ ಬಸವಣ್ಣನವರ ಸಂಘಟನಾಕಾರ್ಯವನ್ನೇ ಆಚರಿಸಿ ನಿಜವಾದ ಬಸವಜಯಂತಿಯನ್ನು ಮಾಡಿರಿ.

ಈ ವರೆಗೂ ಎಷ್ಟೋ ವೀರಶೈವರು ಪರಧರ್ಮದಲ್ಲಿ ಹೋಗುವದನ್ನು ನೋಡಿದರೆ ಶುದ್ಧಿಕರಣವು ಅವಶ್ಯವೆಂದು ಕಂಡುಬರುತ್ತದೆ. ಇತ್ತೀಚೆಗೆ ೨೦ ವರ್ಷದಲ್ಲಿ ಮೂರು ಲಕ್ಷ ವೀರಶೈವರು ಕಡಿಮೆಯಾದದ್ದು ಜನಗಣನೆಯ ಮೇಲಿಂದ ಕಂಡುಬರುತ್ತದೆ. ಅನಾದಿಸಿದ್ಧವಾದ ವೀರಶೈವ ಸಮಾಜಕ್ಕೆ ಇಳಿತರಹತ್ತಿ ಪರದೇಶಿ ಪರಧರ್ಮಿ ಸಮಾಜಗಳು ಏರುತ್ತ ನಡೆದಿರುತ್ತವೆ. ಬಸವೇಶ್ವರರು ಯಾವ ಶುದ್ಧಿಕಾರ್ಯವನ್ನು ನಡೆಸಿ ಸಮಾಜವನ್ನು ವೃದ್ಧಿಗೊಳಿಸಿದರೋ ಅದೇ ಕಾರ್ಯವನ್ನು ಅವ್ಯಾಹತವಾಗಿ ನಡೆಸುತ್ತ ಬಂದಿದ್ದರೆ ಪ್ರತಿಯೊಂದು ಬಾಬದಲ್ಲಿ ನಮಗೆ ಹಿಂದೆಗೆಯುವ ಪ್ರಸಂಗ ಬರುತ್ತಿರಲಿಲ್ಲ. ಪರಧರ್ಮಗಳ ತತ್ವಗಳು ಯೋಗ್ಯವೆಂದು ತಿಳಿದು ಆ ಧರ್ಮವನ್ನು ಸ್ವೀಕರಿಸಿದ ವ್ಯಕ್ತಿಗಳು ವಿರಳ. ಆದರೆ ಆಪತ್ಕಾಲದಲ್ಲಿ ಪರಧರ್ಮಿಯವರಲ್ಲಿ ಅನ್ನಗ್ರಹಣ ಮಾಡಿ ಅಥವಾ ಜುಲುಮೆಯಿಂದ ಇಲ್ಲವೆ ನಾನಾ ರೀತಿಯಿಂದ ಮೋಸಹೋಗಿ ಪರಧರ್ಮವನ್ನು

# ಶ್ರೀ ಬಸವಣ್ಣನವರ ಬಗ್ಗೆ ಅಭಿಪ್ರಾಯ.

ಮದ್ರಾಸಿನ "ಹಿಂದು" ಎಂಬ ಇಂಗ್ಲಿಷ ಪತ್ರಿಕೆಯು "Sayings of Basawanna" ಎಂಬ ಪುಸ್ತಕವನ್ನು ಈ ಪ್ರಕಾರವಾಗಿ ವಿಮರ್ಶನಮಾಡಿದೆ:—

## SAYINGS OF BASAVANNA.

By M. Venkatesh Iyengar, M.A.

(VEERASHAIV TARUNA SANGHA GADAG.) As. 4.

The Veerashaiv sect (also known as the Vir Maheshwara or the Aradhya or the Basawa) was founded by Basawa who, like the Buddha, Mohamed, Mahaveera and many others, seems to have been a protestant reformer, longing to bring to his fellowmen the pure light and life that he had found for himself. The Aradhyas represent the Brahmin side of the movement in the Andhra the Karnataka and the Bombay provinces while the Jangams. Lingayats and the Veerashaivas represent in a way the non-Brahmin element. The great teacher, a Brahmin himself, has placed in tune with the Lord of Mercy and Bliss. To him he is extremely real, living and responsive -nearer to him than the breadth of the nostrils, and closer than his hands and feet. Hence it is no wonder that his sayings are coloured hy the spirit of one that has lived and moved in him. Plain utterly true soul compelling, they reveal a combination of innocence and purity of a child and the profound philosophy of a saint. The translator Mr. Venkatesh Iyengar M.A. Bangalore, has given clear and true renderings of the original (printed side by side with the translation). C. R.S.

The 'HINDU', 25-9-1932; MADRAS.

[ ಬಸವಣ್ಣನವರ ವಚನಗಳು.

ಎಮ್. ವೆಂಕಟೇಶ ಅಯ್ಯಂಗಾರ M. A.

[ವೀರಶೈವ ತರುಣ ಸಂಘ ಗದಗ.]

ವೀರಶೈವ ಮತವು (ಇದಕ್ಕೆ ವೀರಮಾಹೇಶ್ವರ ಮತ, ಆರಾಧ್ಯ ಮತ, ಅಥವಾ ಬಸವ ಮತ ಎಂದೂ ಅನ್ನುವದುಂಟು.) ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿತು. ಇವರು ಬುದ್ಧ, ಮಹಮ್ಮದ, ಮಹಾವೀರ ಮೊದಲಾದವರಂತೆ ಪ್ರಾಗತಿಕ ಸುಧಾರಕರಾಗಿರುತ್ತಾರೆ. ಇವರು ತಾವು ಕಂಡುಕೊಂಡ ಜ್ಞಾನ ಮತ್ತು ಪವಿತ್ರ ಜೀವನಗಳು ತಮ್ಮ ಅನುಯಾಯಿಗಳಲ್ಲಿ ಉಂಟಾಗುವಂತೆ ಯಾವಾಗಲೂ ಇಚ್ಛಿಸುತ್ತಿದ್ದರು. ಇವರ ಈ ಆಂದೋಲನವನ್ನು ಆರಾಧ್ಯರು ಆಂಧ್ರ, ಕರ್ನಾಟಕ ಮತ್ತು ಮುಂಬಯಿ ಪ್ರಾಂತದಲ್ಲಿ ಬ್ರಾಹ್ಮಣೀಯ ರೂಪಕೊಟ್ಟು ಅನುಸರಿಸಿದರು. ಅದರೆ ಜಂಗಮರು, ಲಿಂಗಾಯತರು, ಮತ್ತು ವೀರಶೈವರು ಅದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಅನುಸರಿಸಿದರು. ಈ ಮಹಾನುಭಾವರು ಸ್ವತಃ ಬ್ರಾಹ್ಮಣರಾಗಿದ್ದಾಗ್ಯೂ ದಯಾಸಾಗರನಾದ ಆ ಪರಮಾತ್ಮನಲ್ಲಿ ಅನ್ಯೋನ್ಯ ಸಂಬಂಧವುಳ್ಳವರಾಗಿದ್ದರು. ಪರಮಾತ್ಮನು ಅವರಿಗೆ ನಿತ್ಯನು; ಸಾಕ್ಷಾತ್ ಜೀವನಧಾರಿಯು. ಅವರು ಕರೆದರೆ ಓ ಎನ್ನುವನು. ಪರಮೇಶ್ವರನು ಅವರಿಗೆ ಶ್ವಾಸಕ್ಕಿಂತಲೂ ಸಮೀಪನು, ಹಸ್ತ ಪಾದಗಳಿಗಿಂತಲೂ ನಿಕಟವರ್ತಿಯಾಗಿದ್ದನು. ಅಂದಮೇಲೆ ತವರ ವಚನದಲ್ಲಿ ಕೌತುಕಪಡುವದೇನಿದೆ? ಪರಮಾತ್ಮನ ಸಾನ್ನಿಧ್ಯದಲ್ಲಿರುವವರ ಮುಖದಿಂದ ಯಾವ ಸ್ವರಾ ಅವು ಚಿತ್ರಿತವಾಗಿ ಹೊರಹೊಮ್ಮಲು ಶಕ್ಯವೊ ಆ ಪ್ರಕಾರ ಸ್ಫುಟವಾಗಿವೆ. ಅವು ಸರಲವೂ ಸತ್ಯವೂ ಆಗಿವೆ. ಮಗುವಿನ ಸಾಹಿತ್ಯ ಸರಲತೆಗಳು ಅವುಗಳಲ್ಲಿ ಅಡಕವಾಗಿವೆ. ಹಾಗೆಯೇ ಋಷಿಯ ಪ್ರಗಾಢ ತತ್ವಜ್ಞಾನವೂ ಅವುಗಳಲ್ಲಿ ಸೇರಿಕೊಂಡಿದೆ.

ಶ್ರೀ ವೆಂಕಟೇಶ ಅಯ್ಯಂಗಾರ ಎಮ್. ಎ. ಇವರ ಅನುವಾದವು ಮೂಲದಷ್ಟೇ ಸ್ಪಷ್ಟವಾದುದೂ ಸತ್ಯವಾದುದೂ ಆಗಿದೆ; ವಚನಗಳೂ ಅವುಗಳ ಅನುವಾದವೂ ಕೂಡಿಯೇ ಇವೆ.]

# ಗಾಂಧಾರದಲ್ಲಿ ದ್ರಾವಿಡ ಶಿಲ್ಪಕಲೆಯು.

ಮುಂಬಯಿ ಸೇಂಟ ಜೇವ್ಹಿಯರ ಕಾಲೇಜದ ಘಾದರ ಹೆರಾಸ್ ಎಂಬವರು ಮೊನ್ನೆ ತನ್ಮದೊಂದು ವ್ಯಾಖ್ಯಾನದಲ್ಲಿ ಕಂದಹಾರದಲ್ಲಿ ಕಂಡುಬರುವ ಕೆಲವು ಶಿಲ್ಪ ಕಲೆಗಳು ಹಿಂದುಸ್ಥಾನದ ವಾಯವ್ಯ ಸೀಮೆಯಲ್ಲಿ ವಾಸಿಸುತ್ತಿದ್ದ ದ್ರಾವಿಡ ಜನಾಂಗದವಾಗಿರುತ್ತವೆಂದು ಹೇಳಿದ್ದಾರೆ. ಕಳೆದ ವರ್ಷ ಘಾದರ ಹೆರಾಸ್‌ರವರು ಅಫಗಾಣಿಸ್ಥಾನಕ್ಕೆ ಹೋದಾಗ ಅಲ್ಲಿ ಗ್ರೀಕರ ಪುರಾತನ ಶಾಣ್ಯವಾದ ಬ್ಯಾಕ್ಟ್ರಿಯಸ್‌ವನ್ನು ಸಂದರ್ಶಿಸಿದರು ಆದರಲ್ಲಿ ಗ್ರೀಕ ಶಿಲ್ಪ ಶಾಸ್ತ್ರದ ಒಂದು ಕುರುಹಾದರೂ ಕಂಡುಬರಲಿಲ್ಲ. ಆದೇ ಮೇರೆಗೆ ಅವರು ಅಲ್ಲಿಯ ಕೆಲವು ಹಳೆ ಬೌದ್ಧ ಮಠಗಳಿಗೆ ಭೆಟ್ಟಿಕೊಟ್ಟರು. ಆದರೆ ಅಲ್ಲಿ ಬೌದ್ಧ ಶಿಲ್ಪ ಕಲೆಯ ಕುರುಹುಗಳಾವವೂ ಇರಲಿಲ್ಲ. ಆದರೆ ವಿಶೇಷವಾಗಿ ಅಫಗಾಣಿಸ್ಥಾನದಲ್ಲಿ ದ್ರಾವಿಡರ ಹಳೆಯ ಶಿಲ್ಪ ಕಲೆಗಳ ಅವಶೇಷಗಳೇ ಎತ್ತ ನೋಡಿದತ್ತ ದೃಷ್ಟಿಗೆಬೀಳುತ್ತವೆ. ಗ್ರೀಕರ ಶಿಲ್ಪ ಕಲೆಯಲ್ಲಿ ಮನುಷ್ಯನ ಆದರ್ಶಪ್ರಾಯವಾದ ಶರೀರ ಸೌಂದರ್ಯವು ತೋರಿಸ್ಪಡುತ್ತದೆ. ಆದುದರಿಂದ ಅವರ ಶಿಲಾ ಮೂರ್ತಿಗಳು ನಿಜಸ್ಥಿತಿಯನ್ನು ತಿಳಿಸತಕ್ಕಂಥವುಗಳಲ್ಲ. ಆ ಮೂರ್ತಿಗಳಿಗೆ ಜೀವನ ಕಳೆಯೇ ಇರುವದಿಲ್ಲ. ಅವುಗಳ ಶರೀರದಲ್ಲಿ ಆಭರಣಗಳಿರುವದಿಲ್ಲ. ಆ ಮೂರ್ತಿಗಳ ಮುಖದ ಮೇಲೆ ಆಧ್ಯಾತ್ಮಿಕ ಪ್ರೇಮದ ಕಳೆಯು ತೋರುವುದಿಲ್ಲ. ಆದರೆ ದ್ರಾವಿಡರ ಶಿಲಾ ಮೂರ್ತಿಗಳು ಜೀವನ ಕಳೆಯಿಂದ ತುಂಬಿತುಳುಕುತ್ತವೆ. ಅವು ಕಾಲ್ಪನಿಕ ಮೂರ್ತಿಗಳಾಗಿರದೆ ನಿಜವಾದ ಮೂರ್ತಿಗಳಾಗಿವೆ. ಆರ್ಯರಲ್ಲಂತೂ ಶಿಲ್ಪ ಶಾಸ್ತ್ರದ ಸಾಂಪ್ರದಾಯವಿಲ್ಲ. ಆದುದರಿಂದ ಗಾಂಧಾರದಲ್ಲಿ ದೊರೆತ ಶಿಲಾಮೂರ್ತಿಗಳು ಗ್ರೀಕರವೂ ಅಲ್ಲ, ಆರ್ಯರವೂ ಅಲ್ಲ; ದ್ರಾವಿಡ ಸಾಂಪ್ರದಾಯಕ್ಕೊಳಪಟ್ಟಂಥವುಗಳು.

ಸುಮಾರು ೩೦೦೦ ವರ್ಷಗಳಪೂರ್ವದಲ್ಲಿ ಹಿಂದುಸ್ಥಾನದ ವಾಯವ್ಯಕ್ಕೆ ಗಾಂಧಾರಿ, ಮಜಾವಂತ, ಮದ್ರಾಸ, ಲೈನ, ಬಾಲ್ಹಿಕ ಮೊದಲಾದ ದ್ರಾವಿಡ ವರ್ಗದ ಜನರು ವಾಸಿಸುತ್ತಿದ್ದರು. ಹರಪ್ಪಾದಲ್ಲಿ ದೊರೆತ ಎರಡು ನಗ್ನ ಮೂರ್ತಿಗಳೂ ಮೊಹೆಂಜೆದಾರೋ ಎಂಬಲ್ಲಿ ಸಿಕ್ಕ ಕೆಲವು ಮುದ್ರೆಗಳೂ ದ್ರಾವಿಡ ಸಾಂಪ್ರದಾಯದ ಕುರುಹುಗಳಾಗಿವೆ, ಗಾಂಧಾರ ಶಿಲ್ಪ ಶಾಸ್ತ್ರಕ್ಕಿಂತಲೂ ಪೂರ್ವದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ಬೇರೊಂದು ದ್ರಾವಿಡರ ಸಾಂಪ್ರದಾಯವಿದ್ದಿತು. ಉದಾಹರಣಾರ್ಥವಾಗಿ ಗುಡಿಮೆಲ್ಲಂ ಎಂಬಲ್ಲಿಯ ಶಿವನಮೂರ್ತಿಯು ಈ ಸಾಂಪ್ರದಾಯದ ದ್ಯೋತಕವಾಗಿದೆ. ಗುಪ್ತ ಅರಸರ ಆಳಿಕೆಯಲ್ಲಿ ಆರ್ಯರ ಶಿಲ್ಪಶಾಸ್ತ್ರಗಳು ಹುಟ್ಟಿ ದ್ರಾವಿಡರ ಶಿಲ್ಪ ಕಲೆಗೆ ದಾಳಿಯನ್ನು ತಂದವು. (ಪ್ರವಾಳವಾಡಿಕೆ,

## ಕನ್ನಡ ಸಾಹಿತ್ಯ ಸಮ್ಮೇಲನ ಮುಂಬಯಿ.

(೬ ನೆಯ ಪುಟದಿಂದ ಬಂದುದು.)

ಎಂಪಾಯರ ಇಮಾರತಿನಲ್ಲಿ ವ್ಯವಸ್ಥೆ ಮಾಡಿದೆಯೆಂದು ಈ ಮೊದಲೇ ತಿಳಿಸಿದೆ. ಇದು ವಿಶೇಷ ಹಣ ಕೊಟ್ಟು ಇಳಿದುಕೊಳ್ಳುವ ಪ್ರತಿನಿಧಿಗಳ ಬಗ್ಗೆ ಇದೆ. ಆದರೆ ಅನೇಕ ಬಡ ಜನರು ಸಮ್ಮೇಲನಕ್ಕೆ ಬರುವ ಆಶ್ವಾಸನವನ್ನಿತ್ತ್ದ್ದರಿಂದ ಅವರಿಗೆ ಕಡಿಮೆ ವೆಚ್ಚದಲ್ಲಿ ಉಳಿದುಕೊಳ್ಳುವ ಹಾಗೂ ಊಟಮಾಡುವ ಬಗ್ಗೆ ಪ್ರತಿನಿಧಿಗಳ ಎರಡನೇ ಬಿಡಾರವೆಂದು ಇಲ್ಲಿ ಗಿರಗಾಂವಿನಲ್ಲಿ ಮರಾಠಾ ಹೈಸ್ಕೂಲಿನ ಭವ್ಯ ಇಮಾರತಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಂದು ವಾರದ ವರೆಗೆ ಎಷ್ಟೇ ದಿವಸವಿದ್ದರೂ ಆ ಅವಧಿಗೆ ಪ್ರತಿಯೊಬ್ಬರಿಗೆ ೧-೪-೦, ಹಾಗೂ ಊಟ ಉಪಹಾರಗಳ ಬಗ್ಗೆ ಪ್ರತಿದಿವಸಕ್ಕೆ ಪ್ರತಿಯೊಬ್ಬರಿಗೆ ೧೫ ಆಣೆಯಂತೆ ಆಕರಿಸುವದನ್ನು ನಿಶ್ಚಯಿಸಲಾಗಿದೆ. ಈ ಸ್ಥಳದಲ್ಲಿ ವಿಶೇಷ ಅನುಕೂಲತೆಗಳು ಅಂದರೆ ಪಲಂಗು, ಮೇಜು, ಖ.ಚೇ ಮುಂತಾದವುಗಳು ಏನೂ ಇಲ್ಲ. ಶಾಲೆಯ ವಿದ್ಯಾರ್ಥಿಗಳ, ಬಡ ಮಾಸ್ತರ ಜನರ ಹಾಗೂ ಬಡಜನರ ಬಗ್ಗೆ ಈ ವ್ಯವಸ್ಥೆಯು ಇರುತ್ತದೆ. ಶಾಲಾ ಮಾಸ್ತರ ಜನರಿಗೆ ಪಗಾರಿ ರಜೆ ದೊರೆಯುವ ಬಗ್ಗೆ ಎಲ್ಲ ಮುನಿಸಿಪಾಲಟಿ ಮತ್ತೂ ಜಿಲ್ಲಾ ಸ್ಕೂಲ ಬೋರ್ಡುಗಳಿಗೆ ವಿನಂತಿ ಮಾಡಿಕೊಂಡಿದ್ದು ಅನೇಕ ಸ್ಕೂಲ ಬೋರ್ಡ ಕಡೆಯಿಂದ ಈ ಸವಲತ್ತು ಕೊಡಲ್ಪಟ್ಟ ಬಗ್ಗೆ ಉತ್ತರ ಬಂದಿವೆ. ಇತರ ಜನರು ಎಂಪಾಯರ ಇಮಾರತಿನಲ್ಲಿ ಇರಬೇಕಾಗುವದು.

ಡಿಸೆಂಬರ ತಿಂಗಳಲ್ಲಿ ಮುಂಬೈಯಲ್ಲಿ ವಿಶೇಷವಾಗಿ ಚಳಿ ಇರುವದರಿಂದ ಎಲ್ಲ ಜನರು ಬೆಚ್ಚಗಿನ ಅರಿವೆಗಳನ್ನು, ಮತ್ತು ಹಾಸಿಗೆ, ಹೊದ್ದುವಿಕೆಗಳನ್ನು ತರಬೇಕೆಂದು ಸೂಚನೆಕೊಟ್ಟಿರುತ್ತದೆ.

ಪ್ರತಿನಿಧಿಗಳ ಎರಡೂ ಬಿಡಾರಗಳಲ್ಲಿ ಪ್ರತಿನಿಧಿಗಳ ತಪಾಸಣೆ ಹಾಗೂ ಅಸ್ವಸ್ಥರ ಆರೈಕೆ ಇವುಗಳ ಬಗ್ಗೆ ಡಾಕ್ಟರರು ದಿನಾಲು ಬಂದು ಹೋಗುವರು.

ಬೋರಬಂದರ ಸ್ಟೇಶನಕ್ಕೆ ಬರುವ ಯಾವತ್ತೂ ಮುಖ್ಯ ಗಾಡಿಗಳ ಕಾಲಕ್ಕೆ ಸ್ವಾಗತಸಮಿತಿಯ ಸ್ವಯಂಸೇವಕರು ಹಾಜರಿರುವರು. ಮುಂಚಿತವಾಗಿ ಸಕಾಲದಲ್ಲಿ ತಿಳಿಸಿದಲ್ಲಿ ಬೇರೆ ಗಾಡಿಗಳ ವೇಳೆಗೆ ಹಾಗೂ ಬೇರೆ ಸ್ಥಳಗಳಲ್ಲಿ ಸ್ವಯಂಸೇವಕರು ಬರುವರು ಈ ಸ್ವಯಂಸೇವಕರನ್ನು ಅವರು ಧರಿಸಿರುವ ಬಿಲ್ಲೆಗಳ ಮೇಲಿಂದ ಗುರ್ತಿಸಬಹುದು.

ಕೊನೆಯ ಪ್ರಾರ್ಥನೆಯೇನಂದರೆ ನಮ್ಮ ಕನ್ನಡ ಬಂಧು ಭಗಿನಿಯರೆಲ್ಲ ಈ ನಮ್ಮ ಮುಂಬಯಿ ಸಮ್ಮೇಲನಕ್ಕೆ ಆಗಮಿಸಿ ಭ್ರಾತೃಭಾವನೆಯಿಂದ ನಮ್ಮೊಳಗೆಲ್ಲ ಬೆರೆತು ಕನ್ನಡ ಭಾಷೆ ಹಾಗೂ ಕರ್ನಾಟಕ ವಾಙ್ಮಯ ಸಂಸ್ಕೃತಿಗಳ ಸೇವೆಯನ್ನು ಯಥಾಶಕ್ತಿ ಮಾಡಬೇಕು.

ಸ್ವಾಗತ ಸಮಿತಿ ಕಚೇರಿ ೬, ದ್ವಾರಕಾದಾಸ ಮ್ಯಾನ್ಷನ್ಸ್ ಬೆನಾಮ ಹಾಲಲೇನ ಗಿರಗಾಂವ, ಮುಂಬಯಿ ೪

(೧) ಜಿ. ಕೆ. ಬೆಟಗೇರಿ
(೨) ಎಚ್. ಎಸ್. ಕಲನಾಡ
(೩) ಎ. ಶೇಷಣ್ಣ
(೪) ದಿನಕರ ದೇಸಾಯಿ
(೫) ಉಜಿಲ ಶ್ರೀನಿವಾಸ

ತಾ. ೧೫-೧೨-೩೫.

## ಪ್ರಾಣಿದಯಾ ಬಂಧುಗಳಲ್ಲಿ ವಿನಂತಿಯು.

ದಯಾಳುಗಳೇ ಇದೇ ಮುಂದೆ ಬರುವ ಮಾಘ ಶುದ್ಧ ಹುಣ್ಣಿಮೆಗೆ ಧಾರವಾಡ ಜಿಲ್ಲಾ ಹಿರೇಕೆರೂರಲ್ಲಿ ದುರ್ಗಾದೇವಿಯ ಹಿಂಸಾಮಯ ಜಾತ್ರೆಯು ಜರಗುವದಿದ್ದು ಆ ಕಾಲಕ್ಕೆ ಹತ್ತಾರು ಸಾವಿರ ಮೂಕ ಪ್ರಾಣಿಗಳ ಭಯಂಕರ ವಧೆಯಾಗುತ್ತದೆ. ಕಾರಣ ಪ್ರಾಣಿದಯಾ ಸಂಘದವರೂ, ಜೀವಿ ದಯಾಳುಗಳೂ, ಸಾಧುಸಂತರೂ, ಹಾಲುಮತ, ವಾಲ್ಮೀಕಿಮತ, ಅದಿಜನ ಮುಂತಾದ, ಸಮಾಜಗಳ ದಯಾಳು ಮುಂದಾಳುಗಳೂ ಈ ಘೋರ ಕೃತ್ಯವು ನಡೆಯದಂತೆ ಜಾತ್ರೆಯು ಸಾತ್ವಿಕ ರೀತಿಯಿಂದ ಜರುಗುವಹಾಗೆ ಪ್ರಯತ್ನ ಮಾಡಿ ಯಶಸ್ಸುಹೊಂದಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆಯು.

ಗೋರಕ್ಷಣಸಂಘ ಹಿರೇಕೆರೂರ

## ಖಾದಿ ಮತ್ತು ಗ್ರಾಮ ಕೈಗಾರಿಕೆ ಪ್ರದರ್ಶನ.

[ಪ್ರಕಟನೆ ಶಾಖೆಯಿಂದ]

ಈ ಪ್ರದರ್ಶನವು ಒಕ್ಕಲಿಗರ ಸಂಘದ ಕಟ್ಟಡದಲ್ಲಿ ತಾರೀಖು ೨೬-೧೨-೩೫ ನೇ ಭಾನುವಾರ ಕರೆಯಲ್ಪಡುವುದು. ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳಾದ ಶ್ರೀ ಗಂಗಾಧರರಾವ ದೇಶಪಾಂಡೆಯವರು ಆರಂಭೋತ್ಸವನನ್ನು ನೆರವೇರಿಸುವರು.

ಪ್ರದರ್ಶನಕ್ಕೆ ಬರುವ ಸಾಮಾನುಗಳಿಗೆ ಎಂ. ಎಸ್. ಎಂ. ರೇಲ್ವೆ ಕಂಪನಿಯವರು ರಿಯಾಯತಿಯನ್ನು ಕೊಡಲು ಒಪ್ಪಿರುತ್ತಾರೆ. ಮೈಸೂರು ರೇಲ್ವೆ ಕಂಪನಿಯವರಿಗೂ ಸಹ ರಿಯಾಯತಿಯ ಬಗ್ಗೆ ಅರ್ಜಿ ಹಾಕಿದೆ. ಸಾಮಾನುಗಳನ್ನು ಕಳುಹಿಸುವವರು ಸ್ಟೇಶನ್ ಮಾಸ್ತರುಗಳನ್ನು ವಿಚಾರಿಸಿ ರಿಯಾಯತಿ ಪಡೆಯಬೇಕೆಂದು ಸೂಚನೆ.

ಬೆಂಗಳೂರು. ವ್ಹಿ. ಎಸ್. ನಾರಾಯಣರಾವ.

## ಹಿಂದು ಮಹಾಸಭೆಯ ಕಾರ್ಯಕ್ರಮ.

ತಾ. ೩೬ ಡಿಶೆಂಬರ ಗುರುವಾರ— ಅಧ್ಯಕ್ಷರಾದ ಪಂಡಿತ ಮಾಲವೀಜಿಯವರ ಆಗಮನ. ೮ ಗಂಟೆಯಿಂದ ೧೦ ಗಂಟೆಯ ವರೆಗೆ ಮೆರವಣಿಗೆ.

ತಾ|| ೨೮-೧೨-೩೫ ಮಧ್ಯಾಹ್ನ ೩. ಭಾ. ಹಿಂದು ಮಹಿಲಾ ಪರಿಷತ್ತು. ಮಧ್ಯಾಹ್ನ ೨ ಗಂಟೆಗೆ ಅ. ಭಾ. ಹಿಂದು ಮಹಾಸಭೆಯ ಕಾರ್ಯಕಾರಿ ಮಂಡಲದ ಅಧಿವೇಶನ

ತಾ|| ೨೯-೧೨-೩೫. ೨|| ಗಂಟೆಗೆ ಮುಖ್ಯ ಅಧಿವೇಶನ. ಮುಂಜಾನೆ ೮ ೧೦ದ ೧೧ ರ ವರೆಗೆ ಮತ್ತು ಸಾಯಂಕಾಲ ೬ ಗಂಟೆಗೆ ವಿಷಯನಿಯಾಮಕ ಮಂಡಲದ ಪರಿಷತ್ತು.

ತಾ. ೩೦-೧೨-೩೫ ಮುಖ್ಯ ಅಧಿವೇಶನ; ಮುಂಜಾನೆ ಮತ್ತು ಸಾಯಂಕಾಲ.

ತಾ. ೩೧-೧೨-೩೫ ಮುಂಜಾನೆ ಮುಖ್ಯ ಅಧಿವೇಶನ. ಮಧ್ಯಾಹ್ನ ೩ ಗಂಟೆಗೆ ಅ. ಭಾ. ಶುದ್ಧೀ ಸಮ್ಮೇಲನ. ಅಧ್ಯಕ್ಷರು ಶ್ರೀ. ಶಂಕರಾಚಾರ್ಯರು. (ಡಾ ಕುರ್ತಕೋಟಿಯವರು.)

ರಾ. ಗೊ. ಭಿಡೆ.
ಮುಖ್ಯಮೆಂತ್ರಿ ಸ್ವಾಗತ ಮಂಡಲ.

## ಕನ್ನಡಿಗರೇ ನಡೆಯಿರಿ ಮುಂಬಯಿಗೆ.

ಸಾಹಿತ್ಯ ಪರಿಷತ್ತಿನ ಕಾಲಕ್ಕೆ ವಿಜಯನಗರ ಪರಿಷತ್ತು ಹಾಗು ಕರ್ನಾಟಕ ಕಲಾಕೌಶಲ್ಯ ವಸ್ತು ಪ್ರದರ್ಶನಗಳು ನೆರವೇರುತ್ತಿರುವುದು. ಅತ್ಯಂತ ಅಭಿಮಾನಜನ್ಯವಾದ ಹಾಗೂ ಸಂತೋಷಕರವಾದ ಸಂಗತಿಯಾಗಿದೆ. ಈ ಕಾರ್ಯಗಳು ನಿಶ್ಚಯವಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ಸಿದ್ಧತೆಯು ಸಂಪೂರ್ಣವಾಗಿದ್ದು ತೃಪ್ತಿಕರವಾಗಿದೆಯೆಂದು ತಿಳಿದುಬಂದಿದೆ.

## ಗುಲಬರ್ಗಾ

# ಆರ್ಯ ಸಮಾಜದ ಪ್ರಕಟನೆಯ [illegible]

### ಪತ್ರಿಕೆಗಳ ಅಭಿಪ್ರಾಯ.

**ಹಾವೇರಿ:**— ತಾರೀಖು ೧೩-೧೨-೩೫ ನೆಯ ದಿವಸ ಇಲ್ಲಿಯ ಶಿವಾನಂದ ಥೇಟರದಲ್ಲಿ ಶ್ರೀ ಚನ್ನಪ್ಪ ಚೌಷಷ್ಟಿ ಇವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆ ಕೂಡಿತ್ತು. ನಿಜಾಮ ಇಲಾಖೆಯಲ್ಲಿಯ ಆರ್ಯ ಸಮಾಜದವರ ಕೃತಿಯು ನಿಷೇಧಿಸುವ ಠರಾವನ್ನು ಶ್ರೀ. ಹಳಕೊಪ್ಪ ವಕೀಲರು ಸಭೆಯ ಮುಂದಿಟ್ಟರು. ಶ್ರೀ ಗುರುಶಾಂತ ಶಾಸ್ತ್ರಿಗಳು ಮತ್ತು ಶ್ರೀ ಹಾಲಪ್ಪನವರ ಚೆನ್ನಬಸಪ್ಪ ಸಂಪಾದಕ "ಬನವರಾಜ" ಇವರು ಭಾಷಣ ಮಾಡಿದರು. ಠರಾವು ಸರ್ವಾನುಮತದಿಂದ ತೀರ್ಮಾನವಾಯಿತು.

**ಶ್ರೀ. ಶಂ. ಗೋ. ಸಾಖರ್‌ಪೆಕರ್** ಬಡೋದಾ ಇವರು ಗುಜರಾಥಿ ಭಾಷೆಯಲ್ಲಿ ಸುದರ್ಶನ-ಪತ್ರಿಕೆಗೆ "ಯಾರದು ತಪ್ಪು ದಾರಿ?" ಎಂಬ ಒಂದು ಲೇಖನವನ್ನು ಬರೆದು. ಗುಲಬರ್ಗಾ ಆರ್ಯ ಸಮಾಜದ ಮಂತ್ರಿಗಳೇ ತಪ್ಪು ದಾರಿ ಹಿಡಿದಿದ್ದಾರೆಂದು ಸ್ಪಷ್ಟ ತೋರಿಸಿದ್ದಾರೆ. ಆ ಲೇಖನದಲ್ಲಿ ಲೇಖಕರು ಹೀಗೆ ಬರೆದಿದ್ದಾರೆ—

"ಮಂತ್ರಿಗಳೇ, ನಿಜಾಮ ಸ್ಟೇಟಿನ ಪ್ರಾಂತದ ಲಿಂಗಾಯತರಿಗೆ ನೀವು ೫೦ ಪರುಷಗಳಿಂದ ಸಹಾಯ ಮಾಡಿದ್ದರೆ ನೀವು ಧನ್ಯರೇ ಸರಿ. ಹಾಗೆ ನೀವು ಅವರಿಗೆ ಸಹಾಯ ಮಾಡಿದ ಮಾತ್ರದಿಂದ ವೀರಶೈವ ಸಮಾಜವನ್ನೇ ದೂಷಿಸುವ ಅಧಿಕಾರವು ನಿಮಗೆ ಬರುವದೇ? ಇದು ಸ್ವಾಮಿ ದಯಾನಂದರಿಂದ ಸ್ಥಾಪಿತವಾದ ಆರ್ಯಸಮಾಜಕ್ಕೆ ಶೋಭಿಸುವುದಿಲ್ಲ.

ಮಂತ್ರಿಗಳೇ, ನಿಜಾಮ ಸ್ಟೇಟಿನ ಪ್ರಾಂತದ ಲಿಂಗಾಯತರಿಗೆ ಧೋತರ ಉಟ್ಟುಕೊಳ್ಳಲಿಕ್ಕೆ ಬರುತ್ತಿದ್ದಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಅವರು ಆ ಮುಂಚೆ ಬತ್ತಲೆ ಇರುತ್ತಿದ್ದರೆಂದು ನೀವು ಹೇಳುವಿರಾ? ಅವರಿಗೆ ಧೋತರ ಬೇಕಾಗಿರಲಿಕ್ಕಿಲ್ಲ ಅದಕ್ಕೆ ಬಿಟ್ಟಿರಬಹುದು. ಧೋತರದಲ್ಲಿ ಹಿಂದುತ್ವವಿದೆಯೇ? ಹಾಗಾದರೆ ಕೊಂಕಣ ಪಟ್ಟಿಯಲ್ಲಿ ಅನೇಕ ಮುಸಲ್ಮಾನರು ಧೋತರ ಉಡುತ್ತಾರೆ. ಆರ್ಯ ಸಮಾಜದ ಅನೇಕ ಜನರು ಇಜಾರ ಮೊದಲಾದವುಗಳನ್ನು ಹಾಕುತ್ತಾರೆ.

ಮಂತ್ರಿಗಳೇ? ನಿಜಾಮ ರಾಜ್ಯದಲ್ಲಿ ಲಿಂಗಾಯತರ ಮೇಲೆ ಹೆಚ್ಚು ಆಪತ್ತು ಬರುತ್ತದೆಂದು ಹೇಳಿರುವಿರಿ ಅದರಲ್ಲ ಆಶ್ಚರ್ಯವೇನು? ಏಕೆಂದರೆ ಅವರು ಅಲ್ಲಿ ಬಹು ಸಂಖ್ಯಾಕರಿದ್ದಾರೆ. ಅಲ್ಪ ಸಂಖ್ಯೆಯವರಾದ ನಿಮ್ಮ ಮೇಲೆ ಅಲ್ಲಿ ಆಪತ್ತುಗಳು ಬರಬೇಕೆ? ಪಂಜಾಬ ಪ್ರಾಂತದಲ್ಲಿ ನಿಮ್ಮ ಜನರು ಹೆಚ್ಚಿರುವುದರಿಂದ ಅಲ್ಲಿ ನಿವಗೆ ಆಪತ್ತು."

**ನವಸಂದೇಶ**-(ಬಳ್ಳಾರಿ)— ನಮ್ಮ ಹಿಂದು ದೇಶದಲ್ಲಿ ಕೇವಲ ಹೊಸ ಸ್ಥಿತಿಗೆ ಬಂದಿದ್ದ ಹಿಂದು ಸಮಾಜವ ಉದ್ಧಾರಕ್ಕಾಗಿ ದಯಾನಂದ ಸರಸ್ವತಿಯವರು ಜನ್ಮವೆತ್ತಿದರೆನ್ನಬಹುದು. ಇವರು ಉತ್ತರ ಹಿಂದುಸ್ಥಾನದಲ್ಲಿ ಮುಖ್ಯವಾಗಿ ಪಂಜಾಬಿನಲ್ಲಿ ಮುಸಲ್ಮಾನರ ಉಪಟಳವನ್ನು ತಡೆದು, ಆರ್ಯಸಂಸ್ಕೃತಿ ವೈದಿಕ ಧರ್ಮ ರಕ್ಷಣೆ ಮಾಡಿ ಪುಣ್ಯ ಭಾಗಿಗಳಾದವರೆಂದರೆ ಇವರೇ. ಇವರನ್ನು ನಾವು ಕೊಂಡಾಡುವೆವು. ಸರ್ವರು ಕೊಂಡಾಡತಕ್ಕದ್ದೆ. ಇವರ ಅನುಯಾಯಿಗಳು ಕೂಡ ಧರ್ಮ ಸಂಸ್ಥಾಪಕರ ಕೀರ್ತಿಲತೆಯನ್ನು ಹಬ್ಬಿಸಿ ಆರ್ಯ ಸಮಾಜ ಸಂಸ್ಕೃತಿಯ ದಿವ್ಯ ಜ್ಯೋತಿಯು ಪ್ರಪಂಚದಲ್ಲೆಲ್ಲಾ ಬೆಳಗುವಂತೆ ಮಾಡುವ ಹವ್ಯಾಸ ಬಿಟ್ಟು ಹಿಂದು ಸಮಾಜದಲ್ಲೇ ಒಡಕು ಹುಟ್ಟಿಸಲು ಮಾಡಿರುವ ಪ್ರಯತ್ನಗಳನ್ನು ನೋಡಿದರೆ ತುಂಬಾ ಖೇದವಾಗುತ್ತದೆ.

ಮೇಲ್ಕಂಡ ಸಮಾಜದ ಕೆಲವು ವ್ಯಕ್ತಿಗಳು ನಿಜಾಂ ಪ್ರಾಂತದ ವೀರಶೈವರ ಮೇಲೆ ಹೊರಿಸಿದ ನಿಂದಾರೋಪಣವನ್ನು ನೋಡಿದರೆ ಯಾವ ವೀರಶೈವನಿಗಾದರೂ, ಮೈಕೂದಲೇಳದೆ ಇರುವದಿಲ್ಲ.

ವೀರಶೈವ ಬಾಂಧವರೇ! ನಮ್ಮ ವೀರಶೈವ ಮಹಸ್ಥಾಪಕರೂ, ಅದ್ಭುತ ಧರ್ಮ ಕ್ರಾಂತಿಯನ್ನುಂಟು ಮಾಡಿದ ಶ್ರೀ ಬಸವೇಶ್ವರರು ಜನ್ಮವೆತ್ತಿದ ಪವಿತ್ರ ಪ್ರದೇಶದಲ್ಲಿ ನಿವಾಸಿಸುವ ನಿಮ್ಮನ್ನು ಇಷ್ಟು ಅವಹೇಳನೆ ಮಾಡಬೇಕಾದರೆ ಇದೇನು ಆರ್ಯಸಮಾಜದ ತಲೆತಿರುಕತನವೋ ಅಥವಾ ತಮ್ಮ ಸಮಾಜೋದ್ಧಾರಕ್ಕಾಗಿ ಇನ್ನೊಂದು ಸಮಾಜಕ್ಕೆ ಮಸಿ ಬಳಿಯುವುದಕ್ಕಾಗಿ ಹೂಡಿದ ಕುಯುಕ್ತಿಯೋ ತಿಳಿಯುದಾಗಿದೆ. ಇದು ಹಾಗಿರಲಿ.

ಇನ್ನು ನಿಜಾಂ ಪ್ರಾಂತದ ವೀರಶೈವರಿಗೆ ಅಪವಾದ ಹೊರಿಸಿದರೆ ಸಕಲ ವೀರಶೈವರಿಗೂ ಹೊರಿಸಿದಂತೆಯೇ, ಅಲ್ಲವೆ? ಆದ್ದರಿಂದ ಸಕಲ ವೀರಶೈವರು ಈ ಕೆಳಗಿನ ೩ ಮುಖ್ಯ ಕಾರ್ಯಗಳನ್ನು ಮಾಡಬೇಕಾಗಿರುವುದು ಅವುಗಳನ್ನು ತೀವ್ರವೇ ಕಾರ್ಯರೂಪದಲ್ಲಿ ತರಬೇಕಾಗಿ ನಮ್ಮ ಆಗ್ರಹದ ವಿನಂತಿ.

೧. ಆರ್ಯ ಸಮಾಜದವರಿಗಾಗಲಿ ಅವರ ಸಮಾಜ ಸಂಬಂಧದವರಿಗಾಗಲೀ ಎಳ್ಳಷ್ಟು ಸಹಾಯ ಮಾಡಕೂಡದು.

೨. ಇನ್ನು ಪತಿನಿತ್ಯ ಸಾವಿರಾರು ಸ್ತ್ರೀಯರು ಭ್ರಷ್ಟರಾಗುತ್ತಿದ್ದಾರೆಂದು ಹೇಳುತ್ತಾರಷ್ಟೆ. ಈ ಬಗ್ಗೆ ಪ್ರತಿಯೊಂದು ಸ್ಥಳದ ವೀರಶೈವ ಪ್ರಮುಖರು ಸಭೆ ಸೇರಿ ಈ ಸಮಾಚಾರವನ್ನು ಸಿದ್ಧ ಮಾಡಿಕೊಡಬೇಕೆಂದು ನೋಟೀಸಿನ ಮೂಲಕ ಕೇಳಬೇಕು. ಸಿದ್ಧ ಮಾಡಲು ತಪ್ಪಿದಲ್ಲಿ ಇಂಥಾ ಭಯಂಕರ ದೋಷಾರೋಪಣೆಯನ್ನು ಹೊರಿಸುವುದಕ್ಕೆ ಪಶ್ಚಾತ್ತಾಪಪಟ್ಟು ನಿಜಾಂ ಪ್ರಾಂತದ ವೀರಶೈವ ಹೆಂಗಳೆಯರ ಕ್ಷಮಾಪಣೆಯನ್ನು ಕೇಳಿಕೊಳ್ಳುವಂತೆ ಮಾಡಬೇಕು.

೩ ಶ್ರೀ ಶಿವಲಿಂಗಯ್ಯ ಎಂಬುವವರು ತಾ. ೭-೧೦-೩೫ ನೆಯ ಸುದರ್ಶನ ಪತ್ರಿಕೆಯಲ್ಲಿ "ಬಸವೇಶ್ವರನು ದಯಾನಂದರ ಚರಣ ಧೂಳಿಗೂ ಕೂಡ ಸರಿಬರುವುದಿಲ್ಲ. ಲಿಂಗಾಯತರು ಕೊರಳಲ್ಲಿ ಕಲ್ಲನ್ನು ಕಟ್ಟಿಕೊಳ್ಳುತ್ತಿರುವುದರಿಂದ ಅವರ ಹೃದಯ ಮತ್ತು ಮಿದುಳು ಕಲ್ಲಿನಂತಿಯೇ ಆಗಿವೆ. ಎಂದು ಶ್ರೀ ಶಾಮಲಾಲರು ನಿಂದಿಸಲಾರಂಭಿಸಿದರು." ಎಂದು ಬರೆದಿದ್ದಾರೆ.

ಹೀಗೆ ಆ ಲೇಖಕರು ಬರೆದು ೨ ತಿಂಗಳಾದರೂ ಈ ವರೆಗೆ ಶ್ರೀ ಶಾಮಲಾಲರು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿಲ್ಲ. ಆದ್ದರಿಂದ ಸರ್ವರು ಈ ಬಗ್ಗೆ ಶ್ರೀ ಶಾಮಲಾಲರಿಗೆ ನೋಟೀಸಿನ ಮೂಲಕ ಹೀಗೆ ದೋಷಾರೋಪಣೆ ಮಾಡಿದುದನ್ನು

### ಅಲ್ಲಲ್ಲಿ ನಿಷೇಧ ಸಭೆಗಳು.

**ಕನ್ನಡ ಸಾಹಿತ್ಯ ಸಮ್ಮೇಲನ** ಮುನ್ನ ಸಮಾಜದ ಕ್ಷೇಮಾ
ಇವುಗಳನ್ನು ಸರ್ವ ವೀ
ರಶೈವ ೧೬ ನೆಯ ಪುಟದಿಂದ ೪ ರೂಪದಲ್ಲಿ ತರಬೇಕೆಂದು
ಇನ್ನೊಂದುಸಾರಿ ವಿನಂತಿ ಮಾಡಿಕೊಳ್ಳುವೆವು.

**ಶ್ರೀ ಚಂದ್ರಶೇಖರಶಾಸ್ತ್ರಿಗಳು** ಪ್ರಿನ್ಸಿಪಾಲ ಜ. ಗ. ಸಂಸ್ಕೃತ ಕಾಲೇಜ ಹುಬ್ಬಳ್ಳಿ ಇವರು ತರುಣ ಕರ್ನಾಟಕ ಪತ್ರಿಕೆಯಲ್ಲಿ ಬರೆಯುವದರ ಮುಖ್ಯಾಂಶ:—

ಗುಲ್ಬರ್ಗಾ ಆರ್ಯಸಮಾಜದವರು 'ಲಿಂಗಾಯತೋಂಕಿ ದಿಶಾಭೂಲ' ಎಂಬ ಪ್ರಕಟನೆಯನ್ನು ಹೊರಡಿಸಿರುವದು ಈಗಾಗಲೇ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವಷ್ಟೆ. ಅವರ ಪ್ರಕಟನೆಯಲ್ಲಿ ಕೆಲವು ಭಾಗ ವೀರಶೈವ ಸಮಾಜಕ್ಕೆ ಅಪಮಾನಕಾರಕ ಇರುವದರಿಂದ ವೀರಶೈವರು ಆ ಪ್ರಕಟನೆಯ ಸಮಾಚಾರವನ್ನು ಚನ್ನಾಗಿ ತೆಗೆದುಕೊಳ್ಳಲೇಬೇಕಾಗುತ್ತದೆ. ಹಿಂದು ಧರ್ಮದಲ್ಲಿರತಕ್ಕ ಪ್ರತಿಯೊಂದು ಪಂಗಡದವರು ಪರಸ್ಪರ ಸಹಾಯ ಸಹಾನುಭೂತಿಗಳಿಂದ ಕೂಡಿಕೊಂಡು ನಡೆದು ಹಿಂದು ಸಮಾಜವನ್ನು ಬಲಪಡಿಸಬೇಕೆಂದು ಅನೇಕ ಮುಖಂಡರು ಹಗಲಿರುಳು ಪ್ರಯತ್ನವನ್ನು ಮಾಡತಕ್ಕ ಕಾಲದಲ್ಲಿ ಗುಲ್ಬರ್ಗಾ ಆರ್ಯ ಸಮಾಜದವರು ಉದ್ಧಟತನವನ್ನು ತೋರಿಸಿರುವದು ಅತಿನಿಂದ್ಯವಾದದ್ದಾಗಿದೆ.

ಗುಲ್ಬರ್ಗಾ ಆರ್ಯ ಸಮಾಜದವರು ಹೀಗೆ ಮಾಡುತ್ತಾರೆಂದು ಎಲ್ಲ ಆರ್ಯ ಸಮಾಜಗಳಿಗೆ ದೋಷವನ್ನು ಕೊಡಲಿಕ್ಕೆ ಬರುವದಿಲ್ಲ. ಆದರೂ ಉಳಿದ ಕಡೆಯಲ್ಲಿರತಕ್ಕ ಆರ್ಯ ಸಮಾಜದವರು ತಮ್ಮ ಬಂಧುಗಳಾದ ನೈಜಾಮ ದೇಶದ ಆರ್ಯ ಸಮಾಜದವರಿಗೆ ಈ ಪ್ರಸಂಗದಲ್ಲಿ ಯೋಗ್ಯಸಲಹೆಯನ್ನು ಕೊಡುವದು ನ್ಯಾಯವಿರುತ್ತದೆ.

ಕ್ರೈಸ್ತಿಯನ್ ಮತ್ತು ಮುಸಲ್ಮಾನರಾಗತಕ್ಕ ಜನರಿಗೆ ತಡೆ ಹಾಕಿ ಆರ್ಯಸಮಾಜದಲ್ಲಿ ತೆಗೆದುಕೊಳ್ಳಲು ಸಿದ್ಧರಾದದ್ದರಿಂದ ಹಿಂದು ಸಮಾಜಗಳಲ್ಲಿರತಕ್ಕ ಎಲ್ಲ ಪಂಗಡದವರು ಆರ್ಯ ಸಮಾಜದವರಿಗೆ ಸಹಾಯಮಾಡಲಿಕ್ಕೆ ಹತ್ತಿದರು. ಇಷ್ಟರಿಂದಲೇ ಉನ್ಮತ್ತರಾಗಿ ನಾವು ಎಲ್ಲರನ್ನೂ ಜಯಿಸುತ್ತೇನೆಂಬುವ ಮಾತು ಕೇವಲ ಬುರುಡಿಯೇ ಸರಿ. ಹೀಗೆ ಆದರೆ ಆರ್ಯ ಸಮಾಜವು ತನ್ನ ವರ್ಚಸ್ಸನ್ನು ಕರ್ನಾಟಕದಲ್ಲಿ ಮೂಲೆಗುಂಪು ಮಾಡಿಕೊಳ್ಳುವದು ಮಾತ್ರ ನಿಜ. ಅವರ ಅಹ್ವಾನಕ್ಕೆ ನಾವೂ ಸಿದ್ದರೇ.

**ವಿಜಾಪುರ** ತಾ|| ೧೫-೧೨-೩೫ ನೇ ದಿವಸ ಗುಲಬರ್ಗಾ ಆರ್ಯ ಸಮಾಜದ ಶಾಖೆಯವರು ವೀರಶೈವ ಸಮಾಜಕ್ಕೆ ಅಗೌರವಸರವಾದ ಲೇಖವನ್ನು ಪ್ರಸಿದ್ಧಿಸಿದ್ದಕ್ಕೆ ಮತ್ತು ಅವರ ಮಹಾಪುರುಷರ ಬಗ್ಗೆ ನಿಂದಾಸ್ಪದ ವಿಧಾನಗಳನ್ನು ಮಾಡಿದ್ದಕ್ಕೆ ನಿಷೇಧಪರ ಸಭೆಯು ಮಿ|| ವ್ಹಿ. ವ್ಹಿ. ಮುಧೋಳಕರ ವಕೀಲ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ಮೇಲೆ ಜ. ವ್ಹಿ. ಹಿರೇಮಠ ವಕೀಲ ಇವರು ಈ ಬಗ್ಗೆ ನಿರ್ಣಯಗಳನ್ನು ಮಂಡಿಸಿ ಅತ್ಯಂತ ಪರಿಣಾಮಕರವಾದ ಭಾಷಣವನ್ನು ಮಾಡಿದರು. ಮತ್ತು ಶ್ರೀ ಶಂಕರಪ್ಪಾ ಧನಶೆಟ್ಟಿ ಇವರು ಅವುಗಳ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು. ನಿರ್ಣಯಗಳು ಆವನೆಂದರೆ:—

**ನಿರ್ಣಯಗಳು,**

(೧) ನಿಜಾಮ ಇಲಾಖೆಯಲ್ಲಿರುವ ಸ್ಥಾನಿಕ ಆರ್ಯ ಸಮಾಜದ ಸ್ಥಾನಿಕ ಕಾರ್ಯಕರ್ತರು ವೀರಶೈವ ಸಮಾಜಕ್ಕೂ ಹಿಂದುಧರ್ಮಕ್ಕೂ ಅಗೌರವಕರವಾದ ಬಂವಣಿಗೆಗಳನ್ನು ಹಸ್ತ ಪತ್ರಿಕೆಯ ಮುಖಾಂತರ ಪ್ರಕಟಿಸಿರುವುದನ್ನು ಈ ಸಭೆಯು ನಿಷೇಧಿಸುತ್ತದೆ. ಮತ್ತು ಈ ಅಪಮಾನಕಾರಕ ವಿಧಾನಗಳನ್ನು ಓದಿ ಇಡೀ ವೀರಶೈವ ಸಮಾಜದ ನಿಜಾಮ ಇಲಾಖೆಯವರಲ್ಲದೆ, ಬ್ರಿಟಿಶ್ ಹಿಂದುಸ್ಥಾನದಲ್ಲಿರುವ ವೀರಶೈವರಿಗೂ ಮತ್ತು ಇನ್ನಿತರ ಸಂಸ್ಥಾನಗಳಲ್ಲಿರುವ ವೀರಶೈವರಿಗೂ ಬಹಳ ಮನೋವೇದನೆಯಾಗಿದೆಯೆಂದು ಇಲ್ಲಿ ವ್ಯಕ್ತ ಮಾಡುವುದಲ್ಲದೆ, ಆ ಕುಹಕ ವಿಧಾನಗಳನ್ನು ಈ ಸಭೆಯು ಸಂಪೂರ್ಣವಾಗಿ ಧಿಕ್ಕರಿಸುತ್ತದೆ. ಮತ್ತು ಅವುಗಳನ್ನು ತೀವ್ರವಾಗಿ ನಿಷೇಧಿಸುತ್ತದೆ.

(೨) ನಿಜಾಮ ಇಲಾಖೆಯ ವೀರಶೈವ ಬಾಂಧವರು ಬಹಳ ಹಿಂದುಳಿದವರಿರುವುದರಿಂದ ಅವರ ಈ ಸಂಕಟ ಕಾಲದಲ್ಲಿ ಅಂದರೆ ಮುಖ್ಯವಾಗಿ ಇಡೀ ವೀರಶೈವ ಸಮಾಜಕ್ಕೊದಗಿದ ಈ ಗಂಡಾಂತರದಲ್ಲಿ ಈ ಪ್ರಾಂತದ ವೀರಶೈವರ ಪೂರ್ಣ ಬೆಂಬಲವಿದೆಯೆಂದು ಈ ಸಭೆಯು ನಿರ್ಧರಿಸುತ್ತದೆ.

(೩) ನಿಜಾಮ ಇಲಾಖೆಯ ಸ್ಥಾನಿಕ ಆರ್ಯ ಸಮಾಜದ ಚಾಲಕರಿಂದ ಅಲ್ಲಿಯ ವೀರಶೈವರಿಗೊದಗಿದ ಆಪತ್ಕಾಲದಲ್ಲಿ ಶರಣ ಸಂದೇಶದ ಪತ್ರಿಕಾ ಕರ್ತರಾದ ಶ್ರೀ ಹರ್ಡೇಕರ ಮಂಜಪ್ಪನವರು ನಮ್ಮ ನಿಜಾಂ ವೀರಶೈವರ ಸಹಾಯಕ್ಕೆ ಹೋಗಿ ಅವರಲ್ಲಿ ಜಾಗೃತಿಯನ್ನುಂಟುಮಾಡಿದ್ದಲ್ಲದೆ ಅಲ್ಲಿಯ ಆರ್ಯಸಮಾಜದವರ ಕುಟಿಲ ನೀತಿಗಳನ್ನು ಬೈಲಿಗೆಳೆದು ಇಡೀ ವೀರಶೈವ ಸಮಾಜಕ್ಕೆ ಕಲ್ಯಾಣ ಮಾಡಿದ್ದಾರೆಂದು ಈ ಸಭೆಯು ಅಭಿಮಾನದಿಂದ ಹೇಳಿ ಇದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ.

(೪) ನಿಜಾಮ ರಾಜ್ಯದಲ್ಲಿರುವ ಆರ್ಯಸಮಾಜದ ಕಾರ್ಯಕರ್ತರು ಇದುವರೆಗೆ ಯಾರ ಸಹಾನುಭೂತಿಯಿಂದ ಕೆಲಸ ಮಾಡುತ್ತ ಬಂದರೋ ಅಂಥ ವೀರಶೈವ ಸಮಾಜದ ದ್ವೇಷ ಕಟ್ಟಿಕೊಳ್ಳುವದು ಆರ್ಯಸಮಾಜದ ಹಿತದೃಷ್ಟಿಯಿಂದಲೇ ಅನುಚಿತವಾದುದರಿಂದ ಸ್ಥಾನಿಕ ಆರ್ಯ ಸಮಾಜದ ಚಾಲಕರ ಈ ತಪ್ಪು ದಾರಿಯನ್ನು ಆರ್ಯಸಮಾಜದ ಮುಖ್ಯ ಕೇಂದ್ರದ ಪ್ರಮುಖ ಕಾರ್ಯಕರ್ತರ ಲಕ್ಷಕ್ಕೆ ತಂದುಕೊಟ್ಟು ನಿಜಾಮದ ಆರ್ಯಸಮಾಜದ ಮಂತ್ರಿಗಳಿಂದ ವೀರಶೈವ ಸಮಾಜಕ್ಕೂ ಅವರ ಪೂಜ್ಯ ವಿಭೂತಿಗಳಿಗೂ ಸಂಬಂಧಪಟ್ಟ ನಿಂದಾಪರ ಲೇಖಗಳನ್ನು ( ಅಂದರೆ ವೀರಶೈವರಿಂದ ಅತಿ ಪೂಜ್ಯವೆಂದು ಗಣಿಸಿದ ಶ್ರೀ ಬಸವೇಶ್ವರ ಮತ್ತು ಇಷ್ಟಲಿಂಗ ಇವುಗಳ ದೂಷಣೆಯನ್ನು) ತೆಗೆಯಲಿಕ್ಕೆ ಅವರು ಪ್ರಯತ್ನ ಮಾಡಬೇಕೆಂದು ಈ ಸಭೆಯು ಒತ್ತಾಯದಿಂದ ಸೂಚಿಸುತ್ತದೆ. ಮತ್ತು ಈ ನಿರ್ಧಾರವನ್ನು ಅವರಿಗೆ ಮತ್ತು ಪಂಡಿತ ಮದನ ಮೋಹನ ಮಾಲವಿಯಾ ಇವರಿಗೆ ತಿಳಿಸಲು ಅಧ್ಯಕ್ಷರಿಗೆ ಈ ಸಭೆಯು ಅಧಿಕಾರ ಕೊಡುತ್ತದೆ.

**ಆಡೂರ:**— ಕೊಪ್ಪಳ ಜಿಲ್ಲಾ ಆಡೂರ ಗ್ರಾಮದಲ್ಲಿ ಶ್ರೀ ಆಂದಾನಪ್ಪ ಅಬ್ಬಿಗೇರಿ ಇದರ ಅಧ್ಯಕ್ಷತೆಯಲ್ಲಿ ವೀರಶೈವರ ಸಭೆ ಸೇರಿ ಈ ಕೆಳಗಿನ ಗೊತ್ತುವಳಿಗಳು ಮಾಡಲ್ಪಟ್ಟವು:—

(೧) ಗುಲ್ಬರ್ಗಾ ಆರ್ಯ ಸಮಾಜದವರು ವೀರಶೈವರ ವಿಷಯವಾಗಿ ಅವಮಾನಕರವಾದ ಲೇಖ ಪ್ರಕಟಿಸುತ್ತಿರುವುದರಿಂದ ನಮ್ಮ ಪ್ರಾಂತದ ವೀರಶೈವರು ಆರ್ಯ ಸಮಾಜದವರಿಗೆ ಯಾವದೇ ರೀತಿಯಿಂದ ಸಹಾಯ ಮಾಡಬಾರದು.

(೨) 'ಲಿಂಗಾಯತೋಂಕಿ ದಿಶಾಭೂಲ' ಎಂಬ ಹಸ್ತಪತ್ರಿಕೆಯಲ್ಲಿಯ ಸಂಗತಿಗಳನ್ನು ಈ ಸಭೆಯು ನಿಷೇಧಿಸುತ್ತದೆ.

(೩) ನಮ್ಮ ಪ್ರಾಂತದಲ್ಲಿ ಆರ್ಯಸಮಾಜದವರು ಸಮಾಜ ಸಮಾಜಗಳಲ್ಲಿ ಅನೈಕ್ಯವುಂಟಾಗುವ ಲೇಖಗಳನ್ನು ಬರೆಯುತ್ತಿರುವ ಕಾರಣ ನಮ್ಮ ಘನ ಸರಕಾರದವರು ಲಕ್ಷಿಸಬೇಕೆಂದು ಪ್ರಾರ್ಥನೆ.

(೪) ಪ್ರತಿನಿತ್ಯ ಸಾವಿರಾರು ವೀರಶೈವ ಕುಮಾರಿಯರು ಭ್ರಷ್ಟರಾಗುತ್ತಿದ್ದಾರೆಂಬ ತಮ್ಮ ಹೇಳಿಕೆಯನ್ನು ಸಿದ್ಧಮಾಡಿಕೊಡಿರೆಂದು ಗುಲ್ಬರ್ಗಾ ಆರ್ಯಸಮಾಜ ಮಂತ್ರಿಗಳಿಗೆ ನೋಟೀಸಿನ ಮೂಲಕ ಕೇಳಲು ಈ ಸಭೆಯು ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿರುತ್ತದೆ.

(೫) ಬಸವ ಮತ್ತು ಲಿಂಗಗಳಿಗೆ ದೂಷಣೆ ಮಾಡಿದ ಉದ್ಗಿರಿ ಶ್ರೀ ಶಾಮಲಾಲರನ್ನು ತಮ್ಮ ಈ ದೂಷಿತ ವಿಧಾನವನ್ನು ತಿರುಗಿತೆಗೆದುಕೊಳ್ಳಿರೆಂದು ಕೇಳಲು ಈ ಸಭೆಯ ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

**ವೀರಭದ್ರಪ್ಪ ಕೊಪ್ಪಳ.**

# ವಿವಾಹ ಸಂಸ್ಕಾರ.

## ನವಯುವಕರಲ್ಲೊಂದು ವಿನ್ನಹ

(ಬರೆದವರು:— ಎಮ್. ವಿ. ಬಸವಂತ ಅಸಿ ಗಂದಿವಾಡ.)

ಅಖಿಲ ಪ್ರಾಣಿಮಾತ್ರರಿಗಾಗಿ ಹದಿನಾರು ಸಂಸ್ಕಾರಗಳು ಮನುಸ್ಮೃತಿಯಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇವುಗಳಲ್ಲೊಂದು ಈ ವಿವಾಹ ಸಂಸ್ಕಾರವು. ಇದು ರೂಢಿಯಲ್ಲಿ ಬರುವ ಮೊದಲು ಸ್ತ್ರೀ ಪುರುಷ ವಿಲಾಸಕ್ಕೆ ಯಾವ ತರದ ತಡೆಯಿದ್ದಿಲ್ಲ. ಉಪವರಳಾದ ಸ್ತ್ರೀಯಲ್ಲಿ ಕಾಮವಾಸನೆಯುತ್ಪನ್ನವಾಗಲು ಅವಳ ಪುರುಷನ ಗೂಡ ಕ್ರೀಡಿಸುತ್ತಿದ್ದಳು. ವಿವಾಹ ನಿರ್ಬಂಧವಿರದ್ದರಿಂದ ಸ್ತ್ರೀಯರು ಈ ವಿಷಯದಲ್ಲಿ ಸ್ವತಂತ್ರರೂ, ಅನಾವೃತರೂ ಆಗಿದ್ದರು. ಈ ಆಚಾರದ ದುಷ್ಪರಿಣಾಮದಿಂದ ಸಮಾಜವು ದುರ್ಗತಿಗೀಡಾಗುತ್ತಿರುವುದನ್ನು ಕಂಡು ಶ್ವೇತಕೇತು ಮುನಿಯು ವಿವಾಹ ಮರ್ಯಾದೆಯನ್ನು ಕಲ್ಪಿಸಿದನು. (ಮ. ಭಾ. ಆ. ೧೨೨) ಅಂದಿನಿಂದ ವಿವಾಹವಿಲ್ಲದೆ ಆದ ಸ್ತ್ರೀ ಸಂಭೋಗವು ಅನೀತಿಕಾರಕ ಹಾಗೂ ಪಾಪಕಾರಕವೆಂದು ತಿಳಿಯಲ್ಪಟ್ಟು ವ್ಯಭಿಚಾರದಲ್ಲಿ ಅದರ ಗಣನೆಯಾಯಿತು.

ಮನುಷ್ಯ ಸಮಾಜವು ಹೆಚ್ಚೆಚ್ಚು ಪ್ರಗತಿಯನ್ನು ಪಡೆದಂತೆ ವಿವಾಹಸಂಸ್ಕಾರದಲ್ಲಿಯೂ ಬದಲಾವಣೆಯಾಗುತ್ತ ಮನುವು ಋಷಿಯ ಕಾಲದಲ್ಲಿ ಇದು ಹೆಚ್ಚು ವಿಶಾಲತ್ವವನ್ನು ಹೊಂದಿ ಬ್ರಾಹ್ಮ, ದೇವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ ಪಿಶಾಚ, ಎಂಬ ಎಂಟುತರದ ವಿವಾಹ ರೂಢಿಗಳು ಆಗ ಬಳಿಕೆಯಲ್ಲಿದ್ದವೆಂಬದು, ಮನುಂ ೩ ಅಧಿ ರಿಂದ ಸ್ಪಷ್ಟವಾಗುತ್ತದೆ

ಮೇಲೆ ವಿವರಿಸಿದ ಎಂಟುತರದ ವಿವಾಹಗಳಲ್ಲಿ ಬ್ರಾಹ್ಮಾದಿ ನಾಲ್ಕು ವಿವಾಹ ಸಂಸ್ಕಾರಗಳ ಅತಿರಿಕ್ತ ಆಸುರಾದಿ ವಿವಾಹ ರೂಢಿಗಳು ನಿಂದಿತ, ಹಾಗೂ ನಿಕೃಷ್ಟವಾದವುಗಳಾಗಿವೆ ; ಈ ನಿಂದಿತ ವಿವಾಹ ಸಂಸ್ಕಾರದ ಪರಿಣಾಮವು ಭಾವೀ ವಧೂವರರ ವೇಲಾಗಿ ಆವರಿಂದ ಮುಂದೆ ಜನಿಸಿದ ಮಕ್ಕಳು ನಿರ್ದಯಿ, ಮಿಥ್ಯಾವಾದಿ, ವೇದನಿಂದಕ. ಮತ್ತು ಧರ್ಮದ್ವೇಷಿಗಳಾಗುತ್ತವೆ.

ಅನಿಂದಿತೈಃ ಸ್ತ್ರೀವಿವಾಹೈರನಿಂದ್ಯಾಭವತಿ ಪ್ರಜಾ|
ನಿಂದಿತೈರ್ನಿಂದಿತಾನ್ಯೇಷಾಂ ತಸ್ಮಾನ್ನಿಂದ್ಯಾನ್ವಿವರ್ಜಯೇತ್॥

ಎಂದು ಖಡಾಖಡಿಯಾಗಿ ಹೇಳಿರುತ್ತಾನೆ.

ನಮ್ಯ ವೀರಶೈವರಲ್ಲಿ ಅಖಿಲ ಹಿಂದುಗಳಲ್ಲಿ ಬಳಿಕೆಯಲ್ಲಿದ್ದದ್ದು ಆಸುರೀ ವಿವಾಹವು. ತೆರವು (ವರನ ಪಕ್ಷದವರಿಂದ ತೆಗೆದುಕೊಳ್ಳುವ ಹಣ) ಕೊಟ್ಟು ಕನ್ಯಾಗ್ರಹಣ ಮಾಡುವದು ಆಸುರೀ ವಿವಾಹವೆಂದು ಮನು ೩ ಅಧಿರಲ್ಲಿ ಉಲ್ಲೇಖವಾಗಿದೆ. ಅದರಂತೆ ವರದಕ್ಷಿಣೆ (ಕನ್ನೆಯ ಪಕ್ಷದವರಿಂದ ತೆಗೆದುಕೊಳ್ಳುವ ಹಣ) ತೆಗೆದುಕೊಂ ಕನ್ಯಾಗ್ರಹಣ ಮಾಡುವುದಾದರೂ ಆಸುರೀ ವಿವಾಹವೇ.

ಕುಮಾರಿ ಕನ್ಯೆಯು ಶ್ರೀ ಜಗನ್ಮಾತೆಯ ಪ್ರತಿರೂಪವೆಂ ಶಾಸ್ತ್ರಗಳು ಸಾರಿ ಹೇಳುತ್ತಿಲಿವೆ ರನ್ನವೆಂದು ಸ್ಮೃತಿಗಳು ಹೊ ಳುತ್ತಿವೆ. ಆದರೆ ವಿವಾಹವೆಂಬ ಪವಿತ್ರ ಸಂಸ್ಕಾರದ ನಿಮಿತ್ತವಾ ಹಣಕೊಟ್ಟು ಇಲ್ಲವೆ ಹಣತೆಗೆದುಕೊಂಡು ಕನ್ಯಾಗ್ರಹಣ ಮಾ ವದು ವಿವಾಹ ಸಂಸ್ಕಾರವಲ್ಲ. ಕೊಳ್ಳುವ ಮಾಡುವ ಇದೊಂ ವ್ಯವಹಾರವು. ಶ್ರೀ ಜಗನ್ಮಾತೆಯ ಅವಮಾನವು ಸಮಾಜ ದುರ್ದೈವವು. ಇಷ್ಟೆ ಅಲ್ಲ ಧರ್ಮಧ್ವಂಸಕಾರಿ ಕಾರ್ಯವು.

"ತಕ್ಷಶಿಲೆಯ ಸೇಟೆಯಲ್ಲಿ ಎಷ್ಟೋಜನರು ತಮ್ಮ ಹೆಣ್ಣು ಕ್ಕಳನ್ನು ಮಾರಾಟಕ್ಕೆ ತರುತ್ತಿದ್ದರು." ಎಂದು ಯುವಾನಿ ಪ್ರವಾ ಯಾದ ಮೆಗಾಸ್ಥನೀಸನು ಉಲ್ಲೇಖಿಸಿರುವನು. ಆ ಕಾಲದಲ್ಲಿ ಆಸು ವಿವಾಹವು ಬಳಿಕೆಯಲ್ಲಿದ್ದದ್ದೇನೋ ನಿಜ. ಆದರೆ ಈ ಪದ್ಧತಿಯ ಈ ಕಾಲದಲ್ಲಿ ಬಹು ಭೀಕರ ಸ್ವರೂಪವನ್ನು ಹೊಂದಿದೆ ಕೆಲಕೆಲವ ಯಲ್ಲಂತೂ ಹೆಣ್ಣುಮಕ್ಕಳ ಲಿಲಾವಿನ ಬೆಲೆಯು ತಳತೆಗೆಟ್ಟಿ ಒಬ್ಬನ ತರುವಾಯ ಮತ್ತೊಬ್ಬನಿಗೆ, ತರುವಾಯ ಇನ್ನೊಬ್ಬನಿ ಮಾರುವ ಪರಿವಾರವು ಹಿಂದೂ ದೇಶವನ್ನೇ ವ್ಯಾಪಿಸಿದೆ ಎಂಬು ಓದುಗರರಿಯದ ಮಾತಲ್ಲ

ಕನ್ಯೆಯ ತಂಡೆಗೆ ಒಂದು ಆಕಳನ್ನಾಗಲಿ, ಎತ್ತನ್ನಾಗ ಕೊಟ್ಟ ಕನ್ಯಾಗ್ರಹಣ ಮಾಡುವದು ಆರ್ಷ ವಿವಾಹವು ಉಳ ಯಾವ ತರದ ಕೊಡ ತಕ್ಕೊಳ್ಳುವ ವ್ಯವಹಾರವಲ್ಲಿಲ್ಲ. ಈ ಪವಿ ಸಂಸ್ಕಾರವನ್ನು ಹೊಂದಿದ ದಂಪತಿಗಳಿಂದ ಜನಿಸುವ ಸಂತಾನ ಹಿಂದಿನ ಹಾಗೂ ಮುಂದಿನ ಮೂರ ತಲೆಗಳನ್ನುದ್ಧರಿಸುವದೆಂ ಮನು. ೩ ಅಧಿರಲ್ಲಿ ಹೇಳಲ್ಪಟ್ಟಿದೆ.

ಬ್ರಾಹ್ಮಾದಿ ವಂದಿತ ವಿವಾಹಗಳು ಬಳಿಕೆಯಲ್ಲಿರದ್ದರಿಂದಲ ಆಸುರಾದಿ ನಿಂದಿತ ವಿವಾಹಗಳಿಗೆ ಹಿಂದುಗಳು ಎಡೆಗೊಟ್ಟರುವ ರಿಂದಲೂ, ಹಿಂದೂ ಸಮಾಜವು ಕಟ್ಟುಗೆಟ್ಟು ಭಾವೀ ಹಿಂ ಸ್ಥಾನದ ಅಧಃಪತನಕ್ಕೆ ಕಾರಣವಾಗಿರುವದು. ವಿವಾಹ ಕಾಲದ ಹಣವನ್ನು ಕೊಡತಕ್ಕೊಳ್ಳುವ ಈ ನರ್ತನವು ಉಚ್ಚ ಹಾಗೂ ಪವಿ ವಾದ ವಿವಾಹಸಂಸ್ಕಾರವನ್ನು ಭ್ರಷ್ಟಮಾಡಿ, ಭಾರತೀಯರನ್ನ ನಿರ್ವೀರ್ಯರನ್ನಾಗಿ ಮಾಡಿದೆ. ಶ್ರೀ ಜಗನ್ಮಾತೆಯ ಪ್ರತಿರೂಪವಾ ಕನ್ಯಾರತ್ನವನ್ನು ಅವಮಾನಗೈಯುತ್ತಿರುವದರಿಂದ ಶ್ರೀ ಭುವನೇ ರಿಯ ಕರುಣಾಕಟಾಕ್ಷಕ್ಕೆ ನಾವು ಎರವಾಗಿದ್ದೇವೆ. ಎರವಾಗುತ್ತ ದ್ದೇವೆ ಇರಲಿ ಹಿಂದಾದದ್ದನ್ನು ನೆನೆ ನೆನೆದು ಹಳಹಳಿಸುವ ಹೊ ಇದಲ್ಲ. ಆದುದರಿಂದ ನನ್ನ ಅವಿವಾಹಿತ ನವಯುವಕ ಬಂ ಗಳೇ, ಎದ್ದೇಳಿ, ಉಚ್ಚತರವಾದ ವಿವಾಹ ಸಂಸ್ಕಾರವನ್ನ ಹೋ ನೀತಿವಂತ, ಹಾಗೂ ಬಲವಂತ ಸಂತಾನವನ್ನು ಪಡೆಯಿರಿ. ರಾಷ್ಟ್ರ ಹಾಗೂ ಸಮಾಜದ ನೂತ್ರಗಳು ಇನ್ನುಮುಂದೆ ನಿಮ್ಮ ಕೈಯ ಬರುವವು. ರಾಷ್ಟ್ರದ ಮುಂದಿನ ಜಯಾಪಜಯಗಳು ನಿ ಪೀಳಿಗೆಯನ್ನವಲಂಬಿಸಿವೆ. ತೆರವು ವರದಕ್ಷಿಣೆಗಳ ತಾಕಲಾಟ ಶಿಲುಕಿ ನುಗ್ಗಾಗುತ್ತಿರುವ ವಿವಾಹ ಸಂಸ್ಕಾರದ ಪುನರುಜ್ಜೀವ ಗೈಯ್ಯಬೇಕೆಂದು ನಿಶ್ಚಯಿಸಿ ತೆರವು ವರದಕ್ಷಿಣೆಗಳ ಸುಳುವನ್ನ ಗಿಸಲು ಟೊಂಕಕಟ್ಟಿರಿ. ವಿವಾಹ ಕಾಲದಲ್ಲಿ ಮಿತವ್ಯಯಿಗಳಾ ಮೊದಲೇ ಆರ್ಥಿಕ ಬಾಧೆಯಿಂದ ಬೆಂದುಬೆಂಡಾಗುತ್ತಿರುವೆವಾದ ರಿಂದ ದುಂದುಗಾರರಾಗಬೇಡಿರಿ. ಇನ್ನು ಮೇಲೆ ಪಶುಗಳಂತೆ ನಃ ಹೆಣ್ಣುಮಕ್ಕಳನ್ನು ಮಾರಲಾರೆವು. ಮತ್ತೂ ಕನ್ಯಾ ಪಕ್ಷದಿಂ ಏನೂ ತೆಗೆದುಕೊಳ್ಳದೆ ಕನ್ಯಾಗ್ರಹಣ ಮಾಡುವೆವು. ಎಂದು ಪ ತೊಟ್ಟು ಸಮಾಜ ಶಕಟವನ್ನು ಸರಿಯಾದ ದಾರಿಯಿಂದ ಸಾ ಕೊಂಡೊಯ್ದು ಧರ್ಮ ಹಾಗೂ ರಾಷ್ಟ್ರದ ಕಲ್ಯಾಣ ಮಾಡಿರೆಂ ನೆರೆನಂಬಿರುವೆನು.

---

ಪರಿಷತ್ತಿಗೆ ಸ್ವಯಂಸೇವಕರಾಗಲಿಚ್ಛೆಯುಳ್ಳವರು ಮೇ ತಿಂಗಳ ಖನೇ ತಾರೀಖಿನೊಳಗಾಗಿ ಕಾರ್ಯದರ್ಶಿಗಳಿಗೆ ತಮ್ಮ ಹೆಸರು ಒಕ್ಕಣಿಕೆಯನ್ನು ತಿಳಿಸಬೇಕು. ಹಾಗೂ ೧೩ನೇ ತಾರೀಖಿನೊಳ ಗಾಗಿ ಇಲ್ಲಿಗೆ ಬರಬೇಕು.

ಧಾರವಾಡವು ಎಮ್. ಎಸ್. ಎಮ್. ಪೂನಾ, ಬೆಂಗಳೂರ. ಮಾರ್ಗದಲ್ಲಿ ಇರುವ ದೊಡ್ಡ ಸ್ಟೇಶನವುಳ್ಳ ಸ್ಥಳವು.

**ಸೂಚನೆ**—ಪರಿಷತ್ತಿನ ಅಧ್ಯಕ್ಷರ ಹೆಸರನ್ನೂ, ಚರ್ಚಿಸುವ ವಿಷಯಗಳನ್ನೂ ಕಾರ್ಯಕ್ರಮಗಳ ದಿವಸ ವೇಳೆಗಳನ್ನೂ ಹಿಂದಿನಿಂದ ತಿಳಿಸಲಾಗುವದು ಧಾರವಾಡ ತಾ. ೩೫-೪-೧೯೩೩.

ತಮ್ಮ,
ವಿ. ಎಸ್. ಬಸವನಾಳ, ಬಿ. ಎ. ಎಲ್. ಎಲ್. ಬಿ.
ವಕೀಲ ಅಧ್ಯಕ್ಷರು.
ತರುಣ ಪರಿಷತ್ತು ಕಮಿಟಿ ಆಲ್. ಪಿ. ದೊಡವಾಡ
ಗೌರವ ಕಾರ್ಯದರ್ಶಿ

**ಕನ್ನಡ ಸಾಹಿತ್ಯ ಸಮ್ಮೇಲನ** ನಮ್ಮ ಸಮಾಜದ ಕ್ಷೇಮಾ ಇವುಗಳನ್ನು ಸರ್ವ ವೀ ರಶೈ ೧೬ ನೆಯ ಪುಟದಿಂದ ೫ ರೂಪದಲ್ಲಿ ತರಬೇಕೆಂದು ಇನ್ನೊಂದುಸಾರಿ ವಿನಂತಿ ಮಾಡಿಕೊಳ್ಳುವೆನು.

**ಶ್ರೀ ಚಂದ್ರಶೇಖರಶಾಸ್ತ್ರಿಗಳು** ಪ್ರಿನ್ಸಿಪಾಲ ಜ. ಗ. ಸಂಸ್ಕೃತ ಕಾಲೇಜ ಹುಬ್ಬಳ್ಳಿ ಇವರು **ತರುಣ ಕರ್ನಾಟಕ** ಪತ್ರಿಕೆಯಲ್ಲಿ ಬರೆದುದರ ಮುಖ್ಯಾಂಶ:—

ಗುಲ್ಬರ್ಗಾ ಆರ್ಯಸಮಾಜದವರು 'ಲಿಂಗಾಯತೋಂಕಿ ದಿಶಾಭೂಲ' ಎಂಬ ಪ್ರಕಟನೆಯನ್ನು ಹೊರಡಿಸಿರುವದು ಈಗಾಗಲೇ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದಷ್ಟೆ. ಅವರ ಪ್ರಕಟನೆಯಲ್ಲಿ ಕೆಲವು ಭಾಗ ವೀರಶೈವ ಸಮಾಜಕ್ಕೇ ಅಪಮಾನಕಾರಕ ಇರುವದರಿಂದ ವೀರಶೈವರು ಆ ಪ್ರಕಟನೆಯ ಸಮಾಚಾರವನ್ನು ಚನ್ನಾಗಿ ತೆಗೆದುಕೊಳ್ಳಲೇಬೇಕಾಗುತ್ತದೆ. ಹಿಂದು ಧರ್ಮದಲ್ಲಿರತಕ್ಕ ಪ್ರತಿಯೊಂದು ಪಂಗಡದವರು ಪರಸ್ಪರ ಸಹಾಯ ಸಹಾನುಭೂತಿಗಳಿಂದ ಕೂಡಿಕೊಂಡು ನಡೆದು ಹಿಂದು ಸಮಾಜವನ್ನು ಬಲಪಡಿಸಬೇಕೆಂದು ಅನೇಕ ಮುಖಂಡರು ಹಗಲಿರುಳು ಪ್ರಯತ್ನವನ್ನು ಮಾಡತಕ್ಕ ಕಾಲದಲ್ಲಿ ಗುಲ್ಬರ್ಗಾ ಆರ್ಯ ಸಮಾಜದವರು ಉದ್ಧಟ ತನವನ್ನು ತೋರಿಸುವದು ಅತಿನಿಂದ್ಯವಾದದ್ದಾಗಿದೆ.

ಗುಲ್ಬರ್ಗಾ ಆರ್ಯ ಸಮಾಜದವರು ಹೀಗೆ ಮಾಡುತ್ತಾರೆಂದು ಎಲ್ಲ ಆರ್ಯ ಸಮಾಜಗಳಿಗೆ ದೋಷವನ್ನು ಕೊಡಲಿಕ್ಕೆ ಬರುವದಿಲ್ಲ. ಆದರೂ ಉಳಿದ ಕಡೆಯಲ್ಲಿರತಕ್ಕ ಆರ್ಯ ಸಮಾಜದವರು ತಮ್ಮ ಬಂಧುಗಳಾದ ನೈಜಾಮ ದೇಶದ ಆರ್ಯ ಸಮಾಜದವರಿಗೆ ಈ ಪ್ರಸಂಗದಲ್ಲಿ ಬೋಧ್ಯಸಲಹೆಯನ್ನು ಕೊಡುವದು ನ್ಯಾಯವಿರುತ್ತದೆ.

ಕ್ರೈಶ್ಚಿಯನ್ ಮತ್ತು ಮುಸಲ್ಮಾನರಾಗತಕ್ಕ ಜನರಿಗೆ ತಡೆ ಹಾಕಿ ಆರ್ಯಸಮಾಜದಲ್ಲಿ ತೆಗೆದುಕೊಳ್ಳಲು ಸಿದ್ಧರಾದದ್ದರಿಂದ ಹಿಂದು ಸಮಾಜಗಳಲ್ಲಿರತಕ್ಕೆ ಎಲ್ಲ ಪಂಗಡದವರು ಆರ್ಯ ಸಮಾಜದವರಿಗೆ ಸಹಾಯಮಾಡಲಿಕ್ಕೆ ಹತ್ತಿದರು. ಇಷ್ಟರಿಂದಲೇ ಉನ್ಮತ್ತರಾಗಿ ನಾವು ಎಲ್ಲರನ್ನೂ ಜಯಿಸುತ್ತೇವೆಂಬುವ ಮಾತು ಕೇವಲ ಬುರುಡಿಯೇ ಸರಿ. ಹೀಗೆ ಆದರೆ ಆರ್ಯ ಸಮಾಜವು ತನ್ನ ವರ್ಚಸ್ಸನ್ನು ಕರ್ನಾಟಕದಲ್ಲಿ ಮೂಲೆಗುಂಪು ಮಾಡಿಕೊಳ್ಳುವದು ಮಾತ್ರ ನಿಜ. ಆವರ ಆಹ್ವಾನಕ್ಕೆ ನಾವೂ ಸಿದ್ಧರೇ.

**ವಿಜಾಪುರ** ತಾ|| ೧೫-೧೨-೩೫ ನೇ ದಿನವು ಗುಲಬರ್ಗಾ ಆರ್ಯ ಸಮಾಜದ ಶಾಖೆಯವರು ವೀರಶೈವ ಸಮಾಜಕ್ಕೆ ಅಗೌರವಪರವಾದ ಲೇಖನವನ್ನು ಪ್ರಸಿದ್ಧಿಪಡಿಸಿದ್ದಕ್ಕೆ ಮತ್ತು ಅವರ ಮಹಾಪುರುಷರ ಬಗ್ಗೆ ನಿಂದಾಸ್ಪದ ವಿಧಾನಗಳನ್ನು ಮಾಡಿದ್ದಕ್ಕೆ ನಿಷೇಧಪರ ಸಭೆಯು ಮಿ|| ವ್ಹಿ. ವ್ಹಿ. ಮುಧೋಳಕರ ವಕೀಲ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ಮೇಲೆ ಜಿ. ವ್ಹಿ. ಹಿರೇಮಠ ವಕೀಲ ಇವರು ಈ ಬಗ್ಗೆ ನಿರ್ಣಯಗಳನ್ನು ಮಂಡಿಸಿ ಅತ್ಯಂತ ಪರಿಣಾಮಕರವಾದ ಭಾಷಣವನ್ನು ಮಾಡಿದರು. ಮತ್ತು ಶ್ರೀ ಶಂಕರಪ್ಪ ಧನಶೆಟ್ಟಿ ಇವರು ಅವುಗಳ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು. ನಿರ್ಣಯಗಳು ಆವನೆಂದರೆ:—

**ನಿರ್ಣಯಗಳು,**

(೧) ನಿಜಾಮ ಇಲಾಖೆಯಲ್ಲಿರುವ ಸ್ಥಾನಿಕ ಆರ್ಯ ಸಮಾಜದ ಸ್ಥಾನಿಕ ಕಾರ್ಯಕರ್ತರು ವೀರಶೈವ ಸಮಾಜಕ್ಕೂ ವೀರಶೈವ ಧರ್ಮಕ್ಕೂ ಅಗೌರವಕರವಾದ ಬರವಣಿಗೆಗಳನ್ನು ಹಸ್ತ ಪತ್ರಿಕೆಯ ಮುಖಾಂತರ ಪ್ರಕಟಿಸಿರುವುದನ್ನು ಈ ಸಭೆಯು ನಿಷೇಧಿಸುತ್ತದೆ. ಮತ್ತು ಈ ಅಪಮಾನಕಾರಕ ವಿಧಾನಗಳನ್ನು ಓದಿ ಇಡೀ ವೀರಶೈವ ಸಮಾಜದ ನಿಜಾಮ ಇಲಾಖೆಯವರಲ್ಲದೆ, ಬ್ರಿಟಿಶ್ ಹಿಂದುಸ್ಥಾನದಲ್ಲಿರುವ ವೀರಶೈವರಿಗೂ ಮತ್ತು ಇನ್ನಿತರ ಸಂಸ್ಥಾನಗಳಲ್ಲಿರುವ ವೀರಶೈವರಿಗೂ ಬಹಳ ಮನೋವೇದನೆಯಾಗಿದೆಯೆಂದು ಇಲ್ಲಿ ವ್ಯಕ್ತ ಮಾಡುವುದಲ್ಲದೆ, ಆ ಕುಹಕ ವಿಧಾನಗಳನ್ನು ಈ ಸಭೆಯು ಸಂಪೂರ್ಣವಾಗಿ ಧಿಕ್ಕರಿಸುತ್ತದೆ. ಮತ್ತು ಅವುಗಳನ್ನು ತೀವ್ರವಾಗಿ ನಿಷೇಧಿಸುತ್ತದೆ.

(೨) ನಿಜಾಮ ಇಲಾಖೆಯ ವೀರಶೈವ ಬಾಂಧವರು ಬಹಳ ಹಿಂದುಳಿದವರಿರುವುದರಿಂದ ಅವರ ಈ ಸಂಕಟ ಕಾಲದಲ್ಲಿ ಅಂದರೆ ಮುಖ್ಯವಾಗಿ ಇಡೀ ವೀರಶೈವ ಸಮಾಜಕ್ಕೊದಗಿದ ಈ ಗಂಡಾಂತರದಲ್ಲಿ ಈ ಪ್ರಾಂತದ ವೀರಶೈವರ ಪೂರ್ಣ ಜೆಂಬಲವಿದೆಯೆಂದು ಈ ಸಭೆಯು ನಿರ್ಧರಿಸುತ್ತದೆ.

(೩) ನಿಜಾಮ ಇಲಾಖೆಯ ಸ್ಥಾನಿಕ ಆರ್ಯ ಸಮಾಜದ ಚಾಲಕರಿಂದ ಅಲ್ಲಿಯ ವೀರಶೈವರಿಗೊದಗಿದ ಆಪತ್ಕಾಲದಲ್ಲಿ ಶರಣ ಸಂದೇಶದ ಪತ್ರಿಕಾ ಕರ್ತರಾದ ಶ್ರೀ ಹರ್ಡೇಕರ ಮಂಜಪ್ಪನವರು ನಮ್ಮ ನಿಜಾಂ ವೀರಶೈವರ ಸಹಾಯಕ್ಕೆ ಹೋಗಿ ಅವರಲ್ಲಿ ಜಾಗೃತಿಯನ್ನುಂಟುಮಾಡಿದ್ದಲ್ಲದೆ ಅಲ್ಲಿಯ ಆರ್ಯಸಮಾಜದವರ ಕುಟಿಲ ನೀತಿಗಳನ್ನು ಬೈಲಿಗೆಳೆದು ಇಡೀ ವೀರಶೈವ ಸಮಾಜಕ್ಕೆ ಕಲ್ಯಾಣ ಮಾಡಿದ್ದಾರೆಂದು, ಈ ಸಭೆಯು ಅಭಿಮಾನದಿಂದ ಹೇಳಿ ಇದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ.

(೪) ನಿಜಾಮ ರಾಜ್ಯದಲ್ಲಿರುವ ಆರ್ಯಸಮಾಜದ ಕಾರ್ಯಕರ್ತರು ಇದುವರೆಗೆ ಯಾರ ಸಹಾನುಭೂತಿಯಿಂದ ಕೆಲಸ ಮಾಡುತ್ತ ಬಂದರೋ ಅಂಥ ವೀರಶೈವ ಸಮಾಜದ ದ್ವೇಷ ಕಟ್ಟಿಕೊಳ್ಳುವದು ಆರ್ಯಸಮಾಜದ ಹಿತದೃಷ್ಟಿಯಿಂದಲೇ ಅನುಚಿತವಾದುದರಿಂದ ಸ್ಥಾನಿಕ ಆರ್ಯ ಸಮಾಜದ ಚಾಲಕರ ಈ ತಪ್ಪು ದಾರಿಯನ್ನು ಆರ್ಯಸಮಾಜದ ಮುಖ್ಯ ಕೇಂದ್ರದ ಪ್ರಮುಖ ಕಾರ್ಯಕರ್ತರ ಲಕ್ಷಕ್ಕೆ ತಂದುಕೊಟ್ಟು ನಿಜಾಮದ ಆರ್ಯಸಮಾಜದ ಮಂತ್ರಿಗಳಿಂದ ವೀರಶೈವ ಸಮಾಜಕ್ಕೂ ಅವರ ಪೂಜ್ಯ ವಿಭೂತಿಗಳಿಗೂ ಸಂಬಂಧಪಟ್ಟ ನಿಂದಾಪರ ಲೇಖನಗಳನ್ನು (ಅಂದರೆ ವೀರಶೈವರಿಂದ ಅತಿ ಪೂಜ್ಯವೆಂದು ಗಣಿಸಿದ ಶ್ರೀ ಬಸವೇಶ್ವರ ಮತ್ತು ಇಷ್ಟಲಿಂಗ ಇವುಗಳ ದೂಷಣೆಯನ್ನು) ತೆಗೆಯಲಿಕ್ಕೆ ಆವರು ಪ್ರಯತ್ನ ಮಾಡಬೇಕೆಂದು ಈ ಸಭೆಯು ಒತ್ತಾಯದಿಂದ ಸೂಚಿಸುತ್ತದೆ. ಮತ್ತು ಈ ನಿರ್ಧಾರವನ್ನು ಅವರಿಗೆ ಮತ್ತು ಪಂಡಿತ ಮದನ ಮೋಹನ ಮಾಲವಿಯಾ ಇವರಿಗೆ ತಿಳಿಸಲು ಅಧ್ಯಕ್ಷರಿಗೆ ಈ ಸಭೆಯು ಅಧಿಕಾರ ಕೊಡುತ್ತದೆ.

**ಆಡೂರ:**— ಕೊಪ್ಪಳ ಜಿಲ್ಲಾ ಆಡೂರ ಗ್ರಾಮದಲ್ಲಿ ಶ್ರೀ ಅಂದಾನಪ್ಪ ಅಬ್ಬೇಗೇರಿ ಇವರ ಅಧ್ಯಕ್ಷತೆಯಲ್ಲಿ ವೀರಶೈವರ ಸಭೆ ಸೇರಿ ಈ ಕೆಳಗಿನ ಗೊತ್ತುವಳಿಗಳು ಮಾಡಲ್ಪಟ್ಟವು:—

(೧) ಗುಲ್ಬರ್ಗಾ ಆರ್ಯ ಸಮಾಜದವರು ವೀರಶೈವರ ವಿಷಯವಾಗಿ ಅವಮಾನಕರವಾದ ಲೇಖ ಪ್ರಕಟಿಸುತ್ತಿರುವುದರಿಂದ ನಮ್ಮ ಪ್ರಾಂತದ ವೀರಶೈವರು ಆರ್ಯ ಸಮಾಜದವರಿಗೆ ಯಾವದೇ ರೀತಿಯಿಂದ ಸಹಾಯ ಮಾಡಬಾರದು.

(೨) 'ಲಿಂಗಾಯತೋಂಕಿ ದಿಶಾಭೂಲ' ಎಂಬ ಹಸ್ತಪತ್ರಿಕೆಯಲ್ಲಿಯ ಸಂಗತಿಗಳನ್ನು ಈ ಸಭೆಯು ನಿಷೇಧಿಸುತ್ತದೆ.

(೩) ನಮ್ಮ ಪ್ರಾಂತದಲ್ಲಿ ಆರ್ಯಸಮಾಜದವರು ಸಮಾಜ ಸಮಾಜಗಳಲ್ಲಿ ಅನೈಕ್ಯವುಂಟಾಗುವ ಲೇಖಗಳನ್ನು ಬರೆಯುತ್ತಿರುವ ಕಾರಣ ನಮ್ಮ ಘನ ಸರಕಾರದವರು ಲಕ್ಷಿಸಬೇಕೆಂದು ಪ್ರಾರ್ಥನೆ.

(೪) ಪ್ರತಿನಿತ್ಯ ಸಾವಿರಾರು ವೀರಶೈವ ಕುಮಾರಿಯರು ಭ್ರಷ್ಟರಾಗುತ್ತಿದ್ದಾರೆಂಬ ತಮ್ಮ ಹೇಳಿಕೆಯನ್ನು ಸಿದ್ಧಮಾಡಿಕೊಡಿರೆಂದು ಗುಲ್ಬರ್ಗಾ ಆರ್ಯಸಮಾಜ ಮಂತ್ರಿಗಳಿಗೆ ನೋಟೀಸಿನ ಮೂಲಕ ಕೇಳಲು ಈ ಸಭೆಯು ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿರುತ್ತದೆ.

(೫) ಬಸವ ಮತ್ತು ಲಿಂಗಗಳಿಗೆ ದೂಷಣೆ ಮಾಡಿದ ಉದ್ಗಿರಿ ಶ್ರೀ ಶಾಮಲಾಲರನ್ನು ತಮ್ಮ ಈ ದೂಷಿತ ವಿಧಾನವನ್ನು ತಿರುಗಿತೆಗೆದುಕೊಳ್ಳಿರೆಂದು ಕೇಳಲು ಈ ಸಭೆಯು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

**ವೀರಭದ್ರಪ್ಪ ಕೊಪ್ಪಳ.**

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಮೇ ತಾರೀಖು ೪ ನೆಯ ಸೋಮವಾರ | ಸಂಚಿಕೆ ೩೮.


# ಧಾರವಾಡ ವೀರಶೈವ ಮಹಾಸಭೆಯಲ್ಲಿ ಚರ್ಚಿಸತಕ್ಕ ಮುಖ್ಯ ವಿಷಯಗಳು.

ಸ್ವಾಗತಂಡಿಂಗ ಕಮಿಟಿಯವರು ಸೂಚಿಸಿರುವ ಕೆಳಗೆಕಾಣಿಸಿದ ವಿಷಯಗಳ ಮೇಲೆ ಬೇಕಾದ ವೀರಶೈವ ಪ್ರತಿನಿಧಿಗಳು ಮಹಾಸಭೆಯಲ್ಲಿ ಮಾತಾಡಬಹುದು. ಮಾತಾಡಲಿಚ್ಛಿಸುವವರು ತಮ್ಮ ಭಾಷಣವನ್ನು ಸ್ವಚ್ಛವಾಗಿ ಬರೆದು ಇದೇ ಮೇ ತಿಂಗಳ ೧೯ನೆಯ ತಾರೀಖಿನ ಒಳಗಾಗಿ ಮುಟ್ಟುವಂತೆ ಸ್ವಾಗತಸಂಘದ ಚೇರಮನ್ನರ ಕಡೆಗೆ ಕಳಿಸಬೇಕು.

**ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು.**

೧ ಶ್ರೀಮದ್ವೀರಶೈವ ಮಹಾಸಭೆಯ ಘಟನೆಯ (Constitution) ಬಗ್ಗೆ ಈಗಿದ್ದ ನಿಯಮಗಳನ್ನು ಹೆಚ್ಚುಕಡಿಮೆ ಮಾಡುವುದು.

೨ ಮಹಾಸಭೆಯ ಈಗಿದ್ದ ಮತ್ತು ಮುಂದೆ ಆಗಬಹುದಾದ ಚಿರಸ್ಥಾಯಿ ಫಂಡಿನ ವ್ಯವಸ್ಥೆಯ ಬಗ್ಗೆ ಆಲೋಚಿಸಿ ಸರಿಯಾದ ನಿಯಮಗಳನ್ನು ಮಾಡುವದು.

೩ ವೀರಶೈವ ವಿದ್ಯಾಲಯಗಳ ಏಕೀಕರಣದ ಬಗ್ಗೆ ತಕ್ಕ ಉಪಾಯಗಳನ್ನು ಕೈಕೊಳ್ಳುವುದು.

೪ ಮಹಾಸಭೆಯ ಉತ್ಪಾದಕರಾದ ಶ್ರೀಮನ್ನಿರಂಜನ ಹಾನಗಲ್ಲ ಮಹಾಸ್ವಾಮಿಗಳು ಲಿಂಗೈಕ್ಯರಾದ್ದರಿಂದ ಸಮಾಜಕ್ಕೆ ಆಪತ್ಪಾನಿಯ ಬಗ್ಗೆ ದುಃಖ ಪ್ರದರ್ಶನ.

೫ ಶ್ರೀ. ಬಸಪ್ಪ ಕಂಕಣವಾಡಿ ಇವರು ಧಾರವಾಡ ಲಿಂಗಾಯತ ಫಂಡಿಗೆ ಕೊಟ್ಟಿರುವ ದೇಣಿಗಿ ೫೦,೦೦೦ ಐವತ್ತು ಸಾವಿರ ರೂಪಾಯಿಗಳ ಬಗ್ಗೆ ಅವರ ಆಭಾರ ಮನ್ನಿಸುವದು.

೬ ವೀರಶೈವ ವಾಙ್ಮಯವನ್ನು ಶುದ್ಧವಾಗಿ ಪ್ರಸಿದ್ಧ ಪಡಿಸುವುದು.

೭ ವೀರಶೈವ ಪ್ರಾಚೀನ ರಾಜಮನೆತನಗಳ ಇತಿಹಾಸ ಬರೆಯಿಸುವದು.

೮ ಉದ್ಯೋಗ ಫಂಡ[illegible] ಬಗ್ಗೆ ಮಾಡ

೯ ಕರ್ನಾಟಕ ಪ್ರಾಂತದ ಏಕೀಕರಣ ಮತ್ತು ಸ್ವತಂತ್ರ ಪ್ರಾಂತ ಮಾಡುವ ಬಗ್ಗೆ ವಿಚಾರಮಾಡಿ ಯೋಗ್ಯ ಉಪಾಯಗಳನ್ನು ಕೈಕೊಳ್ಳುವುದು.

೧೦ ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯ ದೊರಕಿಸುವ ಬಗ್ಗೆ ಪ್ರಯತ್ನಮಾಡುವದು.

೧೧ ವೀರಶೈವರ ಶಾರೀರಿಕ ಉನ್ನತಿಯ ಬಗ್ಗೆ ವ್ಯಾಯಾಮ ಮಂದಿರಗಳನ್ನು ಸ್ಥಾಪಿಸುವದು.

೧೨ ಇಡೀ ಹಿಂದುಸ್ಥಾನದಲ್ಲಿಯ ವೀರಶೈವ ಖಾನೆಸುಮಾರಿ (Census) ಯನ್ನು ತಯಾರಿಸತಕ್ಕದ್ದು.

೧೩ ನಮ್ಮ ಮತತತ್ವಗಳ ತಿಳುವಳಿಕೆಯು ದೇಶದ ಎಲ್ಲ ಭಾಗಗಳ ಜನರಲ್ಲಿ ಚನ್ನಾಗಿ ಹಬ್ಬುವಂತೆ ಬೋಧಕರನ್ನು ನೇಮಿಸಿ ಅವರಿಂದ ಈ ಕಾರ್ಯವನ್ನು ಮಾಡಿಸುವದು.

೧೪ (ಅ) ಮತತತ್ವಗಳ ಆಜ್ಞಾನದ ಮೂಲಕ ಅಥವಾ ಬಲಾತ್ಕಾರದಿಂದ ನಮ್ಮ ಸಮಾಜದ ಜನರು ಅನ್ಯಮತವನ್ನು ಸ್ವೀಕರಿಸಿದರೆ ಅಂಥವರನ್ನು ಪುನಃ ನಮ್ಮ ಮತದಲ್ಲಿ ಸೇರಿಸಿಕೊಳ್ಳುವುದು.

(ಬ) ಒಮ್ಮೆ ನಮ್ಮ ಸಮಾಜಕ್ಕೆ ಹೊಂದಿ ಯಾವದೇ ಕಾರಣದಿಂದಾಗಲಿ ನಮ್ಮ ಸಮಾಜದಿಂದ ಅಗಲಿದವರನ್ನು ಪುನಃ ನಮ್ಮ ಸಮಾಜದಲ್ಲಿ ಸೇರಿಸಿಕೊಳ್ಳುವುದು.

೧೫ ವೀರಶೈವ ಸಮಾಜದಲ್ಲಿ ಆಗುತ್ತಿರುವ ಜಾತಿಭೇದಗಳು ಮತ್ತು ಅವುಗಳನ್ನು ತೆಗೆದುಹಾಕುವ ಉಪಾಯಗಳು.

೧೬ ವೀರಶೈವ ದಿವಾಣಿ ವಿಚಾರಗಳಲ್ಲಿ ಹಚ್ಚಬೇಕಾದ ಒಂದು ಕಾಯದೆಯನ್ನು ಸರಕಾರದಿಂದ ಪಾಸುಮಾಡಿಕೊಳ್ಳುವದು.

೧೭ ಕರ್ನಾಟಕಕ್ಕೆ ಒಂದು ಸ್ವತಂತ್ರ ಬಂದರವನ್ನು ದೊರಕಿಸುವ ಬಗ್ಗೆ ಪ್ರಯತ್ನಮಾಡುವದು.

S|d G. R. Nalawadi,
ಚೇರಮನ್ನ
ಸ್ವಾಗತ ಕಮಿಟಿ,
೨೫ನೆಯ ಅಖಿಲಭಾರತ ವೀರಶೈವ ಮಹಾಸಭಾ, ಧಾರವಾಡ

CAMCLOTH STORES

# ಶ್ರೀ ಬಸವ ಜಯಂತಿಯ ಮಹಾ ಸಮಾರಂಭ.

ಬಸವನ ಬಾಗೇವಾಡಿ—ಪ್ರತಿವರುಷದಂತೆ ಈ ಸಾರೆ ಬಸವ ಜಯಂತಿಯು ತಾ. ೩೭ ನೆಯ ದಿವಸ ಬಹು ಸಂಭ್ರಮದಿಂದ ಜರುಗಿತು. ಶ್ರೀ ಬಸವೇಶರಿಗೆ ಅಭಿಷೇಕಾದಿ ಮಂಗಲ ಕಾರ್ಯಗಳು ಜರುಗಿದವು. ಮಹಾ ಗಣಾರಾಧನೆ ಶ್ರೀ ಬಸವ ಮಹಾ ಮಂಟಪದ ವಾಸ್ತುವಿಗ್ರಹ ಪೆರವಣಿಗೆ ಮೊದಲಾದ ಮಂಗಲಕಾರ್ಯಗಳು ಪ್ರಾತಃಕಾಲ ೬ ಘಂಟೆಯಿಂದ ಜರುಗಿದವು. ಈ ವರುಷ ಶ್ರೀ ಮೃತ್ಯುಂಜಯ ಮಹಾ ಸ್ವಾಮಿಗಳವರು ಶ್ರೀ ಎನಯೋಗೀಶ್ವರ ಸಂಸ್ಕೃತ ಕಾಲೇಜಿನ ಮತ್ತು ಶ್ರೀ ಮುರುಘಾ ಬೋರ್ಡಿಂಗಿನ ಹಾಗೂ ಆಲಮಟ್ಟಿ ವೀರಶೈವ ವಿದ್ಯಾಲಯದ ಈ ಪ್ರಕಾರ ಮೂರು ಸಂಸ್ಥೆಗಳ ಸಾಧಾರಣ ಆರು ವಿದ್ಯಾರ್ಥಿಗಳನ್ನು ೩ ಶಾಸ್ತ್ರಿಗಳನ್ನು ಕರೆದುಕೊಂಡು ಈ ಜಯಂತಿಯ ಸಮಾರಂಭಕ್ಕೆ ಆಗಮಿಸಿದ್ದರಿಂದ ಈ ಸಾರೆ ಜಯಂತಿಯು ಒಂದು ಮಹತ್ವದ್ದಾಯಿತು ಸಾಯಂಕಾಲ ಸಂಸ್ಕೃತ ಕಾಲೇಜಿನ ಶಾಸ್ತ್ರಿಗಳು, ಆಲಮಟ್ಟಿ ವಿದ್ಯಾಲಯದ ಅಧ್ಯಾಪಕರು ಬಸವ ಮಹಾಮಂಟಪ ಭವನದ ಒಳಗೆ ಮಹತ್ವದ ಭಾಷಣಗಳನ್ನು ಮಾಡಿದರು ಬ್ರಾಹ್ಮಣಾದಿ ಎಲ್ಲ ವರ್ಗಗಳ ಮಹನೀಯರು ಸಭೆಗೆ ಬಂದಿದ್ದರು. ಆ ಮೇಲೆ ಬಸವ ಸಂದೇಶ ಪುಸ್ತಕವನ್ನು ಸಭಿಕರಿಗೆ ಹಂಚಿವ್ವಾಯಿತು. ಪ್ರತ್ಯಕ್ಷದರ್ಶಿ.

**ಬಾಗಲಕೋಟೆ**—ಪ್ರತಿಯ ಪ್ರಕಾರ ಇಲ್ಲಿ ತಾ. ೩೭ನೆಯ ದಿವಸ ಬಸವೇಶ್ವರ ಜಯಂತಿಯು ಅತಿ ವೈಭವದಿಂದ ಜರುಗಿತು ಗಣಾರಾಧನೆ ಪೆರವಣಿಗೆಗಳೂ ನಡೆದವು. ಶ್ರೀ ಹರಿಸರ್ವೋತ್ತಮಾಚಾರ್ಯರು ಬಸವೇಶರ ಬಗ್ಗೆ ಮಹತ್ವದ ಕೀರ್ತನೆಯನ್ನು ಮಾಡಿದರು. ಮರುದಿನ ಮಹಾ ವಿದ್ವಾಂಸರಾದ ಶ್ರೀಯುತ ಶ್ರೀ ಕಂಠಯ್ಯನವರು ಮತ್ತು ಶ್ರೀಯುತ ಶ್ರೀನಿವಾಸ ಮೂರ್ತಿಗಳೂ ಗದಿಗಿನಿಂದ ಆಗಮಿಸಿ ಬಸವೇಶರ ವಿಷಯವಾಗಿ ದಿವ್ಯವಾದ ಭಾಷಣವನ್ನು ತಾ ೩೯ ನೆಯ ಸಾಯಂಕಾಲ ಮಾಡಿದರು. ಈ ಪ್ರಕಾರ ಇಲ್ಲಿಯ ವೀರಶೈವ ತರುಣ ಸಂಘದವರು ಬಹು ಉತ್ಸಾಹದಿಂದ ಈ ಜಯಂತಿಯ ಕಾರ್ಯವನ್ನು ಮಾಡಿ ಬಸವ ಸಂದೇಶ ಪುಸ್ತಕವನ್ನು ಹಂಚಿದರು. ಓರ್ವ ಬಸವ ಭಕ್ತ.

**ಗದಗ**—ಇಲ್ಲಿಯ ತರುಣ ಸಂಘದವರು ಈ ಸಾರೆಯ ಬಸವ ಜಯಂತಿಯನ್ನು ಅತಿವೈಭವದಿಂದ ನಡೆಯಿಸಿದರು, ಕರ್ನಾಟಕಕ್ಕೆ ತಿಲಕ ಸ್ವಾಮಿಯಾಗಿರುವ ಪ್ರೊ. ಬಿ ಎಂ. ಶ್ರೀ ಕಂಠಯ್ಯನವರನ್ನು ಡಾ. ಸಂಪಿಗೆಯವರನ್ನು ವ್ಯಾಖ್ಯಾನಕ್ಕೆ ಕರೆಯಿಸಿಕೊಂಡಿದ್ದರು ಈ ಸಾರೆ ನಾಲ್ಕು ದಿವಸ ಆ ಮಹಾನುಭಾವನಾದ ಬಸವೇಶರ ಜಯಂತಿಯ ಸಮಾರಂಭವನ್ನು ಜರುಗಿಸಿದರು. ಇಲ್ಲಿಯ ಶಿವಾನಂದ ಮುದ್ರಣಾಲಯದ ಯಜಮಾನರು ತಾವೆಶ್ರಯಗಳನ್ನು ನಿವಾರಣೆ ಮಾಡುವ ಈ ಬಸವ ಮಹಾನುಭಾವನ ದಿವ್ಯ ಭಾವ ಚಿತ್ರದಿಂದ ಕೂಡಿದ ಸುಂದರ ಬೀಸಣಿಕೆಗಳನ್ನು ಸಿದ್ಧಗೊಳಿಸಿ ಎಲ್ಲರಿಗೂ ಹಂಚಿ ಬಸವಣ್ಣನವರ ಕಳದುಕೊಳ್ಳಲು ಸಭಿಕರಿಗೆ ಸಹಾಯ ಮಾಡಿದರು. ಬಸವ ಸಂದೇಶ ಪುಸ್ತಕಗಳು ಸಭೆಯಲ್ಲಿ ಹಂಚಲ್ಪಟ್ಟವು ಪ್ರೇಕ್ಷಕ.

**ಹುಕ್ಕೇರಿ**—ಈ ಸಾರೆ ಬಸವ ಜಯಂತಿಯು ತಾ ೩೭ನೆಯ ದಿವಸ ಬಹು ಸಂಭ್ರಮದಿಂದ ಸರ್ವಾನುಮತಾಭಿಪ್ರಾಯವಾಗಿ ಜರುಗಿತು. ಪ್ರತಿವರುಷದಂತೆ ಪೆರವಣಿಗೆ ಗಣಾರಾಧನೆಗಳು ನಡೆದ ನಂತರ ಇಲ್ಲಿಯ ಶ್ರೀಯುತ ಎಂ. ಎಸ್. ನಾಟೀಕರ ಸಬ್‌ಜಜ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು ಇಲ್ಲಿಯ ತರುಣ ಸಂಘದವರು ಈ ಸಾರೆ ಆಲಮಟ್ಟಿಯಿಂದ ಶ್ರೀಯುತ ಹರ್ಡೀಕರ ಮಂಜಪ್ಪನವರನ್ನು ವ್ಯಾಖ್ಯಾನಕ್ಕೆ ಕರೆಯಿಸಿಕೊಂಡಿದ್ದರು

ಈ ವ್ಯಾಖ್ಯಾತರ ವ್ಯಾಖ್ಯಾನ ಕೇಳಲು ಸುತ್ತಲಿನ ಹಳ್ಳಿಗಳಿಂದಲೂ ಜನರು ಒಂದಿದ್ದರು. ವ್ಯಾಖ್ಯಾತರು ಬಸವೇಶನ ದಿವ್ಯ ಚರಿತ್ರೆ ವರ್ಣಾಶ್ರಮಗಳ ಅನವಶ್ಯಕತೆ, ಸ್ತ್ರೀ ಸ್ವಾತಂತ್ರ್ಯ, ಅಸ್ಪೃಶ್ಯತಾ ನಿವಾರಣೆ, ವೀರಶೈವ ಏಕೀಕರಣ ಮೊದಲಾದ ವಿಷಯಗಳ ಮೇಲೆ ೧॥ ತಾಸು ವ್ಯಾಖ್ಯಾನ ಮಾಡಿದರು. ಸಭೆಯಲ್ಲಿ ಅಸ್ಪೃಶ್ಯರು ಒಂದು ಜನರಿದ್ದರು. ಕೊನೆಗೆ ಅಸ್ಪೃಶ್ಯತಾ ನಿವಾರಣೆ, ವೀರಶೈವ ಒಳ ಪಂಗಡಗಳ ಏಕೀಕರಣ ಮತ್ತು ಇಲ್ಲಿಯ ಲಕ್ಷ್ಮೀ ಜಾತ್ರೆಯಲ್ಲಾಗುವ ಪ್ರಾಣಿ ಹಿಂಸೆಯ ಪ್ರತಿಬಂಧ ಈ ಮೂರು ವಿಷಯಗಳ ಬಗ್ಗೆ ಶರಾವಾಗಿ ಲಕ್ಷಪ್ಪನೆಂಬ ಅಸ್ಪೃಶ್ಯ ಗೃಹಸ್ಥನೇ ವ್ಯಾಖ್ಯಾತರಿಗೂ ಅಧ್ಯಕ್ಷರಿಗೂ ಹಾರ ತುರಾಯಿಯಿಗಳನ್ನು ಅರ್ಪಿಸಿದನು. ಆ ಮೇಲೆ ಬಸವ ಸಂದೇಶ ಪುಸ್ತಕ ಹಂಚಿವ್ವಾಯಿತು ಕಾರ್ಯದರ್ಶಿ.

**ಆಡೂರ**—ತಾ. ೩೭ ನೆಯ ದಿವಸ ಇಲ್ಲಿಯ ಶ್ರೀ ವೀರಭದ್ರ ದೇವಾಲಯದಲ್ಲಿ ವೇ. ಮೂ. ಶಿವರುದ್ರಯ್ಯ ಸ್ವಾಮಿ ಮಠದ ಇವರ ಅಧ್ಯಕ್ಷತೆಯ ಕೆಳಗೆ ಬಸವ ಮಹಾತ್ಮನ ವಿಷಯವಾಗಿ ಅನೇಕರ ಭಾಷಣಗಳಾದವು ಅನಂತರ ಪೆರವಣಿಗೆಯಾಯಿತು.ತಾ. ೩೮ ನೆಯ ದಿವಸ ಬಸವೇಶ್ವರ ಭಜನಾ ಸಂಘದವರಿಂದ ಮತ್ತೊಂದು ಪೆರವಣಿಗೆಯು ಹೊರಟು ಆ ದಿವಸ ಬಸವ ಸಂದೇಶ ಪುಸ್ತಕಗಳು ಹಂಚಲ್ಪಟ್ಟವು ಪ್ರತ್ಯಕ್ಷದರ್ಶಿ.

**ಚಡಚಣ**—ಪ್ರತಿವರುಷದಂತೆ ತಾ. ೩೮ ನೆಯ ದಿವಸ ಶ್ರೀ ವೀರಭದ್ರ ದೇವಾಲಯದ ಭವ್ಯ ಮಂಟಪದಲ್ಲಿ ಶ್ರೀ ಭಗವಾನ್ ಬಸವೇಶನ ಭಾವ ಚಿತ್ರವನ್ನಿಟ್ಟು ಶಾಸ್ತ್ರೋಕ್ತ ಪೂಜಿಸಲ್ಪಟ್ಟಿತು.

ಅದೇ ದಿವಸ ಮಧ್ಯಾಹ್ನದ ೫ ಘಂಟೆಯಿಂದ ೮ ಘಂಟೆಯವರೆಗೆ ಪಂಡಿತ ಶ್ರೀ ಕಂಠಶಾಸ್ತ್ರಿ ಅಮರಾರ್ಯ ಹಿರೇಮಠದ ನಲವಡಿ ಇವರು ಶಿವಭಕ್ತಿ ಪರವಾದ ಕೀರ್ತನವನ್ನು ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಹೇಳಿದರು.

ಕೂಡಲೇ ಶ್ರೀಯುತ ಶಿವನಗವಡಾ ವಾಟೇಲ ಇವರ ಅಧ್ಯಕ್ಷತೆಯ ಕೆಳಗೆ ಸಭೆ ನೇರಿ ಸಭೆಯಲ್ಲಿ ಶ್ರೀ ಕಂಠ ಶಾಸ್ತ್ರಿಗಳು ಮ ಜೀವರಾಜನೋಶಿ ಮಿ ವಿರ್ಲ ಬರಜೊಲ ಮ. ಮಳ್ಳಪ್ಪ ಯಳಮೇಲಿ ಮೊದಲಾದವರು ಭಕ್ತಿಭಾಂಡಾರಿಯೂ, ಆದ್ವೀತಿಯನೂ, ಶಿವಶರಣ ಪ್ರಿಯನೂ, ಸಮಭಾವವೃಕ್ಷವನೂ ಆದ ಭಗವಾನ್ ಶ್ರೀ ಬಸವೇಶ್ವರನ ಉದಾತ್ತ ತತ್ವವನ್ನು ಪೇಳಿದ ಮೇಲೆ ಶ್ರೀಯುತ ಹರ್ಡೀಕರ ಮಂಜಪ್ಪನವರು ತಯಾರಿಸಿದ ೫೦೦ ಶ್ರೀ ಬಸವ ಸಂದೇಶವೆಂಬ ಪುಸ್ತಕಗಳು ಸಭೆಯಲ್ಲಿ ಅಧ್ಯಕ್ಷರಿಂದ ಹಂಚಲ್ಪಟ್ಟವು. ಓರ್ವ ಪ್ರೇಕ್ಷಕ

**ಕೇರೂರ**—ಜಯಂತಿಯಲ್ಲಿ ಬಸವೇಶ್ವರ ದೇವರ ವರ್ಧಂತ್ಯುತ್ಸವ ಇದೇ ತಾರೀಖು ೩೮ ನೆಯ ಶುಕ್ರವಾರ ಪ್ರಾತಃಕಾಲಕ್ಕೆ ಶ್ರೀ ತೇರಿನ ಬಸವಣ್ಣನ ಗುಡಿಯಲ್ಲಿ ಗಣಾರಾಧನೆ ಬಡಿಗ್ಗರಿಗೆ ಅನ್ನಸಂತರ್ಪಣೆ ಸಾಯಂಕಾಲಕ್ಕೆ ಬಸವಣ್ಣನ ಫೋಟೋ ಪಾಲ್ಕಿಯಲ್ಲಿ ಇಟ್ಟು ಪೆರವಣಿಗೆಯಿಂದ ಅರ್ಧನಾರೀಶ್ವರ ದೇವರ ಗುಡಿಯವರೆಗೆ ಹೋಗಿ ಅಲ್ಲಿ ಕಾಯಿ ಕರ್ಪೂರ ಮಂಗಳಾರತಿ ಮಾಡಿ ಬಜಾರದಲ್ಲಿ ಉತ್ಸವದೊಂದಿಗೆ ಬಸವೇಶ್ವರ ಸ್ತೋತ್ರ ವಚನ ಪಠಣಕ್ಕೆ ಹೇಳುತ್ತ ರಾತ್ರಿ ೮ ಘಂಟೆಗೆ ಶ್ರೀ ರಾಮೇಶ್ವರ ಗುಡಿಯಲ್ಲಿ ವ್ಯಾಖ್ಯಾನ ಮಾಡಿ ಉತ್ಸವ ಸಮಾಪ್ತಿ ಮಾಡಿತು ಅದೇ ದಿವಸ [illegible] ಮುಕ್ತಾ ಮಿನಲ [illegible]

## ಹರಿಜನ ಸೇವಾಸಮಿತಿ ಹೈದರಾಬಾದ ಡೆಕ್ಕನ.

ಅಖಿಲಭಾರತೀಯ ಅಸ್ಪೃಶ್ಯತಾ ಸೇವಾಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಎಂ. ವಿ. ಥಕ್ಕರವರು ಎರಡು ತಿಂಗಳ ಮುಂದೆ ಹೈದರಾಬಾದಕ್ಕೆ ಆಗಮಿಸಿದರು. ಆಗ್ಗೆ ಅವರು ನಿಜಾಂ ರಾಜ್ಯದ ಎಷ್ಟೋ ಸ್ಥಳಗಳನ್ನು ಪರಿಶೋಧಿಸಿ ನೋಡಿ ಆಯಾ ಸ್ಥಳದಲ್ಲಿಯ ಆದಿಜನರ ಅನಾವಸ್ಥೆ ಮತ್ತು ಅವರ ಕಷ್ಟನಷ್ಟಗಳನ್ನು ಕಂಡು ಮನಸಿಗೆ ಬಹಳ ವಿಷಾದಮಾಡಿಕೊಂಡರು. ಜಾತಿಭೇದ, ಹರಿಕರಿ ದೆಂಬ ಅಂತರ್ ರೋಗವು ನಮ್ಮ ಹೃದಯದಿಂದ ಬೇರು ಸಹಿತ ಕಿತ್ತುವದಕ್ಕಾಗಿ ಅವರು ಹೈದರಾಬಾದ ನಗರದಲ್ಲಿ ಶ್ರೀ ವಾಮನ್ ನಾಯಕ್ ಜಾಗಿರದಾರ ಇವರ ಸ್ವಗೃಹದಲ್ಲಿ, ಎಲ್ಲಾ ಸಮಾಜ ಸುಧಾರಕರನ್ನು ಕೂಡಿಸಿ, ಅವರಿಗೆ ಎಲ್ಲಾ ಸಂಘಗಳು ಕೂಡಿ ಐಕ್ಯ ಮತದಿಂದ ಅಸ್ಪೃಶ್ಯತಾ ನಿವಾರಣೆಮಾಡಬೇಕೆಂದು ಹೇಳಿದರು. ಆದಕ್ಕೆ ಎಲ್ಲರು ಒಡಂಬಟ್ಟು ಮೇಲ್ಕಂಡ ಮಹನೀಯರ ಹೇಳಿಕೆಯಂತೆ ಒಂದು ಸಂಘವನ್ನು ಸ್ಥಾಪಿಸಿ **ಹರಿಜನ ಸೇವಾ ಸಮಿತಿ** ಎಂದು ಪ್ರಸಿದ್ಧಪಡಿಸಿದರು. ಈ ಸಂಘಕ್ಕೆ ಕೆಳಗೆ ವಿವರಿಸಿದ ಮಹನೀಯರನ್ನು ಕಾರ್ಯದರ್ಶಿಗಳನ್ನಾಗಿ ಸಭೆಯಲ್ಲಿ ನೇಮಿಸಲ್ಪಟ್ಟರು ವದು.

(೧) ಅಧ್ಯಕ್ಷ ಮಹಾಶಯರು- ವಾವ.ನ್ ನಾಯಕ ಜಹಾಗಿರದಾರ.

(೨) ಉಪಾಧ್ಯಕ್ಷರು- ಎಮ್ ಹನುಮಂತರಾವ ವಕೀಲ ಹಾಯಕೋರ್ಟ

(೩) ಆರ್. ನಾರಾಯಣ ರಡ್ಡಿ, ಬಸವಂತರಾವ ಕೊಪ್ಪಳ್, ಮತ್ತು ಜಿ. ಜಗನ್ನಾಥ ಮತ್ತು ಕೋಶಾಧಿಕಾರಿ ಎಂ. ಸತ್ಯ ನಾರಾಯಣ.

ಮೇಲ್ಕಂಡ ಮಹಾಶಯರೆಲ್ಲರೂ **ಈ ಸಂಘಕ್ಕೆ** ಮುಖ್ಯ ಕಾರ್ಯಕರ್ತರಾಗಿ ಚುನಾಯಿಸಲ್ಪಟ್ಟರು.

**ಈ ಸಂಘದ** ವ್ಯವಸ್ಥಾಪಕರು **ಈ** ಪ್ರಾಂತದ ೧೪ ಜಿಲ್ಲೆಗಳಲ್ಲಿಯೂ ಹೋಗಿ ಆದಿಜನರ ಮೇಲೆ ಪುರಾಣ ಕಾಲದಿಂದ ನಡೆದಿರುವ ಬಲಾತ್ಕಾರಗಳನ್ನು ಹೋಗಲಾಡಿಸಲು ತಮ್ಮ ತನುಮನ ಧನ ಸಹಿತ ಅರ್ಪಿಸಿದ್ದಾರೆ. ಇದು ಅಲ್ಲದೆ ಸ್ವಯಂಸೇವಕರು **ಈ** ಸಂಘಕ್ಕೆ ಪ್ರತಿನಿಧಿಗಳಾಗಿ ಹೈದರಾಬಾದ ನಗರಿನಲ್ಲಿ ಪ್ರತಿಯೊಂದು ಕೇರಿ ಓಣಿಗಳಲ್ಲಿ ನಿಂತು ವಾರಕ್ಕೆ ಎರಡುಸಾರಿ ಹೋಗಿ ಅಸ್ಪೃಶ್ಯರಿಗೆ ಸ್ವಚ್ಛತೆ, ವಿದ್ಯಾ, ನೀತಿ ಆಚಾರ ವಿಚಾರ, ಮದ್ಯಮಾಂಸ ನಿಷೇಧದ ನಲುವಾಗಿ ಪ್ರಯತ್ನಪೂರ್ವಕ ಕ್ರಾಂತಿ ನಡೆದಿರುವದು.

ನಾನು ಈ ಸಂಘಕ್ಕೆ ಕರ್ನಾಟಕ ಬಾಂಧವರ ಕಡೆಯಿಂದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟ ಕಾರಣ ನಾನು ಸದ್ಯಃ ಗುಲಬರ್ಗಕ್ಕೆ ಬಂದಿರುವೆನು. ನಾನು ಈ ಜಿಲ್ಲೆಯಲ್ಲಿ ಒಂದು ಮಾಸದವರೆಗೆ ಇದ್ದು ಮುಖ್ಯಮುಖ್ಯ ಸ್ಥಾನಗಳಲ್ಲಿ ಈ ಸಂಘದ ಬ್ರಾಂಚ ಆಫೀಸುಗಳನ್ನು ಸ್ಥಾಪನಮಾಡಲು ಪ್ರಯತ್ನ ನಡೆಸಿದ್ದೇನೆ.

ಬಸವಂತರಾವ ಕೊಪ್ಪಳ,
ಹರಿಜನ ಸೇವಾ ಸಮಿತಿ ಹೈದರಾಬಾದ ಡೆಕ್ಕನ್,
ಸೆಕ್ರೆಟರಿ.

## ಅಖಿಲಭಾರತ ವೀರಶೈವ ತರುಣಸಂಘ ಪರಿಷತ್ತು ಧಾರವಾಡ.

ಶ್ರೀಮದ್ವೀರಶೈವ ಮಹಾಸಭೆಯವರು ಸಮಾಜದ ತರುಣ ವೃಂದಕ್ಕೆ ಪ್ರೋತ್ಸಾಹ ಕೊಡಲಿಕ್ಕೆ ಮಹಾಸಭೆಯು ಕೊಡುವ ಕಾಲಕ್ಕೇನೇ ತಮ್ಮ ಆಶ್ರಯದಲ್ಲಿಯೇ ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ತರುಣರ ಪರಿಷತ್ತನ್ನು ಕರೆಯಬೇಕೆಂದು ಈಗ ಗೊತ್ತುಮಾಡಿದ್ದಾರೆ. ಪರಿಷತ್ತು ಇದೇ ಮೇ ತಿಂಗಳ ೧೫, ೧೬ನೇ ತಾರೀಖುಗಳಲ್ಲಿ ನೆರೆಯುವದು. ಹೊಸಗಾಲದ ಹೊಸಗಾಳಿಯು ವರಿಷತ್ತಿಗೆ ಹೊಸಕಳೆಯನ್ನು ಕೊಟ್ಟು ಹೊಸಜೀವನವನ್ನು ತೋರ್ಪಡಿಸುವುದೆಂಬದರಲ್ಲಿ ಸಂದೇಹವಿಲ್ಲ. ಇದೇ ಕಾಲಕ್ಕೆ ಮಹಿಳಾ ಪರಿಷತ್ತೂ, ಶಿಕ್ಷಣ ಸಮ್ಮೇಳನವೂ, ಕಲಾಪ್ರದರ್ಶನವೂ ಕೈ, ದಾನ ಶೂರ ಸಿರಸಂಗಿ ದೇಸಾಯಿಯವರ ಶಿಲಾಮೂರ್ತಿಯ ಅನಾವರಣ ಸಮಾರಂಭವೂ ಜರಗುವದರಿಂದ ಅನೇಕ ವಿಧವಿಧದ ಕಾರ್ಯಕ್ರಮಗಳು ನೆರವೇರುವವು. ವೀರಶೈವ ಸಮಾಜಪುರುಷನನ್ನು ಇಲ್ಲಿ ಮೂರ್ತಿಮತ್ತಾಗಿ ಕಾಣುವ ಅಪೂರ್ವ ಸಂಧಿಯು ದೊರೆಯುವುದು. ಆದ್ದರಿಂದ ದೇಶದ ಎಲ್ಲ ಭಾಗದ ವೀರಶೈವ ತರುಣರೂ ಹಾಗು ಸಮಾಜದ ಹಿತಚಿಂತಕರೂ ಪರಿಷತ್ತಿಗೆ ಅವಶ್ಯವಾಗಿ ಬಂದು ಅದನ್ನು ಯಶಸ್ವಿಯನ್ನಾಗಿ ಮಾಡಿ ಸಮಾಜೋದ್ಧಾರವನ್ನು ಸಾಧಿಸುವ ದೆಂದು ನಂಬುತ್ತೇವೆ.

ವಿಶೇಷವಾಗಿ ಈ ಸಾರೆಯ ಪರಿಷತ್ತಿನಲ್ಲಿ ತರುಣರೆಲ್ಲ ಮಧ್ಯ ವರ್ತಿ ಸಂಸ್ಥೆಯೊಂದನ್ನು ಏರ್ಪಡಿಸಿ ನಿರಾತಂಕವಾಗಿ ಕಾರ್ಯಗಳು ನಡೆಯುವಂತೆ ಮಾಡುವ ಆಲೋಚನೆಯೊಂದಿರುವದರಿಂದ ದೇಶದಲ್ಲಿಯ ಬೇರೆಬೇರೆ ಭಾಗದ ವೀರಶೈವ ತರುಣಸಂಘಗಳು ಹಾಗು ಅದೇ ಮಾದರಿಯ ಇನ್ನಿತರ ಸಂಸ್ಥೆಗಳು ತಮ್ಮ ಸಂಸ್ಥೆಗಳ ಯಾವತ್ತು ವರದಿಗಳನ್ನು ಕಳಿಸಿ ಹೆಚ್ಚು ಅನುಕೂಲಗಳನ್ನು ಮಾಡಿ ಕೊಡಲು ಬೇಡುವೆವು.

ಪರಿಷತ್ತಿಗೆ ಬರುವ ಪ್ರತಿನಿಧಿಗೆ ಎರಡು ರೂಪಾಯಿ ಪ್ರೇಕ್ಷಕರಿಗೆ ಎಂಟು ಆಣೆ ಪ್ರವೇಶ ಧನವನ್ನು ನಿರ್ಧರಿಸಿರುತ್ತದೆ. ಪ್ರತಿನಿಧಿಗಳಿಗೆ ಮಾತ್ರ ಮತಕೊಡುವ ಅಧಿಕಾರವುಂಟು. ಈ ರೂಪಾಯಿ ಅಥವಾ ಹೆಚ್ಚಿಗೆ ಕೊಡತಕ್ಕವರು ಪರಿಷತ್ತಿನ ಪೋಷಕರಾಗುವರು.

ಪ್ರತಿನಿಧಿಗಳಿಗೆ ಊಟದ ಮತ್ತು ಇಳಿಯಲು ಸ್ಥಳದ ಅನುಕೂಲತೆಗಳನ್ನು ಪುಕ್ಕಟೆಯಾಗಿ ಮಾಡುವದು. ಧಾರವಾಡ ಪಟ್ಟಣದ ಹವೆಯು ಮೇ ತಿಂಗಳ ಮಧ್ಯದಲ್ಲಿ ಆಹ್ಲಾದಕರವಿರುವದು. ಮಳೆಯ ಭಯವಿಲ್ಲ. ಆರೋಗ್ಯಕರವಾದ ನೀರು ವಿಪುಲವಾಗಿ ದೊರೆಯುತ್ತದೆ. ಬರತಕ್ಕ ಮಹನೀಯರು ಕಾರ್ಯದರ್ಶಿಗಳಿಗೆ ಮುಂದಾಗಿಯೇ ತಿಳಿಸಿದಲ್ಲಿ ವ್ಯವಸ್ಥೆ ಮಾಡಲು ಹೆಚ್ಚಿಗೆ ಅನುಕೂಲವಾಗುವದು.

---

ಬಿಟ್ಟುಬಿಡಬೇಕು, ಅಥವಾ ಬದಲಾಯಿಸಬೆ ಕೆಂಬದಾಗಿ ಯಾರೂ ನನಸಿಗೆ ಹೇಳಬಾರದೆಂಬುದನ್ನೇನೂ ನಾನು ತಿಳಿಸಬೇಕಾಗಿಲ್ಲ. ಈ ಉಪವಾಸವು ನಾನು ಮೇಲೆ ವರ್ಣಿಸಿದ ಪ್ರಕಾರ ಅಸ್ಪೃಶ್ಯರಿಗೆ ನನ್ನ ಕಡೆಗೆ ನಡೆದುಬಂದಿದೆ. ಆದ್ದರಿಂದ ನನ್ನ ಈ ವ್ರತಜ್ಞೆಯಿಂದ ನಾನು ಸುಖರೂಪವಾಗಿ ಪಾರುಗಾಣಬೇಕೆಂದೂ ಮತ್ತು ನಾನು ಒಂದು ಮೇಳೆ ಉಳಿಯಲಿ ಇಲ್ಲವೆ ಸಾಯಲಿ ಯಾವ ಕಾರ್ಯದ ಸಲುವಾಗಿ ನಾನು ಉಪವಾಸ ಮಾಡಿರುವೆನೋ ಆ ಕಾರ್ಯವು ಉತ್ಕರ್ಷವಾಗಬೇಕೆಂದೂ ನನ್ನ ಸಲುವಾಗಿ ಪರಮೇಶ್ವರನಲ್ಲಿ ಪ್ರಾರ್ಥನೆ ಮಾಡಲು ನನ್ನ ಹಿಂದುಸ್ತಾನದ ಮತ್ತು ಜಗತ್ತಿನಲ್ಲಿಯ ಎಲ್ಲ ಮಿತ್ರರಿಗೆ ನಾನು ವಿಜ್ಞಾಪಿಸಿಕೊಳ್ಳುತ್ತೇನೆ.

ಮತ್ತು ನನ್ನ ಉಪವಾಸದ ಫಲನಿಷ್ಪತ್ತಿಯು ಏನೇ ಆಗಲಿ ಸತ್ಯದ ಮೇಲಿನ ಹೊನ್ನಿನ ಹೊದಿಕೆ ದೂರಾಗಲೆಂದು ಪ್ರಾರ್ಥನೆ ಮಾಡಲು ನಾನು ನನ್ನ ಸನಾತನಿ ಮಿತ್ರರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಯರವಡಾ
ಸೆಂಟ್ರಲ್ ಪ್ರಿಝನ್, ಮಹಾತ್ಮಾ ಗಾಂಧಿ.
೬ ಎಪ್ರಿಲ್ ೧೯೪೩.

# ವಿವಾಹ ಸಂಸ್ಕಾರ.

## ನವಯುವಕರಲ್ಲೊಂದು ವಿನ್ನಹ

(ಬರೆದವ:— ಎಮ್. ಬಿ. ಬಸವಂತ ಅಸಿ ಗಂದಿವಾಡ.)

ಅಖಿಲ ಪ್ರಾಣಿಮಾತ್ರರಿಗಾಗಿ ಹದಿನಾರು ಸಂಸ್ಕಾರಗಳು ಮನುಸ್ಮೃತಿಯಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇವುಗಳಲ್ಲೊಂದು ಈ ವಿವಾಹ ಸಂಸ್ಕಾರವು. ಇದು ರೂಢಿಯಲ್ಲಿ ಬರುವ ಮೊದಲು ಸ್ತ್ರೀ ಪುರುಷ ನಿಲನಕ್ಕೆ ಯಾವ ತರದ ತಡೆಯಿದ್ದಿಲ್ಲ ಉಪವರಳಾದ ಸ್ತ್ರೀಯಲ್ಲಿ ಕಾಮವಾಸನೆಯುತ್ಪನ್ನವಾಗಲು ಅವಳ ಪುರುಷನ ಗೂಡ ಕ್ರೀಡಿಸುತ್ತಿದ್ದಳು. ವಿವಾಹ ನಿರ್ಬಂಧವಿರದ್ದರಿಂದ ಸ್ತ್ರೀಯರು ಈ ವಿಷಯದಲ್ಲಿ ಸ್ವತಂತ್ರರೂ, ಅನಾವೃತರೂ ಆಗಿದ್ದರು. ಈ ಅಚಾರದ ದುಷ್ಪರಿಣಾಮದಿಂದ ಸಮಾಜವು ದುರ್ಗತಿಗೀಡಾಗುತ್ತಿರುವುದನ್ನು ಕಂಡು ಶ್ವೇತಕೇತು ಮುನಿಯು ವಿವಾಹ ಮರ್ಯಾದೆಯನ್ನು ಕಲ್ಪಿಸಿದನು. (ಮ. ಭಾ. ಆ. ೧೨೨) ಅಂದಿನಿಂದ ವಿವಾಹವಿಲ್ಲದೆ ಆವ ಸ್ತ್ರೀ ಸಂಭೋಗವು ಅನೀತಿಕಾರಕ ಹಾಗೂ ಪಾಪ ಕಾರಕವೆಂದು ತಿಳಿಯಲ್ಪಟ್ಟು ವ್ಯಭಿಚಾರದಲ್ಲಿ ಅವರ ಗಣನೆಯಾಯಿತು.

ಮನುಷ್ಯ ಸಮಾಜವು ಹೆಜ್ಜೆಚ್ಚು ಪ್ರಗತಿಯನ್ನು ಪಡೆದಂತೆ ವಿವಾಹಸಂಸ್ಕಾರದಲ್ಲಿಯೂ ಬದಲಾವಣೆಯಾಗುತ್ತ ಮನುಮಹರ್ಷಿಯ ಕಾಲದಲ್ಲಿ ಇದು ಹೆಚ್ಚು ವಿಶಾಲತ್ವವನ್ನು ಹೊಂದಿ ಬ್ರಾಹ್ಮ, ದೇವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪಿಶಾಚ, ಎಂಬ ಎಂಟುತರದ ವಿವಾಹ ರೂಢಿಗಳು ಆಗ ಬಳಿಕೆಯಲ್ಲಿದ್ದವೆಂಬದು, ಮನುಂ ೩ ಅಧಿ ರಿಂದ ಸ್ಪಷ್ಟವಾಗುತ್ತದೆ

ಮೇಲೆ ವಿವರಿಸಿದ ಎಂಟುತರದ ವಿವಾಹಗಳಲ್ಲಿ ಬ್ರಾಹ್ಮಾದಿ ನಾಲ್ಕು ವಿವಾಹ ಸಂಸ್ಕಾರಗಳ ಅತಿರಿಕ್ತ ಆಸುರಾದಿ ವಿವಾಹ ರೂಢಿಗಳು ನಿಂದಿತ, ಹಾಗೂ ನಿಕೃಷ್ಟವಾದವುಗಳಾಗಿವೆ. ಈ ನಿಂದಿತ ವಿವಾಹ ಸಂಸ್ಕಾರದ ಪರಿಣಾಮವು ಭಾವೀ ವಧೂವರರ ನೇಲಾಗಿ ಅವರಿಂದ ಮುಂದೆ ಜನಿಸುವ ಮಕ್ಕಳು ನಿರ್ದಯಿ, ಮಿಥ್ಯಾವಾದಿ, ವೇದನಿಂದಕ. ಮತ್ತು ಧರ್ಮದ್ವೇಷಿಗಳಾಗುತ್ತವೆ.

ಅನಿಂದಿತೈಃ ಸ್ತ್ರೀವಿವಾಹೈರನಿಂದ್ಯಾಭವತಿ ಪ್ರಜಾ|
ನಿಂದಿತೈರ್ನಿಂದಿತಾನೃಣಾಂ ತಸ್ಮಾನ್ನಿಂದ್ಯಾನ್ವಿವರ್ಜಯೇತ್॥

ಎಂದು ಖಡಾಖಡಿಯಾಗಿ ಮೇಕರಿಸುತ್ತಾನೆ.

ಸದ್ಯಃ ವೀರಶೈವರಲ್ಲಿ ಅಖಿಲ ಹಿಂದುಗಳಲ್ಲಿ ಬಳಿಕೆಯಲ್ಲಿರ್ದ್ದುದ್ದು ಆಸುರೀ ವಿವಾಹವು. ತೆರವು (ವರನ ಪಕ್ಷದವರಿಂದ ತೆಗೆದುಕೊಳ್ಳುವ ಹಣ) ಕೊಟ್ಟು ಕನ್ಯಾಗ್ರಹಣ ಮಾಡುವದು ಆಸುರೀ ವಿವಾಹವೆಂದು ಮನು ೩ ಅಧಿರಲ್ಲಿ ಉಲ್ಲೇಖವಾಗಿದೆ. ಅದರಂತೆ ವರದಕ್ಷಿಣೆ (ಕನ್ನೆಯ ಪಕ್ಷದವರಿಂದ ತೆಗೆದುಕೊಳ್ಳುವ ಹಣ) ತೆಗೆದುಕೊಂಡು ಕನ್ಯಾಗ್ರಹಣ ಮಾಡುವುದಾದರೂ ಆಸುರೀ ವಿವಾಹವೇ.

ಕುಮಾರಿ ಕನ್ಯೆಯು ಶ್ರೀ ಜಗನ್ಮಾತೆಯ ಪ್ರತಿರೂಪವೆಂದು ಶಾಸ್ತ್ರಗಳು ಸಾರಿ ಹೇಳುತ್ತಲಿವೆ ರನ್ನನೆಂದು ಸ್ಮೃತಿಗಳು ಹೊಗಳುತ್ತಿವೆ. ಆದರೆ ವಿವಾಹವೆಂಬ ಪವಿತ್ರ ಸಂಸ್ಕಾರದ ನಿಮಿತ್ತವಾಗಿ ಹಣಕೊಟ್ಟು ಇಲ್ಲವೆ ಹಣತೆಗೆದುಕೊಂಡು ಕನ್ಯಾಗ್ರಹಣ ಮಾಡುವದು ವಿವಾಹ ಸಂಸ್ಕಾರವಲ್ಲ. ಕೊಳ್ಳುವ ಮಾಡುವ ಇದೊಂದು ವ್ಯವಹಾರವು ಶ್ರೀ ಜಗನ್ಮಾತೆಯ ಅವಮಾನವು. ಸಾಮಾಜಿಕ ದುರ್ದೆಶೆಯು. ಇಷ್ಟೇ ಅಲ್ಲ ಧರ್ಮಧ್ವಂಸಕಾರಿ ಕಾರ್ಯವು.

"ಶಕ್ಷಶಿಲೆಯ ವೇಟಿಯಲ್ಲಿ ಎಷ್ಟೋ ರಾಜರು ತಮ್ಮ ಹೆಣ್ಣುಮಕ್ಕಳನ್ನು ಮಾರಾಟಕ್ಕೆ ತರುತ್ತಿದ್ದರು." ಎಂದು ಯಾತ್ರಾನಿ ಪ್ರವಾಸಿಯಾದ ಮೆಗಾಸ್ಥನೀಸನು ಉಲ್ಲೇಖಿಸಿರುವನು. ಆ ಕಾಲದಲ್ಲಿ ಆಸುರೀ ವಿವಾಹವು ಬಳಿಕೆಯಲ್ಲಿದ್ದದ್ದೇನೋ ನಿಜ. ಆದರೆ ಈ ಪದ್ಧತಿಯು ಈ ಕಾಲದಲ್ಲಿ ಬಹು ಭೀಕರ ಸ್ವರೂಪವನ್ನು ಹೊಂದಿದೆ ಕೆಲಕೆಲವೆಡೆಯಲ್ಲಂತೂ ಹೆಣ್ಣುಮಕ್ಕಳ ಲಿಲಾವಿನ ಬೆಲೆಯು ಅಳತೆಗೆಟ್ಟಿವೆ. ಒಬ್ಬನ ತರುವಾಯ ಮತ್ತೊಬ್ಬನಿಗೆ, ತರುವಾಯ ಇನ್ನೊಬ್ಬನಿಗೆ ಮಾರುವ ಪರಿವಾಠವು ಹಿಂದೂ ದೇಶವನ್ನೇ ವ್ಯಾಪಿಸಿದೆ ಎಂಬುದು ಓದುಗರರಿಯದ ವಸ್ತುವಲ್ಲ

ಕನ್ಯೆಯ ತಂದೆಗೆ ಒಂದು ಆಕಳನ್ನಾಗಲಿ, ಎತ್ತನ್ನಾಗಲಿ ಕೊಟ್ಟ ಕನ್ಯಾಗ್ರಹಣ ಮಾಡುವದು ಆರ್ಷ ವಿವಾಹವು. ಉಳಿದ ಯಾವ ತರದ ಕೊಡ ತಕ್ಕೊಳ್ಳುವ ವ್ಯವಹಾರವಲ್ಲಿಲ್ಲ. ಈ ಪವಿತ್ರ ಸಂಸ್ಕಾರವನ್ನು ಹೊಂದಿದ ದಂಪತಿಗಳಿಂದ ಜನಿಸುವ ಸಂತಾನವು ಹಿಂದಿನ ಹಾಗೂ ಮುಂದಿನ ಮೂರ ತಲೆಗಳನ್ನುದ್ಧರಿಸುವದೆಂದು ಮನು. ೩ ಅಂಶರಲ್ಲಿ ಹೇಳಲ್ಪಟ್ಟಿದೆ.

ಬ್ರಾಹ್ಮಾದಿ ವಂದಿತ ವಿವಾಹಗಳು ಬಳಿಕೆಯಲ್ಲಿರದ್ದರಿಂದಲೂ, ಆಸುರಾದಿ ನಿಂದಿತ ವಿವಾಹಗಳಿಗೆ ಹಿಂದುಗಳು ಎಡೆಗೊಟ್ಟಿರುವದರಿಂದಲೂ, ಹಿಂದೂ ಸಮಾಜವು ಕಟ್ಟುಗೆಟ್ಟು ಭಾವೀ ಹಿಂದು ಸ್ಥಾನದ ಅಧಃಪತನಕ್ಕೆ ಕಾರಣವಾಗಿರುವದು. ವಿವಾಹ ಕಾಲದಲ್ಲಿ ಹಣವನ್ನು ಕೊಡತಕ್ಕೊಳ್ಳುವ ಈ ವರ್ತನವು ಉಚ್ಚ ಹಾಗೂ ಪವಿತ್ರವಾದ ವಿವಾಹಸಂಸ್ಕಾರವನ್ನು ಭ್ರಷ್ಟವಾಡಿ, ಭಾರತೀಯರನ್ನು ನಿರ್ವೀರ್ಯರನ್ನಾಗಿ ಮಾಡಿದೆ. ಶ್ರೀ ಜಗನ್ಮಾತೆಯ ಪ್ರತಿರೂಪವಾದ ಕನ್ಯಾರತ್ನವನ್ನು ಅವಮಾನಗೈಯುತ್ತಿರುವದರಿಂದ ಶ್ರೀ ಭುವನೇಶ್ವರಿಯ ಕರುಣಾಕಟಾಕ್ಷಕ್ಕೆ ನಾವು ಎರವಾಗಿದ್ದೇವೆ. ಎರವಾಗುತ್ತಲಿದ್ದೇವೆ. ಇರಲಿ ಹಿಂದಾದದ್ದನ್ನು ನೆನೆ ನೆನೆದು ಹಳಹಳಿಸುವ ಹೊತ್ತು ಇದಲ್ಲ. ಆದುದರಿಂದ ನನ್ನ ಅವಿವಾಹಿತ ನವಯುವಕ ಬಂಧುಗಳೇ, ಎದ್ದೇಳಿ, ಉಚ್ಚತರವಾದ ವಿವಾಹ ಸಂಸ್ಕಾರವನ್ನು ಹೊಂದಿ ನೀತಿವಂತ, ಹಾಗೂ ಬಲವಂತ ಸಂತಾನವನ್ನು ಪಡೆಯಿರಿ. ರಾಷ್ಟ್ರ, ಹಾಗೂ ಸಮಾಜದ ಸೂತ್ರಗಳು ಇನ್ನುಮುಂದೆ ನಿಮ್ಮ ಕೈಯಲ್ಲಿ ಬರುವವು. ರಾಷ್ಟ್ರದ ಮುಂದಿನ ಜಯಾಪಜಯಗಳು ನಿಮ್ಮ ಪೀಳಿಗೆಯನ್ನವಲಂಬಿಸಿವೆ. ತೆರವು ವರದಕ್ಷಿಣೆಗಳ ತಾಕಲಾಟದಲ್ಲಿ ತಿಲುಕಿ ನುಗ್ಗಾಗುತ್ತಿರುವ ವಿವಾಹ ಸಂಸ್ಕಾರದ ಪುನರುಜ್ಜೀವನ ಗೈಯ್ಯಬೇಕೆಂದು ನಿಶ್ಚಯಿಸಿ ತೆರವು ವರದಕ್ಷಿಣೆಗಳ ಸುಳುವನ್ನಡಗಿಸಲು ಟೊಂಕಕಟ್ಟಿರಿ. ವಿವಾಹ ಕಾಲದಲ್ಲಿ ಮಿತವ್ಯಯಿಗಳಾಗಿರಿ ಮೊದಲೇ ಆರ್ಥಿಕ ಬಾಧೆಯಿಂದ ಬೆಂದುಬೆಂಡಾಗುತ್ತಿರುವೆವಾದುದರಿಂದ ದುಂದುಗಾರರಾಗಬೇಡಿರಿ. ಇನ್ನು ಮೇಲೆ ಪಶುಗಳಂತೆ ನಮ್ಮ ಹೆಣ್ಣುಮಕ್ಕಳನ್ನು ಮಾರಲಾರೆವು. ಮತ್ತೂ ಕನ್ಯಾ ಪಕ್ಷದಿಂದ ಏನೂ ತೆಗೆದುಕೊಳ್ಳದೆ ಕನ್ಯಾಗ್ರಹಣ ಮಾಡುವೆವು. ಎಂದು ಪಣತೊಟ್ಟು ಸಮಾಜ ಶಕಟವನ್ನು ಸರಿಯಾದ ದಾರಿಯಿಂದ ಸಾಗಿಕೊಂಡೊಯ್ದು ಧರ್ಮ ಹಾಗೂ ರಾಷ್ಟ್ರದ ಕಲ್ಯಾಣ ಮಾಡೀರೆಂದು ನಿರೀನಂಬಿರುವೆನು.

---

ಪರಿಷತ್ತಿಗೆ ಸ್ವಯಂಸೇವಕರಾಗಲಿಚ್ಛೆಯುಳ್ಳವರು ಮೇ ತಿಂಗಳ ಒಳಗೇ ತಾರೀಖಿನೊಳಗಾಗಿ ಕಾರ್ಯದರ್ಶಿಗಳಿಗೆ ತಮ್ಮ ಹೆಸರು ಒಕ್ಕಣಿಕೆಯನ್ನು ತಿಳಿಸಬೇಕು ಹಾಗೂ ಗೊತ್ತಿನೇ ತಾರೀಖಿನೊಳಗಾಗಿ ಧಾರವಾಡಕ್ಕೆ ಬರಬೇಕು.

ಧಾರವಾಡವು ಎಮ್. ಎಸ್. ಎಮ್. ಪೂನಾ, ಬೆಂಗಳೂರ. ಮಾರ್ಗದಲ್ಲಿ ಇರುವ ದೊಡ್ಡ ಸ್ಟೇಶನ್ನುಳ್ಳ ಸ್ಥಳವು.

ಸೂಚನೆ—ಪರಿಷತ್ತಿನ ಅಧ್ಯಕ್ಷರ ಹೆಸರನ್ನೂ, ಚರ್ಚಿಸುವ ವಿಷಯಗಳನ್ನೂ ಕಾರ್ಯಕ್ರಮಗಳ ದಿವಸ ವೇಳೆಗಳನ್ನೂ ಹಿಂದಿನಿಂದ ತಿಳಿಸಲಾಗುವದು ಧಾರವಾಡ ತಾ. ೫-೪-೧೯೩೩.

ತಮ್ಮ,
ಬಿ. ಎಸ್. ಬಸವನಾಳ, ಬಿ. ಎ. ಎಲ್. ಎಲ್. ಬಿ.
ವಕೀಲ ಅಧ್ಯಕ್ಷರು.
ತರುಣ ಪರಿಷತ್ತು ಕರ್ನಾಟಕ ಆರ್. ೨
ಗೌರವ ಕಾರ್ಯದರ್ಶಿ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಪುತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಆಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. ಹೀಗಿದ್ದರೂ ಬಹು ಅಗ್ಗ.

ಆದುದರಿಂದಲೇ ಈ ವಸ್ತ್ರಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಪೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಒರೆಯಿರಿ

ಏಜಂಟ-
**ಶಿವಸಂಗಪ್ಪಣ್ಣ ಕುಪಸ್ತ,**
**ಬಾಗಲಕೋಟಿ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )

## ರಮಲ ವಿದ್ಯಾ ರಹಸ್ಯ.

ಈ ಪುಸ್ತಕವಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
**ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಚೇಳಿನ ನಾಶ— ೧೧ ,,
೧೨ ತಗಣಿ ಶತ್ರು ಬಾಟ್ಲಿ— ೭ ,,
೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಸುವೆವು

**ಭಾಸ್ಕರ ಪ್ರಕಾಶ ವರ್ಕ್**
ಪೋ. **ಹಂಚಿಲಿ**
**ತಾ. ವಿಜಾಪುರ.**

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಿರದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಕಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ **ಅತಿ ಸಮೀಪ** ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ವೈಷ್ಣಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
**ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬರಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

**" ಕಚರ್ಯ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಚಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಚ್ಛವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಲ್‌ಕೇಜ್ ಕೋರ್ಟಿಗೂ ಸಮುದ್ರದಢಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಹೊಸಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮಧ್ಯಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhamraddi.
ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ.**



# ಜಯಕರ್ನಾಟಕ

**ಕರ್ನಾಟಕದ ಪ್ರಮುಖ ಮಾಸಪತ್ರಿಕೆ.**

ವಾರ್ಷಿಕ ಚಂದಾ ೫-೮-೦

## ನಾಟ್ಯಾಂಕ

ನವವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ಪ ಪ್ರಚುರ ಲೇಖಗಳವೆ.

**ಹೊಸ ಸೌಲಭ್ಯಗಳು: —**

ಬೆಲೆ ೧೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ.

**ಹೊಸ ಚಂದಾದಾರರಿಗೆ ಉಚಿತ.** ತ್ವರೆಮಾಡಿರಿ.

## ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ ೩-೪-೦ [ಮೇಲೊಂದು ಉಚಿತಪುಸ್ತ

**ಜ. ಕ. ಚಂದಾದಾರರಿಗೆ ೩ ರೂ.**

ಮೂರನೆಯ ವರ್ಷದ ಅಯ್ದನೆಯ ಪುಸ್ತವಾದ

**ಹಲವು ಪ್ರಸಿದ್ಧ ಕತೆಗಾರರ ಸರಸವಾದ**

ಇದೀಗ ಹೊರಟಿದೆ ] **ನೀಳ್ಗತೆಗಳು!** [ಬೆಲೆ ಹನ್ನೆರಡು ಆಣೆ.

**ಜಯಕರ್ನಾಟಕ ಕಾರ್ಯಾಲಯ**
**ಧಾರವಾಡ.**



# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೈಲ್ಲಾ ಸನ್ಮೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಿದಿಧ್ಯಾಸನೆಮಂಗೊಳ್ಳುವಂತೆ ಸ್ವಪೇಕ್ಷಿಸಿ ಸಂಧಾನಿಸಲೆಂದೆ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಿಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾರೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

**ಜಿ. ಎಸ್. ಗಂಗಾಧರಯ್ಯ,**
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

# ಶರಣ ಸಂದೇಶ.

ಸಂಪಾದಕರು:-

ಹರ್ಡೀಕರ್ ಮಂಜಪ್ಪನವರು.

ಶ್ರೀ ಬಸವಾದಿ ಪ್ರಮಥರ
ತತ್ವಗಳನ್ನು
ಹಿಂದು ಸಮಾಜದೇಳಿಗೆಯ
ರೀತಿನೀತಿಗಳನ್ನು
ಪ್ರಸಾರಗೊಳಿಸುವ
ವಾರಪತ್ರಿಕೆ
ಕನ್ನಡದಲ್ಲಿ ಇದೊಂದೇ.

ವಾರ್ಷಿಕ ಚಂದಾ:-
ಅಂಚೆಯ ವೆಚ್ಚ ಸೇರಿ
೩. ರೂ. ಗಳು.

ಜಾಗ್ರತಿ ಚಂದಾದಾರರಾಗಿರಿ.

ಮ್ಯಾನೇಜರ್:- ಶರಣ ಸಂದೇಶ.
ಪೋ. ಆಲಮಟ್ಟಿ ಜಿ. ವಿಜಾಪುರ.



ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ
ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒನ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.



# ಖಾದಿಯ ಕೊಂಡು
ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು
ಗಾಂಧಿಯವರು
ತೋರಿಸಿದ
ಖಾದಿಯೇ ಹಾದಿಯು.

ನಿಮ್ಮ ಮೈಮೇಲೆ
ಖಾದಿ ಬಂದರೆ
ಬಡವರ ಕೈಮೇಲೆ
ಕಾಸು ಬರುವದು.



# ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ವಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ' ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ ಗುಲಬರ್ಗಾ.



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೀಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

# ವೀರಶೈವ

# ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ
ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ
ಈ ಮಹಾಪುರುಷರ ಕಾಲಮಾನವನ್ನು ಕುರಿತು
ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

ಲಳ ಪುಟಗಳು. ಅಂದವಾದ ಮುದ್ರಣ.

**ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.**

**೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ**

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟೇಜ್ ಸಹಿತ ಟಿಕೀಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಆಲಮಟ್ಟಿ
ಪೋ. ಆಲಮಟ್ಟಿ ಜಿ. ವಿಜಾಪುರ

ಶ್ರೀ ಬಿ. ವಿಶ್ವನಾಥಪ್ಪ ಮುಂಡಿ ಮರ್ಚಂಟ್ಸ್
ಚಾಮರಾಜಪೇಟೆ, ಬೆಂಗಳೂರು ಸಿಟಿ.


## ಸ್ಥಳೀಯ ಸಂಸ್ಥೆಗಳ ಪತ್ರಿಕೆ.

**ಪ್ರತಿ ತಿಂಗಳ ತಾ॥ ೧ ಮತ್ತು ೧೫ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.**

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖನಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

**ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.**

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

**ವಾರ್ಷಿಕಚಂದಾ:**— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.
ವಿಳಾಸ:— ಟಿ. ಯ್. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

## ವೀರಶೈವ ಮತಬೋಧೆ.

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ **ವೀರಶೈವ ಮತಬೋಧೆ** ಎಂಬ ಪುಸ್ತಕವನ್ನು ತೆಲುಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು.

**—ಬೆಲೆ ಒಂದಕ್ಕೆ ೩ ಆಣೆ. —**

ಮ್ಯಾನೇಜರ ಜ್ಞಾನೋದಯ ಗ್ರಂಥ ಭಾಂಡಾರ ಪೋ. ಆಲಮಟ್ಟಿ. ಜಿ. ವಿಜಾಪುರ.
ಜಿ. ವೀರಭದ್ರಪ್ಪ. ಮನೆ ನಂ. ೩೧೩೬. ಚುಡಿಬಝಾರ್ ಹಲಕಾ (ಡಿ) ಹೈದರಾಬಾದ. (ದಖ್ಖ)

# ದಿ ಸ್ವರಾಜ್ಯ ಬ್ಯಾಂಕಿಂಗ
## ಮತ್ತು
# ಇನ್ಶೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

## ರೂ. ೭೦೨-೧೧-೫. ಕ್ಲೇಮು.

೧೯೩೫ ನೇ ಇಸ್ವಿಯ ೮ ತಿಂಗಳುಗಳಲ್ಲಿಯೇ
ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.
ಡಿಸೆಂಬರ ಒಂದೇ ತಿಂಗಳಲ್ಲಿ ರೂ. ೧೬೦೧—೫—೦೦ ಕ್ಲೇಮು ಹಣವನ್ನು ಕೊಡಲಾಗಿದೆ.
ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ
ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦
ತಿಂಗಳ ಕಂತು .... .... ರೂ. ೧-೦-೦
ವಾರ್ಷಿಕ ಫೀ .... .... ರೂ. ೧-೦-೦

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ.
ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ
ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ
ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶೂರನ್ಸ ಕಂ., ಲಿ.
ಧಾರವಾಡ.

ಸೂಚನೆ:- ಲಾಯಿಫ ಇನ್ಶೂರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು.
ಏಜಂಟರಾಗಿ ಕೆಲಸ ಮಾಡಲು ಇಚ್ಛೈಯುಳ್ಳವರು ಈ ತಿಂಗಳ ಅತ್ಯೈರದೊಳಗಾಗಿಯೇ
೧೯೩೬ ನೇ ಇಸ್ವಿ ಅಪೈರದೊಳಗಾಗಿ ಎಷ್ಟು ಬಿಜಿನೆಸ್ಸು ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

EXCELLENT GET-UP! NOW ON SALE BEAUTIFUL PRINT!

Recommended by the Government of Mysore for High-School Libraries in the Mysore State.

## WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of
HISTORY
Price As. 8. Postage Free.

Can be had from:—
Jeerage K. Basavappa B. A.
2, Cotton pet, BANGALORE city.
SOUTH INDIA.



REGISTERED No. B. 2891.

# ಶರಣಸಂದೇಶ

The

# Sharana Sandesh.

ನ್ಯಾಯನಿಷ್ಠುರ। ಧಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾದಾಗಲೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಲಿಪನಾಗಿ ॥ ವ. ೨೨೯ ॥ ಮಹಾನುಭಾವಿ **ಬಸವಣ್ಣ**ನವರು.

ಸಂಪಾದಕರು:-
**ಆ. ಹರ್ಡೀಕರ ಮಂಜಪ್ಪನವರು.**

ಬಿಡಿಸಂಚಿಕೆಗೆ ೧ ಆಣೆ.
**ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.**

ಪ್ರತಿ ಸೋಮವಾರವೂ ಪ್ರಕಟವಾಗುವುದು.

**ಸಂಪುಟ ೪.** | **ಆಲಮಟ್ಟಿ- ಸೋಮವಾರ ತಾರೀಖು ೨೭ ನೆಯ ಅಗಸ್ಟ ೧೯೩೪.** | **ಸಂಚಿಕೆ ೨.**

ಜನಸೇವೆಯೇ ದೇವರ ಸೇವೆ.

ರಾಷ್ಟ್ರವೀರ

## ಪಂ. ಜವಾಹರಲಾಲರ ಬಂಧನ.

### ವೀರಮಾತೆಯ ಹೃದಯದ್ರಾವಕ ನಿರೋಪ.

### ಸೌ. ಕಮಲಾ ನೆಹರು ಇವರ ಪ್ರಕೃತಿಯು ಇನ್ನೂ ಗುಣವಾಗಿಲ್ಲ.

**ಸೌ. ಕಮಲಾ ನೆಹರು ಇವರ ಪ್ರಕೃತಿಯು ಅಸ್ವಸ್ಥವಾದುದರಿಂದ ಪಂ. ಜವಾಹರಲಾಲರು ತಾತ್ಪೂರ್ತಿಕವಾಗಿ ಬಿಡುಗಡೆ ಹೊಂದಿದ್ದರಷ್ಟೆ. ಆದರೆ ಕಳೆದ ೨೩ನೆಯ ತಾರೀಖಿನ ದಿನಸ ಪಂ. ನೆಹರು ಇವರು ಪುನಃ ಬಂಧಿಸಲ್ಪಟ್ಟು ನೈನಿತಾಲ ಕಾರಾಗೃಹಕ್ಕೆ ಕಳಿಸಲ್ಪಟ್ಟರು. ಅವರು ಮೋಟಾರಿನಲ್ಲಿ ಕುಳಿತುಕೊಳ್ಳುವಾಗ ಪ್ರೇಮಲ ಮಾತೆಯಾದ ಶ್ರೀ ಸ್ವರೂಪರಾಣಿ ನೆಹರು ಇವರು ಮುಖ್ಯ ದ್ವಾರದಲ್ಲಿ ನಿರೋಪ ಕೊಟ್ಟರು. ಪಂಡಿತರ ಬಂಧನವನ್ನು ತಿಳಿದು ಸೌ. ನೆಹರು ಇವರು ಶಾಂತಮನಸ್ಸಿನಿಂದ ಹೋಗಬಿಟ್ಟರು. ಅವರ ಜ್ವರದ ಉಷ್ಣತೆಯು ಇನ್ನೂ ೧೦೦ ಅಂಶಗಳವರೆಗೆ ಇದೆ.**

SANGAM CLOTH STORES
Prop: M. S. Hundekar & Sons,
P.O: TERDAL – 587 315
Dt. Bijapur (Karnataka)

ದೇವರೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಠ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಬವ್ಯಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಡಾ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

**ರಾಮಜಿ**— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

**ಶೆಟ್ಟರು**— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

**ರಾಮಜಿ**—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

**ಶೆಟ್ಟರು**—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

**ರಾಮಜಿ**—ಹಾಗಾದರೆ ಹೀಗ್ಯಾಕಾಯಿತು?

**ಶೆಟ್ಟರು**—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

**ರಾಮಜಿ**—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ವರ್ಸದಾಗ ನಮ್ಮ ಧಾರವಾಡದಾಗ, ಗದಗದಾಗ, ಹುಬ್ಬಳ್ಳಿಯಾಗ ಬಿಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

**ಶೆಟ್ಟರು**—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ದೇವೀಪುರಾಣ ಬೆಲೆ ರೂ. ೪-೦-೦ (ರೋಣದ ಪ್ರತಿ)

# ಚಿತ್ರ) ವೀರಶೈವ ಕರದರ್ಪಣವು. (೩೦೦ ಚಿತ್ರ

ಈ ಪುಸ್ತಕದಲ್ಲಿ ವೀರಶೈವ ಮತತತ್ವ ನಿರೂಪಣೆ, ವೀರಶೈವ ಧರ್ಮದ ವಿಶಾಲತ್ವ, ವೀರಶೈವ ಬ್ರಾಹ್ಮಣ್ಯ ಸಿದ್ಧಾಂತ, ವೀರಶೈವ ಪಂಚಪೀಠಗಳು, ಪಂಚಪೀಠಗಳು, ಶ್ರೀ ಬಸವೇಶ್ವರ, ಮಹಾನುಭಾವರಾದ ಶ್ರೀ ಬಸವಣ್ಣನವರು ಮಹಿಮಾಶಾಲಿಯಾದ ಬಸವೇಶ್ವರರು, ಬಸವಜಯಂತಿ, ಜಗದ್ಗುರು ಜಯದೇವ ಮುರುಘಾರಾಜೇಂದ್ರ ಸ್ವಾಮಿಗಳು, ಜಗದ್ಗುರು ಜಗದಾಚಾರ್ಯಸ್ವಾಮಿ ವಿರುಪಾಕ್ಷ ಒಡೆಯರವರು, ಅ. ಭಾ. ವೀರಶೈವ ಮಹಾಸಭೆಯು, ವೀರಶೈವ ಮಹನೀಯರು, ವೀರಶೈವ ಸಂಸ್ಥೆಗಳು ಮೊದಲಾದ ವಿಷಯ ಸಂಗ್ರಹವಿರುವುದರಿಂದ ಇದನ್ನು ಸರ್ವರೂ ಸಂಗ್ರಹಿಸತಕ್ಕದ್ದು. ಬೆಲೆ ರೂ. ೧-೪-೦.

ಹಾನಗಲ್ ಕು. ಸ್ವಾಮಿ ಸ್ಮಾರಕಚಂದ್ರಿಕೆ ೧ ರೂ ವಿದ್ಯಾಭಾಂಡಾರ (೧-೩ ಭಾಗ) ೩-೦-೦ ಗುಪ್ತ ಪ್ರಶ್ನೆ ಸಿದ್ಧಾಂಜನ ೧-೦-೦ ಆರೂಢ ಪ್ರಶ್ನ ಚಂದ್ರಿಕೆ ೩-೦-೦ ಸಂಪೂರ್ಣ ಲಗ್ನವಿಧಿ ೦-೧೦-೦.

**ಸೂಚನೆ:**— ಮೇಲಿನ ಒಂದಾದರೂ ಪುಸ್ತಕವನ್ನು ತರಿಸಿದರೆ ೧೮೫೭ನೇ ಭಾವನಾಮ ಸಂವತ್ಸರದ ಶ್ರೀ ಹೂಲಿ (ಗದಗ) ಸಿದ್ಧಾಂತ ಪಂಚಾಂಗವನ್ನು ಉಚಿತ ಕಳಿಸುವೆವು.

ಶ್ರೀ ಲಕ್ಷ್ಮೀವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಅಗಸ್ಟ ತಾರೀಖು ೨೭ ನೆಯ ಸೋಮವಾರ | ಸಂಚಿಕೆ ೨.


# ದೇವಾಲಯ ಪ್ರವೇಶದ ಗೊತ್ತುವಳಿಯು ಬಿದ್ದು ಹೋಯಿತು.

ಕಳೆದ ೨೩ನೆಯ ತಾರೀಖಿನ ದಿವಸ **ಶ್ರೀ ರಂಗಾ ಅಯ್ಯರ** ಇವರು ತಂದ ದೇವಾಲಯ ಪ್ರವೇಶದ ಗೊತ್ತುವಳಿಯು ಕೇಂದ್ರ ಶಾಸನ ಸಭೆಯಲ್ಲಿ ನಾಪಾಸಾಯಿತು. ಆ ಕಾಲದಲ್ಲಿ ಕೆಲ ಮುಂದಾಳುಗಳ ಭಾಷಣಗಳು ಈ ಪ್ರಕಾರವಾಗಿ ಜರುಗಿದವು—

**ಶ್ರೀ ರಂಗಾ ಅಯ್ಯರ**— ಮಂದಿರ ಪ್ರವೇಶದ ವಿಷಯವಾಗಿ ಕೇಂದ್ರ ಶಾಸನ ಸಭೆಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದ ಶ್ರೀ ರಾಜಗೋಪಾಲಾಚಾರ್ಯರು ಮದ್ರಾಸಿನ 'ಹಿಂದೂ' ಪತ್ರಿಕೆಯಲ್ಲಿ ಲೇಖ ಬರೆದು ಅಸ್ಪೃಶ್ಯರಿಗೆ ಮತ್ತು ಮಹಾತ್ಮಾಜಿಯವರಿಗೆ ಮೋಸ ಪಡಿಸಿದ್ದಾರೆ.

**ನಾ. ಕ್ರೇಕ**— (ಹೋಮ ಮೆಂಬರ) ಸರಕಾರದವರು ಈ ಗೊತ್ತುವಳಿಯ ವಿಷಯಕವಾಗಿ ತಟಸ್ಥರಾಗಿದ್ದರು. ಆವರು ಸ್ವರಾಜ್ಯ ಪಕ್ಷದವರೊಡನೆ ಈ ವಿಷಯದಲ್ಲಿ ವಿಕೀಕರಿಸಿಲ್ಲ. ಇದಕ್ಕೆ ಪಟ್ಟಣವಾಸಿಗಳಾದ ಸುಶಿಕ್ಷಿತರ ಬೆಂಬಲವಷ್ಟೇ ಇದ್ದಿತು. ಇದಕ್ಕೆ ಸನಾತನಿಗಳೇ ಅಲ್ಲದೆ ಪ್ರಾಂತಿಕ ಸರಕಾರಗಳೂ ಬಾರ ಅಸೋಶಿಯೇಶನ್ನಿನವರೂ ವಿರೋಧವಾಗಿದ್ದಾರೆ. ಅಸ್ಪೃಶ್ಯರೂ ಅಷ್ಟು ಉತ್ಸಾಹ ಜನಕ ಬೆಂಬಲ ತೋರಿಸಿಲ್ಲ. ಆದ್ದರಿಂದ ಸರಕಾರದವರು ಈ ಗೊತ್ತುವಳಿಯನ್ನು ವಿರೋಧಿಸಬೇಕೆಂದು ನಿಶ್ಚಯಿಸಿದ್ದಾರೆ.

**ರಾಜಾ ಬಹದ್ದೂರ ಕೃಷ್ಣಮ್ಮಾಚಾರಿ**—ರಾಣಿಯ ಪ್ರಕಟನೆಯ ಪ್ರಕಾರ ಸರಕಾರದವರೇ ಇದನ್ನು ವಿರೋಧಿಸಬೇಕಾಗಿದ್ದಿತು. ಆರ್ಥಿಕ ಸಮಾನತೆಯ ವಿಷಯಕ್ಕೆ ನಮ್ಮ ವ್ಯಾಜ್ಯವಿಲ್ಲ. ಆದರೆ ಧಾರ್ಮಿಕ ಸಮಾನತೆಯನ್ನು ನಾವು ಕೊಡಲು ಸಿದ್ಧರಿಲ್ಲ.

**ನಾ. ಸರ್. ಎನ್. ಎಸ್. ಸರಕಾರ್**— ಮಹಾತ್ಮಾಜಯವರು ಹಿಂದುಸ್ಥಾನದ ತುಂಬೆಲ್ಲ ಸಂಚರಿಸಿದರೂ ಉಚ್ಚ ವರ್ಣೀಯರ ಮನಸ್ಸು ಇನ್ನೂ ತಿರುಗಿಲ್ಲ.

**ರಾ. ಬ. ರಾಜಾ**—ನಮಗೆ ಸ್ವತಂತ್ರ ದೇವಾಲಯಗಳೂ ಬೇಡ; ಮತ್ತು ಮುಸಲ್ಮಾನರಾಗುವುದೂ ಬೇಡ. ಹಿಂದು ಸಮಾಜದಲ್ಲಿಯೇ ಇದ್ದು ಈ ದೇವಾಲಯ ಪ್ರವೇಶಕ್ಕಾಗಿ ಕಡೆಯವರೆಗೆ ಜಗಳಾಡುವೆವು.

**ಶ್ರೀ ರಂಗಾ ಅಯ್ಯರ**— ಇದಕ್ಕೆ ಅಸ್ಪೃಶ್ಯರ ಬೆಂಬಲವೂ ಸಾಕಷ್ಟಿಲ್ಲದಿರುವುದರಿಂದ ಇದನ್ನು ತಿರುಗಿ ತೆಗೆದುಕೊಳ್ಳುತ್ತೇನೆ.

ಯಾವ ಗೊತ್ತುವಳಿಯು ಹಿಂದುಸ್ಥಾನದಲ್ಲೆಲ್ಲ ಅತಿಶಯ ಆಂದೋಲನವನ್ನು ಮಾಡಿದ್ದಿತೋ ಅದು ಈ ಪ್ರಕಾರ ಕೊನೆಗಂಡಿತು.

---

### ಪಂ. ಜವಾಹರಲಾಲರನ್ನು ಹಿಡಿದುದು ಹೇಗೆ?

ಹಿಂದುಸ್ಥಾನ ಸರಕಾರದವರೊಡನೆ ವಿಚಾರ ನಡೆಯಿಸಿಯೇ ಪಂ. ಜವಾಹರಲಾಲರನ್ನು ಬಂಧಿಸಿದ್ದಾರಂತೆ. ಆವರ ಸತ್ಕೃಯ ಪ್ರಕೃತಿಯು ಪುನಃ ವ್ಯತ್ಯಸ್ತವಾದರೆ ಪುನಃ ಬಿಡುವರಂತೆ.

### ಹಾಯ್! ಹಾಯ್! ಬಿಹಾರ!!

ಗಂಗಾ, ಶೋಣ, ಜೋಗ್ರಾ ನದಿಗಳಿಗೆ ಮಹಾಪೂರ ಬಂದು ಬಿಹಾರ ವ್ಯಾಂತನಲ್ಲಿ ಜಲಪ್ರಳಯವಾಗಿದೆ. ಬಾಬು ರಾಜೇಂದ್ರ ಪ್ರಸಾದರವರು ಡಾ. ಸಯ್ಯದ ಮಹಮ್ಮೂದರವರಿಗೆ ೧೦ ನಾವೆಗಳನ್ನು ಕಳಸುವದಕ್ಕಾಗಿ ವಿನಂತಿ ಮಾಡಿಕೊಂಡಿದ್ದಾರೆ. ವಿಕ್ರಮ ಎಂಬಲ್ಲಿ ಕಾಲಿವೆಯು ಒಡೆದು ಸಮೊಪದ ಹಳ್ಳಿಗಳಲ್ಲೆಲ್ಲಾ ನೀರು ಹೊಕ್ಕಿದೆ. ೧೯೩೪ನೆಯ ಇಸವಿಯಲ್ಲಿ ಬಂದ ಮಹಾಪೂರಕ್ಕಿಂತ ಈಗಿನ ಮಹಾಪೂರವು ಎರಡೇ ಅಡಿ ಕಡಿಮೆ ಇದೆ. ಗಂಗಾ ನದಿಯ ನೀರು ೩೬ ಅಡಿ ಏರಿದ್ದು ಹೆಣಗಳು, ಪ್ರಾಣಿಗಳು ತೇಲಿ ಹೋಗುತ್ತಲಿವೆ.

# ಶಿವಶರಣರಿಗೆ ಹೊತ್ತಿಗೆಯ ಹಂಗೆ?

ಶ್ರೀ ಬಸವಾದಿ ಶಿವಶರಣರು ಯಾರ ಹಂಗಿನವರೂ ಅಲ್ಲ. ಸತ್ಯಾಭಿಮಾನಿಗಳು. ತಮ್ಮ ಅನುಭವಕ್ಕೆ ವಿರೋಧವಾದುದನ್ನು ನಂಬುವವರಲ್ಲ. ಸ್ವಾನುಭವದ ನೆಲಗಟ್ಟಿನ ಮೇಲೆಯೇ ಶರಣರ ಧಾರ್ಮಿಕ ಮಂದಿರವು ಕಟ್ಟಲ್ಪಟ್ಟಿದೆ. ಆದುದರಿಂದ ಅವರಿಗೆ ಯಾರ ಅಂಜಿಕೆಯೂ ಇಲ್ಲ.

ವೇದ ಶಾಸ್ತ್ರಾಗಮ ಪುರಾಣಗಳ ಹೆಸರಿನಿಂದ ತಮ್ಮ ಧರ್ಮವನ್ನು ಪ್ರಚಾರಗೊಳಿಸಲು ಮುಂದೆ ಬಂದವರು ಶಿವಶರಣರಲ್ಲ. ಸ್ವಾಮಿ ರಾಮತೀರ್ಥರು ಹೀಗೆ ಹೇಳಿದ್ದಾರೆ. "ತಮ್ಮ ಅನುಭವಕ್ಕೆ ಬಂದುದನ್ನು ಹೇಳಲು ಅನ್ಯರ ಹೆಸರೇಕೆ? ಅನ್ಯರ ಹೆಸರಿನಿಂದ ಧರ್ಮವನ್ನು ಮಾರುವುದೇಕೆ? ಶ್ರುತಿಯಲ್ಲಿ ಹೀಗಿದೆ, ಹಾಗಿದೆಯೆಂದು ಆ ಶ್ರುತಿಮಾತೆಯ ಕೇಶಗಳನ್ನು ಅತ್ತಿತ್ತ ಎಳೆದಾಡುವುದೇಕೆ? ಶ್ರೀ ಶಂಕರಾಚಾರ್ಯರೇ ಮೊದಲಾದವರು ಇಂಥ ತಪ್ಪನ್ನೇ ಮಾಡಿದ್ದಾರೆ."

ಶಿವಶರಣರು ಅವರಂತೆ ಗ್ರಂಥಗಳ ಗುಲಾಮರಾಗಿಲ್ಲ. ತಮಗೆ ಸತ್ಯವಾಗಿ ತೋರಿದುದು ಗ್ರಂಥಗಳಲ್ಲಿಯೂ ಇದೆಯೆಂದು ಹೇಳುವುದು ಬೇರೆ. ಗ್ರಂಥಗಳಲ್ಲಿದೆ ನಂಬಿರೆಂದು ಹೇಳುವುದು ಬೇರೆ. ಯಾರು ಗ್ರಂಥಗಳ ಗುಲಾಮರೋ ಅವರು ಕೊನೆಗೆ ಎಲ್ಲರ ಗುಲಾಮರಾಗಬೇಕಾಗುತ್ತದೆ.

ವೇದಾಗಮ ಪುರಾಣಗಳಲ್ಲಿ ಹೇಳಿದೆಯೆಂದು ಏನನ್ನಾದರೂ ಯಾರೇ ಹೇಳಿದರೂ ಮಳ್ಳುಗಳಂತೆ ನಡೆದರೆ ಸ್ವಾನುಭವವೆಲ್ಲಿ? ವಿವೇಕದಿಂದ ಸಾರಾಸಾರಗಳನ್ನು ಯೋಚಿಸಿಯೇ ನಂಬಿ ನಡೆಯಬೇಕು.

ಒಂದು ಕಾಸನ್ನಾದರೂ ಕೊಟ್ಟು ವ್ಯಾಪಾರ ಮಾಡುವಾಗ ಅಥವಾ ಒಂದು ಗುಳಿಗೆಯನ್ನಾದರೂ ಔಷಧಿಯಾಗಿ ತೆಗೆದುಕೊಳ್ಳುವಾಗ ಎಷ್ಟೋ ಆಲೋಚಿಸುತ್ತಾರೆ. ಆದರೆ ಧರ್ಮದ ಹೆಸರಿನಿಂದ ಪರಲೋಕ ಪುರಾಣವನ್ನು ಯಾರು ಹೇಗೆ ಹೇಳಿದರೂ ಹಾಗೆಯೇ ನಡೆಯಲು ಸಿದ್ಧರಾಗುವುದು ಯುಕ್ತವೆ? ಧರ್ಮವು ಅಷ್ಟು ಬೆಲೆಗೇಡಿಯೆ?

ಶಿವಶರಣರು ಹೀಗೆ ಮೂಢತನದಿಂದ ನಡೆಯಲು ಹೇಳಿಲ್ಲ. ವೇದಾಗಮಗಳ ಬೆಲೆಯನ್ನೂ ಅವರು ಚೆನ್ನಾಗಿ ಬಲ್ಲರು. ಆದಕ್ಕಾಗಿ ಅವರು ಹೀಗೆ ಹೇಳಿದ್ದಾರೆ. ಕೇಳಿ. ವೃಥಾ ಗ್ರಂಥಗಳ ಗುಲಾಮರಾಗಬೇಡಿರಿ.

**ಶ್ರೀ ಉರಿಲಿಂಗಪೆದ್ದಿಗಳೆಂಬ** ಘನ ಪಂಡಿತರಾದ ಶಿವಶರಣರು ಹೀಗೆ ಹೇಳಿದ್ದಾರೆ. "ವೇದಂಗಳು ಪೈವವೆಂಬ ವಿಪ್ರರಂತಹ ಪುರುಳರುಂಟೆ ತ್ರಿಜಗದಲ್ಲಿ? ವೇದವೆಂಬುದೊಂದು ಸಾಧಕ ಸಂಪತ್ತು. ವೇದಂಗಳು ಶ್ವೇತ, ಅಗಸ್ತ್ಯ, ವಿಶ್ವಾಮಿತ್ರ ಮುನಿಗಳಿಂದಾದವು." ಆಧುನಿಕ ವಿದ್ವಾಂಸರು ವೇದಗಳನ್ನು ಅನೇಕ ಸ್ತ್ರೀ ಪುರುಷರು ರಚಿಸಿದ್ದಾರೆಂದು ಹೇಳುತ್ತಿದ್ದಾರಷ್ಟೆ. ಈ ವಿಷಯವನ್ನು ಶಿವಶರಣರು ಪೂರ್ವದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರಲ್ಲಾ. ಎಂದಮೇಲೆ ಅವಲ್ಲಿದ್ದ ಅಗಾಧ ಪಾಂಡಿತ್ಯ, ಸತ್ಯ ನಿಷ್ಠೆ, ಸ್ವಪ್ರೋಕ್ತಿಗಳು ವ್ಯಕ್ತವಾಗುವುದಿಲ್ಲವೆ?

ಮಹಾ ಶಿವಶರಣರಾದ **ಆದಯ್ಯನವರು** ಹೀಗೆ ಹೇಳುತ್ತಾರೆ.

"ವೇದಂಗಳ ಹಿಂದೆ ಹರಿಯದಿರು, ಹರಿಯದಿರು. ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು. ಪುರಾಣಗಳ ಹಿಂದೆ ಬಳಸದಿರು, ಬಳಸದಿರು. ಆಗಮಗಳ ಹಿಂದೆ ತೊಳಲದಿರು, ತೊಳಲದಿರು. ಸೌರಾಷ್ಟ್ರ ಸೋಮೇಶ್ವರನ ಕೈ ವಿಡಿದು ಶಬ್ದ ಜಾಲಂಗಳಿಗೆ ಬಳಲದಿರು, ಬಳಲದಿರು."

ಶರಣರ ಈ ಸ್ವಾತಂತ್ರ್ಯ ನುಡಿಯ ಕೇಳಿರಿ. ವೇದಾಗಮ ಶಾಸ್ತ್ರ ಪುರಾಣಗಳಲ್ಲಿ ಹೀಗಿದೆಯೆಂದು ಅವುಗಳ ಗುಲಾಮರಾಗುವವರು ಹೇಗೆ ಬಳಲುತ್ತಾರೆಂಬುದನ್ನು ಆದಯ್ಯನವರು ಸ್ಪಷ್ಟ ತಿಳಿಸಿದ್ದಾರೆ. ನಿನ್ನ ಅಂಗೈಯಲ್ಲಿ ಲಿಂಗವಿರುವಾಗ ನೀನು ಸ್ವಾನುಭವಿಯಾಗದೆ ಗ್ರಂಥಗಳ ಬೆನ್ನು ಹತ್ತಿ ಕೆಡಬೇಡ. ಧಾರ್ಮಿಕ ವಿಷಯದಲ್ಲಿಯೂ ಈ ಅದ್ವಿತೀಯವಾದ ಸ್ವಾತಂತ್ರ್ಯ ಮಾರ್ಗವನ್ನನುಸರಿಸಿದಾಗಲೇ ವ್ಯಕ್ತಿಯೂ ಸಮಾಜವೂ ರಾಷ್ಟ್ರವೂ ನಿಜವಾದ ಸುಖಶಾಂತಿಗಳನ್ನನುಭವಿಸುವವು.

**ಶ್ರೀ ಮಡಿವಳ ಮಾಚಿದೇವರು** ಹೇಳುವುದನ್ನು ಕೇಳಿರಿ.

"ವೇದ ವಿಪ್ರರ ಬಾಧೆ, ಶಾಸ್ತ್ರ ಸಂತೆಯ ಮಾತು. ಪುರಾಣ ಪುಂಡರ ಗೊಯ್ಲೆ, ಆಗಮ ಅಸ್ಪೃತದ ಗುಡಿ, ತರ್ಕ ವ್ಯಾಕರಣ ಕಸಿಕಸ್ಪವಾದ. ಇಂತಿವರ ಅಂಗದ ಮೇಲೆ ಲಿಂಗವಿಲ್ಲದ ಧಾಷೆ. ಇದುಕಾರಣ ತನ್ನೊಳಗೆರೆದ ಅನುಭಾವಿಯಲ್ಲಿಂದ ಘನವಿಲ್ಲಿಂದ ನಮ್ಮ ಕಲಿದೇವರ ದೇವ."

ಸ್ವಾನುಭವಕ್ಕೇನೇ ಶರಣರು ಮಹತ್ವ ಕೊಟ್ಟಿದ್ದಾರೆಯೇ ವಿನಾ ಗ್ರಂಥಗಳ ದಾಸರಾಗಿಲ್ಲ.

"ಅನಂತವೇದ ಶಾಸ್ತ್ರಾಗಮ ಪುರಾಣ ತರ್ಕಂಗಳನು ಅತ್ಮ ಮಾಡುವನಲ್ಲದೆ ಆತ್ಮನವು ಮಾಡಿರುವುದಿಲ್ಲ. ಎನ್ನಂತರಂಗದರು ವಿನ ಮೂರ್ತಿಯಾಗಿ ಎನ್ನ ಉರಿಲಿಂಗದೇವರು ಸಂಕಲ್ಪಿಸಿ ಆಗೆಂದರಾದವು."

ಎಂಬ **ಶ್ರೀ ಉರಿಲಿಂಗಪೆದ್ದಿಗಳ** ದಿವ್ಯ ಸಿದ್ಧಾಂತವೇನು ಹೇಳುವುದು? ಗ್ರಂಥಗಳು ನಮ್ಮಿಂದಾಗಿವೆಯೇ ವಿನಾ ನಮ್ಮನ್ನೇನೂ ಅವು ಉಂಟುಮಾಡಿಲ್ಲ. ಆದಕ್ಕೋಸ್ಕರ ವೇದಾಗಮಾದಿಗಳೆಲ್ಲ ನಮಗಾಗಿವೆಯೇ ವಿನಾ ಅವುಗಳಿಗಾಗಿ ನಾವಿಲ್ಲ. ನಮ್ಮ ಶ್ರೇಯಸ್ಸಿಗೆ ಅವು ವಿಘಾತಕಗಳಾಗಿದ್ದರೆ ನಿರಾತಂಕವಾಗಿ ಅವುಗಳನ್ನು ತ್ಯಾಜ್ಯ ಮಾಡಿರಿ. ಅಜ್ಜ ನೆಟ್ಟ ಆಲದ ಮರವೆಂದು ನೇಣು ಹಾಕಿಕೊಂಡು ಪ್ರಾಣ ಬಿಡಬೇಡಿ.

ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡಾ ಅನೇಕರು ಪೊತ್ತಿಗೆಯ ಹಂಗಿಗರಾಗಿ ವೇದ ಮಾನ್ಯವಲ್ಲವೆಂದರೆ ಎಲ್ಲಿ ನಮ್ಮ ಕುಲ ಧರ್ಮಗಳು ಕಡಿಮೆಯಾಗುತ್ತವೆಯೋ ಎಂದು ಅಂಜಿ ಅಜ್ಞಾನದಿಂದ ಬಳಲುತ್ತಿರುವಾಗ ಹನ್ನೆರಡನೆಯ ಶತಮಾನದಲ್ಲಿ ಹೀಗೆ ಸ್ವಾತಂತ್ರ್ಯದ ದಿವ್ಯ ನುಡಿಯನ್ನು ಸಾರಿದ ಶರಣರ ಆತ್ಮ ಬಲ ವೆಷ್ಟಿರಬಹುದು?

# ಋಗ್ವೇದದಲ್ಲಿಯ ಕೆಲವು ಸಂಗತಿಗಳು.

(ಲೇಖಕರು— ಸಾಹಿತ್ಯಾಚಾರ್ಯ ಪಂ. ಮಹೇಂದ್ರ ಮಿಶ್ರ ಭಾಗಲಪುರ.)

ನಾಲ್ಕು ವೇದಗಳಲ್ಲಿ ಋಗ್ವೇದವೇ ಮುಖ್ಯವಾದುದು. ಮತ್ತು ಇದೇ ಮೊದಲನೆಯದು. ಇದರಲ್ಲಿ ೧೦ ಮಂಡಲಗಳಿವೆ. ಅವು ಗಳಲ್ಲಿ ಒಟ್ಟು ೧೦೭೨ ಸೂಕ್ತ ಅಥವಾ ಅಧ್ಯಾಯಗಳಿವೆ. ಇವು ಗಳಲ್ಲಿ ಆ ಕಾಲದ ಆರ್ಯ ಜನರ ಅನೇಕ ಆಚಾರ ವಿಚಾರಗಳು ವಿವರವಾಗಿವೆ. ಈ ಸಂಬಂಧವಾಗಿ ಪಂಡಿತ ಮಹೇಂದ್ರ ವಿ.ಶ್ರ ಎಂಬುವವರು 'ಗಂಗಾ ವೇದಾಂಕ' ಎಂಬ ಸಂಚಿಕೆಯಲ್ಲಿ ಹೀಗೆ ಬರೆ ದಿದ್ದಾರೆ—

"ಸನಾತನ ಧರ್ಮಾವಲಂಬಿಗಳಲ್ಲಿ ಮುಖ್ಯ ಆಚಾರ್ಯನಾದ ಸಾಯಣನು ರಚಿಸಿದ ಋಗ್ವೇದ ಭಾಷ್ಯದೊಂದಿಗೆ ಋಗ್ವೇದದ ಸಂಪೂರ್ಣ ಸಂಹಿತೆಗಳನ್ನು ಮಂಥನ ಮಾಡಿದುದರಿಂದ ನನಗೆ ತಿಳಿದ ಸಂಗತಿಗಳನ್ನು ಇಲ್ಲಿ ಉದಾಹರಿಸುತ್ತೇನೆ. ನಾನು ನನ್ನ ಕೈಯಿಂದ ಹೊಸದಾಗಿ ಏನನ್ನೂ ಕೂಡಿಸದೆ ಸಾಯಣ ಭಾಷ್ಯದ ಸಾರಾಂಶವನ್ನೇ ತಿಳಿಸುತ್ತೇನೆ

ಆರ್ಯರು ಮಾಂಸಾಹಾರಿಗಳಾಗಿದ್ದರು. ಕುದುರೆ, ಕತ್ತೆ, ಎತ್ತು, ಆಕಳು, ಎಮ್ಮೆ ಕುರಿ, ಮೊದಲಾದ ಪ್ರಾಣಿಗಳ ಮಾಂಸವು ಆರ್ಯರ ಪ್ರೀತಿಯ ಆಹಾರವಾಗಿದ್ದಿತು (ಋಗ್ವೇದ ೧೦ ಅಷ್ಟ ೧೩, ೧೪ ಅ-೭೭-೧೦) ನನಗಾಗಿ ೫೦ ಎತ್ತುಗಳನ್ನು ಕೊಲ್ಲು, ಅವುಗಳನ್ನು ತಿಂದು ನಾನು ಪುಷ್ಟನಾಗುವೆನು. (೧೦-೮೬-೧೪) ಒಂದೊಂದು ಸಾರೆ ನೂರಾರು ಎಮ್ಮೆಗಳನ್ನು ಕೊಲ್ಲುತ್ತಿದ್ದರು. (೬-೧೭-೧೧) ಮಾಂಸದ ಹವನವನ್ನು ಮಾಡುತ್ತಿದ್ದರು. ಆಕಳು ಮತ್ತು ಎತ್ತುಗಳ ಆಹುತಿಯನ್ನು ಕೊಡುತ್ತಿದ್ದರು. (೬-೧೬-೪೭) ಮತ್ತು ಹೋತುಗಳ ಆಹುತಿಯು ಅತ್ಯಧಿಕವಾಗಿದ್ದಿತು. (೧೦-೬೧ ೧೪) ಸತಿಸತಿಗಳು ಕೂಡಿ ಹವನ ಮಾಡುತ್ತಿದ್ದರು.(೪-೩೧೫೬.)

ಆರ್ಯರು ಸೋಮರಸವನ್ನು ಕುಡಿಯುತ್ತಿದ್ದರು. ಇದೊಂದು ತರದ ಮಾದಕ ಅಥವಾ ಸಾರಭೂತವಾದ ರಸವಾಗಿತ್ತು. ಇದೊಂದು ಬಳ್ಳಿಯ ರಸ ಸ್ತ್ರೀಯರು ಈ ಸೋಮ ಬಳ್ಳಿಯನ್ನು ಕಲ್ಲುಗಳ ಮೇಲೆ ಕುಟ್ಟಿ ಅದರ ರಸವನ್ನು ತೆಗೆದು ಪಾತ್ರೆಯಲ್ಲಿ ಸೋಸಿಡು ತ್ತಿದ್ದರು. ಅದರಲ್ಲಿ ಹಾಲು ಅಥವಾ ಮೊಸರನ್ನು ಕೂಡಿಸಿ ಕುಡಿ ಯುತ್ತಿದ್ದರು. (೯-೨೪-೩.)

ಸೋಮರಸಕ್ಕೆ ಅಮೃತವೆನ್ನುತ್ತಿದ್ದರು. ಅದನ್ನು ಕುಡಿಯು ವದರಿಂದ ತಾವು ಅಮರರಾಗುತ್ತೇವೆಂದು ತಿಳಿದಿದ್ದರು. (೮-೪೮-೩) ಇಂದ್ರನು ಸೋಮರಸವನ್ನು ಬಹು ಪ್ರೀತಿಯಿಂದ ಕುಡಿಯುತ್ತಿ ದ್ದನು. (೧-೨೪-೩) ಚರ್ಮವನ್ನು ಅವರು ನಿಷೇಧಿಸಿರಲಿಲ್ಲ. ಸೋಮ ರಸ, ಹಾಲು, ಮೊಸರುಗಳನ್ನಿಡಲು ಚರ್ಮದ ಬುದ್ದಲಿಕೆಗಳನ್ನು ಉಪಯೋಗಿಸುತ್ತಿದ್ದರು. (೬-೪೮-೧೪ )

ಆರ್ಯರು ಉಣ್ಣೆಯ ಬಟ್ಟೆಯನ್ನು ಹಾಕಿ ಕೊಳ್ಳುತ್ತಿದ್ದರು. (೧೦-೨೬-೬) ನೂಲು ತೆಗೆದು ಬಟ್ಟೆಯನ್ನು ಮಾಡುತ್ತಿದ್ದರು. (೧೦-೧೪-೬-೧೧) ವಸ್ತ್ರವನ್ನು ದಾನವಾಗಿಯೂ ಕೊಡುತ್ತಿದ್ದರು. (೧೦ ೧೦-೯-೨) ಆರ್ಯರು ಬಂಗಾರವನ್ನು ಉಪಯೋಗಿಸುತ್ತಿದ್ದರು. ಕೈಯಲ್ಲಿ ಕಡಗಗಳನ್ನು ಹಾಕಿಕೊಳ್ಳುತ್ತಿದ್ದರು. (೫ ೫೩-೪.)

ವಿವಾಹವು ಸ್ವಯಂವರ ಪದ್ಧತಿಯಿಂದ ನಡೆಯುತ್ತಿದ್ದಿತು. ವಿಮದನು ಸ್ವಯಂವರದಿಂದ ಸ್ತ್ರೀಯಳನ್ನು ಸಂಪಾದಿಸಿದ್ದನು. (೧-೧೧೬-೧೧) ವಿವಾಹ ಕಾಲದಲ್ಲಿ ಬದಲು ಮಾಡುತ್ತಿದ್ದ ಬಟ್ಟೆಯನ್ನು ಬ್ರಹ್ಮಣ ಪುರೋಹಿತರು ತೆಗೆದುಕೊಳ್ಳುತ್ತಿದ್ದರು. (೧೦-೮೫-೩೪) ಪುರುಷರು ಅನೇಕ ಸ್ತ್ರೀಯರನ್ನು ಲಗ್ನವಾಗುತ್ತಿದ್ದರು.

ಸ್ತ್ರೀಯರು ವಿದ್ಯೆಯನ್ನು ಕಲಿಯುತ್ತಿದ್ದರು. ವೇದ ಮಂತ್ರ ಗಳನ್ನು ಅನೇಕ ಸ್ತ್ರೀಯರು ರಚಿಸಿದ್ದಾರೆ. (೧-೧೪೬-೭) ನೆಯ ಮಂತ್ರವನ್ನು ಲೋಮಶಾ ಎಂಬುವವಳು ೧೦-೪೦ ನೆಯ ಸೂಕ್ತ ವನ್ನು ಘೋಷಾ, ೫-೩೮ ನೆಯ ಸೂಕ್ತವನ್ನು ವಿಶ್ವಾವಾರಾ ೧೦-೪೫ನೆಯ ಸೂಕ್ತವನ್ನು ಇಂದ್ರಾಣಿ, ೧೦-೧೫೯, ಶಚೀ, ೫೯, ಅಪಾಲಾ ಇವರೆಲ್ಲಾ ಋಗ್ವೇದದಲ್ಲಿಯ ಮಂತ್ರಗಳನ್ನು ರಚಿಸಿದ ಸ್ತ್ರೀಯರು.

ಆರ್ಯ ಸ್ತ್ರೀಯರು ರಥವನ್ನು ನಡೆಸುತ್ತಿದ್ದರು. ರಣರಂಗ ದಲ್ಲಿ ಯುದ್ಧ ಮಾಡುತ್ತಿದ್ದರು. ಬಾಣಗಳನ್ನು ಬಿಡುವುದರಲ್ಲಿ ಮುದ್ಗಲಿ ಪತ್ನಿ ಇಂದ್ರಸೇನಾ ಎಂಬುವಳು ಬಹು ಬಲ್ಲಿದಳಾಗಿದ್ದಳು. ವೈರಿಗಳ ಸಂಗಡ ಯುದ್ಧಮಾಡಿ ಗೋವುಗಳನ್ನು ಬಿಡಿಸಿಕೊಂಡಳು. (೧೦-೧೦೨-೧) ಅನೇಕ ಸ್ತ್ರೀಯರು ಮರಣಾಂತ್ಯದವರೆಗೂ ಬ್ರಹ್ಮ ಚರ್ಯದಿಂದಿರುತ್ತಿದ್ದರು. (೨-೨೬-೭) ಘೋಷಾ ಎಂಬುವವಳು ಮುಪ್ಪಿನಲ್ಲಿ ಲಗ್ನವಾದಳು. (೧-೧೧೭-೭.)

ಅನೇಕ ವ್ಯಭಿಚಾರಿ ಸ್ತ್ರೀಯರು ಗರ್ಭಪಾತ ಮಾಡಿ ಅದನ್ನು ಮುಚ್ಚಿ ಎಸೆದುಬಿಡುತ್ತಿದ್ದರು. (೫-೧೫-೧) ಅನೇಕ ದುರಾ ಚಾರ ಸ್ತ್ರೀಯರು ಗಂಡನ ಮನೆಯಿಂದ ತವರು ಮನೆಗೆ ಓಡಿ ಹೋಗುತ್ತಿದ್ದರು. (೪-೫-೫) ಯಮಿ ಎಂಬುವಳು ತನ್ನ ಸಹೋ ದರನ ಸಂಗವ ಸಂಭೋಗ ಮಾಡಲು ಇಚ್ಛಿಸಿದಳು. ಆದರೆ ಅವನು ಒಪ್ಪಲಿಲ್ಲ. ೧೦-೧೦ ಪ್ರಜಾಪತಿಯು ತನ್ನ ಪುತ್ರಿಯಾದ ಉಷೆ ಯೊಂದಿಗೆ ಸಂಭೋಗಿಸಿದ್ದನು. ೧೦-೬೧-೬.

ಆರ್ಯರ ಋಗ್ವೇದ ಕಾಲದಲ್ಲಿ ದಾಶರಾಜ್ಞ ಎಂಬ ಮಹಾ ಯುದ್ಧವಾಗಿದ್ದಿತು. ಇದು ಮಹಾ ಭಯಂಕರ ಯುದ್ಧ ೭-೮೩-೭ ಪಿಪ್ರು ಎಂಬ ಅಸುರನ ೫೦ ಸಾವಿರ ಕಪ್ಪು ವರ್ಣದ ರಾಕ್ಷಸರನ್ನು (ದಸ್ಯುಗಳನ್ನು) ಇಂದ್ರನು ಹೊಡೆದು ಓಡಿಸಿದನು. ೪-೧೬-೧೩.

ಆರ್ಯರು ನೂರು ವರುಷ ಬದುಕುತ್ತಿದ್ದರು. ಇವರು ತಮ್ಮ ರೋಗ ನಿವಾರಣೆಗೆ, ಧನ ಪ್ರಾಪ್ತಿಗೆ, ಮಕ್ಕಳ ರಕ್ಷಣೆಗೆ ದೇವರನ್ನು ಬೇಡಿಕೊಳ್ಳುತ್ತಿದ್ದರು." ೧೦-೧೬೭.

ಈ ಪ್ರಕಾರ ಋಗ್ವೇದದಲ್ಲಿಯ ಅನೇಕ ಸಂಗತಿಗಳನ್ನು ಲೇಖಕರು ವಿವರಿಸಿದ್ದಾರೆ. ಆಯಾಯ ಸಂಗತಿಗಳ ಮುಂದಿರುವ ಸಂಖ್ಯೆಗಳು ಋಗ್ವೇದದ ಆಯಾಯ ಮಂಡಲ, ಸೂಕ್ತ, ಮಂತ್ರಗಳ ಅಂಕಿಗಳೆಂದು ತಿಳಿಯಬೇಕು. ಇಷ್ಟವುಳ್ಳವರು ಆಯಾಯ ಮಂತ್ರ ಗಳನ್ನು ನೋಡಿ ಮನವರಿಕೆ ಮಾಡಿಕೊಳ್ಳಬಹುದು.

ಈ ಲೇಖನವನ್ನು ಬರೆದವರು ಅಧುನಿಕ ಶಿಕ್ಷಣ ಹೊಂದಿ ಧರ್ಮ ಭ್ರಷ್ಟರಾದವರೆಂದು ಯಾರೂ ಭ್ರಮಿಸುವಂತಿಲ್ಲ. ಸಾಹಿ ತ್ಯಾಚಾರ್ಯರೂ ಸಂಸ್ಕೃತ ಪಂಡಿತರೂ ಆಗಿದ್ದಾರೆ. ಈಗಿನಂತೆಯೇ ವೇದಕಾಲದ ಜನರಲ್ಲಿಯೂ ನಾನಾ ದೋಷಗಳೂ ದುರ ಭ್ಯಾಸಗಳೂ ಇದ್ದೇ ಇದ್ದವು. ಆಗಿನ ಜನರ ನಡೆನುಡಿಗಳೇ ವೇದಗಳಲ್ಲಿರುವ ಸಂಗತಿಗಳು. ಆದಕಾರಣ ವೇದಗಳ ವಿಷಯದಲ್ಲಿ ರುವ ಬಹುಜನರ ಭಯಂಕರವಾದ ತಪ್ಪು ತಿಳುವಳಿಕೆಗಳು ಜಾಗ್ರತೆ ನಿವಾರಣೆಯಾಗಬೇಕಾದುದು ಅಗತ್ಯ.

## ತುಮಕೂರು ಶಾಸ್ತ್ರಿಗಳ ತೃತೀಯ ಪಂಥ!

ತುಮಕೂರಿನ ಕೀರ್ತನ ಕೇಸರಿ ಶ್ರೀ. ಶಿವಮೂರ್ತಿ ಶಾಸ್ತ್ರಿಗಳು ಸೊಲ್ಲಾಪುರ ಕೀಟಿ ಮಠದಲ್ಲಿ ತಾ. ೧೮-೮-೩೪ನೆಯ ದಿವಸ ವೀರಶೈವ ಮತಸಂಬಂಧವಾಗಿ ಮಾಡಿದ ವ್ಯಾಖ್ಯಾನವು ಅಲ್ಲಿಯ ಸುದರ್ಶನ ಪತ್ರಿಕೆಯ ತಾ. ೨೦ನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆ ಸಂಗತಿಗಳನ್ನು ನೋಡಿದರೆ ಶಾಸ್ತ್ರಿಗಳ ಅಭಿಪ್ರಾಯ ಎರಡೇ ತಿಂಗಳುಗಳಲ್ಲಿ ವ್ಯತ್ಯಾಸವಾದಂತೆಯೂ ಇವರದೊಂದು ತೃತೀಯ ಪಂಥವೆಂತಲೂ ಗೊತ್ತಾಗುತ್ತದೆ. ಇವರು ಈ ಭಾಷಣದಲ್ಲಿ ಹೀಗೆ ಹೇಳಿದ್ದಾರೆ—

"ವೀರಶೈವ ಮತವನ್ನು ಪಂಚಾಚಾರ್ಯರು ಸ್ಥಾಪಿಸಿದರೆಂದು ಕೆಲವರು ಹೇಳುತ್ತಾರೆ. ಬಸವೇಶ್ವರನು ಸ್ಥಾಪಿಸಿದನೆಂದು ಕೆಲವರು ಹೇಳುತ್ತಾರೆ. ಇವೆರಡೂ ತಪ್ಪು. ೨-೩ ಸಾವಿರ ವರುಷಗಳ ಹಿಂದೆ ಆಗಿ ಹೋದ ರೇಣುಕಾಚಾರ್ಯನೇ ವೀರಶೈವ ಮತಸ್ಥಾಪಕನು. ಉಳಿದ ನಾಲ್ಕು ಆಚಾರ್ಯರು ಅನಂತರದವರು. ಆದಕಾರಣ ಅವರು ಮತಸ್ಥಾಪಕರಾಗುವುದಿಲ್ಲ.

ಬಸವೇಶನು ಮತ್ತು ಉಳಿದ ನಾಲ್ಕು ಜನ ಆಚಾರ್ಯರು ವೀರಶೈವ ಮತೋದ್ಧಾರಕರು. ಮತಸ್ಥಾಪಕನೆಂಬುದು ಗೌರವ ಸೂಚಕವಾದುದರಿಂದ ಅನೇಕರಿಗೆ ಹಾಗೆ ಹೇಳಿದ್ದಾರೆ. ರೇಣುಕಾಚಾರ್ಯ ಅಥವಾ ಇತರ ಆಚಾರ್ಯರು ಲಿಂಗೋದ್ಭವರೆಂಬುದನ್ನು ನಾನು ನಂಬುವುದಿಲ್ಲ.

ರೇಣುಕಾಚಾರ್ಯ ಎಂಬ ಹೆಸರಿನವರು ಅನೇಕರು ಆಗಿಹೋಗಿದ್ದಾರೆ. ಅಗಸ್ತ್ಯ ಋಷಿಗಳಿಗೆ ಉಪದೇಶ ಮಾಡಿದ ರೇಣುಕಾಚಾರ್ಯ, ಸಿದ್ಧಾಂತ ಶಿಖಾಮಣಿಯ ಗ್ರಂಥಕರ್ತರಾದ ರೇವಣಸಿದ್ಧ, ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟ ರೇವಣಾರಾಧ್ಯ, ಸಿದ್ಧರಾಮೇಶನ ತಾಯಿ ಸುಗ್ಗಲದೇವಿಯ ಗರ್ಭಕ್ಕೆ ನಮಸ್ಕರಿಸಿದ ರೇಣುಕಾಚಾರ್ಯ ಇವರೆಲ್ಲರೂ ಬೇರೆಬೇರೆಯವರು."

ಇದೇ ಶಾಸ್ತ್ರಿಗಳು ವಿಜಾಪುರದಲ್ಲಿ ರಾ| ಸಾ| ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ತಾ. ೧೦-೬-೩೪ನೆಯ ದಿವಸ ವೀರಶೈವ ಮತದ ವಿಷಯವಾಗಿ ವ್ಯಾಖ್ಯಾನ ಮಾಡಿದಾಗ ಈ ಕೆಳಗಿನಂತೆ ಹೇಳಿದ್ದರೆಂಬುದು ವಿಜಾಪುರದ ನವಕರ್ನಾಟಕ ಮತ್ತು ಈ ಶರಣ ಸಂದೇಶ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆಗ ಶಾಸ್ತ್ರಿಗಳು ಹೀಗೆ ಹೇಳಿದ್ದಾರೆ—

"ವೀರಶೈವ ಮತವು ಒಂದೇ ಕಾಲದ್ದಲ್ಲ. ಒಂದೇ ವ್ಯಕ್ತಿಯಿಂದಾದದ್ದಲ್ಲ. ಅನೇಕ ವಿಭೂತಿಗಳು ಕಾಲಕಾಲಕ್ಕೆ ಜನ್ಮತಾಳಿ ಅದನ್ನು ಉದ್ಧಾರ ಮಾಡುತ್ತ ಬಂದಿದ್ದಾರೆ. ಮತಸ್ಥಾಪಕರು ಇಂಥವರೇ ಎಂದು ನಿಷ್ಕರ್ಷವಾಗಿ ಹೇಳಲಿಕ್ಕೆ ಬರುವುದಿಲ್ಲ.

ಬಸವೇಶ್ವರನ ಪೂರ್ವದಲ್ಲಿ ವೀರಶೈವ ಮತವು ವೈದಿಕ ಸ್ವರೂಪದಲ್ಲಿತ್ತು. ಆದರೆ ಯಜ್ಞಯಾಗಾದಿಗಳಿಗೆ ಅವಕಾಶವಿರಲಿಲ್ಲ. ಬಸವಾದಿ ಪ್ರಮಥರು ವೀರಶೈವ ಮತಕ್ಕೆ ಅಪ್ರಾಕೃತ ಸ್ವರೂಪವನ್ನು ಕೊಟ್ಟರು. ಬಸವಣ್ಣನವರಿಗಿಂತಲೂ ಸ್ವಲ್ಪ ಮುಂಚೆ ಏಕಾಂತ ರಾಮಯ್ಯ, ದೇವರ ದಾಸಿಮಯ್ಯ, ರೇವಣ ಸಿದ್ಧಯ್ಯ ಮೊದಲಾದವರು ವೀರಶೈವ ಮತವನ್ನು ಪ್ರಸಾರ ಮಾಡಿ ಅಲ್ಲಲ್ಲಿ ತಮ್ಮ ಮಠಗಳನ್ನು ಕಟ್ಟಿಸಿದರು."

ಶಾಸ್ತ್ರಿಗಳ ವಿಜಾಪುರದ ಈ ಅಭಿಪ್ರಾಯಕ್ಕೂ ಸೊಲ್ಲಾಪುರದ ಮೇಲಣ ಅಭಿಪ್ರಾಯಕ್ಕೂ ಇಷ್ಟೇಕೆ ವ್ಯತ್ಯಾಸ? ಇವುಗಳಲ್ಲಿ ಯಾವುದು ನಿಜ?

ರೇಣುಕಾಚಾರ್ಯರು ಅನೇಕರೆಂದು ಹೇಳುವರಷ್ಟೆ. ಅವರೆಲ್ಲರೂ ವೀರಶೈವರೇ? ಅಥವಾ ಬೇರೆ ಮತೀಯರೇ? ಅನೇಕ ಪ್ರಾಚೀನ ಕವಿಗಳಿಂದ ಬರೆಯಲ್ಪಟ್ಟ ರೇಣುಕ ಚರಿತ್ರೆಗಳೆಲ್ಲಾ ಒಬ್ಬ ರೇಣುಕರಿಂದಲೇ ಇವೆಲ್ಲ ಸಂಭವಿಸಿದನೆಂದೇ ಉಲ್ಲೇಖಿಸಲ್ಪಟ್ಟಿದೆಯಷ್ಟೆ ಹಾಗೆ ಹೇಳಿದುದರ ಕಾರಣವೇನು?

ಶ್ರೀ. ಕರ್ಲಮಂಗಲಂ ಶ್ರೀಕಂಠಯ್ಯನವರು ಈಗ ತಾನೆ ವೀರಶೈವ ಮತಾಚಾರ್ಯರ ಕಾಲನಿರ್ಣಯವೆಂಬ ಪುಸ್ತಕವನ್ನು ಐತಿಹಾಸಿಕ ದೃಷ್ಟಿಯಿಂದ ಬರೆದಿದ್ದಾರಷ್ಟೆ. ಅದರಲ್ಲಿದ್ದ ದೋಷಗಳಾವುವು?

ತಾವು ಕಂಡುಹಿಡಿದ ೨-೩ ಸಾವಿರ ವರುಷಗಳ ಹಿಂದಿನ ರೇಣುಕಾಚಾರ್ಯರ ಚರಿತ್ರೆಯೆಲ್ಲಿದೆ? ಅವರು ವೀರಶೈವ ಮತವನ್ನು ಸ್ಥಾಪಿಸಿದ ವಿಷಯವಾಗಿ ಅನ್ಯ ಮತೀಯರ ಯಾವ ಗ್ರಂಥಗಳಲ್ಲಿ ಉಲ್ಲೇಖವಿದೆ? ಅವರು ಬರೆದ ಭಾಷ್ಯಗಳಾಗಲಿ ಗ್ರಂಥಗಳಾಗಲಿ ಯಾವುವು?

ಬಸವೇಶನ ಪೂರ್ವ ತಮಿಳುನಾಡಿನಲ್ಲಿದ್ದ ತಾವು ಹೇಳುವ ವೀರಶೈವ ಕವಿಗಳು ಬಸವೇಶನಂತೆ ಅಪ್ರಾಕೃತರೆ? ಅಥವಾ ಪಾಶುಪತ, ಕಾಳಾಮುಖ, ಲಕುಲೀಶ, ಆರಾಧ್ಯ ಮೊದಲಾದ ಬೇರೆಬೇರೆ ಹೆಸರಿನ ಶೈವರೆ? ಈ ಎಲ್ಲ ಸಂಗತಿಗಳನ್ನು ಆಧಾರಯುಕ್ತವಾಗಿ ಶಾಸ್ತ್ರಿಗಳು ಪ್ರಕಟಿಸುವರೆಂದು ನಂಬಿದ್ದೇನೆ.

ಓರ್ವ ಜಿಜ್ಞಾಸು.

## ಹಿಂದು ಧರ್ಮ ಸುಧಾರಣೆ.

ಬಡೋದಾ ಮಹಾರಾಜರವರು ಹಿಂದು ಧರ್ಮ ಸುಧಾರಣೆಯ ಮಹತ್ಕಾರ್ಯವನ್ನು ರಾಜ ಶಾಸನದಿಂದಲೂ ನಡೆಯಿಸಿರುವುದು ಅನ್ಯ ಹಿಂದು ರಾಜರಿಗೆ ಮಾರ್ಗದರ್ಶಿಯಾಗಿದೆ.

ಹಿಂದು ವಿಧವಾ ವಿವಾಹವು ನ್ಯಾಯವಾದುದೆಂಬ ಶಾಸನವು ೧೯೧೧ನೆಯ ಸಂವತ್ಸರದಲ್ಲಿ ಏರ್ಪಟ್ಟಿತು. ಧರ್ಮಾಂತರವಾಗುವುದರಿಂದ ತನ್ನ ಮುಂಚಿನ ಸೊತ್ತು ಇಲ್ಲದಂತಾಗುತ್ತದೆಂಬ ಭಯ ನಿವಾರಣೆಯ ಶಾಸನವೂ ಅದೇ ವರುಷ ಏರ್ಪಟ್ಟು ಧರ್ಮ ಸ್ವಾತಂತ್ರ್ಯಕ್ಕೆ ಅವಕಾಶ ದೊರೆಯಿತು. ೧೮ ವರುಷಗಳೊಳಗಿನ ತರುಣ ೧೪ ವರುಷಗಳೊಳಗಿನ ತರುಣಿಯ ವಿವಾಹವು ಅನ್ಯಾಯವಾದುದೆಂಬ ಶಾಸನವು ೧೯೨೯ರಲ್ಲಿ ಏರ್ಪಟ್ಟು ಪ್ರೌಢ ವಿವಾಹವು ಆಚರಣೆಯಲ್ಲಿ ಬಂದಿತು. ತಂದೆಯ ಸೊತ್ತು ಮಗನಿಗೆ ದೊರೆಯದಿದ್ದರೂ ಆತನ ಸಾಲವನ್ನು ಮಾತ್ರ ತೀರಿಸುವ ಹೊಣೆಗಾರಿಕೆಯು ಮಗನ ಮೇಲೆ ಇದ್ದೇ ಇತ್ತು. ಇದನ್ನು ನಿವಾರಣೆ ಮಾಡುವ ಶಾಸನ ೧೯೩೧ರಲ್ಲಿ ಏರ್ಪಟ್ಟಿತು. ಬೇರೆ ಬೇರೆ ಧರ್ಮದವರಲ್ಲಿ ಕೂಡಾ ಪರಸ್ಪರ ವಿವಾಹವಾಗಲು ಅವಕಾಶವಾಗುವ ಶಾಸನವೂ ಅದೇ ವರುಷ ಏರ್ಪಟ್ಟಿತು.

ಹಿಂದು ಪುರೋಹಿತರಿಗೆ ಸರಿಯಾದ ವೈದಿಕ ಶಿಕ್ಷಣವಿಲ್ಲದೆ ಅವರು ಶಿಕ್ಷಣದಲ್ಲಿ ತೇರ್ಗಡೆ ಹೊಂದಿದ ಬಹುಮಾನ ಪತ್ರ ಹೊಂದದೆ ಪುರೋಹಿತಗಿರಿ ಮಾಡಬಾರದೆಂತಲೂ ಲಗ್ನದಲ್ಲಿ ಹೇಳುವ ಮಂತ್ರಗಳ ಅರ್ಥವನ್ನು ದೇಶಭಾಷೆಯಲ್ಲಿ ವಧೂವರರಿಗೆ ತಿಳಿಸಿಕೊಡಬೇಕೆಂತಲೂ ೧೯೧೫ ಮತ್ತು ೧೯೩೫ರಲ್ಲಿ ಶಾಸನಗಳಾದವು.

—ಬಡೋದೆಯಲ್ಲಿ ಒಬ್ಬ ಅದಿಜನ ಸ್ತ್ರೀಯಳನ್ನು ಶಿಕ್ಷಕಳನ್ನಾಗಿ ನಿಯಮಿಸಿದ್ದರಿಂದ ಒಬ್ಬ ಸನಾತನಿಯು ಉಪವಾಸ ಮಾಡಿದ್ದಾನೆ!

# ಮಹಿಳಾ ಪ್ರಪಂಚ.

### ಮುಹಮ್ಮದೀಯ ಹೆಣ್ಣುಮಗಳು.

ಶ್ರೀಮತಿ ಎಸ್. ಎ. ಹುಸೆಯನ್ ಇಕ್ಬಾಲ್ ಉನ್ನೀಸ್ ಬೇಗಂ ಎಂಬುವವರು ಮೈಸೂರ ಸರಕಾರವ ವಿದ್ಯಾ ಖಾತೆಯಲ್ಲಿ ದ್ದಾರೆ.

ಇವರು ಇಂಗ್ಲೆಂಡಿಗೆ ಹೋಗಿ ಲಿಡ್ಸ್ ಯುನಿವ್ಹರ್ಸಿಟಿಯಲ್ಲಿ ಶಿಕ್ಷಣ ಹೊಂದಿ "ಎಜ್ಯುಕೇಶಿಯೊ"ವಲ್ಲಿ ಪದವಿಯನ್ನು ಪಡೆದು ಮಹಮ್ಮದೀಯ ಹೆಣ್ಣುಮಕ್ಕಳಲ್ಲಿ ಒಹು ಪ್ರಸಿದ್ಧಿಯನ್ನು ಹೊಂದಿದ್ದಾರೆ. ಇವರನ್ನು ಸ್ವಿತ್ಸರ್ಲಂಡ್ ದೇಶದಲ್ಲಿ ನಡೆಯುವ ಅಂತರ ರಾಷ್ಟ್ರೀಯ "ಗರ್ಲ್ ಗೈಡ್" ಪರಿಷತ್ತಿಗೆ ಪ್ರತಿನಿಧಿಗಳನ್ನಾಗಿ ಕಳುಹಿಸಿದ್ದಾರೆ.

### ಕುಮಾರಿ ಫಿಲೋಮೆನಾ ತಂಬು ಚೆಟ್ಟಿ, ಮೈಸೂರ.

ಕರ್ನಾಟಕ ಸಂಗೀತಕಲಾಕೋವಿದೆ.
ಇವರು ಸಂಗೀತ ಶಾಸ್ತ್ರದ ಹೆಚ್ಚಿನ ಶಿಕ್ಷಣಕ್ಕಾಗಿ ಯುರೋಪಕ್ಕೆ ಹೋಗಿದ್ದಾರೆ.

### ಪತಿಯ ಬಿಡುವ ಅಧಿಕಾರ.

ಪತಿಯು ಹೇಗೇ ಇರಲಿ, ಪತಿಯು ಅವನನ್ನು ಬಿಡಲು ಹಿಂದು ಧರ್ಮದಲ್ಲಿಯ ಬ್ರಾಹ್ಮಣಾದಿ ಮೂರು ವರ್ಣಗಳ ಸ್ತ್ರೀಯರಿಗೆ ಅಧಿಕಾರವಿರಲಿಲ್ಲ. ಶೂದ್ರ ಸ್ತ್ರೀಯರು ಮಾತ್ರ ಗಂಡನನ್ನು ಬಿಡಬಹುದು. ಈ ಪ್ರಕಾರ ಬ್ರಿಟಿಶ್ ಹಿಂದುಸ್ಥಾನದ ಶಾಸನವಿದೆ ಯಷ್ಟೆ. ಬಡೋದಾ ರಾಜ್ಯದಲ್ಲಿ ಹಿಂದು ಧರ್ಮದ ಯಾವ ವರ್ಣಕ್ಕೆ ಸೇರಿದ ಹೆಣ್ಣು ಮಗಳಾದರೂ ತನ್ನ ಗಂಡನು ಅನಾಚಾರಿ, ನಪುಂಸಕ ಮೊದಲಾದ ದೋಷಗಳುಳ್ಳವನಾಗಿದ್ದರೆ ಆತನನ್ನು ಬಿಡಲು ಅಧಿಕಾರವುಳ್ಳವಳಾಗಿದ್ದಾಳೆಂದು ೧೯೩೧ನೆಯ ಇಸವಿಯಲ್ಲಿ ಶಾಸನ ವಾಯಿತು. ಆ ಪ್ರಕಾರ ಅನೇಕ ಸ್ತ್ರೀಯರು ಪತಿಯ ಹಿಂಸೆಯಿಂದ ಪಾರಾಗುತ್ತಿದ್ದಾರೆ. ಬ್ರಿಟಿಶ್ ಹಿಂದುಸ್ಥಾನದ ಅನೇಕ ಹಿಂದು ಹೆಣ್ಣುಮಕ್ಕಳು ತಮ್ಮಲ್ಲಿಯೂ ಈ ಶಾಸನವೇಕೆ ಬರಬಾರದ ಅಥವಾ ನಾವು ಶೂದ್ರರಿಂದಾದರೂ ಏಕೆ ಹೇಳಿಸಿಕೊಳ್ಳಬಾರದಿತ್ತು? ಎಂದು ಮರುಗುತ್ತಿರಬಹುದು.

ಈ ಪ್ರಕಾರ ಅನೇಕ ಶಾಸನಗಳಿಂದ ಹಿಂದು ಸಮಾಜದ ಧಾರ್ಮಿಕ ಮೂಢ ಕಲ್ಪನೆಯಿಂದಿರುವ ಅನೇಕ ಅನರ್ಥಕರವಾ ರೂಢಿಗಳನ್ನು ನಿವಾರಣೆ ಮಾಡುವುದು ಅಗತ್ಯವಾಗಿದೆ.

### ಸೌ. ನಂಜಮ್ಮನವರ ಭಾಷಣ

೧೯೩೪ನೆಯ ಅಗಸ್ಟ ತಾ. ೧೬ನೆಯ ಗುರುವಾರ ಸಾಯಂಕಾಲ ಮೈಸೂರಿನಲ್ಲಿ ಸಾಹಿತ್ಯ ತೀರ್ಥ ವೇ|| ಗುರುಶಾಂತ ಶಾಸ್ತ್ರಿಗಳು ಆಧಣಿಮಠ ಬೈಲಹೊಂಗಲ ಇವರ ಉಪನ್ಯಾಸನಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ರಿಟೈರ್ಡ್ ಜೈಲ್ ಸೂಪರಿಂಟೆಂಡೆಂಟ್ ವಿದ್ವಾ|| ಆರ್. ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿ ಸೌ. ನಂಜಮ್ಮನವರು ಮಾಡಿದ ಉಪಸಂಹಾರ ಭಾಷಣದ ಸಾರಾಂಶ—

ನಮ್ಮ ರಾಜಧಾನಿಯಲ್ಲಿ ಉಂಟಾಗುವ ಚಳವಳಿಯ ನಮ್ಮಗಳಿಗೆ ದಿಗ್ಭ್ರಮೆಯನ್ನುಂಟುಮಾಡುತ್ತದೆ ಕೆಲವರು ಶ್ರೀ ಬಸವೇಶ್ವರನನ್ನೂ, ವಿರಕ್ತರನ್ನೂ ದೂಷಿಸಿರುವುದು ತಮ್ಮಗಳ ತಿಳಿದ ವಿಷಯವೇ ಆಗಿರುವುದು. ಶ್ರೀ ಬಸವೇಶ್ವರನು, ೧೩ನೇ ಶತಮಾನದಲ್ಲಿ ಅವತಾರವನ್ನೆತ್ತದಿದ್ದರೆ ನಮ್ಮ ವೀರಶೈವ ಮತ ಎಲ್ಲಿ ನೆಲೆಗೊಳ್ಳುತ್ತಿದ್ದಿತು? ಮತ್ತು ಪಂಚ ಪೀಠಗಳು ಸಹ ಎಲ್ಲಿ ಇರುತ್ತಿದ್ದವು? ವೀರಶೈವ ಮತವು ಖಿಲವಾಗುತ್ತಿದ್ದ ಕಾಲದಲ್ಲಿ ಪಂಚಪೀಠದವರು ಏನುಮಾಡುತ್ತಿದ್ದರು? ಪಂಚಪೀಠದವರು ನಾಲ್ಕು ಯುಗಗಳಲ್ಲಿಯೂ. ಬೇರೆಬೇರೆ ಹೆಸರುಗಳಿಂದ ಅವತಾರವನ್ನು ಎತ್ತಿದರೆಂದು ಯಾವ ಗ್ರಂಥಗಳು ಹೇಳುತ್ತವೆಯೋ ಆ ಗ್ರಂಥಗಳನ್ನು ಪರಿಶೀಲಿಸಿ ನೋಡಿದರೆ, ದ್ವಿತೀಯ ಶಂಭುವಾದ ಶ್ರೀ ಬಸವೇಶ್ವರನು ನಾಲ್ಕು ಯುಗಗಳಲ್ಲಿಯೂ, ಸ್ಕಾಂದಗಣೇಶ, ನೀಲಲೋಹಿತಗಣೇಶ, ವೃಷಭಗಣೇಶ, ಈ ಕಲಿಯುಗದಲ್ಲಿ ಬಸವಗಣೇಶ ಎಂದು ಅವತಾರವನ್ನು ಎತ್ತಿರುವುದು ವ್ಯಕ್ತವಾಗುತ್ತದೆ. ಕಲಿಯುಗದಲ್ಲಿ ವೀರಶೈವ ಮತವು ಖಿಲವಾಗುವ ಕಾಲದಲ್ಲಿ ಶ್ರೀ ಬಸವೇಶ್ವರನು ಕಲ್ಯಾಣದಲ್ಲಿ ಅವತರಿಸಿ, ವೀರಶೈವ ಮತವನ್ನು ಉದ್ಧಾರಮಾಡುತ್ತಾನೆಂದು ಕಾಲಜ್ಞಾನಿಗಳು ಹೇಳಿದ್ದರು. ಅದರಂತೆ ಶ್ರೀ ಬಸವೇಶ್ವರನು ಅವತರಿಸಿ ಅನೇಕ ಪವಾಡಗಳನ್ನು ಗೆದ್ದು ಮಹಾ ಮಹಿಮನೆಂದು ಪ್ರಖ್ಯಾತನಾಗಿರುವನಲ್ಲದೆ ಪುರುಷರಂತೆ ಸ್ತ್ರೀಯರಿಗೂ ದೀಕ್ಷಾ ಸಂಸ್ಕಾರ ಸ್ವಾತಂತ್ರ್ಯಾದಿ ಅಧಿಕಾರವನ್ನು ಕಲ್ಪಿಸಿ ಸ್ತ್ರೀ ಸಮಾಜಕ್ಕೆ ಮಹೋಪಕಾರಿಯಾಗಿರುತ್ತಾನೆ ಅಲ್ಲದೆ ವೇ|| ಪಟ್ಟದ ಷಡಾಕ್ಷರ ದೇವರು, ಪಾಲ್ಕುರಿಕೆಯ ಸೋಮನಾಥಾಧ್ಯರು, ಭೀಮಕವಿ, ಕವೀಶ್ವರ, ಭಟ್ಟಾಚಾರ್ಯ, ಕುಮಾರ ವ್ಯಾಸ ಮುಂತಾದ ಕವಿಗಳು ಶ್ರೀ ಬಸವೇಶ್ವರನನ್ನು ಹೊಗಳಿ ಪ್ರಶಂಸೆ ಮಾಡಿರುತ್ತಾರೆ. ಪಂಚಪೀಠಗಳಲ್ಲೊಬ್ಬರಾದ ಶ್ರೀ|| ವೀ|| ಪಂ|| ತಾರಾಧ್ಯರು ಸಹ ಶ್ರೀ ಬಸವೇಶ್ವರನನ್ನು ಹೊಗಳಿರುವರು. ಇಂಥ ಮಹಿಮಾ ಪುರುಷನನ್ನು ವೀರಶೈವರಾದ ಸರ್ವರೂ ಪೂಜಿಸಿ ಸ್ಮರಿಸುವುದು ಆದ್ಯ ಕರ್ತವ್ಯವಾಗಿರುತ್ತದೆ.

# ಭರತಖಂಡದಲ್ಲಿ
# ಎರಡು ಮಹಾ ವಿದ್ಯಾಪೀಠಗಳು.

ಭರತಖಂಡದ ಈಗಿನ ಮಹಾ ವಿಭೂತಿಗಳಲ್ಲಿ ಕವಿವರ್ಯ ರವೀಂದ್ರನಾಥ ಟಾಗೋರ ಇವರು ಮತ್ತು ಧರ್ಮಾತ್ಮಾ ಪಂ. ಮದನಮೋಹನ ಮಾಲವಿ ಇವರು ಬಹು ಗಣ್ಯರಾಗಿದ್ದಾರೆಷ್ಟೆ. ಇವರ ಈ ಅದ್ವಿತೀಯವಾದ ಗೌರವ ಪ್ರತಿಷ್ಠೆಗಳಿಗೆ ಇವರು ಸ್ಥಾಪಿಸಿರುವ ಮಹಾ ವಿದ್ಯಾಪೀಠಗಳೇ ಬಹುಮಟ್ಟಿಗೆ ಕಾರಣವೆಂದು ಹೇಳಬಹುದು. ಅದಕಾರಣ ಹಿಂದುಸ್ಥಾನದ ಘನತೆಯನ್ನು ಹೆಚ್ಚಿಸುವ ಈ ವಿದ್ಯಾಪೀಠಗಳ ಅಲ್ಪ ಪರಿಚಯವನ್ನಾದರೂ ಮಾಡಿಕೊಳ್ಳುವುದು ಯುಕ್ತವಲ್ಲವೆ?

### ವಿಶ್ವಭಾರತಿ.

ಕವಿವರ್ಯ ರವೀಂದ್ರನಾಥ ಟಾಗೋರರವರ ತಂದೆಯವರಾದ ಮಹರ್ಷಿ ದೇವೇಂದ್ರನಾಥ ಟಾಗೋರರವರು ಮಹಾ ದೈವ ಭಕ್ತರಾಗಿದ್ದರು. ಇವರು ಪ್ರಾಚೀನ ಋಷಿಗಳಂತೆ ಕಲಕತ್ತೆಯ ಹತ್ತಿರ ಒಂದು ರಮ್ಯವಾದ ಶಾಂತ ಪ್ರದೇಶದಲ್ಲಿ ಶಾಂತಿನಿಕೇತನ ಎಂಬ ಆಶ್ರಮವನ್ನು ಸ್ಥಾಪಿಸಿ ಅಲ್ಲಿಯೇ ಇರುತ್ತಿದ್ದರು.

ಅಲ್ಲಿಗೆ ಯಾವ ಮತ ಪಂಥ ಧರ್ಮದವರಾದರೂ ಬಂದು ಭಗವಂತನ ಸಂಬಂಧವಾಗಿ ತಿಳಿದುಕೊಳ್ಳಲು ಅನುಕೂಲವಿತ್ತು. ಅವರ ಮಕ್ಕಳಾದ ಈಗಿನ ಕವಿವರ್ಯರು ೧೯೦೧ನೆಯ ಇಸವಿಯಲ್ಲಿ ಒಂದು ಚಿಕ್ಕ ವಿದ್ಯಾಲಯವನ್ನು ಏರ್ಪಡಿಸಿದರು. ಅದು ದಿನೇ ದಿನೇ ಬೆಳೆಯುತ್ತ ಬಂದಿತು. ಕವಿವರ್ಯರು ತ್ರಿಖಂಡ ಪಂಡಿತರೆಂದು ಪ್ರಸಿದ್ಧಿಯನ್ನು ಹೊಂದಿದ ನಂತರ ನಾನಾ ದೇಶದವರೂ ಇವರ ಹತ್ತಿರ ಬರಲಾರಂಭಿಸಿದರು. ಆಗ ವಿಶ್ವಭಾರತಿ ಎಂಬ ವಿದ್ಯಾಪೀಠವನ್ನು ೧೯೨೧ನೆಯ ಇಸವಿಯಲ್ಲಿ ಸ್ಥಾಪಿಸಿದರು.

ಪೌರ್ವಾತ್ಯ ದೇಶಗಳ ಸಂಸ್ಕೃತಿಯ ಅಭ್ಯಾಸ, ಹಳ್ಳಿಯ ವಾಸವು ಸುಖಕರವಾಗುವ ಸಾಧನೋಪಾಯಗಳ ಪ್ರಯತ್ನ, ಜಗತ್ತಿನ ಪೂರ್ವ ಪಶ್ಚಿಮ ದೇಶಗಳಲ್ಲಿಯ ಶ್ರೇಷ್ಠರಾದರಗಳನ್ನು ಹೆಚ್ಚಿಸಿ ವಿಶ್ವಬಂಧುತ್ವವನ್ನುಂಟುಮಾಡುವುದು, ಇವೇ ಮೂರು ಈ ವಿದ್ಯಾಪೀಠದ ಮುಖ್ಯ ಉದ್ದೇಶಗಳು.

ಈ ಉದ್ದೇಶಗಳಿಗನುಗುಣವಾಗಿ ಇಲ್ಲಿ ಸ್ತ್ರೀ ಪುರುಷರೀರ್ವರಿಗೂ ಒಂದೇ ಕಡೆ ಶಿಕ್ಷಣ ದೊರೆಯುತ್ತದೆ. ಹೆಣ್ಣುಮಕ್ಕಳಿಗೆ ಅವಶ್ಯಕವಾಗಿರುವ ಪಾಕ ಶಾಸ್ತ್ರ ಮಕ್ಕಳ ಜೋಪಾನ ಮೊದಲಾದ ಎಲ್ಲ ಶಿಕ್ಷಣಗಳೂ ದೊರೆಯುತ್ತವೆ.

ಗಂಡುಮಕ್ಕಳಿಗೆ ಒಕ್ಕಲತನ, ಕೈಗಾರಿಕೆಯ ಶಿಕ್ಷಣಗಳೂ ದೊರೆಯುತ್ತವೆ. ಇವುಗಳಿಗಾಗಿ ಪ್ರತ್ಯೇಕವಾದ ಪ್ರಯೋಗ ಕ್ಷೇತ್ರಗಳಿವೆ. ಸಂಸ್ಕೃತ, ಹಿಂದಿ, ಬಂಗಾಲಿ, ಇಂಗ್ಲಿಷ, ಫ್ರೆಂಚ್, ಪಾಲಿ ಮೊದಲಾದ ಪ್ರಸಿದ್ಧ ಭಾಷೆಗಳೂ ಸಂಗೀತ ಚಿತ್ರ ಕಲೆಗಳೂ ಕಲಿಸಲ್ಪಡುತ್ತವೆ.

ಹಿಂದು, ಮುಸಲ್ಮಾನ, ಬೌದ್ಧ, ಜೈನ, ಪಾರ್ಸಿ, ಕ್ರೈಸ್ತ ಧರ್ಮಗಳ ಸಂಶೋಧನಾತ್ಮಕ ಮತ್ತು ತುಲನಾತ್ಮಕ ಅಧ್ಯಯನಗಳಿಗೆ ತುಂಬಾ ಅವಕಾಶವಿದೆ. ಅನೇಕ ದಾನಶೂರರು ತಮ್ಮತಮ್ಮ ಧರ್ಮಗಳ ಅಧ್ಯಯನಕ್ಕೋಸ್ಕರ ಸಾವಿರಗಟ್ಟಲೆ ರೂ. ಗಳನ್ನು ಈ ಸಂಸ್ಥೆಗೆ ವರ್ಷಾಶನವಾಗಿ ಕೊಟ್ಟಿದ್ದಾರೆ. ಇಲ್ಲಿ ಜಗತ್ತಿನ ಎಲ್ಲ ಭಾಗಗಳಿಂದಲೂ ಅಧ್ಯಯನಕ್ಕೆ ಬಂದಿರುವ ವಿದ್ವಾಂಸರನ್ನು ಕಾಣಬಹುದು. ಇಲ್ಲಿ ೩೪೫೦೦ ಗ್ರಂಥಗಳ ಒಂದು ಭಾಂಡಾರವಿದೆ. ೩೦೦೦ ಹಸ್ತಲಿಖಿತ ಗ್ರಂಥಗಳಿವೆ.

ಶಾಂತಿನಿಕೇತನದಲ್ಲಿ ದೊಡ್ಡದಾದ ಮುದ್ರಣ ಶಾಖೆಯೂ ಇದೆ ಇಲ್ಲಿ ಇಂಗ್ಲಿಷ, ಹಿಂದಿ, ಬಂಗಾಲಿ ಭಾಷೆಗಳ ಪ್ರಸಿದ್ಧ ಗ್ರಂಥಗಳು ಅಚ್ಚಾಗುತ್ತಿವೆ. ೧೯೩೧ನೆಯ ವರುಷದಲ್ಲಿ ಬಂಗಾಲಿ ಪುಸ್ತಕಗಳ ವಿಕ್ರಯದಿಂದಲೇ ೩೫೦೦೦ ರೂ. ಬಂದಿದ್ದವು.

ಹಳ್ಳಿಗಳಿಗೆ ಹೋಗಿ ಗ್ರಾಮಸುಧಾರಣೆ ಮಾಡುವ ಶಿಕ್ಷಣವೂ ಇಲ್ಲಿ ದೊರೆಯುತ್ತದೆ. ನೆರೆಹಾವಳಿ, ಬರಗಾಲಗಳಲ್ಲಿ ನಿರಾಧಾರಿಗಳಾದ ಬಡಜನಗಳ ಸಹಾಯಕ್ಕೆ ಇಲ್ಲಿಯ ಶಿಕ್ಷಕರೂ ವಿದ್ಯಾರ್ಥಿಗಳೂ ತುಂಬಾ ಪ್ರಯತ್ನಿಸುತ್ತಾರೆ. ಈ ಸಂಸ್ಥೆಯಿಂದ ಒಂದು ವೈದ್ಯಾಲಯವೂ ನಡೆದಿದೆ. ಇಲ್ಲಿ ಒಂದು ಸಹಕಾರಿ ಬ್ಯಾಂಕು ಕೂಡಾ ಇದೆ.

### ಹಿಂದು ವಿಶ್ವ ವಿದ್ಯಾಲಯ.

ವಿಶ್ವಭಾರತೀ ವಿದ್ಯಾಪೀಠವು ಅದರ ಹೆಸರಿಗೆ ತಕ್ಕಂತೆ ವಿಶ್ವಕ್ಕೇನೇ ಸಂಬಂಧಪಟ್ಟದ್ದಾಗಿದೆ. ಮಾನವ ಜಾತಿಯಲ್ಲಿ ಬಂಧುತ್ವವನ್ನೂ, ಸುಖಶಾಂತಿಗಳನ್ನೂ ಸ್ಥಾಪಿಸುವುದೇ ಅದರ ಮುಖ್ಯ ಗುರಿ.

ಈ ಹಿಂದು ವಿಶ್ವವಿದ್ಯಾಲಯವಾದರೋ ಹಿಂದುಸ್ಥಾನಕ್ಕೇನೇ ಮುಖ್ಯವಾಗಿ ಸಂಬಂಧಪಟ್ಟದ್ದು. ಅದರಲ್ಲಿಯೂ ಹಿಂದು ಜನಾಂಗದ ಸಕಲ ಶ್ರೇಯಸ್ಸುಗಳೇ ಇದರ ಮುಖ್ಯ ಗುರಿ. ಇದನ್ನು ಕಾಶಿಯಲ್ಲಿ ಧರ್ಮಾತ್ಮಾ ಮಾಲವೀಜಿಯವರು ೧೯೧೬ನೆಯ ಇಸವಿಯಲ್ಲಿ ಸ್ಥಾಪಿಸಿದರು.

ಈ ವಿದ್ಯಾಪೀಠಕ್ಕೆ ಮಾಲವೀಜಿಯವರು ಮೊದಲು ಒಂದು ಕೋಟಿ ೫ ಲಕ್ಷ ರೂ. ಗಳನ್ನು ಕೂಡಿಸಿದರು. ಇದು ೧೩೦೦ ಎಕರೆ ಭೂಮಿಯಲ್ಲಿ ಕಟ್ಟಲ್ಪಟ್ಟಿದೆ. ಇಲ್ಲಿ ಸಾಧಾರಣ ೧೫೦ ಕಟ್ಟಡಗಳಿವೆ. ಇವುಗಳಿಗಾಗಿ ೪೬॥ ಲಕ್ಷ ರೂ. ಗಳು ವೆಚ್ಚವಾಗಿವೆ.

ಇಲ್ಲಿ ಸಾಧಾರಣ ೩೦ ತರಹದ ವಿದ್ಯಾ ಶಾಖೆಗಳಿವೆ. ಇವುಗಳಲ್ಲಿ ಒಟ್ಟು ೨೨೦೦ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಸಂಸ್ಕೃತ ಇಂಗ್ಲಿಷ್, ವಿಜ್ಞಾನ, ಆಯುರ್ವೇದ, ಕೈಗಾರಿಕೆ ಮೊದಲಾದ ಐಹಿಕ ಮತ್ತು ಪಾರಲೌಕಿಕ ಎರಡೂ ತರದ ವಿದ್ಯೆಗಳು ಕಲಿಸಲ್ಪಡುತ್ತವೆ. ಇಲ್ಲಿ ೧೫೦ ಅಧ್ಯಾಪಕರಿದ್ದಾರೆ. ಇಲ್ಲಿಯ ಮಹಾ ಗ್ರಂಥಾಲಯದಲ್ಲಿ ೪೦೦೦ ಗ್ರಂಥಗಳಿವೆ. ಹಿಂದುಸ್ಥಾನದ ಎಲ್ಲ ಭಾಗಗಳಿಂದಲೂ ಇಲ್ಲಿಗೆ ವಿದ್ಯಾರ್ಥಿಗಳು ಕಲಿಯಲಿಕ್ಕೆ ಬರುತ್ತಾರೆ.

ಈ ವರೆಗೆ ೧॥ ಕೋಟಿ ರೂ. ಗಳು ಈ ವಿದ್ಯಾಪೀಠಕ್ಕೆ ವೆಚ್ಚವಾಗಿವೆ. ಇನ್ನೂ ೪ ಕೋಟಿ ರೂ. ಗಳು ದೊರೆತರೆ ಇಲ್ಲಿಯ ಎಲ್ಲಾ ಶಿಕ್ಷಣಗಳೂ ಕೃಷ್ಟಿಕರವಾಗಿ ಜರುಗಲು ಅವಕಾಶವಾಗುತ್ತದೆಂದು ಮಾಲವೀಜಿಯವರ ಅಭಿಪ್ರಾಯ. ಅದಕ್ಕಾಗಿ ೧೯೩೪ನೆಯ ಇಸವಿಯಲ್ಲಿ ಒಂದು ಕೋಟಿ ರೂ. ಗಳ ದೇಶಿಯಿಂದ ಜನರನ್ನು ಪ್ರಾರ್ಥಿಸಿಕೊಂಡಿದ್ದರು. ಈಗ ಈ ವಿದ್ಯಾಪೀಠಕ್ಕೆ ಪ್ರತಿವರುಷ ೧೦ ಲಕ್ಷ ರೂ. ಗಳ ವೆಚ್ಚ ಬೇಕಾಗಿದೆ

# ರಾಷ್ಟ್ರೀಯ ಚಟುವಟಿಕೆಗಳು.

### ರಾಷ್ಟ್ರೀಯ ಪಕ್ಷದ ಅಧಿವೇಶನ.

ಕಳೆದ ೧೯೧೭ನೆಯ ತಾರೀಖಿನ ದಿವಸ ಕಲಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಧರ್ಮಾತ್ಮಾ ಮಾಲವೀಜಿಯವರು ಹೀಗೆ ಹೇಳಿದರು—ಕಳೆದ ೯೦ ವರುಷಗಳಿಂದ ನಾನು ರಾಷ್ಟ್ರೀಯ ಸಭೆಯನ್ನು ಬಿಟ್ಟುಹೋಗಿದ್ದಿಲ್ಲ. ಆದರೆ ಈಗ ಅಂಥ ಪ್ರಸಂಗವು ಬಂದುದಕ್ಕೆ ಉಪಾಯವಿಲ್ಲ ಜಾತಿ ನಿರ್ಣಯಕ್ಕೆ ನಾವು ಒಲವಾಗಿ ವಿರೋಧಿಸದಿದ್ದರೆ ಸ್ವರಾಜ್ಯ ಸಿಗುವದಂತೂ ಇರಲಿ, ಬ್ರಿಟಿಶರ ಹೆಚ್ಚಳವು ಇನ್ನೂ ಅನೇಕ ವರುಷ ಉಳಿದೀತು. ಬಿಳೀ ಕಾಗದವು ಪಾಸು ಮಾಡಲ್ಪಟ್ಟು ಸರಕಾರದವರು ಮುದ್ರೆ ಒತ್ತಿದ ಮೇಲೆ ಬದಲು ಮಾಡುವರೆ? ಆದಕ್ಕಾಗಿ ನಮ್ಮ ಉದ್ದೇಶವು ರಾಷ್ಟ್ರೀಯ ಸಭೆಯನ್ನು ಹಿಂದೂಡುವುದಿರುವುದಿಲ್ಲ. ಆದರೆ ರಾಷ್ಟ್ರಸೇವೆಯಲ್ಲಿಯ ಅದರ ಉಚ್ಚ ಸ್ಥಾನವು ಪುನಃ ಪ್ರಾಪ್ತವಾಗಬೇಕೆಂದೇ ನಮ್ಮ ಇಚ್ಛೆ ಇದೆ. ಈ ಪಕ್ಷವು ರಾಷ್ಟ್ರೀಯ ಸಭೆಯ ಹೊರಗಿರುವ ಜನರನ್ನೂ ಸಭಾಸದರನ್ನಾಗಿ ಮಾಡಿಕೊಂಡು ಶುದ್ಧ ರಾಷ್ಟ್ರೀಯ ತತ್ವಗಳ ಮೇರೆಗೆ ರಾಷ್ಟ್ರೀಯ ಸಭೆಯ ಒಳಗೂ ಹೊರಗೂ ಚಟುವಟಿಕೆಯನ್ನು ನಡೆಯಿಸುವದು.

ನಂತರ ರಾಷ್ಟ್ರೀಯ ವೃತ್ತಿಯ ಮೌ. ಅಬದುರ್ ಅರ್. ಸಮದ ಎಂಬುವವರು ಜಾತಿ ನಿರ್ಣಯವನ್ನು ಮಾನ್ಯ ಮಾಡುವ ದೆಂದರೆ ರಾಷ್ಟ್ರೀಯತ್ವವನ್ನು ಮಣ್ಣು ಪಾಲು ಮಾಡಿದಂತೆಯೇ ಸರಿ ಎಂದು ಹೇಳಿದರು.

ಡಾ. ರವೀಂದ್ರನಾಥ ಟಾಗೋರ ಇವರು ಒಂದು ಸಂದೇಶವನ್ನು ಕಳಿಸಿ ಜಾತೀಯ ಐಕ್ಯವಾಗದ ಹೊರ್ತು ಹೊಣೆಗಾರಿಕೆಯು ಯಾವ ರಾಜ್ಯವೂ ಸ್ಥಿರವಾಗಿರಲಾರದು; ಈ ಐಕ್ಯವನ್ನೇ ಉಂಟು ಮಾಡುವದಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕು ಎಂದು ತಿಳಿಸಿದರು.

ಇದರ ಕಾರ್ಯಕಾರಿ ಮಂಡಲಕ್ಕೆ ಪಂ ಮಾಲವೀಜಿಯವರು ಅಧ್ಯಕ್ಷರು ಮತ್ತು ಶ್ರೀ ಅಣೆಯವರು ಕಾರ್ಯದರ್ಶಿಗಳು.

### ಮುಂಬಯಿಯಲ್ಲಿ ರಾಷ್ಟ್ರೀ ಸಭೆಯ ಸಿದ್ಧತೆ.

ಅಕ್ಟೋಬರ ತಿಂಗಳದಲ್ಲಿ ಮುಂಬಯಿಯಲ್ಲಿ ಕೂಡಲಿರುವ ರಾಷ್ಟ್ರೀಯ ಸಭೆಯ ವ್ಯವಸ್ಥೆಯು ಆಸ್ಥೆಯಿಂದ ನಡೆಸಲ್ಪಡುತ್ತಲಿದೆ. ವರಳಿ ಬೈಲಿನಲ್ಲಿ ರಾಷ್ಟ್ರಸಭೆಯು ಸ್ವತಂತ್ರವಾದ ಗುಡಾರಗಳನ್ನು ಹೊಡೆಯಬೇಕೆಂದು ಸ್ವಾಗತ ಸಮಿತಿಯಲ್ಲಿ ನಿರ್ಣಯವಾಗಿದೆ. ಇದಕ್ಕಾಗಿ ೨೮೦೦೦ ರೂ.ಗಳು ವೆಚ್ಚ ಮಾಡಲ್ಪಡುವವು.

### ಕಾರವಾರ ರೈತರ ಕಷ್ಟ ಪರಿಹಾರಕ ಸಮಿತಿಯ ಬಿನ್ನಹ.

ಕಾರವಾರದ ರೈತರು ಶಾಸನಭಂಗದ ಆಂದೋಲನದಲ್ಲಿ ಮಾಡಿದ ತಮ್ಮ ಉಜ್ವಲವಾದ ಸ್ವಾರ್ಥತ್ಯಾಗದಿಂದ ರಾಷ್ಟ್ರೀಯ ಸಭೆಯ ಕೀರ್ತಿಯನ್ನು ಕಾಯ್ದುಕೊಟ್ಟಿದ್ದಾರೆ. ಈಗ ಅವರು ಮನೆಮಾರುಗಳಿಲ್ಲದೆ, ಹೊಟ್ಟೆಗೆ ಗತಿಯಿಲ್ಲದೆ ಬಳಲುತ್ತಿರುವರು. ಈ ವರುಷದ ಬೆಳೆಯು ಅವರ ಕೈಸೇರುವವರೆಗೆ ಅವರಿಗೆ ಅನ್ನ ವಸ್ತ್ರ ಮತ್ತು ದನ ಬೀಜಗಳನ್ನು ಪೂರೈಸಿಕೊಡುವದಕ್ಕಾಗಿ ಒಂದು ಲಕ್ಷ ರೂ. ಗಳಾದರೂ ಅತ್ಯಾವಶ್ಯಕವೆಂದು ಸಮಿತಿಯವರು ಬಿನ್ನವಿಸಿಕೊಂಡಿದ್ದಾರೆ. ಕರ್ನಾಟಕ ಬಂಧುಗಳು ತಮ್ಮ ಈ ದೀನಬಂಧುಗಳ ಮೊರೆಯನ್ನು ಲಕ್ಷಿಸುವದು ಅವರ ಕರ್ತವ್ಯವಲ್ಲವೆ?

ಚಾಳೀಸಗಾಂವದ ಪ್ರಸಿದ್ಧ ವಕೀಲ ಶ್ರೀ ಅನಂತ ವಿನಾಯಕ ಉರ್ಫ ಆಣ್ಣಾಸಾಹೇಬ ಬರ್ವೆಯವರು ಚಾಳೀಸಗಾಂವದ ರಾಷ್ಟ್ರೀಯ ಶಾಖೆಯ ಅಧ್ಯಕ್ಷರ ಮುಖಾಂತರ ಶ್ರೀ ಗಂಗಾಧರ ರಾವ ದೇಶಪಾಂಡೆಯವರ ಕಡೆಗೆ ಕರ್ನಾಟಕ ಆಪದ್ಗ್ರಸ್ತ ಸತ್ಯಾಗ್ರಹಿ ರೈತರ ಸಹಾಯಾರ್ಥವಾಗಿ ೫೦ ರೂ. ಕಳಿಸಿರುವರು.

### ಒಬ್ಬ ಇಂಗ್ಲೀಷ್ ಮಿತ್ರನ ಎಚ್ಚರಿಕೆ.

ಈ ತಲೆಬರಹದ ಕೆಳಗೆ ಮಹಾತ್ಮಾ ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ ಹೀಗೆ ಒರೆದಿರುವರು—

ಒಬ್ಬ ಇಂಗ್ಲೀಷ ಮಿತ್ರನು ಈ ಪ್ರಕಾರ ತಿಳಿಸಿರುತ್ತಾನೆ—ನಿಮ್ಮ ಉಪೋಷಣೆಯನ್ನು ನಾವು ತಿಳಿಯಲಾರೆವು. ನಿಮ್ಮ ಹಿಂದಿನ ಉಪೋಷಣೆಗಳನ್ನು ಕಂಡು ನಮಗೆ ತಡೆಯುವದಾಗಲಿಲ್ಲ. ಇದೇ ಪ್ರಕಾರ ಪುನಃ ಪ್ರಾರಂಭಿಸಿದರೆ ನೀವು ಅಪಮಾನ ಹೊಂದುವಿರಿ.

ಈ ಎಚ್ಚರಿಕೆಯು ಏನೂ ಸಂಬಂಧವಿಲ್ಲದೆ ನನ್ನ ಕೀರ್ತಿಗಾಗಿ ಕಳುಹಿಸಲ್ಪಟ್ಟಿರುವದೆಂಬುದನ್ನು ನಾನು ಬಲ್ಲೆನು. ಮತ್ತು ಪ್ರೊಟೆಸ್ಟಂಟರು ಉಪೋಷಣೆಗಳನ್ನು ಸೇರುವುದಿಲ್ಲೆಂಬುದೂ ನನಗೆ ಗೊತ್ತಿದೆ. ನನ್ನ ಇಂಗ್ಲೀಷ ಮಿತ್ರರೊಡನೆ ನಾನು ಸರಿಯಾಗಿ ಇರಬೇಕೆಂದು ಇಚ್ಛಿಸುವೆನಾದರೂ ಈ ವಿಷಯದಲ್ಲಿ ನಾನು ನಿಜವಾಗಿ ಅಸಹಾಯನಿರುವೆನು. ಈ ಉಪೋಷಣೆಗಳ ಹೊಣೆಗಾರನು ನಾನಲ್ಲ. ನಾನು ವಿನೋದಕ್ಕಾಗಿ ಅವುಗಳನ್ನು ಕೈಕೊಳ್ಳುವುದಿಲ್ಲ. ಯಶದ ಆಶೆಗಾಗಿ ನನ್ನ ಮಾಂಸವನ್ನು ಸುಡಲಾರೆನು. ಹಸಿವೆಯ ಸಂಕಟವನ್ನೂ ಶಾರೀರಿಕ ಯಾತನೆಗಳನ್ನೂ ನಾನು ಆನಂದದಿಂದ ಸಹಿಸಬಲ್ಲೆನಾದರೂ ನನಗೆ ಕಷ್ಟವಾಗುವುದಿಲ್ಲೆಂದು ಮಾತ್ರ ಯಾರೂ ತಿಳಿಯಕೂಡದು. ಈ ಕಷ್ಟಗಳನ್ನು ಪರಮಾತ್ಮನು ಕೊಡುತ್ತಾನೆಂದೇ ನಾನು ಅವನ್ನು ಸಹಿಸಬಲ್ಲೆನು. ಮತ್ತು ಆ ಸಹಿಸುವ ಶಕ್ತಿಯನ್ನೂ ಅವನೇ ಕೊಡುತ್ತಾನೆ. ದೇವಾ, ನನ್ನನ್ನು ಈ ಒರೆಗೆ ಹಚ್ಚಬೇಡ ಎಂದು ನಾನು ಕೇಳಿಕೊಳ್ಳಬಲ್ಲೆನು ಮಾತ್ರ. ನನ್ನ ಪ್ರಾರ್ಥನೆಯು ನಿಷ್ಫಲವಾಗಿ ಮೃತ್ತೊಂದು ಉಪೋಷಣೆಯ ಪ್ರಸಂಗವು ಒದಗಿದರೆ ನನ್ನ ಕೀರ್ತಿಯೆಲ್ಲ ಹೋಗಲಿ ಅಥವಾ ಮತ್ತೇನಾದರೂ ಆಗಲಿ ನಾನು ಅದನ್ನು ಕೈಕೊಳ್ಳಲೇಬೇಕು.

ಆತ್ಮನನ್ನು ಮರೆತು ಸಕಲಲೋಕವನ್ನು ಸಂಪಾದಿಸಿದರೂ ಮನುಷ್ಯನಿಗೆ ಬಂದ ಲಾಭವೇನು?

### ಶೋಚನೀಯ ನಿಧನ.

ಸುಪ್ರಸಿದ್ಧ ಸಿದ್ದೇಶ್ವರ ತಿಜೋರಿ ಕಂಪನಿಯ ಒಡೆಯರಾದ ಹುಬ್ಬಳ್ಳಿಯ ಶ್ರೀ ಸಿದ್ಧಪ್ಪನವರು ಕಮ್ಮಾರ ಇವರು ಕಳೆದ ಮಂಗಳವಾರ ಶಿವಾಧೀನರಾದರೆಂಬುದನ್ನು ಕೇಳಿ ಅತ್ಯಂತ ವಿಷಾದವಾಗುತ್ತಿದೆ. ಇವರು ತಮ್ಮ ಕಾರ್ಯಕುಶಲತೆಯಿಂದ ಸಿದ್ಧಗೊಳಿಸಿದ ತಿಜೋರಿಗಳು ಕರ್ನಾಟಕದಲ್ಲಿಯೇ ಏಕೆ ಪರ ಪ್ರಾಂತಗಳಲ್ಲಿಯೂ ವಿಶೇಷವಾದ ಮನ್ನಣೆಯನ್ನು ಹೊಂದಿರುವುದು ಇವರ ಘನಕೀರ್ತಿಯ ದ್ಯೋತಕವಾಗಿದೆ. ಇವರಿಗೆ ಇಬ್ಬರು ತಮ್ಮಂದಿರೂ, ಒಬ್ಬ ಮಗನೂ, ವೃದ್ಧ ತಾಯಿಯೂ ಇದ್ದಾರೆ. ಮೃತರ ಆತ್ಮನು ಚಿರ ಶಾಂತಿಯನ್ನು ಹೊಂದಲಿ.





ಶಾ. ಶ. ೧೮೫೬ ನೆಯ ಶ್ರಾವಣ ಬ|| ೩ ಸೋಮವಾರ.

## ಹಿಂದುಗಳ ಮುಂದಣ ಅನರ್ಥ.

ಹಿಂದು ಜನಾಂಗವು ಜಗತ್ತಿನಲ್ಲಿ ಅತಿ ಪುರಾತನವಾದುದು. ಮತ್ತು ಬಹು ಘನವಾದುದು ಆಗಿದೆ. ಆದರೆ ಅದರ ಈಗಣ ಸ್ಥಿತಿಯು ಬಹು ಶೋಚನೀಯವಾಗಿದೆ. ಇಷ್ಟೇ ಅಲ್ಲ; ದಿನೇ ದಿನೇ ಅದು ಅಧೋಗತಿಗೆಗೆನೇ ಹೋಗುವಂತೆ ತೋರುತ್ತಲಿದೆ.

ಈಗ ಎರಡೇ ಸಾವಿರ ವರುಷಗಳ ಪೂರ್ವದಲ್ಲಿ ಅಶೋಕನ ಕಾಲಕ್ಕೆ ಹಿಂದುಸ್ಥಾನದವರ ಪ್ರಭುತ್ವವು ಉತ್ತರ ಇರಾಣ ದೇಶದ ವರೆಗೆ ವ್ಯಾಪಿಸಿತ್ತು. ಮಂದೊಂದು ಸಾವಿರ ವರುಷಗಳಲ್ಲಿ ಉತ್ತರ ಭಾಗವು ಬೇರೆ ಜನಾಂಗದ ವಶವಾಗಿ ಪಂಜಾಬದವರೆಗೆ ಉಳಿಯಿತು.

ಈ ಒಂದು ಸಾವಿರ ವರುಷಗಳಲ್ಲಿ ಎಂದರೆ ಮುಸಲ್ಮಾನರು ಈ ದೇಶಕ್ಕೆ ದಂಡೆತ್ತಿ ಬಂದ ನಂತರ ಈ ವರೆಗೂ ಹಿಂದುಗಳು ರಾಜಕೀಯ ಪಾರತಂತ್ರ್ಯದಲ್ಲಿಯೇ ಹೆಚ್ಚುಹೆಚ್ಚಾಗಿ ಬಳಲುತ್ತ ಬಂದಿದ್ದಾರೆ. ಈ ಪ್ರಕಾರ ಹಿಂದುಗಳು ಇತ್ತಲಾಗಿ ರಾಜ್ಯವೊಂದನ್ನೇ ಕಳೆದುಕೊಳ್ಳಲಿಲ್ಲ; ತಮ್ಮ ಧರ್ಮ ಬಾಂಧವರನ್ನೂ ಕಳೆದುಕೊಳ್ಳುತ್ತ ಕ್ಷೀಣಾವಸ್ಥೆಯನ್ನು ಹೊಂದುತ್ತ ಬಂದರು.

ಈಗ ಹಿಂದುಸ್ಥಾನದಲ್ಲಿ ಏಳುಕೋಟಿ ಮುಸಲ್ಮಾನರಿದ್ದಾರಷ್ಟೆ. ಇವರೆಲ್ಲಾ ಅರಬಸ್ಥಾನ, ತುರ್ಕಸ್ಥಾನ ಮೊದಲಾದ ಮುಸಲ್ಮಾನ ರಾಷ್ಟ್ರಗಳಿಂದ ಬಂದವರೇ? ಅಲ್ಲವೇ ಅಲ್ಲ. ಇವರಲ್ಲಿ ೧೦೦ಕ್ಕೆ ೯೯ ಜನ ಮುಸಲ್ಮಾನರು ಹಿಂದುಗಳೇ ಮಹಮ್ಮದೀಯರಾದವರಲ್ಲವೆ? ಮುಸಲ್ಮಾನ ಧರ್ಮವು ಇಲ್ಲಿ ಪ್ರಸಾರವಾಗದೆ ಇದ್ದಿದ್ದರೆ ಈ ಏಳು ಕೋಟಿ ಜನರು ಹಿಂದುಗಳೇ ಆಗಿರುತ್ತಿರಲಿಲ್ಲವೆ?

ಕಳೆದ ೫೦೦ ವರುಷಗಳ ಹಿಂದೆ ಇಲ್ಲಿ ಒಬ್ಬರಾದರೂ ಕ್ರೈಸ್ತರಿದ್ದರೇ? ಈಗ ೬೦ ಲಕ್ಷ ಕ್ರೈಸ್ತರು ಈ ದೇಶದಲ್ಲಿದ್ದಾರಷ್ಟೆ. ಇವರಲ್ಲಿ ಕೂಡಾ ೧೦೦ ಕ್ಕೆ ೯೯ ಜನ ಹಿಂದುಗಳೇ ಕ್ರೈಸ್ತ ಮತಕ್ಕೆ ಸೇರಿದವರಲ್ಲವೇ? ಸಂಖ್ಯೆಯಲ್ಲೇನಿದೆ? ಯಾವ ಸಮಾಜದವರು ಹೆಚ್ಚಿದ್ದರೇನು? ಎಂದು ಕೆಲವರು ಯೋಚಿಸಬಹುದು. ಅದು ತಪ್ಪು. ಈ ವಿಚಾರವು ಬಹು ಘಾತಕವಾದುದು. ಎಲ್ಲಿ ಆದಾಯ ವಿಲ್ಲದೆ ವೆಚ್ಚವು ಮಾತ್ರ ಯಥೇಚ್ಛವಾಗಿ ನಡೆಯುತ್ತದೆಯೋ ಅಲ್ಲಿ ದಿವಾಳಿಯಾಗುತ್ತದೆಂದು ಹೇಳಲು ಭವಿಷ್ಯವಾದಿಯು ಬೇಕೆ? ಹಿಂದುಗಳ ಸ್ಥಿತಿಯಾದರೂ ಹೀಗೆಯೇ ಆಗುವುದಿಲ್ಲವೆ?

ಪಂಜಾಬ ಪ್ರಾಂತದಲ್ಲಿ ಹಿಂದುಗಳ ದುಷ್ಪಟ್ಟು ಮುಸಲ್ಮಾನರಾಗಿದ್ದಾರೆ. ಆದುದರಿಂದ ಅಲ್ಲಿಯ ಪ್ರಾಂತಿಕ ಮಂಡಲಿಯ ಒಟ್ಟು ೧೭೫ ಸಭಾಸದರಲ್ಲಿ ೮೬ ಜನರು ಮುಸಲ್ಮಾನರಿದ್ದಾರೆ. ಹಿಂದುಗಳಿಗೆ ಇವರ ಅರ್ಧದಷ್ಟು ಸ್ಥಳ ದೊರೆಯಬಹುದು. ಎಂದಮೇಲೆ ಅಲ್ಲಿ ಯಾರ ಬಹುಮತದಂತೆ ಪ್ರಭುತ್ವವಾಗಬಹುದು?

ಬಂಗಾಲದಲ್ಲಿ ಮುಸಲ್ಮಾನರ ಸಂಖ್ಯೆಯು ಹಿಂದುಗಳಿಗೆ ಸ್ವಲ್ಪ ಹೆಚ್ಚಿದ್ದ ಮಾತ್ರದಲ್ಲಿಯೇ ಒಟ್ಟು ೨೫೦ ಸಭಾಸದರಲ್ಲಿ ೧೧೯ ಸಭಾಸದರು ಮುಸಲ್ಮಾನರಾಗುವರು. ಹಿಂದುಗಳಿಗೆ ೯೦ ಸ್ಥಳಗಳು ದೊರೆಯುವುದು ಕಷ್ಟ. ಎಂದಮೇಲೆ ಅಲ್ಲಿ ಯಾರ ಬಹುಮತವಾಗ ಬಹುದು?

ಜಾತಿ ನಿರ್ಣಯವು ಅನ್ಯಾಯವಾಗಿದೆಯೆಂದು ಪಂಜಾಬ, ಬಂಗಾಲ ಪ್ರಾಂತಗಳ ಹಿಂದುಗಳು ಗೋಳಿಡುವುದಾದರೂ ಏಕೆ? ಈ ದೇಶದ ಪ್ರಭುತ್ವವು ಪ್ರಜಾಮತದಂತೆಯೇ ನಡೆಯುತ್ತ ಹೋಗುವುದು. ಯಾವ ಮತ ಪಂಗಡಗಳ ಜನರು ಹೆಚ್ಚಿರುತ್ತಾರೆಯೋ ಅವರ ಅಭಿಪ್ರಾಯವೇ ಮಾನ್ಯವಾಗುವುದು. ಆದುದರಿಂದ ಹಿಂದುಗಳಿಗೆ ಮುಂದೆ ಬರುವ ಅನರ್ಥವನ್ನು ಈಗಲೇ ಯೋಚಿಸಿ ಅದರ ಪರಿಹಾರಕ್ಕಾಗಿ ಪ್ರಯತ್ನಿಸುವುದು ಯುಕ್ತವಲ್ಲವೆ?

ಪಂಜಾಬ, ಸಿಂಧ, ಕಾಶ್ಮೀರ ಭಾಗಗಳಲ್ಲೆಲ್ಲಾ ಮುಸಲ್ಮಾನರ ಸಂಖ್ಯೆಯೇ ಅತ್ಯಧಿಕ. ಹಾಗೆಯೇ ಬಂಗಾಲ ಪ್ರಾಂತದಲ್ಲಿಯೂ ಮುಸಲ್ಮಾನರು ಹೆಚ್ಚಿದ್ದಾರೆ. ಎಂದಮೇಲೆ ಆ ಉತ್ತರ ಭಾಗವೊಂದು 'ಮಹಮ್ಮೆಡನ್ ಇಂಡಿಯಾ' ಆಗುವ ಸಂಭವವು ಮುಂದೆ ಬರಲಾರದೆ?

ಹಿಂದು ಸಮಾಜ ವಿಘಟನೆಗೆ ಸಾಧಕವಾದ ಮೇಲು ಕೀಳು ಭಾವನೆ, ವರ್ಣವಿಷಯ ಮೊದಲಾದ ಕೊಳೆಗಳಿರುವಾಗ ಸಂಘಟನೆ ಯಾಗುವುದೆಂತು? ಹಿಂದು ಸಂಘಟನೆಯಾಗಬೇಕೆಂದು ಹೇಳುವ ಮಾತ್ರದಿಂದ ಆಗುವುದೆ? ಅಂತಹ ಸಮಾನತ್ವ ಮತ್ತು ಪ್ರೇಮಾದರಗಳನ್ನುಂಟುಮಾಡುವ ಸುಧಾರಣೆಗಳು ಹಿಂದು ಸಮಾಜದಲ್ಲಿ ನಡೆಯಲು ಹಿಂದು ಸಮಾಜಾಭಿಮಾನಿಗಳಾದ ಪ್ರಮುಖರು ಮತ್ತು ಉತ್ತಮ ವರ್ಣದವರೆಂದು ಹೇಳಿಕೊಳ್ಳುವವರು ಪ್ರಯತ್ನಿಸ ಬಾರದೆ?

ಹಿಂದುಗಳು ಈಗಲಾದರೂ ಎಚ್ಚೆತ್ತು, ತಮ್ಮಲ್ಲಿರುವ ಸಾವಿರಾರು ಕುಲ ಪಂಗಡಗಳನ್ನು ತೆಗೆದು ಹಾಕಿ, ಮತಗಳ ಮೇಲಿಂದ ಸಂಘಟನೆಯನ್ನುಂಟುಮಾಡಿ, ವರ್ಣಗಳ ದುರಭಿಮಾನವನ್ನು ಬಿಟ್ಟು ಹಿಂದುಗಳೆಲ್ಲರಿಗೂ ಸಮಾನವಾದ ಸಾಮಾಜಿಕ ಸ್ವಾತಂತ್ರ್ಯ ಸೌಲಭ್ಯಗಳನ್ನುಂಟುಮಾಡಿಕೊಟ್ಟು, ಶುದ್ಧಿ ಶತ್ಸಾವಲಂಬಿಗಳಾಗುವುದು ಅತ್ಯಾವಶ್ಯಕವಲ್ಲವೆ? ಇಲ್ಲದಿದ್ದರೆ ಹಿಂದುಗಳ ಮುಂದಣ ಅನರ್ಥವು ಭೀಕರವಾದುದಾಗಿದೆಯೆಂದೇ ಯಾವ ವಿಚಾರಪರರಿಗಾದರೂ ಕಂಡೇ ಕಾಣುವುದು.

# ಸ್ಫುಟ ವಿಚಾರ.

## ಮುಸಲ್ಮಾನರ ಒಕ್ಕಟ್ಟು.

ಹಿಂದುಸ್ಥಾನದಲ್ಲಿ ರಾಜಕೀಯ ಹೋರಾಟ ನಿಂತಿದೆ. ಈಗ ಹೋರಾಟವಿಲ್ಲ. ಮನಸ್ಸಿನಲ್ಲಿಯೇ ಸುಧಾರಣೆಯ ಪಾಲಿಗಾಗಿಕೆ ನಡೆದಿದೆ. ಸರಕಾರದವರು ಎಷ್ಟು ಕಡಿಮೆ ಸುಧಾರಣೆಗಳನ್ನು ಹೇಗೆ ಕೊಟ್ಟು ಹಿಂದುಸ್ಥಾನದವರನ್ನು ಸಮಾಧಾನಗೊಳಿಸೋಣವೆಂದು ಯೋಚಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯವರು ಎಷ್ಟು ಹೆಚ್ಚಿಗೆ ಸುಧಾರಣೆಗಳನ್ನು ಹೇಗೆ ಹೊಂದೋಣವೆಂದು ಪ್ರಯತ್ನಿಸುತ್ತಿದ್ದಾರೆ. ಈ ಮಧ್ಯದಲ್ಲಿ ಮುಸಲ್ಮಾನರು ತಮಗೆ ಎಷ್ಟು ಪಾಲು ಹೆಚ್ಚು ಬಂದೀತೆಂದು ಹೊಂಚು ಹಾಕಿಕೊಂಡು ಕುಳಿತಿದ್ದಾರೆ.

ಈ ಪ್ರಕಾರ ಇರತಕ್ಕ ಮೂರು ಪ್ರಯತ್ನಗಳಲ್ಲಿ ಸರಕಾರದ ಮತ್ತು ಮುಸಲ್ಮಾನರ ಉದ್ದೇಶಗಳು ಬಹುಮಟ್ಟಿಗೆ ನೆರವೇರುತ್ತವೆ ರಾಷ್ಟ್ರೀಯ ಸಭೆಯ ಪ್ರಯತ್ನವಾದರೋ ವಿಫಲವಾಗುವದು. ಏಕೆಂದರೆ ರಾಷ್ಟ್ರದ ಬೇರೆ ಬೇರೆ ರಾಜಕೀಯ ಪಂಗಡಗಳಲ್ಲಿ ಏಕಾಭಿಪ್ರಾಯವಿಲ್ಲ. ಸರಕಾರವಂತೂ ಒಂದೇ ಸೂತ್ರದಿಂದ ನಡೆಯುತ್ತದೆ. ಮುಸಲ್ಮಾನ್ ಸಮಾಜವು ಕೂಡಾ ಬಹು ಒಕ್ಕಟ್ಟಿನದು. ಆದಕಾರಣ ಏಕಮತ್ಯವುಳ್ಳವರ ಉದ್ದೇಶ ನೆರವೇರುವುದು ಸ್ವಾಭಾವಿಕವಲ್ಲವೆ?

"ಕಳೆದ ೧೩-೧೪ನೆಯ ತಾರೀಖುಗಳಲ್ಲಿ ಸಿಮಲಾದಲ್ಲಿ ಆಲ್ ಇಂಡಿಯಾ ಮುಸಲೀಮ್ ಕಾನ್‌ಫರನ್ಸ್ ಮತ್ತು ಮುಸಲೀಮ್ ಲೀಗ್ ಇವು ಸೇರಿ ಈ ಪ್ರಕಾರ ನಿರ್ಣಯಿಸಿವೆ.

"ಶುಭ್ರ ಪತ್ರಿಕಾ ಮತ್ತು ಜಾತಿ ನಿರ್ಣಯಗಳ ಪೂರ್ಣ ಪ್ರಯೋಜನವನ್ನು ಹೊಂದುವ ಮತ್ತು ಮುಸಲೀಮ್ ಲೀಗಿನ ಅಭಿಪ್ರಾಯದಂತೆ ನಡೆಯಲು ಒಪ್ಪಿಗೆಯುಳ್ಳವರಾಗಿ ಈ ಪ್ರಕಾರ ಪ್ರತಿಜ್ಞಾ ಪತ್ರವನ್ನು ಬರೆದುಕೊಡುವ ಮುಸಲ್ಮಾನರನ್ನೇ ಮುಸಲ್ಮಾನ ಮತದಾರರು ಆರಿಸಬೇಕು."

ಈ ಪ್ರಕಾರ ಮುಸಲ್ಮಾನ್ ಬಂಧುಗಳು ತಮ್ಮಲ್ಲಿಯ ಅನೈಕ್ಯ ಮತ್ಸರವನ್ನು ತೆಗೆದುಹಾಕಿ ಏಕಮತ್ಯದಿಂದ ಮುಂದಣ ಸುಧಾರಣೆಯ ಪ್ರಯೋಜವನ್ನು ಹೆಚ್ಚಾಗಿ ಹೊಂದಲು ಸಿದ್ಧರಾಗುತ್ತಿದ್ದುದು ಅವರ ಜಾಣತನವನ್ನು ತೋರಿಸುವುದಿಲ್ಲವೆ?

## ಆಗಾಖಾನರು ಸುಲ್ತಾನರಾಗುವರೇ?

ನಾ. ಆಗಾಖಾನರು ತಮಗೊಂದು ರಾಜ್ಯಬೇಕೆಂದು ಇಂಗ್ಲಿಷ್ ಸರಕಾರವನ್ನು ಕೇಳಿದ್ದಾರೆಂತಲೂ ಈ ವಿಚಾರವಾಗಿ ಇಂಗ್ಲಿಷ್ ಸರಕಾರದಲ್ಲಿ ಆಲೋಚನೆ ನಡೆದಿದೆಯೆಂತಲೂ ಈ ಮುಂಚೆ ಪ್ರಕಟವಾಗಿದ್ದಿತಷ್ಟೆ.

"ಶಿಕಾಗೊ ಟ್ರಿಬ್ಯೂನ್" ಪತ್ರಿಕೆಯಲ್ಲಿ ಮುಂಬೈಯಿಂದ ಒಂದು ಸುದ್ದಿಯು ಹೀಗೆ ಪ್ರಕಟವಾಗಿದೆ.

"ಕಾಶ್ಮೀರದ ಮಹಾರಾಜರಾದ ಸರ್ ಹರಿಸಿಂಗ್‌ರವರಿಗೆ ಬೇರೊಂದು ಸಂಸ್ಥಾನವನ್ನು ಕೊಟ್ಟು ನಾ. ಆಗಾಖಾನರವರನ್ನು ಕಾಶ್ಮೀರ ಸಂಸ್ಥಾನದ ಸುಲ್ತಾನರನ್ನು ಮಾಡುವರು."

ಕಾಶ್ಮೀರ ಸಂಸ್ಥಾನವು ಭರತಖಂಡದ ಶಿಖರವು. ಬಹು ರಮಣೀಯ- ಮತ್ತು ಅತ್ಯಂತ ಫಲವತ್ತಾದ ಪ್ರಾಂತ. ಇದು, ಉತ್ತರದ ಮುಸಲ್ಮಾನ ರಾಜ್ಯಕ್ಕೆ ಗಡಿನಾಡು. ಇಲ್ಲಿ ೩೬ ಲಕ್ಷ ಜನಸಂಖ್ಯೆಯಿದೆ. ಇವರಲ್ಲಿ ಮುಸಲ್ಮಾನರ ಸಂಖ್ಯೆಯೇ ಅತ್ಯಧಿಕ. ಕಾಶ್ಮೀರ ಸಂಸ್ಥಾನದಲ್ಲಿ ಮುಸಲ್ಮಾನರ ಅಸಂತೋಷವೂ ನಾನಾ ರೀತಿಗಳಿಂದ ಹೊರಬೀಳುತ್ತಲೇ ಇದೆ. ಈ ಎಲ್ಲಾ ಸಂಗತಿಗಳನ್ನು ನೋಡಿದರೆ ಈ ಸುದ್ದಿಯಲ್ಲಿ ಸತ್ಯಾಂಶವಿರಬಹುದೆ? ಈ ಸಂಸ್ಥಾನವು ಆಗಾಖಾನ ಸಾಹೇಬರಿಗೆ ದೊರೆತು ಅವರು ಸುಲ್ತಾನರಾದರೆ ಈ ವರೆಗೆ ಇಂಗ್ಲಿಷ್ ಸಾಮ್ರಾಜ್ಯದ ಸೇವೆಯನ್ನು ಮಾಡಿದುದರಿಂದ ಇವರಿಗೆ ಸರಿಯಾದ ಪ್ರತಿಫಲ ದೊರೆಯಿತೆಂದೇ ಹೇಳಬಹುದಲ್ಲವೆ?.

## ಈ ಕಾಲದ ಸ್ಮೃತಿಕಾರರು.

ಕಾಲಮಾನಕ್ಕೆ ತಕ್ಕಂತೆ ಹಿಂದು ಧಾರ್ಮಿಕ ಆಚಾರವಿಚಾರಗಳಲ್ಲಿ ಮೊದಲಿನಿಂದಲೂ ವ್ಯತ್ಯಾಸ ಮಾಡುತ್ತಲೇ ಬಂದಿದ್ದಾರೆ. ಹಾಗೆ ಮಾಡುತ್ತ ಬಂದವರಿಗೆ ಸ್ಮೃತಿಕಾರರೆಂದು ಹೇಳಿದ್ದಾರೆ. ಹಿಂದುಗಳು ಪರಧರ್ಮ ಮತ್ತು ಪರದೇಶದವರ ಅಳ್ವಿಕೆಗೆ ಒಳಪಟ್ಟ ನಂತರ ಈ ಧಾರ್ಮಿಕ ಸುಧಾರಣೆ ನಿಂತು ಹೋಗಿ ಹಿಂದು ಸಮಾಜದಲ್ಲಿ ನಾನಾ ಕೊಳೆಗಳುಳಿದು ಇದು ಬಹು ದುರವಸ್ಥೆಗೀಡಾಗಿದೆ.

ಇಂಗ್ಲಿಷ್ ಸರಕಾರದಿಂದ ಎಷ್ಟೋ ಸಾಮಾಜಿಕ ಸ್ವಾತಂತ್ರ್ಯಗಳು ಬಹುಜನ ಹಿಂದುಗಳಿಗೆ ದೊರೆತವು. ಹಿಂದು ವಿಧವಾ ಸ್ತ್ರೀಯಳು ಕುಟುಂಬದಲ್ಲಿ ಕೂಡಿದ್ದರೆ ಬೇರೆಯವರ ಇಷ್ಟವಿಲ್ಲದೆ ದತ್ತು ಸ್ವೀಕಾರ ಮಾಡಲು ಮೊದಲು ಅವಳಿಗೆ ಅಧಿಕಾರವಿರಲಿಲ್ಲ. ಈ ಪ್ರತಿಬಂಧವನ್ನು ಪ್ರೀವ್ಹಿ ಕೌನ್ಸಿಲ್ಲಿನಲ್ಲಿ ತೆಗೆದು ಹಾಕಿದುದರಿಂದ ಅವಿಭಕ್ತ ಕುಟುಂಬದಲ್ಲಿನ ವಿಧವಾ ಸ್ತ್ರೀಯಳು ಅನ್ಯರ ಇಷ್ಟವಿಲ್ಲದಿದ್ದರೂ ತನ್ನ ಇಷ್ಟಾನುಸಾರ ದತ್ತು ಸ್ವೀಕಾರ ಮಾಡಲು ಅಧಿಕಾರವುಳ್ಳವಳಾಗಿ ಈಗ ಆ ಪ್ರಕಾರ ಅನೇಕರು ಆಚರಿಸಲಾರಂಭಿಸಿದ್ದಾರೆ.

ಈ ಸಂಬಂಧವಾದ ಒಂದು ಗೊತ್ತುವಳಿಯು ಮುಂಬೈ ನಿಯಮ ನಿರ್ಮಾಣ ಸಭೆಯಲ್ಲಿ ಬಂದಿದೆ. ಪ್ರೀವ್ಹಿ ಕೌನ್ಸಿಲ್ಲಿನ ತೀರ್ಮಾನವನ್ನು ತೆಗೆದುಹಾಕಬೇಕು. ಮತ್ತು ಆ ವಿಧವಾ ಸ್ತ್ರೀಯಳಿಗೆ ಮನೆತನದ ಆಸ್ತಿಯಲ್ಲಿ ವಿಭಾಗ ಹೊಂದಲು ಅಧಿಕಾರವಿರಬೇಕು. ಈ ಗೊತ್ತುವಳಿಯ ಚರ್ಚೆಯ ಕಾಲಕ್ಕೆ ರಾ. ಬ. ಕಾಳೆಯವರು ಹೀಗೆ ಹೇಳಿದರು.

"ಈಗ ಕೌನ್ಸಿಲ್ಲುಗಳಲ್ಲಿ ಶಾಸನಗಳನ್ನು ಮಾಡುವವರೇ ಇಪ್ಪತ್ತನೆಯ ಶತಮಾನದ ಸ್ಮೃತಿಕಾರರು."

ಪಂಡಿತ ಮಾಲವೀಜಿ ಮೊದಲಾದ ನೂತನ ಸ್ವರಾಜ್ಯ ಪಕ್ಷದವರು ಅಸೆಂಬ್ಲಿಯು ಧಾರ್ಮಿಕ ವಿಷಯದಲ್ಲಿ ಪ್ರವೇಶಿಸಬಾರದೆಂದು ಹೇಳಿರುವುದು ಅಯುಕ್ತವಾದುದೆಂದೇ ರಾ. ಬ. ಕಾಳೆಯವರ ಅಭಿಪ್ರಾಯದಿಂದ ಸಿದ್ಧವಾಗುವುದಿಲ್ಲವೆ? ಪಂಡಿತಜಿಯವರು ಕಲಕತ್ತೆಯ ಭಾಷಣದಲ್ಲಿ ತಮ್ಮ ಈ ನಿಯಮಕ್ಕೆ ವಿರೋಧಾಭಿಪ್ರಾಯಗಳುಂಟಾಗಿವೆಯೆಂದು ಹೇಳಿದ್ದಾರೆ. ಆದಕಾರಣ ಅದನ್ನು ತೆಗೆದು ಹಾಕಿ ರಾ. ಬ. ಕಾಳೆಯವರ ಅಭಿಪ್ರಾಯದಂತೆ ನಿಯಮ ನಿರ್ಮಾಣ ಸಭೆಗಳ ಸಭಾಸದರೇ ಸ್ಮೃತಿಕಾರರಾಗುವಂತೆ ಮಾಡುವುದು ಯುಕ್ತವಲ್ಲವೆ?

---

## ವ್ಹಾಯಿಸ್‌ರಾಯರ ಭಾಷಣ.

ಇದೇ ತಿಂಗಳು ೯ನೆಯ ತಾರೀಖಿನ ದಿನ ವ್ಹಾಯಿಸ್ ರಾಯ್ ಲಾರ್ಡ್ ವಿಲಿಂಗ್‌ಡನ್‌ರವರು ಸರಕಾರದ ಧೋರಣವನ್ನು ಕುರಿತು ಒಂದು ಮಹತ್ವದ ಭಾಷಣ ಮಾಡುವವರಿದ್ದಾರೆ.

# ವಿಚಾರ ತರಂಗ.

## ಹಿಂದುಸ್ಥಾನವೂ ಮಲೇರಿಯಾ ಬೇನೆಯೂ.

ಹಿಂದುಸ್ಥಾನದಲ್ಲಿ ಮಲೇರಿಯಾ ಬೇನೆಯು ಪ್ರತಿವರ್ಷವೂ ಭಯಂಕರ ಅನಾಹುತವನ್ನು ಮಾಡುತ್ತಿದೆ. ಸಾಧಾರಣವಾಗಿ ಈ ಬೇನೆಯು ಇಲ್ಲಿ ೧೦ ಕೋಟಿ ಜನರಿಗೆ ಬರುತ್ತಿದೆ. ಅದರಲ್ಲಿ ಎನಿಲ್ಲೆಂದರೂ ೧೫ ಲಕ್ಷ ಜನರು ಸಾಯುತ್ತಾರೆ. ಯುರೋಪ ಖಂಡದ ಇಟಾಲಿ ದೇಶಕ್ಕೂ ನಮ್ಮ ದೇಶಕ್ಕೂ ಅನೇಕ ವಿಷಯಗಳಲ್ಲಿ ಸಾಮ್ಯವಿದೆ. ಅಲ್ಲಿಯೂ ಮಲೇರಿಯಾ ರೋಗದಿಂದ ೧೫ ಸಾವಿರದವರೆಗೆ ಜನರು ಸಾಯುತ್ತಿದ್ದರು. ಆದರೆ ಅಲ್ಲಿಯ ಸರಕಾರವು ಇದರ ನಿವಾರಣೆಗಾಗಿ ವಿಶೇಷ ಲಕ್ಷವನ್ನು ಪೂರೈಸುತ್ತಿರುವುದರಿಂದ ಮರಣ ಸಂಖ್ಯೆಯು ಕಡಿಮೆಯಾಗಿದೆ.

ಈ ರೋಗಕ್ಕೆ ಅನೇಕತರದ ಔಷಧಿಗಳಿವೆ. ಅವುಗಳಲ್ಲಿ ಕ್ವಿನೈನೇ ಎಲ್ಲಕ್ಕೂ ಮೇಲಾದದ್ದು. ೧೯೦೩ನೆಯ ಇಸವಿಯಲ್ಲಿ ಇಟಲಿ ಸರಕಾರವು ಕ್ವಿನೈನ ಹುಟ್ಟುವಳಿಯನ್ನು ವಿಶೇಷವಾಗಿ ಹೆಚ್ಚಿಸಿದ್ದರಿಂದ ಅಲ್ಲಿಯ ಮಲೇರಿಯಾ ಬೇನೆಯು ಕಡಿಮೆಯಾಗಿದೆ. ಈ ಬೇನೆಯಿಂದ ಅಮೇರಿಕಾ ದೇಶಕ್ಕೆ ೩೦ ಕೋಟಿ ರೂಪಾಯಿಗಳ ಹಾನಿಯಾಗಹತ್ತಿದೆ. ಒಬ್ಬ ಗಣಿತಜ್ಞನು ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲ ೫| ಕೋಟಿ ಪೌಂಡುಗಳ ಹಾನಿಯಾಗುತ್ತಿದೆಯೆಂದು ಹೇಳಿದ್ದಾನೆ. ಇದರಮೇಲಿಂದ ಈ ರೋಗವು ಎಷ್ಟು ಭಯಂಕರವಾಗಿರುವುದೆಂಬುದು ಕಂಡುಬರುವುದು.

ಮುಖ್ಯವಾಗಿ ಈ ರೋಗವು ಬಡವರಿಗೇನೇ ಪ್ರಾಪ್ತವಾಗಿದೆ. ಯಾಕಂದರೆ ಬಡವರಿಗೆ ಕ್ವಿನೈನ ಔಷಧವು ದೊರೆಯುವುದು ಕಷ್ಟ. ಈ ವಿಸ್ತೀರ್ಣವಾದ ಹಿಂದೂ ದೇಶದಲ್ಲಿ ಕ್ವಿನೈನ ಹುಟ್ಟುವ ಸಿಂಕೋನಾ ಗಿಡಗಳನ್ನು ಬಹು ಸ್ವಲ್ಪವಾಗಿ ಬೆಳೆಯಿಸುವುದರಿಂದ ಕ್ವಿನೈನ ಔಷಧವು ಬಹಳ ತುಟ್ಟಿಯಾಗಿದೆ. ಉಳಿದ ದೇಶಗಳ ಪ್ರಮಾಣದಂತೆ ನೋಡಿದರೆ ಹಿಂದುಸ್ಥಾನದಲ್ಲಿ ಪ್ರತಿಯೊಬ್ಬನಿಗೆ ಎಲ್ಲಕ್ಕೂ ಸ್ವಲ್ಪ ಕ್ವಿನೈನು ಸಿಗುತ್ತದೆಂದು ಕಂಡುಬರುತ್ತಿದೆ. ಉದಾಹರಣಾರ್ಥವಾಗಿ ಇತಲಿ ದೇಶದಲ್ಲಿ ಕ್ವಿನೈನು ಒಬ್ಬ ಮನುಷ್ಯನಿಗೆ ೧೫ ಗ್ರೇನಿನಂತೆ ವೆಚ್ಚವಾದರೆ ಮತ್ತು ಗ್ರೀಸ ದೇಶದಲ್ಲಿ ೩೪ ಗ್ರೇನಿನಂತೆ ವೆಚ್ಚವಾದರೆ ಹಿಂದುಸ್ಥಾನದಲ್ಲಿ ಪ್ರತಿಯೊಬ್ಬನಿಗೆ ೩|| ಗ್ರೇನಿನಂತೆ ಬೀಳುತ್ತಿದೆ. ಇಷ್ಟೇ ಅಲ್ಲ. ಹಿಂದು ದೇಶದಲ್ಲಿಯ ಯಾವ ಬಂಗಾಲ ಪ್ರಾಂತವು ಮಲೇರಿಯಾ ರೋಗದ ತೌರಮನೆಯಾಗಿರುವುದೋ ಅಲ್ಲಿ ಕೇವಲ ಒಬ್ಬನಿಗೆ ೧|| ಗ್ರೇನ ದೊರೆಯುತ್ತದೆ. ಹಿಂದುಸ್ಥಾನದಲ್ಲಿ ಪ್ರತಿವರ್ಷ ೨ ಲಕ್ಷ ಪೌಂಡು ಕ್ವಿನೈನು ವೆಚ್ಚವಾಗುತ್ತಲಿದೆ. ಇವುಗಳಲ್ಲಿ ೮೦ ಸಾವಿರ ಪೌಂಡು ಕ್ವಿನೈನು ಕೇವಲ ಹಿಂದುಸ್ಥಾನ ಸರಕಾರದ ಉತ್ಪತ್ತಿ ಕೇಂದ್ರದಲ್ಲಿಯೇ ಸಿದ್ಧವಾಗುತ್ತಿದೆ. ಉಳಿದುದೆಲ್ಲ ಹೊರ ದೇಶಗಳಿಂದ ಬರುತ್ತದೆ. ಇಂಥ ದೊಡ್ಡ ದೇಶಕ್ಕೆ ಇಷ್ಟು ಕ್ವಿನೈನು ಅತ್ಯಲ್ಪವೆಂದೆನ್ನಬಹುದು. ಈ ದೇಶಕ್ಕೆ ೯ ಲಕ್ಷ ೦೦ ಸಾವಿರ ಪೌಂಡು ಕ್ವಿನೈನು ದೊರೆತರೆ ಸಾಕಾಗುವದೆಂದು ತಜ್ಞರ ಮತ.

ಬಂಗಾಲ ಪ್ರಾಂತಕ್ಕೆ ಒಂದು ಲಕ್ಷ ಪೌಂಡು ಕ್ವಿನೈನು ಬೇಕೆಂದು ಹೇಳುತ್ತಿದ್ದಾರೆ. ಒಕ್ಕಲತನ ಖಾತೆಯ ರಾಯಲ್ ಕಮಿಶನ್ನಿನವರು ಸಿಂಕೋನಾ ಗಿಡಗಳನ್ನು ಹಿಂದುಸ್ಥಾನ ಸರಕಾರವು ಹೆಚ್ಚು ಹೆಚ್ಚಿಗೆ ಬೆಳೆಯಿಸಿ ಕ್ವಿನೈನವನ್ನು ಬಡವರಿಗಾಗಿ ಅಗ್ಗವಾಗುವಂತೆ ಮಾಡಬೇಕೆಂದು ಸೂಚಿಸಿದ್ದಾರೆ. ಆದರೆ ಸರಕಾರದವರು ಈ ಯಾವುದನ್ನೂ ಮಾಡದೆ ಬಿಟ್ಟಿರುವುದರಿಂದ ಇನ್ನೂ ಅಸಂಖ್ಯ ಜನರು ಮೃತ್ಯುವಿಗೆ ಬಲಿಯಾಗುತ್ತಿದ್ದಾರೆ.

ಬಡವರಿಗೇ ಅತ್ಯಾವಶ್ಯಕವಾಗಿರುವ ಈ ಔಷಧಿಯನ್ನು ತುಟ್ಟಿ ಮಾಡಿ ಅದರಿಂದ ಲಾಭವನ್ನು ಹೊಂದುವದು ಸರಕಾರದವರಿಗೆ ಭೂಷಣವಲ್ಲ. ಈ ಪ್ರತಿಯೊಂದು ಪೌಂಡು ಕ್ವಿನೈನಿಗೆ ಸಾಧಾರಣ ೧೪ ರೂಪಾಯಿ ಬೀಳುತ್ತಿದೆ. ಅದರಲ್ಲಿ ಸಾಧಾರಣವಾಗಿ ಪೌಂಡಿಗೆ ೧೧ ಇಲ್ಲವೆ ೧೨ ರೂಪಾಯಿ ಲಾಭವು ಸರಕಾರದವರಿಗೆ ಸಲ್ಲುತ್ತದೆ. ಈ ಲಾಭದಲ್ಲಿ ಅವರು ಅರ್ಧದಷ್ಟಾದರೂ ತೆಗೆದುಕೊಂಡರೆ ಈ ಮಹತ್ವದ ಔಷಧಿಯು ಎಷ್ಟೋ ಅಗ್ಗವಾಗಿ ಅನೇಕ ಬಡ ಪ್ರಾಣಿಗಳ ಜೀವರಕ್ಷಣೆಯಾಗಲಿಕ್ಕಿಲ್ಲವೆ?

## ಪರಲೋಕವಾಸಿಗಳ ಸಂಭಾಷಣೆ.

ದೇಹಬಿಟ್ಟ ಜೀವಿಗಳ ಬಗ್ಗೆ ಮರಾಠಿ ಕೇಸರೀ ಪತ್ರಿಕೆಯಲ್ಲಿ ಶ್ರೀ. ಮುಳೆ ಎಂಬುವವರು ತಮ್ಮ ಅನುಭವವನ್ನು ಈ ರೀತಿ ಬರೆದಿರುತ್ತಾರೆ—

"ಸಾಯುವ ಕಾಲದಲ್ಲಿ ಮೃತರ ಜ್ಞಾನವು ಯಾವ ಪರಿಮಾಣ ಮತ್ತು ಸ್ಥಿತಿಯಲ್ಲಿರುವುದೋ ಅದೇ ಪ್ರಮಾಣವು ಅಂತರೀಕ್ಷದಲ್ಲಿಯೂ ಇರುತ್ತದೆ. ಅಲ್ಲಿ ಅವು ವೃದ್ಧಿಯಾಗಲು ಅವ ಸಾಧನಗಳೂ ಇರುವುದಿಲ್ಲ. ಮೃತಾತ್ಮರಿಗೆ ಈ ಲೋಕದಲ್ಲಿ ಯಾವುದರ ಮೇಲೆ ಹೆಚ್ಚು ಪ್ರೇಮವಿರುತ್ತದೆಯೋ ಅದೇ ರೀತಿಯಾಗಿ ಕರೆದರೆ ಅವರು ತೀವ್ರವಾಗಿ ಬರುತ್ತಾರೆ. ನನ್ನ ಮಗಳು ತೀರಿಕೊಂಡ ೬ ವರುಷದ ಮೇಲೆ ನಾನು ಖೋಪೋಲಿಯಲ್ಲಿರುವಾಗ ಅವಳನ್ನು ಕರೆದೆನು. ಅವಳು ಬಂದು ಹವರಾ ಎಂಬಲ್ಲಿ ಶರಚ್ಚಂದ್ರ ಎಂಬ ಹೆಸರಿನಿಂದ ಜನ್ಮಿಸಿರುವೆನೆಂದು ತಿಳಿಸಿ ಎರಡೇ ನಿಮಿಷಗಳಲ್ಲಿ ಹೋಗಿಬರುತ್ತೇನೆ ನಮಸ್ಕಾರ ಎಂದವಳೇ ಹೊರಟು ಹೋದಳು.

ಖೋಪೋಲಿಯಲ್ಲಿ ನಾವು ಪ್ರಯೋಗ ನಡೆಯಿಸಿರುವಾಗ ಮೂರು ವರುಷಗಳ ಹಿಂದೆ ತೀರಿಕೊಂಡ ಒಬ್ಬ ಕುಡಕ ಮನುಷ್ಯನು ತನ್ನ ಸ್ನೇಹಿತರಿಗೆ Have one more peg please ಎಂದೆನ್ನುತ್ತ ಸರಾಯಿ ಕುಡಿಸುವ ಪ್ರೇರಣೆ ಮಾಡುತ್ತಿದ್ದನು. ಬೇಸರ ಪಟ್ಟು ಕಡೆಗೆ ಸರಾಯಿಯನ್ನು ಬಾಟ್ಲಿಯಲ್ಲಿ ತುಂಬಿ ಭೂಮಿಯ ಮೇಲೆ ಹಾಕಿದರೆ ಅವನಿಗೆ ಆನಂದವಾಗುತ್ತಿತ್ತು.

ಒಬ್ಬ ಮೃತ ಕೂಲಿಕಾರನು ತಾನು (ಸಾವರ ಹೌಸ) ಶಕ್ತಿ ನಿಲಯದಲ್ಲಿ ಕೆಲಸ ಮಾಡುತ್ತಿರುವೆನೆಂದು ತಿಳಿಸಿದನು. ನಿನ್ನೆ ಏನು ಮಾಡುತ್ತಿದ್ದಿ? ಎಂದು ಕೇಳಲು ಟ್ರಾನ್ಸ್ಫಾರ್ಮರದ ಹಗ್ಗವನ್ನೆಳೆಯುತ್ತಿದ್ದೆನೆಂದು ಹೇಳಿದನು?

ಮೃತಾತ್ಮರು ಅವಯವರಹಿತರಾಗಿರುವದರಿಂದ ತಮ್ಮ ಪ್ರಿಯ ಜನರ ವಾಸನಾತೃಪ್ತಿಯಿಂದಲೇ ಅವರಿಗೆ ತೃಪ್ತಿಯಾಗುತ್ತದೆ. ಸ್ವಪ್ನದಲ್ಲಿಯೂ ಅವರು ಭೆಟ್ಟಿಯಾಗುವರು. ನಿಮಿಷಾರ್ಧದಲ್ಲಿ ಅವರು ಬೇಕಾದಲ್ಲಿಗೆ ಹೋಗಬಲ್ಲರು. ತಮ್ಮ ಪ್ರೀತಿಯ ಜನರ ವಿಚಾರಗಳನ್ನು ಅವರು ತಿಳಿದುಕೊಳ್ಳಬಲ್ಲರು. ಮತ್ತು ಅವುಗಳಿಗೆ ಉತ್ತರ ಕೊಡಲು ಹಾತೊರೆಯುತ್ತಿರುವರು.

ಒಟ್ಟಿನ ಮೇಲೆ ಮೃತಾತ್ಮರು ಬೇಕಾದ ಕೆಲಸವನ್ನು ಮಾಡಬಲ್ಲರು. ಆದರೆ ಅವರ ಶಕ್ತಿಯ ಉಪಯೋಗವು ನಮಗಾಗದು ಹಿಂದಿನ ಮಾತುಕತೆಗಳಿಂದಲೇ ತೃಪ್ತರಾಗುವುದು ಸಾಧ್ಯವಿದೆ."

## ಶ್ರೀ. ಹೊಸಮನಿಯವರಿಗೆ ಬಾಗಲಕೋಟೆಗರ ಬೆಂಬಲ.

ದಕ್ಷಿಣ ಭಾಗದ ವತಿಯಿಂದಾ ವರಿಷ್ಠ ಕೌನ್ಸಿಲ್ಲಿಗೆ (ಅಸೆಂಬ್ಲಿಗೆ) ಹಾವೇರಿಯ ವಕೀಲರಾದ ಶ್ರೀ ಹೊಸಮನಿ ಸಿದ್ಧಪ್ಪನವರು ಬಿ. ಎ. ಎಲ್. ಎಲ್. ಬಿ. ಇವರು ಉಮೇದುವಾರರಾಗಿ ನಿಲ್ಲಬೇಕೆಂದು ವರಾಗಿದ್ದಾರೆಂದು ಕೇಳಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ಶ್ರೀಯುತ ಹೊಸಮನಿಯವರನ್ನು ಆರಿಸಿದ್ದು ಬಂಗಾರಕ್ಕೆ ಕುಂದಣ ಕೂಡಿಸಿದಂತಾಗಿದೆ. ಧಾರವಾಡ ಜಿಲ್ಲೆಗೂ ಕರ್ನಾಟಕ ಪ್ರಾಂತಕ್ಕೂ ಹೊಸಮನಿಯವರು ಮಾಡಿದ ಸೇವೆಯನ್ನು ಅವಲೋಕಿಸಿದ್ದಾದರೆ ರಾಷ್ಟ್ರದ ಪ್ರತಿಯೊಬ್ಬ ಹಿತೈಷಿಯೂ ಅವರಿಗೆ ಬೆಂಬಲವನ್ನು ಈಯದೆ ಇರಲಿಕ್ಕಿಲ್ಲ ಬಾಗಲಕೋಟೆಯ ನಾಗರಿಕರಾದ ನಾವು ಶ್ರೀಯುತ ಹೊಸಮನಿಯವರಿಗೆ ನಮ್ಮ ಅಂತಃಕರಣ ಪೂರ್ವಕವಾದ ಬೆಂಬಲವನ್ನು ಕೊಡಲು ಆಶ್ವಾಸನವನ್ನು ಕೊಡುತ್ತೇವೆ. ಹಾಗೂ ಈ ಕಾರ್ಯದಲ್ಲಿ ಅವರಿಗೆ ಭಾರತಾಂಬೆಯು ಜಯವನ್ನು ಕೊಡುವಳೆಂದು ಹಾರೈಸುತ್ತೇವೆ. ತಾ. ೨೫-೮-೩೪

೧ ಲೋಚನಪ್ಪ ಅಂಣಾ ಗೂಗವಾಡ ದೊಡ್ಡ ವರ್ತಕರು
೨ ಮುರಿಗೆಯ್ಯಾ ಸೋಮಯ್ಯಾ ಜಂಗಿನ ವ್ಯಾಪಾರಿ ಸಂಘದ ಕಾರ್ಯದರ್ಶಿಗಳು
೩ ಚನ್ನಪ್ಪ ಅಡಿವೆಪ್ಪ ಕಿರಿಗ ಜವಳಿ ವ್ಯಾಪಾರಿ
೪ ತಮ್ಮಣ್ಣಾಯಿಕ ಸವಣೂರು ಮುನಸಿಪಾಲಿಟಿ ಮೆಂಬರರು
೫ ಸೋಮಲಿಂಗಪ್ಪ ಸಿದ್ಧಪ್ಪ ಸಾಬಾದಿ ಮುನಸಿಪಾಲಿಟಿ ಮೆಂಬರರು
೬ ಸಂಗನಬಸಪ್ಪ ಅಂಣಾ ಪೆಲ್ಲೀದ ವೀರಶೈವ ತರುಣಸಂಘ ಪ್ರೆಸಿಡೆಂಟ
೭ ಮಹಾಂತಪ್ಪ ಅಣ್ಣಾ ಕಪಶೆಟ್ಟಿ ಬ್ಯಾಂಚ ಮ್ಯೇಜಿಸ್ಟ್ರೇಟರು
೮ ಗದಿಗಪ್ಪ ಅಣ್ಣಾ ಕಲಾದಿಗಿ ಮುನಸಿಪಾಲಿಟಿ ಮೆಂಬರರು
೯ ಸಂಗಪ್ಪ ಅಣ್ಣಾ ಶೆಟ್ರ ದೊಡ್ಡ ವರ್ತಕರು
೧೦ ಬಸಪ್ಪ ಅಣ್ಣಾ ಬಣಗಾರ ಮುನಸಿಪಾಲಿಟಿ ಮೆಂಬರರು, ಟಿ. ಲ್. ಬಿ ಮೆಂಬರರು
೧೧ ಬಸಯ್ಯನವರು ಬಳುವಲವ.ಠ
೧೨ ಶಿವಮೂರ್ತಯ್ಯಾ ದೇಸಾಯಿ ಮಠ
೧೩ ಬಸವಲಿಂಗಪ್ಪ ಬಸಪ್ಪ ಮೂಲಂಗಿ
೧೪ ಮಹಾಗುಂಡಯ್ಯಾ ರುದ್ರಯ್ಯಾ ಸಾಲಿ
೧೫ ಎಸ್. ಎಚ್. ಕುಲಕರ್ಣಿ ಬ್ಯಾಂಕರ
೧೬ ವೀರಬಸಯ್ಯಾ ಪುರಾಣಿಕ
೧೭ ಸಿದ್ರಾಮಯ್ಯಾ ಸಿವಬಸಯ್ಯಾ ರೊಳ್ಳಿ
೧೮ ಶ್ರೀಶೈಲಪ್ಪ ವೀರಪ್ಪ ಜೋಳದ
೧೯ ಮಹಾಂತಪ್ಪ ಕಲಬುರ್ಗಿ ವಕೀಲ ಬಿ. ಎ. ಎಲ್‌ಎಲ್. ಬಿ.
೨೦ ವೀರಭದ್ರಯ್ಯಾ ಲೂತಿಮಠ ವಕೀಲ ಬಿ. ಎ. ಎಲ್‌ಎಲ್. ಬಿ.
೨೧ ಗಿಡ್ಡವೀರಯ್ಯನವರು ಗಣಾಚಾರಿ
೨೨ ಶಿವರುದ್ರಪ್ಪ ಅಣ್ಣಾ ಕುಪಸ್ತ
೨೩ ಬಸೆಟ್ಟಪ್ಪಾ ಹಲಕುರ್ಕಿ ಬಾಗಲಕೋಟ ವೀರಶೈವ ತರುಣ ಸಂಘ ಸೆಕ್ರೆಟರಿ
೨೪ ಕೆ. ಎಸ್. ಬನ್ನಿಗೋಳ ಮಠ
೨೫ ಶ್ರೀಶೈಲಯ್ಯನವರು ವಸ್ತ್ರದ
೨೬ ಕಾಗಪ್ಪ ರಾಚಪ್ಪ ಬ್ಯಾಳಿ
೨೭ ಸಂಗಪ್ಪ ಸಣ್ಣರಾಚಪ್ಪ ಬಣಗಾರ
೨೮ ಸಾತಪ್ಪ ರಾಚಪ್ಪ ಬ್ಯಾಳಿ
೨೯ ವೀರಪಾಕ್ಷಪ್ಪ ನಿಂಗಪ್ಪ ಮುಚಕಂಡಿ
೩೦ ಡಾ. ಬಿ. ಎಸ್, ಪಾಟೀಲ ಬ್ರಾಂಚ ಮ್ಯೇಜಸ್ಟ್ರೇಟರು
೩೧ ಗುರಸಂಗಪ್ಪ ಅಣ್ಣಾ ವೀರಶೆಟ್ಟಿ ಬ್ರಾಂಚ ಮ್ಯೇಜಿಸ್ಟ್ರೇಟರು
೩೨ ಶಿವಸಂಗಪ್ಪ ವೀರಸಂಗಪ್ಪ ಕುಪಸ್ತ
೩೩ ವ್ಹಿ. ಎಸ್. ಪುರಾಣಿಕ
೩೪ ಜಿ. ಎಚ್ ಚನ್ನಪ್ಪ ಬುಕ್‌ಸೇಲರ್
೩೫ ಗುಂಡೋ ಗುರುರಾವ ಕುಲಕರ್ಣಿ
೩೬ ರಾಚಪ್ಪ ಸಂಗಪ್ಪ ಕೆರೂರ
೩೭ ಆರ್. ಕೆ. ಬೆಣ್ಣೂರ.

---

—ದಕ್ಷಿಣಾಫ್ರಿಕೆಯಲ್ಲಿ ಹಿಂದೀ ಕಾಲು ಚೆಂಡಿನಾಟಗಾರರು ಒಟ್ಟಿಗೆ ೧೭ ಆಟಗಳನ್ನಾಡಿ ೧೫ ಆಟಗಳಲ್ಲಿ ವಿಜಯಿಗಳಾದರು. ಲಫ್ಟೀ ನಾರಾಯಣನೊಬ್ಬನೇ ೨೭ ಗೋಲುಗಳನ್ನು ಮಾಡಿದನು.

—ಜೋಧಪುರದ ಮಹಾರಾಜರು ಲಕ್ಷಾವಧಿ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಅರಮನೆಯನ್ನು ಕಟ್ಟಿಸಿರುವರು. ಬೇಸಿಗೆಯಲ್ಲಿ ಅರಮನೆಯ ಹವೆಯನ್ನು ತಂಪುಗೊಳಿಸುವದಕ್ಕಾಗಿ ೩೫ ಸಾವಿರ ರೂ. ವೆಚ್ಚಮಾಡಿ ಒಂದು ಯಂತ್ರವನ್ನಿಟ್ಟಿರುವರು.

—ಕುಮಟಾ ನಗರ ಸಂಸ್ಥೆಯು ತನ್ನ ಕಾರ್ಯವನ್ನು ಸರಿಯಾಗಿ ಮಾಡದಿದ್ದುದರಿಂದ ೧೧ ತಿಂಗಳುಗಳವರೆಗೆ ನಿಲ್ಲಿಸಲಾಯಿತು.

—ಸರಕಾರದ ಅಪ್ಪಣೆಯಿಲ್ಲದೆ ಯಾರೂ ವಿದೇಶೀ ಬಟಾಟೆಗಳನ್ನು ಕೊಳ್ಳಕೂಡದೆಂದು ಜರ್ಮನಿಯ ಸರಕಾರವು ಆಜ್ಞೆ ಮಾಡಿದೆ.

—ಬಂಗಾಲದಲ್ಲಿ ಪದ್ಮಾನದಿಗೆ ಕಟ್ಟಿದ ಆಣೆಕಟ್ಟು ಮಹಾಪೂರದಿಂದ ಒಡೆದು ಹೋಗಿದ್ದರಿಂದ ೧೦೨ ಹಳ್ಳಿಗಳ ಭೂಮಿಗಳೆಲ್ಲ ಜಲಮಯವಾಗಿವೆ.

—ಪರದೇಶದಿಂದ ಬರುವ ಅಕ್ಕಿಯ ಮೇಲೆ ಟನ್ನಿಗೆ ೧೫ ರೂಪಾಯಿ ಕರಪಟ್ಟಿಯನ್ನು ಹಿಂದುಸ್ಥಾನ ಸರಕಾರದವರು ಕೂಡಿಸಲಿರುವರು.

—ಗ್ರೀಸದಲ್ಲಿಯೂ ಸರ್ವಾಧಿಕಾರಿತ್ವವನ್ನು ಸ್ಥಾಪಿಸಬೇಕೆಂದು ಕಾರಸ್ಥಾನ ನಡೆಯಿಸಿದ ಇಬ್ಬರು ಸೇನಾಪತಿಗಳನ್ನು ಮೂವರು ಕರ್ನಲರನ್ನು ಬಂಧಿಸಲಾಗಿದೆ.

—ರಾಜಾ ಧನರಾಜ ಗಿರಜಿಯವರ ಒಂದು ದಿವಾಣಿ ವ್ಯಾಜ್ಯದ ಬಗ್ಗೆ ಬ್ಯಾ. ಸಪ್ರು ಮತ್ತು ಬ್ಯಾ. ಜಯಕರ ಇಬ್ಬರೂ ಹೈದರಾಬಾದಿಗೆ ಹೋಗಿದ್ದಾರೆ.

—ಮೌ. ಶೌಕತ ಅಲ್ಲಿಯವರಿಗೆ ಶಾಸನ ಸಭಾ ಪ್ರವೇಶಕ್ಕೆ ಕಟ್ಟಳೆಯ ಅನುಕೂಲವಿಲ್ಲವೆಂದು ಸರ ಮಹಮ್ಮದ ಯಾಕೂಬ ಇವರು ಪ್ರಕಟಿಸಿದ್ದರಿಂದ ಮೌಲಾನರು ಡಾ. ಸಪ್ರುರವರನ್ನು ಕಟ್ಟಳೆಯ ಬಗ್ಗೆ ವಿಚಾರಿಸುವವರಿರುವರು.

—ಬೆಳಗಾವಿಯ ನಾಗರಿಕರಾದ ಮತ್ತು ಗದಗಿನಲ್ಲಿ ವಾಸಿಸುತ್ತಿರುವ ಶ್ರೀ. ಗೋವಿಂದರಾವ ಗೋಖಲೆ ಬಿ. ಎ. ರಿಟಾಯರ್ಡ ಡೆಪ್ಯುಟಿ ಕಲೆಕ್ಟರ ಇವರು ರಾಮದುರ್ಗ ಸಂಸ್ಥಾನದ ಕಾರಭಾರಿಗಳೆಂದು ನಿಯಮಿಸಲ್ಪಟ್ಟಿದ್ದಾರೆ.

# ಪತ್ರಗಳ ಸಾರಾಂಶ.

### ರೋಣ ತಾಲೂಕ ಹರಿಜನ ಸೇವಾ ಸಂಘ.

ತಾ. ೧೯-೮-೩೪ನೇ ರವಿವಾರ ರೋಣ ತಾಲೂಕ ಹರಿಜನ ಸೇವಾ ಸಂಘವು ಶ್ರೀ ಸರದಾರ ವೀರನಗೌಡರ ಅಧ್ಯಕ್ಷತೆಯ ಕೆಳಗೆ ಸ್ಥಾಪನೆ ಮಾಡುವ ಕುರಿತು ಸಂಜೆ ೬ ಘಂಟೆಗೆ ಶ್ರೀ. ಶಿದ್ರಾಮಪ್ಪನವರು ಲಕ್ಷ್ಮೇಶ್ವರ ರೋಣ ಇವರ ಜೀನಿನಲ್ಲಿ ಸರದಾರ ವೀರನಗೌಡರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತು. ತಾಲೂಕಿನ ಯಾವತ್ತೂ ಗ್ರಾಮದ ಜನರು ಹಾಜರಿದ್ದರು. ಸರದಾರರು ಹರಿಜನರನ್ನುದ್ದೇಶಿಸಿ ಕಳಕಳಿಯಿಂದ ಭಾಷಣ ಮಾಡಿದರು. ನಂತರ ಅಧ್ಯಕ್ಷರ ಆಧಾರ ಮನ್ನಿಸಿ ಸಭಾವಿಸರ್ಜನೆಯಾಯಿತು.

ಕುಂದರಗಿ ಅಂದಾನಪ್ಪ,
ಗಜೇಂದ್ರಗಡ.

### ಬ್ಯಾಡಗಿ.

ಪ್ರತಿವರುಷದ ಪದ್ಧತಿಯಂತೆ ಕಳೆದ ಬುಧವಾರ (ಶ್ರಾವಣ ಶುದ್ಧ ೫) ತಾ. ೧೫-೮-೩೪ ನೇ ದಿವಸ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ೯ನೆಯ ವರುಷದ ಉತ್ಸವವೂ ಶ್ರೀ ಲಿಂಗರಾಜ ವಾಚನಾಲಯದ ೧೩ನೇ ವರುಷದ ಉತ್ಸವವೂ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಆ ದಿವಸ ಸಾಯಂಕಾಲಕ್ಕೆ ಶ್ರೀ ಶಿವಯೋಗೀಶ್ವರ ಹಾಗೂ ಶ್ರೀ ಲಿಂಗರಾಜ ಶಿರಸಂಗಿ ದೇಸಾಯಿಯವರ ಭಾವಚಿತ್ರಗಳ ಮೆರವಣಿಗೆಯು ಶ್ರೀಗಳವರ ಮಠದಿಂದ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು ಪುನಃ ಆರಂಭಕ್ಕೆ ಮಠವನ್ನು ಸೇರಿತು.

ಬಳಿಕ ೬ರಿಂದ ೭ರವರೆಗೆ ಬೋರ್ಡಿಂಗಿನ ಸಭೆಯ ಕೆಲಸ, ತರುವಾಯ ೭॥ವರೆಗೆ ವಾಚನಾಲಯದ ಸಭೆಯ ಕೆಲಸವು ನಡೆಯಿತು. ಜನರು ಪ್ರತಿವರುಷಕ್ಕಿಂತಲೂ ಹೆಚ್ಚಾಗಿ ಸೇರಿದ್ದರು. ಎರಡು ಸಭೆಗಳ ಅಧ್ಯಕ್ಷ ಸ್ಥಾನವನ್ನು ಇಲ್ಲಿಯ ಸುಪ್ರಸಿದ್ಧ ವ್ಯಾಪಾರಸ್ಥರೂ ಪದಾಚಾರಿಗಳೂ, ಶಾಂತಮೂರ್ತಿಗಳೂ ಆದ ಶ್ರೀ ದಾನಪ್ಪನವರು ಕಬ್ಬೂರ ಇವರು ವಹಿಸಿದ್ದರು. ವಿ॥ ಚನ್ನಪ್ಪಾ ಮಹಾರಾಜ ಕೇಟಿಯವರು ಅಧ್ಯಕ್ಷ ಮಹಾಶಯರುಗಳೂ ಭಾಷಣ ಮಾಡಿದರು. ೨ ಮೇಲೆ ಸಂಸ್ಥೆಗಳ ಬಗ್ಗೆ ವಿ॥ ಇಂಡೀಮಠ, ವಿ॥ ಮಾ. ಶ್ರೀ. ಕುಲಕರ್ಣಿ, ವಿ॥ ಶೆ. ರಾ. ಕುಲಕರ್ಣಿ, ವಿ॥ ದಿಡಗೂರ, ವಿ॥ ಶಿಟಗೇರಿ, ವಿ॥ ಮೇಲ್ಮುರಿ, ವಿ॥ ಗುರುಪಾದಪ್ಪ ಮಹಾರಾಜ ಕೇಟಿ ಇವರ ಭಾಷಣಗಳಾದವು.

ಶ್ರೀ. ಮುರಿಗೆಪ್ಪ ಯಾದವಾಡ ಇವರು ವಾಚನಾಲಯಕ್ಕೆ ಪ್ರತಿವರುಷ ಮೂರು ರೂಪಾಯಿಗಳನ್ನು, ವಿ॥ ಶೆ. ರಾ. ಕುಲಕರ್ಣಿಯವರು ೪ ಆಣೆಗಳನ್ನು ಕೊಡಲೊಪ್ಪಿಕೊಂಡರು. ತರುವಾಯ ಅಧ್ಯಕ್ಷರ ಭಾಷಣವಾಗಿ ಆಭಾರಮನ್ನಣೆ ಹಾರ ತುರಾಯಿ ಮಂಗಳಗಳೊಡನೆ ಸಭಾ ವಿಸರ್ಜನೆಯಾಯಿತು.

ಸಂಸ್ಥೆಗಳ ಮುಂದಿನ ವರುಷದ ಅಧ್ಯಕ್ಷ ಸ್ಥಾನಗಳಲ್ಲಿಯೂ ಕಾರ್ಯಕಾರೀ ಮಂಡಲಗಳಲ್ಲಿಯೂ ಯಾವತರದ ಬದಲಾವಣೆಯೂ ಆಗಲಿಲ್ಲ. ಸಭೆಗಳ ಕೆಲಸವು ಶಾಂತ ರೀತಿಯಿಂದ ನಡೆದು ಮುಗಿಲ್ಪಟ್ಟಿತು.

ಬ್ಯಾಡಗಿ, ೧೬-೮-೩೪. } ರು. ಫ. ಸಂಕಣ್ಣನವರು,
ಸೆಕ್ರೆಟರಿ
ಶ್ರೀ ಲಿಂಗರಾಜ ವಾಚನಾಲಯ

### ಮಹಾಗಾಂವ.

ಈ ಊರ ಚರಮೂರ್ತಿಗಳಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ತಮ್ಮ ಮಠದಲ್ಲಿ ಮಹಾತ್ಮಾ ಶ್ರೀ ಬಸವೇಶ್ವರ ಪುರಾಣವನ್ನು ಹಚ್ಚಿರುತ್ತಾರೆ. ಪುರಾಣ ಹೇಳಲು ಹುಲಸೂರು ಮಠದ ಶ್ರೀಮನ್ನಿರಂಜನ ಶ್ರೀ ಗುರುಬಸವ ಸ್ವಾಮಿಗಳು ಬಂದಿರುತ್ತಾರೆ. ಪುರಾಣ ಹೇಳುವ ಶೈಲಿಯು ಚೆನ್ನಾಗಿರುವುದರಿಂದ ಕೇಳುವುದಕ್ಕೆ ಜನರು ಹೆಚ್ಚಾಗಿ ಕೂಡುತ್ತಿರುವರು. ಒಸವಪುರಾಣ ಕೇಳುವ ಅಪೇಕ್ಷಕರು ಅವಶ್ಯವಾಗಿ ಬಂದು ಕೇಳಿ ಧನ್ಯರಾಗಬೇಕು.

ಇಲ್ಲಿಯ ಪಾಠಶಾಲಾಧ್ಯಾಪಕರಾದ ರುದ್ರಾರಾಧ್ಯ ಶಾಸ್ತ್ರಿಗಳವರಿಗೆ ಇದೇ ಶ್ರಾವಣ ಶುಕ್ಲ ಚತುರ್ಥಿಯಲ್ಲಿ ಪುತ್ರೋತ್ಸವವಾದುದರಿಂದ ಸರಕಾರಿ ಸ್ಕೂಲಿನಲ್ಲಿ ಅಭ್ಯಾಸಿಸುವ ಬಡಹುಡುಗರಿಗೆ ಪಾಟಿ ಪುಸ್ತಕಗಳನ್ನು ಉಚಿತವಾಗಿ ಹಂಚಿಸಲಾಯಿತು.

ರುದ್ರಶಿಟ್ಟಿ ಸಂಗಶಿಟ್ಟಿ ಪೋ. ಪಾಟೀಲ,
ಮಹಾಗಾಂವ್

—ಝೂಂಝಿುೀಬಾರದಲ್ಲಿ ಹಿಂದೀ ವರ್ತಕರಿಗಾಗುತ್ತಿದ್ದ ಅನ್ಯಾಯವನ್ನು ನಿವಾರಣೆ ಮಾಡುವದಕ್ಕಾಗಿ ದೀನಬಂಧು ಆಂಡ್ರೂಜ ಜರವರು ಕಟ್ಟಿಕೆಯ ಸಂಘದ ಅಧ್ಯಕ್ಷ ಮತ್ತು ಝೂಂಝಿುೀಬಾರದ ಸುಲ್ತಾನರೊಡನೆ ಮಾತುಕತೆ ನಡೆಸಿದರು.

—ಬಿಹಾರ ಭೂಕಂಪದ ವ್ಹಾಯಿಸರಾಯ ಧನನಿಧಿಯು ೫೮೯೧೩೩೭ ರೂ. ಆಗಿದೆ.


# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ, ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತೆ.

ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ,
ತುಮಕೂರು. (ಮೈಸೂರು ಸೇಟ್)

# ವರ್ತಮಾನ ಸಾರ.

—ಲಂಡನ್ನಿನಿಂದ ಪ್ರತಿ ಶನಿವಾರ ಮಧ್ಯಾನ್ಹ ೧೩॥ ಗಂಟೆಗೆ ಟಪಾಲ್ ವಿಮಾನು ಹೊರಟು ಪ್ಯಾರಿಸ್, ಕಾಯರೂ, ಬಗದಾದ ಮಾರ್ಗವಾಗಿ ಕರಾಚಿಗೆ ಗುರುವಾರ ಬರುತ್ತದೆ. ಅಲ್ಲಿಂದ ಮರು ದಿನ ದಿಲ್ಲಿ ಕಲಕತ್ತಾ ಪಟ್ಟಣಗಳಿಗೆ ಹೋಗಿ ಮರುದಿನ ರಂಗೂನ ಮಾರ್ಗವಾಗಿ ಸಿಂಗಾಪುರವನ್ನು ಸೇರುತ್ತದೆ. ಈ ಪ್ರಕಾರ ಒಂದು ವಾರದಲ್ಲಿ ಯುರೋಪ, ಏಶಿಯಾ, ಆಫ್ರಿಕಾ ಈ ಮೂರು ಖಂಡಗಳಲ್ಲಿ ಒಂದೇ ಟಪಾಲು ವಿಮಾನು ಸಂಚರಿಸುವುದು

—ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ ಸರ್. ಚಂದ್ರ ಶೇಖರ ವೆಂಕಟರಾಮನ್ ಇವರು ಪುಣೆಯ ರಸಾಯನ ಸಂಸ್ಥೆಯ ಸಂಸ್ಥಾಪಕರಾದ ಪ್ರೊಫೆಸರ ಲಿಮಯೆ ಇವರ ಪ್ರಾರ್ಥನೆಯ ಪ್ರಕಾರ ಕಳೆದ ೧೯ನೆಯ ತಾರೀಖಿನ ದಿನ ಪುಣೆಗೆ ಹೋಗಿ ಲಿಮಯೆಯವರ ನೂತನ ಶೋಧದ ಸಮಾರಂಭೋತ್ಸವವನ್ನು ಜರುಗಿಸಿದರು. ಪ್ರೊ. ಲಿಮಯೆಯವರು ೨೫ ವರುಷ ಪರಿಶ್ರಮ ಪಟ್ಟು ರಸಾಯನ ಶಾಸ್ತ್ರದಲ್ಲಿ ಒಂದು ಹೊಸ ಶೋಧವನ್ನು ಮಾಡಿದ್ದಾರೆ. ಇದು ಬಹು ಮಹತ್ವದ್ದೆಂದು ಸರ್. ರಾಮನ್‌ರವರು ಶ್ಲಾಘಿಸಿ ಪುಣೆಯ ರಸಾಯನ ಸಂಸ್ಥೆಗೆ ೫೦೦ ರೂ. ಗಳನ್ನು ಕೊಟ್ಟರು

—ಮುಂಬೈ ಗವ್ಹರ್ನರರಾದ ಲಾರ್ಡ್ ಬ್ರೆಬರ್ನ್‌ಸಾಹೇಬರು ಬರುವ ಅಕ್ಟೋಬರದ ಕಡೆಯ ವಾರದಲ್ಲಿ ಕರ್ನಾಟಕಕ್ಕೆ ಬರುವರು. ಆಗ ಬೆಳಗಾವಿಯಲ್ಲಿ ಇವರಿಗೆ ಮುನಿಸಿಪಾಲಿಟಿಯಿಂದ ವಿಜ್ಞಾಪನಾ ಪತ್ರವನ್ನು ಕೊಡಬೇಕೆಂದು ಶ್ರೀ. ಚಿಕ್ಕೋಡಿ, ಶ್ರೀ. ಲಾಡ ವಕೀಲ ಇವರು ನಗರ ಸಭೆಗೆ ತಿಳಿಸಿದ್ದರು ಈ ವಿಚಾರವಾಗಿ ೧೯ನೆಯ ನಗರ ಸಭೆಯಲ್ಲಿ ಚರ್ಚೆ ನಡೆದು ಬಹುಮತದಿಂದ ವಿಜ್ಞಾಪನಾ ಪತ್ರಿಕೆಯನ್ನು ಕೊಡಬೇಕೆಂದೂ ಇದಕ್ಕಾಗಿ ೨೦೦ ರೂಪಾಯಿ ಕೊಡಬಹುದೆಂದೂ ತೀರ್ಮಾನವಾಯಿತು.

—ಜರ್ಮನಿಯ ಅಧ್ಯಕ್ಷ ಸ್ಥಾನಕ್ಕೆ ಆರಿಸುವ ಕಾರ್ಯವು ಕಳೆದ ೧೯ನೆಯ ತಾರೀಖಿನ ದಿನ ಬಹು ಘನವಾಗಿ ಜರುಗಿತು. ೧೦೦ರಲ್ಲಿ ೯೫ ನಾಗರಿಕರು ಆರಿಸುವ ಕಾರ್ಯದಲ್ಲಿ ಅಭಿಪ್ರಾಯವನ್ನು ಕೊಟ್ಟರು. ಹೇರ ಹಿಟ್ಲರ್‌ರವರಿಗೆ ಆ ೯೫ರಲ್ಲಿ ೧೦೦ಕ್ಕೆ ೯೦ ಜನರು ತಮ್ಮ ಒಪ್ಪಿಗೆಯನ್ನು ಕೊಟ್ಟದ್ದರಿಂದ ೩,೪೩,೬೫,೭೦೦ ಪ್ರಚಂಡ ಬಹುಮತದಿಂದ ಹಿಟಲರ್‌ರವರೇ ಜರ್ಮನಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

—ಸೊಲ್ಲಾಪುರದಲ್ಲಿ ಒಬ್ಬ ನಿಶಿಕ್ಷಿತರು ಪತ್ರಿಕೆಗಳನ್ನು ಪ್ರಕಟಿಸುವದಕ್ಕಿಂತ ಶಾಸ್ತ್ರಿಗಳನ್ನಿಟ್ಟು ಕೀರ್ತನಮಾಡಿಸುವದೇ ಶ್ರೇಯಸ್ಕರವೆಂದು ತಮ್ಮ ಭಾಷಣದಲ್ಲಿ ಹೇಳಿದರಂತೆ! ಪತ್ರಿಕೆಗಳೇ ಹೋಗಿ ಶಾಸ್ತ್ರಿಗಳೇ ಉಂಟಾದರೆ ಶಾಸ್ತ್ರಿಗಳು ನಾವಿರ ಮುಖವಿದ್ದವು ಲಕ್ಷ ಮುಖವಾಗುತ್ತಿದ್ದವಲ್ಲವೇ?

—ತಿರುಪತಿ ವೆಂಕಟೇಶ್ವರನ ಶಂಖ, ಚಕ್ರಗಳು ಅಲ್ಲಾಡುತ್ತಿರುವುದರಿಂದ ಒಳ್ಳೇ ಗಲಭೆಯುಂಟಾಗಿದೆ. ಈಗ ಅವಕ್ಕೆ ರೇಶಿಮೆ ದಾರದಿಂದ ಕಟ್ಟಿದ್ದಾರೆ. ಈ ವಿಗ್ರಹವು ಪೂರ್ವದಲ್ಲಿ ವೀರಭದ್ರನ ಪ್ರತಿಮೆಯೆಂದೂ ಆವಾಗ್ಗೆ ಅದಕ್ಕೆ ಶಂಖ ಚಕ್ರಗಳಿಲ್ಲದ್ದರಿಂದ ಹೀಗಾಗುತ್ತಿದೆಯೆಂದೂ ಜನರು ಹೇಳುತ್ತಾರೆ.

—ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಶ್ರೀ ಮಲ್ಲರಾಜ ಅರಸರು ವ್ಯವಸಾಯದ ಉಚ್ಚ ಶಿಕ್ಷಣ ಪಡೆಯಲು ಲಂಡನ್ನಿಗೆ ತೆರಳಿದರು. ಉಚ್ಚ ಶಿಕ್ಷಣಕ್ಕಾಗಿ ಪರದೇಶಕ್ಕೆ ಹೋದ ಅರಸು ಮನೆತನದಲ್ಲಿ ಇವರೇ ಮೊದಲನೆಯವರು.

—ರಂಭಾಪುರಿ ಸ್ವಾಮಿಗಳು ಇನ್ನೂ ಬೆಂಗಳೂರಲ್ಲಿಯೇ ಇದ್ದು ಬಿಡದಿ ಚನ್ನಪಟ್ಟಣ ಮಾರ್ಗವಾಗಿ ಮೈಸೂರಿಗೆ ಹೋಗಲು ತವಕಿಸುತ್ತಿರುವರು. ಬಿಡದಿಯ ಮಹಾಜನರು ಅವರು ಬಂದರೆ ಬೆಂಗಳೂರಿನಂತೆಯೇ ಅಸಹಕಾರ ಮಾಡುವರಂತೆ

—ವಿಶ್ರಾಂತಿ ಹೊಂದಿದ ಶ್ರೀ. ಪಿ. ಮಹದೇವಯ್ಯನವರ ಪುತ್ರರಾದ ಮಿ. ಎಂ. ಪದ್ಮನಾಭಯ್ಯನವರು ಕೋಲಾರದ ಮುನ್ಸೀಫರಾಗಿ ನಿಯಮಿಸಲ್ಪಟ್ಟಿದ್ದಾರೆ.

—ಪ್ರಸಿದ್ಧ ಪೈಲವಾನನಾದ ಗಾಮಾನ ಊಟದ ವೆಚ್ಚವು ಕುಸ್ತಿಯ ಕಾಲಕ್ಕೆ ದಿನಕ್ಕೆ ೧೦೦ ರೂಪಾಯಿ ಇರುವುದಂತೆ!

—ಬಳ್ಳಾರಿ ಜಿಲ್ಲಾ ಲೋಕಲ್‌ಬೋರ್ಡಿನವರು ಕರ್ನಾಟಕ ವಣಿಕ ಸಂಘದ ವಿನಂತಿಯ ಮೇರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಆವಶ್ಯಕ ಸ್ಥಳಗಳಲ್ಲೆಲ್ಲಾ ಕನ್ನಡ ಶಾಲೆಗಳನ್ನೇ ಪ್ರಾರಂಭಿಸಬೇಕೆಂದು ನಿರ್ಣಯಿಸಿದ್ದಾರೆ.

—ಗದಗಿನ ನಗರ ಸಂಸ್ಥೆಯ ಸೇವಕನು ಹೆಡ್ ಮಾಸ್ತರರಿಗೆ ಕೊಡುವಕ್ಕಾಗಿ ೨೦೦೦ ಸಾವಿರ ರೂ. ಗಳನ್ನು ಒಯ್ಯುತ್ತಿರಲು ಅವುಗಳಲ್ಲಿ ೫೦೦ ರೂ. ನೋಟು ತೆಗೆದುಕೊಂಡದ್ದರಿಂದ ಗೊತ್ತಾಗಿ ಶಿಕ್ಷೆಪಡಲ್ಪಟ್ಟನು.

—ಹಬ್ಬಳ್ಳಿಯಲ್ಲಿ ಕಾದಿಮರದ ಹತ್ತಿರ ಖಾಜಿ ಭಾವಿಯ ದಂಡೆಯಲ್ಲಿ ಹುಲ್ಲೆಳ್ಳಿಗೆ ಒಂದು ಚೀಲದಲ್ಲಿ ನತ್ತ ಹೆಣ್ಣು ಕೂಸನ್ನು ತುಂಬಿ ಒಗೆದಿದ್ದರು. ಒಂದು ಎಮ್ಮೆಯು ಅಲ್ಲಿಯ ಹುಲ್ಲು ತಿನ್ನುವಾಗ್ಗೆ ಚೀಲವು ಕಂಡು ಬಂದದ್ದರಿಂದ ಪೋಲೀಸರ ಶೋಧವು ನಡೆದಿದ.

—ಸಿಂಹಳ ದ್ವೀಪದಲ್ಲಿ ದೇಶಿವಸ್ತುಗಳಿಗೆ ತೊಂದರೆಯಾಗುವ ಕಟ್ಟಳೆಗಳು ಮಾಡಲ್ಪಟ್ಟಿರುವುದರಿಂದ ಬ್ರಿಟನ್ನಿನ ಹತ್ತಿಬಟ್ಟೆ ಸಿಗರೇಟು ಹೊಗೆಸೊಪ್ಪು ಮೊದಲಾದವುಗಳನ್ನು ಬಹಿಷ್ಕರಿಸುವ ಚಟುವಟಿಕೆಯು ಪ್ರಾರಂಭವಾಗಿದೆ.

—ಆಸ್ಟ್ರೇಲಿಯಾದವರು ಬ್ರಿಟನಿನ ಪದಾರ್ಥಗಳ ಮೇಲೆ ಹೆಚ್ಚಾಗಿ ಸುಂಕವನ್ನು ಹೇರಿ ಅವುಗಳನ್ನು ಬಹಿಷ್ಕರಿಸಲು ಪ್ರಯತ್ನಿಸುತ್ತಿರುವರು. ಬ್ರಿಟನ್ನೂ ಆಸ್ಟ್ರೇಲಿಯಾದ ಪದಾರ್ಥಗಳನ್ನು ಬಹಿಷ್ಕರಿಸಿದೆ.

—ಮೈಸೂರು ಸೀಮೆಯಲ್ಲಿ ಕೋಲಾರದ ಸಮೀಪದಲ್ಲಿ ಇನ್ನೂ ಬಂಗಾರವು ಹೊರಡಬಹುದು. ಇದಕ್ಕಾಗಿ ರಾಲ್ಫ್ ನೈ ಎಂಬವರು ಸರ್ ಮಿರ್ಝಾರವರ ಸಂಗಡ ಮಾತುಕತ ನಡೆಯಿಸಿದರಂತೆ.

—ಹುಬ್ಬಳ್ಳಿಯಲ್ಲಿ ಒಬ್ಬ ಮುಸಲ್ಮಾನನು ಒಬ್ಬ ಹಿಂದು ಸ್ತ್ರೀಯನ್ನೂ ಅವಳ ಮಕ್ಕಳನ್ನೂ ಧರ್ಮಾಂತರಗೊಳಿಸುವ ಯೋಚನೆಯಲ್ಲಿದ್ದನು ಆದರೆ ಇಲ್ಲಿಯ ಹಿಂದು ಮುಂದಾಳುಗಳು ಅವರನ್ನು ಬಿಡಿಸಿಕೊಂಡರು.

—ಪೂರ್ವದಲ್ಲಿ ಮುಸಲ್ಮಾನ ಮೌಲವಿಯಾಗಿದ್ದವನು ಹಿಂದು ಧರ್ಮದ ದೀಕ್ಷೆಯನ್ನು ಹೊಂದಿ ಅಮರಾವತಿಯ ಶುದ್ಧೀಕರಣ ಚಟುವಟಿಕೆಯಲ್ಲಿ ಭಾಗವಹಿಸಿರುವನು.

—ಗೋಕಾಕದ ವೀರಶೈವ ಸಮಾಜದವರು ಸಮಾಜೋನ್ನತಿಗಾಗಿ 'ವೀರಶೈವ ವ್ಯಾಯಾಮಿಕ ಸಂಘ'ವನ್ನು ಸ್ಥಾಪಿಸಿರುವರು.

—ಕೋಣ ತಾಲೂಕಿನ ಕರಮಡಿಯ ವಾಟೇಲ ತಿಮ್ಮನ ಗೌಡ ಇವರನ್ನು ಹಗಲಿನಲ್ಲಿ ನಡು ಊರಿನಲ್ಲಿಯೇ ಕೊಲೆಮಾಡಿರುವರು.




ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—
ಕರ್ಲಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೮ ಆಣೆ.

ಮ್ಯಾನೇಜರ— ಶರಣ ಸಂದೇಶ

ದಿ ಸ್ವರಾಜ್ಯ

# ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

(ಸ್ವರಾಜ್ಯ ಕಂಪನಿಯು ಇಂಡಿಯಾ ಕಂಪನಿಗಳ ಕಾನೂನು ಪ್ರಕಾರ ಬೊಂಬಾಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ ಮಾಡಲ್ಪಟ್ಟಿದೆ.)

## ತಾಲೂಕ, ಜಿಲ್ಲಾ ಆರ್ಗನಾಯಿಝರರು ಪಗಾರದ ಮೇಲೆಯೂ ಕಮಿಶನ್ನಿನ ಮೇಲೆ ಕೆಲಸಮಾಡಲು ಏಜಂಟರೂ ಬೇಕಾಗಿದ್ದಾರೆ!!

ಸ್ವರಾಜ್ಯ ಕಂಪನಿಯ ವಿಮಾ ಕಾರ್ಯವು ಪ್ರಾರಂಭವಾಗಿ ಇಂದಿಗೆ ೭ ತಿಂಗಳುಗಳಾದವು. ಈ ಅಲ್ಪ ಅವಧಿಯಲ್ಲಿ ವಿಮಾ ಪ್ರಪಂಚದಲ್ಲಿಯೂ, ಜನತೆಯಲ್ಲಿಯೂ ಒಂದು ಬಗೆಯ ಕ್ರಾಂತಿಯನ್ನುಂಟುಮಾಡಿರುವದೆಂಬುದು ಇದರ ಪ್ರತಿ ತಿಂಗಳ ಬೆಳವಣಿಗೆಯ ಮೇಲಿಂದ ತಾನೇ ಸಿದ್ಧವಾಗುವುದು. ಆದ್ದರಿಂದ ಪ್ರತಿಯೊಬ್ಬ ಕರ್ನಾಟಕಸ್ಥರು ಮುಂದು ವರಿದು ಪಾಲಿಸದಾರರಾಗಬೇಕೆಂದು ಇಚ್ಛಿಸುತ್ತೇವೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇರುವದು.

೧೯೩೪ನೆಯ ಜಾನೇವರಿಯಿಂದ ಮಾರ್ಚ ೩೧ರವರೆಗೆ ೪೬೦೦೦ ರೂ.
,, ಎಪ್ರಿಲ್‌ದಿಂದ ಜೂನ ೩೦ ರವರೆಗೆ ೧,೧೦೦೦೦ ರೂ.
,, ಜುಲೈ ಒಂದೇ ತಿಂಗಳಲ್ಲಿ ೪೭೦೦೦ ರೂ.
ಅಂತೂ ೭ ತಿಂಗಳಲ್ಲಿ ೨,೪೩,೦೦೦ ರೂ.

ಇಷ್ಟು ಬೆಲೆ ಬಾಳುವ ಪಾಲಸಿಗಳು ಕೊಡಲ್ಪಟ್ಟಿವೆ. ಸಮರ್ಥರಾದ ಏಜಂಟರೂ, ಆರ್ಗನಾಯಿಝರರೂ ಕಮಿಶನ್ ಮತ್ತು ಪಗಾರದ ಮೇಲೆ ಕೆಲಸ ಮಾಡಲು ಬೇಕಾಗಿದ್ದಾರೆ—

| ಆರ್ಗನಾಯಿಝರರ ಪಗಾರ ಸ್ಕೇಲು. | ಪ್ರತಿ ತಿಂಗಳ ಪಗಾರ. | ಪ್ರತಿ ತಿಂಗಳ ಅಲಾವನ್ಸ. |
|---|---|---|
| ಜಿಲ್ಲಾ ಆರ್ಗನಾಯಿಝರ | ೫೦ ರಿಂದ ೧೦೦ ರೂ. | ೨೫ ರೂ. |
| ತಾಲೂಕ ಆರ್ಗನಾಯಿಝರ | ೨೫ ರಿಂದ ೫೦ ರೂ. | ೧೦ ರೂ. |

ಏಜಂಟರಿಗೆ ಭರಪೂರ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿಯ ಬಗ್ಗೆ ಕಂಪನಿಯ ಕೂಡ ಪತ್ರ ವ್ಯವಹಾರ ಮಾಡಿರಿ.

ಮ್ಯಾನೇಜಿಂಗ ಏಜಂಟ್ಸ.

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೩೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಶ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನನ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಳವದಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟಿ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಪಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಷಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
# ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗಿ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪಶರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

# ಮಹಾರೋಗ ಸಂಜೀವಿನಿ.

**ಶ್ರೀಮನ್ನಿರಂಜರ ಗುರುಮಠಕಲ್ಲು ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ**

## ಮಹಾರೋಗ ಸಂಜೀವಿನಿ,

**ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.**

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟ ಬೇನೆಯು (**ಪ್ಲೇಗ ಮಾರಿಕಾ,**) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲ ತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿ ಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ವ್ಯತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಪಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಜೇನೆ ವಗೈರೆ ರೋಗಗಳ ಮೇಲೆ ಆಶ್ಚರ್ಯ** ಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯ ಪಾದರೇ ಮಹಾರೋಗ ಸಂಜೀವಿನಿಯೆಂಬ ಪೀಳ್ಪ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೈಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣ ಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತನ್ನು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರ ಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕದ್ದು. ವಿಶೇಷ ಸಂಗ ತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

**ಮ್ಯಾನೇಜರ ಆರೋಗ್ಯ ಮಂದಿರ ಕಮಲಾಪುರ,** ಪೋಸ್ಟ— **ಹುಮನಾಬಾದ ಜಿ. ಗುಲ್‌ಬರ್ಗಾ.**

## ನಾರ ಸಂಹಾರಿ.

**ಹೊಸ ಶೋಧ! ಅದ್ಭುತ ಚಮತ್ಕಾರ!!**

ಈ ಔಷಧದ ಸೇವನೆ ಮತ್ತು - ಲೇಪನದಿಂದ ಕೆಲವು ತಾಸುಗಳಲ್ಲಿಯೇ ಭಯಂಕರ ಯಾತನೆಯನ್ನು ನುಭವಿಸುತ್ತಲಿದ್ದ ಮನುಷ್ಯನು ಹುಲಿಯ ಬಾಯಿಂದ ಉಳಿದ ಎರಳೆಯಂತೆ ಆನಂದಭರಿತನಾಗುವನು. ಮತ್ತು ಮುಂದೆ ಎರಡೇ ದಿವಸಗಳಲ್ಲಿಯೇ ಆತನಿಗೆ ಪೂರ್ಣ ಗುಣವಾಗುವುದು. ನಾರು ರೋಗದಿಂದ ವ್ಯರ್ಥವಾಗಿ ಬಳಲುವದಕ್ಕಿಂತಲೂ ಈ ಶ್ರೇಷ್ಠ ಔಷಧದ ದಿವ್ಯ ಗುಣ ದಿಂದ ಆನಂದಿತರಾಗಿ ಬಾಳಬಾರದೆ? ತೀವ್ರವೇ ಇದರ ಲಾಭವನ್ನು ಹೊಂದಿ ಸುಖಿಗಳಾಗಿರಿ.

ನಾರ ಸಂಹಾರಿ— ಒಬ್ಬನಿಗೆ ಸಾಲುವಷ್ಟು ೯ ಗುಳಿಗೆಗಳಿಗೆ ಮತ್ತು ನಾರು ಹುಣ್ಣಿನ ಮಲಾಮಿನ ಗುಳಿಗೆಗಳಿಗೆ ೧೯ಕ್ಕೆ ಕೂಡಿ ಕಿಮ್ಮತ್ತು ೧ ರೂ. ಜುಲಾ ಬಿನ ಗುಳಿಗೆಗಳನ್ನು ಪ್ರತ್ಯೇಕವಾಗಿ ತರಿಸಿಕೊಳ್ಳುವವ ರಿಗೆ ಪ್ರತಿಯೊಂದು ಗುಳಿಗೆಗಳಿಗೆ ಕಿಮ್ಮತ್ತು ೪ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ,**
**ಗುಲಬರ್ಗಾ.**

## ಮಾರಿಕಾ ಸಂಜೀವಿನಿ.

**ಅಪೂರ್ವ ಶೋಧ!! ಆಶ್ಚರ್ಯಕರ ಗುಣ!!**

ಇದು ಮಾನವ ಚಿಕಿತ್ಸೆಗೆ ಮಿರಿದ ರೋಗ ವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧ ವಾಗಿದ. **ಈ ಸಂಜೀವಿನಿ ಚೂರ್ಣವನ್ನು** ಒಂದೆ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗು ವದು. ಆಗ ನಿಮಗೆ ಖಂಡಿತವಾಗಿಯೂ ಅತ್ಯಾಶ್ಚ ರ್ಯವೂ ಆನಂದವೂ ಉಂಟಾಗುವವು.

ಈ ಸಂಜೀವಿನಿಯನ್ನು ಸೇವಿಸಿದರೆ ಮಾರಿಮ್ಮನ ಕಾಟವಿಲ್ಲ ಸ್ನಾನಿವಧೆ ಬೇಕಿಲ್ಲ. ಮಾರಿಕಾ ಬೇನೆಯ ಭಯವಿಲ್ಲ. ಒಮ್ಮೆಯಾದರೂ ಅನುಭವ ಹೊಂದಿರಿ. ಅವಿಶ್ವಾಸದಿಂದ ಸಂಜೀವಿನಿಯನ್ನು ತರಿಸಿಕೊಳ್ಳದೆ ಮಾರಿ ಬೇನೆಗೆ ಬಲಿಬೀಳಬೇಡಿರಿ.

ಕ್ರಯ ೧ ರೂ. ೫ ಆಣೆ.

**ಪ್ಲೇಗ್ ಸಂಜೀವಿನಿ ಆಫೀಸ್**
**ಗುಲಬರ್ಗಾ.**

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ **ಈ ಕೆಳಗಿನ** ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**



# ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬರಿ (ಚರಬಿ) ಅಥವಾ ಆಲ್ಮೇಪಾರ್ಡ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವನವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

**" ಕಚ್ಯೆ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.**

॥ ಶ್ರೀ ಸಂಗಮೇಶ್ವರ ಪ್ರಸನ್ನ ॥

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಿದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ಸಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮಶಿಜೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಕಕ— | ೧೧ | ,, |
| ಜೇಳಿನ ನಾಕ— | ೧೧ | ,, |
| ೧೨ ತಗಣಿ ಕತ್ತು ಬಾಟ್ಲಿ— | ೭ | ,, |

೧೦೦ ಜೇಟುಗಳಾದರೂ ವ್ಹಿ. ಪಿ. ಯಿಂದ ಕಳಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
**ಪೋ. ಹಂಚಿಲಿ.**
**ತಾ. ವಿಜಾಪುರ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಿರದಲ್ಲಿ ಶ್ರೀ ಹರ್ಡೆಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೆಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

# Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ.
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ರಜ್ವಾಗಿ ॥ ವ ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೧೩ನೆಯ ಅಕ್ಟೋಬರ್ ೧೯೩೪. | ಸಂಚಿಕೆ ೭.

ಜನಸೇವೆಯೇ ದೇವರ ಸೇವೆ

ಜಯ ಗಾಂಧಿ ಮಹಾರಾಜಕಿ ಜಯ!

ಜಗದ್ವಂದ್ಯರಾದ ಮಹಾತ್ಮಾ ಗಾಂಧೀಜಿಯವರ
೬೫ನೆಯ ವರ್ಧಂತಿಯು ತಾ. ೨-೧೦-೩೪ ನೆಯ ದಿವಸ
ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಸಂಭ್ರಮದಿಂದ ಜರುಗುವುದು.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur. (Karnataka)

ಕಳಕೊಳ್ಳುವ ಮುದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಇ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರದರ್ಸ, ಡಾವಣಗೇರಿ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.

ಸಿ ಚೆನಬಸನಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಬ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಜಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಕರ್ನಾಟಕದ ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದ ಪಂಚಾಂಗವು

# ಜಾಹೀರಾತ ಕೊಡಲಿಕ್ಕೆ ಸುಸಮಯ.

ತಾವು ವ್ಯಾಪಾರ ಕೈಗಾರಿಕೆಗಳಿಂದ ಹೆಚ್ಚಾಗಿ ಹಣ ಗಳಿಸಿ ಸ್ವತಂತ್ರ ಜೀವಿಗಳಾಗಿ ಬಾಳಬೇಕೆಂದಿದ್ದರೆ ೧೦-೧೫ ವರ್ಷಗಳಿಂದ ಕರ್ನಾಟಕದಲ್ಲಿ ಪ್ರಸಿದ್ಧ ಹೊಂದಿ ಪ್ರತಿಯೊಂದು ಮನೆಯಲ್ಲಿ ಇರಲಿಕ್ಕೆ ತಕ್ಕುದಾದ **ಹೂ ಲಿ** (ಶ್ರೀ ಪುವಲ್ಲಿ) **ಸುಪ್ರಸಿದ್ಧ ಪಂಚಾಂಗದಲ್ಲಿ** ತಮ್ಮ ಜಾಹೀರಾತನ್ನು ಅಚ್ಚು ಹಾಕಿಸಲಿಕ್ಕೆ ಇಂದೇ ಕಳಿಸಿರಿ.

ಅವು ಡೆಮ್ಮಿ ಒಂದಾರಾಂಶ ಆಕಾರದ ೧ ಪೇಜ (೪||×೯||) ಗೆ ೧೫ ರೂ. ದರವಿಟ್ಟಿದೆ. ತಡವಾಗಿ ಬಂದ ಜಾಹೀರಾತುಗಳಿಗೆ ಸ್ಥಳ ದೊರೆಯಲಿಕ್ಕಿಲ್ಲ. ಕಾರಣ ಬೇಗ ನಿಮ್ಮ ಜಾಹೀರಾತನ್ನು ಅದಕ್ಕೆ ಹತ್ತುವ ರಕಮನ್ನು ಮನಿ ಯಾರ್ಡರ ಮೂಲಕ ಕಳಿಸಿರಿ.

ಈ ಪಂಚಾಂಗಗಳು ವಿಶೇಷವಾಗಿ ಕರ್ನಾಟಕದ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ಪ್ರಸಾರವಾಗುವದರಿಂದ ಕೂಡಲೇ ಪತ್ರವ್ಯವಹಾರ ಮಾಡಿರಿ!

ಸಿ. ಕೆ. ಲಿಂಗಯ್ಯಾಸ್ವಾಮಿ
ಶ್ರೀ ಲಕ್ಷ್ಮಿ ವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಅಕ್ಟೋಬರ್ ತಾರೀಖು ೧ ನೆಯ ಸೋಮವಾರ | ಸಂಚಿಕೆ ೭.


ರಾಷ್ಟ್ರೀಯ ಅಧ್ಯಕ್ಷರ

# ಪ್ರಚಂಡ ಮೆರವಣಿಗೆಯ ಸಿದ್ಧತೆ!

## ಮಹಾತ್ಮರ ರಾಜಕಾರಣ ತ್ಯಾಗದ ಬಗ್ಗೆ ಸರದಾರರ ಹೇಳಿಕೆ.

### ಶಾಸನಾಂದೋಲನದಲ್ಲಿ ಶಿಕ್ಷೆ ಹೊಂದಿದವರ ನಿರ್ಬಂಧವು ದೂರಾಯಿತೆ?

**ಅಧ್ಯಕ್ಷರ ಮೆರವಣಿಗೆ.**

ಮುಂಬಯಿ ಕಾಂಗ್ರೆಸ್ ಅಧ್ಯಕ್ಷರಿಗಾಗಿ ಕಲ್ಯಾಣ ನಿಲ್ದಾಣ ದಿಂದ ಬೋರೀ ಬಂದರದ ವರೆಗೆ ಸ್ಪೆಶಲ್ ಉಗಿಬಂಡಿಯ ವ್ಯವ ಸ್ಥೆ ಮಾಡಲಾಗುವುದು. ಅಲ್ಲಿಂದ ಆರು ಕುದುರೆಗಳ ರಥದಲ್ಲಿ ಕುಳ್ಳಿರಿಸಿ ಕಾಂಗ್ರೆಸ್ ಭವನದ ವರೆಗೆ ಮೆರವಣಿಗೆ ಮಾಡಲಾಗುವ ದು. ಸಾಧಾರಣ ೫೦೦೦ ಸ್ವಯಂಸೇವಕರೂ ನೂರಾರು ಸ್ವಯಂ ಸೇವಿಕೆಯರೂ ಉತ್ಸವದಲ್ಲಿ ವ್ಯವಸ್ಥೆ ಮಾಡುವರು. ನೂರಾರು ಸ್ಥಾನಗಳಲ್ಲಿ ರಾಷ್ಟ್ರದ ಧ್ಯೇಯ ವಾಕ್ಯಗಳನ್ನು ಬರೆದ ಹಲಿಗೆಗಳನ್ನು ಹಚ್ಚಲಾಗುವದು. ಅಧ್ಯಕ್ಷರ ಸನ್ಮಾನಾರ್ಥವಾಗಿ ೫೦ ಕಡೆಗಳಲ್ಲಿ ದೊಡ್ಡ ದೊಡ್ಡ ಮಂಟಪಗಳನ್ನು ಹೊಡೆದು ಅದರೊಳಗಿಂದ ಮೆರ ವಣಿಗೆಯು ಹಾಯ್ದು ಹೋಗುವದು.

**ಸರದಾರರ ಹೇಳಿಕೆ.**

ವರ್ಧಾದಲ್ಲಿ ಬಾಬುರಾಜೇಂದ್ರ ಪ್ರಸಾದರವರನ್ನು ಕಂಡು ಸರದಾರ ವಲ್ಲಭಭಾಯಿಯವರು ಡಾ. ಖಾನ ಸಾಹೇಬರೊಡನೆ ನಾಗಪುರಕ್ಕೆ ಆಗಮಿಸಿದರು. ಅಲ್ಲಿಯ ಬಹಿರಂಗ ಸಭೆಯಲ್ಲಿ ಭಾಷ ಣ ಮಾಡುತ್ತ ಸರದಾರರು — "ನಾನು ಕಾರಾಗೃಹದಿಂದ ಹೊ ರಗೆ ಬಂದನೇಲೆ ನೇಲಿಂದೆ ನೇಲೆ ಮಹಾತ್ಮಾಜಿಯವರಿಗೆ ತಾವು ರಾಜಕಾರಣವನ್ನು ಬಿಟ್ಟು ಬಿಡರೆಂದು ಹೇಳುತ್ತ ಬಂದಿದ್ದೇನೆ. ಪಂ. ಜವಾಹರಲಾಲರ ಪತ್ರದ ನೇಲಿಂದಲೇ ಮಹಾತ್ಮಾಜಿಯವರು ಈ ಪ್ರಕಾರ ಬಿಟ್ಟುಕೊಡುವ ಪತ್ರವನ್ನು ಪ್ರಕಟಿಸಿದರೆಂಬುದು ಶುದ್ಧ ಸುಳ್ಳು."

**ಶಿಕ್ಷಸಲ್ಪಟ್ಟಿವರ ನಿರ್ಬಂಧವು ದೂರಾಯಿತೆ?**

ಅಮೃತ ಬಝಾರ ಪತ್ರಿಕೆಯ ಸುದ್ದಿಗಾರನು ಹೇಳುವುದೇ ನೆಂದರೆ— ಅಸೆಂಬ್ಲಿಯ ಸಭಾಸದರ ಒಂದು ಶಿಷ್ಟ ಸಮೂಹವು ಹಿಂದುಸ್ಥಾನ ಸರಕಾರದ ಗೃಹಮಂತ್ರಿಗಳ ಕಡೆಗೆ ಹೋಗಿ ಕಳೆದ ಶಾಸನಭಂಗ ಚಟುವಟಿಕೆಯಲ್ಲಿ ಒಂದು ವರ್ಷದಕಿಂತಲೂ ಹೆಚ್ಚು ಅವಧಿ ಶಿಕ್ಷೆ ಹೊಂದಿದವರ ನಿರ್ಬಂಧನವನ್ನು ನಿವಾರಿಸುವುದಕ್ಕಾಗಿ ಕೇಳಿಕೊಂಡರು. ಹಿಂದುಸ್ಥಾನ ಸರಕಾರದವರು ದೀರ್ಘ ವಿಚಾರ ಮಾಡಿ ಪ್ರಾಂತಿಕ ಸರಕಾರಗಳಿಗೆ ಈ ಕೆಳಗಿನಂತೆ ತಿಳಿಸಿರುವರು—

ಶಾಸನಭಂಗದ ಚಟುವಟಿಕೆಯಲ್ಲಿ ಒಂದು ವರ್ಷದಕ್ಕಿಂತ ಅ ಧಿಕವಾಗಿ ಶಿಕ್ಷೆ ಸಲ್ಪಟ್ಟವರಿಗೆ ಆಸೆಂಬ್ಲಿ ಅಯ್ಕೆಯ ೫ ನೆಯ ನಿಯ ಮದ ೩ ನೆಯ ಉಪನಿಯಮದ ಪ್ರಕಾರ ಅಪಾತ್ರರೆಂದು ನಿಶ್ಚಯ ಸಲಾಗದು ಎಂದು ತಿಳಿಸಿರುವರು. ಈ ನಿರ್ಬಂಧ ನಿವಾರಣೆಯಾ ದರೂ ಆರೋಪ್ಯ ಉಮೇದವಾರನ ವಿಷಯವಾಗಿ ಬೇಕಾದ ಸಮಯ ದಲ್ಲಿ ಅನುಜ್ಞೆಯನ್ನು ಕೊಡದಿರುವ ಪ್ರಾಂತಿಕ ಸರಕಾರದ ಅಧಿ ಕಾರವು ನಷ್ಟವಾಗಮ.

**ಇದು ಅಸತ್ಯವೆ?**

ಬರುವ ಕಾಂಗ್ರೆಸ್ ಅಧಿವೇಶನಕ್ಕೆ ಬಾರದೆ ಆ ಕಾಲದಲ್ಲಿ ಶ್ರೀ ಜಮನಾಲಾಲ ಬಜಾಜರು ಯುರೋಪಕ್ಕೆ ಪ್ರಯಾಣ ಮಾ ಡುವರೆಂಬ ಸುದ್ದಿಯು ಪ್ರಸಿದ್ಧವಾಗಿದ್ದಿತು. ಆದರೆ ಅದು ಅಸ ತ್ಯವೆಂದು ಶ್ರೀ ಬಜಾಜರು ಹೇಳಿದ್ದಾರೆ. ಪ್ರಕೃತಿಯು ಸುಧಾರಿ ಸಿದ ನೇಲೆ ಅಲ್ಮೋರಾ ಅಥವಾ ಊಟಕಮಂಡದಂಥ ಶೀತ ಪ್ರ ದೇಶದಲ್ಲಿ ವಾಸಮಾಡುವುದಾಗಿಯೂ ಮತ್ತು ರಾಷ್ಟ್ರೀಯ ಅಧಿವೇಶ ನಕ್ಕೆ ಸನ್ನಿಹಿತರಾಗುವಂತೆ ಅದಷ್ಟು ಸಮೀಪದ ಶೀತಸ್ಥಾನದಲ್ಲಿಯೇ ಇರುವುದಾಗಿಯೂ ತಮ್ಮ ಇಚ್ಛೆಯಿರುವುದೆಂದು ಶ್ರೀ ಬಜಾಜರು ಹೇಳಿದರು.

# ಶ್ರೀಮತಿ ಮೀರಾಬೆನ್ನರ ದಿವ್ಯಲೇಖನ.

## "ಏಕೆ ನಾನು ಅವರ ಸ್ನಾನ ಕಾಲದ— — — — — — —ತಾಯಿಯೆಂದು ಕರೆಯಲ್ಪಟ್ಟಿದ್ದೇನೆ?"

(ಅನುವಾದಕರು – ಶ್ರೀ ಸಿದ್ಧಬಸವದೇವರು ತಾಳೀಕೋಟೆ, ಕಾಶಿ.)

[ಶ್ರೀ ಮೀರಾಬಾಯಿಯವರು ತಮ್ಮ ಅನುಭವದಲ್ಲಿ ದೊರೆತ ಮಹಾತ್ಮಾಗಾಂಧಿಯವರ ದಿನಚರ್ಯೆಯನ್ನು "ಎಂಪಾಯರ್ ನ್ಯೂಸ್" ಎಂಬ ಪತ್ರಿಕೆಯಲ್ಲಿ ಪ್ರಕಟನೆಗಾಗಿ ಪ್ರತ್ಯೇಕವಾಗಿ ಬರೆದು ಕಳಿಸಿರುವರು. ಮೀರಾಬಾಯಿಯವರು ೯ ವರ್ಷಗಳವರೆಗೆ ಮಹಾತ್ಮರಿಗಾಗಿಯೇ ತಮ್ಮ ಸೇವೆಯನ್ನು ಅರ್ಪಿಸಿರುವರು, ಅವರು ಅವರೊಡನೆ ಭರತಖಂಡದಲ್ಲೆಲ್ಲ ಪ್ರವಾಸವನ್ನು ಮಾಡಿರುವರು. ಮತ್ತು ಅವರು ದುಂಡುಮೇಜಿನ ಪರಿಷತ್ತಿಗಾಗಿ ಮಹಾತ್ಮರೊಡನೆ ಲಂಡನ್ನಿಕ್ಕೂ ದಯಮಾಡಿಸಿದ್ದರು. ಮೀರಾಬಾಯಿಯವರ ಇಂಗ್ಲಿಷ ಹೆಸರು ಮಡೆಲೈನ್ ಸ್ಲೇಡ್. ಇವರು ಶ್ರೀಯುತ ಎಡ್ಮಂಡ ಸ್ಲೇಡರೆಂಬ ನೌಕಾ ಸೇನಾಪತಿಗಳ ಮಕ್ಕಳು. ಬೀಥವೆನ್ನರೆಂಬವರ ಗಾನದ ವಿಷಯದಲ್ಲಿರುವ ಮೀರಾಬಾಯಿಯವರ ಪ್ರೇಮವು ಪ್ರಸಿದ್ಧ ಫ್ರೆಂಚ ಗ್ರಂಥಕರ್ತರಾದ ರೋಮ್ಯಾ ರೋಲಂಡರವರೊಡನೆ ತಮ್ಮ ಪೂಜ್ಯ ಸಂಬಂಧವನ್ನು ಬೆಳೆಸಿತು. ಈ ಕಾಲದಲ್ಲಿಯೇ "ಮಹಾತ್ಮಾಗಾಂಧಿ" ಎಂಬ ರೋಮ್ಯಾ ರೊಲಂಡರವರು ಬರೆದ ಪುಸ್ತಕವು ಮುದ್ರಣದಲ್ಲಿದ್ದಿತು. ಆ ಪುಸ್ತಕವನ್ನು ಓದಿದ ಮೇಲೆ ಮೀರಾಬಾಯಿಯವರು ತಮ್ಮ ಸರ್ವಸ್ವವನ್ನೆಲ್ಲ ಮಹಾತ್ಮರಿಗಾಗಿ ಸವಿಸುವದೇ ತಮ್ಮ ಮೊದಲನೆಯ ಕರ್ತವ್ಯವೆಂದು ನಿಶ್ಚಯಿಸಿದರು.

ಗಾಂಧೀಜಿಯವರು ಅವರನ್ನು ತಮ್ಮ ಮಗಳಾಗಿ ಸ್ವೀಕರಿಸಿಕೊಂಡರು. ಅಂದಿನಿಂದ ಮೀರಾಬಾಯಿಯವರು ತಮ್ಮ ಜೀವಿತದ ವೇಳೆಯನ್ನು ಹೆಚ್ಚಾಗಿ ಮಹಾತ್ಮರ ವ್ಯಕ್ತಿತ್ವದ ಸೇವೆಯಲ್ಲಿಯೇ ಸಮರ್ಪಿಸಲು ಸಾರಿದರು. ಹಾಗೂ ಉಪಕ್ರಮಿಸಿದರು. ಸ್ನಾನದ ಕಾಲದಲ್ಲಾದ ತಾಯಿಯೆಂದರೆ ಮೀರಾಬಾಯಿಯವರಿಂದೇ ಅವರು ಈ ಕಾಲದಲ್ಲಿ ಹೇಳಿಸಿಕೊಳ್ಳಹತ್ತಿದರು. ಮೀರಾಬಾಯಿಯವರು ನೂಲುವ ನೇಯುವ ಕಲೆಗಳಲ್ಲಿ ಸ್ವತಃ ಪೂರ್ಣ ಅನುಭವಿಕರಾಗಿ ಅವೇ ಕಲೆಗಳನ್ನು ಭರತಖಂಡದಲ್ಲಿ ಪ್ರಸಾರಗೊಳಿಸಲು ತಿರುಗಾಡಲುಪಕ್ರಮಿಸಿದರು. ಮೊನ್ನೆ ಮೊನ್ನಿನ ಸವಿನಯ ಅವಜ್ಞಾ ಆಂದೋಲನದಲ್ಲಿ ಅವರು ಒಮ್ಮೆ ೩ ತಿಂಗಳಾಗಳವರೆಗೆ, ಮತ್ತೊಮ್ಮೆ ೧ ವರ್ಷದವರೆಗೆ ಹೀಗೆ ಎರಡು ವೇಳೆ ಸೆರೆಮನೆ ಭೋಗಿಸಿದರು. ಶ್ರೀಮತೀ ಗಾಂಧೀಜಿಯವರು ಹತ್ತಿರದಲ್ಲಿಯೇ ದಂಡಿನವರ ಮನೆಯಲ್ಲಿ ಬಹು ಕಾಲದವರೆಗೆ ಇದ್ದಕಾರಣ ಮೀರಾಬಾಯಿಯವರು ತಮ್ಮ ಎರಡನೆಯ ವೇಳೆಯ ಕಾರಾಗೃಹವಾಸವನ್ನನುಭವಿಸಿದಾಗ ಅವರಿಂದ ಹಿಂದೀ ಕಲಿಯುವದನ್ನೂ ಹಿಂದೀ ಪುಸ್ತಕ ಓದುವದನ್ನೂ ಮಾಡುತ್ತ ಕಾಲ ಕಳೆದರು.]

ಕೆಲವು ಜನ ಇಂಗ್ಲಿಷರಲ್ಲಿ ಮಾತ್ರ ಮಹಾತ್ಮರ ಚಾರಿತ್ರ್ಯದ ವಿಷಯಕ್ಕೆ ನಿಜ ಸಂಗತಿಗಳು ತೋರದೆ ಬೇರೆ ಬೇರೆ ಸುಳ್ಳು ಸಂಗತಿಗಳೇ ತೋರಿ ಬರುತ್ತಿರುವ ಕಾರಣ ಅವುಗಳ ನಿವಾರಣೆಗೋಸುಗವೇ ಅದರ ವಿಷಯದಲ್ಲಿ ಬರೆಯುವ ಸುಪ್ರಸಂಗವು ನನಗೆ ಬಂದೊದಗಿತು. ಮಹಾತ್ಮರದು ಸಾಮೂಹಿಕ (Public) ಚಾರಿತ್ರ್ಯವೇ ಸ್ವಂತ ಚಾರಿತ್ರ್ಯವಾದುದರಿಂದ ಅವರಿಗೆ ಪ್ರತ್ಯೇಕವಾದ ಸ್ವಂತ ಚಾರಿತ್ರ್ಯವಿಲ್ಲವೆಂದು ಹೇಳುವದು ಅತಿಶಯೋಕ್ತವಾಗಲಾರದು. ಇದಕ್ಕೆ ಅವರು ಸತತವಾಗಿ ಸಮೂಹದಲ್ಲಿರುವದೇ ಸಾಕ್ಷಿಯಾಗಿದೆ.

ಅವರು ಹೊರ ಹೊರಟರೆಂದರೆ ಜನರು ಎಡೆಬಿಡದಲೇ ಗುಂಪುಗುಂಪಾಗಿ ನೆರೆಯುವರು. ಅವರು ಮನೆಯೊಳಗೆ ಅಂಗಳದಲ್ಲಾಗಲಿ ಅಥವಾ ಇನ್ನಾವ ಹವೆಯುಳ್ಳ ವಿಸ್ತಾರವಾದ ಸ್ಥಳದಲ್ಲಾಗಲಿ ಇದ್ದಾಗ ಎಲ್ಲ ತರಹದ ವಿಚಾರವುಳ್ಳ ಜನರು ಹೋಗುವದು, ಬರುವದು ಯಾವಾಗಲು ಇದ್ದೇ ಇರುತ್ತದೆ. ಪಾಶ್ಚಾತ್ಯರಿಗೆ ಮಹಾತ್ಮರ ಅತಿ ನಿಕಟ ಸಂಬಂಧವಿಲ್ಲದ ಮೂಲಕ ಅವರಿಗೆ ಅವರ ಚರಿತ್ರವನ್ನು ನಿಜವೆಂದು ತಿಳಿಯುವಂತೆ ಮಾಡುವದು ನನಗೆ ಕಠಿಣವಾದ ಕೆಲಸವೆಂದು ತೋರುತ್ತದೆ. ಆದರೂ ಮಹಾತ್ಮಾ ಗಾಂಧಿಯವರ ಚಾರಿತ್ರ್ಯವು ಈ ತರಹದ್ದೇ ಇರುವದೆಂದು ನಿಮ್ಮೆಲ್ಲರಿಗೆ ನಾನು ಒತ್ತಾಯದಿಂದ ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಇವರ ಬಳಿಯಲ್ಲಿ ನನ್ನ ಇರುವಿಕೆ, ಮತ್ತು ಇಷ್ಟು ವರ್ಷಗಳವರೆಗೆ ನನ್ನ ಸರ್ವಸ್ವಕ್ಕೆ ಧಾರೆಯೆರೆದು ಇವರ ಸೇವೆಯನ್ನು ಮಾಡಲು ನನಗೆ ಸಮಯ ಹೇಗೆ ದೊರೆಯಿತೆಂಬುದನ್ನು ಇಲ್ಲಿ ಈಗ ಬಹು ಸಂತೋಷದಿಂದ ವಿವರಿಸುವೆನು. ನಾನು ಮಾತ್ರ ಅವರ ಸೇವೆಯಲ್ಲಿ ಬಹಳೇ ವರ್ಷಗಳನ್ನು ಕಳೆದದ್ದರಿಂದ ಅವರ ದಿನಚರ್ಯೆಯ ಅಚ್ಚರಿಯುಳ್ಳ ನನ್ನ ವಿಷಯಕ್ಕೆ ಸಂದೇಹ ಬೇಡ. ಅದೇ ಅಚ್ಚರಿಯನ್ನು ಜನಸಾಮಾನ್ಯರು ಅರಿಯಲೆಂಬುದ್ದೇಶದಿಂದ ಅದರ ಸತ್ಯತೆಯನ್ನೇ ಪೂರ್ಣರೀತಿಯಲ್ಲಿ ಹೊರಹಾಕಲು ಪ್ರಯತ್ನ ಮಾಡುತ್ತೇನೆ.

### ಮಹಾತ್ಮರ ಉಪದೇಶಗಳಿಗೆ ದಾಸಾನು ದಾಸಳಾಗಿ

ಗಾಂಧೀಜಿಯವರ ಚರಿತ್ರ ಮತ್ತು ಉಪದೇಶಗಳನ್ನು ಓದಿ ಮನನ ಮಾಡಿದೊಡನೆಯೇ ನನ್ನದೆಲ್ಲವನ್ನು ಇಲ್ಲಿಯೇ ಬಿಟ್ಟು ಹಿಂದುಸ್ಥಾನಕ್ಕೆ ಹೋಗಿ ಮಹಾತ್ಮರ ಸೇವೆಯನ್ನು ಕೈಕೊಳ್ಳಬೇಕೆಂಬ ನಿಶ್ಚಯವು ಮನದಲ್ಲುಂಟಾಯಿತು. ಮಹಾತ್ಮರಲ್ಲಿ ಹೋಗಿ ಆಧ್ಯಾತ್ಮಿಕ ವಿಚಾರಗಳನ್ನು ಹೊಂದಬೇಕೆಂದು ತುಂಬಿ ಬಂದ ಉತ್ಸಾಹ ಲವಲವಿಕೆಗಳು ನನ್ನ ನಿಶ್ಚಯವನ್ನು ದೃಢಗೊಳಿಸಿದವು. ಮಹಾತ್ಮರನ್ನು ಹೊಂದಿ ಸಂಪಾದಿಸಬೇಕಾದ ಉಚ್ಚ ಪವಿತ್ರ ಜ್ಞಾನಕ್ಕಾಗಿ ಬೇಕಾದ ಯೋಗ್ಯತೆಯು ನನ್ನಲ್ಲಿಲ್ಲವೆಂದು ಕಂಡು ಬಂದದ್ದರಿಂದ ಒಂದು ವರ್ಷದವರೆಗೆ ಆ ಯೋಗ್ಯತೆಗಾಗಿ ಸಿದ್ಧತೆಯನ್ನು ಮಾಡಲು ನಿರ್ಣಯಿಸಿದೆನು. ಅದರಂತೆ ಒಂದು ವರ್ಷವನ್ನು ಕಳೆದ ಮೇಲೆ ಅವರ ಆಶ್ರಮ ಸೇರಲು ನನಗೆ ಅನುಮತಿ ದೊರೆತಕಾರಣ ಹಡಗವನ್ನು ಹತ್ತಿ ೧೯೨೫ ನೆಯ ಇಸ್ವಿಯ ನವೆಂಬರ ತಿಂಗಳಿನ ೬ ನೆಯ ತಾರೀಖಿಗೆ ಮುಂಬಯಿಯನ್ನು ಬಂದು ತಲ್ಪಿ

ದೆನು. ಅಲ್ಲಿಂದ ನೀಟಾಗಿ ಆಹಮದಾಬಾದಕ್ಕೆ ಉಗಿಬಂಡಿಯ ಚೀಟು (Ticket) ನ್ನು ತೆಗೆದುಕೊಂಡೆನು. ಅದೇ ನವ್ಹಂಬರ ತಿಂಗಳಿನ ೭ ನೆಯ ತಾರೀಖಿನ ತೀರ ಮುಂಜಾವಿನಲ್ಲಿ 'ಸಾಬರಮತಿ' ನದಿದಡದ ಮೇಲೆ ಶೋಭಿಸುವ ಸೌಮ್ಯವಾದ ವಾತಾವರಣವುಳ್ಳ ಸುಂದರ ಆಶ್ರಮವನ್ನು ಸೇರಿದೆನು. ನನಗೆ ನೂತನ ಪ್ರಾಣವನ್ನು ತಂದುಕೊಟ್ಟ ಮೊದಲನೆಯ ದಿವಸವೆಂದರೆ ಇದೇ. ೧೯೧೭ ನೆಯ ಇಸ್ವಿಯ ನವ್ಹಂಬರ ತಿಂಗಳಿನ ೭ನೆಯ ತಾರೀಖಿಗೆ ನನ್ನ ಉತ್ಪತ್ತಿ. ಆದರೆ ೧೯೧೫ ನೆಯ ಇಸ್ವಿಯ ನವ್ಹಂಬರ ತಿಂಗಳಿನ ೭ ನೆಯ ತಾರೀಖಿಗೆ ಮಾತ್ರ ಆತ್ಮನ ಉತ್ಪತ್ತಿ. (ವಿಕಾಸ).

ಆಶ್ರಮದಲ್ಲಿಯ ಅನೇಕತೋಟಗಳಲ್ಲಿ ಹಾಯುತ್ತ ಮುಂದಿದ್ದ ಒಂದು ದೊಡ್ಡ ಮೈದಾನದೊಳಗೆ ಕಾಲಿಟ್ಟೆನು. ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ನಿಂತಿಂಬರದ ಕೋಣೆಯೊಳಗೆ ಪ್ರವೇಶಿಸಿದೆನು ಆಗ ಅಲ್ಲಿ ಮಹಾತ್ಮಾ ಗಾಂಧಿಯವರು ನೆಲದ ಮೇಲೆ ಕುಳಿತುಕೊಂಡು ಏನನ್ನೋ ಬರೆಯುತ್ತಿದ್ದರು. ನಾನು ಅವರ ಸನ್ನಿಧಿಯಲ್ಲಿ ಹೋದಾಗಲೇ ಅವರು ಕೂಡಲೇ ಎದ್ದು ಮುಗುಳುನಗೆಯಿಂದ ನನ್ನ ಕಡೆಗೆ ಬಂದರು. ಅವರ ಕಣ್ಣುಗಳೊಳಗಿಂದ ಪ್ರಕಾಶಿಸುತ್ತ ಹೊರಬೀಳುವ ಪ್ರೇಮದ ಮತ್ತು ಪಾವಿತ್ರ್ಯದ ಪ್ರಭಾವಳಿಯನ್ನು ನೋಡಿ ನನ್ನ ಕಣ್ಣುಗಳೇ ಕುಕ್ಕಹತ್ತಿದವು. ನಮಸ್ಕಾರಕ್ಕಾಗಿ ನಾನು ನನ್ನ ಮೊಳಕಾಲೂರಲು ಅವರು ಮುಂದೆ ತಮ್ಮ ಕೈಗಳನ್ನು ಚಾಚಿದರು. ಅವುಗಳ ಮೇಲೆ ನಾನು ನನ್ನ ಮಸ್ತಕವನ್ನಿಡಬೇಕಾಯಿತು. ಅವರು ನನ್ನನ್ನು ಪೂರ್ಣವಾಗಿ ಮೇಲಕ್ಕೆಬ್ಬಿಸಿ ನನ್ನನ್ನು ಪ್ರೇಮದಿಂದ ಅಪ್ಪಿಕೊಂಡ ಮೇಲೆ "ನೀನು ನನ್ನ ಹೆತ್ತ ಮಗಳೇ ಸರಿ" ಎಂದುಸುರಿದರು. ಆ ಮೇಲೆ ಅವರು ನನ್ನನ್ನು ಹತ್ತಿರದಲ್ಲಿಯೇ ಇರುವ ಅಡಿಗೆಮನೆಯ ಕಡೆಗೆ ಕರೆದುಕೊಂಡು ಹೋಗಿ ಅಲ್ಲಿರುವ ಶ್ರೀಮತಿ ಕಸ್ತೂರಿಬಾಯಿಯವರಿಗೆ ನನ್ನ ಪೂರ್ಣ ಪರಿಚಯವನ್ನು ಮಾಡಿಕೊಟ್ಟರು. ಅಂದಿನಿಂದ ನಾನು ಅವರ ಹೆತ್ತ ಮಗಳೇ ಆದೆನು. ಅಮೇಲೆ ನನ್ನ ಶಿಕ್ಷಣ ಕ್ರಮವು ಪ್ರಾರಂಭವಾಯಿತು. ಅಡಿಗೆ ಮಾಡುವುದನ್ನು ಕಲಿತೆನು. ಸ್ವಂತ ಬಟ್ಟೆ ತೊಳೆಯುವದನ್ನು ಕಲಿತೆನು. ಕಸ ಉಡುಗುವುದರಲ್ಲಿ ಸ್ವಚ್ಛತೆಸದಿಂದಿರುವುದನ್ನು ಕಲಿತೆನು. ನೂಲುವ ನೇಯುವ ಉದ್ಯೋಗವನ್ನು ಕಲಿತುಕೊಂಡೆನು. ಮತ್ತು ಹಿಂದಿ ಭಾಷೆಯನ್ನೂ ಕಲಿತುಕೊಂಡೆನು. ಸ್ವಲ್ಪ ದಿನಗಳಾದ ಮೇಲೆ ಬೇರೆ ಬೇರೆ ಭಾಷೆಗಳನ್ನು ಕಲಿಯುವುದಕ್ಕಾಗಿಯೂ, ನೂಲುವ ನೇಯುವದನ್ನು ಕಲಿಸುವದಕ್ಕಾಗಿಯೂ ಅನ್ಯ ಪ್ರಾಂತಗಳಿಗೆ ನನ್ನನ್ನು ಕಳುಹಿಸಿಕೊಟ್ಟರು.

### ಸ್ವಯಂ ಬಟ್ಟೆ ತೊಳೆದುಕೊಳ್ಳುವಿಕೆ.

ಅನ್ಯ ಪ್ರಾಂತಗಳಿಗೆ ಹೋಗಿ ಬಂದ ಮೇಲೆ ಮಹಾತ್ಮಾ ಗಾಂಧೀಜಿಯವರ ವ್ಯಕ್ತಿತ್ವದ ವಿಷಯದಲ್ಲಿ ಸೇವೆ ಮಾಡುವುದನ್ನು ಒಹಿಸಿಕೊಂಡೆನು. ನಮ್ಮೆಲ್ಲರಿಗೆ ಸೇವಕರೇ ಇಲ್ಲ. ಕಾರ್ಯಗಳನ್ನು ನಮ್ಮೊಳಗೇನೇ ವಿಭಾಗಿಸಿಗೊಂಡು ಮಾಡಿಕೊಳ್ಳುತ್ತೇವೆ. ಶ್ರೀಮತಿ ಗಾಂಧೀಜಿಯವರು ವಯಸ್ಸಿನಿಂದ ಮುಪ್ಪಿನವರಾದ ಕಾರಣ ಅವರಿಗೆ ನೀರು ತರುವದು, ಬಟ್ಟೆ ತೊಳೆಯುವದು ಈ ಮೊದಲಾದ ಕಾರ್ಯಗಳು ಭಾರವಾಗಿ ಕಾಣುತ್ತಿರುವುದರಿಂದ ಅವರ ಕಡೆಯಿಂದ ಅವನ್ನು ಮಾಡಲು ನಾನೇ ಸಿದ್ಧನಾಗುವೆನು. ಇದನ್ನು ನಾನು ನನ್ನ ವಿಶೇಷ ಅಧಿಕಾರವೆಂದು ಭಾವಿಸುತ್ತೇನೆ. ಶ್ರೀಮತೀಜಿಯವರು ಅವಿಶ್ರಾಂತಶ್ರಮೋತ್ಸಾಹಗಳಿಂದ ಮೊದಲಿನಿಂದಲೂ ತಮ್ಮ ಪತಿಗಳ ಸೇವೆ ಮಾಡುತ್ತಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಶ್ರೀಮತೀಜಿಯವರು ವಿವಾಹವಾದಂದಿನಿಂದ ತಮ್ಮ ಶ್ರೀಮಾನರಿಗೆ ಸಂಭವಿಸಿರುವ ಪ್ರತಿಯೊಂದು ಸಂಕಟದಲ್ಲಿ ಭಾಗವನ್ನು ಒಹಿಸಿಯೇ ಇದ್ದಾರೆ. ನಾನು ಈಗ ಅವರಿಂದ ದೂರಾಗಿ ಇಂಗ್ಲಂಡದಲ್ಲಿದ್ದರೂ ಅಲ್ಲಿ ಅನ್ಯ ಮಿತ್ರರ ಸಹಾಯದಿಂದ ಪ್ರತಿಯೊಂದರ ವಿಷಯಕ್ಕೆ ಕಷ್ಟ ತೆಗೆದುಕೊಂಡು ಚಿಂತಿಸುತ್ತಿರುವುದನ್ನು ನಾನು ಬಲ್ಲೆನು. ಆದುದರಿಂದ ಅವರ ಸಹಾಯಕ್ಕಾಗಿ ಹಿಂದುಸ್ಥಾನಕ್ಕೆ ಮರಳಿ ಹೋಗಲು ಬಲು ಆತುರಪಡುತ್ತೇನೆ.

ನನ್ನ ತಿಳುವಳಿಕೆಯಂತೆ ಮಹಾತ್ಮರು ತಮ್ಮ ಪ್ರತಿಯೊಂದು ಕಾರ್ಯವನ್ನು ತಾವೇ ಮಾಡಬೇಕೆಂದು ಇಚ್ಛಿಸುತ್ತಿದ್ದರೂ ಸಾಮಾಜಿಕ ರಾಷ್ಟ್ರೀಯ ಕಾರ್ಯಗಳು ಅವರ ಸಮಯವನ್ನೆಲ್ಲ ತಮಗಾಗಿಯೇ ಕಳೆಯಲು ಬಲಪಡಿಸುತ್ತಿರುವುದರಿಂದ ಹಾಗೆ ಮಾಡಲು ಅಸಮರ್ಥರಾಗಿರುವರು. ಹೀಗಿದ್ದರೂ ಅವರು ಎಷ್ಟೋ ಸಾರೆ ತಮ್ಮ ಬಟ್ಟೆಗಳನ್ನು ತೊಳೆದುಕೊಳ್ಳುತ್ತಾರೆ. ನಾವೆಲ್ಲರು ದಂಡುಮೇಜಿನ ಪರಿಷತ್ತಿಗಾಗಿ ಲಂಡನಕ್ಕೆ ಬರುವ ಕಾಲದಲ್ಲಿ ಅವರು ಒಟ್ಟಿಗಳನ್ನು ತಾವೇ ತೊಳೆಯುತ್ತಿದ್ದರು. ಆಗ ಅವರಿಗೆ ಒಬ್ಬರೂ ಸೇವಕ ಸೇವಿಕೆಯರಿರಲಿಲ್ಲ. ಶ್ರೀಮತಿ ಗಾಂಧೀಜಿಯವರು ಈ ಕಾಲದಲ್ಲಿ ಮಹಾತ್ಮರೊಡನೆ ಪ್ರವಾಸದಲ್ಲಿಲ್ಲದ್ದರಿಂದ ಮಹಾತ್ಮರು ತಮಗೆ ಬೇಕಾದ ವಸ್ತ್ರಗಳನ್ನು ಪೂರೈಸಿಕೊಡಲು ನನಗೇ ಅಪ್ಪಣೆಕೊಟ್ಟಿದ್ದರು, ಪರಿಷತ್ತಿನ ಕೆಲಸವು ಬಹಳೇ ಇದ್ದದ್ದರಿಂದ ತಮಗೆ ಸಮಯವು ದೊರೆಯದ ಕಾರಣ ಈ ರೀತಿಯಾಗಿ ಮಾಡಲು ನನಗೆ ಒಪ್ಪಿಗೆ ದೊರೆತಿದ್ದಿತು. ಲಂಡನ್ನದಲ್ಲಿ ಅವಿಶ್ರಾಂತ ಶ್ರಮ ತೆಗೆದುಕೊಂಡು ಮಾಡಿದಷ್ಟು ಕೆಲಸವನ್ನು ಮಹಾತ್ಮರು ಇನ್ನೆಲ್ಲಿಯೂ ಮಾಡಿದಂತೆ ನನಗೆ ತೋರೇ ಬಂಲೊಲ್ಲದು. ಹಗಲಿನಲ್ಲಿ ಇಷ್ಟು ಕೆಲಸ ಮಾಡಿದರೂ ವೇಳೆಯು ಪೂರೈಸದಂತಾಗಿ ರಾತ್ರಿ ೧೨ ರವರೆಗೆ ಒಮ್ಮೊಮ್ಮೆ ಸೂರ್ಯೋದಯದ ವರೆಗೂ ಕೆಲಸದಲ್ಲಿ ತೊಡಗಿಯೇ ಇರುತ್ತಿದ್ದರು. ಇಷ್ಟಾದರು, ಬೆಳಗಿನ ೩ ಗಂಟೆಗೆ ಆಗಬೇಕಾದ ಪ್ರಾರ್ಥನೆಗೆ ಮಾತ್ರ ತಪ್ಪುತ್ತಿಲ್ಲೇ ಇರಲಿಲ್ಲ. ಮಹಾತ್ಮರ ಹಿಂದುಸ್ಥಾನದಲ್ಲಿಯ ನಿಜವಾದ ನಿತ್ಯಕರ್ಮಗಳು ಯಾವವೆಂಬುದನ್ನು ಕೂಡ ಇಲ್ಲಿ ಉದಾಹರಿಸುವೆನು

ಅವರು ದಿನಾಲು ಬೆಳಗಿನ ೩ ಗಂಟೆಗೆ ತಪ್ಪದಲೇ ಏಳುತ್ತಾರೆ. ಸ್ನಾನಾದಿಗಳನ್ನು ಸಮಾಪ್ತಿಗೊಳಿಸಿದ -ಮೇಲೆ ನಾಲ್ಕು ಗಂಟೆಗೆ ಆಗಬೇಕಾದ ಪ್ರಾರ್ಥನೆಯ ವರೆಗೆ ಬರೆಯುತ್ತ ಕುಳಿತುಕೊಳ್ಳುವರು. ಆ ಮೇಲೆ ಹಾಲು ಹಣ್ಣುಗಳ ಹಗುರಾದ ಆಹಾರವನ್ನು ತೆಗೆದುಕೊಂಡು ಸೂರ್ಯೋದಯದ ವರೆಗೆ ಬರೆಯುವದರಲ್ಲಿಯೇ ಮಗ್ನರಾಗುವರು. ಅಮೇಲೆ ಸಮಯ ದೊರೆತಲ್ಲಿ ಆ ಕಾಲಕ್ಕೆ ತಿರುಗಾಡಲು ಹೊರಹೋಗುತ್ತಾರೆ.

### ಬಲು ಶಾಂತಿಯುಕ್ತ ನಿಮಿಷಗಳು.

ಮಹಾತ್ಮರು ತಿರುಗಾಡಿ ಬಂದ ಮೇಲೆ ತಮ್ಮ ವೇಳೆಯನ್ನು ಪರಸ್ಪರ ಸಂದರ್ಶನ ಸಂಭಾಷಣೆಗಾಗಿಯೂ, ಏನಾದರೂ ಮುಂದೆ ಬರೆಯಬೇಕಾದ ವಿಷಯವಿನಿಮಯಗಾಗಿಯೂ ಕೊಡುವರು. ಇತ್ತ ನಾನು ೧೧-೩೦ ಕ್ಕೆ ಆವರ ಸ್ನಾನದ ಸಾಮಗ್ರಿಯನ್ನು ಸಿದ್ಧಗೊಳಿಸುವೆನು. ಅವರ ಸ್ನಾನದ ಸಾಮಗ್ರಿಯೆಂದರೆ ಒಂದು ಬಿಸಿನೀರಿನ ತೊಟ್ಟಿಯನ್ನು (Bucket) ಮತ್ತೆ ಕೆಲವು ತಣ್ಣೀರಿನ ತೊಟ್ಟಿಗಳನ್ನು, ಇನ್ನು ತೊಳೆದ ಪಂಜೆ ಪಾವಡಗಳನ್ನು ಕಲ್ಲಿನ ಹಾಸಿಗೆಯುಳ್ಳ ಕೋಣೆಯಲ್ಲಿಡುವದೇ ಆಗಿದೆ. ಸ್ನಾನದ ಸಾಮಗ್ರಿಯು ಸಿದ್ಧವಾಗಿದೆ ಎಂದು ನಾನು ಹೇಳಲು ಮಹಾತ್ಮರು ತಮ್ಮ ಕೆಲಸದಿಂದ ಮುಕ್ತರಾದ ಕೂಡಲೇ ಸ್ನಾನಮಾಡುತ್ತಾರೆ.

ಸ್ವಲ್ಪ ಕಾಲದೊಳಗಾಗಿಯೇ ತಾವು ಮಾಡಬೇಕಾದ ಕೆಲವು ಮಹತ್ವದ ನಿರ್ಣಯಗಳಿಗಾಗಿ ಬೇಕಾದ ಪ್ರಶಾಂತವಾದ ಏಕಾಂತದ ಸ್ಥಳವೆಂದರೆ ಅವರಿಗೆ ಸ್ನಾನದ ಗೃಹವೇ. ಆದುದರಿಂದ ಅಲ್ಲಿ ಕಳೆಯಬೇಕಾದ ನಿಮಿಷಗಳೇ ಶಾಂತಿಯುಕ್ತ ನಿಮಿಷಗಳೆಂದು

## ಮೈಸೂರು ಡಿ|| ಮತ್ತು ಕೊಳ್ಳೇಗಾಲದ ತಾ|| ವೀರಶೈವ ಮಹಾಸಭೆಯಲ್ಲಾದ ತೀರ್ಮಾನ.

(೧) ಶ್ರೀ ಪ್ರಭುದೇವಾದಿ ನಿರಂಜನ ಮೂರ್ತಿಗಳೂ ಶ್ರೀ ರೇಣುಕಾದಿ ಆಚಾರ್ಯರೂ ಶ್ರೀ ಬಸವಾದಿ ಪ್ರಮಥರೂ ಬೋಧಿಸಿರುವ, ವೀರಶೈವ ಮತತತ್ವಗಳು ಒಂದೇ ಆಗಿರುವುದರಿಂದ ಅವು ಇಡೀ ವೀರಶೈವ ಸಮಾಜಕ್ಕೇನೇ ಮಾನ್ಯವಾಗಿರುತ್ತವೆಯಲ್ಲದೆ ಶ್ರೀ ಗುರುವರ್ಗ ಮತ್ತು ವಿರಕ್ತವರ್ಗವೇ ಆದಿಯಾಗಿ ಸಮಸ್ತ ವೀರಶೈವರಿಗೂ ಶ್ರೀ ಬಸವಾದಿ ಪ್ರಮಥರು ಪೂಜ್ಯರೂ ವಂದ್ಯರೂ ಆಗಿರುತ್ತಾರೆ.

(೨) ಈ ಮಹಾ ವಿಭೂತಿಗಳನ್ನು ನಿಂದಿಸುವ ನಾನಾಬಗೆಯ ಚಳುವಳಿಗಳು ಸಮಾಜದಲ್ಲಿ ಇತ್ತೀಚೆಗೆ ನಡೆದು ಸಮಾಜಕ್ಕೆ ಘಾತಕವಾಗಿರುವುದರಿಂದ ಅಂಥ ಚಟುವಟಿಕೆಗಳನ್ನು ಈ ಸಭೆಯವರು ತೀಕ್ಷ್ಣವಾಗಿ ಖಂಡಿಸುತ್ತಾರೆ. ಮತ್ತು ಈ ಚಳುವಳಿಗಳನ್ನು ನಿವಾರಣೆ ಮಾಡಲು ಸಮಾಜದ ಸಕಲ ಮಹಾಶಯರೂ ಪ್ರಯತ್ನಿಸಬೇಕಾಗಿ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.

ಮೇಲ್ಕಂಡ ಈ ಎರಡು ಶರಾವುಗಳಲ್ಲಿ ಅಡಕವಾಗಿರುವ ತತ್ವಗಳಿಗೆ ಶ್ರೀಮದ್ರಂಭಾಪುರಿ ಶ್ರೀಗಳವರು ತಮಗೆ ಯಾವ ಪರತ್ವ ಅಥವಾ ವ್ಯತ್ಯಾಸವೂ ಇಲ್ಲದೆ ಸಂಪೂರ್ಣ ಸಮ್ಮತಿ (unqualified consent) ಇರುವುದಾಗಿ ಅಧಿಕಾರವಾಣಿಯಿಂದ ಕೂಡಲೇ ಅಂದರೆ ತತ್ ಶ್ರೀಗಳವರು ರಾಜಧಾನಿಗೆ ವಿಜಯಂಗೈಸುವ ದಿನಕ್ಕೆ ನಾಲ್ಕು ದಿವಸಗಳ ಮುಂಚಿತವಾಗಿಯೇ ಸರಿಯಾದ ರೀತಿಯಿಂದ ಎಂದರೆ ಶ್ರೀಮುಖ ಮತ್ತು ಪ್ರಕಟಣೆಗಳ ಮೂಲಕ ಸರ್ವತ್ರ ಪ್ರಸಿದ್ಧಪಡಿಸುವುದಾದರೆ ರಾಜಧಾನಿಯ ವೀರಶೈವರು ಏಕಮತ್ಯದಿಂದ ಶ್ರೀಗಳವರನ್ನು ವಿಜಯಂಗೈಸಿಕೊಂಡು ಸತ್ಕರಿಸುವುದು, ಹಾಗಿಲ್ಲವಾದಲ್ಲಿ ಶಾಂತಿಪೂರಿತವಾದ ಅಸಹಕಾರದ ಮೂಲಕ ಶ್ರೀಗಳವರ ವಿಷಯದಲ್ಲಿ ರಾಜಧಾನಿಯ ವೀರಶೈವರು ತಮಗಿರತಕ್ಕ ಅಸಮಾಧಾನವನ್ನು ತೋರ್ಪಡಿಸತಕ್ಕುದೆಂದೂ ಇದೇ ತೀರ್ಮಾನದಂತೆಯೇ ಮೈಸೂರು ಡಿಸ್ಟ್ರಿಕ್ಟ್ ಮತ್ತು ಕೊಳ್ಳೇಗಾಲದ ತಾಲ್ಲೂಕು ವೀರಶೈವರು ಸಹ ನಡೆದುಕೊಳ್ಳತಕ್ಕುದೆಂದೂ ಸಭೆಯವರು ತೀರ್ಮಾನಿಸಿರುತ್ತಾರೆ.

(೩) ಪಂಚಾಚಾರ್ಯ ಪ್ರಭಾ ಪತ್ರಿಕೆಯು ಅಲ್ಲಮಾದಿ ವಿರಕ್ತಮೂರ್ತಿಗಳು ಮೈಲಾರಲಿಂಗರೆಂಬ ನಿಂದಾಲೇಖನಗಳನ್ನೂ ಬಸವಾದಿ ಪ್ರಮಥರ ನಿಂದಾಲೇಖನಗಳನ್ನೂ ಪದೇ ಪದೇ ಬರೆದು ಪ್ರಕಟಿಸುತ್ತಿರುವುದರಿಂದ ಬಹುಜನ ವೀರಶೈವರ ಮನಸ್ಸಿಗೆ ಬಹಳ ಖೇದವನ್ನುಂಟುಮಾಡುತ್ತಿರುವುದರಿಂದ ಈ ವರ್ತನವನ್ನು ಈ ಸಭೆಯವರು ಬಹಳ ತೀಕ್ಷ್ಣವಾಗಿ ನಿಷೇಧಿಸುತ್ತಾರಲ್ಲದೆ ಇಂತಹ ಬರವಣಿಗೆಗಳನ್ನು ಮುಂದೆ ಖಂಡಿತವಾಗಿಯೂ ಪ್ರಕಟಿಸದಂತೆ ನಮ್ಮ ಘನಸರ್ಕಾರದವರು ಸದರಿ ಪತ್ರಿಕೆಯ ಸಂಪಾದಕರಿಗೆ ಸರಿಯಾದ ಎಚ್ಚರಿಕೆ ಕೊಡಬೇಕೆಂದು ಈ ಸಭೆಯವರು ಪ್ರಾರ್ಥಿಸುತ್ತಾರೆ.

(೪) ಈ ಮಹಾಸಭೆಯಲ್ಲಿ ಪಾಸಾದ ಎಲ್ಲಾ ಶರಾವುಗಳನ್ನೂ ನಮ್ಮ ಶ್ರೀಮನ್ಮಹಾರಾಜರವರ ಪರಾಂಬರಿಕೆಗೂ ನಮ್ಮ ಘನ ಸರ್ಕಾರದವರಿಗೂ ಶ್ರೀ ರಂಭಾಪುರಿ ಸ್ವಾಮಿಗಳವರಿಗೂ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬರವರಿಗೂ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟಿಂಡೆಂಟ್‌ರವರಿಗೂ ವೃತ್ತಪತ್ರಿಕೆಗಳಿಗೂ ಕಳುಹಿಸಿಕೊಡುವುದಲ್ಲದೆ ಪತ್ರಿಕೆಗಳ ಮೂಲಕ ಸಾರ್ವತ್ರಿಕವಾಗಿ ಪ್ರಸಿದ್ಧಪಡಿಸುವುದು ಎಂದು ಈ ಸಭೆಯವರು ತೀರ್ಮಾನ ಮಾಡಿರುತ್ತಾರೆ.

(ರುಜು) ಪಿ. ಆರ್. ಚಿಕ್ಕೋಡಿ,
ಅಧ್ಯಕ್ಷ
ಮೈಸೂರು ಡಿ|| ವೀರಶೈವ ಕಾನ್ಫರೆನ್ಸು.

ಮೈಸೂರು
ತಾ|| ೧೬-೯-೧೯೩೪.

---

ಅವರು ಪದೇ ಪದೇ ಹೇಳುತ್ತಾರೆ. ಗಾಂಧೀಜಿಯವರು ಸ್ನಾನಮಾಡುತ್ತಿರುವಾಗ ಶ್ರೀಮತಿ ಗಾಂಧೀಜಿಯವರು ಮತ್ತು ನಾನು ಕೂಡಿ ಉಪ್ಪಿಲ್ಲದ ಒಂದು ಸಾದಾ ಕಾಯಿಪಲ್ಯೆ ಮತ್ತು ಹಾಲು ಹಣ್ಣುಗಳ ಆಹಾರವನ್ನು ಸಿದ್ಧಗೊಳಿಸುತ್ತೇವೆ. ಸ್ನಾನ ಗೃಹದಿಂದ ಬಂದೊಡನೆಯೇ ಅವರು ಆಹಾರವನ್ನು ತೆಗೆದುಕೊಳ್ಳುತ್ತಾರೆ. ಆಹಾರ ತೆಗೆದುಕೊಂಡ ಮೇಲೆ ಸ್ವಲ್ಪ ಕಾಲದ ವರೆಗೆ ತಮ್ಮ ಚರಖದ ಮೇಲೆ ನೂಲನ್ನು ತೆಗೆಯುತ್ತಾರೆ. ಸಾಧ್ಯವೆಂದು ತೋರಿದಲ್ಲಿ ಸಂದರ್ಶನ, ಸಂಭಾಷಣೆ ಮತ್ತು ಸಭೆಗಳು ಜರುಗುವ ಪೂರ್ವದಲ್ಲಿಯೇ ೩೦-೪೦ ನಿಮಿಷುಗಳ ವರೆಗೆ ಭರಕ್ಯನೇ ನಿದ್ರೆಮಾಡುವರು. ಸಂಜೆಯ ೫ ಗಂಟೆಗೆ ಕೇವಲ ಹಣ್ಣಿನ ಆಹಾರವನ್ನು ತೆಗೆದುಕೊಳ್ಳುವರು. ಈ ವೇಳೆಯಲ್ಲಿ ಮಾತ್ರ ಹಾಗೆಯೇ ಕೆಲಸದಲ್ಲಿ ತೊಡಗಿರುತ್ತಲೇ ಇರುವರು. ಸಾಯಂಕಾಲದ ೬ ಗಂಟೆಗೆ ಪ್ರಾರ್ಥನೆಯಾದ ಮೇಲೆ ೯ ಅಥವಾ ೧೦ ಗಂಟೆಯ ವರೆಗೆ ಕೆಲಸ ಮಾಡಿ ಹಾಸಿಗೆ ಹೋಗುವರು.

ಹೆಚ್ಚು ಕುಳಿತುಕೊಳ್ಳುವುದರಿಂದ ಮತ್ತು ಹೆಚ್ಚು ಬರೆಯುವುದರಿಂದ ಶರೀರದ ಭಾಗಗಳು ನೋಯಿಸಿದಲ್ಲಿ ಕೆಲವು ವೇಳೆ ಗಾಂಧೀಜಿಯವರು ತಮ್ಮ ಶ್ರೀಮತೀಜಿಯವರಿಂದ ಅವನ್ನು ಎಣ್ಣೆಯಿಂದ ತಿಕ್ಕಿಸಿಕೊಳ್ಳುವರು. ಅವರು ನಿದ್ರೆಗಾಗಿ ಹಾಸಿಗೆಯ ಮೇಲೆ ಮಲಗಲು ಸಾವೆಲ್ಲರು ನೋಯುವ ಅವಯವಗಳನ್ನು ಒತ್ತುತ್ತೇವೆ. ಗಾಂಧೀಜಿಯವರು ಈಗ ೬೫ ವರ್ಷದವರಿರುವರು. ಇಷ್ಟು ಮುಪ್ಪಿನವರಾದರೂ ಅವರು ಇಷ್ಟು ಕೆಲಸವನ್ನು ಮಾಡಲು ಸಹಿಸಬಲ್ಲರು. ಇದಕ್ಕಾಗಿ ಎಲ್ಲರೂ ಸೋಜಿಗಗೊಳ್ಳಬೇಕಾಗಿದೆ. ಅವರು ದಿನಾಲು ಮಾಡುತ್ತಿರುವ ಕಾರ್ಯಗಳನ್ನು ಸ್ವಲ್ಪ ಜನ ತರುಣರೇ ಮಾಡಲು ಸಮರ್ಥರೆಂದು ಕಂಡುಬರುತ್ತದೆ.

## ಕಲ್ಲಬುರ್ಗಿ.

ಇಲ್ಲಿಯ ಬ್ರಹ್ಮಪುರದ ಶ್ರೀ. ಅನಂತಶಯನ ದೇವಾಲಯದಲ್ಲಿ ಪದ್ಧತಿ ಪ್ರಕಾರ ಸಾರ್ವಜನಿಕ ಗಣಪತಿ ಉತ್ಸವವು ಸಂಭ್ರಮದಿಂದ ನಡೆಯಿತು. ಇಲ್ಲಿಯ ಉತ್ಸಾಹಿ ತರುಣರ ಪ್ರಯತ್ನದಿಂದ ಅನೇಕ ವಿದ್ವಾಂಸರ ವ್ಯಾಖ್ಯಾನ ಕೀರ್ತನಗಳಾದವು.

ತಾ. ೧೯ ನೆಯ ದಿವಸ ಶ್ರೀ. ಹರ್ಡೀಕರ್ ಮಂಜಪ್ಪನವರು ಕನ್ನಡ ಸಾಹಿತ್ಯ ಮತ್ತು ನೈಜಾಮ ಕರ್ನಾಟಕದಲ್ಲಿ ಕನ್ನಡದ ದುರವಸ್ಥೆಯನ್ನು ಕುರಿತು ಧಾರ್ಮಿಕ ವಿವೇಚನೆಯೊಂದಿಗೆ ಪರಿಣಾಮಕಾರಿಯಾಗಿ ಭಾಷಣಮಾಡಿದರು.

ತಾ. ೨೦ ನೆಯ ದಿನ ಶ್ರೀ. ಹರ್ಡೀಕರ ಮಂಜಪ್ಪನವರ ವಿನಂತಿಯ ಪ್ರಕಾರ ಇಲ್ಲಿಯ ವೀರಶೈವ ಪ್ರಮುಖರು ಆಲೋಚಿಸಿ ಬರುವ ಕಾರ್ತಿಕ ಬಹುಳದಲ್ಲಿ ಕಲ್ಲಬುರ್ಗಿ ಜಿಲ್ಲಾ ವೀರಶೈವ ಸಭೆಯನ್ನು ಕಲ್ಲಬುರ್ಗಿಯಲ್ಲಿ ಕೂಡಿಸಬೇಕೆಂದು ಗೊತ್ತು ಮಾಡಿ ಈ ಕಾರ್ಯದ ಬಗ್ಗೆ ಮುಂದೆ ಪತ್ರವ್ಯವಹಾರ ಮಾಡಲು ಇಲ್ಲಿಯ ಉತ್ಸಾಹಿ ತರುಣರಾದ ಶ್ರೀ. ಅಣ್ಣಾರಾವ ಬಿ. ಎ. ಎಲ್. ಎಲ್. ಬಿ. ವಕೀಲ ಸಾಹೇಬ ಇವರನ್ನು ಸೆಕ್ರೆಟರಿಗಳನ್ನಾಗಿ ಗೊತ್ತು ಮಾಡಿದ್ದಾರೆ.

# ರಾಷ್ಟ್ರೀಯ ಚಟುವಟಿಕೆಗಳು.

### ಶ್ರೀಮತಿ ಕಮಲಾದೇವಿಯರ ಬಿಡುಗಡೆ.

ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರವರ ಭೂತಪೂರ್ವ ಪತ್ನಿಯಾದ ಮಂಗಳೂರಿನ ಶ್ರೀಮತಿ ಕಮಲಾದೇವಿಯವರು ತಮ್ಮ ಒಂದು ವರ್ಷದ ಶಿಕ್ಷೆಯನ್ನು ಅನುಭವಿಸಿ ಇವೀಗ ಬಿಡುಗಡೆ ಹೊಂದಿದ್ದಾರೆ. ಎರಡು ತಿಂಗಳ ಪೂರ್ವದಲ್ಲಿ ಮದ್ರಾಸಿನ ಲಾ ಮೆಂಬರರು ಇವರನ್ನು ಕಂಡು ಉತ್ತಮ ವರ್ತನೆಯಿಂದಿರುವ ಆಶ್ವಾಸನ ಕೊಟ್ಟರೆ ಮುಕ್ತವಾಡುವುದಾಗಿ ತಿಳಿಸಿದ್ದರು. ಅದಕ್ಕೆ ಶ್ರೀಮತಿಯವರು ಸಮ್ಮತಿಸಲಿಲ್ಲ. ಸತ್ಯಕ್ಕೆ ಅವರ ಪ್ರಕೃತಿಯು ಸೂಕ್ಷ್ಮವಾದದ್ದರಿಂದ ವೈದ್ಯರ ಅಭಿಪ್ರಾಯದ ಮೇರೆಗೆ ಅವರನ್ನು ಅನಿರ್ಬಂಧವಾಗಿ ಬಿಡಲಾಗಿದೆ. ಅವರು ಮಾತಾ ಪುತ್ರರನ್ನು ಕಾಣಲು ಮಂಗಳೂರಿಗೆ ತೆರಳಿದರು.

### ಲಾಹೋರಿನಲ್ಲಿ ಪಂ. ಮಾಲವೀಜಿಯವರು.

ಪಂಡಿತ ಮಾಲವೀಜಿಯವರು ಶ್ರೀ ಅಣೆಯವರೊಡನೆ ಲಾಹೋರಿಗೆ ಆಗಮಿಸಿದರು. ನಿಲ್ದಾಣದ ಮೇಲೆ ಪ್ರಮುಖ ಹಿಂದುಗಳು ಸರಿಯಾಗಿ ಸ್ವಾಗತಿಸಿದರು. ತಮ್ಮ ಸ್ವರಾಜ್ಯ ಪಕ್ಷದ ವತಿಯಿಂದ ಯಾವ ಉಮೇದವಾರರನ್ನು ನಿಲ್ಲಿಸಬೇಕೆಂದು ಸಾಧಾರಣ ೬೦ ಪ್ರತಿನಿಧಿಗಳೊಡನೆ ವಿಚಾರ ವಿನಿಮಯ ಮಾಡಿದರು.

ಗಾಂಧಿ-ಅಣೆ ಒಪ್ಪಂದದ ಬಗ್ಗೆ ಪಂಡಿತಜಿಯವರು ಸಂಶಯವನ್ನು ಪ್ರಕಟಿಸಿದರು. ಯಾವ ಉಮೇದವಾರನಾದರೂ ತಾನು ಅರಿಸಿ ಬರುವದಿಲ್ಲೆಂದು ಹೇಗೆ ಒಪ್ಪಿಕೊಂಡಾನು? ಅಂದ ಮೇಲೆ ಅವರನ್ನು ನಿಯೃಕ್ತಪಡಿಸುವದು ಹೇಗೆ ಎಂಬುದೇ ಪಂಡಿತಜಿಯವರ ಶಂಕೆ.

### "ಯಾವಾಗಲೂ ಖಾದಿ ಧರಿಸುವವರು" ಎಂದರೇನು?

ವರ್ಧಾಡ ಪ್ರಾಂತಿಕ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾದ ಶ್ರೀ ವೀರ ವಾಮನರಾವ ಜೋಶಿ ಇವರು ಸದ್ಯದ ರಾಷ್ಟ್ರೀಯ ಸಭೆಯ್ಕೆ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರಿಗೆ "ಯಾವಾಗಲೂ ಖಾದಿ ಧರಿಸುವವರು" ಎಂದರೇನೆಂದು ಕೇಳಿದುದಕ್ಕೆ ಉತ್ತರವಾಗಿ ಸರದಾರರು ಈ ಪ್ರಕಾರ ತಿಳಿಸಿರುವರು—

"ಯಾವನೊಬ್ಬ ಮನುಷ್ಯನಲ್ಲಿ ಯಾವಾಗಲೂ ಖಾದಿ ಧರಿಸುವ ಪದ್ಧತಿಯಿದ್ದರೆ ಅವನೇ ನಿತ್ಯವೂ ಖಾದಿ ಧರಿಸುವವನೆಂದು ತಿಳಿಯಬೇಕು. ಅಂಥವನು ಒಮ್ಮೆ ಸಬಲ ಕಾರಣದ ಮೂಲಕ ಖಾದಿ ಧರಿಸದಿದ್ದರೂ ಅವನು ನಿತ್ಯವೂ ಧರಿಸುವವನೆಂದೇ ತಿಳಿಯಬೇಕು. ಅದರೆ ಅವನು ಆಪಾದ ಮಸ್ತಕದವರೆಗೂ ಕೈ ನೂಲಿನ ಬಟ್ಟೆಯನ್ನೇ ಧರಿಸಬೇಕು. ಇನ್ನು ರಾಷ್ಟ್ರೀಯ ಕಾರ್ಯಗಳಲ್ಲಿ ಅವನೊಬ್ಬನು ಖಾದಿ ಬಟ್ಟೆಯನ್ನು ಹಾಕಿಕೊಂಡು ಇತರ ವೇಳೆಯಲ್ಲಿ ಬೇರೆ ಬಟ್ಟೆ ಹಾಕಿಕೊಳ್ಳುತ್ತಿದ್ದರೆ ಅವನಿಗೆ ಯಾವಾಗಲೂ ಖಾದಿ ಧರಿಸುವವನೆನ್ನಲಾಗದು."

### ಪಂ. ಜವಾಹರಲಾಲರನ್ನು ಬಿಡಲಾಗುವದಿಲ್ಲವೆ?

ಅಡ್ವೋಕೇಟ ಗಿರಧಾರೀಲಾಲ ಆಗರವಾಲಾ ಇವರು ಅಲಾಹಾಬಾದ ಹಾಯಕೋರ್ಟಿಗೆ ವಿನಂತಿ ಪತ್ರವನ್ನು ಬರೆದು ಪಂ. ಜವಾಹರಲಾಲರನ್ನು ಅನಿರ್ಬಂಧವಾಗಿ ತೀವ್ರವೇ ಮುಕ್ತವಾಡಲು ನಿರ್ಣಯವಾಗಬೇಕೆಂದು ಕೇಳಿಕೊಂಡಿದ್ದರು. ಅದಕ್ಕೆ ನ್ಯಾಯ ಮೂರ್ತಿ ಶ್ರೀ ಕೆಶರವರು ಈ ಪ್ರಕಾರ ತಿಳಿಸಿರುವರು— ಪಂ. ಜವಾಹರಲಾಲರು ಕಟ್ಟಳೆಯ ವಿಧಿಯಿಲ್ಲದೆ ಅಯೋಗ್ಯ ರೀತಿಯಿಂದ ಸೆರೆಮನೆಯಲ್ಲಿಡಲ್ಪಟ್ಟಿರುವರೆಂದೂ ಆದುದರಿಂದ ಅವರ ಮುಕ್ತತೆ ಯಾಗಬೇಕೆಂದೂ ಶ್ರೀ ಆಗರವಾಲರು ಕೇಳಿಕೊಳ್ಳುತ್ತಾರೆ. ಆದರೆ ಪಂ. ಜವಾಹರಲಾಲರಿಗೆ ಸನ್ಮಾನ್ಯ ಕೋರ್ಟಿನಿಂದ ೨ ವರ್ಷಗಳ ಶಿಕ್ಷೆಯಾದುದನ್ನು ಅವರೇ ಒಪ್ಪಿಕೊಳ್ಳುತ್ತಾರೆ. ಅಂದ ಮೇಲೆ ಕಟ್ಟಳೆಯಿಂದಲ್ಲದೆ ಅವರನ್ನು ಸೆರೆಯಲ್ಲಿಟ್ಟಂತಾಯಿತೇ? ಇನ್ನು ಸೌ. ಕಮಲಾ ನೆಹರು ಇವರ ಪ್ರಕೃತಿ ಸ್ವಾಸ್ಥ್ಯಕ್ಕಾಗಿ ಅವರನ್ನು ಕೆಲ ಗಂಟೆಗಳವರೆಗೆ ಬಿಡಲಾಗಿದ್ದಿತು. ಇದರಿಂದ ಬಿಟ್ಟು ಬಿಟ್ಟು ಶಿಕ್ಷೆ ಭೋಗಿಸಿದಂತಾಗಲಾರದು. ದಯೆಯನ್ನು ಸರಕಾರದವರು ಯಾವ ಪ್ರಕಾರ ತೋರಿಸಬೇಕೆಂಬುದನ್ನು ನಿರ್ಣಯಿಸುವದು ಈ ಕೋರ್ಟಿಗೆ ಅಧಿಕಾರವಿಲ್ಲ. ಹೀಗೆಂದು ಮುಕ್ತ ಮಾಡಬೇಕೆಂಬ ವಿನಂತಿ ಪತ್ರಿಕೆಯನ್ನು ಅವರು ತೆಗೆದು ಹಾಕಿದರು.

### ಸೌ. ಕಮಲಾ ನೆಹರುರವರಿಗೆ ಪಂ. ಜವಾಹರಲಾಲರ ದರ್ಶನ.

ಸೌ. ಕಮಲಾ ನೆಹರುರವರ ಪ್ರಕೃತಿಯು ವಿಕೋಪಕ್ಕೆ ಹೋಗಿದ್ದುದರಿಂದ ಅವರು ಕೆಲವು ಗಂಟೆಗಳ ವರೆಗೆ ಪಂ. ಜವಾಹರಲಾಲರನ್ನು ಕಂಡು ಮಾತಾಡಿಸಲು ಅನುಕೂಲವಾಗಬೇಕೆಂದು ಆನಂದ ಭವನಕ್ಕೆ ತಂದು ಬಿಡಲಾಗಿದ್ದಿತು. ಆದರೆ ಅವರಿಗೆ ಮೊದಲಿನಂತೆ ಕೆಲವು ದಿವಸಗಳ ವರೆಗೆ ಬಿಡುಗಡೆಯಾಗಲಿಲ್ಲ. ಇದಕ್ಕೆ ಕಾರಣವೆಂದರೆ ಸದ್ಯದ ರಾಜಕೀಯ ಪರಿಸ್ಥಿತಿಯು, ವಿಶೇಷವಾಗಿ ಮುಂಬಯಿ ಕಾಂಗ್ರೆಸ್ ಸಮಿತಿಯಿಸಿದುದೇ ಆಗಿದೆಯೆಂದು "ಲೀಡರ್" ಪತ್ರಿಕೆಯು ಅನ್ನುತ್ತದೆ.

ಡಾ. ಜಯರಾಜ ಬಿಹಾರಿಯವರು ಶ್ರೀಮತಿಯವರಿಗೆ ಔಷಧೋಪಚಾರ ನಡೆಯಿಸುತ್ತಿರುವುದರಿಂದ ಅವರು ಔಷಧೋಪಚಾರದ ಬಗ್ಗೆ ಪಂ. ಜವಾಹರಲಾಲರನ್ನು ವಿಚಾರಿಸಬೇಕಾದುದರಿಂದ ಅವರನ್ನು ಆಗಾಗ್ಗೆ ಬಿಟ್ಟು ಬಿಡಬೇಕೆಂದು ಪೋಲೀಸ ಸುಪರಿಂಟೆಂಡೆಂಟರನ್ನು ಕೇಳಿಕೊಂಡರು. ಆ ಮೇರೆಗೆ ಅವರಿಗೆ ಬಿಡುಗಡೆಯಾಗುತ್ತಿರುವುದಂತೆ.

### ಮಹಾತ್ಮರು ಕಾಂಗ್ರೆಸ್ಸಿಗೆ ಬರುವದಿಲ್ಲವೇ?

ಬರುವ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮರ ಪತ್ರದ ವಿಚಾರವಾಗಬೇಕಾಗಿರುವುದರಿಂದ ಅವರು ಕಾಂಗ್ರೆಸ್ಸಿಗೆ ಬರದಿರುವುದೇ ಯುಕ್ತವೆಂದೂ ಅವರಿಲ್ಲದಾಗ್ಗೇನೇ ಎಲ್ಲರೂ ಮನಬಿಚ್ಚಿ ಮಾತಾಡುವರೆಂದೂ ಸರದಾರ ಪಟೇಲರು ಮಹಾತ್ಮಾಜಿಯವರೊಡನೆ ಚರ್ಚಿಸಿದರು. ಶ್ರೀ ಜಮನಾಲಾಲ ಬಜಾಜರೂ ಆ ಕಾಲಕ್ಕೆ ಪರದೇಶಕ್ಕೆ ಹೋಗುವರಂತೆ.

### ಭಾಷಣಗಳನ್ನು "ಬ್ರಾಡ್‌ಕಾಸ್ಟ" ಮಾಡುವವಕ್ಕೆ ಸರಕಾರದ ನಕಾರ.

ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಮತ್ತು ಮಹಾತ್ಮಾಜಿಯವರ ಭಾಷಣಗಳನ್ನು 'ಬ್ರಾಡ್‌ಕಾಸ್ಟ' ಮಾಡುವ ಕುರಿತು ಸ್ವಾಗತ ಸಮಿತಿಯವರು ಸರಕಾರದ ಅಪ್ಪಣೆ ಬೇಡಿದ್ದರು. ಅದಕ್ಕೆ ಸರಕಾರದವರು ಆ ಭಾಷಣಗಳ ಪ್ರತಿಗಳನ್ನು ಬ್ರಾಡ್‌ಕಾಸ್ಟ (ಜಗತ್ ಪ್ರಸಾರ) ವಾಗುವ ಮೊದಲೇ ತಮ್ಮ ಕಡೆಗೆ ಕಳುಹಿಸಬೇಕೆಂದು ಕೇಳಲು ಸ್ವಾಗತ ಸಂಸ್ಥೆಯವರು ಸಮ್ಮತಿಸದಿದ್ದುದರಿಂದ ಈ ಪ್ರಯತ್ನವು ನಿಷ್ಫಲವಾಯಿತು. ಕಳೆದ ಶಾಸನಾಂದೋಲನದಲ್ಲಿ ಗುಪ್ತ ರೇಡಿಯೋ ದ್ವಾರದಿಂದ ಜಗತ್ ಪ್ರಸಾರ ಮಾಡುತ್ತಿದ್ದುದರಿಂದ ಈ ಸಾರೆ ಸರಕಾರದವರು ಸಮ್ಮತಿಸಲಿಲ್ಲವೆಂದು ಅನ್ನುತ್ತಿದ್ದಾರೆ.

# ಮಹಿಳಾ ಪ್ರಪಂಚ

## ಮಗುವಿನ ಏಳ್ಗೆಯು ಯಾರಿಂದ?

ಜಗತ್ತಿನಲ್ಲಿ ಸ್ತ್ರೀಯು ಪೂಜ್ಯತ್ವವನ್ನು ಪಡೆದಿರುವದು ಮಾತೆಯಿಂದೆ. ವೀರಮಾತೆಗೆ ಸಮಾನರಾದವರು ಮತ್ತಾರೂ ಇಲ್ಲ. ಕೇವಲ ಮಾಂಸದ ಮುದ್ದೆಯಾದ ನವಶಿಶುವಿನಲ್ಲಿ ಅವಳು ಅದ್ಭುತವಾದ ಶಕ್ತಿಯನ್ನು ತುಂಬಿ ಜಗತ್ತನ್ನೇ ಕಾಣಿದಾಡಿಸಬಲ್ಲಳು. ವೀರಮಾತೆಯಾದ ಜೀಜಾಬಾಯಿಯು ಬಾಲಶಿವಾಜಿಯ ಕೋಮಲ ಅಂತಃಕರಣದ ಮೇಲೆ ವೀರ ಪುರುಷರ ಅದ್ಭುತಲೀಲೆಗಳನ್ನು ಒಡಮೂಡಿಸಿದುದರಿಂದಲೇ ಆ ಹಿಂದು ವೀರನು ಹಿಂದು ಸಂಸ್ಕೃತಿಯನ್ನು ಉದ್ಧರಿಸಲು ಶಕ್ತನಾದನಲ್ಲವೇ? ಹುಟ್ಟಿದ ಮಗುವಿಗೆ ತಾಯಿಯ ಮಡಲೇ ಆದರ ಜಗತ್ತು. ಅದೇ ಅದರ ಪ್ರಯೋಗಶಾಲೆ. ಅಲ್ಲಿ ಕಲಿತುದನ್ನೇ ಅದು ಕ್ರಮವಾಗಿ ವಿಕಾಸಪಡಿಸಿಕೊಳ್ಳುವದು. ಆದುದರಿಂದ ಮಾತೆಯ ಮೇಲೆ ತನ್ನ ಶಿಶುವಿನ ಭವಿಷ್ಯ ಆಯುಷ್ಯದ ಹೊಣೆ ವಿಶೇಷವಾಗಿದೆ. ಒಂದೇ ಒಂದು ಮಗುವನ್ನಾದರೂ ಅವಳು ವಿಶೇಷವಾಗಿ ಪಾಲಿಸಲಿ. ಆಂದರೆ ಅವಳ ಆಯುಷ್ಯದಲ್ಲಿಯ ರಾಷ್ಟ್ರಸೇವೆಯೂ ಪರಮಾತ್ಮ ಸೇವೆಯೂ ಸಾಕಾಗುವಷ್ಟು ಆದವೆಂದು ಹೇಳಬಹುದು. ಮುಖ್ಯವಾಗಿ ತಾಯಂದಿರು ಈ ಕೆಳಗಿನ ನಿಯಮಗಳಂತೆ ವರ್ತಿಸುವುದು ಮಕ್ಕಳ ಹಿತದ ದೃಷ್ಟಿಯಿಂದ ಅತ್ಯುಪಯುಕ್ತವಾದುದು.

(೧) ಎಳೆಯ ಮಗುವಿಗೆ ಕಠಿಣವಾಗಿ, ಕರ್ಕಶವಾಗಿ, ಉಗ್ರವಾಗಿ ಇಲ್ಲವೆ ಗರ್ವದಿಂದ ಎಂದೂ ಹೆದರಿಸಕೂಡದು.

(೨) ಮಗುವನ್ನು ಪ್ರೇಮದಿಂದ, ಮುಗುಳುನಗೆಯಿಂದ ಅದಕ್ಕೆ ಸುಖವಾಗುವ ರೀತಿಯಲ್ಲಿ ತಬ್ಬಿಕೊಂಡು ಮೆಲ್ಲಗೆ ಮಾತಾಡಬೇಕು.

(೩) ಮಗುವಿನ ಅವಯವಗಳನ್ನೂ, ಹಾಸಿಗೆ ಬಟ್ಟೆಗಳನ್ನೂ ಸ್ವಚ್ಛವಾಗಿರಿಸಬೇಕು. ಮತ್ತು ಆ ಪ್ರಕಾರ ಸ್ವಚ್ಛವಿರುವವರ ಕಡೆಗೇ ಮಕ್ಕಳನ್ನು ಲಾಲಿಸಲು ಕೊಡಬೇಕು.

(೪) ಭಾವನೆಯು ಬೆಳೆದ ಮಗುವಿಗೆ "ಕಳ್ಳ" "ಖೋಡಿ" "ಹುಚ್ಚ" ಮುಂತಾದ ಒರಟು ಶಬ್ದಗಳನ್ನು ವಿನೋದಕ್ಕಾಗಿಯೂ ಸಹ ಅನ್ನಕೂಡದು.

(೫) ಮಕ್ಕಳೊಡನೆ ಪ್ರಾಮಾಣಿಕ ರೀತಿಯಿಂದ ವ್ಯವಹರಿಸಬೇಕು. ಚೇಷ್ಟೆಗಾಗಿ ಕಳವು ಕಲಿಸಬಾರದು.

ದೇಶದ ಅಭ್ಯುದಯವು ಸುಸಂತತಿಯ ಮೇಲೆಯೇ ಅವಲಂಬಿಸಿದೆ. ಸುಸಂತತಿಯ ಉತ್ಪಾದಕರು ವೀರ ಮಾತೆಯರೇ ಸರಿ. ಆದುದರಿಂದ ಪುತ್ರ ರತ್ನಗಳನ್ನು ಪಡೆಯುವ ಭಗಿನಿಯರು ತಮ್ಮ ಮೇಲಿರುವ ಈ ದೇಶದ ಹೊಣೆಯನ್ನು ಯೋಗ್ಯರೀತಿಯಿಂದ ನಡೆಯಿಸಲು ಜಾಗ್ರತರಾಗುವರೇ? 'ಹಿಂದು' (ಉರ್ದು)

## ಪ್ರಸಂಗಾವಧಾನ.

ಪತಿಯಾಳಾ ಸಂಸ್ಥಾನದ ಒಂದು ಹಳ್ಳಿಯಲ್ಲಿ ಒಬ್ಬ ಶೀಖ ಭೂಮಿಯೊಡೆಯನ ಮನೆಗೆ ೫ ಜನ ಆಯುಧಪಾಣಿಗಳಾದ ಸುಲಿಗೆಗಾರರು ಮುತ್ತಿಗೆ ಹಾಕಿದರು. ಮನೆಯಲ್ಲಿ ಆ ಭೂಮಿಯೊಡೆಯನ ಪತ್ನಿಯೊಬ್ಬಳೇ ಇದ್ದಳು. ಅವಳಿಗೆ ಅವರು ನಿನ್ನ ಮೈ ಮೇಲಿನ ಒಡವೆಗಳನ್ನೆಲ್ಲ ಕೊಡು; ಇಲ್ಲದಿದ್ದರೆ ನಿನ್ನ ಜೀವವನ್ನೇ ತೆಗೆದುಕೊಳ್ಳುತ್ತೇವೆ ಎಂದು ಗದ್ದರಿಸಿರು. ಅವಳು ಪ್ರಸಂಗವನ್ನರಿತು ತನ್ನ ವೈಮೇಲಿನ ಆಭರಣಗಳನ್ನೆಲ್ಲ ಕೊಟ್ಟು ಇನ್ನೂ ಕೆಲವು ಹಕ್ಕಿದ ಮನೆಯಲ್ಲಿರುತ್ತವೆಂದು ಹೇಳಿ ಅಲ್ಲಿಗೆ ಅವರನ್ನು ಕರಕೊಂಡು ಹೋಗಿ, ಇಲ್ಲಿ ಆಗಿಯಿರೆಂದು ಹೇಳಿದಳು. ಸುಲಿಗೆಗಾರರು ಆಗಿಯುವುದರಲ್ಲಿ ತೊಡಗಿದಾಗ್ಗೆ ಅವಳು ಮೆಲ್ಲಗೆ ಹೊರಬಿದ್ದು ನಡೆದ ಸಮಾಚಾರವನ್ನು ಜನರಿಗೆ ತಿಳಿಸಿದಳು. ಅವರು ಸದ್ದಿಲ್ಲದೆ ಮನೆಯ ಸುತ್ತಲು ನೆರೆದು ಒಳಗಿನ ಸುಲಿಗೆಗಾರರನ್ನು ಹಿಡಿದರು. ಆ ಸ್ತ್ರೀಯು ತನ್ನ ಪ್ರಸಂಗಾವಧಾನ ಗುಣದಿಂದ ತನ್ನ ಜೀವವನ್ನು ಉಳಿಸಿಕೊಂಡದ್ದಲ್ಲದೆ ಆ ದುಷ್ಟರನ್ನೂ ಹಿಡಿದು ಕೊಟ್ಟಳು. ಭಾರತ ಭಗಿನಿಯರು ಈ ಪ್ರಕಾರ ಧೈರ್ಯಶಾಲಿನಿಯರಾಗಲು ಪ್ರಯತ್ನಿಸಬಾರದೇ?

## ಸ್ತ್ರೀ ಪೋಲೀಸರ ಮಹತ್ವ.

ಸ್ತ್ರೀಯರ ಚಟುವಟಿಕೆಯಿಂದ ಅವರ ಏಳ್ಗೆಗಾಗಿ ಅನೇಕ ಸುಧಾರಣೆಗಳು ಬಳಕೆಯಲ್ಲಿ ಬರಹತ್ತಿವೆ. ಸ್ತ್ರೀಯರು ನ್ಯಾಯಾಧೀಶರೂ, ನ್ಯಾಯವಾದಿಗಳೂ ಆಗುತ್ತಿದ್ದಾರೆ. ನಾನಾ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಸ್ವೀಕರಿಸುತ್ತಿದ್ದಾರೆ. ಆದರೆ ಸ್ತ್ರೀಯರು ಪೋಲೀಸರಾಗುವದೂ ಸದ್ಯದ ಯುಗದಲ್ಲಿ ಒಳ್ಳೇ ಆವಶ್ಯವಾಗಿದೆ.

ಭಯಂಕರ ಅಪರಾಧಗಳಲ್ಲಿ ಸ್ತ್ರೀಯರನೇಕರ ಅಂಗವಿರುತ್ತದೆ. ಸ್ತ್ರೀಯರ ಹೃದ್ಗತವನ್ನು ತಿಳಿಯುವುದು ಪುರುಷ ಪೋಲೀಸರಿಗೆ ಒಳ್ಳೇ ಕಠಿಣವಾಗುತ್ತಿದೆ. ಇಂಥ ಕಾಲದಲ್ಲಿ ಸ್ತ್ರೀ ಪೋಲೀಸರು ಆ ಕೆಲಸವನ್ನು ಉತ್ತಮ ರೀತಿಯಿಂದ ಮಾಡಬಲ್ಲರು.

ಕೋರ್ಟಿನಲ್ಲಿ ಸ್ತ್ರೀಯರು ಸಾಕ್ಷಿ ಹೇಳುವುದಕ್ಕಾದರೂ ಸ್ತ್ರೀ ಪೋಲೀಸರ ಸಹಾಯವು ಅವಶ್ಯಕವಾಗಿದೆ. ಇಲ್ಲದಿದ್ದರೆ ಅನೇಕ ಸ್ತ್ರೀಯರು ಹೆದರಿಕೊಂಡು ಏನಾದರೊಂದು ಹೇಳಿ ನ್ಯಾಯಾಧೀಶರಿಗೆ ನಿಷ್ಕಾರಣವಾಗಿ ತೊಂದರೆಪಡಿಸುತ್ತಾರೆ.

ಇನ್ನೊಂದು ಬಹು ಮುಖ್ಯವಾದ ಕಾರಣವೆಂದರೆ ಈಗಿನ ಕಾಲದಲ್ಲಿ ಹುಡುಗಿಯರನ್ನು ಓಡಿಸಿಕೊಂಡು ಹೋಗುವುದು ಎಲ್ಲೆಲ್ಲಿಯೂ ಹೆಚ್ಚಿದ್ದರಿಂದ ಅಂಥ ಬಾಲೆಯರನ್ನು ಕಂಡು ಅವರ ಮನೋಗತವನ್ನರಿತುಕೊಂಡು ಕೂಡಲೇ ವ್ಯವಸ್ಥೆ ಮಾಡುವ ಕೆಲಸವಾದರೂ ಸ್ತ್ರೀ ಪೋಲೀಸರಿಂದಲೇ ಚೆನ್ನಾಗಿ ಆಗುವದು. ಆದುದರಿಂದ ಸ್ತ್ರೀ ಸುಧಾರಣೆಯು ಬೆಳೆದಂತೆ ಸ್ತ್ರೀ ಪೋಲೀಸರ ಅವಶ್ಯಕತೆಯೆನಿಸುವುದು ನಿರ್ವಿವಾದವಾದದ್ದು. 'ಮಹಿಳಾ'

## ಮಹಿಳಾ ವಿದ್ಯಾಲಯ ಬೆಳಗಾವಿ.

ಬೆಳಗಾವಿಯ ಮಹಿಳಾ ವಿದ್ಯಾಲಯವನ್ನು ಗಣೇಶೋತ್ಸವದ ನಿಮಿತ್ತವಾಗಿ ಅಲ್ಲಿಯ ಕಲೆಕ್ಟರರಾದ ಶ್ರೀ. ಆರ್. ಎಸ್. ಹಿರೇಮಠರವರು ಸಂದರ್ಶಿಸಿದರು. ಈ ಸಮಾರಂಭಕ್ಕೆ ಜಿಲ್ಲೆಯ ಹೊರಗಿನ ಅನೇಕ ಸದ್ಗೃಹಸ್ಥರು ಆಗಮಿಸಿದ್ದರು. ಪ್ರಾರಂಭದಲ್ಲಿ ಕೆಲ ಬಾಲಿಕೆಯರು ಉತ್ತಮವಾಗಿ ಸುಸ್ವರದಿಂದ ಗಾಯನ ಮಾಡಿದರು. ಆಮೇಲೆ ಕಲೆಕ್ಟರವರ ಹಸ್ತದಿಂದ ಪಾರಿತೋಷಕಗಳು ಕೊಡಲ್ಪಟ್ಟವು. ಬೆಳಗಾವಿಯ ನಾಗರಿಕರು ಈ ವಿದ್ಯಾಲಯಕ್ಕೆ ಉದಾರ ಹೃದಯದಿಂದ ಸಹಾಯ ಮಾಡಬೇಕೆಂದು ಕಲೆಕ್ಟರರು ಹೇಳಿದರು.

# ವರ್ತಮಾನ ಸಾರ.

—ಶ್ರೀ ಗುಗಾಧರರಾವ ದೇಶಪಾಂಡೆಯವರು ಆರೋಗ್ಯ ಸ್ವಾಸ್ಥ್ಯಕ್ಕಾಗಿ ಅಹಮ್ಮದನಗರಕ್ಕೆ ಹೋಗಿರುವರು.

—ನರ್ಮದಾ ನದಿಗೆ ಭಯಂಕರ ಮಹಾಪೂರ ಬಂದದ್ದರಿಂದ ಜನರು ಮತ್ತು ಧನಗಳು ತೇಲಿಹೋಗುತ್ತಿವೆ. ಜಬಲಪುರ ನಾಗಪುರ ರಾಜಮಾರ್ಗದ ಸೇತುವೆಯ ಮೇಲೆ ನದಿಯ ನೀರು ೧೨ ಅಡಿ ಏರಿದೆ.

—ಹಿಂದೀ ಸುಧಾರಣೆಯಲ್ಲಿ ಪರಿಶ್ರಮ ಪಟ್ಟದ್ದಕ್ಕಾಗಿ ನಾ. ಅಗಾಖಾನರನ್ನು ಲಾರ್ಡರನ್ನಾಗಿ ಮಾಡುವರೆಂದು ಲಂಡನ್ನಿನ ರೇನಾಲ್ಡ್ಸ ಪತ್ರವು ಅನ್ನುತ್ತದೆ.

—ಮೊನ್ನೆ ತಾನೆ ಸುವರ್ಣ ಮಹೋತ್ಸವವನ್ನು ಮಾಡಿದ ಗೊಂಡಲ ಸಂಸ್ಥಾನಿಕರು ಅತ್ಯವಸ್ಥರಾಗಿರುವರಂತೆ.

—ಗಾಂಧೀಜಿ ಮತ್ತು ವೈಸರಾಯಿಯವರಲ್ಲಿ ಒಪ್ಪಂದವನ್ನು ಮಾಡಲು ಲಾಹೋರದ ಶ್ರೀ ನೇಕೀರಾಮಶರ್ಮಾ ಇವರು ಪ್ರಯತ್ನಿಸುತ್ತಿರುತ್ತಾರೆ.

—ಪುಣೆ, ಅಹಮ್ಮದನಗರ ಮೊದಲಾದ ಕಡೆಗಳಲ್ಲಿ ಕ್ರಿಸ್ತಿ ಮಿಶನರಿ ಜೀವರತ್ನಮ್ ಎಂಬವನ ವ್ಯಾಧಿ, ವ್ಯಂಗ ಮೊದಲಾದ ವುಗಳನ್ನು ನಿವಾರಣೆ ಮಾಡುವೆನೆಂದು ಹೂಲಿಯೆಬ್ಬಿಸಿರುವನು. ನಾಶಿಕದ ಅಧಿಜನ ಮೊದಲ್ಗೊಂಡು ಎಲ್ಲ ಹಿಂದುಗಳು ಸಭೆ ಸೇರಿಸಿ ಆತನ ಕೃತ್ಯವನ್ನು ನಿಷೇಧಿಸಿದರು.

—ಕಲಕತ್ತೆಯಲ್ಲಿ ೧೧ ಜನ ಬಂಗಾಲಿ ತರುಣರನ್ನು ಬಂಧಿಸಿ ಅನೇಕ ಕಾಗದ ಪತ್ರಗಳನ್ನು ವಶಪಡಿಸಿಕೊಂಡರು. ಈ ತರುಣರೆಲ್ಲ ವಿದ್ಯಾರ್ಥಿಗಳೇ ಇರುವರಂತೆ.

—ಆಸ್ಟ್ರಿಯಾದ ಸ್ವಾತಂತ್ರ್ಯದ ವಿಷಯವಾಗಿ ಫ್ರಾನ್ಸ ಮತ್ತು ಇಟಲಿ ದೇಶಗಳ ನಡುವೆ ಮತಭಿನ್ನವುಂಟಾಗಿದೆ.

—ಬಾಲವಿವಾಹ ಪ್ರತಿಬಂಧ ಕಟ್ಟಳೆಯನ್ನು ಮಾಡಿಸಿದ ಶ್ರೀ ಹರಿವಿಲಾಸ ಶಾರದಾರವರೇ ತಮ್ಮ ೧೫ ವರ್ಷ ವಯಸ್ಸಿನ ತಮ್ಮನ ಮಗಳನ್ನು ಲಗ್ನಮಾಡಿಕೊಟ್ಟರೆಂದು ಹಸ್ತಪತ್ರಿಕಗಳನ್ನು ಕೆಲವರು ಹಂಚಿದ್ದರು. ಅದಕ್ಕೆ ಶ್ರೀ ಶಾರದಾರವರು ಇದು ಸುಳ್ಳು ಸುದ್ದಿಯೆಂದೂ ಬಾಲ್ಯವಿವಾಹವು ತಮಗೆ ಎಂದೂ ಮಾನ್ಯವಿಲ್ಲವೆಂದೂ ಪ್ರಕಟಿಸಿರುವರು.

—ವಕೀಲರು ಶಾಸನಭಂಗದಲ್ಲಿ ಭಾಗವಹಿಸಿದ ಮಾತ್ರದಿಂದ ಅವರ ವೃವಸಾಯವನ್ನು ಬಿಡಿಸಲಿಕ್ಕೆ ಬರುವದಿಲ್ಲವೆಂದು ಹಾಯಕೋರ್ಟಿನವರು ನಿರ್ಣಯಿಸಿದ್ದಾರೆ

—ದಕ್ಷಿಣ ಭಾಗದ ಪರವಾಗಿ ಅಸೆಂಬ್ಲಿಗೆ ಶ್ರೀ ಹೊಸಮನಿ, ರಾ. ಬ. ಪಾಟೀಲ್, ಶ್ರೀ ವಿಶ್ವನಾಥರಾವ ಜೋಗ ಮತ್ತು ಶ್ರೀ ಗಂಗೋಲಿ ಹೀಗೆ ನಾಲ್ವರು ಉಮೇದವಾರರು ನಿಂತಿರುವರು.

—ಶ್ರೀ ರವೀಂದ್ರನಾಥ ಟಾಗೋರವರು ಇದೇ ತಿಂಗಳ ೩ನೆಯ ವಾರದಲ್ಲಿ ಮದ್ರಾಸಿಗೆ ಬರುವವರಿದ್ದಾರೆ. ಅಲ್ಲಿ ಅವರಿಗೆ ೫೦ ಸಾವಿರ ರೂಪಾಯಿಗಳು ಆರ್ಪಿಸಲ್ಪಡುವವು.

—ಆಸ್ಟ್ರೇಲಿಯಾದಲ್ಲಾಗುವ ಸ್ಕೌಟ್ ಜಾಂಬೋರಿಗೆ ಹಿಂದು ಸ್ಥಾನದ ಬಾಲವೀರರು ೬ನೆಯ ನವೆಂಬರಕ್ಕೆ ಕೋಲಂಬೊ ಮಾರ್ಗವಾಗಿ ಹೋಗುವವರಿದ್ದಾರೆ.

—ಮುಂಬಯಿ ಕಾಂಗ್ರೆಸ್ ಸ್ವಯಂಸೇವಿಕೆಯರ ಸಂಘದಿಂದ ಶ್ರೀ ಪೇರಿನ್ ಕ್ಯಾಪ್ಟನ್‌ರವರು ತಮ್ಮ ಹೆಸರನ್ನು ಹಿಂತೆಗೆದುಕೊಂಡಿದ್ದಾರೆ.

—೨೭ನೆಯ ತಾರೀಖಿನ ಸಾಯಂಕಾಲ ಶ್ರೀಮತಿ ಕಮಲಾ ನೆಹರು ಇವರ ಪ್ರಕೃತಿಯು ತೀರ ವಿಕೋಪಕ್ಕೆ ಹೋಗಿದ್ದಿತ. ಸಾಧಾರಣ ೧೦೪ ಅಂಶಗಳ ತನಕ ಜ್ವರವಿದ್ದವು. ಮೇಲಿಂದ ವೈದ್ಯಕೀಯ ವಾಕರಿಕೆ ಬರುತ್ತಿದ್ದಿತು. ಪಂ. ಜವಾಹರಲಾಲರ ಬಿಡುಗಡೆಯು ಇಂಥ ಸಮಯದಲ್ಲಾಗುವುದು ಅತ್ಯಂತಾವಶ್ಯಕವೆಂದು ಜನರಿಗೆ ಅನಿಸಿತು.

—ರೆ. ಆಂಡ್ರ್ಯೂಜರವರು ಸೈನಿ ಕಾರಾಗೃಹದಲ್ಲಿ ಪಂ. ಜವಾಹರಲಾಲರನ್ನು ಕಾಣುವರಿದ್ದಾರೆ.

—ಶ್ರೀಮತಿ ವಿಂಟರ್‌ನಿರವರು ಡಾ. ಹೋಮ್ಸರವರು ಗೊತ್ತುಪಡಿಸಿದ ಪ್ರಕಾರ ಚಿಕಿತ್ಸೆಯನ್ನು ಕೊಡಲು ಅಮೆರಿಕೆಗೆ ಹೋಗುವರು.

—ಹೈದರಾಬಾದಿನ ರಾಜಾ ಇಂದ್ರಕರಣ ಬಹಾದ್ದೂರ ಇವರು ತಮ್ಮ ೬೯ನೆಯ ವರ್ಷದಲ್ಲಿ ಸ್ವರ್ಗಸ್ಥರಾದರು.

—ಬಂಗಾಲ ಸರಕಾರದ ಪ್ರತಿಬಂಧವು ಬಿಗಿಯಾದುದರಿಂದ ಕ್ರಾಂತಿಕಾರರು ರಂಗೂನಿನ ಕಡೆಗೆ ತಮ್ಮ ಚಟುವಟಿಕೆಯನ್ನು ನಡೆಯಿಸಿರುವರಂತೆ.

—ಪಂಜಾಬದ ಮಿಯಾನವಾಲಿ ಜಿಲ್ಲೆಯಲ್ಲಾದ ಹಿಂದು ಮುಸಲ್ಮಾನರ ದೊಂಬಿಯಲ್ಲಿ ಉಭಯ ಪಕ್ಷದ ನೂರಾರು ಜನರು ಹೊಡೆದಾಡಿದರಂತೆ. ಒಬ್ಬ ಮುಸಲ್ಮಾನ ಹೆಣ್ಣುಮಗಳು ಕೈಯಲ್ಲಿ ಕುರಾನವನ್ನು ತೆಗೆದುಕೊಂಡು ಶಾಂತಪಡಿಸಲು ಪ್ರಯತ್ನಪಟ್ಟರೂ ಕೇಳಲಿಲ್ಲವಂತೆ.

—ಕಳೆದ ತಿಂಗಳ ೧೯ನೆಯ ತಾರೀಖಿಗೆ ಮಂಗಳೂರಿನ ಬಾಸೆಲ್ ಮಿಶನ್ನಿನವರು ಸ್ಥಾಪಿಸಿದ ಮಿಶನ್ನಿಗೆ ೧೦೦ ವರ್ಷಗಳು ತುಂಬಿದ್ದರಿಂದ ಎಲ್ಲೆ ಕಡೆಗೂ ಮಿಶನರಿಗಳು ಉತ್ಸವ ಮಾಡಿದರು.

—ಲಿಂಗರಾಜ ಕಾಲೇಜಿದ ಹಾಸ್ಟೇಲಿಗೆ ಲಾರ್ಡ ಬ್ರೂಬರ್ನರವರ ಹೆಸರನ್ನಿಡುವರಂತೆ.

—ಶ್ರೀ ಬಸಪ್ರಭಪ್ಪ ಶಾಂತವೀರಪ್ಪ ನಿಡಗುಂದಿ ಮಾಸ್ತರರು ತಮ್ಮ ಜೀವನದಲ್ಲಿ ಉಳಿತಾಯದಿಂದ ಗಳಿಸಿದ ಳಗಿಂ ರೂ. ಗಳನ್ನು ಲಿಂಗಾಯತ ಶಿಕ್ಷಣ ಸಂಸ್ಥೆಗೆ ಕೊಟ್ಟರು. ಸ್ತುತ್ಯ ಕಾರ್ಯ.

—ಶ್ರೀ ಎಸ್. ಎಸ್. ಬಿಳ್ಳೂರ ಇವರು ಶಹಾಪುರ ವೀರಶೈವ ಫ್ರೀ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಭೋಜನ ಮಾಡಿಸಿ ತಮ್ಮಲ್ಲಿ ಸಿದ್ಧವಾಗುವ ಗಂಜಿ ಫ್ರಾಕುಗಳನ್ನು ಕೊಟ್ಟರು.

— ನಾಗಪುರದ ಶಾಲೆಯಲ್ಲಿ ಮುಸಲ್ಮಾನ ಶಿಕ್ಷಕರು ಗಣಪತಿಯನ್ನು ಕೂಡ್ರಿಸಿ ಪೂಜಿಸಿದರು.

—ವಾಯವ್ಯ ಗಡಿನಾಡಿನ ಮುಸಲ್ಮಾನ ಸ್ವಯಂಸೇವಕರು ಅಹಿಂಸಾ ವ್ರತವನ್ನು ಸ್ವೀಕರಿಸಿದರೆ ಗಾಂಧೀಜಿಯವರು ಅವರ ಹತ್ತಿರವೇ ವಾಸಿಸುವರಂತೆ.

—ಮೈಸೂರು ಸರಕಾರದವರು ಬೀಜಗಣಿತ, ರೇಖಾಗಣಿತ ಮೊದಲಾದ ಉಚ್ಚ ವಿಷಯಗಳ ಪುಸ್ತಕಗಳನ್ನು ಕನ್ನಡದಲ್ಲಿಯೇ ಬರೆಯಿಸಲು ವ್ಯವಸ್ಥೆ ಮಾಡಿರುವರು.

—ಸರದಾರ ವಲ್ಲಭಭಾಯಿಯವರು ಕಳೆದ ೨೯ನೆಯ ತಾರೀಖಿನ ದಿವಸ ವರ್ಧಾದಿಂದ ಮುಂಬೈಗೆ ಬಂದರು. ಆಗ ಅವರು, ಮ. ಗಾಂಧಿಯವರು ಮತ್ತು ಅವರ ಅನುಯಾಯಿಗಳು ಮುಂಬೈ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಗೊಂದಲಮಾಡಿ ತಮ್ಮ ಬಹುಮತ ಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲವೆಂದು ಸಾರ್ವಜನಿಕ ಆಶ್ವಾಸನವನ್ನಿತ್ತರು.

—ಮುಂಬೈ ಕಾಂಗ್ರೆಸ್ ಅಧಿವೇಶನಕ್ಕೆ ಸರಕಾರದ ಪದವಿಗಳನ್ನು ಹೊಂದಿದ ಅನೇಕರು ೪೦ ಸಾವಿರ ವರೆಗೆ ಸಹಾಯಮಾಡಿದ್ದಾರೆ.





ಶಾ. ಶ. ೧೮೬೬ ನೆಯ ಭಾದ್ರಪದ ಬ|| ೮ ಸೋಮವಾರ.

## ಗಾಂಧೀಜಿಯವರ ಜಯಂತ್ಯುತ್ಸವ.

ಮಹಾತ್ಮಾ ಗಾಂಧಿಯವರ ೬೯ ನೆಯ ವಾರ್ಷಿಕ ಜಯಂತ್ಯುತ್ಸವವು ಇದೇ ೨ ನೆಯ ತಾರೀಖಿನ ದಿನ ಜಗತ್ತಿನ ನಾನಾ ಭಾಗಗಳಲ್ಲಿ, ಮುಖ್ಯವಾಗಿ ಹಿಂದುಸ್ಥಾನದಲ್ಲಿ ಅತ್ಯಂತ ಆದರಾಭಿಮಾನಗಳಿಂದ ಜರುಗುವುದಸ್ಟೆ.

ಹಾಗೆ ಈ ಜಯಂತ್ಯುತ್ಸವವು ಜರುಗಬೇಕಾದುದು ಯುಕ್ತವೂ ಅವಶ್ಯಕವೂ ಆಗಿದೆ. ಭರತಖಂಡದ ಕಳೆದ ೧೪ ವರುಷಗಳ ಚರಿತ್ರೆಯು ಗಾಂಧೀಜಿಯವರ ದಿವ್ಯತರವಾದ ಅದ್ಭುತ ಆತ್ಮಶಕ್ತಿಯಿಂದ ಅಪೂರ್ವವಾದುದಾಗಿ ಪರಿಣಮಿಸಿದೆ.

ಭಾರತೀಯರು ಆತ್ಮನಿರೀಕ್ಷಣೆಯನ್ನು ಮಾಡಿದುದು ಗಾಂಧೀಜಿಯವರಿಂದ. ರಾಷ್ಟ್ರ ಹಿತಕ್ಕಾಗಿ ಆತ್ಮಾಹುತಿಯನ್ನು ಕೊಡಲು ಕಲಿತುದು ಗಾಂಧೀಜಿಯವರಿಂದ. ಪಾಶ್ಚಾತ್ಯರ ಬೆನ್ನು ಹತ್ತಿದ್ದ ಪರಾವಲಂಬನೆಯನ್ನು ಬಿಟ್ಟು ಸ್ವಾವಲಂಬನೆಯ ಪಾಠವನ್ನು ಕಲಿತುದು ಗಾಂಧೀಜಿಯವರಿಂದ. ಹಿಂದುಗಳು ತಮ್ಮ ಧಾರ್ಮಿಕ ತಪ್ಪು ತಿಳುವಳಿಕೆಯ ಪಾಪವನ್ನು ತೊಳೆದುಕೊಳ್ಳಲು ಪ್ರಾರಂಭಿಸಿರುವುದು ಗಾಂಧೀಜಿಯವರಿಂದ. ಬಟ್ಟೆಗಾಗಿ ಕಳೆದುಕೊಳ್ಳುತ್ತಿರುವ ಕೋಟ್ಯಾಂತರ ರೂ. ಗಳನ್ನು ಉಳಿಸಿಕೊಳ್ಳುವ ಉಪಾಯವನ್ನು ತಿಳಿದು ತೋರಿದುದು ಗಾಂಧೀಜಿಯವರಿಂದ.

ಈ ಪ್ರಕಾರ ಭಾರತೀಯರ ನಿಜವಾದ ಉನ್ನತಿಯ ಅನೇಕ ಮಾರ್ಗಗಳನ್ನು ತೋರಿಸಿ ಜಗತ್ತಿಗೇನೇ ವಂದ್ಯರಾಗಿರುವ ಗಾಂಧೀಜಿಯವರು ಇತ್ತೀಚೆಗೆ ಕೆಲವರಿಗೆ ಅಪ್ರಿಯರಾಗಿ ತೋರುತ್ತಿದ್ದಾರೆ. ಇದಕ್ಕೆ ಗಾಂಧೀಜಿಯವರೇನೂ ಕಾರಣರಲ್ಲ. ಅವರ ಬೆನ್ನು ಹತ್ತಿದ್ದ ಕೆಲವರ ತಪ್ಪು ತಿಳುವಳಿಕೆಯೇ ಕಾರಣವು.

ರಾಜಕೀಯ ದೃಷ್ಟಿಯಿಂದ ಗಾಂಧೀಜಿಯವರ ಬೆನ್ನು ಹತ್ತಿ ಹೇಗಾದರೂ ಆಗಲಿ, ಸ್ವರಾಜ್ಯ ಸಂಪಾದಿಸಬೇಕೆಂದೇ ಕೆಲವರು ಯೋಚಿಸಿದ್ದರು. ಗಾಂಧೀಜಿಯವರಾದರೋ ಧಾರ್ಮಿಕ ದಿವ್ಯ ವಿಭೂತಿಗಳು. ಅವರ ಖಾದಿಯ ಪವಿತ್ರ ವ್ರತವಾಗಲಿ ಅಥವಾ ಅಸ್ಪೃಶ್ಯತಾ ನಿವಾರಣೆಯ ಪುಣ್ಯ ಕಾರ್ಯವಾಗಲಿ ಇಂತಹ ರಾಜಕಾರಣ ಪಟುಗಳಿಗೆ ಹೇಗೆ ತಾನೆ ಮಾನ್ಯವಾಗುವುದು?

ಯಾರು ಹೇಗೇ ಹೇಳಲಿ, ಗಾಂಧೀಜಿಯವರ ಅದ್ಭುತ ಕಾರ್ಯಗಳು ಲೋಕ ಕಲ್ಯಾಣಪ್ರದವಾದವುಗಳು. ಅವರ ಜೀವಿತವು ಜಗದೋದ್ಧಾರವು. ಆದುದರಿಂದ ಪರಮಾತ್ಮನು ಗಾಂಧೀಜಿಯವರಿಗೆ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಲೆಂದು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಖಾದಿ ಪ್ರಸಾರ ಮತ್ತು ಅಸ್ಪೃಶ್ಯತಾನಿವಾರಣೆಗಳೆಂಬ ಗಾಂಧೀಜಿಯವರ ಎರಡು ಶ್ವಾಸಕೋಶಗಳಂತಿದ್ದ ದಿವ್ಯ ಕಾರ್ಯಗಳನ್ನೇ ಈ ೬೯ ನೆಯ ವರ್ಷವರ್ಧಂತಿಯ ದಿವಸ ಸಕಲರೂ ಆಚರಿಸುವಂತಹ ಬುದ್ಧಿ ಸಾಹಸಗಳುಂಟಾಗಲೆಂದೂ ಹಾರೈಸುತ್ತೇವೆ.

## ವೀರಶೈವ ಮಹಾಸಭೆ ಇದಕ್ಕೇ ಬೇಕು.

ವೀರಶೈವ ಮಹಾಸಭೆಯು ಜಾತಿವಿಶಿಷ್ಟವಾದ ಸಭೆ. ಆದುದರಿಂದ ಇದು ವೀರಶೈವ ಸಮಾಜಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಬೇಕು. ಅಂತಹ ಕಾರ್ಯಗಳನ್ನು ಅನ್ಯಸಮಾಜದವರೇಕೆ ಮಾಡುವರು? ನಾವೇ ನಮ್ಮ ಸಮಾಜ ಕಾರ್ಯಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಈ ಪ್ರಕಾರ ಸಭೆ ಮತ್ತು ಸಂಘಗಳಿಂದಲೇ ಮಾಡಿಕೊಳ್ಳುವುದು ಯುಕ್ತವಾಗಿಲ್ಲವೆ? ವೀರಶೈವರು ವೀರಶೈವ ಸಮಾಜಕ್ಕಾಗಿಯೇ ಮಾಡತಕ್ಕ ಕಾರ್ಯಗಳಿವೆಯೇ? ಇಲ್ಲವೆ? ಅವುಗಳನ್ನು ಮಾಡದಿದ್ದರೆ ವೀರಶೈವ ಸಮಾಜಕ್ಕೆ ನಷ್ಟಕಷ್ಟಗಳು ಸಂಭವಿಸುತ್ತವೆಯೇ? ಇಲ್ಲವೆ? ಎಂಬ ಸಂಗತಿಗಳನ್ನು ಸ್ವಲ್ಪ ಯೋಚಿಸೋಣ.

### ಪ್ರಾಥಮಿಕ ಶಿಕ್ಷಣ ಪ್ರಸಾರ.

ಪ್ರತಿಯೊಂದು ಸಮಾಜದ ಉನ್ನತಿಗೂ ಶಿಕ್ಷಣವು ಈಗ ಅತ್ಯಾವಶ್ಯಕವಾಗಿಯೇ ಪರಿಣಮಿಸಿದೆಯೆಂಬುದನ್ನು ವಿವರಿಸಿ ಹೇಳಬೇಕಾದುದಿಲ್ಲ. ಇದು ಸರ್ವ ಮಾನ್ಯವಾದ ಸಿದ್ಧಾಂತವಾಗಿದೆ.

ಎಲ್ಲ ಶಿಕ್ಷಣಗಳಲ್ಲಿ ಪ್ರಾಥಮಿಕ ಶಿಕ್ಷಣವೇ ಮೊದಲನೆಯದು. ಈ ಪ್ರಾಥಮಿಕ ಶಿಕ್ಷಣವು ಇಂಗ್ಲಿಷ್ ಸರಕಾರದವರಿಂದ ಕ್ರಿ. ಶ. ೧೮೪೫ ರಲ್ಲಿ ಪ್ರಾರಂಭವಾಗಿ ೧೯೩೧ ರ ವರೆಗೆ ಪ್ರಸಾರವಾದುದನ್ನು ನೋಡಿದರೆ ೧೦೦ ಕ್ಕೆ ೮ ಜನರು ಮಾತ್ರ ಅಕ್ಷರಜ್ಞರಾಗಿದ್ದಾರೆ. ಈ ಪ್ರಮಾಣದಲ್ಲಿ ಎಲ್ಲ ಸಮಾಜಗಳ ಅಕ್ಷರಜ್ಞರ ಸಂಖ್ಯೆಯೂ ಕೂಡಿದೆ. ಆದಕಾರಣ ಕೇವಲ ವೀರಶೈವರ ಪ್ರಮಾಣವನ್ನೇ ನೋಡಿದರೆ ೧೦೦ ಜನರಲ್ಲಿ ೮ ಜನರು ಕೂಡಾ ಅಕ್ಷರಜ್ಞರಿಲ್ಲ.

ವೀರಶೈವರೆ ಬಹುಸಂಖ್ಯೆಯಾವರೋ ಹಳ್ಳಿಗಳಲ್ಲಿಯೇ ಇದೆ. ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣವು ಬಹು ಕಡಿಮೆ, ಎಂದ ಮೇಲೆ ಹಳ್ಳಿಗಳಲ್ಲಿರುವ ನಮ್ಮ ಸಮಾಜದವರ ಸಾಕ್ಷರತೆಯ ಪ್ರಮಾಣವು ನೂರಕ್ಕೆ ೨-೩ ರ ಗಿಂತ ಹೆಚ್ಚಿಗೆ ಇರುವುದು ಶಕ್ಯವಿಲ್ಲ. ಯಾವ ಸಮಾಜದ ಬಹು ಸಂಖ್ಯಾಕರಲ್ಲಿ ನೂರಕ್ಕೆ ೯೭-೯೮ ಜನರು ನಿರಕ್ಷರಕುಕ್ಷಿಗಳೋ ಆ ಸಮಾಜವು ಸಕಲ ಸಂಗತಿಗಳಲ್ಲಿಯೂ ಉನ್ನತಿಯನ್ನು ಹೊಂದುವುದು ಹೇಗೆ? ಈ ವಿಚಾರ ಕ್ರಾಂತಿಯ ಯುಗದಲ್ಲಿ ಅಂತಹ ನಿರಕ್ಷರಿಗಳು ತಮ್ಮ ಸುಖ ಸೌಲಭ್ಯಗಳನ್ನು ಕಾಲಮಾನಕ್ಕೆ ತಕ್ಕಂತೆ ಹೊಂದುವ ಬಗೆ ಹೇಗೆ? ಈ ಸ್ಪರ್ಧೆಯ ಕಾಲದಲ್ಲಿ ಅನೇಕ ಸಮಾಜಗಳು ಮತ್ತು ಸ್ವಾರ್ಥಿಗಳ ಸುಖಪ್ರಾಪ್ತಿಗೆ ಈ ನಮ್ಮ ಅಜ್ಞ ಸಮಾಜ ಬಾಂಧವರು ಆಹುತಿಯಾಗಿ ಪರಿಣಮಿಸುವುದಿಲ್ಲವೆ?

ಈ ಶಿಕ್ಷಣ ಪ್ರಸಾರದ ಕಾರ್ಯ ಸರಕಾರದಿಂದ ನಡೆಯತಕ್ಕ ದೆಂದು ಕೆಲವರು ಹೇಳಬಹುದು. ಅದು ನಿಜವಾಗಿದ್ದರೂ ಕೊನೆ ಗಾಣುವುದಿಲ್ಲವೆಂಬುದಕ್ಕೆ ಈ ವರೆಗಿನ ಸಂಗತಿಯೇ ದೃಷ್ಟಾಂತವಾ ಗಿದೆ. ಕಳೆದ ೮೦-೯೦ ವರುಷಗಳ ಸರಕಾದ ಪ್ರಯತ್ನವು ನಮ್ಮ ಹಳ್ಳಿಯ ಬಾಂಧವರಲ್ಲಿ ೧೦೦ ಕ್ಕೆ ೨-೩ ಜನರನ್ನು ಮಾತ್ರ ಅಕ್ಷ ರಜ್ಞರನ್ನು ಮಾಡಿದೆ! ಎಂದ ಮೇಲೆ ಈ ಕಾರ್ಯ ಕೊನೆಗಾಣಲು ಅನೇಕ ಶತಮಾನಗಳು ಬೇಕೆಂದು ತೋರುವುದಿಲ್ಲವೆ?

ಅನ್ಯ ಸಮಾಜದವರು ಮಾಡುವರೆಂದು ಯೋಚಿಸುವುದು ಕೂಡಾ ವಿಹಿತವಲ್ಲ. ಕರ್ನಾಟಕದ ಹಳ್ಳಿಗಳಲ್ಲಿ ವೀರಶೈವರ ಸಂ ಖ್ಯೆಯೇ ಹೆಚ್ಚು. ಬೇರೆ ಸಮಾಜಗಳ ಬಹು ಜನರು ಇವರಿಗಿಂತ ಲೂ ಶಿಕ್ಷಣದಲ್ಲಿ ಹಿಂದುಳಿದವರೇ ಇದ್ದಾರೆ. ಎಂದ ಮೇಲೆ ಅವ ರಲ್ಲಿ ಶಕ್ತಿ ಸಾಹಸಗಳುಂಟಾಗುವುದೆಂತು? ಆದಕಾರಣ ಹಳ್ಳಿಗಳ ಲ್ಲಿಯ ಪ್ರಾಥಮಿಕ ಶಿಕ್ಷಣ ಪ್ರಸಾರದ ಕಾರ್ಯವನ್ನು ವೀರಶೈವರೇ ಕೈಕೊಳ್ಳಬೇಕು. ಇದು ಇವರಿಗೇನೇ ಶಕ್ಯವೂ ಅನುಕೂಲವೂ ಆಗಿದೆ.

ಮುಲಕಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ಮ್ಯಾಟ್ರಿಕ್ ಪರೀಕ್ಷೆಯ ವರೆಗೆ ಶಿಕ್ಷಣ ಹೊಂದಿದ ನೂರುಗಟ್ಟಲೆ ವೀರಶೈವ ತರುಣರು ಕೆಲಸವಿಲ್ಲದೆ ತಿರುಗುತ್ತಿದ್ದಾರೆ. ಇವರು ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣ ಪ್ರಸಾರಗೊಳಿಸುವ ಕಾರ್ಯ ಕೈಕೊಳ್ಳುವಂತೆ ವೀರಶೈವ ಮಹಾಸಭೆಯು ಜಿಲ್ಲಾ ಮಂಡಲಗಳು ಪ್ರಯತ್ನಿಸಬೇಕು. ಈ ಸಂಬಂಧವಾದ ಒಂದು ಕಾರ್ಯಕ್ರಮವನ್ನು ಮಹಾಸಭೆಯು ಅನೇಕ ಅನುಭವಿಗಳ ಸಲಹೆಯ ಪ್ರಕಾರ ಗೊತ್ತುಪಡಿಸಬೇಕು.

ಕರ್ನಾಟಕದ ಹಳ್ಳಿಗಳಲ್ಲಿಯ ಪ್ರಾಥಮಿಕ ಶಿಕ್ಷಣ ಪ್ರಸಾರ ಕಾರ್ಯಕ್ಕೆ ವೀರಶೈವ ಮಹಾಸಭೆಯು ಬೇಕೇಬೇಕು. ಈ ಕಾರ್ಯ ವನ್ನು ಮಹಾಸಭೆಯು ತನ್ನ ವಿಧಾಯಕ ಕಾರ್ಯಗಳಲ್ಲಿ ಒಂದು ಮುಖ್ಯವಾದುದನ್ನಾಗಿಟ್ಟುಕೊಳ್ಳಬೇಕು. ಇದರಿಂದ ಹಳ್ಳಿಯ ಬೇರೆ ಸಮಾಜದವರಲ್ಲಿಯೂ ವಿದ್ಯಾ ಪ್ರಸಾರಗೊಳಿಸಿದ ಮಹತ್ಕಾರ್ಯ ಮಾಡಿದಂತಾಗುವುದು.

### ಶಿವಾನುಭವ ಶಿಕ್ಷಣಾಲಯ.

ಧಾರ್ಮಿಕ ಶಿಕ್ಷಣದ ಅವಶ್ಯಕತೆಯು ವೀರಶೈವ ಸಮಾಜ ಕ್ಕಿರುವಷ್ಟು ಜಗತ್ತಿನ ಇನ್ನಾವ ಸಮಾಜಕ್ಕೂ ಇಲ್ಲವೆಂದು ಹೇಳ ದರೆ ಅತ್ಯುಕ್ತಿಯಾಗಲಾರದು. ವೀರಶೈವರಿಗೆ ಧಾರ್ಮಿಕ ಗುರುಗ ಳು ಬೇಕಾಗಿರುವಷ್ಟು ಇನ್ನಾರಿಗೂ ಬೇಡ. ಅದುದರಿಂದಲೇ ವೀರ ಶೈವರ ನಾಲ್ಕಾರು ಮನೆಗಳಿರುವ ಸ್ಥಳದಲ್ಲಿಯೂ ಗುರು ಜಂಗ ಮರ ಮಠಗಳು ಇದ್ದೇ ಇವೆ. ಈ ಮಠಗಳು ನೂರುಗಟ್ಟಲೆಯಲ್ಲ; ಸಾವಿರಗಟ್ಟಲೆಯಾಗಿವೆ. ಇವು ಸಮಾಜದ ಮೇಲೆ ಹೆಚ್ಚು ಕಡಿಮೆ ಯಾಗಿ ತಮ್ಮ ಅಧಿಕಾರವನ್ನು ನಡೆಸುತ್ತಲೇ ಇವೆ. ಈ ಮಠಾ ಧಿಪತಿಗಳು ಸುಶಿಕ್ಷಿತರಾಗಿ ತಮ್ಮ ಕರ್ತವ್ಯವನ್ನರಿತುಕೊಂಡು ಸಮಾ ಜ ಸೇವೆಯಲ್ಲಿ ನಿರತರಾದರೆ ಅವರಿಂದ ಸಮಾಜಕ್ಕೆ ವಿಶೇಷ ಹಿತವಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗಿರದೆ ಅಶಿಕ್ಷಿತರಾಗಿ ತಪ್ಪು ರೀತಿಯಿಂದ ನಡೆಯುವವರೇ ಅತ್ಯಧಿಕವಾಗಿರುವುದರಿಂದ ಸಮಾಜದ ನಾನಾ ದುರವಸ್ಥೆಗಳಿಗೆ ಅವರೇ ಕಾರಣರಾಗಿದ್ದಾರೆಂ ಬುದು ಕೂಡಾ ನಿರ್ವಿವಾದವಾದ ಸಂಗತಿಯು.

ವೀರಶೈವ ಮತತತ್ವದಲ್ಲಿಯೇ ಈ ಗುರು ಜಂಗಮರ ಅವಶ್ಯ ಕತೆಯು ಪ್ರಾಮುಖ್ಯವಾಗಿರುವುದರಿಂದ ಮಠಗಳನ್ನಾಗಲಿ ಗುರು ಜಂಗಮರನ್ನಾಗಲಿ ತ್ಯಾಜ್ಯಮಾಡುವುದು ಶಕ್ಯವಿಲ್ಲ. ಎಂದ ಮೇಲೆ ಮಠಗಳಿಗೆ ಯೋಗ್ಯರೇ ಅಧಿಕಾರಿಗಳಾಗುವಂತೆ ಪ್ರಯತ್ನಿಸುವುದೇ ವಿಹಿತವಲ್ಲವೆ? ಈ ಕಾರ್ಯವನ್ನು ಬೇರೆಯವರು ಮಾಡುವುದು ಶಕ್ಯನೆ? ಅಥವಾ ವೀರಶೈವ ಸಮಾಜಕ್ಕೆ ಮುಖ್ಯವಾಗಿರುವ ಈ ಗುರು ಜಂಗಮರ ಧಾರ್ಮಿಕ ಶಿಕ್ಷಣದ ವಿಷಯವನ್ನು ಉಪೇಕ್ಷಿಸುವುದು ವಿಹಿತವೆ? ಹಾಗೆ ಉಪೇಕ್ಷಿಸಿದರೆ ಅಶಿಕ್ಷಿತರಾದ ಮಠಾ ಧಿಕಾರಿಗಳಿಂದ ಸಮಾಜಕ್ಕೆ ಅಪಾರವಾದ ಅನರ್ಥವುಂಟಾಗುವುದಿ ಲ್ಲವೆ? ಅಜ್ಞ ಬಾಂದವರು ನಾನಾ ಕಷ್ಟನಷ್ಟಗಳಿಗೆ ಗುರಿಯಾಗ ಲು ಅಂಥ ಮಠಾಧಿಕಾರಿಗಳು ಕಾರಣರಾಗುವುದಿಲ್ಲವೆ?

ಆದಕಾರಣ ಜಿಲ್ಲೆಗೊಂದು ಶಿವಾನುಭವ ಶಿಕ್ಷಣಾಲಯವನ್ನು ಸ್ಥಾಪಿಸಿ ಅಲ್ಲಿ ಗುರು ಜಂಗಮ ಮಠಗಳಿಗಾಗುವ ವಟುಗಳಿಗೆ ಶಿವಾ ನುಭವ ಶಿಕ್ಷಣವನ್ನು ಕೊಡಬೇಕು. ಮಹಾಸಭೆಯವರು ಅಲ್ಲಿಯ ಶಿಕ್ಷಣ ಕ್ರಮವನ್ನು ಗೊತ್ತುಪಡಿಸಬೇಕು. ಆ ಶಿವಾನುಭವ ಶಿಕ್ಷ ಣಾಲಯದಲ್ಲಿ ಶಿಕ್ಷಣ ಹೊಂದಿ ತೇರ್ಗಡೆಯಾಗಿ ಮಹಾಸಭೆಯಿಂ ದ ಪದವಿಯನ್ನು ಹೊಂದಿದವರೇ ಗುರು ಜಂಗಮ ಮಠಗಳಿಗೆ ಅಧಿ ಕಾರಿಗಳಾಗುವಂತೆ ಮಾಡಬೇಕು. ಈ ಧಾರ್ಮಿಕ ಶಿಕ್ಷಣ ಪ್ರಸಾ ರಕ್ಕೂ ವೀರಶೈವ ಮಹಾಸಭೆಯೇ ಬೇಕು.

### ಸಮಾಜದ ಪ್ರಾಂತಿಕ ಸಂಘಟನೆ.

ವೀರಶೈವ ಸಮಾಜದ ವಿಚಾರದಲ್ಲಿ ಈಗಿನ ತಿಳುವಳಿಕೆಯು ಬಹು ಸಂಕುಚಿತವಾದುದಾಗಿದೆ. ಇದು ಬಹು ಘಾತಕವಾದುದು. ಒಂದು ಜಿಲ್ಲೆಗಿಂತ ಮುಂದೆ ನಮ್ಮ ದೃಷ್ಟಿಯೇ ಇಲ್ಲ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿಯ ವೀರಶೈವರ ಸ್ಥಿತಿಗತಿಗಳು ನಮ್ಮ ಕಣ್ಣು ಮುಂದೆ ಬಂದರೆ ಅದೇ ಬಹು ಹೆಚ್ಚಿನದು. ಮೈಸೂ ರು ಭಾಗಕ್ಕೆ ನಾವು ನೋಡುವುದಿಲ್ಲ. ನಮ್ಮ ಕಡೆ ಮೈಸೂರು ವೀರಶೈವರು ನೋಡುವುದಿಲ್ಲ. ನೈಜಾಮದ ವೀರಶೈವರ ಕಡೆಗಂ ತೂ ಯಾರೂ ನೋಡುವುದಿಲ್ಲ. ಮಹರಾಷ್ಟ್ರ ದೇಶದ ವೀರಶೈವ ರ ಸುದ್ದಿಯೇ ನಮಗೆ ಗೊತ್ತಿಲ್ಲ. ತೆಲುಗು ಮತ್ತು ತಮಿಳು ದೇಶ ಗಳಲ್ಲಿಯ ವೀರಶೈವರ ಸಂಬಂಧವಾಗಿ ನಾವೆಂದೂ ಮಾತನ್ನು ಕೂಡಾ ಆಡಿಲ್ಲ. ಎಂದ ಮೇಲೆ ನಮ್ಮ ಸಮಾಜದ ಅರುವು ನಮ ಗಿದೆಯೆಂದು ಹೇಳಲಿಕ್ಕಾಗುವುದೆ?

ಈ ವರೆಗೆ ಮಹಾಸಭೆಯು ೧೧ ಅಧಿವೇಶನಗಳೂ ಕರ್ನಾಟ ಕದಲ್ಲಿಯೇ ಆಗಿವೆ. ಮಹಾರಾಷ್ಟ್ರ, ತೆಲಗು, ತಮಿಳು ದೇಶಗಳ ಲ್ಲಿ ಒಂದಾದರೂ ಸಭೆಯಾಗಿದೆಯೇ? ಕರ್ನಾಟಕದ ಸರ್ವ ಭಾಗ ಗಳಲ್ಲಾದರೂ ಈ ಸಭೆ ಕೂಡಿಲ್ಲ. ನಿಜಾಮ ರಾಜ್ಯದಲ್ಲಿ ವೀರ ಶೈವರ ಸಂಖ್ಯೆ ಏಳು ಲಕ್ಷದ ವರೆಗಿದ್ದರೂ ಕಲ್ಲಬುರ್ಗಿ ಮತ್ತು ರಾ ಯಚೂರುಗಳು ಕರ್ನಾಟಕದ ಮತ್ತು ವೀರಶೈವರ ಮುಖ್ಯ ಸ್ಥಳ ಗಳಾಗಿದ್ದರೂ ಮಹಾಸಭೆಯು ಒಂದು ಸಾರೆಯಾದರೂ ಕೂಡಿಲ್ಲ. ಎಂದ ಮೇಲೆ ಸಮಾಜದ ವಿಚಾರದಲ್ಲಿ ನಮ್ಮ ದೃಷ್ಟಿಯು ಎಷ್ಟು ಸಂಕುಚಿತವಾದುದಾಗಿದೆಯೆಂಬುದು ಸ್ಪಷ್ಟವಾಗುವುದಿಲ್ಲವೆ? ನಾವು ನಮ್ಮ ದೃಷ್ಟಿಯನ್ನು ವಿಶಾಲಗೊಳಿಸಿ ಎಲ್ಲ ಭಾಗಗಳ ವೀರಶೈವ ರಲ್ಲಿ ಜಾಗೃತಿಯನ್ನುಂಟು ಮಾಡಲು ಈ ಜಾತಿವಿಶಿಷ್ಟವಾದ ಸಭೆ ಯೇ ಬೇಕಲ್ಲವೆ? ಸಮಾಜದಲ್ಲಿದ್ದ ಈಗಿನ ಪ್ರಾಂತಿಕ ಭಿನ್ನಭಾ ವಗಳನ್ನು ತೆಗೆದುಹಾಕಿ ಸಮಾಜ ಸಂಘಟನೆಯನ್ನುಂಟು ಮಾಡಲು ಮಹಾಸಭೆಯು ಅಗತ್ಯವಾಗಿಲ್ಲವೆ?

### ಧರ್ಮರಕ್ಷಣೆ.

ಮುಸಲ್ಮಾನ್, ಕ್ರೈಸ್ತ ಮತ್ತು ಆರ್ಯ ಸಮಾಜಗಳು ಪರ ಧರ್ಮದವರನ್ನು ಸ್ವಧರ್ಮದಲ್ಲಿ ಸೇರಿಸಿಕೊಳ್ಳಲು ಇತ್ತೀಚೆಗೆ ವಿಶೇ ಷ ಪ್ರಯತ್ನಿಸುತ್ತಲಿವೆ. ವೀರಶೈವ ಸಮಾಜದಲ್ಲಿ ಅಜ್ಞರ ಸಂಖ್ಯೆ ಯೇ ಅತ್ಯಧಿಕ. ಆದಕಾರಣ ಬೇರೆ ಧರ್ಮದವರ ಬಲೆಯಲ್ಲಿ ವೀರ ಶೈವರು ಬೀಳುವುದು ದಿನೇದಿನೇ ಹೆಚ್ಚುತ್ತಿದೆ. ಈ ದುರವಸ್ಥೆಯ ನ್ನು ದೂರಮಾಡಲು ಮಹಾಸಭೆಯಂತಹ ಜಾತಿವಿಶಿಷ್ಟ ಸಂಸ್ಥೆ ಯೇ ಬೇಕು.

ವೀರಶೈವರ ಸಂಖ್ಯೆ ಕಡಿಮೆಯಾದರೆ ನಮಗೇನು? ಲಿಂಗ ಹೋಗಿ ಜನಿವಾರ ಬಂದರೂ ಬರಲಿ, ಅಥವಾ ಅವರು ಮಸೀದಿಗೆ ಹೋದರೂ ಹೋಗಲಿ, ಇಲ್ಲವೆ ಚರ್ಚಿನ ಪಾಲಾದರೂ ಆಗಲಿ, ನಮಗೇನು? ಎಂದು ಯಾರು ಹೇಳುತ್ತಾರೆಯೋ ಅವರಿಗೆ ವೀರಶೈವ ಮಹಾಸಭೆಯೇನೂ ಬೇಕಾಗಿಲ್ಲ. ಆದರೆ ಯಾರು ಲಿಂಗಾಯತ ಮತದಲ್ಲಿ ಅಭಿಮಾನಿಗಳೋ ಮತ್ತು ವೀರಶೈವ ಧರ್ಮ ರಕ್ಷಣೆಯು ಆವಶ್ಯಕವೆಂದು ತಿಳಿದಿದ್ದಾರೆಯೋ ಅವರು ಈಗಿನ ಈ ಪರಿಸ್ಥಿತಿಯಲ್ಲಿ ಧರ್ಮಾಂತರಿಗಳ ಆಕ್ರಮಣಕ್ಕೆ ವೀರಶೈವರು ಆಹುತಿಯಾಗದಂತೆ ಪ್ರಯತ್ನಿಸುವುದು ಅತ್ಯಾವಶ್ಯಕವಲ್ಲವೆ?

ಈ ಶೋಚನೀಯ ಸ್ಥಿತಿಯು ನಿವಾರಣೆಯಾಗಬೇಕಾದರೆ ಮಹಾಸಭೆಯು ಎಲ್ಲ ಭಾಗಗಳಲ್ಲಿಯೂ ಜಿಲ್ಲಾ ಮಂಡಲಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸ್ವಧರ್ಮ ರಕ್ಷಣೆಯ ಕಾರ್ಯ ಜರುಗುವಂತೆ ಮಾಡಲೇ ಬೇಕು.

ಪರಧರ್ಮದಲ್ಲಿ ಸೇರುವುದನ್ನು ತಡೆಯುವುದು, ಪರಧರ್ಮದ ಸೇರಿದವರನ್ನು ಸ್ವಧರ್ಮದಲ್ಲಿ ತೆಗೆದುಕೊಳ್ಳುವುದು, ವೀರಶೈವ ಮತಕ್ಕೆ ಬರುವವರನ್ನು ಅವರವರ ಆಚಾರ ವಿಚಾರಗಳಿಗನುಗುಣವಾಗಿ ಸೇರಿಸಿಕೊಳ್ಳುವುದು, ಬಳಕೆಯಲ್ಲಿಲ್ಲದ ಶುದ್ಧಾಚಾರ ಸಂಸ್ಕಾರಗಳನ್ನು ಬಳಕೆಯಲ್ಲಿ ತೆಗೆದುಕೊಳ್ಳುವುದು ಈ ಮುಂತಾದ ಕಾರ್ಯಗಳು ಮಹಾಸಭೆಯೆಂಬ ಜಾತಿವಿಶಿಷ್ಟವಾದ ಸಂಘದಿಂದಲೇ ಜರುಗತಕ್ಕವುಗಳಾಗಿವೆ.

ಈ ಕಾರ್ಯವು ಜಾಗ್ರತಿ ಸುವ್ಯವಸ್ಥೆಯಿಂದಾಗದಿದ್ದರೆ ವೀರಶೈವರಲ್ಲಿ ದಿನೇ ದಿನೇ ಪರಧರ್ಮಿಯರ ಕುತ್ತಾಗಿ ಹೋಗುವವರು ಹೆಚ್ಚುವುದರಲ್ಲಿ ಸಂದೇಹವೇ ಇಲ್ಲ. ಮಹಾಸಭೆಯಂತಹ ಜಾತಿವಿಶಿಷ್ಟ ಸಂಸ್ಥೆಯ ವಿನಾ ಈ ಧರ್ಮ ರಕ್ಷಣೆಯ ಕಾರ್ಯ ಮಾಡಲು ಇನ್ನಾರಿಗೆ ಸಾಧ್ಯ?

ಆದಕಾರಣ ಶಿಕ್ಷಣ ಪ್ರಸಾರ, ಸಮಾಜ ಸಂಘಟನೆ, ಮತ್ತು ಧರ್ಮರಕ್ಷಣೆಯ ಕಾರ್ಯಗಳಿಗಾಗಿ ವೀರಶೈವ ಮಹಾಸಭೆಯೆಂಬ ಜಾತಿವಿಶಿಷ್ಟ ಸಭೆಯು ಬೇಕೇ ಬೇಕು. ಇದರ ವಿನಾ ಈ ಕಾರ್ಯಗಳಾಗುವುದಿಲ್ಲ, ಈ ಕಾರ್ಯಗಳು ತೃಪ್ತಿಕರವಾಗಿ ಜರುಗದ್ದರೆ ವೀರಶೈವ ಸಮಾಜವು ಸಕಲ ಸಂಗತಿಗಳಲ್ಲಿಯೂ ದಿನೇ ದಿನೇ ಹೀನ ದೀನ ಸ್ಥಿತಿಗಳಿಗೀಡಾಗಿ ಹೋಗುವುದರಲ್ಲಿ ಸಂದೇಹವೇ ಇಲ್ಲ.

ಆರ್ಯಸಮಾಜ, ಕ್ರೈಸ್ತ ಮತ್ತು ಮುಸಲ್ಮಾನ್ ಧರ್ಮದವರ ಸಂಘಟಿತವಾದ ಕಾರ್ಯಗಳು ನನ್ನ ಮುಂದಿವೆ. ಅವುಗಳ ಪ್ರಾಬಲ್ಯವು ದಿನೇ ದಿನೇ ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಿರುವಾಗ ಮಹಾಸಭೆಯೆಂಬ ಜಾತಿವಿಶಿಷ್ಟ ಸಂಘಟನೆಯ ಶಕ್ತಿ ಸಾಹಸಗಳನ್ನು ದೇಶ ಕಾರ್ಯಗಳ ಕಡೆಗೆ ತಿರುಗಿಸಿದರೆ ಅನಾವಶ್ಯಕವೆಂಬ ದೂರನ್ನು ಹೊತ್ತುಕೊಳ್ಳುವುದಾಗಲಿ ಅಥವಾ ಸಮಾಜಕ್ಕೆ ಅತ್ಯಾವಶ್ಯಕವಾಗಿರುವ ಮೇಲಣ ಕಾರ್ಯಗಳನ್ನು ಮಾಡಲು ಮಹಾಸಭೆಯ ಶಕ್ತಿ ಸಾಹಸಗಳನ್ನು ಉಪಯೋಗಿಸದೆ ಇದರಿಂದ ಪ್ರಯೋಜನವಿಲ್ಲವೆಂದು ಹೇಳಿಸಿಕೊಳ್ಳುವುದಾಗಲಿ ಯುಕ್ತವಲ್ಲ.

ಮೇಲೆ ವಿವರಿಸಿದ ಪ್ರತಿಯೊಂದು ವಿಷಯವೂ ಅತ್ಯಂತ ಮಹತ್ವವಾದುದಾಗಿರುವುದರಿಂದ ಪ್ರತ್ಯೇಕವಾಗಿಯೇ ಆಯಾಯ ವಿಷಯಗಳನ್ನು ಕುರಿತು ಇನ್ನು ಮುಂದೆ ವಿವರವಾಗಿಯೇ ಚರ್ಚಿಸುವೆವು.

# ಶ್ರೀ ಬಸವೇಶ್ವರ ಸ್ಪೇಶಲ್ ಟ್ರೇನ್.

## ಬಾಳೇಹಳ್ಳಿ ಶ್ರೀಗಳೊಡನೆ ಅಸಹಕಾರ!

ಮೈಸೂರಿನ ಹಲಕೆಲವರ ಆಮಂತ್ರಣದ ಮೇರೆಗೆ ಶ್ರೀ ಬಾಳೇಹಳ್ಳಿ ಸ್ವಾಮಿಗಳು ಅಲ್ಲಿಗೆ ಕಳೆದ ೨೩ ನೆಯ ತಾರೀಖಿನ ದಿವಸ ದಯಮಾಡಿಸಿದರು. ಮೈಸೂರಿನಲ್ಲಿ ಈ ಮೊದಲು ೧೬ ನೆಯ ತಾರೀಖಿನ ದಿವಸ ನೆರೆದ ಜಿಲ್ಲಾ ವೀರಶೈವ ಪರಿಷತ್ತಿನಲ್ಲಿ ತೀರ್ಮಾನವಾದಂತೆ ಬಾಳೇಹಳ್ಳಿ ಸ್ವಾಮಿಗಳಿಂದ ಯಾವುದಕ್ಕೂ ಉತ್ತರ ಬಾರದಿದ್ದುದರಿಂದ ಮೈಸೂರಿನ ಸಾವಿರಾರು ಜನ ವೀರಶೈವ ಸ್ತ್ರೀ ಪುರುಷರು ತಮ್ಮ ಅಸಹಕಾರವನ್ನು ವ್ಯಕ್ತ ಗೊಳಿಸುವದಕ್ಕಾಗಿ "ಶ್ರೀ ಬಸವೇಶ್ವರ ಸ್ಪೇಶಲ್ ಟ್ರೇನಿನಿಂದ" ಮಲ್ಲನಮೂಲೆ ಮಠಕ್ಕೆ ಹೊರಟು ಹೋಗಿದ್ದರು. ಈ ಮೊದಲು ಸ್ವಾಮಿಗಳು ಬೆಂಗಳೂರಿಗೆ ದಯಮಾಡಿಸಿದ್ದಾಗಲೂ ಅಲ್ಲಿಯ ಸಾವಿರಾರು ಜನ ವೀರಶೈವ ಪ್ರಮುಖರು ಸ್ವಕಾರ್ಯ ತ್ಯಾಗ ಮಾಡಿ ಸಿದ್ಧಗಂಗಾಕ್ಷೇತ್ರಕ್ಕೆ ಹೊರಟು ಹೋದುದು ಸರ್ವರಿಗೂ ಗೊತ್ತಿರಬಹುದು. ಈ ಪ್ರಕಾರ ಸ್ವಾಮಿಗಳು ಹೋದಹೋದಲ್ಲೆಲ್ಲಾ ಅಲ್ಲಿಯ ಜನಗಳೇ ಊರ ಬಿಟ್ಟು ಹೋಗುವುದನ್ನು ನೋಡಿದರೆ ಸ್ವಾಮಿಗಳ ವರ್ತನೆಯಲ್ಲಿ ವೈತ್ಯಾಸವಿದೆಯೆಂದು ಸರ್ವರಿಗೂ ಸ್ಪಷ್ಟ ತಿಳಿಯುವಂತಿದೆ. ಆದರೂ ಅವರು ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸದಿದ್ದುದು ಅತ್ಯಂತ ದುಃಖದ ಸಂಗತಿಯು.

ತಾ. ೨೫-೯ ನೆಯ ದಿವಸ ಮೈಸೂರಿನ ಚಾಮರಾಜಪುರಂ ರೇಲ್ವೆ ಸ್ಟೇಶನ್ನಿನಲ್ಲಿ ಬೆಳಗಿನ ೮ ಗಂಟೆಯೊಳಗಾಗಿಯೇ ಅನೇಕ ಜನ ಸ್ತ್ರೀ ಪುರುಷರು ಕಿಕ್ಕಿರಿದು ನೆರೆದಿದ್ದರು. ಶ್ರೀಮಾನ್ ಬಿ ಎಸ್. ಪುಟ್ಟಸ್ವಾಮಿ ಮತ್ತು ಆರ್, ಮಲ್ಲಿಕಾರ್ಜುನಪ್ಪನವರೇ ಮೊದಲಾದ ಮುಂದಾಳುಗಳು ಶಾಂತರೀತಿಯಿಂದಲೂ, ವಿಚಕ್ಷಣೆಯಿಂದಲೂ ಅವರಿಲ್ಲರನ್ನೂ ನೋಡಿಕೊಳ್ಳುತ್ತಿದ್ದರು. ಶ್ರೀ ಬಸವೇಶ್ವರ ಸ್ಪೇಶಲ್ ಟ್ರೇನನ್ನು ಬಹಳ ಅಂದವಾಗಿ ಅಲಂಕರಿಸಿದ್ದರು. ಎಲ್ಲರೂ ಸೇರಿದ ಮೇಲೆ ಸ್ಟೇಶನ್ನಿನಲ್ಲಿ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಸುಮಾರು ೯ ಗಂಟೆಯ ಸಮಯಕ್ಕೆ ಎಲ್ಲರೂ ಬಾಳೇಹಳ್ಳಿ ಸ್ವಾಮಿಗಳ ಆಗಮನವನ್ನು ನಿಷೇಧಿಸುವದಕ್ಕಾಗಿ ಶ್ರೀ ಬಸವೇಶ್ವರ ಸ್ಪೇಶಲ್ ಟ್ರೇನಿನಲ್ಲಿ ಹೊರಟು ಮಲ್ಲನಮೂಲೆ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದರು.

### ಮುದ್ದೇಬಿಹಾಳ.

ಇಲ್ಲಿಯ ಹೊಸಮಠದಲ್ಲಿ ಶ್ರೀ ಮನ್ನಿರಂಜನ ಇಲಕಲ್ಲ ಮಹಾಂತ ಶಿವಯೋಗಿಗಳವರ ಪುರಾಣ ಶ್ರವಣವು ಶಾ| ಶು| ೩ ಮಿತಿಗೆ ಪ್ರಾರಂಭವಾಗಿ ಭಾದ್ರಪದ ವ| ೨ವರೆಗೆ ಅಂದರೆ ೧೫ ದಿವಸಗಳವರೆಗೆ ಹೊಸಮಠಾಧ್ಯಕ್ಷರಾದ ಶ್ರೀ ಮನ್ನಿರಂಜನ ಭಕ್ತಪ್ರೇಮವರ ಸನ್ನಿಧಿಯಲ್ಲಿ ಸಕಲರಿಗೂ ಮನನವಾಗುವಂತೆ ಸಾಗಿ ಭಾ| ವ| ೩ ದಿವಸ ಪುರಾಣ ಸಮಾಪ್ತಿ ಕಾರ್ಯವು ಸಂಭ್ರಮದಿಂದ ಜರುಗಿ ಎಲ್ಲರಿಗೂ ಆನಂದವನ್ನುಂಟು ಮಾಡಿತು.

—ಕಲಕತ್ತೆಯಲ್ಲಿ ಮಿ. ಡಿ. ಪಿ. ಪಾಲ ಎಂಬ ನ್ಯಾಯಾಧೀಶರು ನ್ಯಾಯಸ್ಥಾನದಲ್ಲಿಯೇ ಮೂರ್ಛಿತರಾದರು. ವೈದ್ಯರು ಅವರನ್ನು ಉಪಚರಿಸುವ ಯತ್ನ ಮಾಡುತ್ತಿರಲು ಅವರು ಕೂಡಲೇ ಮರಣಹೊಂದಿದರು.

# ವಿವಿಧ ವರ್ತಮಾನ.

### ಕೃಷ್ಣಾ ನದಿಯಲ್ಲಿ ಅದ್ಭುತ ಮರಣ.

ಬೆಳಗಾವಿ ಜಿಲ್ಲಾ ಚಿಕ್ಕೋಡಿ ತಾಲೂಕ ಪೈಕಿ ಕೃಷ್ಣಾತೀರದಲ್ಲಿರುವ ಮಾಂಜರಿ ಮತ್ತು ಅಂಕಲಿ ಗ್ರಾಮಗಳ ನಡುವೆ ನಾವೆಯು ಆಡುತ್ತಿರುತ್ತದೆ. ಅಲ್ಲಿ ನದಿಯ ವಾತ್ರವು ಒಳ್ಳೇ ಅಗಲವಾಗಿದ್ದು ಸದ್ಯಕ್ಕೆ ನದಿಯು ಎರಡೂ ದಂಡೆ ಸೂಸಿ ಹೋಗುತ್ತಿರುತ್ತದೆ. ಕಳೆದ ೨೧ ನೆಯ ತಾರೀಖಿನ ದಿವಸ ಅಂಕಲಿಯ ಸಂತೆಯಿದ್ದುದರಿಂದ ಅಂಬಿಗರು ಬೇಡಬೇಡವೆಂದರೂ ೩೦೦—೩೫೦ ಜನರು ನಾವಿನಲ್ಲಿ ಕುಳಿತರು. ನಾವು ಮಧ್ಯನದಿಗೆ ಬಂದ ಕೂಡಲೆ ಒಳಗಿನ ಭಾರದಿಂದ ಮತ್ತು ಗಾಳಿಯ ಹೊಡೆತದಿಂದ ಹೊಯ್ದಾಡ ಹತ್ತಿತು. ಮತ್ತು ಅಂಬಿಗರಿಗೆ ಅಸರ್ಕೊಳ್ಳದೆ ಸೆಳವಿಗೆ ಸಿಕ್ಕು ಸೌಂದತ್ತಿ ಎಂಬ ಗ್ರಾಮದ ಹತ್ತಿರಿರುವ ಸೇತುವೆಗೆ ಅಪ್ಪಳಿಸಿತು. ಒಳಗೆ ನೀರು ಬರಹತ್ತಿದ್ದುದರಿಂದ ಜನರೆಲ್ಲ ಹೌಹಾರಿ ನದಿಯಲ್ಲಿ ಹಾರಿಕೊಳ್ಳಹತ್ತಿದರು. ೧೫೦ ರ ವರೆಗೆ ಜನರು ನೀರಿನಲ್ಲಿ ಮುಳುಗಿದರು. ೧೦೦ ಜನರನ್ನು ಒಳ್ಳೇ ಸಾಹಸದಿಂದ ರಕ್ಷಿಸಲಾಯಿತು. ಇಲ್ಲಿಯ ವರೆಗೆ ೬೩ ಹೆಣಗಳು ದೊರೆತಿವೆ. ಉಳಿದವುಗಳ ಶೋಧವಾಗಿಲ್ಲ. ದಂಡೆಯ ಮೇಲೆ ಮೃತರ ಬಂಧು ಬಾಂಧವರ ಆಕ್ರೋಶವು ಆಕಾಶವನ್ನು ಸಹ ಹರಿಯುವಂತಿತ್ತು.

ಬೆಳಗಾವಿಯ ಕಲೆಕ್ಟರರೂ ಅಸಿಸ್ಟಂಟ್ ಕಲೆಕ್ಟರರೂ ಆ ಭಯಂಕರ ಸ್ಥಾನವನ್ನು ನೋಡಿಕೊಂಡು ಹೋದರು. ಮುಳುಗಿ ಸವರನ್ನು ಉಳಿಸಲಿಕ್ಕೆ ಕೂಡಚಿಯಿಂದ ಉಗಿಹಡಗವನ್ನೂ ತರಿಸಲಾಗಿದ್ದಿತು.

### ಜಪಾನದಲ್ಲಿ ಪ್ರಳಯ ಸಮಾರುತ.

ಕಳೆದ ೩೦ ವರ್ಷಗಳಲ್ಲಿ ಎಂದೂ ಕಾಣದಂಥ ಪ್ರಚಂಡ ಬಿರುಗಾಳಿಯು ಮಧ್ಯಜಪಾನದಲ್ಲೆದ್ದ ಅಸಂಖ್ಯ ಹಾನಿಯನ್ನುಂಟು ಮಾಡಿದೆ. ಈ ರುಂಡುಮಾರುತನ ರಭಸಕ್ಕೆ ಓಸಾಕಾ ಪಟ್ಟಣದ ಶಾಲೆಯ ಕಟ್ಟಡಗಳೆಲ್ಲ ಕಳಚಿಬಿದ್ದು ೩೦೦ ಬಾಲಕರು ಅಸುದೊರೆದರು. ಜಪಾನದ ಉಳಿದ ಕಡೆಯಲ್ಲೂ ಸಾವಿರಾರು ಬಾಲಕರ ಪ್ರಾಣಹಾನಿಯಾಗಿದೆ. ಮನೆಮಾರುಗಳೆಲ್ಲ ನೆಲಸಮವಾಗಿ ೧೬೬೧ ಜನರು ಸತ್ತರು; ೫೪೨೪ ಜನರು ಗಾಯಗೊಂಡರು; ೫೬೨ ಜನರ ಸುದ್ದಿಯೇ ಇಲ್ಲ.

ಬಿರುಗಾಳಿಯ ಹೊಡೆತದಿಂದ ಅಲ್ಲೋಲಕಲ್ಲೋಲವಾದ ಮಹಾಸಾಗರದ ಘನ ತೆರೆಗಳು ೫೦ ಸಾವಿರ ಮನೆಗಳನ್ನು ಕೆಡವಿಬಿಟ್ಟವು. ಚಂಡಮಾರುತನ ಮುಂದೆ ಗತಿಗೆಟ್ಟ ೧೦ ಉಗಿಬಂಡಿಗಳು ಹಳಿಯಿಂದ ಹೊರಳಿ ಉರುಳಿ ಬಿದ್ದು ನೂರಾರು ಜನರ ಪ್ರಾಣ ಕಳೆದವು. ಸಮುದ್ರದ ಧಕ್ಕೆಗೆ ಆಶ್ರಯಹೊಂದಿದ ಹಡಗಗಳು ಮುಡಮೇಲಾದವು. ದಂಡೆಯ ಮೇಲಿನ ಭಂಡಾರ ಗೃಹದ ಸರಕು ಗಳೆಲ್ಲ ಸಮುದ್ರ ಪಾಲಾದವು. ಓಸಾಕಾ ಪಟ್ಟಣವೊಂದರಲ್ಲಿ ೩೦ ಕೋಟಿ ಯೆನ್ನುಗಳ ನಷ್ಟವಾಗಿದೆ. ೨ ಕೋಟಿ ಯೆನ್ನುಗಳ ಬೆಳೆಯು ಹಾಳಾಗಿ ಹೋಗಿದೆ.

ಈಶ್ವರನ ಲೀಲೆಯ ಮುಂದೆ ಯಾರಾಟವೇನು?

### ಜಗತ್ತಿನಲ್ಲೆಲ್ಲ ಅತಿ ದೊಡ್ಡ ಹಡಗ

ಇಂಗ್ಲಂಡದ ಕುನಾರ್ಡ ಕಂಪನಿಯವರು ಜಗತ್ತಿನಲ್ಲೆಲ್ಲ ಅತಿ ದೊಡ್ಡದಾದ 'ದಿ ಕ್ವೀನ ಮೇರಿ' ಎಂಬ ಉಗಿಹಡಗವನ್ನು ಕಟ್ಟಿಸಿವರು. ಅದು ೧೩೧೫ ಅಡಿ ಉದ್ದವಿದೆ. ಮತ್ತು ೭೩೦೦೦ ಟನ್ನು ಭಾರವಿದೆ. ಅದರಲ್ಲಿ ೪೦೦೦ ಕ್ಕಿಂತ ಹೆಚ್ಚು ಜನ ಪ್ರವಾಸಿಗರು, ಒಯ್ಯುವ ವ್ಯವಸ್ಥೆ ಮಾಡಲಾಗಿದೆ.

ಇದರ ಪ್ರಾರಂಭೋತ್ಸವವು ಜಾರ್ಜ ಬಾದಶಹರ ಪತ್ನಿ ರಾಣಿ ಮೇರಿಯವರ ಹಸ್ತದಿಂದ ಜರುಗಿತು. ಬಾದಶಹರೂ ಈ ಉತ್ಸವದಲ್ಲಿ ಉಪಸ್ಥಿತರಾಗಿದ್ದರು. ಒಂದು ಲಕ್ಷ ಜನರು ನೆರೆದ ಆ ಸಭೆಯಲ್ಲಿ ಅವರು ಆ ಹಡಗವು ವ್ಯಾಪಾರ ಅಭಿವೃದ್ಧಿಯನ್ನುಂಟುಮಾಡಲೆಂದು ಕೋರಿದರು. ಹಡಗವು ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ೧೯೩೬ ಕ್ಕೆ ಅಮೇರಿಕೆಗೆ ಪ್ರಯಾಣ ಪ್ರಾರಂಭಿಸುವದು.

### ಪಂಜಾಬದಲ್ಲಿ ಹಿಂದು ಮುಸಲ್ಮಾನರ ದೊಂಬಿ.

ಪಂಜಾಬದ ಮಿಯಾನವಾಲಿ ಎಂಬ ಜಿಲ್ಲೆಯಲ್ಲಿ ಶೇಠ ರೂಪಚಂದ ಎಂಬುವನರು ತಮ್ಮ ೭೦ ಜನ ರೈತರೊಡನೆ ಹೊಲಗಳಲ್ಲಿ ಕೆಲಸ ಮಾಡಿಸುತ್ತಿರುವಾಗ ೧೫೦ ಜನ ಮುಸಲ್ಮಾನರು ಕೋಲು ಭಾಲೆಗಳನ್ನು ತೆಗೆದುಕೊಂಡು ಬಂದು ಅವರನ್ನು ತಡೆದರು. ಆ ಕಾಲಕ್ಕೆ ಮಾತಿಗೆ ಮಾತು ಬೆಳೆದು ಮುಸಲ್ಮಾನರು ಹಿಂದುಗಳ ಮೇಲೆ ಎರಿಬಿದ್ದು ೬ ಜನರನ್ನು ಕೊಲೆಮಾಡಿದರು. ಅನೇಕರಿಗೆ ಗಾಯಗಳಾಗಿವೆ. ಅಷ್ಟರಲ್ಲಿ ಪೋಲೀಸರಿಗೆ ಈ ಸುದ್ದಿ ತಿಳಿದು, ಅಲ್ಲಿಗೆ ಬಂದು ಗಾಯಪಟ್ಟವರನ್ನು ಆಸ್ಪತ್ರಿಗೆ ಕಳಿಸಿದರು. ಈ ಹೊಡೆದಾಟದ ಬಗ್ಗೆ ಅನೇಕ ಜನರನ್ನು ಬಂಧಿಸಲಾಗಿದೆ.

### ಹಡೆದ ತಾಯಿಯು ಶಕ್ತಳು.

ಮದ್ರಾಸದ 'ಜಸ್ಟೀಸ' ಪತ್ರಿಕೆಯ ಸುದ್ದಿಗಾರನು ಬರೆದಿರುವದೇನಂದರೆ—ಮದ್ರಾಸದಿಂದ ೬ ಮೈಲು ದೂರದಲ್ಲಿರುವ ಪುತ್ತೂರು ಎಂಬ ಗ್ರಾಮದಲ್ಲಿ ರಾಯಮ್ಮಳ್ಳ ಎಂಬ ಒಬ್ಬ ಹೆಂಗಸು ಗರ್ಭಿಣಿಯಾಗಿ ೧೫ ತಿಂಗಳುಗಳಾದವು. ೯ ತಿಂಗಳಿನಿಂದ ಅವಳಿಗೆ ಅಗಿಂದಾಗ್ಗೆ ಹೊಟ್ಟೆನೋವು ಆಗುತ್ತಿತ್ತು. ಕಡೆಗೆ ಅವಳು ಒಂದು ನಾಗರಹಾವನ್ನು ಹೆತ್ತಳು. ಅವಳು ಅದಕ್ಕೆ ಭಯಪಡದೆ ಒಂದು ತಿಂಗಳವರೆಗೆ ಸಲುಹಿದಳು. ಅದೂ ಅವಳ ಹತ್ತಿರವೇ ಇದ್ದಿತು. ಒಂದು ದಿನ ಅವಳ ತಮ್ಮನು ಅದನ್ನು ನೋಡಲು ಬಂದನು. ಆ ಸಮಯಕ್ಕೆ ನಾಗರಹಾವು ತನ್ನ ಸೋದರಮಾವನನ್ನು ಕಚ್ಚಿಬಿಟ್ಟಿತು ಕೂಡಲೆ ಮಾವನು ಸ್ಮೃತಿತಪ್ಪಿ ನೆಲಕ್ಕೆ ಬಿದ್ದುಬಿಟ್ಟನು. ಆಗ ತಾಯಿಯು ಅಲ್ಲಿರಲಿಲ್ಲ. ನೆರೆಹೊರೆಯವರೆಲ್ಲ ಕೂಡಿ ಆ ಹಾವನ್ನು ಕೊಂದುಬಿಟ್ಟರು. ಅಷ್ಟರಲ್ಲಿ ರಾಯಮ್ಮಳು ಓಡುತ್ತ ಬಂದಳು. ತನ್ನ ಶಿಶುವು ಸತ್ತುದಕ್ಕೆ ಬಹಳ ಅತ್ತಳು. ಆದರೆ ಅದರ ವಿಷದಿಂದ ತನ್ನ ತಮ್ಮನೂ ಸಹ ಮೃತಪಟ್ಟುದನ್ನು ತಿಳಿದು ಅದು ಕಚ್ಚಿದ ಸ್ಥಾನದಲ್ಲಿ ತಾನೂ ಅವನನ್ನು ಕಚ್ಚಿ ವಿಷವನ್ನೆಲ್ಲ ಹೀರಿಕೊಂಡಳು. ತಮ್ಮನು ಸುಖವಾಗಿ ಎದ್ದು ಕುಳಿತನು. ರಾಯಮ್ಮಳಿಗೆ ವಿಷದ ಬಾಧೆ ಏನೇನೂ ಆಗಲಿಲ್ಲ. ವಿಷಬಾಲಕನನ್ನು ಹಡೆದವಳಿಗೆ ವಿಷದ ಬಾಧೆಯೆಲ್ಲಿ?

### ಶ್ರೀ ಶರಚ್ಚಂದ್ರ ಬೋಸರ ಪತ್ರ.

ಶ್ರೀ ಸುಭಾಷಚಂದ್ರ ಬೋಸರ ಸಹೋದರರಾದ ಶ್ರೀ ಶರಚ್ಚಂದ್ರ ಬೋಸರವರು ಸನ್ಯಃ ಬಂಧನದಲ್ಲಿದ್ದಾರೆ. ಅವರನ್ನು ಬಂಗಾಲದ ಸ್ವರಾಜ್ಯ ಪಕ್ಷದ ವತಿಯಿಂದ ಅಸೆಂಬ್ಲಿಯ ಉಮೇದವಾರರನ್ನಾಗಿ ನಿಲ್ಲಿಸುವ ವಿಚಾರ ನಡೆದಿದೆ. ಶ್ರೀ ಶರಚ್ಚಂದ್ರರು ಕಲಕತ್ತೆಯ ತಮ್ಮ ಮಿತ್ರರಿಗೆ ಈ ರೀತಿ ಬರೆದಿದ್ದಾರೆ. ಮುಂದಾಳುವಾಗಬೇಕೆಂಬ ಇಚ್ಛೆ ನನಗಿಲ್ಲ. ನಾನೊಬ್ಬ ರಾಷ್ಟ್ರದ ನಮ್ರ ಸೇವಕನಿದ್ದೇನೆ. ಕಾರಾಗೃಹದ ವಿವಿಧ ಅನುಭವವಿಲ್ಲದೆ ಮನುಷ್ಯನು ಮಾತೃ ಭೂಮಿಯ ಸೇವೆ ಮಾಡಲು ಅರ್ಹನಾಗುವದಿಲ್ಲವೆಂದು ನನಗೆ ಕಂಡುಬಂದಿದೆ ಎಂದು ಹೇಳಿದರು.

# ಪತ್ರಗಳ ಸಾರಾಂಶ.

## ವೇದ ವಿದ್ಯಾಶಾಲೆಯ ವಾರ್ಷಿಕೋತ್ಸವ.

ಬೆಂಗಳೂರುನಗರದಲ್ಲಿರುವ ಶ್ರೀ॥ ಗೌಡರ ವೀರಭದ್ರಪ್ಪನವರ ಧರ್ಮವೇದ ವಿದ್ಯಾಶಾಲೆಯ ವಾರ್ಷಿಕೋತ್ಸವವು ತಾ. ೨೧-೯-೪೧ ನೆಯ ಶುಕ್ರವಾರ ಸಾಯಂಕಾಲ ೬-೩೦ ಘಂಟೆಗೆ ಪ್ರಾರಂಭವಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಪ್ರೊಫೆಸರರೂ, ಕನ್ನಡ ಸಾಹಿತ್ಯಪಂಡಿತರೂ ಆದ ಶ್ರೀ॥ ಬಿ. ಎಂ. ಶ್ರೀಕಂಠಯ್ಯ ಎಂ. ಎ. ಬಿ. ಎಲ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರ್ಥನೆಯಾದ ಮೇಲೆ ಕನ್ನಡ ದೇಶದಲ್ಲಿ ಅನೇಕ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ॥ ದ. ಕೃ. ಭಾರದ್ವಾಜರು "ವೈದಿಕ ಧರ್ಮ" ಎಂಬ ವಿಷಯದಲ್ಲಿ ಭಾಷಣಮಾಡಿದರು. ಇವರು ವೈದಿಕ ಧರ್ಮದ ತಿರುಳನ್ನು ತಮ್ಮ ಸವಿನುಡಿಗಳಲ್ಲಿ ಸಂಶ್ಲೇಷವಾಗಿ ಜನರ ಮುಂದಿಟ್ಟು ಅದರ ಅಭ್ಯಾಸದ ಆವಶ್ಯಕತೆಯನ್ನು ಕುರಿತು ಬಹಳ ಸ್ವಾರಸ್ಯವಾಗಿ ಭಾಷಣಮಾಡಿದರು. ನಂತರ ಜೈಮಿನಿ ಭಾರತದಿಂದ "ಸೀತಾ ವನವಾಸ"ವೆಂಬ ಭಾಗವು ಓದಲಾಯಿತು ಅನಂತರ ಓದಿದ ಪಾಠಶಾಲಾ ವರದಿಯಿಂದ ಅಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನ ತರಗತಿಗಳು ದಿನೇ ದಿನೇ ಅಭಿವೃದ್ಧಿ ಸ್ಥಿತಿಯಲ್ಲಿ ನಡೆಯುತ್ತಿರುವಂತೆಯೂ, ವಿದ್ಯಾರ್ಥಿಗಳೂ ನಾನಾ ಮುಖವಾಗಿ ಉತ್ಸಾಹದಿಂದ ಅಧ್ಯಯನ ಮಾಡುತ್ತಿರುವರೆಂತಲೂ ಮತ್ತು ವ್ಯವಸ್ಥಾಪಕರಾದ ಶ್ರೀ॥ ಜ. ವಿ. ರುದ್ರಪ್ಪನವರು ಪಾಠಶಾಲೆಯ ಮತ್ತು ವಿದ್ಯಾರ್ಥಿಗಳ ಪುರೋವೃದ್ಧಿಯ ವಿಷಯದಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸುತ್ತಿರುವರೆಂತಲೂ ತಿಳಿದುಬರುತ್ತದೆ. ನಂತರ ವೀರಶೈವ ಸಂಸ್ಕೃತ ವಿದ್ಯಾರ್ಥಿ ಸಂಘದ ವಂದಿಯೋದಲ್ಪಟ್ಟಿತು. ಈ ಸಂಘವು ವಿದ್ಯಾರ್ಥಿಗಳಲ್ಲಿ ನಕ್ತೃತ್ವ ಮತ್ತು ಪುರೋವೃದ್ಧಿಗಾಗಿ ಮಾಡುತ್ತಿರುವ ಪ್ರಯತ್ನಗಳೂ, ಮುಖ್ಯವಾಗಿ ಅದರ ಅಧ್ಯಕ್ಷರಾದ ಶ್ರೀ॥ ಟಿ. ಎಸ್. ಚನ್ನಪ್ಪನವರ ಬೆಂಬಲವೂ ಆದರಣೀಯವಾದವು. ಇದಾದ ಮೇಲೆ ಶ್ರೀಮಾನ್ ಶ್ರೀ ಕಂಠಯ್ಯನವರು ತಮ್ಮ ಸರಳ ಶೈಲಿಯಲ್ಲಿ ಭಾವಪೂರ್ಣವಾಗಿ ಮಾತನಾಡಿದರು. ಅವರ ಪ್ರತಿಮಾತಿನಲ್ಲಿಯೂ ಒಂದು ಬಗೆಯ ಮಾಧುರ್ಯವಿದ್ದಿತು; ತಿರುಳಿದ್ದಿತು. "ಮನುಷ್ಯನಾಗಿ ಹುಟ್ಟಿದ ಮೇಲೆ ಸಮಾಜಕ್ಕೂ ಸಾಹಿತ್ಯಕ್ಕೂ ಸೇವೆಯನ್ನು ಸಲ್ಲಿಸಬೇಕು. ಕಲ್ಮಷ ಭಾವನೆಗಳನ್ನು ದೂರಮಾಡಿ ಹೃದಯವನ್ನು ಶುದ್ಧವಾಗಿಟ್ಟುಕೊಂಡು ಸಮಾಜಸೇವೆಮಾಡಬೇಕು. ಯಾವಾಗಲೂ ತಮ್ಮದೇ ಶ್ರೇಷ್ಠವೆಂದು ಭಾವಿಸಿ ಸಾಧಿಸುವುದು ತಪ್ಪು. ನಮ್ಮಲ್ಲಿ ತಪ್ಪುಗಳಿದ್ದರೆ, ನಮ್ಮ ಸಂಸ್ಕೃತಿಯಲ್ಲಿ ಮೌಢ್ಯಗಳಿದ್ದರೆ ಅವುಗಳನ್ನು ಬಿಡುವುದಕ್ಕೆ ನಾವು ಸಿದ್ಧರಾಗಿಬೇಕು. ಪರಕೀಯರಲ್ಲಿ ಒಳ್ಳೆಯ ಗುಣಗಳಿದ್ದರೆ, ಬೇರೆ ಮತಗ್ರಂಥಗಳಲ್ಲಿ ಸುವಿಚಾರಗಳಿದ್ದರೆ ನಾವು ಅವುಗಳನ್ನು ಅಂಗೀಕರಿಸುವುದಕ್ಕೆ ಸಿದ್ಧರಾಗಬೇಕು. ಪ್ರಪಂಚ ವಿಶಾಲವಾದ್ದು; ವಿಶಾಲವಾದ ಮತ್ತು ಜಟಿಲವಾದ ಸಮಸ್ಯೆಗಳು ಅದರಲ್ಲಿವೆ. ಆ ಸಮಸ್ಯೆಗಳನ್ನು ಬಿಡಿಸುವ ಯೋಚನೆಗೆ ತೊಲಗಬೇಕೇ ವಿನಾ ಸಂಕುಚಿತ ಭಾವನೆಯಿಂದ ತನ್ಮತದನ್ನೇ ಹಿಂದುಮಾಡಿ ಸಾಧಿಸ ತೊಡಗಬಾರದು. ತಾನು ಹೆಚ್ಚು ಇನ್ನೊಬ್ಬನು ಕಡಿಮೆಯೆಂಬ ಭಾವನೆಗವಕಾಶಕೊಡಬಾರದು. ಪ್ರತಿಯೊಂದನ್ನೂ ವಿಚಾರಶಕ್ತಿಯಿಂದ ತೂಕಮಾಡಬೇಕು." ಇದು ಅವರ ಭಾಷಣದ ಕೆಲವು ಭಾಗದ ಸಾರಾಂಶ. ಅಂದಿನ ಅವರ ಭಾಷಣದಿಂದ ಜನ ಮನದಲ್ಲಿ ಒಂದು ಬಗೆಯ ಹೊಸ ಚೈತನ್ಯವುಂಟಾಯಿತೆಂದು ಹೇಳಬಹುದು. ನಂತರ ಅಧ್ಯಕ್ಷರು ಶ್ರೀಮಾನ್ ಜಿ ವಿ. ರುದ್ರಪ್ಪನವರ ಧರ್ಮಬುದ್ಧಿಯನ್ನು ಶ್ಲಾಘಿಸಿ "ತಮ್ಮ ಹಿರಿಯರು ಆರಂಭಿಸಿದ ಸತ್ಕಾರ್ಯವನ್ನು ಮುಂದುವರಿಸಿ, ಅವರಿಗೆ ಕೀರ್ತಿತಂದು, ತಾವೂ ಯಶಸ್ಸುಗಳಾಗಿ ಬಾಳುವಂತೆ ಪರಮಾತ್ಮನು ಅನುಗ್ರಹಿಸು"ವಂತೆ ಪ್ರಾರ್ಥಿಸಿದರು. ನಂತರ ಗಣಪತಿಯ ಮಹಾಮಂಗಳಾರತಿ ರಾಜಾಶೀರ್ವಾದಗಳು ಮುಗಿದು ಪ್ರಸಾದವಿನಿಯೋಗವಾಗಿ, ಸಭಾ ವಿಸರ್ಜನೆಯಾಯಿತು.

ಓರ್ವ ವಿದ್ಯಾರ್ಥಿವಾಣಿ.

## ಆಲೂರ ಪುರಾಣ ಮಹೋತ್ಸವ.

ಆಲೂರ ಶ್ರೀ ಪಟ್ಟದ ದೇವರ ಆಮಂತ್ರಣದ ಮೇರೆಗೆ ಶ್ರೀ ಮನ್ನಿರಂಜನ ಬಂಧನಾಳ ಮಹಾ ಸ್ವಾಮಿಗಳು ಆಲೂರಕ್ಕೆ ಆಗಮಿಸಿ ೩೨ ದಿವಸಗಳ ವರೆಗೆ ಶ್ರೀ ಶರಣ ಬಸವೇಶ್ವರ ಪುರಾಣ ಪ್ರವಚನ ಮಾಡಿದರು. ನಿತ್ಯಶಃ ಸಾವಿರಾರು ಜನರು ಪುರಾಣ ಶ್ರವಣಕ್ಕೆ ಬರುತ್ತಿದ್ದರು. ಆಷ್ಟಾವರಣ, ಪಂಚಾಚಾರ, ಷಟ್ಸ್ಥಲ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಸರ್ವ ಜನರೂ ಲಿಂಗರುದ್ರಾಕ್ಷಿ ಯುಕ್ತರಾಗುವಂತೆ ಮಾಡಿದರು. ಭಾದ್ರಪದ ವದ್ಯ ಅಷ್ಟಮಿಗೆ ಪುರಾಣ ಮಂಗಲವು ಒಳ್ಳೇ ವೈಭವದಿಂದ ಪೂರೈಸಿತು. ಅತ್ಯಾಗ್ರಹದಿಂದ ಸರ್ವ ಜನರು ಬಂಧನಾಳ ಸ್ವಾಮಿಗಳ ಪಲ್ಲಕ್ಕಿ ಮಹೋತ್ಸವವನ್ನು ಜರುಗಿಸಿದರು. ಹಾಗೂ ಬಹು ಜನರೂ ಕಡೆಸಮಾರಂಭದಲ್ಲಿ ಬಂಧನಾಳ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಆಲೂರ ಪಟ್ಟಾಧ್ಯಕ್ಷರಿಂದ ಶಿವದೀಕ್ಷೆ ಹೊಂದಿದವರಾದರು. ಇದರಂತೆ ಪ್ರತಿಯೊಂದು ಕಡೆ ನಡೆದರೆ ವೀರಶೈವ ಸಮಾಜವು ಉನ್ನತಿ ಹೊಂದುವದರಲ್ಲಿ ಯಾವ ಸಂದೇಹವೂ ಇಲ್ಲ.

ಪ್ರತ್ಯಕ್ಷದರ್ಶಿ,
ಜಿ. ಪಿ. ಹಿರೇಮಠ

## ಬಾಗಲಕೋಟೆ.

ಇಲ್ಲಿ ಮಳೆಯಿಲ್ಲದೆ ಬಿತ್ತಿದ ಪೈರು ಹಾಳಾಗುತ್ತಲಿದೆ. ಬಿತ್ತದೆ ಇದ್ದ ಜನರು ಕಂಗೆಟ್ಟು ಆಕಾಶದ ಕಡೆಗೆ ನೋಡುತ್ತಿದ್ದಾರೆ. ತಾ ೨೦-೯-೪೧ ನೆಯ ದಿವಸ ಜೋಂಪುರದ ಬಾವಿಯಲ್ಲಿ ಹೆಬ್ಬಾರೆಯವರ ಮನೆಯ ಹೆಣ್ಣುಮಗಳು ತನ್ನ ೮ ತಿಂಗಳ ಗಂಡು ಕೂಸಿನೊಂದಿಗೆ ಹಾರಿಕೊಂಡು ಪ್ರಾಣಬಿಟ್ಟಳು. ಇಲ್ಲಿಯ ಅನೇಕ ಮಹಾಶಯರು ಕಾರವಾರ ರೈತರ ಫಂಡಿಗೆ ಬೇ॥ ಹಣಮಂತರಾವ ಕೌಜಲಗಿ ಇವರ ಪರವಾಗಿ ಸಹಾಯ ಮಾಡಿದ್ದಾರೆ.

## ಹಾಸ್ಟಲ್ ಡೆ ಮತ್ತು ಗಣಪತಿ ಮಹೋತ್ಸವ.

ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲ್ ವಿದ್ಯಾರ್ಥಿಗಳು ಪದ್ಧತಿ ನೋರೆಗೆ ಈ ತಿಂಗಳು ತಾ. ೧೬ ನೇ ಭಾನುವಾರ ಹಾಸ್ಟಲ್‌ವಾರ್ಷಿಕೋತ್ಸವ ಮತ್ತು ವಿದ್ಯಾಗಣಪತಿಯ ಮಹಾ ಮಂಗಳಾರತಿ ಮಹೋತ್ಸವವನ್ನು ಬಹಳ ವೈಭವದಿಂದ ನಡೆಸಿದರು. ವಿದ್ಯಾರ್ಥಿಗಳ ಪ್ರಾರ್ಥನೆಯ ಮೇರೆಗೆ ಕಾರಣಾಂತರದಿಂದ ಈ ವರ್ಷಗೆ ಆಗಮಿಸಿದ್ದ ಶ್ರೀಮಾನ್ ಸೆಷನ್ಸ್ ಜಡ್ಜಿಯವರಾದ ಎಚ್. ಕೆ. ವೀರಬಸವಯ್ಯನವರು ದಯಮಾಡಿಸಿ, ಜಜ್ಜ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಸರ್ವರ ಅಭಿಪ್ರಾಯದಂತೆ ಮೆ॥ ಮರುಳಪ್ಪ ಬಿ. ಎ. ಎಲ್. ಎಲ್ ಬಿ. ಇವರು ಪ್ರಾರ್ಥಿಸಿಕೊಂಡ ಪ್ರಕಾರ-ಸಾಹೇಬರವರು ಸಂತೋಷಪೂರ್ವಕವಾಗಿ ಅಗ್ರಸ್ಥಾನವನ್ನು ವಹಿಸಿದ್ದರು.

ಅನಂತರ ಮಿಡ್ಲ್‌ಸ್ಕೂಲ್ ಕನ್ನಡ ಪಂಡಿತರಾದ ಲಿಂಗಣ್ಣಯ್ಯನವರು ರಚಿಸಿದ ಸ್ವಾಗತ ಪದ್ಯಗಳನ್ನು ಅವರೇ ಓದಿದೊಡನೆ ಹಾಸ್ಟಲ್ ವಿದ್ಯಾರ್ಥಿಗಳ ಇಷ್ಟದಂತೆ ವರ್ಷ ಪ್ರೈಮರಿಸ್ಕೂ

ಲ್ ಆ|| ನಾ|| ಜ. ಸಿ. ಹನುಮಂತಪ್ಪನವರು ಅತ್ಯಲ್ಪ ಕಾಲದ ಲ್ಲಿಯೇ ಅಂದರೆ ೪-೬ ದಿವಸದಲ್ಲಿಯೇ ಅಭ್ಯಾಸ ಮಾಡಿಸಿ ಶ್ರೀಕೃಷ್ಣ ಗಾರುಡಿ ಎಂಬ ನಾಟಕದಲ್ಲಿ "ಭೀಮಾರ್ಜುನರ ಗರ್ವಖಂಡನೆ" ಎಂಬ ಭಾಗವನ್ನು ಅಭಿನಯಿಸಿದರು.

ಸೆಕ್ರೆಟರಿಯವರ ಅನುಮತಿ ಪ್ರಕಾರ ಹಾಸ್ಟಲ್ ರಿಪೋರ್ಟ್ ಓದಲ್ಪಟ್ಟ ನಂತರ ಸಭಾಧ್ಯಕ್ಷರು ಗಾಂಭೀರ್ಯದಿಂದಲೂ, ಉತ್ಸಾಹದಿಂದಲೂ "ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು" ಇಂಥಾ ವಿದ್ಯಾ ಸಂಸ್ಥೆಗಳನ್ನು ದೇಶಮಧ್ಯದ ಲ್ಲಿ ಅನೇಕ ಕಡೆ ಸ್ಥಾಪಿಸಿ ನಮ್ಮ ಇಡೀ ವೀರಶೈವ ಸಮಾಜಕ್ಕೆ ಮಾಡಿರುವ ಮಹದುಪಕಾರವು ಚಿರಸ್ಮರಣೀಯವಾದದ್ದಾಗಿರುತ್ತೆಂ ತ ಸ್ಮರಿಸಿ ಈ ಮುಲಕವೂ ಮತ್ತು ಬಾಲಕರಿಂದ ಪ್ರದರ್ಶಿಸಲ್ಪಟ್ಟ ನಾಟಕದ ಮೂಲಕವೂ ತಮಗುಂಟಾದ ಸಂತೋಷವನ್ನೂ ತಮ್ಮ ಅಮೋಘವಾದ ಭಾಷಣದಿಂದ ಸರ್ವರಿಗೂ ವಿದಿತವಾಗುವಂತೆ ತಿ ಳಿಯ ಪಡಿಸಿದರು. ಇವರ ಪ್ರೋತ್ಸಾಹನದಕರವಾದ ಭಾಷ ಣವು ಕೂಡಲ್ಪಟ್ಟಿದ್ದ ಸಭಿಕರಿಗೂ ಮತ್ತು ಹಾಸ್ಟಲ್ ವಿದ್ಯಾರ್ಥಿಗಳಿ ಗೂ ಅತ್ಯಾನಂದವನ್ನುಂಟುಮಾಡಿತು.

ಇವರ ಭಾಷಣವು ಮುಗಿದ ನಂತರ ಹಾಸ್ಟಲ್ ಸೆಕ್ರೆಟರಿ ಯಜರ್ ಸಾ ಟ ಹಾಲಪ್ಪನವರು ಅಧ್ಯಕ್ಷರಿಗೂ ಮುಖ್ಯಾಧಿಕಾ ರಿಗಳಿಗೂ ಹಾರ ತುರಾಯಿಗಳನ್ನು ಸಮರ್ಪಿಸಿದರು. ತದನಂತರ ಹಾಸ್ಟಲ್ ಮೇನೇಜರ್ ಎಚ್. ಎಲ್. ಶಿವಶಂಕ್ರಪ್ಪನವರು ಸರ್ವ ರಿಗೂ ಅಭಿನಂದನೆ ಸಮರ್ಪಣೆ ಮಾಡಿದರು. ಮಹಾಮಂಗಳಾರ ತಿಯು ನಡೆದ ನಂತರ ಮಹಾಜನಗಳಿಗೆಲ್ಲಾ ವಿದ್ಯಾರ್ಥಿಗಳಿಂದ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟು ಶ್ರೀಮಹಾಗಣಾ ಧಿಪತಿಯ ಉತ್ಸವವು ಸರ್ವರ ಜಯಘೋಷದೊಡನೆಯೂ, ವಿದ್ಯಾ ರ್ಥಿಗಳ ಭಜನೆ ಮತ್ತು ಬ್ಯಾಂಡ್ ವಗೈರೆ ವಾದ್ಯಘೋಷದೊಡನೆ ಯೂ ಹೊರಟು ಮುಖ್ಯ ಬೀದಿಗಳಲ್ಲಿ ಸಾಂಗವಾಗಿ ಅತಿವಿಜೃಂಭ ಣೆಯಿಂದ ನೆರವೇರಿತು—

ಈ ಮಹಾ ಕಾರ್ಯವು ನಿರ್ವಿಘ್ನವಾಗಿ ನಡೆಯಲು ಪ್ರೋ ತ್ಸಾಹಿಸಿದ ಮತ್ತು ಸಹಾಯ ಮಾಡಿದ ಎಸ್. ನಿಜಲಿಂಗಪ್ಪನವರು ಬಿ. ಎ. ಎಲ್ ಎಲ್. ಬಿ., ಚನ್ನಪ್ಪನವರು ಡಿ|| ಬೋ|| ಪ್ರೆಸಿ ಡೆಂಟ್, ಎ. ಮರುಳಪ್ಪನವರು, ವೀರಬಸವಯ್ಯನವರು ಆಡ್ವೋ ಕೇಟ್ಸ್ ಇವರಿಗೂ, ಮುನ್ಸಿಪಲ್ ವೈಸ್‌ಪ್ರೆಸಿಡೆಂಟ್ ಅಪ್ಪಯ್ಯ ನವರಿಗೂ, ಹಾಸ್ಟಲ್ ಪ್ರೆಸಿಡೆಂಟರಾದ ಸಾಹುಕಾರ್ ವೀರಭದ್ರ ಪ್ಪನವರು ಪ್ರೈಮರಿ ಸ್ಕೂಲ್ ಮಾಸ್ಟರ್ ಗುರುಬಸವ ಶಾಸ್ತ್ರಿಗಳು ಇವರಿಗೂ ಮತ್ತು ವರ್ತಕ ಮಂಡಲಿಯವರೇ ಮೊದಲಾದ ಮಹ ನೀಯರಿಗೆಲ್ಲಾ ಶ್ರೀ. ವಿಘ್ನೇಶ್ವರನು ಸಕಲ ಸನ್ಮಂಗಲವನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ

ಓರ್ವ ಪ್ರತ್ಯಕ್ಷದರ್ಶಿ.

### ಹಾವೇರಿ

ಶ್ರೀಮ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ಹಾವೇರಿ ಹೊಸ ಮ ಠದಲ್ಲಿ ಶ್ರೀ|| ಮಹಾ|| ಸಂಸ್ಥಾನ ಅಷ್ಟಣೆಯ ಪ್ರಕಾರ ದಯಮಾ ಡಿಸಿರುವ ಶ್ರೀ ಶಿದ್ಧಲಿಂಗದೇವರ ಶ್ರಾವಣ ಮಹಾಪೂಜಾ ಸಮಾ ರಂಭವು ಶಿಷ್ಯರು ದೈವದವರ ಭಕ್ತಿಯಲ್ಲಿ ತಾ|| ೧೧-೮-೩೪ ರಿಂ ದಾ ತಾ|| ೧೦-೯-೩೪ ವರೆಗೆ ಬಹಳೇ ವಿಜೃಂಭಣೆಯಿಂದ ನೆರವೇ ರಿತು. ಈ ಕಾರ್ಯದಲ್ಲಿ ಸರ್ವ ಭಕ್ತಿಮಂಡಳಿಯವರು ಭಕ್ತಿಪೂ ರ್ವಕವಾಗಿ ಸೇವಾಮಾಡಿದರು. ಈ ಮಹಾ ಕಾರ್ಯದಲ್ಲಿ ಅನೂ ರ ಶೆಟ್ರು ಶಿವಪ್ಪನವರು, ಹೊಸಮನಿ ಚನಬಸಪ್ಪನವರು, ಮಾಗಾವಿ ಗುರುಬಸಪ್ಪನವರು, ಮಾಗಾವಿ ಚನ್ನಬಸಪ್ಪನವರು, ಮಂಡಕ್ಕಿ ಚ ನಬಸಪ್ಪನವರು, ಹುಂಬಿ ಬಸೆಟ್ಟಿಪ್ಪನವರು, ತುಪ್ಪದ ವಿರೂಪಾಕ್ಷ ಪ್ಪನವರು, ಮುತವರ್ಜಿ ವಹಿಸಿ ಕೃತಾರ್ಥರಾದರು. ಮತ್ತು ವೀ ರಪ್ಪಾ ಹೆತ್ತಿ, ಪುಟ್ಟಪ್ಪ ಚುರಮರಿ, ಗುರುಪಾದಪ್ಪಾ ಹಿಟ್ನಳ್ಳಿ, ಬಾಗೇವಾಡಿಕರ ಇವರು ಸತತ ಹಾಜರಿದ್ದು ಗುರು ಸೇವಾದಲ್ಲಿ ನಿ ರತರಾಗಿದ್ದರು ಮತ್ತು ಶಿವಾನುಭವ ಶಾಸ್ತ್ರಕೋವಿದರೂ ಸದ್ಧರ್ಮ ದೀಪಿಕೆಯ ಸಂಪಾದಕ ಚನ್ನಮಲ್ಲಿಕಾರ್ಜುನಪ್ಪನವರು ಪ್ರತಿನಿತ್ಯ ಸಾಯಂಕಾಲ ೬ ರಿಂದ ೮|| ಘಂಟೆಯವರೆಗೆ ಶ್ರೀ. ಪ್ರಭುದೇವರ ಶೂನ್ಯಸಂಪಾದನೆಯೊಳಗಿನ ಶ್ರೀ ಬಸವೇಶ್ವರ ಸಂವಾದನೆ ಶ್ರೀ ಚನ್ನಬಸವದೇವರ ಸಂವಾದನೆ ಇವುಗಳನ್ನು ಸರ್ವರಿಗೂ ಸುಬೋ ಧವಾಗುವಂತೆ ಆಗಮ ಗೀತಾದಿಗಳ ಉದಾಹರಣೆಯೊಡನೆ ಪ್ರವ ಚನ ನಡೆಸಿದರು. ಪ್ರತಿನಿತ್ಯ ಸಾಯಂಕಾಲದಲ್ಲಿ ಇಲ್ಲಿಯ ಶ್ರೀ ಶಿವಯೋಗೀಶ್ವರ ಮುರುಘರಾಜೇಂದ್ರ ಫ್ರಿಬೋರ್ಡಿಂಗಿನ ವಿದ್ಯಾ ರ್ಥಿಗಳ ಭಜನೆ ನಡೆದು ತಾ || ೯-೯-೩೪ ನೆಯ ದಿವಸ ಶ್ರೀ. ಹ್ಲಿ. ಸಿ ಯಗಟಿ ವಕೀಲ ಬಿ. ಎ. ಎಲ್ ಎಲ್. ಬಿ. ಇವರಿಂದ ತತ್ವಜ್ಞಾನದ ವಿಷಯವಾಗಿಯೂ ಮತ್ತು ಚನ್ನಮಲ್ಲಿಕಾರ್ಜುನಪ್ಪ ರವರಿಂದ ಹಿಂದು ಧರ್ಮದ ವಿಷಯವಾಗಿಯೂ ಭಾಷಣಗಳಾದ ನಂತರ ಶ್ರೀ ಶಿದ್ಧಲಿಂಗದೇವರಿಂದ ಆಶೀರ್ವಾದ ಪಡೆದ ಬಳಿಕ ಮಂ ಗಲವಾಗಿ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು. ತಾ|| ೧೦-೯-೩೪ ನೇ ದಿವಸ ಮಹಾಗಣಾರಾಧನೆ ನಡೆದು ಶ್ರೀ ಮಹಾಪಾದಪೂಜಾ ಪ್ರವಚನ ಸಮಾಪ್ತಿಯಾಯಿತು. ಪ್ರತಿವರ್ಷ ಇದೇ ರೀತಿಯಾಗಿ ನಡೆಯುವಂತೆ ಅನುಗ್ರಹಿಸಲೆಂದು ಶ್ರೀ ಜಗ ದ್ಗುರು ಮುರುಘೇಶನನ್ನು ಪ್ರಾರ್ಥಿಸುವಾ

ಓರ್ವ ಸೇವಾಭಾಗಿ.


## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾ ರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾ ನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾ ರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂ ದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಆರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

# ಪ್ಲೇಗ ಸಂಜೀವನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ!

ಮ್ಯಾನೇಜರ್, ಪ್ಲೇಗ್ ಸಂಜೀವನಿ
ಆಫೀಸ್ ಇವರಿಗೆ—

ಸವಿನಯ ವಿನಂತಿ.

ಈ ಕೆಳಗೆ ಕಾಣಿಸಿದ ಅಡ್ರೆಸ್ಸಿಗೆ ೫೦ ಪ್ಲೇಗ ಸಂಜೀವಿನಿ ಬಾಟ್ಲಿಗಳನ್ನು ಮತ್ತು ೧ ಕಾಲರಾ ಸಂಜೀವಿನಿ ಬಾಟ್ಲಿಯನ್ನು ವ್ಹಿ. ಪಿ. ಮಾಡಿ ಕಳುಹಿಸಿಕೊಡ ಬೇಕಾಗಿ ವಿನಂತಿ. ಅನುಪಾನ ಪತ್ರಿಕೆ ಇಡಬೇಕು. ಮತ್ತೇನಾದರೂ ತಮ್ಮಲ್ಲಿ ವಿಶೇಷ ಔಷಧಗಳು ಸಿಗುತ್ತಿದ್ದರೆ ತಿಳಿಸ ಬೇಕು. ನಮ್ಮ ಸಂಘಕ್ಕೆ ತಮ್ಮ ಪ್ಲೇಗ ಸಂಜೀವಿನಿಯನ್ನೇ ತರಿಸಿಕೊಳ್ಳುತ್ತೇವೆ.

ಸಿ. ಎಸ್. ಮಠ.
ಸೆಕ್ರೆಟರಿ,
ಕೋ-ಆಪರೇಟಿವ್ ಸೊಸಾಯಿಟಿ,
ಚೊಳಚಗುಡ್ಡ.

ಪ್ಲೇಗ ಸಂಜೀವನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ.

ಪ್ಲೇಗ ಸಂಜೀವನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ.

# ಒಮ್ಮೆಯಾದರೂ ತರಿಸಿ- -
# - -ಅದರ ಸತ್ವ ನೋಡಿರಿ!

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಗೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಸ್ತೂರಿಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪು ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲೆ ಡಬ್ಬಿಗೆ ೧-೪-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕಟ್ಟು ಆಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುವಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅಂಪೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ಲ ಆಣೆ. ೨೪ ತಾಸಿನಲ್ಲಿ ಗುಣವ್ರ.

ನಮ್ಮ ನಂದೀ ಭಾಷಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩೦. ೩೦ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ಸೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
# ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಚದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆ ೧೨ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ. ಪೋ. ಅಲಮಟ್ಟಿ ಜಿ. ವಿಜಾಪುರ.**

ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—
ಕರ್ಮಯೋಗಿ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ






೩,೪೬,೦೦೦ ರೂಪಾಯಿಗಳ ವಿಮೆ!
ಅಗಷ್ಟ ಒಂದೇ ತಿಂಗಳಲ್ಲಿ

## ೧,೦೧,೫೦೦ ಬೆಲೆಯ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವವಿಮೆಗಳು ಬಡವರಿಗೂ ಬಲ್ಲಿದರಿಗೂ— —
— —ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ವಿಮೆಯ ಬೆಳವಣಿಗೆಯು ಕೆಳಗಿನಂತಿದೆ.

೧೯೩೪ನೆಯ ಜನವರಿ ೧ ನೆಯ ತಾರೀಖಿನಿಂದ ಎಪ್ರೆಲ್ ೩೧ನೆಯ ವರೆಗೆ ೮೫೦೦೦
" ಮೇ " ಅಗಷ್ಟ ೩೧ನೆಯ ವರೆಗೆ ೩೬೧೦೦೦
ಅಂತು ರೂಪಾಯಿ ೪೪೬೦೦೦

ಕರ್ನಾಟಕದಲ್ಲಿ ಈ ಮಾದರಿಯ ವಿಮೆ ಕಂಪನಿಯು ಇದೊಂದೇ ಆಗಿರುವುದರಿಂದಲೂ ಉದ್ಯೋಗ ಧಂದೆಗಳನ್ನು ಬೆಳಸಲಿಚ್ಛೆಯನ್ನಿಟ್ಟುಕೊಂಡಿರುವದರಿಂದಲೂ ಕರ್ನಾಟಕಸ್ಥರಾದ ಪ್ರತಿಯೊಬ್ಬರೂ ಮುಂದುವರಿದು ಅಭಿಮಾನದಿಂದ ಈ ಕಂಪನಿಯ ಪಾಲಿಸಿಗಳನ್ನು ತೆಗೆದುಕೊಳ್ಳುವರೆಂದು ನಂಬಿದ್ದೇವೆ. ಪ್ರತಿಯೊಂದು ವಿಮೆಯಲ್ಲಿಯೂ ಪ್ರವೇಶ ಧನ ರೂಪಾಯಿ ೫, ತಿಂಗಳ ಕಂತ ರೂಪಾಯಿ ೧, ವಾರ್ಷಿಕ ಚಂದಾ ರೂಪಾಯಿ ೧.

ಈ ಕಂಪನಿಯಲ್ಲಿ ಕೆಲಸವಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳದುಕೊಳ್ಳಿರಿ.

ಮ್ಯಾನೇಜಿಂಗ್ ಏಜಂಟ್ಸ್,
ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ್ ಕಂ. ಲಿ. ಧಾರವಾಡ.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೀಂಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಥೆಗಳಿಗೆ ಕೇಂದ್ರಸ್ಥಾನ ... ..... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಓ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೪-೦
೬೦ ,, ,, ,, ೧೬-೪-೦
೩೦ ,, ,, ,, ೪-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖು ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**



# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಸ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

**" ಕಚ್ಚೆರ್ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪ್ಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಪಾತ್ರೆಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಧಳಧಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಪಸ್ತ,**
**ಬಾಗಲಕೋಟಿ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಲಶ್ಯರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರಲಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ' ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
**ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.**



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ನುಶಿಚೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಚೇಳಿನ ನಾಶ— | ೧೧ | ,, |
| ೧೨ ತಗಣಿ ಶತ್ರು ಬಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
**ಪೋ. ಹಂಚಿಲಿ.**
**ಜಿ. ವಿಜಾಪುರ.**



ಈ ಪತ್ರಿಕೆಯು ಅಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಅಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

Sharana Sandesh.

ನ್ಯಾಯಾಸ್ಥಾನ| ಡಾಕ್ಟ್ರಿಯಾಪರನಾಸ್ಟ್ಲು| ಟೋಕೆವಿರೋಧಿ| ಶರಣನಾರಾಂಗ ಅಂಟ_____,

ಕೂಡಲಸಂಗಮದೇವರ ರಾಜತೇಜದಲ್ಲಿ ಶ್ವನಾಗಿ ॥ ವ. ೨೨೮ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಸ ತಿ ಸೋಮವಾರವೂ ಪ್ರಕಟವಾಗುವುದು.

೩ ಬಿ ಬಸಪ್ಪ

ಸಂಪುಟ ೪. | ಆಲ | ನಾರ ತಾರೀಖು ೧೫ನೆಯ ಅಕ್ಟೋಬರ್ ೧೯೩೪. | ಸಂ: ೬೯.

ಜನಸೇವೆಯೇ ದೇವರ ಸೇವೆ.

## ಮುಂಬೈ ಪ್ರಾಪ್ತಿಯ ಸಭೆ.

ಮಾತಾಡುವ ಚಿತ್ರಪಟವನ್ನು ತೆಗೆಯುವರು!

ಅಪೂರ್ವ ಸಿದ್ಧತೆ! ಅಸಾಧಾರಣ ಸಾಹಸ!

ಅಕ್ಟೋಬರ್ ೨೬, ೨೭, ೨೮.

ಹಿಂದುಸ್ಥಾನದ ಎಲ್ಲ ಭಾಗಗಳಿಂದ ೩೦ ಪತ್ರಿಕಾ
ಪ್ರತಿನಿಧಿಗಳು ಪ್ರವೇಶ ಪತ್ರಿಕೆಗಾಗಿ
ವಿಜ್ಞಾಪಿಸಿಕೊಂಡಿದ್ದಾರೆ.
ಇಂಗ್ಲೆಂಡ್
ಅಮೇರಿಕಾ ಮೊದಲಾದ
ರಾಷ್ಟ್ರಗಳಿಂದಲೂ ಪತ್ರಿಕಾ ಪ್ರತಿನಿಧಿಗಳು
ಬರುವವರಿದ್ದಾರೆ. ಇಂಗ್ಲೆಂಡ್ ಕೂಲಿಕಾರಪಕ್ಷದ 'ಹೆರಲ್ಡ್'
ಪತ್ರಿಕಾ ಪ್ರತಿನಿಧಿಗಳು ಈಗಾಗಲೇ ಮುಂಬೈಗೆ ಬಂದಿದ್ದಾರೆ.

ದೇಹದೇ ಕೇವಲಯು.

SANGAM CLOTH STORES
Prop: M. S. Hundekar & Sons,
P.O: TERDAL - 5[illegible] 015
Dt. Bijapur. (Karnat[illegible])

ಕಳಪೊಳ್ಳುವ ಮೊದಲು.

ಎಚ್ಚರಾಗಿರಿ!



ಗಂಡಾಂತರಕ್ಕೊಳಗಾಗಬೇಡಿರಿ !

**ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.**

ಸಿದ್ಧೇಶ್ವರ ನುತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ನಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಜಾತ್ರಿ ಹೇಳಕೊಡತಾರ ಇಂಥಾದಕ್ಕೆ ನೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾನವರನ್ನ ಕೇಳಬೇಕೆನ್ನೂದೂ ನನಗೆ ನೋಬ್ಬಿದ್ದ ಈಗ ಹೆಚ್ಚ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗ್ಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಮನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

**ಕರ್ನಾಟಕದ ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದ ಪಂಚಾಂಗವು**

# ಜಾಹೀರಾತ ಕೊಡಲಿಕ್ಕೆ ಸುಸಮಯ.

ತಾವು ವ್ಯಾಪಾರ ಕೈಗಾರಿಕೆಗಳಿಂದ ಹೆಚ್ಚಾಗಿ ಹಣ ಗಳಿಸಿ ಸ್ವತಂತ್ರ ಜೀವಿಗಳಾಗಿ ಬಾಳಬೇಕೆಂದಿದ್ದರೆ ೧೦-೧೫ ವರ್ಷಗಳಿಂದ ಕರ್ನಾಟಕದಲ್ಲಿ ಪ್ರಸಿದ್ಧ ಹೊಂದಿ ಪ್ರತಿಯೊಂದು ಮನೆಯಲ್ಲಿ ಇರಲಿಕ್ಕೆ ತಕ್ಕುದಾದ **ಹೂಲಿ** ( ಶ್ರೀ ಸೂವಲ್ಲಿ ) **ಸುಪ್ರಸಿದ್ಧ ಪಂಚಾಂಗದಲ್ಲಿ** ತಮ್ಮ ಜಾಹೀರಾತನ್ನು ಅಚ್ಚು ಹಾಕಿಸಲಿಕ್ಕೆ ಇಂದೇ ಕಳಿಸಿರಿ.

ಅವು ಡೆಮ್ಮಿ ಒಂದಾರಾಂಶ ಆಕಾರದ ೧ ಪೇಜ ( ೪||×೯|| ) ಗೆ ೧೫ ರೂ. ದರವಿಟ್ಟಿದೆ. ತಡವಾಗಿ ಬಂದ ಜಾಹೀರಾತುಗಳಿಗೆ ಸ್ಥಳ ದೊರೆಯಲಿಕ್ಕಿಲ್ಲ. ಕಾರಣ ಬೇಗ ನಿಮ್ಮ ಜಾಹೀರಾತನ್ನು ಅದಕ್ಕೆ ಹತ್ತುವ ರಕಮನ್ನು ಮನಿ ಯಾರ್ಡರ ಮೂಲಕ ಕಳಿಸಿರಿ.

ಈ ಪಂಚಾಂಗಗಳು ವಿಶೇಷವಾಗಿ ಕರ್ನಾಟಕದ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ಪ್ರಸಾರವಾಗುವದರಿಂದ ಕೂಡಲೇ ಪತ್ರವ್ಯವಹಾರ ಮಾಡಿರಿ!

ಸಿ. ಕೆ. ಲಿಂಗಯ್ಯಾಸ್ವಾಮಿ
ಶ್ರೀ ಲಕ್ಷ್ಮಿ ವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಅಕ್ಟೋಬರ್ ತಾರೀಖು ೧೫ನೆಯ ಸೋಮವಾರ | ಸಂಚಿಕೆ ೯


# ಸಂಸ್ಥಾನ ಪ್ರಜೆಗಳಿಗೆ ಮಹಾತ್ಮರ ಸಂದೇಶ!

## ಕಾಂಗ್ರೆಸ್ಸಿನ ಪ್ರಥಮ ವಿಜಯ!!

### ಮಹಾತ್ಮರ ಸಂದೇಶ.

ಮಹಾತ್ಮಾ ಗಾಂಧಿಯವರು, ಸಂಸ್ಥಾನ ಪ್ರಜೆಗಳ ಬಗ್ಗೆ ವಿಚಾರಿಸಿದ ತೇಟ ಅವ್ಯಕ್ತಲಾಲರಿಗೆ ಈ ರೀತಿ ಪತ್ರ ಬರೆದು ತಿಳಿಸಿದ್ದಾರೆ—ಇನ್ನ ಪತ್ರದಿಂದ ಮತ್ತು ಭಾಷಣದಿಂದ ಸಂಸ್ಥಾನ ಪ್ರಜೆಗಳಲ್ಲಿ ಕಪ್ಪು ತಿಳುವಳಿಕೆಯುಂಟಾದುದು ಆಶ್ಚರ್ಯವೆನಿಸುತ್ತದೆ. ನಾವು ಬ್ರಿಟಿಷ ರಾಜ್ಯ, ಸಂಸ್ಥಾನ ಹೀಗೆ ಭಿನ್ನ ಭಿನ್ನ ರಾಜ್ಯವ್ಯವಸ್ಥೆಗಳಲ್ಲಿದ್ದರೂ ವಸ್ತುತಃ ನಾವು ಒಂದೇ ಆಗಿದ್ದೇವೆ. ಸಂಸ್ಥಾನ ಪ್ರಜೆಗಳು ಪ್ರತ್ಯಕ್ಷತಃ ಕಾಂಗ್ರೆಸ್ ಸದಸ್ಯರಾಗಲು ಬರುವದಿಲ್ಲದೆ ಅವರಿಗೂ ಇತರರಂತೆ ಸಮಾನವಾದ ಹಕ್ಕು ಇರುತ್ತದೆಂದೇ ರಾಷ್ಟ್ರೀಯ ಸಭೆಯ ಅಭಿಪ್ರಾಯವಿದೆ.

### ಕಾಂಗ್ರೆಸ್ಸಿನ ಪ್ರಥಮ ವಿಜಯ.

ಸಂಯುಕ್ತ ಪ್ರಾಂತದ ಚುನಾವಣೆಯಲ್ಲಿ ಮೂವರು ಮುಸಲ್ಮಾನರು ಎದುರಾಳಿಗಳಿಲ್ಲದೆ ಆರಿಸಿ ಬಂದರು. ಅವರಲ್ಲಿ ಇಬ್ಬರು ಕಾಂಗ್ರೆಸ್ ಪಕ್ಷದವರು. ಪಂ. ಮಾಲವೀಜಿಯವರ ಬದಲಾಗಿ ನಿಂತಿದ್ದ ಮಿ. ಸಿ. ವಾಯ್. ಚಿಂತಾಮಣಿಯವರೂ ಪ್ರಕೃತಿ ಸ್ವಾಸ್ಥ್ಯವಿಲ್ಲದ್ದರಿಂದ ಹಿಂದಕ್ಕೆ ಸರಿದಿದ್ದು ಅವರ ಸ್ಥಾನದಲ್ಲಿ ಡಾ. ಭಗವಾನದಾಸರು ಎದುರಿಲ್ಲದೆ ಆರಿಸಿ ಬಂದರು.

### ರವೀಂದ್ರನಾಥ ಟಾಗೋರವರ ಹೇಳಿಕೆ.

"ಮಹಾತ್ಮರು ರಾಜಕಾರಣದಿಂದ ಪರಾವೃತ್ತರಾದರೆ ಕಾಂಗ್ರೆಸ್ಸಿನಲ್ಲಿ ಒಡಕು ಹುಟ್ಟಿ ಅದು ಚೂರು ಚೂರಾಗುವದು. ಕೆಲವು ಮಹತ್ವದ ಮೂಲಭೂತ ಹಕ್ಕುಗಳ ವಿಷಯವಾಗಿ ಗಾಂಧೀಜಿ ಮತ್ತು ನನ್ನಲ್ಲಿ ಮತಭೇದವಿದೆ. ಆದರೂ ಅವರು ರಾಷ್ಟ್ರೀಯ ಸೂತ್ರಧಾರಿತ್ವವನ್ನು ಬಿಟ್ಟರೆ ರಾಷ್ಟ್ರೀಯ ಸಭೆಯ ಪ್ರಭಾವವೂ ನೈತಿಕ ಬಲವೂ ತಗ್ಗದೆ ಇರವು. ಆದುದರಿಂದ ರಾಷ್ಟ್ರೀಯ ಸಭೆಯನ್ನು ಬಿಟ್ಟುಬಿಡುವ ಪೂರ್ವದಲ್ಲಿ ಅವರು ಪುನಃ ವಿಚಾರಿಸಬೇಕು.

ಮಹಾತ್ಮರಿಗೆ ಮಹತ್ವವನ್ನು ಕೊಡುವದೆಂದರೆ ಅವರಂದ್ದದ್ದನ್ನೆಲ್ಲ ಒಪ್ಪಿಕೊಳ್ಳಲೇಬೇಕೆಂಬ ಅರ್ಥವಲ್ಲ. ಜೀವನದ ಒಂದು ಮಹತ್ವದ ಪ್ರಶ್ನೆಯ ಬಗ್ಗೆ ಮತ್ತು ಅನೇಕ ರಾಜಕೀಯ, ಸಾಮಾಜಿಕ ಪ್ರಶ್ನೆಗಳ ಸಂಬಂಧವಾಗಿ ನಮ್ಮಿಬ್ಬರಲ್ಲಿ ಎಂದೂ ಹೊಂದದ ಮತಭೇದವಿದ್ದರೂ ನಾನು ಅವರಿಗೆ ಈ ಪ್ರೇಮದ ಎಚ್ಚರಿಕೆಯನ್ನು ಕೊಡುತ್ತೇನೆ."

ಈ ಪ್ರಕಾರವಾಗಿ ಶ್ರೀ ರವೀಂದ್ರನಾಥರು ಪತ್ರಿಕಾ ಪ್ರತಿನಿಧಿ ಮುಂದೆ ಅಂದರು.

### ಕಾಂಗ್ರೆಸ್ ಕಾರ್ಯಕ್ರಮ.

ಅಸೆಂಬ್ಲಿಯ ಆಯ್ಕೆಯ ನಿಮಿತ್ತವಾಗಿ ಕಾಂಗ್ರೆಸ್ ಅಧಿವೇಶನವನ್ನು ಮುಂದಕ್ಕೆ ಹಾಕಬೇಕೆಂದು ಸೂಚಿಸಲಾಗಿದ್ದಿತು. ಆ ವಿಷಯವನ್ನು ಸ್ವಾಗತ ಸಮಿತಿಯವರು ಯೋಚಿಸಿ ಮುಂದಕ್ಕೆ ಹಾಕುವದನ್ನು ಬಿಟ್ಟು ಬಿಟ್ಟರು. ಕಾಂಗ್ರೆಸ್ ವರ್ಕಿಂಗ ಕಮಿಟಿಯ ಪರಿಷತ್ತು ಶನಿವಾರ ೨೦ ನೆಯ ತಾರೀಖಿನ ದಿವಸ ೧೧ ಗಂಟೆಗೆ ಅಬ್ದುಲ್ ಗಫಾರ ನಗರದಲ್ಲಿ ಅಧ್ಯಕ್ಷರ ಶಿಬಿರದಲ್ಲಿ ಪ್ರಾರಂಭವಾಗುವದು. ಅ. ಭಾ. ಕಾಂಗ್ರೆಸ್ ಕಮಿಟಿಯ ಅಧಿವೇಶನವು ಮಂಗಳವಾರ ೨೩ ನೆಯ ತಾರೀಖಿನ ೩ ಗಂಟೆಗೆ ಅ. ಗ. ನಗರದಲ್ಲಿ ನೆರೆಯುವದು. ಆ ಕಾರ್ಯ ಮುಗಿದ ಮೇಲೆ ಅದೇ ಮುಂದೆ ವಿಷಯ ನಿಯಾಮಕ ಮಂಡಲವಾಗುವದು.

ಕಾಂಗ್ರೆಸ್ ಸಾರ್ವಜನಿಕ ಸಭೆಯು ಶುಕ್ರವಾರ ೨೬ ನೆಯ ತಾರೀಖಿನ ದಿವಸ ಸಾಯಂಕಾಲ ೭ ಗಂಟೆಗೆ ಅ. ಗ. ನಗರದಲ್ಲಿ ಪ್ರಾರಂಭವಾಗಿ ಮುಂದೆ ಎರಡು ದಿವಸ ಅದರ ಕಾರ್ಯವು ಜರುಗುವದು.

೨೦ ನೆಯ ತಾರೀಖಿನಿಂದ ಪ್ರತಿನಿಧಿಗಳ ಭೋಜನ ಮತ್ತು ವಸತಿಗಳ ವ್ಯವಸ್ಥೆಯು ಅ. ಗ. ನಗರದಲ್ಲಿ ಮಾಡಲ್ಪಡುವದು.

—ನಾ. ಆಗಾಖಾನರವರಿಗೆ ಹಿಂದುಸ್ಥಾನದಲ್ಲಿ ರಾಜ್ಯವನ್ನು ಕೊಡಲು ಲಾರ್ಡ ವಿಲಿಂಗ್ಡರವರು ವಿರೋಧಿಸಿದುದರಿಂದ ಯುರೋಪದಲ್ಲಿಯ ಸಿರಿಯಾ ಪ್ರಾಂತವನ್ನು ಕೊಡುವರೆಂತಲೂ ಫ್ರೆಂಚ್ ಸರಕಾರವು ಒಪ್ಪಿಗೆ ಕೊಟ್ಟದೆಯಂತಲೂ ಜನ್ಮಭೂಮಿ ಪತ್ರಿಕೆಯ ಸುದ್ದಿಗಾರರಿಗೆ ಕೇಳಿಸಿದ ಕಿವಿ ಮಾತು.

—ಪುಣೆಯಲ್ಲಿ ಬಂಗಾರ ೩೭॥ ರೂ. ತೊಲೆಯಂತೆ ತಾ. ೧೩ ನೆಯ ದಿನ ಮಾರಾಟವಾಯಿತು.

## 'ಶರಣ ಸಂದೇಶ' ಪತ್ರಿಕೆಯಲ್ಲಿ ಪ್ರಕಟವಾಗಿರುವ

# ಶ್ರೀ ಕುಮಾರರ ಲೇಖನದ ಪರಾಮರ್ಶೆ.

(ಲೇಖಕರು — ಬಿ. ಶಿವಮೂರ್ತಿ ಶಾಸ್ತ್ರಿ ಹುಲ್ಲುಂಟಿಮಠ, ತುಮಕೂರು)

ತಾ. ೧೦-೯-೩೪ ರ ಶರಣ ಸಂದೇಶ ಪತ್ರಿಕೆಯಲ್ಲಿ "ಶ್ರೀ ಕುಮಾರ" ಎಂಬುವರು ನನ್ನ ಸೊಲ್ಲಾಪುರದ ಭಾಷಣದ ವಿಮರ್ಶೆ ಮಾಡಿ ಒಂದು ಲೇಖನ ಒದಿದ್ದಾರೆ. ಅದರಲ್ಲಿ ವಾದಗ್ರಸ್ತ ವಿಚಾರಗಳು ಬಹಳವಾಗಿವೆ. ಆದುದರಿಂದ ಅದಕ್ಕೆ ಉತ್ತರ ರೂಪವಾಗಿ ಈ ಲೇಖನವನ್ನು ಬರೆದು ಪ್ರಕಟಿಸಲಾಗಿದೆ.

ಶ್ರೀ ಕುಮಾರರ ಲೇಖನ ಶರಣಿಯನ್ನು ಪರೀಕ್ಷಿಸಿದರೆ ಅದರಲ್ಲಿ ಮುಂದೆ ಹೇಳುವ ಸಾರ ವಿಚಾರಗಳು ಹೊರಬೀಳುತ್ತವೆ ೧ ಗುಣಗ್ರಾಹಕತೆ ೨ ವೀರಶೈವರಲ್ಲಿ ಆರ್ಯ ಸಂಸ್ಕೃತಿಯಿಲ್ಲ. ೩ ಶ್ರೀ ರೇಣುಕಾಚಾರ್ಯನು ಶಿವಯೋಗಿ ಶಾಂತಿಮಯ್ಯನ ಮಗ. ಇವನು ವೀರಶೈವ ಮತಸ್ಥಾಪಕನಲ್ಲ. ೪ ಸುಗ್ಗಲಾದೇವಿಯ ಗುರುವಾದ ದೇವರ ದಾಸಿಮಯ್ಯನು ವೀರಶೈವನಲ್ಲ. ೫ ಕಾಳಾಮುಖನೊಲಕುಲೀಶನೋ ಆಗಿರಬಹುದು ೫ ಆಂಧ್ರ, ದ್ರಾವಿಡ ಕವಿಗಳು ವೀರಶೈವರಲ್ಲ. ಕೇವಲ ಶೈವರು. ೬ ಬಸವೇಶನಿಗೆ ಮೊದಲು ಯಾವ ವೀರಶೈವನೂ ಇರಲಿಲ್ಲ ೭. ಬಸವೇಶ್ವರನೇ ಮತಸ್ಥಾಪಕ.

ಈ ವಿಷಯಗಳನ್ನೆಲ್ಲಾ ಒಂದೊಂದಾಗಿ ಚರ್ಚಿಸೋಣ. ಆಗ ವಾದವ ಸತ್ಯಾಸತ್ಯ, ಬಲಾಬಲಗಳು ತಾವಾಗಿಯೇ ಹೊರಬೀಳುವವು.

### ಗುಣಗ್ರಾಹಕತೆ.

ಶ್ರೀ ಕುಮಾರರು ಗುಣಗ್ರಾಹಿಗಳೂ, ವಿದ್ವತ್ಪಕ್ಷಪಾತಿಗಳೂ ಎಂದು ಅವರ ಲೇಖನದಿಂದ ಸುಲಭವಾಗಿಯೇ ತಿಳಿದು ಬರುತ್ತದೆ. ರಾಷ್ಟ್ರವಾಂಕ ಪಂಡಿತನ ಮತದಂತೆ ಇಂತಹ 'ರಸಿಕರ' ೃನಾಂಶೀಭೂತರೆಂದು ತಿಳಿದುಬರುತ್ತದೆ. ಶತ್ರುವಿನಲ್ಲೂ, ಪ್ರತಿವಾದಿಯಲ್ಲೂ ಗುಣವನ್ನು ಗ್ರಹಿಸುವವರು ಲೋಕದಲ್ಲಿ ವಿರಳ. ಹಾಗೆ ಗ್ರಹಿಸುವವರೇ ಸಜ್ಜನರೂ ವಂದ್ಯರೂ ಎನ್ನಿಸಿಕೊಳ್ಳುವರು. ವ್ಯಾಖ್ಯಾತನ ಗುಣವನ್ನು ಇಮ್ಮಡಿ ಮುಮ್ಮಡಿಯಾಗಿ ಹೊಗಳಿ ತಮ್ಮ ಸಹೃದಯತೆಯನ್ನು ವ್ಯಕ್ತಪಡಿಸಿದ್ದಾರೆ. ಇವರ ಈ ಪದ್ಧತಿಯು ಇತರರಿಗೂ ಅನುಕರಣೀಯವಾಗಿದೆ ಇದಕ್ಕಾಗಿ ನಾನು ಕುಮಾರರನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ.

ವೀರಶೈವ ಮತಸ್ಥಾಪಕರಾರು? ಎಂಬ ವಿಷಯವಾಗಿ ಲಿಂಗವಂತ ಪಂಡಿತರಲ್ಲಿ ಉಗ್ರವಾದ ಮತಭೇದವಿದೆ. ಅಂತೆಯೇ ಅನೇಕ ಮತತತ್ವಗಳ ವಿಷಯದಲ್ಲಿಯೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳುಂಟಾಗಿವೆ ಎಲ್ಲ ಪಕ್ಷದ ವಿದ್ವಾಂಸರೂ ಒಂದೆಡೆ ಸೇರಿ ಪರಸ್ಪರ ವಿಚಾರನಿನಿಮಯ ಮಾಡಿ ಶಾಸ್ತ್ರಸಿದ್ಧವಾದ, ಕಾಲೋಚಿತವಾದ, ಅನೈಕ್ಯತೆಗೆ ಎಡೆಯಾಗದ, ಪ್ರಗತಿಪರವಾದ ಒಂದು ನಿರ್ಧಾರಕ್ಕೆ ಬರಬೇಕಾಗಿದೆ

"ಇದಮಿತ್ಥಂ" ಎಂಬರ್ಥದ ಒಂದು ತೀರ್ಮಾನಕ್ಕೆ ಬರುವವರೆಗೆ ಸಮಾಜಕ್ಕೆ ಕಲ್ಯಾಣವಿಲ್ಲ. ಶಾಂತಿಯಿಲ್ಲ. ಗೌರವವಿಲ್ಲ. ಈ ಮಹತ್ಕಾರ್ಯವನ್ನು ಈಗ ವೀರಶೈವ ಮಹಾಸಭೆಯ ಹೊರತು ಬೇರಾರೂ ಕೈಗೊಂಡು ನಿರ್ವಹಿಸಲಿಕ್ಕಾಗುವದಿಲ್ಲ. ಬೇರೆ ಯಾರು ಕೈಗೊಂಡರೂ ಅದು ನಿಷ್ಪಕ್ಷಪಾತವೂ ಸರ್ವ ಮಾನ್ಯವೂ ಆಗುವುದಿಲ್ಲ. ವೀರಶೈವ ಸಮಾಜದ ಹಿರಿಯರೆಲ್ಲರೂ ಈ ಕಡೆಗೆ ಅವಶ್ಯವಾಗಿ ಗಮನಿಸಬೇಕಾಗಿದೆ.

### ವೀರಶೈವರಲ್ಲಿ ಆರ್ಯ ಸಂಸ್ಕೃತಿಯಿಲ್ಲವೆ?

"ವೀರಶೈವ ಮತವು ದ್ರಾವಿಡ ಸಭ್ಯತೆಗೆ ಸೇರಿದುದು" ಎಂಬುದಾಗಿ ಶ್ರೀ ಕುಮಾರರು ನಿರ್ಧರಿಸಿದ್ದಾರೆ. ವೀರಶೈವ ತತ್ವಜ್ಞಾನವನ್ನೂ ಸಮಾಜದ ಆಚಾರ ವಿಚಾರಗಳನ್ನೂ ವೀರಶೈವ ಕವಿಪ್ರೌಢ ಗ್ರಂಥಗಳನ್ನೂ ವಿಮರ್ಶಿಸಿದರೆ ವೀರಶೈವರಲ್ಲಿ ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳ ಮಿಶ್ರಣವಿದೆಯೆಂದು ಕಂಡುಬರುತ್ತದೆ. ಕುಮಾರರೇ ಹೇಳುವಂತೆ ಆಗಮಗಳು ದ್ರಾವಿಡರ ತತ್ವಜ್ಞಾನ. ವೇದಗಳು ಆರ್ಯರ ತತ್ವಜ್ಞಾನ. ಈ ಎರಡೂ ವಾಙ್ಮಯದ ಸಾರವೂ ನಮ್ಮಿ ತತ್ವಜ್ಞಾನದಲ್ಲಿ ಜೀರ್ಣಗೊಂಡಿದೆ. ದ್ರಾವಿಡರಾಗಲಿ, ಆರ್ಯರಾಗಲಿ ಸಂಪೂರ್ಣ ನಿರ್ದೋಷಿಗಳಲ್ಲ. ಆ ಉಭಯರ ತತ್ವಜ್ಞಾನದಲ್ಲಿಯೂ ಆಚಾರ ವಿಚಾರಗಳಲ್ಲಿಯೂ ಸ್ವೀಕರಿಸತಕ್ಕ ಮತ್ತು ತ್ಯಜಿಸತಕ್ಕ ಅಂಶಗಳುಂಟೇ ಉಂಟು. ವೇದ ವಾಙ್ಮಯದಲ್ಲಿರುವ ಹಿಂಸಾತ್ಮಕವಾದ, ನಿರರ್ಥಕವಾದ ಕರ್ಮ ಕಾಂಡವನ್ನು ಬಿಟ್ಟು ಕೇವಲ ಜ್ಞಾನ ಕಾಂಡವನ್ನು ಮಾತ್ರ ನಮ್ಮ ವಿಭೂತಿಗಳೂ ಕವಿಗಳೂ ಸ್ವೀಕರಿಸಿದ್ದಾರೆ ಹಾಗೆಯೇ ಆರ್ಯರ ಪಕ್ಷಪಾತಮಯವಾದ ವರ್ಣವಿಭಾಗವನ್ನು ತಿರಸ್ಕರಿಸಿದ್ದಾರೆ. ಶ್ರೀ ಬಸವಾದಿ ಪ್ರಮುಥರೂ ತಮ್ಮ ವಚನಗಳಲ್ಲಿ ವೇದ, ಆಗಮಗಳ ಉಪಯುಕ್ತವಾದಂಶವನ್ನೆಲ್ಲಾ ಸ್ವೀಕರಿಸಿದ್ದಾರೆ ಉದಾಹರಣೆಗಾಗಿ ಶ್ರೀ ಬಸವೇಶ್ವರನೇ ದೇವರು ಒಬ್ಬನೇ ಎಂಬುದನ್ನು ಸಿದ್ಧಮಾಡುವಾಗ ವೇದಸಾಕ್ಷಿಯನ್ನು ಮುಂದಿನ ವಚನದಲ್ಲಿ ಸ್ವೀಕರಿಸಿರುವನು.

"ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ ದೇವನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿನೋಡಾ. ಕೂಡಲ ಸಂಗಮದೇವನೊಬ್ಬನಲ್ಲದಿಲ್ಲೆಂದಿತ್ತು ವೇದ"

ಶ್ರೀ ಬಸವೇಶ್ವರನು ವೇದ, ಆಗಮ, ಪುರಾಣ, ಇತಿಹಾಸಗಳ ಸಾರವನ್ನೆಲ್ಲಾ ತನ್ನ ವಚನದಲ್ಲಿ ಸಂಗ್ರಹಿಸಿದ್ದಾನೆ. ಎಲ್ಲಿ ನಿಸ್ಸಾರವಾದ ವಿಷಯ ಬರುತ್ತದೋ ಅಲ್ಲಿ ವೇದ, ಆಗಮ ಎರಡನ್ನೂ ತಿರಸ್ಕಾರ ಮಾಡಿದ್ದಾನೆ ಕೇವಲ ಇತಿಹಾಸನಾದ ಮಹಾಭಾರತದಿಂದಲೂ ಆಧಾರವನ್ನು ಸ್ವೀಕರಿಸಿದ್ದಾನೆ. ವಿಪ್ರರು ವೇದಕ್ಕೆ ಸರಿಯಾಗಿ ಅರ್ಥ ತಿಳಿಯದೆ ಪ್ರಾಣಿಹಿಂಸೆ ಮಾಡುವರೆಂದು ಟೀಕಿಸಿ ವೇದಸಾರಭೂತವಾದ "ಪಂಚಾಕ್ಷರಿ ಮಂತ್ರ"ವನ್ನು ಬಹಳವಾಗಿ ಹೊಗಳಿದ್ದಾನೆ ವೇದದಲ್ಲಿ 'ರುದ್ರ' ನೇ ಅಧಿಕನೆಂದೂ ವಿಷ್ಣು, ಬ್ರಹ್ಮ, ಇಂದ್ರಾದಿಗಳು ಅವನಿಗೆ ಸರಿಬರಲಾರರೆಂದೂ ವೇದ ಮಂತ್ರಗಳಿಂದಲೇ ಸಿದ್ಧಮಾಡಿದ್ದಾನೆ. ಉದಾಹರಣೆ— "ಓಂ ನಮಃ ಶಿವಾಯ ಎಂಬ ಮಂತ್ರವ ವಿಸ್ತಾರಮ್ಮದೆ ನಿಂದವು ವೇದ..... ಶಾಸ್ತ್ರ.... ತರ್ಕ ಭಯಂಕರ ಭ್ರಮೆಗೊಂಡಿತ್ತು" ವೇದಸ್ವಯಂಭು ವೆಂಬವಾದಿ ನೀ ಕೇಳಿಲವೋ? ಎಲೋದೇವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಓಂ ದ್ಯಾವಾ ಭೂಮಿ ಜನಯನ್ ದೇವ ಏಕವ ರುದ್ರ ನ ದ್ವಿತೀಯನೆಂದು ಪಂಬುವುದು ಕಾಣಿ

ರಣ್ಣ, ಚಕಿತನಾಭಿದತ್ತೆ ಎಂದು ಶ್ರುತಿ ಸಾರುತ್ತಿದ್ದಾವೆ. 'ಶ್ರುತಿತತಿಯ ಮೇಲೆ ಅತ್ಯತಿಷ್ಠದ್ದಶಾಂಗುಲವ ನಾನೇನೆಂಬೆನಯ್ಯ. ಅಣೋರಣೀಯಾನ್ ಮ.ಹತೋ ಮಹೀಯಾನ್ ಮಹಾದಾನಿ ಕೂಡಲ ಸಂಗಮದೇವ. "ಎತ್ತೆತ್ತ ನೋಡಿದಡೆ ಅತ್ತತ್ತ ನೀನೇ ದೇವ, ಸಕಲ ವಿಸ್ತಾರದ ರೂಹು ನೀನೇ ದೇವ, ವಿಶ್ವತೋ ಬಾಹು ನೀನೇ ದೇವ ವಿಶ್ವತೋ ಚಕ್ಷು ನೀನೇ ದೇವ, ವಿಶ್ವತೋಮುಖ ನೀನೇ ದೇವ, ವಿಶ್ವತೋ ಪಾದ ನೀನೇ ದೇವ ಕೂಡಲ ಸಂಗಮದೇವ" "ರುದ್ರ ಮುಖವೆಲ್ಲಿ, ವಿಷ್ಣು ಭುಜದಲ್ಲಿ ಜಂಘೆಯಲ್ಲಿ ಅಜನ ಜನನವು..... ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತ, ನಮ್ಮ ಕೂಡಲ ಸಂಗಯ್ಯ" "ವಿಶ್ವಾಧಿಕೋ ರುದ್ರನ, ಹೊಗಳುವ ಶ್ರುತಿಗಳು "ವಿಶ್ವರೂಪಾಯ ವೈ ನಮಃ" ಪರಮರೂಪಿನೇ ನಮೋ ಪರತತ್ವನೇ ನಮೋ ಆದಿಯಾರೂಢ ಭಯಂಕರನೇ ನಮೋ. ಹರಿಯನು ಹರಿಸಿದನೆಂದು ಶ್ರುತಿ ಸಾರುತ್ತಿರಲು ಸಂಹಾರ ಕಾರಣನೇ ನಮೋ ನಮ್ಮ ಕೂಡಲ ಸಂಗಮದೇವರ ಮಹಾನ್ಮಹ ದ್ಭ್ಯೋ ನಮಃ" ಇತ್ಯಾದಿಯಾಗಿ ಪುರುಷ ಸೂಕ್ತ, ರುದ್ರ ಸೂಕ್ತಗಳ ಸಾರವನ್ನೇ ಬಸವೇಶ್ವರನು ಹಾಡಿರುವನು. ವೇದಾಗಮಗಳ ಅರ್ಥ ತಿಳಿಯದವರನ್ನು ಕುರಿತು "ವೇದ ಶ್ರುತಿಗಳ ತಿಳಿಯಲರಿಯದೆ ವಾದವ ಮಾಡುವರಲ್ಲಾ!" ಎಂದು ಮರುಗಿರುವನು. ಹಾಗೆಯೇ ವೇದಾಗಮಗಳಲ್ಲಿ ತಲೆ ಬೇಸರವನ್ನುಂಟುಮಾಡುವ ಪ್ರಸಂಗವನ್ನು ಕುರಿತು "ವೇದಬಲ್ಲಿತ್ತೆಂಬೆನೆ? ನಾನಾ ಮುಖದಲ್ಲಿ ಸ್ತುತಿ ಮಾಡಿಸಿತಲ್ಲದೆ, ಪುರಾಣವ ಬಲ್ಲಿತ್ತೆಂಬೆನೆ? ಆಗಮವ ಒಲ್ಲಿತ್ತೆಂಬೆನೆ ಮಾಯವ ಹೊಂದಿತ್ತು." ಎಂಬ ವಚನದಲ್ಲಿ ವೇದಾಗಮ ಪುರಾಣವನ್ನು ಒಂದೇ ಧಾಟಿಯಲ್ಲಿ ಟೀಕಿಸಿರುವನು.

ಕುಲ ಮದದಿಂದ ತಲೆ ಮೆರೆವನರಿಗೆ ಬುದ್ಧಿವಾದವನ್ನು ಹೇಳುವುದಕ್ಕಾಗಿ "ಜನ್ಮನಾಜಾಯತೇಶೂದ್ರಃ ಕರ್ಮಣಾದ್ವಿಜ ಉಚ್ಯತೆ| ವೇದಾಭ್ಯಾಸೇನ ವಿಪ್ರಸ್ಯಾತ್ ಬ್ರಹ್ಮವಿದ್ ಬ್ರಾಹ್ಮಣೋ ಭವೇತ್"|| ಎಂಬ ಮಹಾಭಾರತ ವಚನದಿಂದ ಸನಾತನ ಧರ್ಮದ ತಿರುಳನ್ನು ಬೋಧಿಸಿ, ವೀರಶೈವ ಸಮಾಜದಲ್ಲಿ ವರ್ಣಗಳನ್ನು ಕಲ್ಪಿಸಿ ಇಲ್ಲದ ಗೊಂದಲವನ್ನುಂಟುಮಾಡುವವರಿಗೆ ನಿಜವಾದ ವೀರಶೈವದ ಮಾರ್ಗವನ್ನು ಅರುಹುವುದಕ್ಕಾಗಿ "ವರ್ಣಾನಾಂ ಕಿಂ ಪ್ರಯೋಜನಂ" ಎಂಬ ಆಗಮ ವಾಕ್ಯದ ಮೂಲಕ ಜ್ಞಾನೋಪದೇಶವನ್ನೂ ಮಾಡಿರುವನು.

ಈ ಪ್ರಕಾರ ಶ್ರೀ ಬಸವೇಶ್ವರನ ವಚನವು ನಿಗಮಾಗಮ ಸಾರಭೂತವಾಗಿದ್ದು ಆರ್ಯರ, ದ್ರಾವಿಡರ ತತ್ವಜ್ಞಾನದ ಸಾರವನ್ನೆಲ್ಲ ಒಳಗೊಂಡಿದೆ. ಗಣಭಾಷ್ಯ ರತ್ನಮಾಲೆಯನ್ನು ಬರೆದ ಗುಬ್ಬಿಯ ಮಲ್ಲಣಾರ್ಯನು ಶಿವಶರಣರ ವಚನಗಳನ್ನು ಸಮರ್ಥಿಸುವಾಗ ಆಗಮಗಳನ್ನು ಸಾಕ್ಷಿ ಕೊಟ್ಟಿರುವನು. ಅಲ್ಲದೆ ಶ್ರೀ ಮನ್ನಂಜಣಾರ್ಯನು " ವೇದಾಂತಸಾರ ವೀರಶೈವ ಚಿಂತಾಮಣಿ " ಎಂಬ ಗ್ರಂಥದಲ್ಲಿ ವೀರಶೈವ ತತ್ವಗಳು ವೇದಾಂತ ಸಾರವೆಂದು ಸಿದ್ಧ ಮಾಡಿರುವನು. ಶ್ರೀ ನಂದೀಶೇಶ್ವರ ಶಿವಾಚಾರ್ಯನು ಲಿಂಗಧಾರಣವು ವೇದ ಸಮ್ಮತವೆಂಬುದನ್ನು ತನ್ನ ಅವಾರ ನೈದುಷ್ಯದಿಂದ ತನ್ನ " ಲಿಂಗಧಾರಣ ಚಂದ್ರಿಕೆ " ಯೆಂಬ ಗ್ರಂಥದಲ್ಲಿ ಸಿದ್ಧಮಾಡಿರುವನು. ಸೋಸಲೆ ರೇವಣಾರಾಧ್ಯನು ತನ್ನ " ಚೋಳ ರೇಣುಕ ಸಂವಾದ"ದಲ್ಲಿ ಭಗವದ್ಗೀತೆಯಲ್ಲಿ ಸಹ ವೀರಶೈವ ಮತವು ಉಂಟೆಂಬುದನ್ನು ತೋರಿಸಲು ಹೆಣಗಾಡಿರುವನು. ಶ್ರೀಕರಾಚಾರ್ಯನು ವೇದಾಂತ ಸೂತ್ರಗಳಲ್ಲಿ ವೀರಶೈವ ಮತವುಂಟೆಂದು ಸಿದ್ಧ ಮಾಡಿರುವನು. ವೃಷಭ ಪಂಡಿತ ಶಿವಾಚಾರ್ಯನು " ಮಹಾನಾಣಯಸೋಪನಿಷತ್ತಿಗೆ ವೀರಶೈವ ಪರವಾದ ಅರ್ಥ ಬರೆದಿರುವನು. ಹೀಗೆಯೇ ಅಸಂಖ್ಯ ಶಿವಶರಣರು ವೇದಾಗಮಗಳನ್ನು ಸಮಾನವಾಗಿ ಸ್ವೀಕರಿಸಿ ಬಸವೇಶ್ವರನ ಮಾರ್ಗದಲ್ಲಿಯೇ ನಡೆದಿರುವರು. ವೀರಶೈವ ಪಂಡಿತರು 'ಪುರುಷಸೂಕ್ತ' ಶ್ರೀ ರುದ್ರ ಮೊದಲಾದ ಮಂತ್ರಗಳಿಗೆ ವೀರಶೈವ ಪರವಾಗಿ ಅರ್ಥ ಬರೆದಿರುವರು. ಶ್ರೀ ನಿಜಗುಣ ಶಿವಯೋಗಿಯು "ವೇದವಿಧಿ ಭಕ್ತಿಗಳನಗಲದಿರು" ಎಂದು ಉಪದೇಶಿಸಿರುವನು. ಮಹಾಕವಿ ಷಡಕ್ಷರದೇವನು " ಪಂಚಾಕ್ಷರೀ ಮಂತ್ರವು ವೇದಸಾರ" ವೆಂದು ಹೇಳಿರುವನು. ಸಿದ್ಧಾಂತ ಶಿಖಾಮಣಿ ಕರ್ತೃವಾದ ಶಿವಯೋಗಿ ಶಿವಾಚಾರ್ಯನು " ರೇಣುಕಾಗಸ್ತ್ಯ ಸಂವಾದಂ ನಿಗಮಾಗಮ ವಿಶ್ರುತಂ" ಆಂದರೆ ರೇಣುಕಾಗಸ್ತ್ಯ ಸಂವಾದರೂಪವಾದ ಈ ಗ್ರಂಥವು ವೇದ ಮತ್ತು ಆಗಮಗಳೆರಡಕ್ಕೂ ಸಮ್ಮತವೆಂದು ಹೇಳಿರುವನು. ಹೀಗೆ ವೀರಶೈವ ಶರಣರು, ಕವಿಗಳು, ಭಾಷ್ಯಕಾರರು ಎಲ್ಲರೂ ವೀರಶೈವ ತತ್ವಜ್ಞಾನವು ವೇದ, ಆಗಮ ಇವುಗಳ ಸಾರವೆಂದೇ ಅಭಿಪ್ರಾಯ ಪಟ್ಟಿದ್ದಾರೆ. ಬಸವೇಶ್ವರನ ಹೃದಯವಾದರೂ ಹೀಗಿರಲೇ ಇದೆಯೆಂಬುದು ಆ ಮಹಾತ್ಮನ ವಚನಗಳನ್ನು ಓದಿದವರಿಗೆ ಮಂದಟ್ಟಾಗುವಂತಿದೆ.

ವೀರಶೈವ ಮತವನ್ನು " ತಾಂತ್ರಿಕ ವೈದಿತ " ಮತವೆಂದು ಕರೆವುದರ ಭಾವವಾದರೂ ಇದೇ ಆಗಿದೆ. ವೀರಶೈವರು ಆರ್ಯರಲ್ಲಿದ್ದ ಪ್ರಾಣಿಹಿಂಸೆಯನ್ನು ತಿರಸ್ಕರಿಸಿದಂತೆಯೇ ದ್ರಾವಿಡರ ಕ್ಷುದ್ರ ದೇವತೋಪಾಸನೆ, ಹಲವು ದೈವಗಳ ಪೂಜೆ ಮೊದಲಾದ ಆಚಾರಗಳನ್ನೂ ಖಂಡಿಸಿರುವರು. ವಚನಕಾರರೂ ಈ ಕ್ಷುದ್ರ ಪದ್ಧತಿಗಳನ್ನೂ ಖಂಡಿಸಿರುವರು. ಆರ್ಯರ ತತ್ವಜ್ಞಾನ, ದ್ರಾವಿಡರ ಭಕ್ತಿ ಮಾರ್ಗ ಮತ್ತು ಮೂರ್ತಿಪೂಜೆ ಈ ಎಲ್ಲ ಗುಣಗಳೂ ವೀರಶೈವರಲ್ಲಿ ಸೇರಿಕೊಂಡಿವೆ. ಆದುದರಿಂದ ವೀರಶೈವವು ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳ ಸಾರವೆಂದು ತಿಳಿಯುವುದೇ ಯುಕ್ತವಾಗಿದೆ.

ಶ್ರೀ ಕುಮಾರರು ಇಷ್ಟಕ್ಕೂ ಒಪ್ಪದೆ ಕೇವಲ ದ್ರಾವಿಡ ಸಂಸ್ಕೃತಿಯೇ ಎಂದು ವಾದಿಸುವುದಾದರೆ ಈ ಮುಂದೆ ಕೇಳುವ ಪ್ರಶ್ನೆಗಳಿಗೆ ಸಮಾಧಾನ ಕೊಡಬೇಕಾಗುತ್ತದೆ.

೧ ವೀರಶೈವರ ಪ್ರಣವ ಪಂಚಾಕ್ಷರಿಯು ವೇದದಿಂದ ಸಂಗ್ರಹಿಸಿದ್ದೇ? ಇಲ್ಲವೇ? ಮಂತ್ರವಿಲ್ಲದೆ ಅನ್ಯಾವರಣವು ಸಿದ್ಧಿಸುತ್ತದೆಯೇ?

೨ ತಮಗೆ ಸಮ್ಮತವಲ್ಲದ ವೇದವಾಜ್ಞೆಯದಿಂದ ಪ್ರಮಥರು, ಕವಿಗಳು, ಭಾಷ್ಯಕಾರರು ಆಧಾರಗಳನ್ನೇಕೆ ಸ್ವೀಕರಿಸಿದರು?

೩ ಏನೋ ಸ್ವೀಕರಿಸಿದರೆಂದರೆ ಜೈನ, ಬೌದ್ಧ ವಾಜ್ಞೆಯದಿಂದ ಪ್ರಮಾಣವನ್ನು ಸಂಗ್ರಹಿಸಿಲ್ಲವೇಕೆ?

೪ ರುದ್ರಾಕ್ಷಿ ಧಾರಣ ಪದ್ಧತಿಯು ದ್ರಾವಿಡರದೋ ಆರ್ಯರದೋ? ದಕ್ಷಿಣ ಹಿಂದುಸ್ಥಾನದಲ್ಲಿಲ್ಲದ ಈ ಮಣಿಗಳ ಧಾರಣೆಯನ್ನು ದ್ರಾವಿಡರು ಯಾರಿಂದ ಕಲಿತರು?

೫ ವೀರಶೈವರಿಗೆ ಲಿಂಗಧಾರಣೆ, ದೀಕ್ಷೆ, ವಿವಾಹಾದಿ ದಶಕರ್ಮಗಳು ಅವಶ್ಯವೆಂದು ಒಪ್ಪುವಿರಾ? ಒಪ್ಪುವಿರಾದರೆ ಈ ಸಂಸ್ಕಾರಗಳನ್ನು ಮಾಡುವಾಗ ವೇದ ಮಂತ್ರವನ್ನು ಉಪಯೋಗಿಸುವಿರಾ? ಇಲ್ಲವಾದರೆ ಯಾವ ವಾಜ್ಞೆಯದಿಂದ ನಿರ್ವಹಿಸುವಿರಿ? ಇದು ವರೆಗೂ ವೇದ ಮಂತ್ರಗಳ ಮೂಲಕ ಆ ಸಂಸ್ಕಾರ ನಿರ್ವಹಿಸುತ್ತಿರುವ ವೀರಶೈವರ ಗತಿಯೇನು?

೬ ಇಂದಿನ ಹಿಂದೂ ಸಮಾಜದಲ್ಲಿ ಆರ್ಯ ದ್ರಾವಿಡ ಸಂಸ್ಕೃತಿಗಳೆರಡೂ ಹಾಸು ಹೊಕ್ಕಾಗಿ ಸೇರಿರುವವೆಂಬ ವಿದ್ವಾಂಸರ ಮತ ತಮಗೆ ಸಮ್ಮತವೇ?

೭ ವೀರಶೈವ ಸಮಾಜವು ಹಿಂದೂ ಸಮಾಜದಲ್ಲಿ (ಸನಾತನ ಧರ್ಮದಲ್ಲಿ) ಸೇರಿದುದೇ ತಪ್ಪಿನವಾದುದೆ?

೮ ನೀವು ಪ್ರತಿಪಾದಿಸುವ ಮತವು ವೀರಶೈವವೆ? ಬಸವೇಶ್ವರನಿಗಿಂತಲೂ ಮೊದಲು ಗುರು ಲಿಂಗ ಜಂಗಮಕ್ಕೆ ಯಾವ ಅರ್ಥವಿತ್ತು? ಲಿಂಗಾಯತ, ವೀರಶೈವ ಎಂಬ ಎರಡು ಶಬ್ದಗಳೂ ಸಮಾನವಾಚಕವೇ? ಭಿನ್ನ ವಾಚಕವೇ?

ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ದಯಪಾಲಿಸಿ "ಅದಷ್ಟು ಬೇಗ ತಿದ್ದಿಕೊಳ್ಳುವುದಕ್ಕೆ" ಸಹಾಯಕರಾಗುವಿರೆಂದು ನಂಬಿರುವೆನು.

ಶರಣರ ವಚನ ಗ್ರಂಥಗಳೂ ವೇದಾಗಮ ಧರ್ಮ ಗ್ರಂಥಗಳಂತೆ ವೀರಶೈವರಿಗೆ ಪರಮ ಪ್ರಮಾಣವೆಂದು ನಾನು ನನ್ನ ವ್ಯಾಖ್ಯಾನದಲ್ಲಿ ಒಪ್ಪಿಕೊಂಡಿರುವೆನು. ನಮ್ಮ ಪ್ರಾಚೀನರಾದ ಕವಿಗಳೂ ಹೀಗೆಯೇ ಒಪ್ಪಿಕೊಂಡಿದ್ದಾರೆ. ಆದರೆ ಶ್ರೀ ಕುಮಾರರ ಭಾವದಂತೆ ವೇದ, ಆಗಮ, ಧರ್ಮ ಗ್ರಂಥ, ವೀರಶೈವ ಪುರಾಣ ಮೊದಲಾದ ವಾಙ್ಮಯಕ್ಕಿಂತಲೂ ವಚನಗಳು ಮಿಗಿಲೆಂದೂ ಮಿಕ್ಕವುಗಳು ಸಾಮಾನ್ಯವೆಂದೂ ಒಪ್ಪಿಕೊಳ್ಳಲಾರೆನು. ಹೀಗೆ ಆಗಮಾದಿಗಳಿಗೆ ನ್ಯೂನ್ಯತೆಯನ್ನೂ ವಚನಗಳಿಗೆ ಶ್ರೇಷ್ಠತೆಯನ್ನೂ ಕಲ್ಪಿಸುವುದು ನ್ಯಾಯವಲ್ಲವೆಂದೂ ಪಕ್ಷಾಭಿಮಾನ ದ್ವೇಷಗಳಿಂದೂ ಈ ಲೇಖಕನು ತಿಳಿದಿದ್ದಾನೆ.

(ಮುಂದುವರಿಯುವದು.)

## ಕನ್ನಡ ಸಾಹಿತ್ಯ ಸಮ್ಮೇಳನ.

### ರಾಯಚೂರಿನಲ್ಲಿ, ಡಿಸೆಂಬರ್ ಕಡೆಯಲ್ಲಿ

೨೦ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಹೈದರಾಬಾದು ಸಂಸ್ಥಾನದಲ್ಲಿರುವ ರಾಯಚೂರು ನಗರದಲ್ಲಿ ೧೯೩೪ ನೆಯ ಡಿಸೆಂಬರ್ ೨೮-೨೯-೩೦ ನೆಯ ತಾರೀಖು (ಶುಕ್ರವಾರ, ಶನಿವಾರ, ಭಾನುವಾರ) ಗಳಲ್ಲಿ ನಡೆಯುವಂತೆ ಏರ್ಪಾಟಾಗಿದೆ. ಅಲ್ಲಿಯ ಪ್ರಸಿದ್ಧ ವಕೀಲರಾದ **ಶ್ರೀಮಾನ್ ಗುಡಿಹಾಳ ಹನುಮಂತರಾವ್ ದೇಶಪಾಂಡೆ** ಅವರ ನೇತೃತ್ವದಲ್ಲಿ ಸ್ವಾಗತ ಮಂಡಲಿ ಏರ್ಪಟ್ಟು ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನು ಸಂಭ್ರಮದಿಂದ ಸಿದ್ಧಗೊಳಿಸುತ್ತಿದೆ.

ಸುಪ್ರಸಿದ್ಧ ಸಾಹಿತಿಗಳಾದ ಮಂಗಳೂರ **ಶ್ರೀಮಾನ್ ಪಂಜೆ ಮಂಗೇಶರಾವ್**, ಬಿ. ಎ. ಎಲ್. ಟಿ. ರವರು ಅಧ್ಯಕ್ಷ ಸ್ಥಾನವನ್ನು ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಸಮ್ಮೇಳನದಲ್ಲಿ ಪ್ರಬಂಧಗಳನ್ನೋದಬೇಕೆಂದಾಗಲಿ, ನಿರ್ಣಯಗಳನ್ನು ಸೂಚಿಸಬೇಕೆಂದಾಗಲಿ, ಕೀರ್ತನ ಕಾವ್ಯ ವಾಚನ ನಾಟ್ಯ ಮೊದಲಾದವುಗಳನ್ನು ನಡಿಸಬೇಕೆಂದಾಗಲಿ, ಅಥವಾ ಆ ಕಾಲದಲ್ಲಿ ಬೇರೆ ಸಭೆ ಪ್ರದರ್ಶನ ಮೊದಲಾದವುಗಳನ್ನು ಸೇರಿಸಬೇಕೆಂದಾಗಲಿ ಇಚ್ಛೆಪಡುವವರು ತಮ್ಮ ಉದ್ದೇಶವನ್ನು **೧೯೩೪ ರ ಅಕ್ಟೋಬರ್ ೩೦** ರೊಳಗಾಗಿ ಬೆಂಗಳೂರಲ್ಲಿರುವ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯವರಿಗಾಗಲಿ ಅಥವಾ ರಾಯಚೂರಿನಲ್ಲಿರುವ ಸ್ವಾಗತ ಮಂಡಲಿಯ ಕಾರ್ಯದರ್ಶಿಯವರಿಗಾಗಲಿ ತಿಳಿಯಪಡಿಸಬೇಕೆಂದು ಕೋರಿಕೆ. ಈ ಬಗ್ಗೆ ಏರ್ಪಟ್ಟಿರುವ ನಿಯಮಗಳನ್ನು ಈ ಕೆಳಗೆ ಕೊಟ್ಟಿದೆ.

ನಿಜಾಂ ಕರ್ನಾಟಕದಲ್ಲಿರುವ ನಮ್ಮ ಭಾಷಾಬಂಧುಗಳು ಈ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆಯಬೇಕೆಂದು ಆತಿಥ್ಯವಹಿಸಿಕೊಂಡು ಉತ್ಸಾಹದಿಂದ ಏರ್ಪಾಟುಗಳನ್ನು ನಡೆಸುತ್ತಿದ್ದಾರೆ. ಸಮಸ್ತ ಕರ್ನಾಟಕದ ನಾನಾ ಭಾಗಗಳಲ್ಲಿಯ ದೇಶಭಕ್ತರೂ, ಭಾಷಾಭಿಮಾನಿಗಳೂ, ಸಾಹಿತ್ಯೋಪಾಸಕರೂ, ಕಲಾಭಿಜ್ಞರೂ ಸಮ್ಮೇಳನಕ್ಕೆ ಬರುವರೆಂದು ರಾಯಚೂರಿನ ಸ್ವಾಗತಮಂಡಲಿಯು ನಿರೀಕ್ಷಿಸಿಕೊಂಡಿದೆ. ಕನ್ನಡ ನಾಡಿನ ಎಲ್ಲ ಪ್ರಾಂತಗಳಿಂದಲೂ ಮಹಾಜನರು ತಂಡೋಪತಂಡವಾಗಿ ರಾಯಚೂರಿಗೆ ದಯಮಾಡಿಬಂದು, ಸಮ್ಮೇಳನ ಕಾರ್ಯದಲ್ಲಿ ಭಾಗಿಗಳಾಗಿ, ತಾಯ್ನುಡಿಯ ಕೆಲಸಕ್ಕೆ ಬೆಂಬಲಕೊಡಬೇಕೆಂದು ಕರ್ನಾಟಕ ಸಾಹಿತ್ಯ ಪರಿಷತ್ತು ಮನಃಪೂರ್ವಕವಾಗಿ ಪ್ರಾರ್ಥಿಸುತ್ತದೆ.

**ಸಿ. ಕೆ ವೆಂಕಟರಾಮಯ್ಯ,**
ಗೌರವ ಕಾರ್ಯದರ್ಶಿ.

## ಯೂಗೋಸ್ಲಾವ್ಹಿಯಾ ಅರಸನ ಕೊಲೆ.

ಯೂಗೋಸ್ಲಾವ್ಹಿಯಾ ದೇಶದ ಅರಸನಾದ ಅಲೇಗ್ಜಾಂಡರ ಎಂಬವನನ್ನು ಫ್ರಾನ್ಸಿನ ಮಾರ್ಸೆಲ್ಲ ಪಟ್ಟಣದಲ್ಲಿ ಕೊಲೆ ಮಾಡಲಾಯಿತು. ಕೊಲೆ ಮಾಡಿದವನು ೩೪ ವರ್ಷದ ಕ್ರೋಟೀನ ವರ್ತಕನು. ರಾಜನು ಫ್ರಾನ್ಸಿನ ಪರರಾಷ್ಟ್ರ ಮಂತ್ರಿಯಾದ ಮಿ. ಬಾರ್ಥೋರವರೊಡನೆ ಮೋಟಾರಿನಲ್ಲಿ ಕುಳಿತು ಹೋಗುತ್ತಿರುವಾಗ ಕೊಲೆಗಡಕನು ಜನಸಮೂಹವನ್ನು ಹಿಂದಕ್ಕೆ ಸರಿಸಿ, ಪೋಲೀಸರನ್ನು ದಾಟಿ ಮೋಟಾರನ್ನು ಏರಿ ಒಮ್ಮೆಲೆ ಆರು ಗುಂಡು ಹಾರಿಸಿದನು. ಮೂರು ಗುಂಡು ರಾಜನಿಗೆ ಬಡಿದದ್ದರಿಂದ ಅವನು ತೀವ್ರವೇ ಮರಣಹೊಂದಿದನು. ಮಿ. ಬಾರ್ಥೋರವರಿಗೆ ಹೊಟ್ಟೆಯಲ್ಲಿ ಒಂದು ಗುಂಡು ಬಡಿದದ್ದರಿಂದ ಅದನ್ನು ತೆಗೆಯುವಾಗ್ಗೆ ಅವರೂ ಮೃತಪಟ್ಟರು. ಇದಲ್ಲದೆ ಒಬ್ಬ ಹೆಣ್ಣುಮಗಳೂ ಕೊಲ್ಲಲ್ಪಟ್ಟಳು, ಇಬ್ಬರು ಪೋಲೀಸರಿಗೆ ಗಾಯಗಳಾಗಿವೆ, ರಾಜನ ಸಂರಕ್ಷಕನು ಅವನ ಕುತ್ತಿಗೆಯನ್ನು ಹಿಡಿದು ಖಡ್ಗದಿಂದ ಹೊಡೆದು ಕೆಡವಿದನಂತೆ. ಅವನು ನೆಲದ ಮೇಲೆ ಬಿದ್ದುಕೊಂಡೇ ಹೊಡೆದನಂತೆ. ಮುಂದೆ ಕ್ಷುಬ್ಧರಾದ ಜನರು ಇವನನ್ನು ಗುಂಡುಹಾಕಿ ಕೊಂದರು.

ಮಹಾಯುದ್ಧದ ನಂತರ ಯುಗೋಸ್ಲಾವ್ಹಿಯಾ ದೇಶವು ಸ್ವತಂತ್ರವಾಗಿ ಬಹುಜನ ಸಮ್ಮತಿಯಂತೆ ಈ ರಾಜನಿಗೆ ಪಟ್ಟವಾಯಿತು. ತನ್ನ ದೇಶವು ಪುನಃ ಜರ್ಮನಿ ಮೊದಲಾದ ಯುರೋಪದ ರಾಷ್ಟ್ರಗಳಿಗೆ ಬಲಿಬೀಳಬಾರದೆಂದು ಈ ರಾಜನು ಬಹಳ ಪ್ರಯತ್ನ ನಡಿಸಿದ್ದನು. ಫ್ರಾನ್ಸವು ಆ ಕಾರಣ ಇವನಿಗೆ ಸಹಾಯ ಮಾಡುತ್ತಿದ್ದಿತು. ಮಿ. ಬಾರ್ಥೋರವರು ರಾಷ್ಟ್ರಸಂಘದ ಕಾರ್ಯದಲ್ಲಿ ವಲ್ಲಿಯೂ ಮತ್ತು ಯುದ್ಧನಿವಾರಕ ಸಂಸ್ಥೆಯಲ್ಲಿಯೂ ವ್ಯಾಮಖ್ಯವಾಗಿ ಕೆಲಸ ಮಾಡುತ್ತಿದ್ದರು. ರಾಜನ ಮರಣದಿಂದ ಯುರೋಪದ ವಾತಾವರಣವು ಕ್ಷುಬ್ಧವಾಗಿದೆ.

### ಸರ್ಪಗಳು ಹೇಗೆ ನಿದ್ರಿಸುತ್ತವೆ?

ಸರ್ಪಗಳು ನಿದ್ರೆಮಾಡುವದನ್ನು ಬಹುಸ್ವಲ್ಪ ಜನರು ನೋಡಿರಬಹುದು. ಏಕೆಂದರೆ ಅವು ಮಲಗಿದ್ದರೂ ಮಲಗಿಕೊಂಡಂತೆಯೇ ಕಾಣುವದಿಲ್ಲ. ಇದಕ್ಕೆ ಕಾರಣವೆಂದರೆ ಅವು ನಿದ್ರಿಸುವಾಗ ಎಂದೂ ಕಣ್ಣು ಮುಚ್ಚುವದಿಲ್ಲ. ಕಣ್ಣು ಮುಚ್ಚಿಕೊಳ್ಳಲಿಕ್ಕೆ ಅವುಗಳಿಗೆ ಕಣ್ಣಿನ ರೆಪ್ಪೆಗಳೇ ಇರುವದಿಲ್ಲ. ಅವು ಕಣ್ಣು ತೆರೆದು ನಿದ್ರಿಸುತ್ತಿದ್ದರೂ ಬಹಳೇ ಚಾಣಾಕ್ಷವಾಗಿರುತ್ತವೆ. ಅವುಗಳನ್ನೆಬ್ಬಿಸಲಿಕ್ಕೆ ಸ್ವಲ್ಪವೂ ಸಪ್ಪಳದ ಆವಶ್ಯಕತೆಯಿಲ್ಲ. ಅವುಗಳ ಕಣ್ಣಿನ ಮೇಲೆ ಸ್ವಲ್ಪ ನೆರಳು ಬಿದ್ದರು ಕೂಡಾ ಅವಕ್ಕೆ ಎಚ್ಚರಿಕೆಯುಂಟಾಗುತ್ತದೆ.

—ಸೌ| ಕಮಲಾ ನೆಹರುರವರನ್ನು ಪ್ರಕೃತಿ ಸ್ವಾಸ್ಥ್ಯಕ್ಕಾಗಿ ಛೋವಲಿಗೆ ತೆಗೆದುಕೊಂಡು ಹೋಗಿದ್ದಾರೆ.

# ಅಸೆಂಬ್ಲಿಯ ಮತದಾರರಿಗೆ ಬಿನ್ನಹ.

## ಶ್ರೀ ಹೊಸಮನಿಯವರಿಗೆ ಮತ ಕೊಡಿರಿ.

ಹಿಂದುಸ್ಥಾನದ ಅಸೆಂಬ್ಲಿಯ ಚುನಾವಣೆಗಳ ದಿನಗಳು ಸಮೀಪಿಸಿದವು. ಈ ಚುನಾವಣೆಯ ಕಾಲಕ್ಕೆ ಅದಷ್ಟು ಹೆಚ್ಚು ಕಾಂಗ್ರೆಸ್ಸಿನ ಉಮೇದವಾರರು ಆರಿಸಿ ಬರಬೇಕೆಂದು ಕಾಂಗ್ರೆಸ್ಸಿನವರು ನಿರ್ಧರಿಸಿದ್ದಾರೆ. ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸಿನ ಉಮೇದವಾರರಿಗೆ ತಮ್ಮ ಆಶೀರ್ವಾದಗಳನ್ನು ಕೊಟ್ಟಿದ್ದಾರೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ರತ್ನಾಗಿರಿ, ಮತ್ತು ಕೊಲಾಬಾ ಜಿಲ್ಲೆಗಳ ಪರವಾಗಿ ಆಗುವ ಆಯ್ಕೆಗಾಗಿ ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿ ಶ್ರೀ ಹೊಸಮನಿ ಸಿದ್ಧಪ್ಪನವರು ಹುರಿಯಾಳಾಗಿ ನಿಂತಿದ್ದಾರೆ. ಮತದಾರರೆಲ್ಲರೂ ಅವರಿಗೆ ಬೆಂಬಲವನ್ನು ಕೊಡುವಿರೆಂದು ನಂಬಿದ್ದೇವೆ.

### ಕಾಂಗ್ರೆಸ್ ಸಂಸ್ಥೆಯ ಮಹತ್ವ.

ಕಾಂಗ್ರೆಸ ಸಂಸ್ಥೆಯು ಹುಟ್ಟಿ ಈಗ ೪೯ ವರ್ಷಗಳಾದವು. ಈ ಅವಧಿಯಲ್ಲಿ ದಾದಾಭಾಯಿ ನವರೋಜಿ, ಗೋಖಲೆ, ಲಾಲಾ ಲಜಪತರಾಯ, ಮೋತಿಲಾಲ ನೆಹರು ಮುಂತಾದ ಮುಂದಾಳುಗಳ ನೇತೃತ್ವದಲ್ಲಿ ಕಾಂಗ್ರೆಸ್ ಸಂಸ್ಥೆಯು ಲೋಕೋಪಕಾರಿ ಕಾರ್ಯವನ್ನು ಮಾಡುತ್ತಾ ಬಂದಿದೆ. ಸರಕಾರದ ಅನ್ಯಾಯಗಳನ್ನು ಬೈಲಿಗೆಳೆದು ಪ್ರಜೆಗಳ ಹಕ್ಕುಗಳನ್ನು ಕಾಯ್ದುಕೊಳ್ಳುತ್ತ ಬಂದಿದೆ. ಮುನಸಿಪಾಲಿಟಿ, ಲೋಕಲ್ ಬೋರ್ಡ, ಕಾಯಿದೆ ಕೌನ್ಸಿಲ್ ಇವೆಲ್ಲವುಗಳ ಸ್ಥಾಪನೆಯು ಕಾಂಗ್ರೆಸ್ಸಿನ ಪ್ರಯತ್ನದ ಫಲವಾಗಿದೆ. ಈಗ ಬರಲಿರುವ ಹೊಸ ಸುಧಾರಣೆಗಳೂ ಕಾಂಗ್ರೆಸ್ಸಿನ ಪ್ರಯತ್ನಗಳ ಫಲವಾಗಿವೆ. ಹಿಂದುಸ್ಥಾನದಲ್ಲಿ ನಿಜವಾದ ಜನಹಿತವನ್ನರಿತ ಜನರಿಗಾಗಿ ದುಡಿಯುವ ಮುಖ್ಯ ಸಂಸ್ಥೆಯೆಂದರೆ ಕಾಂಗ್ರೆಸ್ಸು.

### ಕಾಂಗ್ರೆಸ್ಸಿನ ಗುರಿಯು.

ಪರಕೀಯರಿಂದ ತಯಾರಿಸಲ್ಪಟ್ಟ ಹಿಂದೀಯರಿಗೆ ಸಮ್ಮತವಲ್ಲದೆ, ಅಸಮಾಧಾನಕರವಾದ ಸುಧಾರಣೆಗಳನ್ನೊಳಗೊಂಡ ಶ್ವೇತಪತ್ರವನ್ನು (White Paper) ಹೊಡೆದು ಹಾಕುವದು. ಲೋಕ ಪ್ರತಿನಿಧಿ ಸಭೆಯನ್ನು ಕರೆದು ಭಾರತದ ರಾಜ್ಯ ಘಟನೆಯನ್ನು ತಯಾರಿಸುವದು. ಇದೇ ಕಾಂಗ್ರೆಸ್ಸಿನ ಹೆಗ್ಗುರಿಯು. ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಧ್ಯೇಯವು. ಪ್ರಜೆಗಳಿಗೆ ಎಲ್ಲ ತರದ ಪೂರ್ಣ ಸ್ವಾತಂತ್ರ್ಯವಿರಬೇಕು; ಎಲ್ಲರಿಗೂ ಪೂರ್ಣ ಸಮಾನ ಹಕ್ಕುಗಳಿರಬೇಕು; ವಯಸ್ಸಿಗೆ ಬಂದವರೆಲ್ಲರಿಗೂ ಮತಾಧಿಕಾರವಿರಬೇಕು; ಎಲ್ಲರಿಗೂ ಶಿಕ್ಷಣವು ಪುಕ್ಕಟೆಯಾಗಿ ದೊರೆಯಬೇಕು; ಕೂಲಿಕಾರರಿಗೆ ಬಾಳ್ವೆಗೆ ಬೇಕಾಗುವಷ್ಟು ಕೂಲಿಯು ದೊರೆಯಬೇಕು; ಬಾಧದಾಯಕವಲ್ಲದ ಭೂಮಿಗಳ ತೆರಿಗೆಯನ್ನು ಸೂಟು ಬಿಡಬೇಕು; ಹಪ್ತೆಯನ್ನು ಕಡಿಮೆ ಮಾಡಬೇಕು; ದೊಡ್ಡ ಪಗಾರದ ಸರಕಾರೀ ಅಧಿಕಾರಿಗಳ ಪಗಾರ ಕಡಿಮೆ ಮಾಡಬೇಕು; ದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹನ ಕೊಡಬೇಕು; ರೈತರ ಸಾಲ ತೀರಿಸುವ ಬಗ್ಗೆ ಸಹಾಯ ಮಾಡಬೇಕು. ಹೀಗೆ ಕಾಂಗ್ರೆಸ್ಸಿನ ಗುರಿಯಿದೆ. ಇದೇ ಗುರಿಯನ್ನು ಸಾಧಿಸುವದಕ್ಕಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಲಕ್ಷಾವಧಿ ಜನರು ಸೆರೆಮನೆಗೆ ಹೋದರು. ಅಸ್ತಿಪಾಸ್ತಿಗಳನ್ನೂ ಕಳಕೊಂಡರು.

### ಕಾಂಗ್ರೆಸ್ ಬಡವರ ಸಂಸ್ಥೆಯು.

ರಾಷ್ಟ್ರದ ಉದ್ಧಾರಕ್ಕಾಗಿ ವಿಶೇಷವಾಗಿ ಬಡವರ ಬಡತನವನ್ನು ಹಿಂಗಿಸುವದಕ್ಕಾಗಿ ಹಗಲಿರುಳು ದುಡಿಯುವ ಸಂಸ್ಥೆಯು ಕಾಂಗ್ರೆಸ್ಸು. ಮಹಾತ್ಮಾ ಗಾಂಧಿಯವರು ಬಡವರ, ಹಿಂದುಳಿದವರ ಹಿತಕ್ಕಾಗಿ ದುಡಿಯುತ್ತಲಿದ್ದಾರೆ. ಅವರ ಆಜ್ಞೆಯನ್ನು ಪಡೆದು ಕಾಂಗ್ರೆಸ ಪಕ್ಷದವರು ಈಗ ಅಸೆಂಬ್ಲಿಯಲ್ಲಿ ಸೇರುತ್ತಲಿದ್ದಾರೆ. ಆರಿಸಿ ಬಂದ ಉಮೇದವಾರರು ಅಸೆಂಬ್ಲಿಯಲ್ಲಿ ಜನಹಿತವನ್ನು ಸಾಧಿಸಲು ಯತ್ನಿಸುವರು, ಸೈನ್ಯದ ಖರ್ಚನ್ನು ಕಡಿಮೆ ಮಾಡಲು ಯತ್ನಿಸುವರು, ಜನರಿಗೆ ಭಾರವಾದ ಕರಗಳನ್ನು ಕಡಿಮೆ ಮಾಡಲು ಯತ್ನಿಸುವರು, ಜನರ ಹಿತವಾಗುವ ಎಲ್ಲ ಮಾರ್ಗಗಳಿಂದ ಕಾರ್ಯವನ್ನು ಮಾಡಲು ಹವಣಿಸುವರು.

### ಕರ್ನಾಟಕದ ಕಾಂಗ್ರೆಸ ಪ್ರತಿನಿಧಿಗಳಾದ ಶ್ರೀ ಹೊಸಮನಿ ಸಿದ್ಧಪ್ಪನವರು

ಹಾವೇರಿಯ ಸುಪ್ರಸಿದ್ಧ ವಕೀಲರಾದ ಶ್ರೀ ಹೊಸಮನಿ ಸಿದ್ಧಪ್ಪನವರು ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ. ಇವರು ಹಾವೇರಿ ಮುನಸಿಪಾಲ್ಟಿಗೆ ಅಧ್ಯಕ್ಷರಾಗಿಯೂ, ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿಗೆ ಅಧ್ಯಕ್ಷರಾಗಿಯೂ ಜನಸೇವೆಯನ್ನು ಮಾಡಿದ್ದಾರೆ. ಧಾರವಾಡ ಜಿಲ್ಲಾ ಸ್ಕೂಲಬೋರ್ಡಿನ ಚೇರಮನ್ನರಾಗಿ ಉಚ್ಚತರದ ಸೇವೆ ಮಾಡಿದ್ದಾರೆ. ಇವರು ಧಾರವಾಡ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ, ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ, ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಸದಸ್ಯರೂ ಇದ್ದಾರೆ. ಇವರು ನಿಃಸ್ವಾರ್ಥಿಗಳು. ಸ್ವಾರ್ಥವನ್ನು ಬದಿಗಿರಿಸಿ ಎಲ್ಲ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ದೇಶ ಸೇನೆಯನ್ನು ಮಾಡುವದಕ್ಕಾಗಿ ಸೆರೆಮನೆಯ ಕಷ್ಟಗಳನ್ನು ಶಾಂತರೀತಿಯಿಂದ ಅನುಭವಿಸಿ ಬಂದಿದ್ದಾರೆ. ಜನರ ಹಿತವು ಇವರ ಕೈಯಲ್ಲಿ ಸುರಕ್ಷಿತವಿದ್ದೆ. ಇಂಥ ಹುರಿಯಾಳು ದೊರಿತದ್ದು ಕರ್ನಾಟಕಕ್ಕೆ ಭೂಷಣವೇ ಸರಿ.

### ಕಾಂಗ್ರೆಸ್ಸಿಗೇ ಮತ ಕೊಡಿರಿ.

ನಿಜವಾದ ಜನಹಿತವು ಸಾಧಿಸಬೇಕೆಂದು ನಿಮ್ಮ ಮನಸ್ಸಿದ್ದರೆ ಯಾವ ವಿಚಾರವನ್ನೂ ಮಾಡದೆ, ನೀವು ಕಾಂಗ್ರೆಸ ಪ್ರತಿನಿಧಿಗಳಾದ ಶ್ರೀ ಹೊಸಮನಿ ಸಿದ್ಧಪ್ಪನವರಿಗೇ ನಿಮ್ಮ ಮತಗಳನ್ನು ಕೊಡಿರಿ! ನೀವು ಕೊಟ್ಟ ಪ್ರತಿಯೊಂದು ಮತವೂ ಮಹಾತ್ಮಾ ಗಾಂಧಿಯವರಿಗೆ ಬೆಂಬಲವಾದಂತಾಗುವದು. ಗಾಂಧಿಯವರ ಕಾರ್ಯಕ್ಕೆ ನೆರವಾದಂತಾಗುವದು. ಇಡೀ ಜಗತ್ತಿಗೇ ವಂದ್ಯರಾದ ಮಹಾತ್ಮರ ಅನುಯಾಯಿಗೇ ನಿಮ್ಮ ಮತಕೊಟ್ಟು ಧನ್ಯರಾಗುವರೆಂದು ಪೂರಾ ನಂಬಿದ್ದೇವೆ.

ಕ. ಪ್ರಾಂ. ಕಾಂ. ಕ.
ಧಾರವಾಡ
ತಾ|| ೨೯-೮-೧೯೪೪.

೧ ಕೇಶವರಾವ ಗೋಖಲೆ
೨ ಹಳ್ಳೇಕೇರಿ ಗುಡ್ಡಪ್ಪಸದರು
ಸಹಕಾರ್ಯದರ್ಶಿಗಳು.

## ವಿಜಾಪುರ ಜಿಲ್ಲೆಯ ಸಾಹಿತ್ಯ ಸಮ್ಮೇಲನ.

ಕಳೆದ ೧೦ ನೆಯ ತಾರೀಖಿನ ದಿವಸ ವಿಜಾಪುರದಲ್ಲಿ, ವಿಜಾಪುರ ಜಿಲ್ಲೆಯ ಮೊದಲನೆಯ ಸಾಹಿತ್ಯ ಸಮ್ಮೇಲನವು ಜರುಗಿತು. ಈ ಸಾಹಿತ್ಯ ಪರಿಷತ್ತಿಗೆ ಶ್ರೀಯುತ ಮುದವೀಡು ಕೃಷ್ಣರಾಯರು ಅಧ್ಯಕ್ಷರಾಗಿದ್ದರು. ಇದಲ್ಲದೆ ಕವಿಸಮ್ಮೇಲನಕ್ಕೆ ಶ್ರೀಯುತ ಬೇಂದ್ರೆಯವರನ್ನೂ ನಾಟ್ಯಸಮ್ಮೇಲನಕ್ಕೆ ಗದಗಿನ ಶ್ರೀಯುತ ಹುಯಿಲ ಗೋಳರವರನ್ನೂ ಅಧ್ಯಕ್ಷರನ್ನಾಗಿ ಆರಿಸಲಾಗಿದ್ದಿತು.

ಅಧ್ಯಕ್ಷರ ಮೆರವಣಿಗೆಯು ಹೊರಟು ೯ ಗಂಟೆಗೆ ಛತ್ರೆ ನಾಟಕ ಗೃಹಕ್ಕೆ ಬಂದಕೂಡಲೇ ಸಭಾ ಕಾರ್ಯಗಳು ಪ್ರಾರಂಭವಾದವು. ಮೊದಲು ಶ್ರೀ ಕೌಜಲಗಿ ಶ್ರೀನಿವಾಸರಾಯರು, ಸಾಹಿತ್ಯವೆಂದರೇನು? ಈಗಿನ ಸಾಹಿತ್ಯದಲ್ಲಿರುವ ಗುಣದೋಷಗಳಾವವು?, ಭಾಷಾ ಕಾರ್ಯವನ್ನು ಹೇಗೆ ವಿಸ್ತರಿಸಬೇಕು? ಎಂದು ಮುಂತಾಗಿ ಪ್ರಾಸ್ತಾವಿಕ ಭಾಷಣಮಾಡಿದರು.

ನಂತರ ಸ್ವಾಗತ ಸಂಘದ ಅಧ್ಯಕ್ಷರಾದ ರಾ| ಸಾ| ಹಳಕಟ್ಟಿಯವರು ತಮ್ಮ ಭಾಷಣದಲ್ಲಿ, ವಿಜಯಪುರದ ಪ್ರಾಚೀನ ವರ್ಣನೆ ಮಾಡಿ ಈ ಜಿಲ್ಲೆಯಲ್ಲಿ ಆಗಿಹೋದ ಜೈನ, ಲಿಂಗಾಯತ, ಬ್ರಾಹ್ಮಣ ಕವಿಗಳ ಬಗ್ಗೆ ಹೇಳಿ ಈ ಸೀಮೆಯು ಪುಲಿಕೇಶಿ ಮೊದಲಾದ ವೀರರಿಗೂ, ಬಸವೇಶ್ವರಾದಿ ವಿಭೂತಿಗಳಿಗೂ ಜನ್ಮಭೂಮಿಯಾಗಿದ್ದಂತೆ ಕರ್ನಾಟಕದ ಕವಿಕೋಗಿಲೆಗಳಿಗೂ ನಂದನವನವಾಗಿದ್ದಿತೆಂದು ಹೇಳಿದರು.

ಔರಂಗಜೇಬನ ಮುತ್ತಿಗೆಯ ನಂತರ ಇಲ್ಲಿಯ ಕನ್ನಡವು ಕುಗ್ಗುತ್ತ ಮರಾಠರ ಶೇತಕ್ಕೆ ತೀರ ಕಳೆಗುಂದಿಹೋದರೂ ಈಗ ಅಲ್ಲಲ್ಲಿ ನವ ಚೈತನ್ಯವು ಉದ್ಭವಿಸಿ ಕನ್ನಡಭಾಗ್ಯಭಾನುವಿನ ಉದಯವಾಗುತ್ತಿರುವದೆಂದೂ ಹೇಳಿದರು.

ಕನ್ನಡ ವಿದ್ಯೆಗೆಯ ಉಪಾಯಗಳನ್ನು ಕುರಿತು ಪಠ್ಯಪುಸ್ತಕಗಳಲ್ಲಿ ಸುಧಾರಣೆ, ತಿಳಿಗನ್ನಡದ ಉಪಯೋಗ, ಭಾಷೆಯ ವಿಕೇಕರಣ, ಪ್ರಾಚೀನಕಾವ್ಯ, ರಗಳೆ ಮೊದಲಾದ ರಸಭರಿತ ವಾಙ್ಮಯಹಂತಹ ಆಧುನಿಕ ಕಾವ್ಯರಚನೆ ಮೊದಲಾದವುಗಳನ್ನು ಸೂಚಿಸಿದರು.

ಅನಂತರ ನಿಯೋಜಿತ ಅಧ್ಯಕ್ಷರಾದ ಶ್ರೀ ಮುದವೀಡು ಕೃಷ್ಣರಾಯರು ತಮ್ಮ ಸರಸವಾದ ಭಾಷಣದಲ್ಲಿ ಹೇಳಿದ್ದೇನೆಂದರೆ— ಬೆಳಗಾವಿ ಜಿಲ್ಲೆಯವರೇ ಮೊದಲು ಸಾಹಿತ್ಯ ಸಮ್ಮೇಲನವನ್ನು ಪ್ರಾರಂಭಿಸಿದರು. ಕನ್ನಡವು ಬಹುಕಾಲದ ವರೆಗೆ ಆಘಾತವನ್ನು ಹೊಂದುತ್ತ ಬಂದಿದ್ದರೂ ಜನಬಸವಪ್ಪ ಧಾರವಾಡ, ವೆಂಕಟರಂಗೋ ಕಟ್ಟಿ, ಗಂಗಾಧರ ಮಡಿವಾಳೇಶ್ವರ, ಶಾಂತವೀರ ಕಿತ್ತೂರು ಮೊದಲಾದವರು ಸಾಹಿತ್ಯದ ಅಭಿರುಚಿಯನ್ನು ಬೆಳಿಸಿದರು. ಕರ್ನಾಟಕದ ತುಂಬೆಲ್ಲ ಹರಡಿಕೊಂಡಿದ್ದ ಗ್ರಂಥ ನಿಧಿಯು ಕಾಲನ ಬಾಯಿಗೆ ಬಿದ್ದಿದ್ದು ಆದನ್ನು ಬದುಕಿಸಬೇಕಾಗಿದೆ. ರಾ| ಸಾ| ಹಳಕಟ್ಟಿಯವರು ವೀರಶೈವ ವಾಙ್ಮಯದ ವಿಷಯದಲ್ಲಿ ಮಾಡುತ್ತಿರುವ ಸೇವೆಯು ಶ್ಲಾಘನೀಯವಾದುದು. ಆದರೆ ದಾಸಕೂಟ ವಾಙ್ಮಯದ ಕಡೆಗೆ ನಮ್ಮವರಾರೂ ಲಕ್ಷಕೊಡದಿರುವದು ಖೇದದ ಸಂಗತಿ. ದೇಶಾಭಿಮಾನ, ದೇಶಭಾಷಾಭಿಮಾನಗಳನ್ನು ಹುಟ್ಟಿಸುವ ಸುಲಭ ವಾಙ್ಮಯವು ಈಗ ಬೇಕಾಗಿದೆ.

ನಂತರ ಅನೇಕ ನಿರ್ಣಯಗಳು ಮಾಡಲ್ಪಟ್ಟವು.

—ಅಜಮೀರ ನಗರ ಸಭೆಯವರು ಬಾಲಿಕೆಯರ ಶಾಲೆಯನ್ನು ಸೀನೇಮಾ ಗೃಹದ ಹತ್ತಿರವೇ ಮಾಡುತ್ತಿರುವುದರಿಂದ ಅಧ್ಯಾಪಕಿಯರು ಉಪವಾಸ ಮಾಡುವವರಿದ್ದಾರೆ.

## ವಿಜಾಪುರ ವೀರಶೈವ ಜಿಲ್ಲಾ ಸಭೆಯ ನಿರ್ಧಾರಗಳು.

ವೀರಶೈವ ಮಹಾಸಭೆಯ ಪರವಾಗಿ ವಿಜಾಪುರ ಜಿಲ್ಲೆಯಲ್ಲಿ ಸಂಘಟನೆಯ ಕಾರ್ಯಗಳನ್ನು ಯಾವ ಬಗೆಯಿಂದ ಮಾಡಬೇಕೆಂಬುದನ್ನು ಕುರಿತು ವಿಚಾರ ಮಾಡಲಿಕ್ಕೆ ತಾ. ೭-೧೦-೩೪ ನೆಯ ದಿವಸ ಸಂಜೆಯ ೬ ಗಂಟೆಗೆ ಶೆಪರ್ಡಹಾಲಿನಲ್ಲಿ ಪಟ್ಟಣದಲ್ಲಿಯ ವೀರಶೈವರ ಒಂದು ಸಾರ್ವಜನಿಕ ಸಭೆಯು ನೆರೆದಿತ್ತು. ಸಭೆಗೆ ರಾ. ಸಾ. ದೇಶಮುಖ ಆಲಮೇಲ, ರಾ. ಸಾ. ಹಳಕಟ್ಟಿ, ಶ್ರೀ ಗುರು ಸಿದ್ಧಪ್ಪ ದೇಸಾಯಿ ಕೊಣ್ಣೂರ, ಮಿ. ಎಸ್. ಟಿ. ಪಾಟೀಲ, ಮಿ. ಬಿ ಡಿ. ತಾಳಿಕೋಟ ವಕೀಲ, ರಾ. ರಾ. ಎಸ್. ಎಸ್. ಹೇರಲಗಿ, ರಾ. ಬಸವಲಿಂಗಪ್ಪ ಮೋಟಗಿ, ಮುರಿಗೆಪ್ಪ ಹುಂಡೆಕಾರ, ರಾ. ಚನ್ನ ಮಲ್ಲಪ್ಪ ಕುರ್ಲೆ, ಮಿ. ಮುಧೋಳಕರ ವಕೀಲ, ಪುರಾಣಿಕ ಹೆಡ್ ಮಾಸ್ತರ, ಶ್ರೀ ಆರ್. ಎಲ್. ಜವಳಿ ಮಾಸ್ತರ, ವೀರಪ್ಪ ವೆಂಡೆಗಾರ ದುಕಾನ ವಾರದ, ಗುರುಲಿಂಗಯ್ಯಾ ಲೋಣಾರಮಠ ದುಕಾನ ಬಬಲಾದ, ವೀರಪ್ಪ ಲಾಳಿ, ಗುಂಡಪ್ಪ ಶಾಬಾದಿ, ವೇ. ಮರುಳಾರಾಧ್ಯ ಶಾಸ್ತ್ರಿ. ಸಂಗಪ್ಪ ತರ್ನಳ್ಳಿ ಮೊದಲಾದ ಪ್ರಮುಖರೆಲ್ಲರೂ ಬಂದಿದ್ದಲ್ಲದೆ ಶ್ರೀಯುತ ಮಂಜಪ್ಪ ಹರ್ಡೆಕರ ಹಾಗು ಕೀರ್ತನ ಕೇಸರಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಇವರು ಸಹ ಆಗಮಿಸಿದ್ದರು.

ರಾ. ಸಾ. ಹಳಕಟ್ಟಿಯವರು ಜಿಲ್ಲೆಯಲ್ಲಿ ಈ ವರೆಗೆ ಐಕ್ಯತೆಯಿಂದ ನಡೆದುಬಂದ ಅನೇಕ ವಿಶೇಷ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಇನ್ನು ಮುಂದೆ ಸಮಾಜದವರು ಒಂದು ಸಂಘಟನೆಯಿಂದ ನಡೆಯುವಂತೆ ವಿಚಾರಿಸಬೇಕೆಂದು ತಿಳಿಯಪಡಿಸಿದರು. ಮತ್ತು ಎಸ್. ಟಿ. ಪಾಟೀಲರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು, ಆಮೇಲೆ ಶ್ರೀಯುತ ಮಂಜಪ್ಪ ಹರ್ಡೆಕರ, ಶ್ರೀ ಶಿವಮೂರ್ತಿ ಶಾಸ್ತ್ರಿಗಳು, ರಾ. ರಾ. ಗುಂಡಪ್ಪ ಶಾಬಾದಿ, ರಾ. ರಾ ಕುರ್ಲೆ ಮುಂತಾದವರ ಉದ್ಬೋಧಕ ಭಾಷಣಗಳಾದವು. ಅವರೆಲ್ಲರೂ ತಮ್ಮ ಭಾಷಣಗಳಲ್ಲಿ ಸಮಾಜದ ಸದ್ಯದ ಸ್ಥಿತಿ, ಮತ್ತು ಮುಂದೆ ಮಾಡತಕ್ಕ ವಿಧಾಯಕ ಕಾರ್ಯಗಳು ಈ ಬಗ್ಗೆ ವಿವರಿಸಿದರು. ಮತ್ತು ಕೆಳಗೆ ಕಾಣಿಸಿದ ನಿರ್ಧಾರಗಳು ಮಾಡಲ್ಪಟ್ಟವು.

೧ ಮುಂದಿನ ನವೆಂಬರ ತಿಂಗಳಿನಲ್ಲಿ ವಿಜಾಪುರ ಜಿಲ್ಲೆಯ ಪರವಾಗಿ ಒಂದು ಜಿಲ್ಲಾ ಸಭೆಯನ್ನು ವಿಜಾಪುರದಲ್ಲಿ ಕರೆಯತಕ್ಕದ್ದು.

೨ ಆ ವರೆಗೆ ಮಹಾಸಭೆಯ ನಿಯಮಗಳಿಗೆ ಒಳಪಡಿಸಿ ಸಭಾಸದರನ್ನು ಕೂಡಿಸತಕ್ಕದ್ದು. ಮತ್ತು ಸಮಾಜ ಕಾರ್ಯಗಳನ್ನು ಮಾಡಲಿಚ್ಛಿಸಿದ ಸ್ವಯಂಸೇವಕರನ್ನೂ ಸಹ ಗೊತ್ತುಪಡಿಸತಕ್ಕದ್ದು.

೩ ಪ್ರತಿ ಆದಿತ್ಯವಾರ ಸಂಜೆಯ ೬ ಗಂಟೆಯಿಂದ ೭ ರ ವರೆಗೆ ಶೆಪರ್ಡಹಾಲಿನಲ್ಲಿ ಪಟ್ಟಣಸ್ಥರು ನೆರೆಯತಕ್ಕದ್ದು. ಮತ್ತು ಧಾರ್ಮಿಕ ಮೊದಲಾದ ವಿಷಯಗಳ ಬಗ್ಗೆ ಭಾಷಣಗಳನ್ನು ಏರ್ಪಡಿಸಿ ಚರ್ಚಿಸತಕ್ಕದ್ದು.

ಈ ಪ್ರಕಾರ ಗೊತ್ತುವಳಿಗಳಾದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು. (ನವ ಕರ್ನಾಟಕ)

—ಭೋವಲಿಯಲ್ಲಿ ಸೌ. ನೆಹರುರವರ ಪ್ರಕೃತಿಯು ಸ್ವಲ್ಪ ಗುಣವಾಗಿದ್ದು ಕ್ಷ ಕಿರಣಗಳಿಂದ ಪರೀಕ್ಷಿಸಲಾಯಿತು.

# ಮಹಿಳಾ ಪ್ರಪಂಚ

## ಲಂಡನ್ನಿನಲ್ಲಿ ಮೀರಾಬೆನ್ನರು.

ಮಹಾತ್ಮಾ ಗಾಂಧಿಯವರ ಶಿಷ್ಯಳಾದ ಮೀರಾಬೆನ್ನರು ಇಂಗ್ಲಂಡದಲ್ಲಿ ಭಾಷಣ ಮಾಡುತ್ತಿದ್ದಾರೆ. ಹಿಂದುಸ್ಥಾನದ ವಿಷಯವಾಗಿ ಇಂಗ್ಲೀಷ ಜನರ ಕಲ್ಪನೆಯು ಏನಿರುವುದೆಂದು ಅವರನ್ನು ವಿಚಾರಿಸಲು ಮೀರಾಬೆನ್ನರು— "ಕಳೆದ ೧೦ ವಾರಗಳಲ್ಲಿ ನಾನು ೬೦ ಸಭೆಗಳಲ್ಲಿ ಭಾಷಣ ಮಾಡಿದ್ದೇನೆ. ಜನರೆಲ್ಲರೂ ಉತ್ಸುಕತೆಯಿಂದ ಭಾಷಣಗಳನ್ನು ಕೇಳುತ್ತಾರೆ. ಯಾವ ಸಭೆಯಲ್ಲಿಯೂ ಅಡ್ಡಿ ಗಲಭೆ ತೊಂದರೆಗಳಾಗಿರುವುದಿಲ್ಲ. ಹಿಂದುಸ್ಥಾನದ ವಿಷಯಕ್ಕೆ ಈ ಜನರಿಗೆ ಮುಖ್ಯ ವಿಷಯಗಳ ಬಗ್ಗೆ ನಿಜವಾದ ಕಲ್ಪನೆಯೇ ಇಲ್ಲ. ಎಲ್ಲ ಸಂಗತಿಗಳನ್ನು ಸರಿಯಾಗಿ ಹೇಳಿದಲ್ಲಿ ಒಳ್ಳೇ ಆಸ್ಥೆಯಿಂದ ಕೇಳುತ್ತಾರೆ.

ಸಭೆಗಳಲ್ಲಿ ಎಲ್ಲ ರಾಜಕೀಯ ಪಂಥದವರೂ ಅನೇಕ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ಮುಖ್ಯವಾಗಿ ಅಸ್ಪೃಶ್ಯತೆ, ಜಾತಿಭೇದ, ಹಿಂದು ಮುಸಲ್ಮಾನ ಐಕ್ಯ, ರಾಷ್ಟ್ರೀಯ ಸಭೆ ಮೊದಲಾದವುಗಳ ಬಗ್ಗೆ ಪ್ರಶ್ನೆಗಳು ಕೇಳಲ್ಪಡುತ್ತವೆ, ವರ್ತುಲಾಕಾರ ಪರಿಷತ್ತಿಗೆ ಸ್ವೇಟ ಸೆಕ್ರೆಟರಿಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳೇ ಬಂದಿದ್ದರೆಂಬುದನ್ನು ಕೇಳಿ ಅನೇಕರಿಗೆ ಆಸಹ್ಯವೆನಿಸಿತು.

ಗಾಂಧೀಜಿಯವರ ವಿಷಯಕ್ಕೆ ಮತ್ತು ಅವರ ಧಾರ್ಮಿಕ ಸಂದೇಶದ ವಿಷಯಕ್ಕೆ ಬ್ರಿಟಿಶರಿಗೆ ಪೂಜ್ಯತೆಯಿದೆ. ಅನೇಕರು ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕರೆ ಜಾತೀಯ ದೊಂಬೆಗಳುಂಟಾಗಲಿಕ್ಕಿಲ್ಲವೇ? ಸಂಸ್ಥಾನಿಕರಲ್ಲಿ ಯುದ್ಧಗಳು ತಲೆಯೆತ್ತಲಿಕ್ಕಿಲ್ಲವೇ? ಎಂದು ಕೇಳಲು ನಾನು— ಈ ಪ್ರಕಾರ ನೀವು ಹೆದರುವ ಕಾರಣವಿಲ್ಲ. ಆದರೆ ಹಿಂದುಸ್ಥಾನವು ಸ್ವತಂತ್ರವಾಗಬೇಕೇ ಬೇಡವೇ? ಎಂಬುದೇ ಪ್ರಶ್ನೆ. ಹಿಂದುಸ್ಥಾನದ ಭವಿತವ್ಯತೆಯು ಹೇಗಾದೀತೆಂದು ಚಿಂತಿಸುವ ಕಾರಣವಿಲ್ಲವೆಂದು ಹೇಳಲು ಎಲ್ಲರೂ ಹಿಂದುಸ್ಥಾನದ ಸ್ವಾತಂತ್ರ್ಯಕ್ಕೆ ಸಮ್ಮತಿಸುವರು.

ಹಿಂದುಸ್ಥಾನದಲ್ಲಿ ಬಡತನವಿರುವದೆಂದು ಬ್ರಿಟಿಶರು ಒಪ್ಪುತ್ತಾರೆ. ಆದರೆ ಅದರ ಹಳ್ಳಿಯ ಉದ್ಯೋಗಗಳು ನಿಂತುಹೋದುದರಿಂದ ಅಸಹ್ಯವಾದ ಬಡತನದಿಂದ ಬಳಲುತ್ತಿದೆಯೆಂಬುದು ಅವರಿಗೆ ತಿಳಿಯಲು ಕಠಿಣವಾಗಿದೆ."

ಕೆಲಕೆಲವು ಸಾರಿ ಸಭೆಗಳಲ್ಲಿ ಹಾಸ್ಯವೂ ಸೂಸುತ್ತದೆ. ಗಾಂಧೀಜಿಯವರ ಆಶ್ರಮವನ್ನು ಕುರಿತು ಮೀರಾಬೆನ್ನರು ಮಾತಾಡುತ್ತಿರುವಾಗ ಅನೇಕರು, ಆಶ್ರಮ ಪ್ರವೇಶಕ್ಕೆ ಪ್ರತಿಜ್ಞೆಯನ್ನೇಕೆ ಮಾಡಬೇಕಾಗುತ್ತದೆ? ಎಂದು ಕೇಳುವರು. ತನಗೆ ಬೇಕಾದಷ್ಟಕ್ಕಿಂತ ಹೆಚ್ಚಿಗೆ ಸಂಗ್ರಹಿಸಿದರೆ ಕಳವು ಮಾಡಿದಂತಾಗುವದೆಂಬ ಮಹಾತ್ಮರ ಅಸ್ತೇಯ ವ್ರತವನ್ನು ತಿಳಿಸಲು ಅನೇಕರಿಗೆ ಅಗಾಧವಾದ ಆಶ್ಚರ್ಯವಾಗುತ್ತದೆ. ಈ ವಿಷಯವಾಗಿ ಅವರು ಒಳ್ಳೇ ಕುತೂಹಲಪೂರ್ವಕವಾಗಿ ಚರ್ಚಿಸುತ್ತಾರೆ.

## ಪೇರಿನ್‌ಬೆನ್ ಕ್ಯಾಪ್ಟನ್‌ರು ಸ್ವಯಂ ಸೇನಿಕೆಯ ಸ್ಥಾನವನ್ನೇಕೆ ಬಿಟ್ಟುಕೊಟ್ಟರು?

ಈ ವಿಷಯವಾಗಿ ಸ್ವಾಗತ ಸಮಿತಿಯವರು ಈ ಪ್ರಕಾರ ಪ್ರಕಟನೆಯನ್ನು ಹೊರಡಿಸಿದ್ದಾರೆ—

ಶ್ರೀಮತಿ ಪೇರಿನ್‌ಬೆನ್‌ರು ವಂದನೆ ಮಾಡುವ ಕ್ರಮದ ಬಗ್ಗೆ ಭಿನ್ನಾಭಿಪ್ರಾಯವುಳ್ಳವರಾಗಿ ಬಿಟ್ಟುಬಿಟ್ಟರೆಂದು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾದುದು ನಿಜವಿರುವದಿಲ್ಲ. ಆದರೆ ದೇಶಸೇವಿಕೆಯರ ಆಧಿಪತ್ಯದ ಬಗ್ಗೆ ಅವರ ಮತಭಿನ್ನವಿದೆ. ಈ ಬಗ್ಗೆ ಬೇರೆ ಅನೇಕ ಸೂಚನೆಗಳನ್ನು ತಿಳುಹಿಸಿದ್ದಾಯಿತು. ಆದರೆ ಇವುಗಳಲ್ಲಿ ಒಂದಾದರೂ ಅವರಿಗೆ ಸರಿಬೀಳಲಿಲ್ಲ. ಅವರು ನಿಯಮಿಸಿದ ೧೦೪ ದೇಶಸೇವಿಕೆಯರು ಅವರ ಸಂಗಡವೇ ಬಿಟ್ಟುಬಿಟ್ಟಿದ್ದಾರೆ. ಸದ್ಯಕ್ಕೆ ೧೭೦ ದೇಶಸೇವಿಕೆಯರಿದ್ದು ಅವರಲ್ಲಿ ೧೨೫ ಸೇವಿಕೆಯರು ಅನೇಕ ಭಾಗಗಳಲ್ಲಿ ತಿದ್ದುಪಡಿ ಹೊಂದುತ್ತಿದ್ದಾರೆ.

## ವಿವಾಹ ದೌರ್ಭಾಗ್ಯ.

ಬಾಲ್ಯವಿವಾಹವು ನಿಷೇಧಾರ್ಹವೆಂದೂ ಪ್ರೇಮವಿಲ್ಲದ ವಿವಾಹವು ನರಕಪ್ರಾಯವೆಂದೂ ಆಧುನಿಕ ಸುಧಾರಕರು ಸಿದ್ಧಾಂತ ಅಭಿಮತವಾಗಿದೆಯಷ್ಟೆ ಇದಕ್ಕೆ ಎಷ್ಟೋ ಪುರಾಣಮತವಾದಿಗಳು ಗುಣುಗುಟ್ಟುವದುಂಟು. ತಮ್ಮ ನೆರೆಹೊರೆಯವರಲ್ಲಿಯೇ ಪ್ರತಿನಿತ್ಯದಲ್ಲಿ ಉಂಟಾಗುತ್ತಿರುವ ಕೌಟುಂಬಿಕ ಜಗಳಗಳನ್ನು ಕೇಳಿ ಕೇಳಿ ಸಾಕಾದರೂ ಇವರು ತಮ್ಮ ಅಭಿಪ್ರಾಯವನ್ನು ಬದಲಿಸದಿರುವದು ಆಶ್ಚರ್ಯವೇ ಸರಿ.

ನಾಗಪುರದ ಹತ್ತಿರ ಕಾಂಪ್ತಿ ಎಂಬದೊಂದು ಹಳ್ಳಿಯಿದೆ. ಅಲ್ಲಿಯ ಒಂದು ಕುಟುಂಬದಲ್ಲಿ ೧೦ ವರ್ಷದ ಒಬ್ಬ ವಿವಾಹಿತ ಬಾಲೆಗೆ ಅವಳ ಅತ್ತೆ ಮೊದಲ್ಗೊಂಡು ಮೂವರು ಆಪ್ತರು ಯಾವಾಗಲೂ ಅವಳಿಗೆ ಸಂಪರಿಯಕಷ್ಟಗಳನ್ನು ಕೊಡುತ್ತಿದ್ದರು. ಕಡೆಗೆ ಅವಳ ದೌರ್ಭಾಗ್ಯಕ್ಕೆ ಎಣೆಯಿಲ್ಲದಾಯಿತು. ಅವಳೆಲ್ಲಿಯೂ ಹೋಗಬಾರದೆಂದು ಕಾಲೊಳಗೆ ಭಾರವಾದ ಕಬ್ಬಿಣ ಸರಪಳಿ ಕಟ್ಟಲಾಯಿತು. ಇಷ್ಟಕ್ಕೂ ಅವರು ಹೇಸದೆ ಒಂದು ದಿನ ಆ ಬಾಲಕಿಯ ಮೇಲೆ ಕುದಿದು ಹೊಯ್ದಾಡುವ ನೀರನ್ನು ಸುರುವಿದರು. ಆದ್ದರಿಂದ ಅವಳ ಮೈಸುಟ್ಟು ಸರಕಾರಿ ಆಸ್ಪತ್ರಿಯಲ್ಲಿ ಬಿದ್ದಿದ್ದಾಳೆ. ಪೋಲೀಸರು ಈ ವ್ಯಾಜ್ಯವನ್ನು ಕೋರ್ಟಿಗೆ ಹಾಕಿದ್ದಾರೆ.

ನೋಡಿರಿ! ಬಾಲ್ಯವಿವಾಹದ ದುರ್ಗತಿಯನ್ನು!

## ಇದಕ್ಕೇನನ್ನಬೇಕು?

ತ್ರಾವಣಕೋರದ ಉಚ್ಚಕರ್ಕಕ್ಕೆರುವ ಪೆರುಂಬವ್ಹೂರ ಎಂಬಲ್ಲಿ ಒಬ್ಬ ಮುಸಲ್ಮಾನನ ಕುಟುಂಬವು ಇದ್ದಿತು. ಒಂದು ದಿನ ಆ ಮುಸಲ್ಮಾನನು ಹೊಲದಲ್ಲಿ ಬಿತ್ತುತ್ತಿರುವಾಗ ಮನೆಗೆ ಅನ್ನವನ್ನು ಕಟ್ಟಕೊಂಡು ಬರಲಿಕ್ಕೆ ತನ್ನ ನೂತನ ಪತ್ನಿಯನ್ನು ಕಳಿಸಿಕೊಟ್ಟನು. ಅವಳು ಮನೆಗೆ ಬಂದ ಕೂಡಲೆ ನೀರಡಿಕೆಯಾದ್ದರಿಂದ ಅಕ್ಕಿಯ ಮೇಲಿನ ಗಂಜಿಯನ್ನು ಕುಡಿದಳು. ಆದರೆ ಆ ಗಂಜಿಯನ್ನು ಕುಡಿಯಬೇಕಾದರೂ ಅವಳು ಅತ್ತೆಯ ಅಪ್ಪಣೆಯನ್ನು ಪಡೆಯಬೇಕಾಗಿದ್ದಿತು. ಅತ್ತೆಯು ಬಂದು ನೋಡಿದಳು. ಸೊಸೆಯು ತನ್ನನ್ನು ಕೇಳದೆ ಗಂಜೀ ಕುಡಿದಳೆಲ್ಲಾ! ಛೀರಿತು, ಸಿಟ್ಟಿನಿಂದ ಉರಿಯಹತ್ತಿ ಕೂಡಲೆ ಒಂದು ದೊಡ್ಡ ಕಟ್ಟಿಗೆಯನ್ನು ಎತ್ತಿ ಅವಳ ತಲೆಯ ಮೇಲೆ ಹಾಕಿದಳು. ಸ್ವಲ್ಪ ಹೊತ್ತಿನಲ್ಲಿಯೇ ಸೊಸೆಯ ಪ್ರಾಣವು ಹೋಯಿತು. ಹಸಿನೆಯಿಂದ ಕಂಗಾಲಾಗಿ ಗಂಡನು ಮನೆಗೆ ಬಂದು ನೋಡುತ್ತಾನೆ. ಹೆಂಡತಿಯು ಸತ್ತುಬಿದ್ದಿದ್ದಾಳೆ. ನಡೆದ ಸಂಗತಿ ತಿಳಿದು ಹುಚ್ಚನಂತಾದನು. ಅದೇ ಕಟ್ಟಿಗೆಯಿಂದ ತಾಯಿಯನ್ನು ಕೊಂದು ಹಾಕಿದನು. ಸಿಟ್ಟಿನ ಆವೇಶದಲ್ಲಿ ತನ್ನ ಸಣ್ಣ ಮಗುವನ್ನೂ ಹೊಡೆದು ಹಾಕಿದನು. ಆಮೇಲೆ ತಾನೂ ಒಂದು ಗಿಡಕ್ಕೆ ಉರ್ಲು ಹಾಕಿಕೊಂದು ಸತ್ತು ಹೋದನು!





ಶಾ. ಶ. ೧೮೭೬ ನೆಯ ಆಶ್ವೀಜ ಶು|| ೭ ಸೋಮವಾರ.

## ಈ ಭೂತಕ್ಕೆ ಆ ಮಂತ್ರವೆ?

ಈ ನಮ್ಮ ಹಿಂದುಸ್ಥಾನದಲ್ಲಿ ಹಿಂದು-ಮುಸಲ್ಮಾನ, ಸ್ಪೃಶ್ಯ-ಅಸ್ಪೃಶ್ಯ, ಬ್ರಾಹ್ಮಣ-ಬ್ರಾಹ್ಮಣೇತರ, ಸನಾತನಿ-ಸುಧಾರಕ ಮೊದಲಾದ ಜಾತಿಯ ಜಗಳಗಳು ಧಾರ್ಮಿಕ, ಸಾಮಾಜಿಕ ವಿಷಯಗಳಲ್ಲಿಯೇ ಅಲ್ಲದೆ ರಾಜಕೀಯ ವಿಷಯದಲ್ಲಿಯೂ ಪ್ರಬಲವಾಗಿಯೇ ಇವೆಯಷ್ಟೆ.

ಈ ಜಾತಿಯ ಭೂತವು ಎಲ್ಲಿಂದ ಬಂತು? ಇದು ನಾನಾ ರೀತಿಗಳಿಂದ ನಮ್ಮನ್ನು ಹಾಳುಮಾಡುತ್ತಿದೆಯಲ್ಲಾ! ಇದನ್ನು ಓಡಿಸುವವರಾರು? ಈ ಭೂತಕ್ಕೆ ಮಂತ್ರವೇನಾದರೂ ಇದೆಯೆ? ಎಂದು ಕೇವಲ ಧಾರ್ಮಿಕ ಪುರುಷರೇ ಅಲ್ಲ; ರಾಜಕಾರಣ ಪಟುಗಳು ಕೂಡಾ ಈಗ ಯೋಚಿಸುತ್ತಿದ್ದಾರೆ. ಈ ಜಾತಿಯ ಭೂತ ಚೇಷ್ಟೆಯು ಈ ದೇಶದಲ್ಲಿ ಪ್ರಬಲವಾಗಿರುವವರೆಗೂ ಈ ದೇಶದ ಯಾವ ಜಾತಿಯವರಿಗೂ ಸುಖ ಶಾಂತಿಗಳು ದೊರೆಯುವುದಿಲ್ಲವೆಂದೇ ಅನೇಕರ ಅಭಿಪ್ರಾಯ.

ಈ ಜಾತಿಯ ಭೂತವಾದರೋ ಬಹು ಹಳೆಯದು. ಆದರೆ ಇದು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪವನ್ನು ಹೊಂದುತ್ತ ಅಂದಂದಿಗೆ ಎಳೆಯದಾಗಿ ತೋರುತ್ತದೆ. ಮೊದಲು ಆದಿದ್ರಾವಿಡ-ದ್ರಾವಿಡ ರೂಪದಿಂದ ಆ ಮೇಲೆ ಆರ್ಯ-ಅನಾರ್ಯ ರೂಪದಿಂದ ಇತಿಹಾಸ ಪೂರ್ವಕಾಲದಲ್ಲಿ ತನ್ನ ಪ್ರತಾಪವನ್ನು ತೋರಿಸಿದ್ದಿತು.

ಈಗ ಸ್ಪೃಶ್ಯ-ಅಸ್ಪೃಶ್ಯ, ಬ್ರಾಹ್ಮಣ-ಬ್ರಾಹ್ಮಣೇತರ, ಸನಾತನ-ಸುಧಾರಕಗಳೆಂಬ ಹೆಸರುಗಳಿಂದ ಕುಣಿವಾಡುತ್ತದೆ. ಈ ಮುಂಚೆ ಬುದ್ಧ, ಬಸವ, ರಾಮಾನುಜಾಚಾರ್ಯ, ನಾನಕ ಮೊದಲಾದ ಅನೇಕ ಮಹಾತ್ಮರು ಈ ಜಾತಿಯ ಭೂತ ಚೇಷ್ಟೆಯನ್ನು ಕಡಿಮೆ ಮಾಡಿದ್ದರು ಶಾಶ್ವತ್ಯ ಶಿಕ್ಷಣವಾದರೋ ಈಗ ಇದನ್ನು ಸಣ್ಣ ಮಾಡಿದೆ. ಇದೇ ಸಮಯದಲ್ಲಿ ಒಬ್ಬ ಬಲವಾದ ಮಂತ್ರವಾದಿಯೂ ದೊರೆತಿದ್ದಾನೆ.

### 'ಸರದಾರರ ಸವಾಲ'

ಸರದಾರ ವಲ್ಲಭಭಾಯಿ ಪಟೇಲರು ಮಹಾತ್ಮಾಗಾಂಧಿಯವರ ವರ್ಧಂತಿಯ ದಿನ ಮುಂಬೈಯಲ್ಲಿ ಒಂದು ಮಹತ್ವದ ವ್ಯಾಖ್ಯಾನವನ್ನು ಮಾಡಿದರು. ಆಗ ಹೇಳಿದುದೇನೆಂದರೆ—

"ಯಾವ ಧರ್ಮ ಗುರುಗಳಾಗಲಿ ಅಥವಾ ಶಂಕರಾಚಾರ್ಯರಾಗಲಿ ಕಾಂಗ್ರೆಸ್ಸಿನ ಹುರಿಯಾಳುಗಳಿಗೆ ಮತಕೊಡಬೇಡಿರೆಂದು ಹೇಳಿದರೆ ಅವರ ಮಾತನ್ನು ಕೇಳಬೇಡಿರಿ. ಕಾಂಗ್ರೆಸ್ ಮಾಡಿದ ಸ್ವಾರ್ಥತ್ಯಾಗವನ್ನು ನೆನಪಿಗೆ ತಂದುಕೊಳ್ಳಿರಿ. ಆಗ ನೀವು ಎಲ್ಲಿದ್ದಿರೆಂದು ಅವರನ್ನು ಕೇಳಿರಿ.

ಜಾತಿ ನಿರ್ಣಯವಿದೆ ಹಿಂದು ಮತ್ತು ಹರಿಜನ, ಹಿಂದು ಮುಸಲ್ಮಾನ್, ಹಿಂದು ಮತ್ತು ಬೇರೆ ಸಮಾಜಗಳಲ್ಲಿ ಒಡಕನ್ನು ಹುಟ್ಟಿಸಲು ಸರಕಾರವು ಪ್ರಯತ್ನಿಸಿದೆ. ಇವುಗಳಲ್ಲಿ ಹಿಂದು-ಹರಿಜನ ಎಂಬ ಒಡಕನ್ನು ಗಾಂಧೀಜಿಯವರು ತಮ್ಮ ಆತ್ಮಾರ್ಪಣದ ದಿವ್ಯ ಪ್ರತಿಜ್ಞೆಯಿಂದ ನಿವಾರಣೆ ಮಾಡಿದರು.

### ಶಂಕರಾಚಾರ್ಯರೆಲ್ಲಿದ್ದರು?

ಇತರ ಅನೈಕ್ಯಮತ್ಯಗಳು ಆ ಎಲ್ಲ ಸಮಾಜದವರು ಏಕಮತದಿಂದ ಸರಕಾರವನ್ನು ಕೇಳಿಕೊಂಡಾಗಲೇ ನಿವಾರಣೆಯಾಗುವವು' ಅಸ್ಪೃಶ್ಯರ ವಿಚಾರದಲ್ಲಿ ಮಾಡಿದ ನಿರ್ಣಯವನ್ನು ಆ ಮಹಾವಿಭೂತಿಯು ಕಾರಾಗೃಹದಲ್ಲಿಯೇ ಇದ್ದು ಆತ್ಮಾರ್ಪಣೆಯ ಪ್ರತಿಜ್ಞೆಯಿಂದ ಏಳೇ ದಿನಗಳಲ್ಲಿ ತೆಗೆದು ಹಾಕಿಸಲಿಲ್ಲವೆ? ಆಗ ಸನಾತನ ಬಂಧುಗಳೂ ಈ ಶಂಕರಾಚಾರ್ಯರೂ ಎಲ್ಲಿದ್ದರು? ಅವರು ಆಗ ಜೀವಿಸಿದ್ದರಷ್ಟೆ?"

ಸರದಾರರ ಈ 'ಸವಾಲ್' ಸಮಂಜಸವಾಗಿದೆ. ಆದಿಜನರನ್ನು ಹಿಂದುಗಳಿಂದ ಬೇರೆ ಮಾಡುತ್ತಿದ್ದ ಆ ಜಾತಿ ನಿರ್ಣಯವು ಮಹದನರ್ಥಕಾರಿಯಾಗಿದ್ದಿತು. ಅದನ್ನು ತಪ್ಪಿಸಲು ಯಾವ ಸನಾತನಿಗಳಾಗಲಿ ಅಥವಾ ಅವರ ಮುಂದಾಳುಗಳಾದ ಶಂಕರಾಚಾರ್ಯರಾಗಲಿ ಪ್ರಯತ್ನಿಸಲಿಲ್ಲ. ಜಗದ್ವಂದ್ಯರಾದ ಮಹಾತ್ಮಾಜಿಯವರ ಅಸಾಧಾರಣವಾದ ಆತ್ಮಯಜ್ಞದ ಭೀಷಣ ಪ್ರತಿಜ್ಞೆಯೇ ಹಿಂದು ಸಮಾಜಕ್ಕೊದಗಿದ್ದ ಆ ಅನರ್ಥವನ್ನು ನಿವಾರಣೆ ಮಾಡಿತೆಂದು ಧಾರಾಳವಾಗಿ ಹೇಳಬಹುದು.

ಆದರೆ ಇದರ ಶ್ರೇಯಸ್ಸು ಡಾ. ಅಂಬೇಡಕರ ಮೊದಲಾದ ಆದಿಜನ ಪ್ರಮುಖರಿಗೂ ಸೇರಿದ್ದಾಗಿದೆ. ಅವರಲ್ಲಿ ಗಾಂಧೀಜಿಯವರ ವಿಷಯದಲ್ಲಿದ್ದ ಅಪಾರವಾದ ಭಕ್ತಿ ವಿಶ್ವಾಸಗಳೂ ಹಿಂದುಗಳಾಗಿರಬೇಕೆಂಬ ಪ್ರೇಮಾದರಗಳೂ ಆದಿಜನರಗಳ ಸಂಬಂಧವಾದ ನಿರ್ಣಯದ ತಿದ್ದು ಪಾಟಿಗೆ ಕಾರಣವಾದವು

ಗಾಂಧೀಜಿಯವರ ಉಪವಾಸ ವ್ರತವೇ ಜಾತಿಯ ಭೂತವನ್ನು ಬಿಡಿಸಲು ಮಹಾ ಮಂತ್ರವಾಗಿದ್ದರೆ ಸನಾತನಿಗಳಿಗೆ ಹಿಡಿದುದೇಕೆ ಬಿಡಲಿಲ್ಲ? ಹಿಂದು ಮುಸಲ್ಮಾನ್ ಏಕಮತ್ಯಕ್ಕಾಗಿ ಗಾಂಧೀಜಿಯವರು ೨೧ ದಿನ ಉಪವಾಸ ಮಾಡಲಿಲ್ಲವೆ? ಅದರಿಂದ ಅದೇನಾದರೂ ಬಿಟ್ಟಿತೆ? ಡಾ. ಅನ್ಸಾರಿಯವರಂತಹ ಸಮಂಜಸ ಮುಸಲ್ಮಾನರು ಎಷ್ಟೇ ಪ್ರಯತ್ನಿಸಿದರೂ ಹಿಂದು-ಮುಸಲ್ಮಾನ್ ಜಾತಿಯ ಭೂತವೇಕೆ ಹೋಗಲಿಲ್ಲ?

ಎಲ್ಲಾ ಭೂತಗಳಿಗೂ ಒಂದೇ ಮಂತ್ರ ಪ್ರಯೋಗವಿಲ್ಲವಂತೆ. ಹೀಗೆಯೇ ಈ ಹಿಂದು ಮುಸಲ್ಮಾನ್ ಜಾತಿಯ ಭೂತವು ಮಹಾತ್ಮರ ಈ ಮಂತ್ರದಿಂದ ಬಿಟ್ಟು ಹೋಗುವುದಿಲ್ಲ. ಹಿಂದು ಸಂಘಟನೆಯೆಂಬ ಮಂತ್ರವೇ ಇದಕ್ಕೆ ಬೇಕು. ಹಿಂದುಗಳಲ್ಲಿರುವ ಸಾಮಾವರ್ಣ, ಮೇಲು ಕೀಳುಗಳೆಂಬ ಕೊಳೆ ಹೋದ ವಿನಾ ಹಿಂದುಗಳು ಸಂಘಟನೆಯ ಮಂತ್ರಪಠಣಕ್ಕೇ ಅರ್ಹರಾಗುವುದಿಲ್ಲ ಹಿಂದುಗಳಲ್ಲಿ ಸಂಘಟನೆಯ ಮಂತ್ರಶಕ್ತಿಯುಂಟಾದ ವಿನಾ ಅನೇಕ ಮುಸಲ್ಮಾನರಲ್ಲಿರುವ ಜಾತಿಯ ದುರಭಿನಿವೇಶವು ಬಿಟ್ಟು ಹೋಗುವುದಿಲ್ಲ.

# ರಾಷ್ಟ್ರೀಯ ಚಟುವಟಿಕೆಗಳು.

### ಮತದಾರರಿಗೆ ಗಾಂಧೀಜಿಯವರ ಸಂದೇಶ.

ಗಾಂಧೀಜಿಯವರು ಮಿ. ಸತ್ಯಮೂರ್ತಿಯವರಿಗೆ ಈ ಪ್ರಕಾರವಾಗಿ ತಂತೀ ಮೂಲಕ ತಿಳಿಸಿರುವರು—

"ಮತದಾರರು ಉಮೇದುವಾರರ ಗುಣಾವಗುಣಗಳನ್ನು ನೋಡಕೂಡದು. ಆದರೆ ಅವರು ಯಾವ ಸಂಸ್ಥೆಯ ವತಿಯಿಂದ ನಿಂತಿರುವರೋ ಅದನ್ನೇ ಲಕ್ಷದಲ್ಲಿಡಬೇಕು. ರಾಷ್ಟ್ರೀಯ ಸಭೆಯು ದೇಶಕ್ಕೆ ಯೋಗ್ಯವೆಂದು ಕಂಡುಬಂದದ್ದಾದರೆ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೇನೇ ಮತಕೊಡಲು ಅನುಮಾನಿಸಬೇಡಿರಿ.

### ಅಪಾತ್ರತೆಯು ದೂರಾಗಲಿಲ್ಲ.

ಶ್ರೀ ಕೆ. ಎಫ್. ನರಿಮನ್ನರು ಕಾಂಗ್ರೆಸ್ ಬೋರ್ಡಿನ ಪರವಾಗಿ ಅಸೆಂಬ್ಲಿಗೆ ಉಮೇದುವಾರರಾಗಿ ನಿಂತಿದ್ದರು, ಆದರೆ ಅವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಹಾಕಿರುವದಿಲ್ಲವಾದುದರಿಂದ ಮುಂಬಯಿ ರಾಷ್ಟ್ರೀಯ ಕಾರ್ಯಕರ್ತರಲ್ಲಿ ಒಳ್ಳೇ ಗಲಭೆಯುಂಟಾಯಿತು. ಅವರ ಸ್ಥಾನದಲ್ಲಿ ಮಿ ಕೆ. ಎಮ್. ಮುನಸಿ ಎಂಬುವವರನ್ನು ನಿಲ್ಲಿಸಿದ್ದಾರೆ.

ಮಧ್ಯಪ್ರಾಂತ ಸರಕಾರದವರು ಕಾಂಗ್ರೆಸ್ ಪಾ. ಬೊ. ನವರು ನಿಲ್ಲಿಸಿದ ಮಿ. ದ್ವಾರಕಾ ಪ್ರಸಾದ ಮಿಶ್ರ ಇವರ ಅಪಾತ್ರತೆಯನ್ನು ದೂರು ಮಾಡದಿದ್ದುದರಿಂದ ಕಾ. ಪಾ. ಬೋರ್ಡಿನ ಸಮಿತಿಯು ಸೇರಿ ಇದನ್ನು ನಿಷೇಧಿಸುವದಕ್ಕಾಗಿ ಪಾರ್ಲಿಮೆಂಟರಿ ಬೋರ್ಡಿನ ಕಾರಾಗೃಹ ಕಂಡ ಎಲ್ಲ ಸದಸ್ಯರನ್ನು ಹಿಂದೆಗೆದುಕೊಳ್ಳಬೇಕೆಂದು ಗಾಂಧೀಜಿಯವರಿಗೆ ತಂತೀ ಮೂಲಕ ತಿಳಿಸಲಾಯಿತು. ಅದಕ್ಕೆ ಮಹಾತ್ಮರು "ಅವಸರ ಮಾಡಬೇಡಿರಿ; ಸರದಾರರು ಹೇಳಿದಂತೆ ಕೇಳಿರಿ." ಎಂದು ತಿರುಗಿ ತಿಳಿಸಿರುವರು.

ಈ ವಿಷಯವನ್ನು ಕುರಿತು ಮಹಾತ್ಮರೊಡನೆ ಚರ್ಚಿಸುವದಕ್ಕಾಗಿ ಸರದಾರ ಪಟೇಲರು ವರ್ಧಾ ಆಶ್ರಮಕ್ಕೆ ತೆರಳಿದರು. ಅಲ್ಲಿ ಡಾ. ಅನ್ಸಾರಿ ಮತ್ತು ಇವರು ಕೂಡಿ ಈ ವಿಷಯವು ಅಖಿಲ ಭಾರತ ಸಮಸ್ಯೆಯನ್ನಾಗಿ ಮಾಡಬೇಕೋ ಹೇಗೆ? ಎಂಬುದನ್ನು ಚರ್ಚಿಸುವರು.

ಪಂ. ಮದನಮೋಹನ ಮಾಲವೀಜಿಯವರ ಮೇಲಿನ ನಿರ್ಬಂಧವನ್ನು ಸರಕಾರದವರು ತೆಗೆದಿಲ್ಲವಂತೆ. ಅದರೆ ಈ ಮೊದಲೇ ಅವರು ತಮ್ಮ ಉಮೇದುವಾರಿಕೆಯನ್ನು ಬಿಟ್ಟು ಮಿ. ಸಿ. ವಾಯ್. ಚಿಂತಾಮಣಿಯವರನ್ನು ನಿಲ್ಲಿಸಿರುವರು.

### ಅಬ್ದುಲ್ ಗಫರ್‌ನಗರದ ವಾರ್ತೆ.

ಸರದಾರ ವಲ್ಲಭಭಾಯಿ ಪಟೇಲರು ಮುಂಬಯಿ ನಗರ ಸಭೆಯ ಆರೋಗ್ಯದ ಅಧಿಕಾರಿಯಾದ ಮಿ. ನೆರೂರಕರರವರೊಡನೆ ರಾಷ್ಟ್ರೀಯ ಅಧಿವೇಶನವು ನೆರೆಯುವ ಅಬ್ದುಲಗಫರನಗರದ ವ್ಯವಸ್ಥೆಯನ್ನು ಪರೀಕ್ಷಿಸಿದರು. ಮಿ. ನೆರೂರಕರರವರು ಸ್ಯಾನಿಟರಿ ವ್ಯವಸ್ಥೆಯು ತುಂಬಾ ಹೃಸ್ತಿಕರವಾಗಿರುವದೆಂದು ತಿಳಿಸಿದರು. ತಾವು ಅನೇಕ ರಾಷ್ಟ್ರೀಯ ಮಂಟಪಗಳನ್ನು ನೋಡಿದ್ದು ಎಲ್ಲವುಗಳಿಗಿಂತಲೂ ಈ ನಗರದ ವ್ಯವಸ್ಥೆಯು ಅಚ್ಚುಕಟ್ಟಾಗಿದೆಯೆಂದು ಸರದಾರರು ಹೇಳಿದರು.

ಕಾರಾಗೃಹದಲ್ಲಿ ದೇಶಕ್ಕಾಗಿ ಸ್ವಾರ್ಥತ್ಯಾಗಮಾಡಿ ಹೋದ ಜನರಿಗೆ ಈ ರಾಷ್ಟ್ರೀಯ ಅಧಿವೇಶನದಲ್ಲಿ ಪ್ರವೇಶವನ್ನು ಉಚಿತವಾಗಿ ಕೊಡಬೇಕೆಂದು ಮಿ. ವೈಶಂಪಾರ್ಯ ಎಂಬುವವರು ಸ್ವಾಗತ ಸಮಿತಿಯ ಸೆಕ್ರೆಟರಿಗಳಿಗೆ ಕೇಳಿಕೊಂಡಿದ್ದಾರೆ.

ಪ್ರೇಕ್ಷಕರ ೨ ರೂ. ಟಿಕೀಟುಗಳನ್ನು ಜನರು ನಾ ಮುಂದೆ ನೀ ಮುಂದೆ ಎಂದು ಕೊಳ್ಳುತ್ತಿದ್ದಾರೆ. ಪರ ಪ್ರಾಂತಗಳಿಂದಲೂ ಜನರು ಟಿಕೀಟು ತರಿಸಿಕೊಂಡಿದ್ದಾರೆ. ಆದ್ದರಿಂದ ಮೊದಲೇ ತರಿಸಿಕೊಳ್ಳುವದುತ್ತಮ. ಅಧಿವೇಶನದ ಕಾಲಕ್ಕೆ ನಿರಾಶರಾಗಬೇಕಾದೀತು ಎಂದು ಸ್ವಾಗತ ಸಮಿತಿಯವರು ತಿಳಿಸುತ್ತಾರೆ.

## ತಿಪಟೂರಿನಲ್ಲಿ ಸಾಹಿತ್ಯದ ಸುಗ್ಗಿ.

ಬೆಂಗಳೂರು ಸರ್ವ ಭೂಷಣ ಶಿವಯೋಗೀಶ್ವರ ಮಠದ ಶ್ರೀ. ವೆ. ನಿ. ಮಹಾದೇವ ಸ್ವಾಮಿಗಳು ಶ್ರೀ ವೀರಶೈವಾನಂದಾಶ್ರಮದ ಮತ್ತು ಕರ್ನಾಟಕ ಸಂಘದ ಆಹ್ವಾನದಂತೆ ತಾ. ೩೦-೯-೩೪ ನೇ ಭಾನುವಾರ ಸಾಯಂಕಾಲ ತಿಪಟೂರಿಗೆ ದಯಮಾಡಿಸಿದರು.

ತಾ. ೧-೧೦-೩೪ ನೆಯ ಸೋಮವಾರ ಮತ್ತು ತಾ. ೩ ನೆಯ ಬುಧವಾರ ಈ ಎರಡು ದಿನಗಳೂ ಕರ್ನಾಟಕ ಸಂಘದಲ್ಲಿ ಅನುಕ್ರಮವಾಗಿ 'ಕನ್ನಡ ಸಾಹಿತ್ಯ' ಮತ್ತು 'ಮಾನವ ಧರ್ಮ' ಎಂಬ ವಿಷಯವಾಗಿ ಭಾಷಣ ಮಾಡಿದರು.

ತಾ. ೨-೧೦-೩೪ ನೇ ಮಂಗಳವಾರ ವರ್ತಕ ಮಂಡಳಿಯವರು ಏರ್ಪಡಿಸಿದ್ದ ಮಹಾತ್ಮಾಜಿಯವರ ಜಯಂತಿ ಸಭೆಯಲ್ಲಿ ಶ್ರೀಗಳೇ ಅಧ್ಯಕ್ಷತೆ ವಹಿಸಿದ್ದರು. ತಾ. ೪-೧೦-೩೪ ನೇ ಗುರುವಾರ ಸಾಯಂಕಾಲ ಇಲ್ಲಿಯ ದಿವಾಣ ಛತ್ರದಲ್ಲಿ ಸ್ಥಾಪಿಸಿರುವ ಸತ್ಯಗಣಪತಿ ಸನ್ನಿಧಿಯಲ್ಲಿ 'ಭಕ್ತಿ' ಎಂಬ ವಿಚಾರವಾಗಿಯೂ, ತಾ. ೫-೧೦-೩೪ ನೇ ಶುಕ್ರವಾರ ಸಾಯಂಕಾಲ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ 'ಸ್ತ್ರೀ ಧರ್ಮ ಮತ್ತು ಪಾತಿವ್ರತ್ಯ' ಎಂಬ ವಿಚಾರವಾಗಿಯೂ ಭಾಷಣ ಮಾಡಿದರು. ತಾ. ೭-೧೦-೩೪ ನೇ ಭಾನುವಾರ ಸಾಯಂಕಾಲ ಶ್ರೀ ವೀರಶೈವಾನಂದಾಶ್ರಮದಲ್ಲಿ ಬಸವೇಶ್ವರ ವಚನಗಳಲ್ಲಿ ಕೆಲವನ್ನು ಆರಿಸಿ ಅವುಗಳ ಸವಿಯನ್ನು ತೋರಿಸಿದರು.

ತಾ. ೮-೧೦-೩೪ ನೇ ಸೋಮವಾರ ಪ್ರಾತಃಕಾಲ ಸುಮಾರು ೩ ಗಂಟೆ ಹೊತ್ತು ಶ್ರೀಗಳ ಬಿಡಾರದಲ್ಲಿ ಇಲ್ಲಿಯ ವೀರಶೈವ ಮುಖಂಡರೂ ಆಶ್ರಮದ ಅಧ್ಯಾಪಕರೂ ಧಾರ್ಮಿಕ ಚರ್ಚೆ ನಡೆಯಿಸಿದರು. ಶ್ರೀಗಳು ಸರ್ವ ಸಮರ್ಪಕವಾದ ಉತ್ತರಗಳನ್ನು ದಯಪಾಲಿಸುತ್ತಿದ್ದರು. ತಾ. ೯-೧೦-೩೪ ನೇ ಮಂಗಳವಾರ ಮಧ್ಯಾಹ್ನದ ರೈಲಿನಲ್ಲಿ ಶ್ರೀಗಳು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಇಷ್ಟು ದಿನಗಳೂ ಇಲ್ಲಿಯ ಮಹಾಜನಗಳೂ, ಅಧಿಕಾರಿಗಳೂ ಭಾಷಣಗಳಿಗೆ ದಯಮಾಡಿಸಿ, ವಿಷಯಗರ್ಭಿತವೂ ಬೋಧಪ್ರದವೂ ಆದ ಶ್ರೀಗಳ ಭಾಷಣಗಳ ಸವಿಯನ್ನುಂಡು ಶ್ರೀಗಳ ಪಾಂಡಿತ್ಯವನ್ನು ಶ್ಲಾಘಿಸಿದರು. ಈ ೪ ದಿನಗಳೂ ತಿಪಟೂರಿನವರಿಗೆ ಸಾಹಿತ್ಯದ ಸುಗ್ಗಿಯಾಯಿತು.

ಸಾಹಿತ್ಯ ಸೇವಕ.

# ವಿವಿಧ ವರ್ತಮಾನ.

## ಧೂಮಕೇತುಗಳ ಬಲೆ.

ಧೂಮಕೇತುಗಳನ್ನು ನಾವು ಪುರಾಣಕಾಲದಿಂದಲೂ ಅನಿಷ್ಟವೆಂದು ತಿಳಿಯುತ್ತ ಬಂದಿರುವೆವಷ್ಟೆ. ಇದಕ್ಕೆ ಕಾರಣವೆಂದರೆ ಅವು ನಮಗೆ ಅಗೋಚರವಾದಂಥ ರೋಗವೊಂದು ಬಗೆಯ ಅನಿಷ್ಟ ತರುತ್ತವೆಂದು ನಮ್ಮ ಕಲ್ಪನೆ. ಆದರೆ ಆರ್ವಾಚೀನ ಖಗೋಲ ಶಾಸ್ತ್ರಜ್ಞರು ಅವು ಬಹು ದೂರದಿಂದ ಮೇರೆಯನ್ನು ಮೀರಿಬಂದ ಭಯಂಕರ ಗ್ರಹಗಳೇ ಆಗಿವೆಯೆಂದು ಹೇಳುತ್ತಾರೆ. ಅವು ಎಲ್ಲಿಂದ ಒಗೆಯಲ್ಪಡುತ್ತವೆಂಬುದು ಹೇಳಲು ಸಾಧ್ಯವಿಲ್ಲ. ಬಂಧನವನ್ನು ಕಿತ್ತುಕೊಂಡು ಬಂದ ಪಶುಗಳು ಬೇಕಾದ ಕಡೆಗೆ ಧುಮುಕುವಂತೆ ಇವುಗಳಲ್ಲೆಷ್ಟೋ ಧೂಮಕೇತುಗಳು ಭಯಂಕರವೇಗದಿಂದ ಭೂಮಿಗೆ ಅಪ್ಪಳಿಸಲು ಬರುತ್ತವೆ. ಇವುಗಳಲ್ಲೆಷ್ಟೋ ಧೂಮಕೇತುಗಳು ಪೃಥ್ವಿಗಿಂತ ದೊಡ್ಡವಿರುವುದರಿಂದ ಅವು ಒಂದು ವೇಳೆ ಅಪ್ಪಳಿಸಿದರೆ ಈ ಪೃಥ್ವಿಯು ಪುಡಿ ಪುಡಿಯಾಗಿ ಹೋಗಬಹುದು. ಆದರೆ ನಮ್ಮ ಪೃಥ್ವಿಯು ಇನ್ನೂ ಬಹುಕಾಲ ಇರಬೇಕೆಂದು ದೇವರ ಸಂಕಲ್ಪವಿದ್ದಂತೆ ತೋರುತ್ತದೆ. ಯಾಕೆಂದರೆ ಇಂಥ ಭಯಂಕರ ಧೂಮಕೇತುಗಳು ಬರುತ್ತಿರುವಾಗ ನಮ್ಮ ಪೃಥ್ವಿಯಂತೆಯೇ ಸೂರ್ಯನ ಸುತ್ತಲು ತಿರುಗುತ್ತಿರುವ ಗುರು ಗ್ರಹವು ಇವುಗಳನ್ನು ಎಳೆದುಕೊಳ್ಳುತ್ತದೆ. ಸೂರ್ಯಮಾಲೆಯ ಗ್ರಹಗಳಲ್ಲಿ ಗುರುವು ಬಹಳ ದೊಡ್ಡದಾಗಿರುವುದರಿಂದ ಅದರ ಆಕರ್ಷಣ ಶಕ್ತಿಯು ಪ್ರಚಂಡವಾಗಿರುತ್ತದೆ. ಆದುದರಿಂದ ಈ ಧೂಮಕೇತುಗಳೆಲ್ಲ ಅದರ ಆಕರ್ಷಣದಿಂದ ಎಳೆಯಲ್ಪಟ್ಟು ಉಪಗ್ರಹಗಳಾಗಿ ಅದರ ಸುತ್ತಲೂ ತಿರುಗುತ್ತವೆ. ಇಲ್ಲಿಯವರೆಗೆ ಈ ಗುರುವಿನ ಗುರುತ್ವಾಕರ್ಷಣ ಬಲೆಯಲ್ಲಿ ೧೫ ಧೂಮಕೇತುಗಳು ಸಿಲ್ಕಿಬಿದ್ದು ನಮ್ಮ ಪೃಥ್ವಿಯ ಮೇಲೆ ಬರುತ್ತಿದ್ದ ಭಯಂಕರ ವಿಪತ್ತು ದೂರಾಗಿದೆ.

## ಮುಂದೆ ಯುದ್ಧಗಳು ಹೇಗಾಗುವವು?

ಇ. ವ್ಹಾನ್. ರೆಬಿನ್ ಎಂಬ ಜರ್ಮನ್ ಶಾಸ್ತ್ರಜ್ಞರು ಭವಿಷ್ಯ ಕಾಲದ ಯುದ್ಧಗಳ ಸಂಬಂಧವಾಗಿ ಈ ಪ್ರಕಾರವಾಗಿ ಬರೆಯುತ್ತಾರೆ—ಯುದ್ಧದ ಸೈರಣೆಗಳು ಅದರಲ್ಲಿಯೂ ಯುದ್ಧದ ವಿಮಾನಗಳು ಪ್ರತಿಯೊಂದು ದೇಶದಲ್ಲಿಯೂ ಒಂದಕ್ಕಿಂತ ಒಂದು ಭಯಂಕರವಾಗಿ ಸಿದ್ಧವಾಗಹತ್ತಿವೆ.

ಭಯಂಕರ ಪ್ರಮಾಣದ ಮದ್ದು ಗುಂಡುಗಳನ್ನು ಎತ್ತಿಕೊಂಡು ಶೀಘ್ರಗತಿಯಿಂದ ಹಾರುವ ವಿಮಾನುಗಳು ಸಿದ್ಧವಾಗಹತ್ತಿದ್ದು ಅವುಗಳ ಟೊರ್ಪೆಡೊ ಗುಂಡುಗಳು ಪಟ್ಟಣಗಳನ್ನೆಲ್ಲ ನಾಶ ಮಾಡಬಲ್ಲವು. ಸೈನ್ಯಗಳು ಕಾದಾಡುವ ಕಾಲ ಹೋಯಿತು. ದೇಶ ದೇಶಗಳು ವಿಮಾನ ಮೂಲಕವಾಗಿ ನಾಶವಾಗುವ ಕಾಲ ಬಂದಿದೆ. ಇನ್ನು ಮೇಲೆ ಯುದ್ಧದಲ್ಲಿ ಮುತ್ತಿಗೆಯು ದೊಡ್ಡ ದೊಡ್ಡ ಪಟ್ಟಣಗಳ ಮೇಲೆ ಅಥವಾ ಭವ್ಯವಾದ ಕಾರ್ಯಾಲಯ ಇಲ್ಲವೆ ದೇಶದ ಮತ್ತು ನಾಗರಿಕರ ಸಂಸ್ಕೃತಿಯ ಕೇಂದ್ರಗಳ ಮೇಲೆ ಬಿದ್ದು ಅವೆಲ್ಲ ನಾಶವಾಗಬಹುದು. ನಿರಾಯುಧರಾದ ಅನೇಕರು ಕ್ಷಣಮಾತ್ರದಲ್ಲಿ ಸಾಯಬಹುದು. ಆದುದರಿಂದ ಎಲ್ಲ ದೇಶಗಳು ಮುಂದೆ ಬರಲಿರುವ ಇಂಥ ಭಯಂಕರ ಆಪತ್ತಿಯನ್ನು ತಡೆಯುವದು ಮಾನವ ಸಂಸ್ಕೃತಿಯ ದೃಷ್ಟಿಯಿಂದಲೇ ಹಿತಕರವಾದುದಾಗಿದೆ.

## ಜಪಾನದಲ್ಲಿ ಹಿಂದೀ ಆಲೋಚನಾ ಮಂದಿರ.

ಜಪಾನದ ಕೋಬ ಎಂಬ ಪಟ್ಟಣದಲ್ಲಿ ಭಂಜನ ಹಿಂದೀಯನು ತಮ್ಮ ಸಂಸ್ಕೃತಿಯ ಬಗ್ಗೆ ಆಲೋಚನೆ ಮಾಡುವದಕ್ಕಾಗಿ ಒಂದು ಭವನವನ್ನು ಕಟ್ಟಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದು ಇದಕ್ಕೆ ಜಪಾನದ ಪರರಾಷ್ಟ್ರ ಮಂತ್ರಿಯಿಂದ ಅಡ್ಡಿಯುಂಟಾಗಿದೆ.

ಈ ವಿಷಯವಾಗಿ ಕೋಬದಲ್ಲಿಯ ಅ. ಭಾ. ರಾಷ್ಟ್ರೀಯ ಕಾರ್ಯಕರ್ತರಾದ ಮಿ: ಎಏಂ. ಸಹಾಯ ಎಂಬುವವರು ಜಪಾನದ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದೇನಂದರೆ, "ಇದರ ಮರೆಯಲ್ಲಿ ಇಲ್ಲಿಯ ಬ್ರಿಟಿಶ್ ರಾಯಭಾರಿಯ ಆಂಗವಿರಬಹುದೇನೋ ಎಂಬ ಸಂಶಯವಾಗಹತ್ತಿದೆ. ಯಾಕಂದರೆ ನಾವು ಮಾಡುವ ಕಾರ್ಯವು ಕೇವಲ ಸಂಸ್ಕೃತಿಯ ದೃಷ್ಟಿಯಿಂದ; ರಾಜ ಕಾರಣದ ಲೇಶವಾದರೂ ಇಲ್ಲ. ಹೀಗಿದ್ದು ತಡೆಯುಂಟಾಗಿದೆ. ಹಿಂದೀ ಮತ್ತು ಜಪಾನಿ ಜನರ ಮಿತ್ರತ್ವವನ್ನು ಕಾಯುವದಕ್ಕಾಗಿ ಈ 'ಹಿಂದೀ ಕೈಕನ' ಹಿಂದೀ ಆಲೋಚನಾ ಮಂದಿರವು ಸ್ಥಾಪಿಸಲ್ಪಡತಕ್ಕದ್ದಿದೆ.

ಕೆಲ ದಿವಸಗಳ ಹಿಂದೆ ಬೆಲ್‌ಗ್ರೇಡದಲ್ಲಿರುವ ಸುಭಾಸಚಂದ್ರಬೋಸರು ಅಪ್ರಿಯರೆಂದು ಅಲ್ಲಿಯ ಬ್ರಿಟಿಶ್ ರಾಯಭಾರಿಯು ವರ್ತಮಾನ ಪತ್ರಗಳ ಮೂಲಕ ಚಟುವಟಿಕೆ ನಡೆಸಿದನೆಂದು ತಿಳಿದುಬಂದಿದೆ. ಈ ವಿಷಯವನ್ನು ಮಿ. ಲ್ಯಾನ್ಸ್‌ಬರಿಯವರು ಪಾರ್ಲಿಮೆಂಟಿನಲ್ಲಿ ಕೇಳುವವರಿದ್ದಾರೆ. ಈ ಸಂಗತಿಗಳು ನಿಜವಾಗಿದ್ದಲ್ಲಿ ಇಂಗ್ಲಂಡವು ಹಿಂದುಸ್ಥಾನದ ಸೌಮ್ಯಚಟುವಟಿಯನ್ನು ಕೂಡಾ ಅಡ್ಡಿಪಡಿಸುತ್ತದೆಂದು ತಿಳಿಯಬಹುದಲ್ಲವೇ?

## ಜೈನ ಸಮಾಜ ಶರಣ ಸುಧಾರಕರು.

ಪುಣೆಯಲ್ಲಿ ಶೇಟ ಪುನಮಚಂದ ಮಾವಡಿಕರ ಎಂಬುವವರು ನಿಧನಹೊಂದಿದ ತಮ್ಮ ತಂದೆಯವರ ಸಲುವಾಗಿ ಮೃತ್ಯುಭೋಜನ (ಮೋಸರ) ಮಾಡಿಸುವವರಿದ್ದಾರೆ. ಈ ಪದ್ಧತಿಯು ಸರಿಯಲ್ಲವೆಂದು ಅನೇಕ ಶೇಟರು ಅವರಿಗೆ ತಿಳಿಸಿಹೇಳಿದರೂ ಅವರು ಕೇಳಲಿಲ್ಲ. ಇಂಥ ಮೃತ್ಯು ಭೋಜನಕ್ಕೆ ಹೊರಗಿನಿಂದ ಯಾರೂ ಬರಕೂಡದೆಂದು ಜೈನ ಸಮಾಜದವರು ಸಾವಿರಾರು ಹಸ್ತಪತ್ರಿಕೆಗಳನ್ನು ಹಂಚಿ ಅವರ ಮನೆಯಲ್ಲಿಯೂ ಆ ಕಾರ್ಯವು ಜರುಗದಂತೆ ಅದೇ ಸಮಾಜದ ಸ್ವಯಂಸೇವಕರು ಪಿಕೇಟಿಂಗ ನಡೆಸಿದ್ದಾರೆ. ಇದಕ್ಕೆ ಅವರ ಸ್ತ್ರೀ ಸಮಾಜವೂ ವಿರೋಧಿಸಿ ಅನೇಕರು ಸ್ವಯಂಸೇವಿಕೆಯರಾಗಿದ್ದಾರೆ. ಈ ಪದ್ಧತಿಯನ್ನು ನಿಷೇಧಿಸುವದಕ್ಕಾಗಿ ಶೇಟ ಮಾಣಿಕಚಂದ ತೇಜಾಚಂದ ಎಂಬುವವರು ೫ ದಿವಸಗಳ ಉಪವಾಸ ಸತ್ಯಾಗ್ರಹವನ್ನು ಕೈಕೊಂಡಿದ್ದಾರೆ. ತರುಣ ಸ್ತ್ರೀ ವುರುಷ ಜೈನರು ಈ ಮೃತ್ಯುಭೋಜನದ ಪದ್ಧತಿಯು ನಷ್ಟವಾಗಲೇಬೇಕೆಂಬ ದೃಢಕಲ್ಪನೆಯುಳ್ಳವರಾಗಿದ್ದಾರೆ.

ನಮ್ಮ ವೀರಶೈವ ತರುಣಸಂಘಗಳು ಇಂಥ ಸಮಾಜದ ದುಷ್ಟ ರೂಢಿಗಳನ್ನು ನಿವಾರಿಸುವ ಚಟುವಟಿಕೆಯನ್ನು ಕೈಕೊಳ್ಳುವವೇ?

## ಸಾಂಗಲಿ ಸಂಸ್ಥಾನ ಪ್ರಜಾಪರಿಷತ್ತು.

ಸಾಂಗಲಿ ಸಂಸ್ಥಾನ ಪ್ರಜಾಪರಿಷತ್ತಿನ ೧೧ ನೆಯ ಅಧಿವೇಶನವು ರಬಕವಿಯಲ್ಲಿ ಜರುಗುವದು. ಸ್ವಾಗತಾಧ್ಯಕ್ಷರು ಶ್ರೀ ಬಾಗೋಜಿ ಮುರಿಗಯ್ಯನವರು. ಪರಿಷತ್ತಿನ ಅಧಿವೇಶನವು ರಾ. ಸಾ. ಪಿ. ಜಿ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೨೦ ಮತ್ತು ೨೧ ನೆಯ ತಾರೀಖುಗಳಲ್ಲಿ ರಬಕವಿ ಶಂಕರಲಿಂಗನ ದೇವಾಲಯದಲ್ಲಿ ಜರುಗುವದು. ಮುಖ್ಯವಾಗಿ ಒಕ್ಕಲಿಗರ ಋಣಮುಕ್ತತೆ, ವಾಕರ್ಟ್ ಆಕ್ಟ್, ಆದಾಯದ ಮೇಲಿನ ಕಂದಾಯ, ತೆರಿಗೆಯನ್ನು ಕಡಿಮೆ ಮಾಡುವದು ಮೊದಲಾದ ಅನೇಕ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವದು. ಈಗಾಗಲೆ ಉಪಸಮಿತಿಗಳೆಲ್ಲ ಏರ್ಪಡಿಸಲ್ಪಟ್ಟ ಕಾರ್ಯವು ಉತ್ಸಾಹದಿಂದ ನಡೆದಿದೆ. ಸ್ವಾಗತ ಸಮಿತಿಯ ಸದ್ಯರ ಸಂಖ್ಯೆಯೂ ಹೆಚ್ಚುತ್ತಲಿರುವದು.

# ವರ್ತಮಾನ ಸಾರ.

—ಬೆಳಗಾವಿ ಲಿಂಗರಾಜ ಕಾಲೇಜದ ವಾರ್ಷಿಕೋತ್ಸವವು ಮುಂಬಯಿ ವಿಶ್ವ ವಿದ್ಯಾಲಯದ ವ್ಹಾಯಿಸ್ ಚಾನ್ಸಲರ್ ವ್ಹಿ. ಎನ್. ಚಂದಾವರಕರರ ಸಮ್ಮುಖದಲ್ಲಿ ಜರುಗಿತು.

—ಮುಂಬಯಿಯಲ್ಲಿ ಒಬ್ಬ ಪುರೋಹಿತನು ಒಬ್ಬ ತೋಟಗನ ಹೆಂಡತಿಯ ಬೇನೆ ಕಳೆಯುತ್ತೇನೆಂದು ಹೇಳಿ ದೇವತಾರಾಧನೆ ಮಾಡಲು ಅವನ ಮನೆಗೆ ಇನ್ನೂ ನಾಲ್ವರೊಡನೆ ಬಂದನು. ದೇವತೆಯ ತೀರ್ಥವೆಂದು ಆ ದಂಪತಿಗಳಿಗೆ ಅಮಲೇರುವ ನೀರುಕೊಟ್ಟು ಮನೆಯೊಳಗಿನ ೬೩೦ ರೂ. ಗಳನ್ನು ಎತ್ತಿಕೊಂಡು ಪಾರಾದನು.

—ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಪ್ರೊ. ಟಾಕಖಾನವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು.

—ಮಹಾತ್ಮಾಜಿಯವರ ೬೬ ನೆಯ ವರ್ಧಂತಿಯ ದಿನ ಸಾಸನದ ವೈದ್ಯ ವಿದ್ಯಾಶ್ರಮದವರು ೨೦ ಲಕ್ಷ ೧೧ ಸಾವಿರ ಗಜ ಮೇಲ್ಪಟ್ಟು ನೂಲನ್ನು ನೂತು ಮಹಾತ್ಮರಿಗೆ ಅರ್ಪಿಸಿದರು.

—ಶ್ರೀ ಹೊಸಮನಿಯವರ ಮೇಲಿನ ಸರಕಾರದ ನಿರ್ಬಂಧವು ದೂರಾಗಿದೆ. ಹಾವೇರಿ ವಕೀಲ ಸಂಘದವರು ಇವರಿಗೇ ಮತಕೊಡಲು ಸಮ್ಮತಿಸಿದ್ದಾರೆ.

—ಬಳ್ಳಾರಿಯಲ್ಲಿ ಒಬ್ಬ ಪೂಜಾರಿಯು ೬೦ ವರ್ಷದ ವೃದ್ಧನನ್ನು ದೇವಾಲಯದ ಗರ್ಭ ಗುಡಿಯ ಹಾಸುಗಲ್ಲಿನ ಕೆಳಗೆ ಹುಗಿದು ಕೀಲಿಹಾಕಿ ಪಾರಾಗಿದ್ದಾನೆ. ಜನರು ಕೀಲಿ ಮುರಿದು ನೋಡಲು ಈ ಸಂಗತಿ ತಿಳಿಯಿತು ಒಳ್ಳೇ ಪೂಜಾರಿ!

—ಸಾಂಗಲಿ ಸಂಸ್ಥಾನ ಪ್ರಜಾ ಪರಿಷತ್ತು ೨೦ ಮತ್ತು ೨೧ ನೆಯ ತಾರೀಖಿನ ದಿವಸ ರಬಕವಿಯಲ್ಲಿ ಜರುಗುವುದು.

—ಕಲಕತ್ತಾ ವಿಶ್ವವಿದ್ಯಾಲಯದವರೂ ಮತ್ತು ಬಂಗಾಲ ಸರಕಾರದವರೂ ಕೂಡಿ ಪ್ರವೇಶ ಪರೀಕ್ಷೆಯ ಮಾಧ್ಯಮ ಭಾಷೆಯು ಬಂಗಾಲಿಯೇ ಇರಬೇಕೆಂದು ನಿರ್ಣಯಿಸಿದ್ದಾರೆ. ಅದರಂತೆ ಪುಸ್ತಕಗಳನ್ನು ಒರೆಯುವ ಕಾರ್ಯವು ನಡೆದಿದ್ದು ೧೯೩೬ ಕ್ಕೆ ಪ್ರಾರಂಭವಾಗುವದು.

—ಕಾಂಗ್ರೆಸದ ಪೂರ್ವದಲ್ಲಿ ಸೇರಲಿರುವ ಅ ಭಾ ಸಮಾಜ ಪತ್ರಾವಾದಿಗಳ ಪರಿಷತ್ತಿಗೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

—ಡಾ. ಅನ್ಸಾರಿಯವರು ಹಿಂದುಸ್ಥಾನಕ್ಕೆ ಬಂದ ಕೂಡಲೆ ಇವರು ಅನೇಕ ಯುರೋಪಿಯನ್ ಮಿತ್ರರೊಡನೆ ಸಂಭಾಷಣೆ ಮಾಡಿದುದರಿಂದ ಬ್ರಿಟಿಶರ ಧೋರಣದಲ್ಲಿ ಯಾವದೇ ತರದ ಬದಲಾವಣೆಯಾಗುವದು ಶಕ್ಯವಿಲ್ಲವೆಂದು ಹೇಳಿದರು.

—ಅಹಮದಾಬಾದದ ಒಂದು ಮುದ್ರಣ ಮಂದಿರವು ಬೆಂಕಿಯ ನಿಮಿತ್ತದಿಂದ ಇಳಿಸಲ್ಪಟ್ಟಿದ್ದರಿಂದ ಅದಕ್ಕೆ ಗುಪ್ತ ರೀತಿಯಿಂದ ಬೆಂಕಿ ಹಚ್ಚುವ ಕಾರಸ್ಥಾನವು ಮಾಡಲ್ಪಟ್ಟಿದ್ದಿತು. ಯೋಗ್ಯ ಕಾಲದಲ್ಲಿ ಪೋಲೀಸರು ಬಂದು ಚಿಮಣಿ ಎಣ್ಣೆ ಎದ್ದಿದ ಅರಿವೆಗಳನ್ನು, ನೆಲದ ಮೇಲೆ ಸಾಕಿದ ಬಿಳಿ ಪುಡಿಯನ್ನು ಜಪ್ತು ಮಾಡಿದರು.

—ಪಂಜಾಬದ ಶ್ರೀಮತಿ ಶನ್ನೋದೇವಿಯವರು ಅಸೆಂಬ್ಲಿಗೆ ಉಮೇದವಾರರಾಗಿ ನಿಂತಿರುವರು. ಇಲ್ಲಿಯ ವರೆಗೆ ಯಾವ ಸ್ತ್ರೀ ಉಮೇದವಾರರೂ ಅಸೆಂಬ್ಲಿಗೆ ನಿಂತಿರಲಿಲ್ಲ. ಪಂ. ಮದನಮೋಹನ ಮಾಲವೀಜಿಯವರು ಇವರಿಗೆ ಎಲ್ಲರೂ ಮತ ಕೊಡಿರೆಂದು ವಿನಂತಿ ಮಾಡಿಕೊಂಡಿರುವರು.

—ಶಿವಮೊಗ್ಗಾ ಹಿಂದು ಮುಸಲ್ಮಾನ ದೊಂಬೆಯಲ್ಲಿ ದೀರ್ಘ ಕಾಲ ಶಿಕ್ಷೆ ಹೊಂದಿದ ೭ ಜನ ಹಿಂದು ಆಪಾದಿತರು ಮೈಸೂರು ಹಾಯಕೋರ್ಟಗೆ ಅಪೀಲು ಮಾಡಲಾಗಿ ಅಲ್ಲಿ ದೋಷಮುಕ್ತರಾಗಿ ಬಿಡಲ್ಪಟ್ಟರು.

—ಅಂಕಲಿ ಗ್ರಾಮದ ಹತ್ತಿರ ಕೃಷ್ಣಾ ನದಿಯಲ್ಲಿ ನೂರಾರು ಜನರು ಮುಳುಗಿ ಸತ್ತುದಕ್ಕೆ ಮೂವರು ಅಂಬಿಗರ ದುರ್ಲಕ್ಷವೇ ಕಾರಣವೆಂದು ಅವರನ್ನು ನ್ಯಾಯಸ್ಥಾನಕ್ಕೆ ತರಲಾಗಿದೆ. ಅವರ ವ್ಯಾಜ್ಯವು ಕೊಲ್ಹಾಪುರ ಸಂಸ್ಥಾನದ ರಾಯಬಾಗದಲ್ಲಿ ನಡೆಯುವದು.

—ಮುಂಬಯಿಯಲ್ಲಿ ೨೫ ನೆಯ ತಾರೀಖಿನ ದಿವಸ ಕೂಡಲಿರುವ ಅ. ಭಾ. ಜಾತೀಯ ನಿರ್ಣಯ ವಿರೋಧಕ ಸಭೆಗೆ ಶ್ರೀ ರಾಮಾನಂದ ಚತರ್ಜಿಯವರು ಅಧ್ಯಕ್ಷರಾಗಿದ್ದಾರೆ.

—ಲಂಡನ್ನಿನಲ್ಲಿ ಇದೇ ಆಗಷ್ಟ ತಿಂಗಳದಲ್ಲಿ ಐ. ಸಿ. ಎಸ್. ಪರೀಕ್ಷೆಯ ಪರಿಣಾಮವು ಪ್ರಕಟವಾಗಿದೆ ಪಾಸಾದ ೨೫ ಜನ ಉಮೇದವಾರರಲ್ಲಿ ೭ ಜನರು ಹಿಂದೀಯರಿರುವರು.

—ಮದ್ರಾಸ ಇಲಾಖೆಯಲ್ಲಿ ಗೋಂಗಾಯ ಎಂಬಲ್ಲಿ ಅಕ್ಕಿಯ ಧಾರಣೆಯು ಒಮ್ಮೆಲೇ ಏರಿದ್ದರಿಂದ ನಾಲ್ಕು ಸಾವಿರ ಜನರು ಅಕ್ಕಿ ಅಂಗಡಿಗಳನ್ನು ಸುಲಿಗೆಮಾಡಿ ಒಯ್ದರು.

—ಕರಾಚಿ ಕೋರ್ಟನಲ್ಲಿ ನಥುರಾಮ ಎಂಬ ಲೇಖಕನನ್ನು ಕೊಲೆ ಮಾಡಿದ ಅಬ್ದುಲ ಕಾಯಮ್ ಎಂಬ ಮುಸಲ್ಮಾನನಿಗೆ ದೇಹಾಂತ ಶಾಸನವಾಯಿತು.

—ಮಧ್ಯಪ್ರಾಂತದಲ್ಲಿ ಒರಿಖಾನಿ ಸಂಸ್ಥಾನಿಕರು ತಮ್ಮ ಸಂಸ್ಥಾನದಲ್ಲಿ ಯಾವ ದೇವತೆಗೂ ಪ್ರಾಣಿ ಬಲಿ ಕೊಡಕೂಡದೆಂದು ಶಾಸನ ಮಾಡಿದ್ದಾರೆ.

—ಅಸೆಂಬ್ಲಿಗೆ ಉಮೇದವಾರರಾಗಿ ನಿಂತಿರುವ ಶ್ರೀ ಜೋಗರಾಯರು ಬೆಳಗಾವಿಯಲ್ಲಿ ಮತದೊರಕಿಸುವದಕ್ಕಾಗಿ ತಾವು ಸನಾತನ ಧರ್ಮವಿರುದ್ಧವಾದ ಕಟ್ಟಳೆಗಳನ್ನು ಮತ್ತು ಜಾತೀಯ ನಿರ್ಣಯವನ್ನು ಎದುರಿಸಲು ಹೋಗುತ್ತಿದ್ದೇನೆಂದು ಹೇಳಿದರು.

—ಹಿಂದುಸ್ಥಾನದ ವಿರುದ್ಧವಾಗಿ ಅಮೇರಿಕೆಯಲ್ಲಿ ಪ್ರಚಾರವಾಡಲ್ಪಟ್ಟ ವಿಚಾರಗಳನ್ನು ನಿವಾರಿಸುವದಕ್ಕಾಗಿ ಶ್ರೀ ವಿಠಾಬೆನ್ನೆರು ಅಮೇರಿಕೆಯಲ್ಲಿ ಭಾಷಣ ಮಾಡುತ್ತ ಸಂಚರಿಸುತ್ತಿದ್ದಾರೆ. ಇನ್ನೂ ಅವರು ಯುರೋಪಖಂಡದಲ್ಲೆಲ್ಲ ಸಂಚರಿಸುವ ಸಂಭವವೂ ಇದೆ.

—ಝಾಂಝಿಬಾರದಲ್ಲಿ ಹಿಂದೀ ಜನರ ಹಿತದ ಸಲುವಾಗಿ ಇಂಗ್ಲಂಡಿನಲ್ಲಿ ಪ್ರಯತ್ನಮಾಡಲು ದೀನಬಂಧು ಅಂಡ್ರೂಜರು ಲಂಡನ್ನಿಗೆ ಹೊರಟರು ಪುನಃ ಫೆಬ್ರುವರಿ ತಿಂಗಳಿಗೆ ಹಿಂದುಸ್ಥಾನಕ್ಕೆ ಬರುವರು. ಈಗ ಬಿಹಾರ ಭೂಕಂಪದ ವಿಷಯವಾಗಿ ಪುಸ್ತಕ ಬರೆಯುತ್ತಿದ್ದಾರೆ.

—ಶ್ರೀಮತಿ ವಿಠಾಬೆನ್ನೆರು ಅಮೇರಿಕೆಯ ನ್ಯೂಯಾರ್ಕ ಪಟ್ಟಣವನ್ನು ಮುಟ್ಟಿದರು. ಅಲ್ಲಿ ೧೫ ದಿವಸಗಳ ವರೆಗೆ ಪ್ರವಾಸ ಮಾಡುವವರಿದ್ದಾರೆ,

—ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಮುಂಬೈಗೆ ಹೋಗಿದ್ದಾರೆ. ಸ್ಟೇಶನ್ನಿನಲ್ಲಿ ಅವರನ್ನು ಎದುರುಗೊಳ್ಳಲು ಶ್ರೀ ನರಿಮನ್, ಸೋಫಿಯಾ ಸೋಮಜ್ಜ, ಬ್ರೆಲ್ವಿ ಮೊದಲಾದ ಮುಂದಾಳುಗಳು ಬಂದಿದ್ದರು. ಕಾಂಗ್ರೆಸ್ ಸೋಸಿಯಾಲಿಷ್ಟ ಪಂಗಡದಲ್ಲಿ ಬೆರೆತು ಕಾರ್ಯ ನಿರ್ವಹಿಸಶಕ್ತರವರಿದ್ದಾರೆ.

—ಶ್ರೀ ನರಿಮನ್ನರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರಂತೆ!

# ಪತ್ರಗಳ ಸಾರಾಂಶ.

## ವೀರಶೈವರಿಗೆ ವಿನಂತಿ.

ಆರ್ಯಾ ವೀರಶೈವ ಮಹನೀಯರಿ—

ಸತತ ನಾಲ್ಕು ವರ್ಷಗಳಿಂದ ನಾವು ನಮ್ಮ ಮತಸುಧಾರಣೆಯ ಕೆಲಸವನ್ನು ನಡೆಸಿದ್ದೇವೆ. ಆದರೆ ಈ ವರೆಗೂ ಸುಧಾರಣೆಯ ಕಾರ್ಯವು ಪೂರ್ಣ ಯಶಸ್ಸು ಹೊಂದಿಲ್ಲ ಈ ನಮ್ಮ ಮತ ಸುಧಾರಿಸಲು ಪ್ರಯತ್ನಿಸುತ್ತಿರುವ ಶ್ರೀ ವೇದಮೂರ್ತಿ ಅಯ್ಯಸ್ವಯ್ಯನವರು ಹುಲ್ಲೂರಕರ ನಾಗರಹಾಳಮಠ. ಇವರ ಬೋಧದಿಂದ ಈಗ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಸುಧಾರಿಸಿದಂತೆ ಕಾಣಬರುತ್ತದೆ. ನಮ್ಮ ಗ್ರಾಮದ ಹಾಲ್ಮತದೈವದವರು ಮತ ಸುಧಾರಿಸುವದಕ್ಕಾಗಿ ಶುದ್ಧಾಚಾರದ ಕೆಲವು ನಿಯಮಗಳನ್ನು ಗೊತ್ತು ಮಾಡಿಟ್ಟಿರುತ್ತಾರೆ ಯಾವವೆಂದರೆ—(೧) ನಮ್ಮ ಮತದಲ್ಲಿ ಯಾರು ಹಿಂಸೆ ಮಾಂಸಾಹಾರದಂಥ ದುಷ್ಕೃತ್ಯಗಳನ್ನು ಆಚರಿಸುವರೋ ಅಂಥವರನ್ನು ಮತದಿಂದ ಬಹಿಷ್ಕರಿಸಿ ದೈವಾಚಾರದ ಒಪ್ಪಿಗೆಯಂತೆ ಅವರನ್ನು ಪುನಃ ಶುದ್ಧೀಕರಿಸಿಕೊಳ್ಳಬೇಕು. (೨) ಯಾರು ಆಚಾರ ಸರಿಯಾಗಿ ವರ್ತಿಸಿ ಮತವಿರುದ್ಧವಾದ ದುಷ್ಕೃತ್ಯಗಳನ್ನು ದೂರೀಕರಿಸಿ ಶುದ್ಧಾಚರಣೆಯಿಂದ ನಡೆಯುವರೋ ಅಂಥವರನ್ನು ಮೂರು ವರ್ಷಗಳ ಮುದ್ದತವರೆಗೆ ಶೋಧಿಸಿ ಶಿವದೀಕ್ಷೆಯಿಂದ ಲಿಂಗಾಯತರನ್ನಾಗಿ ಮಾಡಬೇಕು. ನಮ್ಮ ಇಡೀ ಗ್ರಾಮವು ನಾಲ್ಕು ವರ್ಷಗಳಿಂದಲೂ ಶುದ್ಧಾಚರಣೆಯಿಂದ ನಡೆದು ಸುತ್ತಮುತ್ತಿನ ಹಳ್ಳಿಗಳಲ್ಲಿಯ ನಮ್ಮ ಮತದ ಜನರಿಗೆ ಆಶ್ಚರ್ಯವನ್ನುಂಟುಮಾಡಿದೆ. ಆದರೆ ನಿಯಮ ಪ್ರಕಾರ ಶಿವದೀಕ್ಷೆಯಿಂದ ಲಿಂಗಧಾರಣವು ಮಾತ್ರ ಯಾವ ಮಹನೀಯರಿಂದಲೂ ಇಲ್ಲಿಯವರೆಗೂ ಆಗಿಲ್ಲ. ಯಾಕಂದರೆ ನಮ್ಮ ಹಿಂದುಳಿದ ಈ ಮತದಲ್ಲಿ ಅಂಥ ಸುಧಾರಿಸಿದ ಜನರು ಇಲ್ಲದೇ ಇರುವದರಿಂದಲೂ, ವೀರಶೈವ ಮತದ ಸಹಾಯ ನಮಗಿಲ್ಲದ್ದರಿಂದಲೂ "ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿಲ್ಲೆಂಬಂತೆ" ಇಂಥ ಮಹಾಕಾರ್ಯವು ನಮ್ಮ ಕಡಿಯಿಂದ ಆಗದೇ ಇದ್ದು ಲಿಂಗಧಾರಣೆಯಿಲ್ಲದೆ ದುರ್ದೈವಿಗಳಾಗಿದ್ದೇವೆ. ತಾವು ಎಲ್ಲೆಡೆಯಲ್ಲಿಯೂ ಇರುವ ಈ ನಮ್ಮ ಅನಾಥ ಹಾಲ್ಮತವನ್ನು ಸುಧಾರಿಸಿ ನಮ್ಮ ಸಮಾಜದ ಅಜ್ಞಾನಿಗಳಿಗೆ ಲಿಂಗಧಾರಣೆಯಾಗುವ ಹಾಗೆ ಯತ್ನಿಸಿ ಕೀರ್ತಿಪಡೆಯಿರಿ. ವೀರಶೈವ ಮತವೇ ನಮ್ಮ ಮತವು. ಈ ಮಾತಿಗೆ ನಮ್ಮ ಮೂಲಗುರುಗಳೇ ಲಿಂಗಧಾರಿಗಳಾಗಿರುವದೇ ಆಧಾರವು. ನಮ್ಮ ಪೂರ್ವಜರು ಲಿಂಗಾಪೇಕ್ಷೆಗಳಾಗದೆ ಮೂರ್ಖತನದಿಂದ ವರ್ತಿಸಿದ್ದಕ್ಕಾಗಿ ಈ ದುಃಸ್ಥಿತಿಯು ನಮ್ಮ ಸಮಾಜಕ್ಕೆ ಒದಗಿ ಅಪಾರ ದುಃಖಕ್ಕೀಡು ಮಾಡಿದೆ. ಅಜ್ಞಾನದ ಬಲೆಯಲ್ಲಿ ಸಿಕ್ಕು ಪಥಗಾಣದೆ ಭಾವಿಕತನದ ಸಾಗರದಲ್ಲಿ ಬಿದ್ದು ಗೋಳಾಡುವ ಈ ಮತಕ್ಕೆ ಜ್ಞಾನದ ಅಸರ ಕೊಟ್ಟು ಸತ್ಪಥಕ್ಕೆ ಹಚ್ಚಿ ಇಹಪರಗಳಲ್ಲಿ ಸುಖವ ಹೊಂದಲು ಲಿಂಗಧಾರಿಗಳಾಗುವಂತೆ ಮಾಡಿದರೆ ಅಂಥ ವೀರಶೈವರಿಗೆ ನಾವು ಋಣಿಗಳಾಗಿರುವೆವು. ಈ ನವಯುಗದಲ್ಲಿ ವೀರಶೈವ ಮತವು ಆಂಗ್ಲೈಸ್ತ ಇಸ್ಲಾಮು ಮೊದಲಾದ ಪರಧರ್ಮಗಳನ್ನು ಸಹ ವೀರಶೈವ ಮತತತ್ವ ಬೋಧೆಯಿಂದ ಪ್ರಚುರಗೊಳಿಸಿ ತನ್ನ ಧರ್ಮಬಲವನ್ನು ವೃದ್ಧಿಗೊಳಿಸುತ್ತದೆ. ಆದರಂತೆ ಈ ನಮ್ಮ ಅನಾಥ ಮತವನ್ನು ಸುಧಾರಿಸಿ ಲಿಂಗಾಂಗಿಗಳಾಗಲು ಬಸವ ಸಂದೇಶವನ್ನು ಉಸದೇಶಿಸಿದರೆ ಅಲ್ಪಾವಧಿಯಲ್ಲಿಯೇ ನಮ್ಮ ಸಮಾಜವು ತನ್ನ ಪೂರ್ವೇತ್ಯೈಯನ್ನು ಕೊನೆಗಾಣಿಸಿ ವೀರಶೈವ ಮತದಿಂದ ದೊಡ್ಡ ಸಹಾಯವನ್ನು ಹೊಂದಿದಂತೆ ಆಗುವದೆಂದು ನಮ್ಮ ಇಚ್ಛೆ. ವೀರಶೈವ ಮತವು ಈ ಶುಭಕಾರ್ಯವನ್ನು ಪೂರ್ಣಗೊಳಿಸಿ ತನ್ನ ಬಲವನ್ನು ವೃದ್ಧಿಗೊಳಿಸಲು ಇದು ಉತ್ತಮ ಸಮಯ. ಈ ಪವಿತ್ರ ಕಾರ್ಯದಲ್ಲಿ ಪ್ರತಿಯೊಬ್ಬ ವೀರಶೈವನ ಮನಸ್ಸಾಗಲೆಂದು ಜಗದೀಶನನ್ನು ಕೋರುವ

ತಮ್ಮ

ಅಹಿಂಸಾ ಹಾಲ್ಮತ ಸಮಾಜ ಕುರುಗುಡ್ಡ
ತಾ|| ಲಿಂಗಸೂಗೂರ ಜಿ|| ರಾಯಚೂರ.

## ನಿಜಾಂ ವೀರಶೈವ ವಿದ್ಯಾವರ್ಧಕ ಫಂಡ ಶೇಡಂ.

ನಿಜಾಂ ವೀರಶೈವ ವಿದ್ಯಾವರ್ಧಕ ಫಂಡಿನ ಜನರಲ್ ಕಮಿಟಿಯು ಪ್ರತಿವರ್ಷದಂತೆ ಈ ಸಲ ನಾರಾಯಣಪೇಟೆಯ ಮುಕ್ಯ ವನಲ್ಲಿ ತಾ. ೩೬-೧೨-೧೩೪೩ ಫ. ಸೋಮವಾರ ಕೂಡಿ ಫಂಡಿನ ಕೆಲವು ನಿಯಮಗಳ ಬದಲಾವಣೆಯ ಬಗ್ಗೆಯೂ ಅಭಿವೃದ್ಧಿಯ ಬಗ್ಗೆಯೂ ಕೆಲವು ಠರಾವುಗಳ ಬಗ್ಗೆಯೂ ಚರ್ಚಿಸಿ ನಿರ್ಧರಿಸಲಾಯಿತು. ಹೊಸ ವರ್ಷದ ಮ್ಯಾನೇಜಿಂಗ ಕಮಿಟಿಯ ಕಾರ್ಯಕರ್ತರು ಬಹುಮತಾನುಸಾರ ಕೆಳಗಣ ಪ್ರಕಾರ ಆರಿಸಲ್ಪಟ್ಟರು,

೧ ಶ್ರೀಮನ್ನಿರಂಜನ ಶ್ರೀಶಾಂತವೀರ ಸ್ವಾಮಿಗಳು ಗುರುಮಠಕಲ್ ಅಧ್ಯಕ್ಷರು.
೨ ಶ್ರೀ ಪರಮಂಡನವರು ಸಜ್ಜನಶೆಟ್ಟಿ ಕಾನಾಗಡ್ಡಿ ಉಪಾಧ್ಯಕ್ಷರು
೩ ,, ಕೆ ಶಿವಸಿದ್ಧಪ್ಪನವರು ಶೇಡಂ ಸೆಕ್ರೆಟರಿಗಳು
೪ ,, ಶರಣಯ್ಯನವರು ಕುಸುನೂರು ,, ಸಹಾಯಸೆಕ್ರೆಟರಿಗಳು
೫ ,, ಶಿವಲಿಂಗಪ್ಪನವರು ನಿಷ್ಠಿ ,, ಮೆಂಬರರು
೬ ,, ಬಸನಲಿಂಗಪ್ಪನವರು ಬೇಳೆ ,, ,,
೭ ,, ಗುರುಬಸಪ್ಪನವರು ಹಿರೇಮಠ ಗುರುಮಠಕಲ್ ,,
೮ ,, ರಾಚಂಣ ಉಪ್ಪಿನ್ ,, ,,
೯ ,, ಚನ್ನಬಸಪ್ಪ ಗೌಡರು ಕೃಷ್ಣಾಪುರ ,,
೧೦ ಶ್ರೀ ಸಿದ್ಧರಾಮಪ್ಪನವರು ರೇಷ್ಮಿ ಚಿತ್ತಾಪುರ ,,
೧೧ ,, ಗುಂಡಪ್ಪನವರು ಪೋಲೀಸ ದುಗುನೂರು ,,
೧೨ ,, ಶರಣಪ್ಪನವರು ಕೊಟ್ನಡ್ಡಿ ಯಾದಗಿರಿ ,,
೧೩ ,, ಚನ್ನಬಸಪ್ಪನವರು ಗಂದೆ ನಾರಾಯಣಪೇಟ ,,
೧೪ ,, ಬಸವಲಿಂಗಪ್ಪನವರು ವಕೀಲ ಅಮೀನಪೂರ ,, ,,

ಈ ಪ್ರಕಾರ ಜನರಲ್ ಕಮಿಟಿಯು ಶ್ರೀ ಮನ್ನಿರಂಜನ ಶ್ರೀ ಶಾಂತವೀರ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಯಿತು.

ಕೆ. ಶಿವಸಿದ್ಧಪ್ಪ,
ಸೆಕ್ರೆಟರಿ ನಿಜಾಂ ವೀರಶೈವ ವಿದಾವರ್ಧಕ ಫಂಡ ಶೇಡಂ.

## ಬಾಗಲಕೋಟೆ ಸುದ್ದಿ.

ಇಲ್ಲಿ ಶ್ರೀ ಮದ್ವೀರಶೈವ ಬಸವೇಶ್ವರ ವಿದ್ಯಾವರ್ಧಕ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ|| ತರ್ಕತೀರ್ಥ ಪಂ|| ಕಲಿಗಣನಾಥ ಶಾಸ್ತ್ರಿಗಳವರ ಅಮೋಘವಾದ ವಾಕ್ಯಗಳಿಂದ ಶ್ರೀ ಬಸವೇಶ್ವರ ದೇವರ ವಚನ ಪ್ರವಚನಗಳು ವೇದಾಗಮೋಪನಿಷತ್ತುಗಳ ಆಧಾರವಾಗಿ ಕನ್ನಡ ವಚನಗಳಿಗೂ ಮತ್ತು ವೀರಶೈವ ಸಂಸ್ಕೃತ ಸಿದ್ಧಾಂತಗಳಿಗೂ ಹೋಲಿಸಿ ಶೋಧದೃಷ್ಟಿಯಿಂದ ಎಲ್ಲರ ಮನಸ್ಸಿಗೆ ಸರಿಯಾದ ರೀತಿಯಲ್ಲಿ ಜನ ಮೆಚ್ಚುವಂತೆ ಬೋಧ ಮಾಡುತ್ತಿರುವರು. ಈಗಿನ ಕಾಲದಲ್ಲಿ ಭಿನ್ನಾಭಿಪ್ರಾಯವುಳ್ಳ ಜನರಿಗೆ ಬಸವೇಶ್ವರಾದಿ ಪ್ರಮಥರಿಗೆ ಸಂಸ್ಕೃತ ಬರುತ್ತಿದ್ದಿಲ್ಲ. ವೇದಾಗಮೋಪನಿಷತ್ತಗಳ ತಿರಿಳು ಗೊತ್ತಿರುವದಿಲ್ಲಾ, ಜಾತಿಸಂಕರ ಮಾಡಿದರು ಅನ್ನುವಂಥ ಪಂಡಿತರಿಂದ ಜನವು ಭಿನ್ನಾಭಿಪ್ರಾಯವುಳ್ಳದ್ದಾಗಿದೆ. ಮೇಲೆ ಬರೆದ ಮಹಾ ಪಂಡಿತರಿಂದ ಇಂಥ ವಿಷಯವು ದೂರಾಗವದರಲ್ಲಿ ಸಂದೇಹವಿರುವದಿಲ್ಲ. ಇದರಂತೆ ಕರ್ನಾಟಕದ ಯಾವತ್ತು ವೀರಶೈವ ಸಂಸ್ಕೃತ ಪಾಠಶಾಲೆಗಳ ಕಾಲೇಜುಗಳ ಪಂಡಿತರು ಕನ್ನ

ಡ ವಚನ ವಾಙ್ಮಯಗಳನ್ನೂ ವೀರಶೈವ ಸಿದ್ಧಾಂತಗಳನ್ನೂ ಶೋಧಿಸಿ ಹೋಲಿಸಿನೋಡಿ ಪ್ರಚುರ ಮಾಡಿದಲ್ಲಿ ಜನರಲ್ಲಿದ್ದ ಭಿನ್ನಾಭಿಪ್ರಾಯವು ದೂರಾಗುವದರಲ್ಲಿ ಸಂದೇಹವಿರುವದಿಲ್ಲ.

—ವೀರಯ್ಯ ಹಿರೇಮಠ ಪಡೇಕನೂರ

## ೫೯ ಜಗದ್ವಂದ್ಯರಾದ ಮಹಾಶ್ರೀ ಶಿದ್ಧಲಿಂಗ ಮಹಾರಾಜ ಸುಕ್ಷೇತ್ರ ಲಚ್ಯಾಣ ಪುಣ್ಯತಿಥಿ ಮಹೋತ್ಸವ.

(೧) ಪ್ರತಿವರ್ಷ ಪದ್ಧತಿಯ ಪ್ರಕಾರ ಸಾರ್ವಜನಿಕ ಶ್ರೀ ಶಿದ್ಧಲಿಂಗ ಮಹಾರಾಜರ ಪುಣ್ಯತಿಥಿ ಉತ್ಸವವು ಮಿ|| ಭಾ|| ನ|| ೮ ದಿವಸ ನಡೆದ ಕಾಲಕ್ಕೆ ಶ್ರೀ ಹಿರೇಮಠ ಬನ್ನಟ್ಟಿ ಇವರು ವೀರಶೈವರ ಅಷ್ಟಾವರಣಗಳ ಮಹತ್ವದ ವಿಷಯವನ್ನು ತಾ. ೨೯-೯-೩೪ ರಿಂದ ತಾರೀಖು ೩೦-೯-೩೪ ಇಷ್ಟಿ ಅಪ್ಪಿರವರೆಗೆ ತಮ್ಮ ಅನೋಘವಾದ ಭಾಷಣದಿಂದ ಕೀರ್ತನ ರೂಪದಲ್ಲಿ ಸರ್ವರಿಗೂ ವಿದಿತವಾಗುವಂತೆ ತಿಳಿಯಪಡಿಸಿದರು. ಇವರ ಪ್ರೋತ್ಸಾಹನಂದಕರವಾದ ಭಾಷಣವು ಪ್ರತಿದಿವಸ ಕೂಡಲ್ಪಡುತ್ತಿದ್ದ ೩೦-೪೦೦ ಜನ ಸಭಿಕರಿಗೆಲ್ಲರಿಗೂ ಅತ್ಯಾನಂದವನ್ನುಂಟುಮಾಡಿತು. ಮತ್ತು ತಾರೀಖು ೩೦ ನೆಯ ದಿವಸ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಬಂಧನಾಳ ಶಿವಯೋಗಿಗಳವರ ಕೃಪಾಶೀರ್ವಾದದಿಂದ ೪೦೦-೫೦೦ ವೀರಶೈವ ಸ್ತ್ರೀ ಪುರುಷರಿಗೂ ತಮ್ಮ ಚರಣ ಸನ್ನಿಧಿಯಲ್ಲಿ ಸುದೀಕ್ಷೆಯನ್ನು ಕೊಟ್ಟು ಲಿಂಗದ ಮಹಿಮೆಯ ವಿಷಯವಾಗಿಯೂ ಮತ್ತು ವೀರಶೈವ ಮತತತ್ವಗಳ ಸಲುವಾಗಿಯೂ ವೀರಶೈವ ಬಂಧುಗಳ ಮನಸ್ಸಿನ ಮೇಲೆ ಪರಿಣಾಮಕಾರಕವಾಗುವಂತೆ ಅಮೃತತುಲ್ಯವಾದ ಭಾಷಣವನ್ನು ಮಾಡಿ ಕೂಡಿದ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು.

(೨) ತಾರೀಖು ೩೦ ನೇ ದಿವಸ ಮಧ್ಯಾನ್ಹ ೨ ಘಂಟೆಯಿಂದ ೫ ಘಂಟೆಯವರೆಗೆ ಅನ್ನ ಸಂತರ್ಪಣೆಯಾಗಿ ಆ ಮೇಲೆ ಸಂಜೆಯ ೭ ಘಂಟೆಯಿಂದ ೧೦ ಘಂಟೆಯವರೆಗೆ ಶ್ರೀ ಮನ್ನಿರಂಜನ ಬಂಧನಾಳ ಶ್ರೀಗಳವರ ಮತ್ತು ಶ್ರೀ ಶಿದ್ಧಲಿಂಗ ಮಹಾರಾಜರವರ ಪಲ್ಲಕ್ಕಿ ಮಹೋತ್ಸವ ಕಾರ್ಯವು ಸರ್ವರ ಜಯಘೋಷದೊಡನೆಯೂ ಭಜನೆ ಬಜಂತ್ರಿ ಮೊದಲಾದ ವಾದ್ಯ ಘೋಷದೊಡನೆಯೂ ಹೊರಟು ಮುಖ್ಯ ಬೀದಿಗಳಲ್ಲಿ ಸಾಂಗವಾಗಿ ಒಳ್ಳೇ ವಿಜೃಂಭಣೆಯಿಂದ ನೆರವೇರಿತು.

### ಸಾಹಸದ ಕೃತ್ಯ.

ಸಾಲೋಟಗಿ (ಇಂಡಿ) ತಾರೀಖು ೧೧ ನೆಯ ಅಕ್ಟೋಬರ ದಿವಸ ಶ್ರೀಯುತ ಲಿಂಗನಗೌಡ ಮುದಿಗೌಡ ಪಾಟೀಲ ಇವರು ಭಯಂಕರವಾದ ಹುಲಿಯನ್ನು ಮುಳ್ಳುಗಳ್ಳಿಯಿಂದ ಹೊರಗೆ ಬರುವಾಗ್ಗೆ ಧೈರ್ಯದಿಂದ ಎದುರಿಗೆ ನಿಂತು ಗುಂಡಿನ ಒಂದೇ ಹೊಡತದಿಂದ ಒಗೆದು ಕೊಂದರು. ಇದು ಮಾತ್ರ ಶೂರತನದ ಕೆಲಸವು ಇದು ಸಾತಲಗಾವದ ಜನರಿಗೂ ದನಕರಗಳಿಗೂ ತ್ರಾಸು ಕೊಟ್ಟದ್ದಲ್ಲದೆ ಇಬ್ಬರಿಗೆ ಕಡಿದಿದ್ದು ಆದರಲ್ಲಿ ಒಬ್ಬನು ಸತ್ತನು. ಹುಲಿಯನ್ನು ಕೊಂದದ್ದಕ್ಕಾಗಿ ಅಲ್ಲಿಯ ಜನರು ಸದರ ಗೌಡರ ಮೆರವಣಿಗೆಯನ್ನು ತೆಗೆದು ಬಹಳ ಕೊಂಡಾಡಿದರು. ಸಾಲೋಟಗಿಯಲ್ಲಿ ಹುಲಿಯನ್ನು ತಂದನಂತರ ಶ್ರೀಯುತ ರಾಮರಾವ ಕುಲಕರ್ಣಿಯವರು ಹುಲಿಯೊಡನೆ ಗೌಡರ ಮೆರವಣಿಗೆಯನ್ನು ತೆಗೆದು ೫೦ ರೂಪಾಯಿಗಳ ಉಡುಗರೆ ಮಾಡಿ ಫೋಟೊ ತೆಗೆದರು.

—ಗುರುಸೋವಯ್ಯ ಗಂಗಾಧರಯ್ಯ ಹಿರೇಪಟ್ಟ.

### ಗೋಕಾಕ ಫಾಲ್ಸ್.

ಶ್ರೀಯುತ ಬಸವಣೆಪ್ಪ ಜೋಬಾರಿ ಮು. ನೇಸರಗಿ ಇವರು ಗೋಕಾಕ ಮಿಲ್ಸದಲ್ಲಿ ೩೨ ವರ್ಷಗಳ ವರೆಗೆ ಕ್ಲಾರ್ಕ ಕೆಲಸ ಮಾಡಿ ಗ್ರ್ಯಾಚ್ಯುಟಿ ತೆಗೆದುಕೊಂಡು ರಿಟಾಯರ ಆದರು. ಗೋಕಾಕ ಫಾಲ್ಸ್ ವೀರಶೈವ ಕಮಿಟಿಯ ಸೆಕ್ರೆಟರಿ ಕೆಲಸ ಉತ್ತಮ ರೀತಿಯಿಂದ ಮಾಡಿದ್ದಕ್ಕೆ ಇಲ್ಲಿಯ ವೀರಶೈವ ಸಮಾಜದ ವತಿಯಿಂದ ಮು|| ರಾ|| ಮುರಿಗೆಪ್ಪ ಹಾವೇರಿ ವೀರಶೈವ ಕಮಿಟಿ ಚೇರಮನ್ನರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ತಾ ೮-೧೦-೩೪ ನೆ ಶನಿವಾರ ಸಭೆ ಕೂಡಿಸಿ ಅವರು ಸಮಾಜದಲ್ಲಿ ಮಾಡಿದ ಕಾರ್ಯಗಳನ್ನು ವರ್ಣಿಸಿ ಆಭಾರ ಮನ್ನಿಸಿದರು.


ನಮ್ಮ ಮನೆಗೆ ಅಲಂಕಾರವಾದ ಅನೇಕ
ಬಣ್ಣಗಳಿಂದ ಕೂಡಿರುವ 10X14 ಇಂಚ
12 ಪಟಗಳು ಬೇಕೆ? ಹಾಗಾದರೆ ಕೆಳಗೆ
ಕಂಡಿರುವಗೆಳ ಪೈಕಿ 12 ಪಟಗಳು ಮೊತ್ತ
ಒಂದು ರೂಪಾಯಿ ಕಳುಹಿಸಿದಲ್ಲಿ ಯಾ
ವಕರ್ಚಾಗ್ಗಿಲ್ಲದೆ ಕಳುಹಿಸುತ್ತೇನೆ.
೧ ಶ್ರೀ ಕಳುಹಿಸುವದಿಕ್ಕೆ
1 ಗಣಪತಿ 8. ಲಕ್ಷ್ಮಿ.
2 ಶಿವಸಂಪದಾನ 9 ಪಲ್ಲಕ್ಕಿ.
3. ರಾಧಾಕೃಷ್ಣ ಚಿತ್ರ 10. ಮಹಾತ್ಮಗಾಂಧಿ
4. ಶ್ರೀ ಕೃಷ್ಣ. 11. ಸಿಹಾಸನ.
5. ಶ್ರೀ ವೆಂಕಟೇಶ್ವರ. 12. ಮಾಧವನಸಿಂಚಿತೆ.
6. ಮಯೂರ 13. ರಾಧೆಯಸಿಂಚಿತೆ.
7. ಅನಂತಪದ್ಮನಾಭ 14. ಕೃಷ್ಣಲೀಲಾ.
15. ಬಸವೇಶ್ವರ.
12X16 ಇಂಚು ಬಸವೇಶ್ವರ ಚಿತ್ರ ೧೪೦-೪೦
ಯಜಮಾನ ಅಂಚೆ ಸಂ. ಬೆಳಗಾವಿ ಸಿಟಿ.

# ಪ್ಲೇಗ ಸಂಜೀವನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ!

ಮ್ಯಾನೇಜರ್, ಪ್ಲೇಗ್ ಸಂಜೀವನಿ
ಆಫೀಸ್ ಇವರಿಗೆ—

ಸವಿನಯ ವಿನಂತಿ.

ಈ ಕೆಳಗೆ ಕಾಣಿಸಿದ ಅಡ್ರೆಸ್ಸಿಗೆ ೫೦ ಪ್ಲೇಗ ಸಂಜೀವಿನಿ ಬಾಟ್ಲಿಗಳನ್ನು ಮತ್ತು ೧ ಕಾಲರಾ ಸಂಜೀವಿನಿ ಬಾಟ್ಲಿಯನ್ನು ವ್ಹಿ. ಪಿ. ಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ. ಅನುಪಾನ ಪತ್ರಿಕೆ ಇಡಬೇಕು. ಮತ್ತೇನಾದರೂ ತಮ್ಮಲ್ಲಿ ವಿಶೇಷ ಔಷಧಗಳು ಸಿಗುತ್ತಿದ್ದರೆ ತಿಳಿಸಬೇಕು. ನಮ್ಮ ಸಂಘಕ್ಕೆ ತಮ್ಮ ಪ್ಲೇಗ ಸಂಜೀವಿನಿಯನ್ನೇ ತರಿಸಿಕೊಳ್ಳುತ್ತೇವೆ.

ಸಿ. ಎಸ್. ಮಠ.
ಸೆಕ್ರೆಟರಿ,
ಕೋ-ಆಪರೇಟಿವ್ ಸೊಸಾಯಿಟಿ,
ಚೊಳಚಗುಡ್ಡ.

ಪ್ಲೇಗ ಸಂಜೀವಿನಿ ಬಾಟ್ಲಿಗಳನ್ನು ಕಳುಹಿಸಿಕೊಡಬೇಕು.

ಪ್ಲೇಗ ಸಂಜೀವಿನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ.

## ಒಮ್ಮೆಯಾದರೂ ತರಿಸಿ- -
## - -ಅದರ ಸತ್ವ ನೋಡಿರಿ!

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್‌|
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ||

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವನ್ನುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಯೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಷ್ಟತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮುಳ್ಳಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಾಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೮ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾಪಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ ದರ- ೧೦೦ಕ್ಕೆ ೩೦ ೩೦ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೇಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೨-೦ | ಕಜದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗಳ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೩-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ಏಕಲವ್ಯನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ.** ಪೋ. ಅಲಮಟ್ಟಿ ಜಿ. ವಿಜಾಪುರ.

ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—
ಕಲ್ಯಾಣಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ಕರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ



# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂ-ತಹ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿರ್ಮಾತೃವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾರೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)



೪,೬೬,೫೦೦ ರೂಪಾಯಿಗಳ ವಿಮೆ!
ಸಪ್ಟಂಬರ್ ಒಂದೇ ತಿಂಗಳಲ್ಲಿ

# ೧,೪೦,೫೦೦ ಬೆಲೆಯ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವವಿಮೆಗಳು ಬಡವರಿಗೂ ಬಲ್ಲಿದರಿಗೂ— —
— —ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ವಿಮೆಯ ಬೆಳವಣಿಗೆಯು ಕೆಳಗಿನಂತಿದೆ.

೧೯೩೪ ನೆಯ ಜನವರಿ ೧ ನೆಯ ತಾರೀಖಿನಿಂದ ಜೂನ್ ೩೦ ನೆಯ ವರೆಗೆ ೧೫೬೫೦೦
" ಜುಲಾಯಿ " ಸಪ್ಟಂಬರ್ ೩೦ನೆಯ ವರೆಗೆ ೩೨೯೦೦೦
ಅಂತು ರೂಪಾಯಿ ೪೬೬೫೦೦

ಕರ್ನಾಟಕದಲ್ಲಿ ಈ ಮಾದರಿಯ ವಿಮೆ ಕಂಪನಿಯು ಇದೊಂದೇ ಆಗಿರುವುದರಿಂದಲೂ ಉದ್ಯೋಗ ಧಂದೆಗಳನ್ನು ಬೆಳಸಲಿಚ್ಛೆಯನ್ನಿಟ್ಟುಕೊಂಡಿರುವದರಿಂದಲೂ ಕರ್ನಾಟಕಸ್ಥರಾದ ಪ್ರತಿಯೊಬ್ಬರೂ ಮುಂದುವರಿದು ಅಭಿಮಾನದಿಂದ ಈ ಕಂಪನಿಯ ಪಾಲಿಸಿಗಳನ್ನು ತೆಗೆದುಕೊಳ್ಳುವರೆಂದು ನಂಬಿದ್ದೇವೆ. ಪ್ರತಿಯೊಂದು ವಿಮೆಯಲ್ಲಿಯೂ ಪ್ರವೇಶ ಧನ ರೂಪಾಯಿ ೫, ತಿಂಗಳ ಕಂತು ರೂಪಾಯಿ ೧, ವಾರ್ಷಿಕ ಚಂದಾ ರೂಪಾಯಿ ೧.

ಈ ಕಂಪನಿಯಲ್ಲಿ ಕೆಲಸವಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನಾಯಜರರು, ಪೆಗಾರ ಇಥವಾ ಕಮಿಶನ್ ತೆಗೆದುಕೊಂಡು ಕೆಲಸ ಮಾಡಲುಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ.

ಮ್ಯಾನೇಜಿಂಗ್ ಏಜಂಟ್ಸ್,
ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ್ ಕಂ. ಲಿ. ಧಾರವಾಡ.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ. ಇನ್ನಿತರ ಸೋಸಾಯಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ಸಂಧಿಗಳಿಗೆ ಕೇಂದ್ರಸ್ಥಾನ .....

ಆಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೮-೪-೦
೬೦ ,, ,, ,, ೧೬-೪-೦
೩೦ ,, ,, ,, ೮-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

# ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಲ್ಲು ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊನಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ **ಮುಲಾಮು** ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಸೈಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

**" ಕಜ್ಜೆರ್ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಆಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಆಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿರಾಕೆಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಪಸ್ತ,**
**ಬಾಗಲಕೋಟೆ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುನಿ ಎಂದು ಹೇಳಲಕ್ಕುಮ್ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಎನೆ ಕಂಡಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯವೆ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತೆ. ರಮಲಜ್ಞರು ಈ ಪುಸ್ತಕವನ್ನೆಂ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.



ಎಲ್ಲ ನಮೂನೆಗಳು ಬರೀ ೧ ರೂಪಾಯಿ!

--೧೦೦೦--

| | | |
|---|---|---|
| **ನೀಲೀ ಮಶಿಚೀಟು—** | ೪ | ರೂಪಾಯಿ |
| **ಭಾಸ್ಕರ ಪ್ರಕಾಶ—** | ೧೧ | ,, |
| **ಗುಂಗಾಡ ನಾಶಕ—** | ೧೧ | ,, |
| **ಜೇಳಿನ ನಾಶ—** | ೧೧ | ,, |
| ೧೨ ತಗಣಿ ಶತ್ರು ಬಾಟ್ಲಿ— | ೭ | ,, |

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
ಪೋ. **ಹಂಚಲಿ.**
**ಜಿ. ವಿಜಾಪುರ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

# ಶರಣ ಸಂದೇಶ

The

Sharana Sandesh.

ನ್ಯಾಯನಿಷ್ಠುರ। ದಾಕ್ಷಿಣ್ಯಪರನಾಗಲ್ಲ। ಲೋಕವಿರೋಧಿ। ಶರಣನಾದಾತಂಗೂ ಅಂಜುವವನಲ್ಲ।
ಕೂಡಲಸಂಗಮದೇವರ ಶಾಪತೀಡಿದಲ್ಲಿಪ್ಪನಾಗಿ ॥ ವ ೨೨೯ ॥ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಆ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲ್ಮನಟ್ಟು- ಸೋಮವಾರ ತಾರೀಖು ೨೨ನೆಯ ಅಕ್ಟೋಬರ್ ೧೯೩೪. | ಸಂಚಿಕೆ ೧೦

ಜನಸೇವೆಯೇ ದೇವರ ಸೇವೆ

ಹಿಂದುಸ್ಥಾನದ ಭವಿತವ್ಯವು
ಇದೇ
## ರಾಷ್ಟ್ರೀಯ ಸಭೆಯ ಮೇಲಿದೆ!

ಅದೇಕೆಂದರೆ,

**ಜಾತಿ ನಿರ್ಣಯದ ಸಂಬಂಧವಾಗಿ ಅದ್ಭುತ ಕೋಲಾಹಲ ನಡೆಯುವದು. ಇದರ ನಿರ್ಣಯವು ಹಿಂದುಸ್ಥಾನದ ಜಾತಿ ಜಗಳವನ್ನು ಅಳಿಸುವುದೊ ಬೆಳೆಸುವುದೊ?**

**ರಾಷ್ಟ್ರೀಯ ಸಭೆಯ ಸಂಬಂಧವಾದ ಗಾಂಧೀಜಿಯವರ ನೂತನ ನಿಯಮ ನಿರ್ಬಂಧಗಳ ವಿಚಾರವಾಗಿ ಪ್ರಚಂಡವಾದ ವಿವಾದ ಜರುಗುವುದು. ಇದರ ನಿರ್ಣಯವು ಗಾಂಧೀಜಿಯವರನ್ನು ರಾಷ್ಟ್ರೀಯ ಸಭೆಯಿಂದ ಬಿಡುಗಡೆ ಮಾಡಿಸುವುದೊ ರಾಷ್ಟ್ರೀಯ ಸಭೆಯಲ್ಲಿರಿಸುವುದೊ?**

ಮೇಪಟ್ಟಿ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL-587315

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಇ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ

ಬಿ. ಎಸ್. ಕುರವತ್ತಿ
ಬ್ರಾದರ್ಸ, ಡಾವಣಗೇರಿ.

ಸಿ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿದ್ ಬಿಲ್ಡಿಂಗ್
ಹೈದ್ರಾಬಾದ (ದೆಕ್ಕನ್)

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಹೊಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಕರ್ನಾಟಕದ ಪ್ರತಿಯೊಂದು ಮನೆಯಲ್ಲಿಯೂ ಇರಬೇಕಾದ ಪಂಚಾಂಗವು

# ಜಾಹೀರಾತ ಕೊಡಲಿಕ್ಕೆ ಸುಸಮಯ.

ತಾವು ವ್ಯಾಪಾರ ಕೈಗಾರಿಕೆಗಳಿಂದ ಹೆಚ್ಚಾಗಿ ಹಣ ಗಳಿಸಿ ಸ್ವತಂತ್ರ ಜೀವಿಗಳಾಗಿ ಬಾಳಬೇಕೆಂದಿದ್ದರೆ ೧೦-೧೫ ವರ್ಷಗಳಿಂದ ಕರ್ನಾಟಕದಲ್ಲಿ ಪ್ರಸಿದ್ಧ ಹೊಂದಿ ಪ್ರತಿಯೊಂದು ಮನೆಯಲ್ಲಿ ಇರಲಿಕ್ಕೆ ತಕ್ಕುದಾದ **ಹೂಲಿ** (ಶ್ರೀ ಪೂವಲ್ಲಿ) **ಪ್ರಸಿದ್ಧ ಪಂಚಾಂಗದಲ್ಲಿ** ತಮ್ಮ ಜಾಹೀರಾತನ್ನು ಅಚ್ಚು ಹಾಕಿಸಲಿಕ್ಕೆ ಇಂದೇ ಕಳಿಸಿರಿ.

ಅವು ಡೆಮ್ಮಿ ಒಂದಾರಾಂಶ ಆಕಾರದ ೧ ಪೇಜ (೪||×೯||) ಗೆ ೧೫ ರೂ. ದರವಿಟ್ಟಿದೆ. ತಡವಾಗಿ ಬಂದ ಜಾಹೀರಾತುಗಳಿಗೆ ಸ್ಥಳ ದೊರೆಯಲಿಕ್ಕೆಲ್ಲ. ಕಾರಣ ಬೇಗ ನಿಮ್ಮ ಜಾಹೀರಾತನ್ನು ಅದಕ್ಕೆ ಹತ್ತುವ ರಕಮನ್ನು ಮನಿಯಾರ್ಡರ ಮೂಲಕ ಕಳಿಸಿರಿ.

ಈ ಪಂಚಾಂಗಗಳು ವಿಶೇಷವಾಗಿ ಕರ್ನಾಟಕದ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ಪ್ರಸಾರವಾಗುವದರಿಂದ ಕೂಡಲೇ ಪತ್ರವ್ಯವಹಾರ ಮಾಡಿರಿ!

ಸಿ. ಕೆ. ಲಿಂಗಯ್ಯಾಸ್ವಾಮಿ
ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಅಕ್ಟೋಬರ್ ತಾರೀಖು ೨೨ನೆಯ ಸೋಮವಾರ | ಸಂಚಿಕೆ ೧೮


# ಕಾಂಗ್ರೆಸ್ಸಿನ ಕಾರ್ಯ ಪ್ರಾರಂಭವಾಯಿತು!

**ಮುಂಬೈ ತಾ. ೨೦-೧೦-೧೯೩೪.**

ಸರಿಯಾಗಿ ಮಧ್ಯಾಹ್ನ ೧ ಗಂಟೆಗೆ ಸರದಾರ ಪಟೇಲರು ವರ್ಕಿಂಗ ಕಮಿಟಿಯನ್ನು ಪ್ರಾರಂಭಿಸಿದರು. ಗಾಂಧೀಜಿಯವರೂ ಮತ್ತು ಮುಖ್ಯ ಮುಂದಾಳುಗಳೆಲ್ಲರೂ ಆಗಮಿಸಿದ್ದರು. ಗಾಂಧೀಜಿಯವರು ಮೊದಲೇ ಸೂಚಿಸಿದಂತೆ ಕಮಿಟಿಯವರು ಕಾಂಗ್ರೆಸ್ ಘಟನೆಯಲ್ಲಿ ತಿದ್ದುಪಡಿ ಮಾಡುವ ಕಾರ್ಯದಲ್ಲಿ ತೊಡಗಿದರು. ಇದಾದ ಮೇಲೆ ಈ ವರ್ಕಿಂಗ ಕಮಿಟಿ ಮೆಂಬರರೂ ಮತ್ತು ಇನ್ನೂ ಅನೇಕ ಹೊರಗಿನ ಮೆಂಬರರೂ ಕೂಡಿ ಒಂದು ಸಮಿತಿಯಾಗಿ ಹೊಸ ಘಟನೆಯನ್ನು ಸಿದ್ಧನಾಡುವರು. ಈ ಕರಿಣ ಸಮಸ್ಯೆಯು ಒಂದೆರಡು ದಿವಸಗಳ ವರೆಗೆ ಸಾಗಬಹುದು. ಆದರೆ ಈ ಮುಖ್ಯ ವಿಷಯವು ಸಿದ್ಧವಾಗದೆ ವರ್ಕಿಂಗ ಕಮಿಟಿಯವರು ಮತ್ತೊಂದು ವಿಷಯಕ್ಕೆ ಕೈಹಾಕುವಂತಿಲ್ಲ.

### ಗಾಂಧೀಜಿಯವರ ಆಗಮನ.

ಮಹಾತ್ಮಾಗಾಂಧೀಜಿಯವರು ಕಲಕತ್ತಾ ಮೇಲಿನಿಂದ ನಾಶುಂಗಾ ಸ್ಪೇಶನ್ನಿನಲ್ಲಿಳಿದರು. ಇಲ್ಲಿ ಟ್ರೇ ಯಾವಾಗಲೂ ನಿಲ್ಲುತ್ತಿರುವುದಿಲ್ಲವಾದರೂ ಗಾಂಧೀಜಿಯವರು ರೈಲ್ವೆ ಅಧಿಕಾರಿಗಳೊಡನೆ ಕಮಗಾಗಿ ಈ ವ್ಯವಸ್ಥೆ ಮಾಡಿಕೊಂಡಿದ್ದರು. ಗಾಂಧೀಜಿಯವರು ಇಳಿದ ಕೂಡಲೆ ಗದ್ದಲವೇನೂ ಇದ್ದಿಲ್ಲ. ರೈಲ್ವೆ ಪೋಲೀಸರು ಮೊದಲೆ ಪ್ಲಾಟ್ ಫಾರ್ಮಿನ ಸುತ್ತಲೂ ಸಾಲಗಟ್ಟಿ ನಿಂತು ಕಾಯುತ್ತಿದ್ದರು.

ಸ್ವಾಗತಸಮಿತಿಯ ಪ್ರಮುಖರಿಗಷ್ಟೆ ಈ ಸೌಭ್ಯವು ಗೊತ್ತಿದ್ದುದರಿಂದ ಅವರು ಬಂದು ಹೊನಾಲೆ ಪಾಕಿ ಕರಕೆತಂಶುಹೋದರು.

### ಖಾದೀ ಪ್ರದರ್ಶನ ಮತ್ತು ಸ್ವದೇಶಿ ಪೇಟೆ.

ಖಾದಿ ಪ್ರದರ್ಶನದ ಉದ್ಘಾಟನ ಸಮಾರಂಭವು ಖಾನ ಅಬ್ದುಲಗಫಾರಖಾನರ ಹಸ್ತದಿಂದ ಜರುಗಿತು. ಈ ಪ್ರದರ್ಶನದ ಸರ್ವ ವ್ಯವಸ್ಥೆಯನ್ನು ಶ್ರೀ ಸರೋಜಿನಿ ನಾಯಡುರವರೇ ಮಾಡಿರುತ್ತಾರೆ. ಪ್ರದರ್ಶನದಲ್ಲಿಯ ಕಲಾ ವಿಭಾಗ (Art gallery) ವನ್ನು ಒಳ್ಳೇ ಚಿತ್ತಾಕರ್ಷಕವಾಗುವಂತೆ ಮಾಡಿರುವರು. ಒಟ್ಟಿಗೆ ೨ ಲಕ್ಷ ರೂ. ಬೆಲೆಯ ಕೈಗಾರಿಕೆಯ ಕಲಾ ಕೌಶಲ್ಯದ ವಸ್ತುಗಳನ್ನು ಸಂಗ್ರಹಿಸಿದ್ದಾರೆ. ಹಳ್ಳಿಯ ಜನರ ಕಲ್ಪನೆಯು ಪಟ್ಟಣಿಗರಿಗೆ ಉಂಟಾಗಬೇಕೆಂದು ಪ್ರದರ್ಶನವಲ್ಲಿ "ರಾಸ" ಗ್ರಾಮದ ಒಂದು ಆದರ್ಶವನ್ನು ಮಾಡಿರುವರು.

### ಮುಂದಾಳುಗಳ ವ್ಯವಸ್ಥೆ

ಸ್ವಾಗತ ಸಮಿತಿಯವರು ಎಲ್ಲ ಮುಂದಾಳುಗಳ ವ್ಯವಸ್ಥೆಯನ್ನು ಅವರವರ ಭಾವನೆಗೆ ಸಾಮ್ಯವಾಗಿ ಮಾಡಿದ್ದಾರೆ. ಗಾಂಧೀಜಿಯವರಿಗಾಗಿ ಹಳದೀ ವರ್ಣದ ಶಿಬಿರವನ್ನು ಹೊಡೆದಿದ್ದಾರೆ. ಇದು ಅವರಿಗೆ ಪ್ರಿಯವಾದ ಶಾಂತಿ ಮತ್ತು ತ್ಯಾಗದ ದ್ಯೋತಕವಾಗಿದೆ. ಸರದಾರ ವಲ್ಲಭಭಾಯಿಯವರ ಶಿಬಿರವು ಹಸರು ವರ್ಣದ್ದಿದ್ದು ಗುಜರಾತಿನ ಒಕ್ಕಲಿಗರ ಮೇಲಿನ ಅವರ ಪ್ರೇಮವನ್ನು ತೋರಿಸುವಂತೆ ಹಸರು ಹುಲ್ಲಿನಲ್ಲಿಯೇ ವಾಸಿಸುತ್ತಿರುವರೊ ಎಂಬುವಂತೆ ಮಾಡಿದ್ದಾರೆ. ಇನ್ನು ಗಫಾರಖಾನರ ವ್ಯವಸ್ಥೆ. ಅವರು—"ನನ್ನ ವ್ಯವಸ್ಥೆ ಮೊದಲಾದವೇನೂ ಬೇಕಿಲ್ಲ. ನಾನೊಬ್ಬ ದಂಡಾಳು, ನನ್ನ ವ್ಯವಸ್ಥೆ ನಾನೇ ಮಾಡಿಕೊಳ್ಳುತ್ತೇನೆ" ಎಂದರು. ಇವರ ಶಿಬಿರವು ಕಪ್ಪು ವರ್ಣದ್ದಿದ್ದು ಅದು ಕೆಂಪಗಿಯವರ ನಾಯಕತ್ವದ ಸೂಚಕವಾಗಿದೆ. ರಾಷ್ಟ್ರೀಯ ಅಧ್ಯಕ್ಷರ ಕಲ್ಪನೆಯಾಗುವಂತೆ ರಾಜೇಂದ್ರ ಬಾಬುರವರ ಶಿಬಿರವು ಕೇಸರಿ ಬಣ್ಣದಿರುವದು.

### ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವ ಕಾಲ ಬಂದಿದೆ.

ದಕ್ಷಿಣಾಫ್ರಿಕೆಯಲ್ಲಿ ವರಿಷ್ಠ ಬ್ರಿಟಿಶ ಅಧಿಕಾರಿಯಾಗಿದ್ದ ಜನರಲ್ ಸ್ಮಟ್ಸರವರು ಡಂಡೀ ಎಂಬಲ್ಲಿ ಭಾಷಣ ಮಾಡುವಾಗ ಹೇಳಿದ್ದೇನೆಂದರೆ— ಹಿಂದುಸ್ಥಾನಕ್ಕೆ ಈಗ ಸ್ವರಾಜ್ಯ ಕೊಡುವ ಕಾಲ ಬಂದಿದೆ. ಅಲ್ಲಿ ನಡೆದ ಸ್ವಸಂಗಗಳೆಲ್ಲ ಆಗತಕ್ಕವುಗಳೆ. ೧೯೦೭ರಲ್ಲಿ ಬೋರ ಜನರಿಗೆ ಸ್ವರಾಜ್ಯ ಕೊಟ್ಟದ್ದರಿಂದ ಎಂಥ ವಹಿವಾಟು ಸರಿಣಾಮವುಂಟಾಯಿತು! ಆ ಕಾಲಕ್ಕೆ ಅದಕ್ಕೂ ಅನೇಕ ಜನರು ವಿರೋಧಿಸಿದರು. ದಕ್ಷಿಣಾಫ್ರಿಕೆಯ ಇದೇ ಉದಾಹರಣೆಯನ್ನು ಮುಂದಿಟ್ಟುಕೊಂಡು ಹಿಂದುಸ್ಥಾನದ ಬಗ್ಗೆ ಧೋರಣವನ್ನು ಸ್ವೀಕರಿಸಬೇಕು.

### ಮಹಾತ್ಮಾಜಿಯವರ ರಾಜಕಾರಣ ನಿವೃತ್ತಿ.

ಈ ವಿಷಯವಾಗಿ ಸರದಾರ ವಲ್ಲಭಭಾಯಿಯವರ ಅಧ್ಯಕ್ಷತೆಯಲ್ಲಿ ನೆರೆದ ಕಾರ್ಯಕಾರಿ ಮಂಡಲದಲ್ಲಿ ವಿಚಾರಣೆಯಾಯಿತು. ಈ ಸಂಬಂಧ ನಿಶ್ಚಿತ ಯೋಜನೆ ತಿಳಿಸುವ ಕುರಿತು ಮಹಾತ್ಮಾ ಗಾಂಧಿ, ಭುಲಾಭಾಯಿ ದೇಸಾಯಿ, ಡಾ. ಪಟ್ಟಾಭಿ ಸೀತಾರಾಮಯ್ಯ, ಆ. ಮುನಸಿ ಮತ್ತು ಶ್ರೀ ಜಯರಾಮದಾಸ ದೌಲತರಾಮ ಈ ಪ್ರಕಾರ ಐವರ ಕಮಿಟಿಯನ್ನು ನೇಮಿಸಲಾಗಿದೆ.

'ಶರಣ ಸಂದೇಶ' ಪತ್ರಿಕೆಯಲ್ಲಿ ಪ್ರಕಟವಾಗಿರುವ

# ಶ್ರೀ ಕುಮಾರರ ಲೇಖನದ ಪರಾಮರ್ಶೆ.

(ಲೇಖಕರು— ಬಿ. ಶಿವಮೂರ್ತಿ ಶಾಸ್ತ್ರಿ ಹುಲ್ಕುಂಟೆಮಠ, ತುಮಕೂರು)

(ಲೇಖಾಂಕ ೨)

**ಶ್ರೀ ರೇಣುಕಾಚಾರ್ಯರು.**

ಶ್ರೀ ರೇಣುಕಾಚಾರ್ಯರು ಮತಸ್ಥಾಪಕರಲ್ಲವೆಂದೂ ಶ್ರೀಬಸವೇಶ್ವರನೇ ಮತಸ್ಥಾಪಕನೆಂದೂ ಶ್ರೀ ಕುಮಾರರ ವಾದ ರೇಣುಕಾಚಾರ್ಯನು ಮತಸ್ಥಾಪಕನೆಂದು ಸಿದ್ಧ ಮಾಡಲು ನಮಗೆ ಸಾಧನ ಸಂಪತ್ತು ಬಹಳವಾಗಿ ಬೇಕು. ಈಗ ರೇಣುಕರಿಂದಲೇ ಬರೆದ ಒಂದು ಗ್ರಂಥವೂ ನಮಗೆ ಸಿಕ್ಕಿಲ್ಲ. ರೇಣುಕ ಸಮಕಾಲೀನರ ಉಕ್ತಿಗಳಾವುವೆಂಬುದೂ ಲಭ್ಯವಾಗಿಲ್ಲ. ಶಿವಯೋಗಿ ಶಿವಾಚಾರ್ಯ, ಸೋಸಲೆ ರೇವಣಾರಾಧ್ಯ ಇವರು ಬರೆದಿರುವ 'ರೇಣುಕಾಗಸ್ತ್ಯ ಸಂವಾದ' 'ಚೋಳ ರೇಣುಕ ಸಂವಾದ' ಎಂಬ ಗ್ರಂಥಗಳಿಗೆ ಆಧಾರವಾದ ಗ್ರಂಥಗಳು ರೇಣುಕರಿಂದ ಬರೆಯಲ್ಪಟ್ಟವೆಯೆಂದು ತಿಳಿದು ಬರುತ್ತದೆ. ಆ ಮೂಲ ಗ್ರಂಥಗಳು ಸಿಕ್ಕಿದ ಹೊರತು ಈ ಹೇಳಿಕೆಯು ನಿರ್ಬಾಧಕವಾಗಲಾರದು. ಇರಬಹುದೆಂದು ಅನೇಕರು ತಿಳಿದುಕೊಂಡಿರುವ ರೇಣುಕಭಾಷ್ಯ, ಅಸ್ತ್ಯನ್ವೈತ್ರಿ ಮೊದಲಾದ ಗ್ರಂಥಗಳು ಅವಶ್ಯಕವಾಗಿವೆ ಅಲ್ಲದೆ ರೇಣುಕಾಚಾರ್ಯರ ಸಂಬಂಧವಾದ (ಸಂಸ್ಕೃತ ರೇಣುಕ ವಿಜಯ) ಸಿದ್ಧನಾಥನ ಸಂಸ್ಕೃತ ಗ್ರಂಥಕ್ಕೂ ಇದು ಭಿನ್ನವಾಗಿದೆ. ಒಂದು ಪ್ರಾಚೀನ ಗ್ರಂಥವಿರುವದಾಗಿ ಬೊಮ್ಮರಸನು ಹೇಳಿದ್ದಾನೆ. ರೇಣುಕಕಾವ್ಯ, ರೇಣುಕಚಂಪು, ಚತುರಾಚಾರ್ಯ ಪುರಾಣ ಮೊದಲಾದ ಗ್ರಂಥಗಳಚ್ಚಾಗಿ ವಿದ್ವಾಂಸರ ಹಸ್ತಗತವಾಗಿ ವಿಮರ್ಶೆ ನಡೆಯುವ ವರೆವಿಗೂ ನನ್ನ ವಾದವು ಕೆಸರೊಳಗಣ ಕಂಭನೆಂದೇ ನಾನು ತಿಳಿದಿದ್ದೇನೆ.

ರೇಣುಕನ ಸಂಬಂಧವುಳ್ಳಗಸ್ತ್ಯನು ಕುಂಭೋದ್ಭವನೋ? ಅಥವಾ ಆಯೆ ಹೆಸರಿನ ಬೇರೊಬ್ಬನೋ? ಎಂಬುದನ್ನು ಇನ್ನೂ ವಿಮರ್ಶಿಸಬೇಕಾಗಿದೆ. ಇತಿಹಾಸ ಪಂಡಿತರು ಅನೇಕ ಅಗಸ್ತ್ಯರನ್ನು ಹೇಳಿದ್ದಾರೆ ವಿಂಧ್ಯಾದ್ರಿಯನ್ನು ದಾಟಿ (ಗರ್ವಭಂಗವಮಾಡಿ) ಬಂದು ಆರ್ಯಕುಲದ ಅಗಸ್ತ್ಯನಿಗೂ, ನಮ್ಮ ಮತಸ್ಥಾಪಕನೆಂದು ನಾವು ನಂಬಿಕೊಂಡಿರುವ ರೇಣುಕಾಚಾರ್ಯನಿಗೂ ಸಂಬಂಧವುಂಟೇ? ಇಲ್ಲವೇ? ಎಂಬುದನ್ನೂ ಬಹಳವಾಗಿ ಚರ್ಚಿಸಬೇಕಾಗಿದೆ. ಈಗ ಪ್ರಕಟವಾಗಿರುವ ಸಿದ್ಧಾಂತ ಶಿಖಾಮಣಿಯು ಬಸವೇಶ್ವರನಿಗಿಂತಲೂ ಮೊದಲಿನದೆಂದು ಗ್ರಂಥದ ಮೂಲವನ್ನು ವಿಮರ್ಶಿಸಿದರೆ ತಿಳಿದುಬರುತ್ತದೆ.

ಶ್ರೀ ಶಂಕರಾಚಾರ್ಯನಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟನೆಂಬುದಾಗಿ ಪ್ರಸಿದ್ಧನಾಗಿರುವ ರೇವಣಸಿದ್ಧನು (ಗುರುವಂಶ ಕಾವ್ಯ, ಶಿವತತ್ವರತ್ನಾಕರದಲ್ಲಿ ಈ ವಿಚಾರವಿದೆ.) ಆಚಾರ್ಯ ರೇಣುಕನೇ ಅಥವಾ ಭಿನ್ನನೇ ಎಂಬುದೂ ವಿಚಾರಾರ್ಹವಾಗಿದೆ. ವೈದ್ಯಶಾಸ್ತ್ರ ಗ್ರಂಥಗಳನ್ನು ಬರೆದ ರೇವಣಸಿದ್ಧನೊಬ್ಬನಿದ್ದಾನೆ. ಸಿರಿವಾಳದ ಶಾಸನದಲ್ಲಿ ಪ್ರಕಟವಾಗಿರುವ ಶಿವಯೋಗಿ ಶಾಂತಿಮಯ್ಯನ ಮಗ ರೇವಣಸಿದ್ಧನೇ ಮಾಸನೂರು, ಮಂಗಳವಾಡ, ಸಿದ್ಧನಕೆರೆ, ಸೊನ್ನಲಿಗೆಗಳಲ್ಲಿ ಪ್ರಸಿದ್ಧನಾಗಿ ರುದ್ರಮುನಿಗೆ ತಂದೆಯೂ ಗುರುವೂ ಆಗಿರುವವನೆಂದು ನನ್ನ ನಂಬಿಕೆಯಾಗಿದೆ. ಇನ್ನು ಶ್ರೀ ಭವನ ವಿಕ್ರಮನನ್ನು ಕಲ್ಯಾಣದಲ್ಲಿ ಭೆಟ್ಟಿಯಾದನೆಂದು ಶ್ರೀಮಾಜೀರಿಗೆ ಬಸವಲಿಂಗಪ್ಪನವರು ಹೇಳಿರುವುದರಲ್ಲಿಯೂ ಸತ್ಯಾಂಶವಿದ್ದಂತಿದೆ. ಇವನು ಬಸವೇಶ್ವರನಿಗಿಂತಲೂ ೫೦ ವರ್ಷ ಹಿರಿಯನಿರಬಹುದೆಂದು ತಿಳಿದುಬರುತ್ತದೆ. ಹರಿಹರ, ಬೊಮ್ಮರಸ, ಬಸವಾಂಕ ಮೊದಲಾದ ಕವಿಗಳು ಒಬ್ಬನೇ ರೇಣುಕನ ಚರಿತ್ರೆಯನ್ನು ಹೇಳಿದ್ದಾರೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಎಲ್ಲ ಗ್ರಂಥಗಳನ್ನೂ ಅವಲೋಕಿಸಿದ ಮೇಲೆ ನನಗೆ ಅನುಮಾನವುಂಟಾಗಿ ಇವರು ಭಿನ್ನರೆಂದು ನಾನು ಹೇಳಲಿಕ್ಕೆ ಕಾರಣವಾಯ್ತು. ಇವುಗಳನ್ನೆಲ್ಲಾ ನಾನು ಆದಷ್ಟು ಬೇಗ "ಶಿವಾನುಭವ"ದಲ್ಲಿ ಒಂದು ಲೇಖನದ್ವಾರ ಪ್ರಕಟಿಸುವೆನೆಂದು ಸುದರ್ಶನದಲ್ಲಿ "ಅಲಮಟ್ಟಿ ಜಿಜ್ಞಾಸುವಿಗೆ" ವಚನ ಕೊಟ್ಟಿದ್ದೇನೆ. ಆಮೇಲೆ ಶ್ರೀ ಕುಮಾರರು ಅದನ್ನು ಖಂಡಿಸಲಿ ಅಥವಾ ಮಂಡಿಸಲಿ. ಆದು ವರೆಗೂ ಕೊಂಚ ಸಮಾಧಾನವನ್ನು ವಹಿಸಬೇಕೆಂದು ವಿಜ್ಞಾಪಿಸುತ್ತೇನೆ. ಜನರ ನಂಬಿಕೆಗೆ ಭಿನ್ನವಾಗಿ ಹೊಸ ವಿಚಾರಗಳನ್ನು ಹೇಳಲಿಕ್ಕೆ ಹೋದಾಗ ಲೋಗರು "ವಿಲಕ್ಷವೆಂದೂ ನಗೆಗೀಡಾಗುವುದೆಂದೂ" ಹೇಳುವುದು ಸ್ವಾಭಾವಿಕ. ರೇಣುಕಾಚಾರ್ಯನ ಬಗ್ಗೆ ನಾನು ಹೇಳಿರುವುದು ವಾದಗ್ರಸ್ತವೆಂದೂ, ಅದು ಸಿದ್ಧವಾಗಬೇಕಾದರೆ ಇನ್ನೂ ಬಹಳ ಪ್ರಮಾಣಗಳು ಬೇಕೆಂದೂ ಒಪ್ಪಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಭಾಷಣ ಕಾಲದಲ್ಲಿ ಬಹಳವಾಗಿ 'ಬಹುದು' ಶಬ್ದಗಳನ್ನು ಪ್ರಯೋಗಿಸಿದ್ದೇನೆ. ಇತಿಹಾಸಕಾರರ ಕಣ್ಣಿಗೆ ಮಣ್ಣು ಹಾಕುವ ಯೋಚನೆ ಅಂದೂ ಇರಲಿಲ್ಲ; ಇಂದೂ ಇಲ್ಲ. ನನಗೆ ಬೇಕಾದುದು ಇತಿಹಾಸದ ಸತ್ಯ.

**ಶ್ರೀ ಬಸವೇಶ್ವರನಿಗೆ ಮೊದಲು ಯಾವ ವೀರಶೈವನೂ ಇರಲಿಲ್ಲವೇ?**

ಈ ಮಾತನ್ನು ಓದಿದ ಕೂಡಲೇ ಈ ಲೇಖಕನಿಗೂ 'ಕೊಂಚ ನಗೆಯೂ ಬಂತು. ಬಹು ವಿಲಕ್ಷಣವಾಗಿಯೂ ತೋರಿತು' ಈ ವಾದದಲ್ಲಿ ಶ್ರೀ ಕುಮಾರರು ಜಯಶೀಲರಾಗಲಾರರೆಂದು ನನ್ನ ನಂಬಿಕೆಯಿದೆ. ಶ್ರೀ ದೇವರ ದಾಸಿಮಯ್ಯನು ಬಸವೇಶ್ವರನಿಗೆ ಸಮಕಾಲೀನನೆಂದು ಮ|| ರಾ|| ಕರ್ಲಮಂಗಲಂ ಶ್ರೀಕಂಠಯ್ಯನವರು 'ವೀರಶೈವ ಮತಾಚಾರ್ಯರ ಕಾಲನಿರ್ಣಯ' ಎಂಬ ಹೊತ್ತಿಗೆಯಲ್ಲಿ ಬರೆದಿದ್ದಾರೆ. ವಚನಕಾರನಾದ ಈ ದೇವರ ದಾಸಿಮಯ್ಯನು ಕಕ್ಕಯ್ಯನ ಹೆಸರಿತ್ತಿರುವುದರಿಂದ ಪ್ರತಿವಾದಿಲ್ಲದೆ ಶ್ರೀ ಕರ್ಲಮಂಗಲಂರವರ ವಾದವನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಶೂನ್ಯ ಸಂವಾದನೆಯಲ್ಲಿಯೂ ಅನುಭವ ಮಂಟಪದಲ್ಲಿ ದೇವರ ದಾಸಿಮಯ್ಯನೊಬ್ಬನಿದ್ದನೆಂಬುದಕ್ಕೆ ನಿದರ್ಶನವಿದೆ, ಆದರೆ ಸುಗ್ಗಲಾದೇವಿಯ ಶಾಸನದಲ್ಲಿ ಉಲ್ಲಿಖಿತನಾದ ದೇವರ ದಾಸಿಮಯ್ಯನು ಕ್ರಿ. ಶ. ೧೧೦೮-೧೧೫೦ ರ ವರೆಗೆ ಪೊಟ್ಟಲಕೆರೆಯಲ್ಲಿ ಆಳಿದ ಜಯಸಿಂಹ ರಾಜನನ್ನೂ ಅವನ ಆಸ್ಥಾನದ ೨೦೦೦೦ ಮಂದಿ ಪ್ರತಿವಾದಿಗಳನ್ನೂ ವಾದದಲ್ಲಿಯೂ ಸವಾಡದಲ್ಲಿಯೂ ಜಯಿಸಿ ಅವರನ್ನು ವಶ್ಯವ

ರನ್ನಾಗಿ ಮಾಡಿದ ದಾಸಿಮಯ್ಯನು ಶ್ರೀ ಕುಮಾರರು ತಿಳಿದಿರುವಂತೆ ಸಾಮಾನ್ಯ ಶೈವನಲ್ಲ. ಪರಮ ವೀರಶೈವನಾಗಿದ್ದಾನೆ.

ಶ್ರೀ ಬಸವೇಶ್ವರನು ಪರಮೇಶ್ವರನಿಗೆ ಪೀತಾಂಬರವನ್ನಿತ್ತು, ಶಿವನಿಂದ ತವನಿಧಿಯನ್ನು ಪಡೆದ ಈ ದಾಸಿಮಯ್ಯನನ್ನು ತನ್ನ ವಚನದಲ್ಲಿ ಸ್ತೋತ್ರಮಾಡಿದ್ದಾನೆ. ಹೇಗೆಂದರೆ— 'ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ? ಸಿರಿಯಾಳನಂತೆ ಉಣಲಿಕ್ಕ ಬಲ್ಲೆನೆ? **ದಾಸಿಮಯ್ಯನಂತೆ ಉಡಕೊಡಬಲ್ಲೆನೆ?**' ಎಂಬ ವಚನದಲ್ಲಿ ಪ್ರಾಚೀನರ ಸಂಕ್ಯೆಯಲ್ಲಿ ಹೆಸರೆತ್ತಿದ್ದಾನೆ ಅಲ್ಲದೆ ಬಸವೇಶ್ವರ ಸಂಬಂಧ ಪ್ರಾಮಾನ್ಯ ಕರ್ತೃಗಳಲ್ಲಿ ಎಲ್ಲರಿಗಿಂತಲೂ ಪ್ರಾಚೀನನೆಂದು ನಿಶ್ಚಿತವಾಗಿರುವ ಹರಿಹರನು ತನ್ನ ಪಂಪಾ ಶತಕದಲ್ಲಿ ೬೬ ನೇ ಪದ್ಯದಲ್ಲಿ ಆ ದಾಸಿಮಯ್ಯಂ ಕುಡಲ್ಕೆ-ಉಡಗೇಸೀರೆಯಂ.....ವಿರೂಪಾಕ್ಷಂ ಬಲಾಟೀಕ್ಷಣಂ' ಎಂದು ದಾಸಿಮಯ್ಯನನ್ನು ಕೊಂಡಾಡಿದ್ದಾನೆ. ಶ್ರೀ ಬಸವೇಶ್ವರನೂ ಹರಿಹರನೂ ದಾಸಿಮಯ್ಯನು ಶಿವನಿಗೆ ಜಂಗಮ ರೂಪಾಗಿ ಬಂದು ಬೇಡಿದಾಗ ತಾನು ನೆಯ್ದು ಮಾರಾಟಕ್ಕೆ ಅಯ್ಯುತ್ತಿದ್ದ ಪೀತಾಂಬರವನ್ನು ಕೊಟ್ಟನೆಂದೂ ಶಿವನು ಆ ಪೀತಾಂಬರವನ್ನು ಉಟ್ಟನೆಂದೂ ದಾಸಿಮಯ್ಯನ ಪುರಾಣದಲ್ಲಿದೆ.

ಹೀಗೆ ಬಸವೇಶ್ವರ, ಹರಿಹರರಿಂದ ಸ್ತೋತ್ರ ಮಾಡಿಸಿಕೊಂಡಿರುವ ದಾಸಿಮಯ್ಯನು ವಚನಕಾರನಲ್ಲವೆಂದೂ ಪುರಾಣಕಥಿತನಾದ ಸ್ವಾಚೀನನೆಂದೂ ಸಿದ್ಧವಾಗುತ್ತದೆ. ಸುಗ್ಗಲಾದೇವಿಯ ಶಿಲಾಶಾಸನದಿಂದಲೂ ಬಸವ ಪುರಾಣದಲ್ಲಿ ಜಯಸಿಂಹನನ್ನೂ ೨೦ ಜನ ವೀರ ಪ್ರತಿವಾದಿಗಳನ್ನೂ ಜಯಿಸಿ ಎಲ್ಲರಿಗೂ ಶಿವದೀಕ್ಷೆಯನ್ನು ಕೊಟ್ಟು ಲಿಂಗಧಾರಿಗಳನ್ನಾಗಿ ಮಾಡಿದ ದಾಸಿಮಯ್ಯನು ಪರಮ ವೀರಶೈವನೆಂದೂ ವೀರಶೈವ ಮತವನ್ನು ಬಸವೇಶ್ವರನಿಗಿಂತಲೂ ಮೊದಲು ಕನ್ನಡ ನಾಡಿನಲ್ಲಿ ಪ್ರಚಾರಮಾಡಿದವನೆಂದೂ ಸಿದ್ಧವಾಗುತ್ತದೆ. ಬಸವ ಪುರಾಣದಲ್ಲಿ ದೇವರ ದಾಸಿಮಯ್ಯನಂತೆಯೇ ಅಭಿವರ್ಣಿತನಾಗಿರುವ ಶಂಕರ ದಾಸಿಮಯ್ಯನು ಪರಮ ವೀರಶೈವನೆಂದೂ, ದೇವರ ದಾಸಿಮಯ್ಯನಿಗೆ ಸಮಕಾಲೀನನೆಂದೂ, ಹಂಪಹರ 'ಶಂಕರ ದಾಸಿಮಯ್ಯನ ರಗಳೆ' ಎಂಬ ಗ್ರಂಥದಿಂದ ತಿಳಿದು ಬಂದಿದೆ. ಹಂಪಹರನ ಮತದಂತೆ ಬಸವೇಶ್ವರನಿಗೆ ಕೂಡಲ ಸಂಗಮನ ಸನ್ನಿಧಿಯಲ್ಲಿ ಲಿಂಗಧಾರಣೆಯಾದಂತೆ ಶಂಕರ ದಾಸಿಮಯ್ಯನಿಗೆ ಜಡೆಶಂಕರಲಿಂಗದಿಂದಲೇ ಲಿಂಗಧಾರಣೆಯಾಗಿರುತ್ತದೆ.

ಶ್ರೀ ಕುಮಾರರ ವಾದದಂತೆ ಬಸವೇಶ್ವರನಿಗಿಂತಲೂ ಮೊದಲು ಯಾವ ಲಿಂಗಾಂಗಿಯೂ ಇಲ್ಲವೆಂದು ಹೇಳುವುದಾದರೆ ಬಸವ ಪುರಾಣ, ವಚನ ಶಾಸ್ತ್ರಗಳಲ್ಲಿಯೇ ಜಿಜ್ಞಾಸುಗಳಿಗೆ ಅನೇಕ ಸಂಶಯಗಳು ಪ್ರಾಪ್ತವಾಗುತ್ತವೆ.

೧ ಶ್ರೀ ನಿರಂಜನ ಜಂಗಮ ಮೂರ್ತಿಯಾದ ಅಲ್ಲಮ ಪ್ರಭುವಿಗೆ ಲಿಂಗವನ್ನಿತ್ತ ಅನಿಮಿಷಾರ್ಯನು ಬಸವೇಶನಿಗಿಂತ ಪ್ರಾಚೀನೋ? ನವೀನನೋ? ನವೀನನಾದರೆ ಅಲ್ಲಮ ಪ್ರಭುವಿಗೆ ಲಿಂಗಧಾರಣೆ ಮಾಡಿದನೆಂತು? ನಿಮ್ಮ ಅಭಿಪ್ರಾಯದಂತೆ ಅನಿಮಿಷಾರ್ಯನು ಲಿಂಗವಂತನಾದರೆ, ಬಸವೇಶನಿಗಿಂತ ಮೊದಲು ಲಿಂಗವಂತರಿದ್ದರೆಂದಾಗುವುದಿಲ್ಲವೇ? ಇದ್ದರೆಂದರೆ ನಿಮ್ಮ ವಾದ ಸುಳ್ಳಾಗುವುದಿಲ್ಲವೇ?

೨ ಅನುಭವ ಮಂಟಪಕ್ಕೆ ನಾನಾ ದೇಶಗಳಿಂದ ಶರಣರು ಬಂದರೆಂದು ಬಸವ ಪುರಾಣವು ಹೇಳುತ್ತದೆ. ತೋಳಿಗೆಯ ಮಾರಯ್ಯನವರು ಕಾಶ್ಮೀರದಿಂದಲೂ, ತೆಲುಗು ದೊಮ್ಮಯ್ಯನು ಆಂಧ್ರದೇಶದಿಂದಲೂ, ಮಾಚಿದೇವನು ಹಿಪ್ಪರಿಗೆಯಿಂದಲೂ ಬಸವೇಶನ ಸನ್ನಿಧಿಗೆ ಧಾವಿಸಿ ಬಂದರಷ್ಟೆ. ಇವರು ಮೂವರೂ ಕಲ್ಯಾಣಕ್ಕೆ ಬರುವಾಗ ಲಿಂಗಧಾರಿಗಳಾಗಿದ್ದರೇ? ಅಥವಾ ಇವರಿಗೆಲ್ಲಾ ಬಸವೇಶ್ವರನೇ ಲಿಂಗಧಾರಣೆ ಮಾಡಿದನೇ? ವಚನ ಶಾಸ್ತ್ರಗಳಲ್ಲಿ ಇವರಿಗೆಲ್ಲಾ ಲಿಂಗಧಾರಣೆಯಾದ ಪ್ರಮಾಣವಿದೆಯೇ? ಇಲ್ಲವಾದರೆ ಇವರು ಕಲ್ಯಾಣಕ್ಕೆ ಬರುವಾಗಲೇ ಲಿಂಗಾಂಗಿಗಳಾಗಿದ್ದರೆಂದು ಸಿದ್ಧವಾಗುವುದಿಲ್ಲವೇ? ಹೀಗಾದರೆ ನಿಮ್ಮ ವಾದದ ಗತಿಯೇನು?

೩ ಮಹಿಮಾಶಾಲಿಯಾದ ಕೆರೆಯ ಪದ್ಮರಸನ ಪಿತಾಮಹ ಸಕಳೇಶ ಮಾದರಸನು ಶ್ರೀಶೈಲದಿಂದ ಕಲ್ಯಾಣಕ್ಕೆ ಬಂದನಷ್ಟೆ ಜ್ಞಾನವೃದ್ಧನೂ ವಯೋವೃದ್ಧನೂ ಆದ ಇವನು ಕಲ್ಯಾಣಕ್ಕೆ ಒಂದು ಲಿಂಗಧಾರಣೆ ಮಾಡಿಸಿಕೊಂಡನೇ? ಇವನಿಗೆ ಲಿಂಗಧಾರಣೆ ಮಾಡಿದ ದೃಷ್ಟಾಂತ ವಚನ ವಾಙ್ಮಯದಲ್ಲಿದೆಯೇ? ಇಲ್ಲವಾದರೆ ಈ ಪರಮ ವೀರಶೈವನು ಲಿಂಗಾಂಗಿಯಾದುದೆಂದು? ಎಂತು? ಅಲಿಂಗಿಯೆಂದರೆ ಇವನ ಕೂಡ ಬಸವಾದಿಗಳು ಅನುಭವಗೋಷ್ಠಿಯಲ್ಲಿದ್ದರೆಂತು? ಇವನ ತಂದೆಯಾದ ಶಿವಯೋಗಿ ಮಲ್ಲಿಕಾರ್ಜುನನು ಪರಮ ವೀರಶೈವನೆಂದು ಪದ್ಮರಾಜ ಪುರಾಣದಲ್ಲಿ ಅಭಿವರ್ಣಿತನಾಗಿದ್ದಾನೆ. ಪುರಾಣ ಪ್ರಕಾರ ಇವನು ಬಸವೇಶ್ವರನಿಗಿಂತ ಹಿರಿಯನಾಗುತ್ತಾನೆ. ಇವನನ್ನು ವೀರಶೈವನಲ್ಲವೆಂದು ಸಾಧಿಸಲು ಸಾಧ್ಯವೇ? ಬಸವ ಪುರಾಣಗಳಲ್ಲಿ ಈತನನ್ನು ವೀರಶೈವನೆಂದೇ ಹೇಳಿದೆ.

ಸಕಳೇಶ ಮಾದರಸನ ವಚನಗಳ ಪೀಠಿಕೆಯಲ್ಲಿ ಪರಮ ಪ್ರಮಾಣಿಕರಾದ ರಾವಸಾಹೇಬ ಪಿ. ಜಿ. ಹಳಕಟ್ಟಿ ವಕೀಲರು 'ಸಕಳೇಶ ಮಾದರಸನು ಬಸವೇಶ್ವರನಿಗಿಂತಲೂ ೪೦-೫೦ ವರ್ಷ ಹಿಂದಿನವನು' ಎಂದು ಬರೆದಿದ್ದಾರೆ. ಇದಕ್ಕೆ ತಮ್ಮ ಅಂಬೋಣವೇನು?

೪ ಪರಮ ವೈರಾಗ್ಯ ಮೂರ್ತಿಯಾದ ಮಹಾದೇವಿಯಕ್ಕನು ಉಡುತಡಿಯಿಂದ ಕಲ್ಯಾಣಕ್ಕೆ ಬಂದಳಷ್ಟೆ. ಕಲ್ಯಾಣದಲ್ಲಿ ಅವಳಿಗೆ ಲಿಂಗಧಾರಣೆಯಾದ ದೃಷ್ಟಾಂತವುಂಟೇ? ಇಲ್ಲವೆಂದರೆ ಉಡುತಡಿಯಲ್ಲಿ ಅವಳೂ ಅವಳ ತಂದೆ ತಾಯಿಗಳೂ ಮೊದಲೇ ಲಿಂಗಧಾರಿಗಳಾಗಿದ್ದರೆಂದು ತಿಳಿದು ಬರುವುದಿಲ್ಲವೇ? ಇವರು ಬಸವೇಶ್ವರನಿಂದಲೇ ಲಿಂಗಧಾರಣೆ ಮಾಡಿಸಿಕೊಂಡರೆಂಬುದನ್ನು ನೀವು ಸಿದ್ಧ ಮಾಡುವಿರಾ? ಹಾಗಾದರೆ ಬಸವೇಶ್ವರನಿಗಿಂತಲೂ ಮೊದಲೇ ಲಿಂವಂತರ ಅಸ್ತಿತ್ವವಿತ್ತೆಂದು ಒಪ್ಪುವಿರಾ?

೫ ಶಿವಯೋಗಿ ಶಾಂತಿಮಯ್ಯನ ಮಗನಾದ ರೇವಣಸಿದ್ಧನು ವೀರಶೈವನೆಂದು ಒಪ್ಪುವಿರಾ? ಅಲ್ಲವೆಂದರೆ ಇವನು ತನ್ನ ಮಗನಾದ ರುದ್ರಮುನಿಗೆ ಲಿಂಗಧಾರಣೆ ಮಾಡಿದನೆಂತು? ಮಹಾ ಶಿವಭಕ್ತನೂ, ಮುಂದೆ ಸಿದ್ಧರಾಮೇಶನ ಶಿಷ್ಯನೂ ಆದ ಹಾವಿನಹಾಳ ಕಲ್ಲಯ್ಯನಿಗೆ ರುದ್ರಮುನಿಯಿಂದ ಶಿವದೀಕ್ಷೆಯನ್ನು ಮಾಡಿಸಿ ಲಿಂಗಧಾರಣೆ ಮಾಡಿಸಿದನೆಂತು? ಇದರಲ್ಲಿ ಬಸವೇಶನ ಕೈವಾಡವೇನಾದರುಂಟೇ? (ಹರಿಹರನ ರೇವಣಸಿದ್ಧ ರಗಳೆಯ ಆಧಾರದಿಂದ ಈ ಪ್ರಶ್ನೆ ಮಾಡಿದೆ.)

೬ ಅರ್ಜುನವಾಡದ ಶಿಲಾಶಾಸನದಲ್ಲಿ ಬಸವೇಶನು ವೀರಶೈವ ಮತೋದ್ಧಾರಕನೆಂದು ಮಾತ್ರ ವರ್ಣಿತವಾಗಿದೆ. ಅದರ ವಿಮರ್ಶಕರಾದ ಶ್ರೀಮಾನ್ ರಾ|| ಸಾ|| ಹಳಕಟ್ಟಿ ವಕೀಲರೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿ ನಿಮ್ಮ ಅಭಿಮತವೇನು?

೭ ಅಬ್ಬಲೂರು ಶಿಲಾಶಾಸನದ ಪ್ರಕಾರ ವಿಕ್ರಾಂತದ ರಾಮಯ್ಯನು ಬಸವೇಶನು ಮಂತ್ರಿಯಾಗುವುದಕ್ಕಿಂತ ಮೊದಲೇ ಅನೇಕರನ್ನು ವಾದದಲ್ಲಿ ಗೆದ್ದು ಶಿವದೀಕ್ಷೆ ಕೊಟ್ಟನೆಂದು ತಿಳಿದು ಬಂದಿದೆ. ಇದರ ಬಗ್ಗೆ ನಿಮ್ಮಭಿಮತವೇನು?

(ಉಳಿದದ್ದು ಮುಂದಿನ ಪುಟದಲ್ಲಿ ಮುಂದುವರಿದಿದೆ.)

# ಪ್ರಾಚೀನ ಹಿಂದು ಸಂಸ್ಕೃತಿ.

ಸಂಸ್ಕೃತಿಯೆಂದರೆ ಸುಧಾರಣೆಯೆನ್ನಬಹುದಾದರೂ ಸಂಸ್ಕೃತಿಗೂ ಸುಧಾರಣೆಗೂ ಅಂತರವುಂಟು. ಸುಧಾರಣೆಗೆ ಸಂಸ್ಕೃತಿಯೇ ಆಧಾರ. ಒಂದು ರಾಷ್ಟ್ರದ ಸಂಸ್ಕೃತಿಯು ಆದರ ಜನತೆಯ ನೀತಿ ಧರ್ಮ, ಆಚಾರ ವಿಚಾರ, ಕಲಾ ಕುಶಲತೆಗಳ ಸಂಗ್ರಹವೆಂದೆನ್ನಬಹುದು. ರಾಷ್ಟ್ರದ ಸಂಸ್ಕೃತಿಯ ಮೇಲಿಂದ ಅಲ್ಲಿಯ ನಿವಾಸಿಗಳ ಮನ ಬುದ್ಧಿಗಳು ಅವಗತವಾಗುತ್ತವೆ. ಅದುದರಿಂದ ರಾಷ್ಟ್ರ ಸುಧಾರಣೆಯನ್ನಿಚ್ಛಿಸುವವರಿಗೆ ಆ ರಾಷ್ಟ್ರದ ಆ ಮೂಲ ಸಂಸ್ಕೃತಿಯ ಕಲ್ಪನೆಯಿರಬೇಕು. ಆ ಸಂಸ್ಕೃತಿಗೆ ಶಕ್ಯಂತೆ ಸುಧಾರಣೆ ಮಾಡಿದರೇನೇ ಅದು ಶಾಶ್ವತವಾಗಿ ಉಳಿಯುವದು.

ಹಾಗಾದರೆ ಹಿಂದು ದೇಶದ ಸುಧಾರಕರಿಗೆ ಹಿಂದು ಸಂಸ್ಕೃತಿಯೆಂದರೇನೆಂಬುದನ್ನು ವಿಚಾರ ಮಾಡಲೇಬೇಕಾಗುವದು. ಹಿಂದು ದೇಶದ ಸಂಸ್ಕೃತಿಯು ಆರ್ಯ ಸಂಸ್ಕೃತಿಯಲ್ಲವೆ? ಹಿಂದು ದೇಶದಲ್ಲೆಲ್ಲ ಕನ್ಯಾಕುಮಾರಿಯಿಂದ ಕೈಲಾಸದವರೆಗೆ ಆರ್ಯ ಸಂಸ್ಕೃತಿಯೇ ಸಾವಿರಾರು ವರ್ಷಗಳಿಂದಲೂ ನೆಲೆಸಿರುತ್ತದೆ. ಆರ್ಯ ಪೂರ್ವದಲ್ಲಿ ಈ ದೇಶದಲ್ಲಿ ಸಂಸ್ಕೃತಿಯೇ ಇರಲಿಲ್ಲ. ಆ ಮೊದಲು ಭೂತ ಪಿಶಾಚಿಗಳ ಅನಾಚಾರಯುತ ದುಷ್ಟ ಪದ್ಧತಿಗಳೇ ಇದ್ದವು.

ಈ ಪ್ರಕಾರವಾಗಿ ಪುರಾಣ ಕಾಲದಿಂದಲೂ ಹಿಂದುಗಳ ಮನದಲ್ಲಿ ದುಷ್ಟ ಭಾವನೆಯು ವಿಶಿಷ್ಟ ರೀತಿಯಿಂದ ಬಲಾತ್ಕಾರವಾಗಿಯೇ ಬಿಂಬಿಸಲ್ಪಟ್ಟಿದೆ. ಅದುದರಿಂದ ಅನಾರ್ಯವೇ ನರಕ ಆರ್ಯವೇ ಸ್ವರ್ಗ ಎಂಬ ತಿಳುವಳಿಕೆಯೇ ಎಲ್ಲರಲ್ಲಿಯೂ ಉಂಟಾಯಿತು. ಈ ಭಾವನೆಯಿಂದ ನಮ್ಮ ಮಾತೃ ಭೂಮಿಯ ಪ್ರಗತಿಗೆ ಬಲವಾದ ಆಘಾತವಾಗುತ್ತಲಿದೆ. ಅಸ್ಪೃಶ್ಯತೆಯೆಂಬುದು ಈ ದುಷ್ಟ ಭಾವನೆಯ ನಿದರ್ಶನವಾಗಿದೆ. ಹಿಂದುಗಳಲ್ಲಿ ಎಲ್ಲಿಯವರೆಗೆ ಅನಾರ್ಯ (ಆರ್ಯರದಲ್ಲದ) ನಡತೆಯ ಬಗ್ಗೆ ಕುತ್ಸಿತನವಿರುವದೋ ಅಲ್ಲಿಯವರೆಗೆ ಹಿಂದು ಸಂಸ್ಕೃತಿಯ ನಿಜವಾದ ಕಲ್ಪನೆಯು ಬರಲು ಸಾಧ್ಯವೇ ಇಲ್ಲ. ಅಂದ ಮೇಲೆ ಸುಧಾರಣೆಯೆಲ್ಲಿ?

ಆದರೆ ಹಿಂದು ದೇಶವು ಸುಧಾರಣೆಯ ಮೆಟ್ಟಿಲನ್ನು ಹತ್ತುವ ಸುಚಿಹ್ನೆಗಳು ತೋರುತ್ತಲಿವೆ. ಅನೇಕ ವಿದ್ವಾಂಸರು ಹಿಂದು ಸಂಸ್ಕೃತಿಯ ನಿಜವಾದ ರಹಸ್ಯವನ್ನು ಕಂಡುಹಿಡಿಯಲು ಪ್ರಯತ್ನಿಸಹತ್ತಿದ್ದಾರೆ. ಲಾಹೋರದಲ್ಲಿ 'ಹಿಂದು ರಾಷ್ಟ್ರದ ಅಂತರ ರಾಷ್ಟ್ರೀಯ ಸಮಿತಿ'ಯು ಪ್ರಾರಂಭವಾಗಿ ಹಿಂದು ಸಂಸ್ಕೃತಿಯ ಮೂಲವನ್ನು ಶೋಧಿಸುವ ಪ್ರಾಮಾಣಿಕ ಪ್ರಯತ್ನಗಳು ನಡೆದಿವೆ. ಇವರ ಪ್ರಯತ್ನಗಳಿಗೆ ಮೊನ್ನೆ ತಾನೆ ಶೋಧಿಸಲ್ಪಟ್ಟ ಮೋಹೆಂಜೋದಾರೊ ಮತ್ತು ಹರಪ್ಪಾ ಎಂಬಲ್ಲಿಯ ಅವಶೇಷಗಳು ಒಳ್ಳೇ ಸಹಾಯಕವಾಗಿವೆ. ಈ ಅವಶೇಷಗಳ ವಿಷಯವಾಗಿ ಹಿಂದು ಸಂಸ್ಕೃತಿಯ ವಿಚಾರದಲ್ಲಿ ಒಂದು ಕ್ರಾಂತಿಯೇ ಉಂಟಾಗಿದೆ.

ಈ ಕ್ರಾಂತಿದರ್ಶಕ ವಿಷಯವನ್ನು ಕುರಿತು ಪುಣೆಯ ಭಾಂಡಾರಕರ ಪ್ರಾಚ್ಯ ವಿದ್ಯಾ ಸಂಶೋಧನ ಮಂದಿರದ ೯ನೆಯ ವಾರ್ಷಿಕ ಸಮಾರಂಭದ ಕಾಲಕ್ಕೆ ಡಾ. ಎಸ್. ಕೆ. ಡೆ. ಎಂಬುವವರು "ಹಿಂದು ಸುಧಾರಣೆಯ ಪ್ರಾರಂಭ" ಎಂಬ ತಮ್ಮ ಸಂಶೋಧಪೂರ್ಣ ನಿಬಂಧವನ್ನೋದಿದರು. ಅದರ ಸಾರಾಂಶವು ಹೀಗಿದೆ—ಆರ್ಯ ಸಂಸ್ಕೃತಿಯ ಮೂಲವು ಋಗ್ವೇದದಲ್ಲಿದೆ. ಅವರ ಆಚಾರ ವಿಚಾರ ಸಮಾಜ ರಚನೆ ಮುಂತಾದವುಗಳು ಋಗ್ವೇದ ಮಂತ್ರಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತವೆ. ಇವರು ಮೂಲತಃ ಹಿಂದು ದೇಶದವರಲ್ಲ. ಇಲ್ಲಿಗೆ ಬಂದ ಮೇಲೆ ಅವರು ತಮ್ಮ ಪರಾಕ್ರಮದಿಂದ ಇಲ್ಲಿಯ ಮೂಲ ನಿವಾಸಿಗಳಾದ ಕೃಷ್ಣ ಕಾಯದ ಜನರ ಮೇಲೆ ಆಕ್ರಮಣ ಮಾಡಿದರು. ಈ ಮೂಲ ನಿವಾಸಿಗಳಾದ ಕೃಷ್ಣ ಕಾಯರಲ್ಲಿಯೂ ಸ್ವತಂತ್ರ ಸಂಸ್ಕೃತಿಯಿದ್ದಿತು. ಅದು ಇನ್ನೂ ಎಷ್ಟೋ ಕಡೆಗಳಲ್ಲಿ ಗೋಚರವಾಗುತ್ತಲಿದೆ. ಆರ್ಯರ ಆಕ್ರಮಣಕ್ಕೆ ಇವರು ತಡೆಯದ್ದರಿಂದ ಇವರಲ್ಲಿ ಎಷ್ಟೋ ಜನರು ಆರ್ಯ ಸಂಸ್ಕೃತಿಯನ್ನು ಸ್ವೀಕರಿಸಿದರು. ಇನ್ನು ಕೆಲವರು ತಮ್ಮ ಪೂರ್ವ ಸಂಸ್ಕೃತಿಯನ್ನೇ ಕಾಪಾಡಿಕೊಳ್ಳುತ್ತ ಬಂದರು. ಆರ್ಯರೂ ಇವರ ಸಂಸ್ಕೃತಿಯ ಬಹ್ವಂಶವನ್ನು ಸ್ವೀಕರಿಸಿದರು. ಆರ್ಯರ ಪುರಾತನ ಇತಿಹಾಸದಲ್ಲಿ ಬರೆದುದನ್ನು ನೋಡಿದರೆ ಚನ್ನಾಗಿದ್ದುದೆಲ್ಲವೂ ಆರ್ಯರದು; ಕೆಟ್ಟದೆಲ್ಲವೂ ಅನಾರ್ಯರಾದ ಈ ಕಪ್ಪು ತೊಗಲಿನವರದು ಎಂದು ತಿಳಿಯುತ್ತದೆ. ಗೆದ್ದವರು ಹೀಗೆ ಬರೆದುಕೊಳ್ಳುವದೇನೋ ಸಹಜ. ಆದರೆ ಇವರು ತಮ್ಮದೆನ್ನುವ ಶ್ರೇಷ್ಠ ಸಂಸ್ಕೃತಿಯಲ್ಲಿ ದ್ರಾವಿಡರದೂ ಪಾಲು ಇರುತ್ತದೆ. ಮೋಹೆಂಜೊದಾರೊ ಮತ್ತು ಹರಪ್ಪಾದಲ್ಲಿ ಆಗಿದು ತೆಗೆದ ಶೋಧಗಳಿಂದ ಈ ಕಪ್ಪು ವರ್ಣದವರ ಸಂಸ್ಕೃತಿಯೂ ಶ್ರೇಷ್ಠವಾಗಿದ್ದಿತೆಂದು ಕಂಡುಬರುತ್ತದೆ. ಆರ್ಯ ಪುರಾತನ ಗ್ರಂಥಗಳಲ್ಲೆಲ್ಲ ಆರ್ಯ ಶ್ರೇಷ್ಠತೆಯು ಕಂಡುಬಂದರೂ ನಾವು ಈಗ ನಮ್ಮ ದೃಷ್ಟಿಯನ್ನು ವಿಸ್ತರಿಸಬೇಕು. ದ್ರಾವಿಡ ಸಂಸ್ಕೃತಿಯ ಅಸ್ತಿತ್ವದ ಮೇಲಿಂದ ಈ ದೇಶದಲ್ಲಿ ಆರ್ಯ ಸಂಸ್ಕೃತಿಯೇ ಇದ್ದಿತೆಂದು ಹೇಳಲಿಕ್ಕೆ ಬರಲಾರದು. ಅನೇಕ ವರ್ಷಗಳ ನಂತರ ಈ ದೇಶದಲ್ಲಿ ಆರ್ಯ ದ್ರಾವಿಡರ ಸಂಸ್ಕೃತಿಗಳು ಬೆರೆತುಹೋದುದು ಈಗಿನ ದಕ್ಷಿಣ ಹಿಂದುಸ್ಥಾನದ ಉತ್ಖನಗಳಿಂದ ಕಂಡು ಬರುತ್ತದೆ.

ಇವೇ ಶೋಧಗಳ ವಿಷಯವಾಗಿ ಮುಂಬಯಿಯಲ್ಲಿ ಕಳೆದ ಸಪ್ಟಂಬರ ೨೦ನೆಯ ತಾರೀಖಿನ ದಿವಸ ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ಶಾಖೆಯ ಮುಂದೆ ಪ್ರೊ. ಕೆ. ಎಂ. ಶೆಂಬರವಣಿಕರ ಎಂಬುವವರು ಒಂದು ನಿಬಂಧನ್ನು ಓದಿದರು. ಅದರಲ್ಲಿ ಅವರು ವಿಶದಗೊಳಿಸಿದ್ದೇನಂದರೆ, "ಸಿಂಧದಲ್ಲಿಯ ಮೋಹೆಂಜೊದಾರೊ ಮತ್ತು ಪಂಜಾಬದಲ್ಲಿಯ ಹರಪ್ಪಾ ಸ್ಥಳಗಳಲ್ಲಿಯ ಖಣಿಗಳ ಪ್ರಾಚೀನ ಅವಶೇಷಗಳು ಅನಾರ್ಯ ವಂಶ ಮತ್ತು ಅನಾರ್ಯ ಸಂಸ್ಕೃತಿಯ ನಿದರ್ಶಕವಾಗಿವೆ. ತಜ್ಞರು ಇವು ಸುಮೇರಿಯನ್ ಅಥವಾ ದ್ರಾವಿಡ ಸಂಸ್ಕೃತಿಯ ದ್ಯೋತಕವೆಂದು ಹೇಳುತ್ತಾರೆ.

ಮಹಾಭಾರತದ ಕರ್ಣಪರ್ವದಲ್ಲಿ ಕರ್ಣನು ಶಲ್ಯನನ್ನು ನಿಂದಿಸುವಾಗ್ಗೆ ಬಾಹಿಕ ವಂಶದವರ ಯಾವ ವರ್ಣನೆಯಿರುವದೋ ಆ ಪ್ರಕಾರವೇ ಇಲ್ಲಿಯ ಅವಶೇಷಗಳಿವೆ. ಈ ಬಾಹಿಕ ಜನರು ಸಿಂಧು ನದಿಯ ಕೊಳ್ಳದಲ್ಲಿಯೂ ಪಂಜಾಬದಲ್ಲಿಯೂ ವಾಸಿಸುತ್ತಿದ್ದರು. ಇವರಲ್ಲಿ ಚಾತುರ್ವರ್ಣ ವ್ಯವಸ್ಥೆ ಇದ್ದಿಲ್ಲ. ಬೇಕಾದವರು ತಮಗೆ ಯುಕ್ತಕಂಡ ಕೆಲಸಗಳನ್ನು ಮಾಡುತ್ತಿದ್ದರು. ಈ ಜನರ ಎಷ್ಟೋ ಪದ್ಧತಿಗಳನ್ನು ದಕ್ಷಿಣ ಹಿಂದುಸ್ಥಾನದಲ್ಲಿ ಈಗಲೂ ಕಾಣಬಹುದು."

ಒಟ್ಟಿನಮೇಲೆ ಹಿಂದು ಸಂಸ್ಕೃತಿಯೆಂದರೆ ಕೇವಲ ಆರ್ಯ ಸಂಸ್ಕೃತಿಯೇ ಎಂದೆನ್ನಲಾಗದು. ಹಿಂದುಗಳೆಲ್ಲರ ಸಂಸ್ಕೃತಿಯೂ

# ಅಮೇರಿಕೆಯ ಸ್ವಾತಂತ್ರ್ಯ ದೇವತೆ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ರಾಜಧಾನಿಯಾದ ನ್ಯೂಯಾರ್ಕ್ ನಗರದ ಹತ್ತಿರ ಒಂದು ಸಣ್ಣ ದ್ವೀಪವಿದೆ. ಅದಕ್ಕೆ ಬೆಡ್‌ಲೊ ದ್ವೀಪ (Bedloes Island) ಎಂದು ಹೆಸರು. ಅಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ವಿಶಾಲವಾದುದೊಂದು ವರ್ತುಲಾಕಾರದ ಕಟ್ಟೆ. ಆ ಕಟ್ಟೆಯ ಮೇಲೆ ೧೫೫ ಅಡಿ ಎತ್ತರವಾದ ಭವ್ಯವಾದ ಒಂದು ಪೀಠ. ಆ ಪೀಠದ ಮೇಲೆ ೧೫೧ ಅಡಿ ಎತ್ತರವಾದ ಉದಾತ್ತ ಸ್ವಾತಂತ್ರ್ಯ ದೇವತೆಯು ಹಸ್ತದಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಹಿಡಿದು ನಿಂತಿರುವಳು. ಆ ಮೂರ್ತಿಯನ್ನು ನೋಡಿದವರಿಗೆ ಅದು, ಜಗತ್ತಿನ ನಿರ್ವೀರ್ಯವಾದ ಪರಾಧೀನ ರಾಷ್ಟ್ರಗಳೇ, ಎದ್ದೇಳಿರಿ! ಸ್ವಾತಂತ್ರ್ಯ ಪೃಥ್ವಿಯಲ್ಲಿ ನಲಿದಾಡಿರಿ! ಎಂದು ಕೈಯೆತ್ತಿ ಸಾರಿದಂತೆ ಕಾಣುತ್ತಿದೆ.

ಅಮೇರಿಕೆಯ ಜನರು ಅತಿ ಸ್ವಾತಂತ್ರ್ಯ ಪ್ರಿಯರು. ಅವರ ರೋಮರೋಮಗಳಲ್ಲಿಯೂ ಸ್ವಾತಂತ್ರ್ಯವು ಸೇರಿಕೊಂಡಿದೆ. ಇದಕ್ಕೆ ಅವರ ಪೂರ್ವಜರ ಸ್ವಾತಂತ್ರ್ಯದ ಅಪೇಕ್ಷೆಯೇ ಕಾರಣ. ಸ್ವಾತಂತ್ರ್ಯಾಭಿಲಾಷೆಯಿಂದ ತಾವು ವಾಸಿಸುವ ಪ್ರದೇಶಗಳನ್ನು ಬಿಟ್ಟು ಸಾವಿರಾರು ಮೈಲುಗಳಾಚೆ ಅತಿ ಕಷ್ಟದಿಂದ ಪರ್ಯಟನ ಮಾಡಿ ಸ್ವಾತಂತ್ರ್ಯ ಬೀಜವನ್ನು ಅಮೇರಿಕೆಯ ಕ್ಷೇತ್ರದಲ್ಲಿ ಬಿತ್ತಿದ ಅಂದಿನ ಯುರೋಪದ ಯಾತ್ರಿಕರು (Pilgrim Fathers) ಈ ದೇವತೆಗೆ ಪ್ರಾಣಪ್ರತಿಷ್ಠೆ ಮಾಡಿದವರೆಂದರೆ ಅಗಾಧವೆನಿಸಲಾರದು. ಅಂದಿನಿಂದ ಅಮೇರಿಕೆಯು ಜಗತ್ತಿನ ಅನೇಕ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಪಾಠವನ್ನು ಕಲಿಸಿದೆ.

ಈ ದೇವತೆಯು ಅಮೇರಿಕೆಯ ಸ್ವಾತಂತ್ರ್ಯಾಭಿಮಾನದ ನಿದರ್ಶಕವಾಗಿರುವಂತೆಯೇ ಅಮೇರಿಕಾ ಫ್ರಾನ್ಸ ದೇಶಗಳ ಚಿರಕಾಲ ಸಖ್ಯದ ದ್ಯೋತಕವೂ ಆಗಿದ್ದಾಳೆ. ಫ್ರಾನ್ಸ ದೇಶದ ಸಹಾಯದಿಂದಲೇ ಅಮೇರಿಕೆಯು ಸ್ವತಂತ್ರವಾಗಲವಕಾಶವಾದುದರಿಂದ ಅಮೇರಿಕನ್ನರು ಫ್ರೆಂಚರಿಗೆ ಕೃತಜ್ಞರಾಗಿರುವಂತೆಯೇ ಅಮೇರಿಕೆಯು ಸ್ವತಂತ್ರವಾದುದನ್ನು ನೋಡಿಯೇ ಫ್ರಾನ್ಸನವು ಸ್ವತಂತ್ರವಾದುದರಿಂದ ಫ್ರೆಂಚರೂ ಅಮೇರಿಕನ್ನರಿಗೆ ಕೃತಜ್ಞರಾಗಿದ್ದಾರೆ. ಅದುದರಿಂದ ಅಮೇರಿಕೆಯು ಸ್ವಾತಂತ್ರ್ಯವನ್ನು ಹೊಂದಿ ನೂರು ವರ್ಷಗಳಾಗಲು ಅದರ ಶತ ಸಾಂವತ್ಸರಿಕೋತ್ಸವ ಕಾಲಕ್ಕೆ ಫ್ರಾನ್ಸನವು ಈ ಸ್ವಾತಂತ್ರ್ಯ ಮೂರ್ತಿಯನ್ನು ಕಾಣಿಕೆಯಾಗಿ ಕೊಟ್ಟಿತು.

೧೮೭೦ ನೆಯ ಇಸ್ವಿಯು ಫ್ರಾನ್ಸಿಗೆ ದೌರ್ಭಾಗ್ಯದ ವರ್ಷವು. ಜರ್ಮನಿ ಫ್ರಾನ್ಸಗಳ ಪ್ರಚಂಡ ಯುದ್ಧವು ಮುಗಿದು ಫ್ರಾನ್ಸವು ಸೋತಿದೆ. ತಾನು ಯುದ್ಧದಿಂದ ಜರ್ಜರಿತವಾದುದಲ್ಲದೆ ಪ್ರತಿವರ್ಷವೂ ಜರ್ಮನಿಗೆ ಅಸಹ್ಯವಾದ ಧನವನ್ನು ಕೊಡಬೇಕಾಗಿ ಬಂದಿದೆ. ಇಂಥ ಕಾಲದಲ್ಲಿಯೇ ಅಮೇರಿಕೆಯ ನೂರು ವರ್ಷದ ಸ್ವಾತಂತ್ರ್ಯೋತ್ಸವವು ಬಂದಿದೆ. ಮಿತ್ರರಾಷ್ಟ್ರ ಕ್ಕೆ ಕಾಣಿಕೆ ಕೊಡಬೇಕಲ್ಲವೇ? ಅಂಥ ವಿಷಮ ಕಾಲದಲ್ಲಿಯೂ ಜನಮಾನಸ ಲಿಳಿದ ಫ್ರೆಂಚರು ೬ ಲಕ್ಷ ಡಾಲರುಗಳನ್ನು (೧೮ ಡ =೩|| ರೂ) ಕೂಡಿಸಿ ಈ ಸ್ವಾತಂತ್ರ್ಯ ಮೂರ್ತಿಯನ್ನು ಸಿದ್ಧಗೊಳಿಸಿದರು.

ಕೆಂಪುಸಮುದ್ರ ಮತ್ತು ಭೂಮಧ್ಯ ಸಮುದ್ರಗಳನ್ನು ಕೂಡಿಸಿದೆ ಮತ್ತು ಎರಡೂ ಅಮೇರಿಕೆಗಳ ನಡುವಿನ ಸಂಯೋಗ ಭೂಮಿಯನ್ನು ಕಡಿದು ಅಟ್ಲಾಂಟಿಕ ಫ್ಯಾಸಿಫಿಕ ಮಹಾಸಾಗರಗಳನ್ನು ಕೂಡಿಸಬಹುದೆಂಬ ಕಲ್ಪನೆಯನ್ನು ಕಂಡುಕೊಟ್ಟು ಅಕ್ಷಯ ಕೀರ್ತಿಯನ್ನು ಸಂಪಾದಿಸಿದ ಫರ್ಡಿನಾಂಡ ಡಿ ಲೆಸಪ್ಸನೇ ಈ ಅಧಿದೇವತೆಯನ್ನು ಕಾಣಿಕೆಯಾಗಿ ಒಪ್ಪಿಸುವ ಕಮಿಟಿಯ ಅಧ್ಯಕ್ಷನಾಗಿದ್ದನು. ಈ ಮೂರ್ತಿಯು ಸಿದ್ಧವಾದ ಮೇಲೆ ಕೆಲವು ದಿನಗಳವರೆಗೆ ಫ್ರೆಂಚರು ನೋಡುವದಕ್ಕಾಗಿ ಇದು ಇಡಲ್ಪಟ್ಟಿದ್ದಿತು. ಎಲ್ಲರೂ ಅದರ ಪ್ರತಿಯೊಂದು ಭಾಗವೂ ಶಾಸ್ತ್ರ ಶುದ್ಧವೂ ಉದಾತ್ತವೂ ಇರುವದೆಂದು ಅಭಿಪ್ರಾಯಪಟ್ಟರು.

ಅಮೇರಿಕೆಯ ಉತ್ಸವ ಕಾಲವು. ಅಟ್ಲಾಂಟಿಕಮಹಾಸಾಗರದ ಎರಡೂ ದಂಡೆಗಳಲ್ಲಿ ಉತ್ಸಾಹವೇ ಉತ್ಸಾಹ. ಸ್ವಾತಂತ್ರ್ಯ ದೇವತೆಯ ಬೇರೆ ಬೇರೆ ಭಾಗಗಳನ್ನು ೩೧೦ ಪೆಟ್ಟಿಗೆಗಳಲ್ಲಿ ತುಂಬಿಕೊಂಡು ಫ್ರೆಂಚ ಹಡಗಗಳು ಅಮೇರಿಕೆಯ ದಂಡೆಗೆ ಬಂದಿವೆ. ಅಮೇರಿಕೆಯ ೩೧೦ ಹಡಗಗಳು ಅವುಗಳನ್ನು ಇದಿರುಗೊಂಡು ಸನ್ಮಾನ ಪೂರ್ವಕವಾಗಿ ಸ್ವಾಗತಮಾಡುತ್ತಲಿವೆ.

ಬೆಡ್‌ಲೊ ದ್ವೀಪದಲ್ಲಿ ಸ್ವಾತಂತ್ರ್ಯ ದೇವತೆಯ ಸ್ಥಾಪನೆಗಾಗಿ ಅಮೇರಿಕೆಯ ಸಂಸ್ಥಾನಗಳು ೩ ಲಕ್ಷ ಡಾಲರ ವೆಚ್ಚಮಾಡಿ ದೇವತೆಗೆ ತಕ್ಕಂತೆ ಪೀಠವನ್ನು ನಿರ್ಮಿಸಿ ಸಿದ್ಧವಾಗಿವೆ. ಉಭಯ ರಾಷ್ಟ್ರಗಳ ಸ್ವಾತಂತ್ರ್ಯದ ಅಧಿದೇವತೆಯು, ಉಭಯ ರಾಷ್ಟ್ರಗಳನ್ನು ಪ್ರೇಮದಿಂದ ಏಕಜೀವವಾಗಿ ಮಾಡಿದ ಸ್ವಾತಂತ್ರ್ಯ ದೇವತೆಯು ಅಂದು ಉಭಯ ರಾಷ್ಟ್ರಗಳ ಹಸ್ತದಿಂದ ಸ್ಥಾಪಿಸಲ್ಪಟ್ಟಳು.

ಈ ಮೂರ್ತಿಯು ದಪ್ಪವಾದ ತಾಮ್ರದ ತಗಡಿನಿಂದ ಮಾಡಲ್ಪಟ್ಟದ್ದು ಇದು ೨೩೫ ಟನ್ನು ಭಾರವಾಗಿದೆ. ಇದರ ಒಳಭಾಗ ನೆಲ್ಲ ಪೊಳ್ಳಾಗಿದೆ. ಇದರ ತಲೆಯ ಪೊಳ್ಳಿನಲ್ಲಿ ೪೦ ಜನರು ಸಹಜವಾಗಿ ಕೂಡ್ರಬಲ್ಲರು ಕೈಯಲ್ಲಿ ಹಿಡಿದ ಸ್ವಾತಂತ್ರ್ಯ ಜ್ಯೋತಿಯ ದೀವಟಿಗೆಯಲ್ಲಿ ೧೨ ಜನರು ಕೂಡ್ರಬಲ್ಲರು. ಪೀಠದಿಂದ ಈ ದೀವಟಿಗೆಯ ವರೆಗೆ ಒಳಗೆ ಹೋಗಲು ಮಾರ್ಗವಿದೆ. ಆದರಲ್ಲಿ ೪೦೩ ಮೆಟ್ಟಿಲುಗಳಿವೆ. ತಲೆಯ ವರೆಗೆ ಹೋಗಲಿಕ್ಕೆ ಲಿಫ್ಟ ಎಂಬ ವಿದ್ಯುತ್ತಿನ ಯಂತ್ರದ ಸಹಾಯದಿಂದ ಮೇಲಕ್ಕೆ ಹೋಗುವ ತೊಟ್ಟಿಲವನ್ನೂ ಇಟ್ಟಿದ್ದಾರೆ. ಈ ದ್ವೀಪದಲ್ಲಿ ಒಂದು ಪ್ರಚಂಡವಾದ ಧ್ವನಿಕ್ಷೇಪಕ ಯಂತ್ರವೂ (Radio Broadcasting) ಮತ್ತು ದಂಡಿನ ಶಾಲೆಯೂ ಇರುತ್ತವೆ.

ಈ ಮೂರ್ತಿಯನ್ನು ನೋಡಿದವರಿಗೆ ಅಮೇರಿಕನ್ನರ ಸ್ವಾತಂತ್ರ್ಯ ಪ್ರೇಮದ ಕಲ್ಪನೆಯುಂಟಾಗಿ ಆ ನೆನಪು ಶಾಯುಷ ವರೆಗೂ ಉಳಿಯುವದು. ಸ್ವಾತಂತ್ರ್ಯಕ್ಕಾಗಿ ಪಾಶ್ಚಾತ್ಯರು ಎಷ್ಟು ಆಧಿ ವ್ಯಾಧಿಶಾಲಿಗಳಾಗಿದ್ದಾರೆಂಬುದನ್ನು ಇದರಿಂದ ನಾವು ತಿಳಿದುಕೊಳ್ಳಬಹುದಲ್ಲವೇ?

---

ಇದರಲ್ಲಿ ಕೂಡಿದೆ. ಹಿಂದು ಸುಧಾರಣೆಯಾಗಬೇಕಾದರೆ ಹಿಂದು ಸಂಸ್ಕೃತಿಯದೇ ಉದ್ಧಾರವಾಗಬೇಕು. ಅದಕ್ಕೆ ಆರ್ಯ ಅಥವಾ ಬೇರೆ ಯಾವುದೊಂದು ಅದರ ಭಾಗದ ಹೆಸರನ್ನು ಕೊಟ್ಟರೆ ಹಿಂದುಗಳೆಲ್ಲರ ಸುಧಾರಣೆಯು ನಿಂತುಹೋಗುವದು. ಇನ್ನಾದರೂ 'ಶರ್ವಮಿದಂ ಆರ್ಯಂ' ಎಂದೆನ್ನುವವರ ಮರುಳು ದೂರಾಗಬಾರದೇ!

# ಆಗಮನ ನಿಷೇಧವನ್ನು ಪ್ರದರ್ಶಿಸುವ ದೃಶ್ಯ.

ಬಾಳೇಹಳ್ಳಿ ಶ್ರೀಗಳು ಮೈಸೂರಿಗೆ ಬರುವಾಗ ಮೈಸೂರಿನ ವೀರಶೈವ ವೀರಮಹಿಳೆಯರು ಪಟ್ಟಣವನ್ನು ಬಿಟ್ಟು
ಹೋಗುವಾಗ ಮೈಸೂರಿನ ಚಾಮರಾಜಪುರ ಸ್ಟೇಶನ್ನಿನಲ್ಲಿಯ ದಿವ್ಯ ದೃಶ್ಯ.

ಆ ಜಗದ್ಗುರು ರೇಣುಕಾಚಾರ್ಯರ ತತ್ವದಂತೆ ಮತ್ತು ಆ ಜಗದ್ಗುರು ಪೀಠಕ್ಕೆ
ಬಂದ ಈ ವರೆಗಿನ ಮಹಾ ಸ್ವಾಮಿಗಳಂತೆ ಈಗಿನ ಬಾಳೇಹಳ್ಳಿ ಶ್ರೀಗಳೂ
ನಡೆದುಕೊಂಡಿದ್ದರೆ ಹೀಗೆ ಅವಮಾನ ಹೊಂದುವ ಪ್ರಸಂಗ ಬರುತ್ತಿದ್ದಿತೆ?

# ಬೀರಪ್ಪನ ತೆಗ್ಗಿನಮಠದ ಸ್ವಾಮಿಗಳವರ ಪುಣ್ಯಸ್ಮರಣೆ.



ಮಾಳಮಡ್ಡಿ ಶೀಗಳು ಮಿಸ್ಸಸ್ಸಾರಿಗೆ ಬರುವಾಗ ರಾಜಧಾನಿಯು ಬೀರಪ್ಪ ಸ್ವಾಮಿಯವರು ಪುಷ್ಪಮಾಲೆಯು ಬಿಟ್ಟು ಬರಮಾಡಿಕೊಂಡ ಸ್ಮಾರಕ ಚಿತ್ರವನ್ನು ಹೋಡಾಗ ಸಂಬಂಧಪಟ್ಟವರು ಹೆಚ್ಚಿನ ಸಾಮಾನ್ಯರಲ್ಲಿ ಹೆಚ್ಚಿನವರು ಇದ್ದರು.



ಶಾ. ಶ. ೧೮೩೬ ನೆಯ ಆಶ್ವೀಜ ಶು॥ ೧೫ ಸೋಮವಾರ.

## ಭಯಸೂಚಕ ಭವಿತವ್ಯ.

ಈ ಹಿಂದುಸ್ಥಾನವು ಹಿಂದುಗಳ ದೇಶವಾಗಿದೆ. ಮುಸಲ್ಮಾನರು ಈ ದೇಶಕ್ಕೆ ಬರುವ ಮುಂಚೆ ಈ ದೇಶದಲ್ಲಿಲ್ಲ ಹಿಂದುಗಳೇ ಇದ್ದರು. ಆ ಮುಂಚಿನ ಆರ್ಯರಾಗಲಿ ಅಥವಾ ದ್ರಾವಿಡರಾಗಲಿ ಎಲ್ಲರೂ ಈ ದೇಶದಲ್ಲಿಯೇ ಸಾವಿರಾರು ವರ್ಷಗಳಿಂದ ವಾಸವಾಗಿದ್ದು ತಮ್ಮ ಸಂಸ್ಕೃತಿ-ಸಾಮಾಜಿಸಗಳನ್ನೆಲ್ಲಾ ಈ ಭೂಮಾತೆಗೆ ಅರ್ಪಿಸಿ ಇದನ್ನು ಅಭಿವೃದ್ಧಿಗೊಳಿಸಿದ್ದರು.

ಆದಕಾರಣ ಹಿಂದುಗಳು ಈ ತಮ್ಮ ದೇಶವನ್ನು ಮಾತೃಭೂಮಿಯೆಂದು ತಿಳಿದಿದ್ದಾರೆ. ಮುಸಲ್ಮಾನರು ಈ ದೇಶಕ್ಕೆ ಬಂದ ನಂತರ ಈ ದೇಶದಲ್ಲಿ ಮುಸಲ್ಮಾನರ ಸಂಖ್ಯೆ ಹೆಚ್ಚುತ್ತಾ ಬಂದಿತು. ಕಳೆದ ಹಿಂದೂ ಸಾವಿರ ವರ್ಷಗಳಲ್ಲಿಯಾಗಿ ಈ ದೇಶದಲ್ಲಿ ಎಳು ಕೋಟಿ ಮುಸಲ್ಮಾನರು ಇರುವಂತಾಯಿತು. ಇದನ್ನು ಇವರು ತಮ್ಮ ಮಾತೃ ಭೂಮಿಯನ್ನಾಗಿ ತಿಳಿದು ಗಳಿಸಿದ ಉಪಭೋಗ ಭೂಮಿಯೆಂದು ಭಾವಿಸಿದ್ದಾರೆ.

ಹೀಗೆಯೇ ಮುಸಲ್ಮಾನರ ಸಂಖ್ಯೆಯು ಈ ದೇಶದಲ್ಲಿ ಹೆಚ್ಚುತ್ತಾ ಹೋದರೆ ಇದು ಮುಂದೆ ಮುಸಲ್ಮಾನರ ಭೋಗ ಭೂಮಿಯಾಗಲಿಕ್ಕಿಲ್ಲವೆ? ಹಿಂದುಗಳ ಅನೇಕ ಸಾಮಾಜಿಕ ದೋಷಗಳಿಂದಲೂ ಧಾರ್ಮಿಕ ತಪ್ಪು ತಿಳುವಳಿಕೆಯಿಂದಲೂ ಹಿಂದು ಸಮಾಜವು ಕ್ಷೀಣವಾಗುತ್ತಾ ಮುಸಲ್ಮಾನ ಸಮಾಜವು ಪುಷ್ಟಗೊಳ್ಳುತ್ತಲಿದೆ ಈ ವಿಷಯವಾಗಿ **ಡಾ. ರಾಧಾಕಮಲ ಮುಖರ್ಜಿ** ಎಂಬ ಘನನಿ ದ್ವಾಂಸರು ಲಖನೌ ಪಟ್ಟಣದ ವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ-

"ಹಿಂದು ಸಮಾಜದ ಉತ್ತಮ ವರ್ಗದಲ್ಲಿಯ ಜನಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತ ನಡೆದಿದೆ. ಸಂಯುಕ್ತ ಮತ್ತು ಬಿಹಾರ ಪ್ರಾಂತಗಳಲ್ಲಿ ಕಳೆದ ೫೦ ವರುಷಗಳಲ್ಲಿ ಮುಸಲ್ಮಾನರ ಸಂಖ್ಯೆ ೧೦೦ ಕ್ಕೆ ೫೧ ರಂತೆ ಹೆಚ್ಚಿತು. ಪೂರ್ವ ಬಂಗಾಲದಲ್ಲಂತೂ ೧೦೦ ಕ್ಕೆ ೮೭ ರಂತೆ ಮುಸಲ್ಮಾನರು ಹೆಚ್ಚಿದರು.

ಆದರೆ ಪಂಜಾಬದಲ್ಲಿ ಹಿಂದುಗಳು ೧೦೦ ಕ್ಕೆ ೬ ರಂತೆ ಹೆಚ್ಚಿದ್ದಾರೆ. ಸಂಯುಕ್ತ ಮತ್ತು ಬಿಹಾರ ಪ್ರಾಂತಗಳಲ್ಲಿ ಇದಕ್ಕೂ ಕಡಿಮೆ ಪ್ರಮಾಣದಂತೆ ಹೆಚ್ಚಿದೆ. ಮುಸಲ್ಮಾನರ ಸಂಖ್ಯೆ ಹೆಚ್ಚಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಬಹು ಪತ್ನಿಕತ್ವ ಮತ್ತು ವಿಧವಾ ವಿವಾಹ ಇವೆರಡು ಮುಖ್ಯ. ಹಿಂದುಗಳ ಸಂಖ್ಯೆ ಕಡಿಮೆಯಾಗಲು ಬ್ರಾಹ್ಮಣಾದಿ ಜಾತಿಗಳಲ್ಲಿ ವಿಧವಾ ವಿವಾಹವಿಲ್ಲದೆ ಬಾಲ್ಯ ವಿವಾಹದಿಂದ ವಿಧವೆಯರ ಸಂಖ್ಯೆ ಹೆಚ್ಚುತ್ತಿರುವುದೂ ಲಗ್ನದ ನಾನಾ ಪ್ರತಿಬಂಧಗಳಿರುವುದೂ ಮುಖ್ಯ ಕಾರಣ. ಹಿಂದುಗಳ ಸಂಖ್ಯೆ ಹೀಗೆಯೇ ಕಡಿಮೆಯಾಗುತ್ತ ಮುಸಲ್ಮಾನರ ಸಂಖ್ಯೆ ಹೆಚ್ಚುತ್ತ ಹೋದರೆ ಮುಂದೆ ಹಿಂದುಸ್ಥಾನದ ರಾಜಕಾರಣದ ಮೇಲೆ ಇದರ ಪರಿಣಾಮವು ಹಿಂದುಗಳ ದೃಷ್ಟಿಯಿಂದ ಅತ್ಯಂತ ಭೀಕರವಾದುದಾಗಿ ಪರಿಣಮಿಸುವುದು"

ಡಾ. ರಾಧಾಕಮಲ ಮುಕರ್ಜಿಯವರ ಸೂಚನೆಯ ಕಡೆಗಾದರೂ ಹಿಂದು ಸಮಾಜದ ಮಲಗಿರುವ ಮುಖಂದರು ಎಚ್ಚರಗೊಳ್ಳುವರೇನು? ಸಾಮಾಜಿಕ ಕೊಳೆಗಳನ್ನು ತೊಳೆಯುವರೇನು? ಧರ್ಮದ ಮೂಢ ಕಲ್ಪನೆಗಳನ್ನು ನಿವಾರಣೆ ಮಾಡಲು ಸಿದ್ಧರಾಗುವರೇನು? ಇತ್ತೀಚೆಗೆ ಕನ್ಯಾಪಹಾರ ಮತ್ತು ಜಾತಿ ಕೆಡಿಸುವ ಕಾಟ ಲೋಪಾಯಗಳು ಹೆಚ್ಚುತ್ತಲಿವೆ. ಇವುಗಳ ಕಡೆಗೆ ಲಕ್ಷಿಸುವರೇನು? ಪರಧರ್ಮಿಯರನ್ನು ತಮ್ಮ ಮನೆಯಲ್ಲಿ ಬರಗೊಟ್ಟು ಬಳಿಗಳನ್ನು ಇಡಿಸಿಕೊಳ್ಳುತ್ತಿದ್ದುದರಿಂದ ಅನೇಕ ಹಿಂದು ಸ್ತ್ರೀಯರು ಪತಿತರಾದರೆಂದು ಉತ್ತರ ದೇಶದ ಸಂಗತಿಗಳಿಂದ ತಿಳಿದಿದೆ. ಆದ ಕಾರಣ ಹಿಂದುಗಳು ಈ ವಿಷಯದಲ್ಲಾದರೂ ಎಚ್ಚರಿಕೆಯುಳ್ಳವರಾಗುವರೇ?

## ಹಿಂದು ಮಹಾಸಭೆಯ ಹೇಡಿತನ.

ಹಿಂದು ಮಹಾಸಭೆ ಸ್ಥಾಪನೆಯಾದ ನಂತರ ಆದು ಮಾಡಿದುದೇನು? ಹಿಂದು ಸಂಘಟನೆಯಾಗಬೇಕೆಂದು ಹೇಳುತ್ತದೆ. ಆದರೆ ಸಂಘಟನೆಯಾಗುವ ವಿಧಾಯಕ ಕಾರ್ಯಕ್ರಮವನ್ನು ಗೊತ್ತು ಪಡಿಸಿ ಆ ಪ್ರಕಾರ ಕಾರ್ಯವನ್ನೇನೂ ಮಾಡುವುದಿಲ್ಲ. ಈ ವಿಚಾರವಾಗಿ ಅರ್ಜುನ ಎಂಬ ಪತ್ರಿಕೆಯ ಸಂಪಾದಕರು ಸೂಚಿಸಿರುವ ಈ ಕೆಳಗಿನ ಸಂಗತಿಗಳು ಅತ್ಯಂತ ಮಹತ್ವವಾದವುಗಳಾಗಿವೆ

"ಹಿಂದು ಮಹಾಸಭೆಯು ಹಿಂದು ಜನಗಳಿಗೆ ಸಾಮಾಜಿಕ ವಿಷಯದಲ್ಲಿ ಯಾವದೇ ನಿಶ್ಚಿತವಾದ ಮಾರ್ಗವನ್ನು ತೋರಿಸಿ ಸಂಘಟನೆಯನ್ನುಂಟುಮಾಡಿಲ್ಲ. ಅಸ್ಪೃಶ್ಯತಾ ಮತ್ತು ನಾನಾ ಜಾತಿಗಳ ನಿವಾರಣೆ, ವಿಧವಾ ವಿವಾಹ ಪ್ರಾರಂಭ, ಜಾತಿಯ ಮೇಲು ಕೀಳುಗಳ ಕಲ್ಪನೆಯ ನಾಶ ಮೊದಲಾದ ವಿಷಯಗಳಲ್ಲಿ ಹಿಂದುಗಳಿಗೆ ಯೋಗ್ಯ ಮಾರ್ಗವನ್ನು ತೋರಿಸಿಲ್ಲ ಹಾಗೆ ಮಾಡಿದರೆ ರೂಢಿಪ್ರಿಯರಾದ ಸನಾತನಿಗಳಿಂದ ವಿರೋಧವುಂಟಾಗುವುದೆಂದು ಹಿಂದು ಮಹಾಸಭೆಯು ಅಂಜಿಕೊಂಡಂತೆ ಕಾಣುತ್ತದೆ.

ಹಿಂದು ಸಮಾಜದಲ್ಲಿರುವ ಮೇಲು ಕೀಳುಗಳ ದುಷ್ಟ ಭಾವನೆ ಊಟೋಪಚಾರ, ಶರೀರ ಸಂಬಂಧ ಮೊದಲಾದವುಗಳಲ್ಲಿರುವ ಅನೇಕ ತಪ್ಪು ತಿಳುವಳಿಕೆ ಮೊದಲಾದವುಗಳಿಂದ ಹಿಂದು ಸಮಾಜವು ಛಿನ್ನ ವಿಚ್ಛಿನ್ನವಾಗಿ ಹೋಗಿದೆ. ಹಿಂದು ಮಹಾಸಭೆಯ ನಾಮಧಾರಿ ಸೂತ್ರದಾರರು ಈ ವಿಷಯಗಳೆಲ್ಲಿ ಒಂದು ಶಬ್ದವನ್ನಾದರೂ ಉಚ್ಚರಿಸುವ ಧೈರ್ಯವುಳ್ಳವರಾಗಿಲ್ಲ."

ಹಿಂದು ಮಹಾಸಭೆಯು ಯಾವ ಕೆಲಸವನ್ನು ಮಾಡಬೇಕೆಂದು ಜನರು ಅಪೇಕ್ಷಿಸುತ್ತಿದ್ದಾರೆಂಬುದು ಇದರಿಂದ ಗೊತ್ತಾಗುವುದಿಲ್ಲವೆ? ಹಿಂದು ಸಮಾಜದ ಪ್ರಮುಖರು ಅತ್ಯಂತ ಮಹತ್ವವಾದ ಈ ವಿಷಯದ ಕಡೆಗೆ ಲಕ್ಷಿಸಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳಿಂದ ಹಿಂದು ಸಮಾಜವು ಸುಸಂಘಟನೆಯುಳ್ಳದ್ದಾಗುವಂತೆ ಮಾಡುವುದು ಅಗತ್ಯವಲ್ಲವೆ? ಹಾಗಾದಾಗಲೇ ಹಿಂದು ಮಹಾಸಭೆಯ ಈಗಿನ ಹೇಡಿತನವು ನಿವಾರಣೆಯಾಗುವುದು.

# ವಿಜಾಪುರದಲ್ಲಿ ಬಿಜೆಯಿಸಿದ ಬಸವ ಜಯಂತಿ



ಬಾಳೇಹಳ್ಳಿ, ಹೀಗಳು ಮೆಸ್ಸೂರಿಗೆ ಬರುವಾಗ ರಾಜಧಾನಿಯ ಸ್ವಾಮಿ ವಿವೇಕಾನಂದ ಸುಶ್ಮಾನಂಗಳಿಂದ
ಪಟ್ಟಣವನ್ನು ಬಿಟ್ಟು ಹೋಗುವಾಗ ಪಾವನರಾಜಪುರ ಸ್ವೀಕಾರಸಭೆಯ ದೃಶ್ಯ.

---

ಶ್ರೀಯುತ ಪಂಥುವಾಡ ಬಸವೇಶ್ವರನ್ನು ಈ ಪರಿಸರ ಅಭಿಮಾನಿಗಳೂ ಸ್ಮರಿಸಿದಂತೆ
ಈ ಬಾಳೇಹಳ್ಳಿ ಶ್ರೀಗಳೂ ಬಸವೇಶ್ವರ ಸ್ಮೃತಿಯೆಂದು ಶ್ರೀಮಠದ
ಈ [illegible] ಇವರಿಗೆ ೬ [illegible] ಶೇ?

# ವೀರಶೈವರು ಈ ವರೆಗೆ ಪ್ರಕಟಿಸಿರುವ ಪತ್ರಿಕೆಗಳ ವಿವರಣೆ.

(ಸಂಗ್ರಾಹಕರು— ಶ್ರೀ. ರೇವಯ್ಯ ಹಿರೂಸಾಕ್ಷಯ್ಯ ಸ್ವಾಮಿರಮಠ ಗಲಗಲಿ)

| ನಂ. | ಇಸ್ವಿ | ಹೆಸರು | ಸಂಪಾದಕರು | ಸ್ಥಳ | | |
|---|---|---|---|---|---|---|
| ೧ | ೧೮೭೦ | ಚಂದ್ರೋದಯ | ಹುಚ್ಚಯ್ಯಾ ಸಂಗಯ್ಯಾ ವಿಭೂತಿ | ಧಾರವಾಡ | ವಾರ ಪ | ಕನ್ನ |
| ೨ | ೧೮೭೧ | ಜ್ಞಾನ ಮಂಜರಿ | ಗಂಗಾಧರ ಮಡಿವಾಳೇಶ್ವರ ಹುರಮರಿ | ಕಲಾದಗಿ | ಮಾ। ಪ। | ,, |
| ೩ | ೧೮೮೧ | ವೈಸೂರ ಸ್ಟಾರ | ವೈ. ವೀರಸಂಗಪ್ಪ | ವೈಸೂರು | ವ । ಪ। | |
| ೪ | ೧೮೮೩ | ಕರ್ನಾಟಕ ಪತ್ರಿ | ಶಿವನಪ್ಪ ದೇಸಾಯಿ | ಧಾರವಾಡ | ,, | ,, |
| ೫ | ೧೮೯೦ | ಕರ್ನಾಟಕ ವೃತ್ತ (ಧನಂಜಯ) | ಚನವೀರ ಫಕೀರಪ್ಪ ಅನಾಡ | ,, | ,, | ,, |
| ೬ | ೧೮೯೧ | ವೀರಶೈವ ಮತಪ್ರಕಾಶ | | ವೈಸೂರು | ಮಾ। ಪ। | ,, |
| ೭ | ೧೮೯೬ | ವೀರಶೈವ ಮತಾದರ್ಶ | ಬಿ. ಮುನಿಯಪ್ಪ ಮತ್ತು ಬಿ. ಬಸಪ್ಪ | ಬೆಂಗಳೂರು | ವಾ। ಪ। | ,, |
| ೮ | ೧೯೦೧ | ಶ್ರೀ ಮದ್ವೀರಶೈವ | ಪಾರಲಿಂಗ ಪ್ರಭು ಅಯ್ಯಾ | ಬಾರಸಿ | ಮಾ। ಪ। | ಮರಾ. |
| ೯ | ೧೯೦೦ | ಪ್ರಬೋಧ ರತ್ನ | ,, | ,, | ವಾ। ಪ। | ,, |
| ೧೦ | ೧೯೦೫ | ವಾಗ್ದೇವಿ | ಗದಿಗಯ್ಯಾ ಹುಚ್ಚಯ್ಯಾ ವಿಭೂತಿ | ಧಾರವಾಡ | ಮಾ। ಪ। | ಕನ್ನಡ |
| ೧೧ | ೧೯೦೬ | ಧನುರ್ಧಾರಿ | ಎಂ. ಮಂಜಪ್ಪ ಹರ್ಡೆಕರ್ | ದಾವಣಗೇರಿ | ವಾ। ಪ। | ,, |
| ೧೨ | ೧೯೦೬ | ವೀರಶೈವ ಪ್ರಭಾಕರ | ಎಸ್. ಚನವೀರಪ್ಪ | ಮದ್ರಾಸ | ಮಾ। ಪ। | ,, |
| ೧೩ | ೧೯೦೬ | ವೀರಶೈವ ಧರ್ಮ ಸೇವಕ | ನಾರಾಯಣ ರಾಮಲಿಂಗ ಬಾಮಣಗಾವಕರ್ | ಉಮರಾವತಿ | ,, | ಮರಾಠಿ |
| ೧೪ | ೧೯೦೬ | ವೀರಶೈವ ಮತಪ್ರಕಾಶ | ಮುಪ್ಪಯ್ಯಾ ಸ್ವಾಮಿ | ಖಾಣದಾಳ | ,, | ,, |
| ೧೫ | ೧೯೦೭ | ವೀರಶೈವ ಗ್ರಂಥ ಪ್ರಕಾಶ | ಎನ್. ಆರ್. ಕರಬಸಪ ಶಾಸ್ತ್ರಿ | ವೈಸೂರು | ,, | ಕನ್ನಡ |
| ೧೬ | ೧೯೦೭ | ವೀರಶೈವೋತ್ಕರ್ಷಮಾಲಾ | ವೀರಬಸವ ಶ್ರೇಷ್ಠಿ ಬಿ, ಎ. | ಕೊಲ್ಹಾಪುರ | ,, | ಕನ್ನಡ ಮರಾ |
| ೧೭ | ೧೯೦೭ | ತರುಣ ಹಿಂದು | ನಾರಾಯಣ ರಾಮಲಿಂಗ ಬಾಮಣಗಾವಕರ | ಉಮರಾವತಿ | ,, | ಮರಾಠಿ |
| ೧೮ | ೧೯೦೮ | ಲಾ ರಿಪೋರ್ಟ | ಎಂ. ಮಲ್ಲಾರಾಧ್ಯ | ಬೆಂಗಳೂರು | ,, | ಕನ್ನಡ |
| ೧೯ | ೧೯೦೮ | ವೀರಶೈವ ಸಂಜೀವಿನಿ | ನಾರಾಯಣ ರಾಮಲಿಂಗ ಬಾಮಣಗಾವಕರ್ | ಉಮರಾವತಿ | ವಾ। ಮಾ। | ಪ। ಮರಾ |
| ೨೦ | ೧೯೧೧ | ಶ್ರೀಮದ್ವೀರಶೈವ | ಬ್ರ. ಶ್ರೀ. ಸಿ. ನಾಗಶಾಸ್ತ್ರಿ | ಜುಮನಾಳ | ಮಾ। ಪ। | ಕನ್ನಡ |
| ೨೧ | ೧೯೧೧ | ಬೃಹಜ್ಜ್ಯೋತಿ | ,, | ,, | ,, | ,, |
| ೨೨ | ೧೯೧೧ | ವಿಕಟ ವಿನೋದಿನಿ | ಬಿ. ಬಸವಪ್ಪ ಶೆಟ್ಟರು | ಬೆಂಗಳೂರು | ,, | ,, |
| ೨೩ | ೧೯೧೧ | ವೀರಶೈವ ಧರ್ಮ ತರಂಗಿಣಿ | ಎಚ್. ಎಸ್. ಶಿವಲಿಂಗಶಾಸ್ತ್ರಿಗಳು | ಧಾರವಾಡ | ,, | ,, |
| ೨೪ | ೧೯೧೪ | ಭಾರತಿ | ಕೆ. ಎಂ. ಕರಬಸವಯ್ಯಾ | ಬಳ್ಳಾರಿ | ವಾ। ಪ। | ,, |
| ೨೫ | ೧೯೧೫ | ಭಾರತಿ | ,, | ,, | ಮಾ। ಪ। | ,, |
| ೨೬ | ೧೯೧೫ | ಚಂದ್ರೋದಯ | ಗದಿಗಯ್ಯಾ ಹುಚ್ಚಯ್ಯಾ ವಿಭೂತಿ | ಧಾರವಾಡ | ವಾ। ಪ। | ,, |
| ೨೭ | ೧೯೧೫ | ವೀರಶೈವ ಧರ್ಮ ರಹಸ್ಯ | ಶಿವಲಿಂಗ ಭಾವು ಓಝರಡೆ | ದೇವೂರ | ಮಾ। ಪ। | ಮರಾಠಿ |
| ೨೮ | ೧೯೧೬ | ಚಂದ್ರೋದಯ | ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ | ಧಾರವಾಡ | ,, | ಕನ್ನಡ |
| ೨೯ | ೧೯೧೬ | ಲೋಕ ಶಿಕ್ಷಕ | ಬಂಡನಗೌಡ ಸಂಕಪ್ಪಗೌಡ್ರ | ಗದಗ | ,, | ,, |
| ೩೦ | ೧೯೧೭ | ಮಹಿಳಾ ಜ್ಞಾನೋತ್ಕರ್ಷ ಮಾ। | ಚನ್ನಬಸವಯ್ಯಾ ಚಂಡೂರ ಮಠ | ಗದಗ | ,, | ,, |
| ೩೧ | ೧೯೧೮ | ಪ್ರಬೋಧ | ಎಸ್. ಎಸ್. ಬಸವನಾಳ ಎಂ. ಎ. | ಬೆಳಗಾವಿ | ,, | ,, |
| ೩೨ | ೧೯೧೮ | ವೀರಶೈವಾಚಾರ ಜ್ಞಾನ ಪ್ರಬೋಧಿನಿ | ಶ್ರೀ ಹೊಳೆಬಸವ ಶಾಸ್ತ್ರಿ | ಹರಪನಹಳ್ಳಿ | ,, | ,, |
| ೩೩ | ೧೯೧೮ | ವಾಣಿಜ್ಯ | ,, | ,, | ,, | ,, |
| ೩೪ | ೧೯೧೮ | ಮುಕ್ತ ಗುಚ್ಛಮಾಲಾ | ಗುರುಮೂರ್ತಿ ಸ್ವಾಮಿ, ವಿಶ್ವೇಶ್ವರ ಸ್ವಾಮಿ | ವಡಂಗಳಗಿ | ,, | ಮರಾಠಿ |
| ೩೫ | | ವಿಭಾಕರ | ಪಂಡಿತಪ್ಪ ರಾಯಪ್ಪ ಚಿಕ್ಕೋಡಿ | ಬೆಳಗಾವಿ | ವಾ। ಪ। | ಕನ್ನಡ |
| ೩೬ | ೧೯೧೯ | ಸತ್ಯ ಪ್ರಕಾಶ | ನಾರಾಯಣ ರಾಮಚಂದ್ರ ವಿಭೂತಿ | ತಾಸಗಾವ | ,, | ಮರಾಠಿ |
| ೩೭ | ೧೯೧೯ | ವೀರಶೈವ ಧರ್ಮ ಪ್ರಕಾಶಿಕೆ | ಹೊಳೆಬಸವ ಶಾಸ್ತ್ರಿಗಳು | ಹರಪನಹಳ್ಳಿ | ಮಾ। ಪ। | ಕನ್ನಡ |
| ೩೮ | ೧೯೧೯ | ನ್ಯೂ ಈರಾ | ಸಿ. ಜಿ. ಸ್ವಾಮಿ ಹಿರೇಮಠ ಬಿ ಎ | ಕೊಲ್ಹಾಪುರ | ವಾ। ಪ। | ಇಂಗ್ಲೀಷ |
| ೩೯ | ೧೯೧೯ | ಉದಯ | ನಾರಾಯಣ ಬಾಮಣಗಾವಕರ | ಉಮರಾವತಿ | ,, | ಮರಾಠಿ |
| ೪೦ | ೧೯೨೦ | ಕರ್ನಾಟಕ ಟಾಯಿಮ್ಸ | ಎಚ್. ಶಿವಲಿಂಗ ಶಾಸ್ತ್ರಿ | ಧಾರವಾಡ | ,, | ಕನ್ನಡ |
| ೪೧ | ೧೯೨೦. | ಲಿಂಗಾಯತ ಧರ್ಮ ಪ್ರಕಾಶ | ವಿರೂಪಾಕ್ಷ ದೇವೇಂದ್ರ | ಲಾಕೂರ | ಮಾ। ಪ। | ಮರಾಠಿ |
| ೪೨ | ೧೯೨೧ | ವಿಶ್ವಬಂಧು | ಗುರುಮೂರ್ತಿ ಶಾಸ್ತ್ರಿ ಕಜ್ಜರಿ, ಗುರುಪಾದಪ್ಪ ಕಲ್ಯಾಣಶೆಟ್ಟಿ | ಗದಗ | ,, | ಕನ್ನಡ |
| ೪೩ | ೧೯೨೨ | ಸತ್‌ಶಿಕ್ಷಣ | ಬಸವಲಿಂಗ ಸ್ವಾಮಿ ತಲವಾಯಿಮಠ | ಗದಗ | ,, | ,, |

| | | | | | | |
|---|---|---|---|---|---|---|
| ೪೪ | ೧೯೩೨ | ಶಿವಸ್ಮರಣ | ಮಡಿವಾಳಪ್ಪ ವಕೀಲ ನಾವಲಿಗಿ | ಕೊಲ್ಹಾಪುರ | ಮಾ\| ಪ\| | ಮರಾಠಿ |
| ೪೫ | ೧೯೩೩ | ವೀರಶೈವ ಧರ್ಮಸಂಗ್ರಹ | ವೀರಪ್ಪ ಶಾಸ್ತ್ರಿ | ಮಾಗಡಿ | ,, | ಕನ್ನಡ |
| ೪೬ | ೧೯೩೩ | ಜಾಗೃತಿ | ಅಂದಾನಪ್ಪ ಚಿನಿವಾಲ | ಸೋಲಾಪುರ | ವಾ\| ಪ\| | ,, |
| ೪೭ | ೧೯೩೪ | ವೀರಶೈವ ದರ್ಪಣ | ಶಿರಸಿ ಗುರುಶಾಂತ ಶಾಸ್ತ್ರಿ | ಮೈಸೂರು | ಮಾ\| ಪ\| | ,, |
| ೪೮ | ೧೯೩೪ | ವಾಗ್ಭೂಷಣ | ಎಸ್. ಎಸ್. ಬಸವನಾಳ | ಧಾರವಾಡ | ,, | ,, |
| ೪೯ | ೧೯೩೪ | ಧರ್ಮ ಸಂಜೀವನಿ | ಬಸವರಾಜ ಶಾಸ್ತ್ರಿ ಮುಸ್ಕಿ | ರಾಯಚೂರು | ,, | ,, |
| ೫೦ | ೧೯೩೪ | ಲೋಕಮತ | ವ್ಹಿ. ಬಿ. ಪುರಾಣಿಕರು | ಹುಬ್ಬಳ್ಳಿ | ವಾ\| ಪ! | ,, |
| ೫೧ | ,, | ಬಸವರಾಜ | ಚನ್ನಬಸವಪ್ಪ ಹಾಲಪ್ಪನವರ | ಹಾವೇರಿ | ,, | ,, |
| ೫೨ | ೧೯೩೫ | ಶಿಕ್ಷಣಪ್ರಕಾಶ | ವಿರೂಪಾಕ್ಷ ದೇಶಿಕೇಂದ್ರ | ಲಾತೂರು | ಮಾ\| ಪ\| | ಮರಾಠಿ |
| ೫೩ | ,, | ಮುಕ್ತಗುಚ್ಛಮಾಲಾ | ಪಟ್ಟದದೇವರು | ನಾಶಿಕ | ,, | ,, |
| ೫೪ | ,, | ವೀರಶೈವ ಧರ್ಮಸಂಜೀವಿನಿ | ಎಸ್. ಎನ್. ಬಸವಪ್ರಭಯ್ಯ | ಮಾಗಡಿ | ,, | ಕನ್ನಡ |
| ೫೫ | ೧೯೩೬ | ಶಿವಾನುಭವ | ಫ. ಗು. ಹಳಕಟ್ಟಿ | ವಿಜಾಪುರ | ಶೈ\| ಮಾ\| | ,, |
| ೫೬ | ,, | ಮುಂದಾಳು | ವ್ಹಿ. ಎಸ್. ಗುಡಗುಂಟಿ | ,, | ವಾ\| ಪ\| | ,, |
| ೫೭ | ,, | ತರುಣ ಕರ್ನಾಟಕ | ಬಿ. ಎಸ್. ಪಾಟೀಲ | ಬೈಲಹೊಂಗಲ | ,, | ,, |
| ೫೮ | ,, | Servant of Truth | ಎಚ್. ಬಿ. ಕಲಬುರ್ಗಿ | ಧಾರವಾಡ | ,, | ಇಂಗ್ಲಿಷ |
| ೫೯ | ,, | ವಿದ್ಯಾರ್ಥಿ | ಡಿ. ಎಮ್. ಸಿದ್ಧಲಿಂಗಯ್ಯ | ಮಡಿಕೇರಿ | ಮಾ\| ಪ\| | ಕನ್ನಡ |
| ೬೦ | ೧೯೩೭ | ನವಕರ್ನಾಟಕ | ಫ. ಗು. ಹಳಕಟ್ಟಿ | ವಿಜಾಪುರ | ವಾ\| ಪ\| | ,, |
| ೬೧ | ,, | ಪಂಚಾಚಾರ್ಯ ಪ್ರಭಾ | ಶಿರಸಿ ಗುರುಶಾಂತ ಶಾಸ್ತ್ರಿ | ಮೈಸೂರು | ,, | ,, |
| ೬೨ | ,, | ವೀರಶೈವಧರ್ಮಸಾಮ್ರಾಜ್ಯ | ರಾಚಯ್ಯಾ ಬಸವಯ್ಯ ಹಿರೇಮಠ | ಕಮತನೂರ | ಮಾ\| ಪ\| | ,, |
| ೬೩ | ,, | ದೇವಭೂಜ | ಎಸ್. ಸಿ ಸಾಲೀಮಠ | ರೋಣ | ,, | ,, |
| ೬೪ | ,, | ಸುಧಾಕರ | ರೇವಣಸಿದ್ಧಯ್ಯಾ ವಸ್ತ್ರದ | ಕಲಕೇರಿ | ,, | ,, |
| ೬೫ | ೧೯೩೮ | ನವಜೀವನ | ಬಿ ಸಿ. ಪುರಾಣಿಕ | ಬಬಲೇಶ್ವರ | ,, | ,, |
| ೬೬ | ,, | ಗ್ರಾಮಾಧಿಪತಿ | ಜೋತೆಪ್ಪಗೌಡ ಪಾಟೀಲ ಎಲ್ಲಡಿಗಿ | ಅಥಣಿ | ,, | ,, |
| ೬೭ | ,, | ಖಾದಿವಿಜಯ | ಹರ್ಡೀಕರ ಮಂಜಪ್ಪ, ದಿವಾಕರ ರಂಗರಾವ | ಆಲಮಟ್ಟಿ | ,, | ,, |
| ೬೮ | ,, | ರಯತ | ನಾತಾಜಿ ಅಕ್ಕಾಜಿ ಮಾಳಿ | ಚಿಕ್ಕೋಡಿ | ವಾ\| ಪ\| | ಮರಾಠಿ |
| ೬೯ | ೧೯೩೯ | ವೀರಪ್ರಭಾ | ಶಂಕರ ಜಳಗಾವಕರ, ಶ್ರೀವೇಣಿಬಾಯಿ | ಬಾರ್ಶಿ | ,, | ,, |
| ೭೦ | ,, | ವೀರಶೈವ ಕೇಸರಿ | ಸ್ವಾಮಿ ರಾಮಲಿಂಗ ಕರಮಾಳಿಕರ | ಪುಣೆ | ,, | ,, |
| ೭೧ | ,, | ವಿಜಯ | ಬಸವಲಿಂಗ ಶಾಸ್ತ್ರಿ ಪುರಾಣಿಕ | ಸೊಲ್ಲಾಪುರ | ಮಾ\| ಪ\| | ,, |
| ೭೨ | ,, | ಪ್ರಜಾಮಿತ್ರ | ಬಿ. ಸಿ. ಪುರಾಣಿಕ | ಬಬಲೇಶ್ವರ | ವಾ\| ಪ\| | ಕನ್ನಡ |
| ೭೩ | ,, | ಶಿವಪ್ರತಾಪ | ಗುರುಮೂರ್ತಿ ಶಾಸ್ತ್ರಿ ಕಜ್ಜರಿ | ಹಾವೇರಿ | ,, | ,, |
| ೭೪ | ೧೯೪೦ | ಉದ್ಯೋಗ | ಹರ್ಡೀಕರ ಮಂಜಪ್ಪ | ಆಲಮಟ್ಟಿ | ಮಾ\| ಪ\| | ,, |
| ೭೫ | ,, | ದೇಶಬಂಧು | ಬಿ. ಎಸ್. ಪಾವಟೆ | ಹುಬ್ಬಳ್ಳಿ | ನಿತ್ಯ, ವಾ\| ಪ\| | ,, |
| ೭೬ | ,, | ಮುಂದಾಳು | ಎ. ಜಿ. ಜಿನಿವಾಲ | ವಿಜಾಪುರ | ವಾ\| ಪ\| | ,, |
| ೭೭ | ೧೯೪೧ | ಶರಣ ಸಂದೇಶ | ಹರ್ಡೀಕರ ಮಂಜಪ್ಪ | ಆಲಮಟ್ಟಿ | ,, | ,, |
| ೭೮ | ,, | ಕರ್ನಾಟಕ ಬಂಧು | ಚನಬಸವಾರ್ಯ ಹಿರೇಮಠ | ಗದಗ | ,, | ,, |
| ೭೯ | ,, | ಉದಯ | ಸ. ಚ. ಮಿರ್ಜಿ | ವಿಜಾಪುರ | ನಿತ್ಯ, ,, | ,, |
| ೮೦ | ,, | ತರುಣ ಕರ್ನಾಟಕ | ಎಲ್. ಎಸ್. ಪಾಟೀಲ | ಹುಬ್ಬಳ್ಳಿ | ,, ,, | ,, |
| ೮೧ | ೧೯೪೨ | ಸದ್ಧರ್ಮ ದೀಪಿಕೆ | ಚನ್ನಮಲ್ಲಿಕಾರ್ಜುನ | ಹಾವೇರಿ | ಮಾ\| ಪ\| | ,, |
| ೮೨ | ,, | ವೀರಶೈವ ಗರ್ಜನಾ | ವಿರೂಪಾಕ್ಷ ದೇಶಿಕೇಂದ್ರ | ಲಾತೂರ | ವಾ\| ಪ\| | ,, |
| ೮೩ | | ಆರಾಧ್ಯ ಧರ್ಮೋಜ್ಜೀವನ | ಬಿ ಬಸವಾರಾಧ್ಯ | | ಮಾ\| ಪ\| | ಕನ್ನಡ |
| ೮೪ | | ರತ್ನಾಕರ | ಮುರಿಗೆಪ್ಪ ಗುಮಾಸ್ತೆ | ಚಿತ್ರದುರ್ಗ | ವಾ\| ಪ\| | ,, |
| ೮೫ | ೧೯೪೩ | ಮಹಾರಾಷ್ಟ್ರವೀರ | ವಿರೂಪಾಕ್ಷಯ್ಯ ಹಿರೇಮಠ ಮಿರ್ಜಿ | ಮಿರ್ಜಿ | ,, | ಮರಾಠಿ |
| ೮೬ | ೧೯೪೩ | ಆಂಧ್ರ ಕ ಗ್ರಂ. ಮಾಲಾ | ಕೆ. ಎಮ್. ಕರಿಬಸವ ಶಾಸ್ತ್ರಿಗಳು | ರಾಯದುರ್ಗ | ಮಾ\| ಪ\| | ಕನ್ನಡ, ತೆಲಗ |
| ೮೭ | ,, | ವಿಜಯ | ಬಸವಲಿಂಗ ಶಾಸ್ತ್ರಿ ಪುರಾಣಿಕ | ಸೊಲ್ಲಾಪುರ | ವಾ\| ಪ\| | ಮರಾಠಿ |
| ೮೮ | ,, | ನವಸಂದೇಶ | ಹೊಳಿಬಸವ ಶಾಸ್ತ್ರಿಗಳು | ಬಳ್ಳಾರಿ | ,, | ಕನ್ನಡ |
| ೮೯ | ೧೯೪೪ | ವೀರಪ್ರಭಾ | ಮಲ್ಲಿಕಾರ್ಜುನಪ್ಪ ಹಾನಗಲ್ಲಿ | ಬಾಗಲಕೋಟ | ,, | ,, |
| ೯೦ | ,, | ವಿಜಯ | ಬಸವಲಿಂಗ ಶಾಸ್ತ್ರಿ ಪುರಾಣಿಕ | ಸೊಲ್ಲಾಪುರ | ದೈನಿಕ ಪ\| | ಮರಾಠಿ |
| ೯೧ | ,, | ಸುದರ್ಶನ | ಎಸ್. ಕಲ್ಯಾಣಶೆಟ್ಟಿ | ಸೊಲ್ಲಾಪುರ | ವಾ\| ಪ\| | ,, |
| ೯೨ | ,, | ವಿಶ್ವಭಾರತಿ | ಜಿ ಎಮ್. ಸಿದ್ಧಲಿಂಗಪ್ಪ | ಬೆಂಗಳೂರು | ಮಾ\| ಪ\| | ಕನ್ನಡ |

## ಊಟದ ಮೇಲೆ ಪಿಕೇಟಿಂಗ್!

ಜೈನ ಧರ್ಮದಲ್ಲಿ ವೋಸರ (ಮೃತ್ಯುಭೋಜನ) ಎಂದರೆ ಮರಣ ಹೊಂದಿದವರ ಹೆಸರಿನಿಂದ ಅವರ ಸ್ನೇಹಿತ್ಥರ್ವಾಗಿ ಊಟ ಮಾಡಿಸುವದು ಧಾರ್ಮಿಕ ವಿಧಿಯೆಂದು ಕೆಲವರು ಹೇಳುತ್ತಿದ್ದಾರೆ. ಇದು ಜೈನ ಧರ್ಮಕ್ಕೆ ವಿರೋಧವಾದುದು. ಕರ್ಮಾನುಗಚ್ಛತಿ ಜೀವ ಲೋಕಃ ಎಂಬ ಸಿದ್ಧಾಂತದಂತೆ ಜೀವಿಗಳು ತಮ್ಮ ತಮ್ಮ ಕರ್ಮಾನುಗುಣ್ಯವಾಗಿ ಹಿತಾಹಿತಗಳನ್ನನುಭೋಗಿಸುವುದರಿಂದ ಈ ಮೃತ್ಯು ಭೋಜನವು ಅಶಾಸ್ತ್ರೀಯವೆಂತಲೂ ತರ ತರದ ಮಿಷ್ಟಾನ್ನವನ್ನು ಸೇವಿಸಲು ಈ ರೂಢಿಯನ್ನುಂಟುಮಾಡಿದ್ದಾಗಿದೆಯಂತಲೂ ಕೆಲವರು ಹೇಳುತ್ತಿದ್ದಾರೆ.

ಅಜಮೀರದಲ್ಲಿ ಕೂಡಿದ ಅಖಿಲ ಭಾರತೀಯ ಓಸವಾತಾ ಮಹಾಸಭೆಯಲ್ಲಿ ಕೂಡಾ ಈ ಮೃತ್ಯುಭೋಜನವು ಅಧರ್ಮ ಅನರ್ಥಕಾರಿಯೆಂದೇ ನಿರ್ಣಯವಾಗಿದೆ. ಈ ವಿಚಾರವಾಗಿ ಪುಣೆಯ ಜೈನ ಸಮಾಜದಲ್ಲಿ ಬಹು ಗೊಂದಲವುಂಟಾಗಿದೆ. ಶೇಟ ಮಾವಡಿಕರ ಎಂಬುವವರು ವೋಸರ ಪಕ್ಷದವರು. ಇತರ ಮನೆಯಲ್ಲಿ ತಾ. ೧೧ ನೆಯ ದಿನ ಮೃತ್ಯುಭೋಜನವಿದ್ದಿತು.

ಈ ಅಧರ್ಮದ ಭೋಜನಕ್ಕೆ ಹೋಗಬೇಡಿರೆಂದು ಅಲ್ಲಿನ ಪ್ರಸಿದ್ಧ ಮುಂದಾಳುಗಳಾದ ಶ್ರೀ ಪೋಪಟಲಾಲಶಹಾ ಮತ್ತು ಅವರ ಧರ್ಮಪತ್ನಿಯರಾದ ಶ್ರೀಮತಿ ಸರಲಾದೇವಿ ಮೊದಲಾದ ಅನೇಕ ಪ್ರಮುಖ ಪುರುಷರೂ ಸ್ತ್ರೀಯರೂ ಕಾವಲುಗಾರರಾಗಿ ನಿಂತು ಊಟಕ್ಕೆ ಹೋಗುವವರ ಮನಸನ್ನು ತಿರುಗಿಸುತ್ತಿದ್ದರು. ಈ ಪಿಕೇಟಿಂಗ್ ಕಾರ್ಯಕ್ಕೆ ೧೫ ರಿಂದ ೨೫ ವರುಷಗಳೊಳಗಿನ ಅನೇಕ ಪ್ರಮುಖ ಸ್ತ್ರೀ ಪುರುಷರು ಸ್ವಸಂತೋಷದಿಂದ ಮುಂದೆ ಬಂದು ಊಟಕ್ಕೆ ಹೋಗುತ್ತಿದ್ದವರಲ್ಲಿ ಬಹು ಜನರನ್ನು ಹಿಂದಕ್ಕೆ ಕಳುಹಿಸಿದರು.

ಈ ಪ್ರಕಾರ ಧಾರ್ಮಿಕ ಆಚಾರ ವಿಚಾರಗಳಲ್ಲಿಯೂ ಪಿಕೇಟಿಂಗ್, ಅಸಹಕಾರಗಳು ಎಲ್ಲ ಸಮಾಜಗಳಲ್ಲಿಯೂ ಪ್ರಾರಂಭವಾಗುವಂತೆ ತೋರುತ್ತದೆ. ಅನಂತರ ಅನ್ಯಾಯವಾದ ಆಚಾರ ವಿಚಾರಗಳ ನಿವಾರಕರ್ಥವಾಗಿ ಸತ್ಯಾಗ್ರಹವು ಕೂಡಾ ಪ್ರಾರಂಭವಾಗದಿರಲಾರದು. ರಾಜಕೀಯ ದಾಸ್ಯಕ್ಕಿಂತಲೂ ಸಾಮಾಜಿಕ ಮತ್ತು ಧಾರ್ಮಿಕ ದಾಸ್ಯತ್ವಗಳು ಹೆಚ್ಚು ಅನರ್ಥಕಾರಿಯಾಗಿವೆ. ಇವುಗಳ ನಿವಾರಣೆಯಾಗಲು ಬಹು ಜನರಲ್ಲಿರುವ ಧಾರ್ಮಿಕ ಮಳ್ಳತನ ಹೋಗಬೇಕು. ಇದಕ್ಕೆ ಶಿಕ್ಷಣ ಪ್ರಸಾರ ಮತ್ತು ವಿಚಾರ ಕ್ರಾಂತಿಯ ಪ್ರಕಟನೆಗಳೇ ಮುಖ್ಯೋಪಾಯಗಳು.

### ಬಟ್ಟೆಯ ಮಂಟಪ.

೪೮ ನೆಯ ರಾಷ್ಟ್ರೀಯ ಸಭೆಯು ಅಧ್ಯಕ್ಷರ ಆಗಮನ ಸನ್ಮಾನಾರ್ಥವಾಗಿ ಮುಂಬೈ ಬೋರಿ ಬಂದರದಿಂದ ರಾಷ್ಟ್ರೀಯ ಸಭೆ ಸೇರುವ ಅಬ್ದುಲ್‌ಗಫರ್ ನಗರದ ವರೆಗೆ ಮಾರ್ಗಗಳಲ್ಲಿ ಅಲ್ಲಲ್ಲಿಗೆ ಭವ್ಯವಾದ ಗುಡಿ ತೋರಣಗಳು ಕಟ್ಟಲ್ಪಟ್ಟಿವೆ. ಇವುಗಳಲ್ಲಿ ಒಂದು ಮಂಟಪವು ಅತ್ಯದ್ಭುತವಾದುದು. ಕೇವಲ ಬಟ್ಟೆಗಳಿಂದಲೇ ನಿರ್ಮಿತವಾದುದು. ಇದಕ್ಕೆ ೫೦ ಸಾವಿರ ರೂ. ವೆಚ್ಚವಾಗಿರುವುದಾಗಿ ಸುದ್ದಿ!

### ಅಖಿಲ ಭಾರತ ಸಹಕಾರ ದಿನ.

ಈ ಸಾರಿ, ೩-೧೧-೩೪ ನೇ ದಿವಸ ಶನಿವಾರವು 'ಅಖಿಲ ಭಾರತ ಸಹಕಾರ ದಿನ'ವಾಗಿದೆಯಷ್ಟೆ. ಪರಸ್ಪರ ಸ್ನೇಹವೇ ನಮ್ಮ ಜೀವನ-ಪುಷ್ಪದ ಪರಿಮಳವೆಂದು ಸೂಚಿಸುವ ಈ ಸಹಕಾರ ದಿನದ ನಿಮಿತ್ಯವಾಗಿ, ಎಲ್ಲ ಸಹಕಾರಿಗಳು ಪ್ರೇಮದಿಂದ ತಮ್ಮ ತಮ್ಮ ಸಂಘದ ಕಚೇರಿಯಲ್ಲಿ ನೆರೆದು, ಪರಸ್ಪರ ವಿಚಾರ ವಿನಿಮಯಮಾಡಿ, ಆರ್ಥಿಕ, ನೈತಿಕ, ಸಾಮಾಜಿಕ ಸ್ಥಿತಿಯ ಸುಧಾರಣೋಪಾಯಗಳನ್ನು ಕಂಡುಕೊಂಡು ತದನುಸಾರವಾಗಿ ವರ್ತಿಸಬೇಕಾಗಿ ವಿನಂತಿ.

ಈ ದಿನೋತ್ಸವದ ವಿಷಯವಾಗಿ, ನಾವು ಮಾಡುವ ಈ ವರ್ಷದ ವ್ಯಯವು, ಅತಿ ಮಿತವ್ಯಯವೆಂದೆನಿಸಿದರೇನೇ ಸಹಕಾರ ದಿನಾಚರಣೆಯು ಸಾರ್ಥಕ. ಉತ್ಸವವನ್ನು ನೆರವೇರಿಸಿದ ಬಗ್ಗೆ, ನಮ್ಮ ಕಚೇರಿಗೆ ಸವಿಸ್ತಾರ ರಿಪೋರ್ಟ್ ಕಳಿಸಬೇಕು

Sd. M. P. Nadgouda, Hon. Secretary.
ಕೊ. ಆ ಇಸ್ಪೀಟ್ಯೂಟ್, ಬಾಗಲಕೋಟೆ.

### ಅಲೆಗ್ಝಾಂಡರನ ಕೊಲೆಯ ಪರಿಣಾಮ.

ಅಲೆಗ್ಝಾಂಡರ ರಾಜನ ಕೊಲೆಯ ಸಮಾಚಾರವನ್ನು ಮೊದಲೇ ಕೊಟ್ಟಿದೆಯಷ್ಟೆ. ಈ ಸಂಗತಿಯನ್ನು ಅವನ ಪತ್ನಿ ಪುತ್ರಾದಿಗಳಿಗೆ ತಿಳಿಸಲಾಯಿತು ಅವರೆಲ್ಲರೂ ಶೋಕಸಾಗರದಲ್ಲಿ ಮುಳುಗಿದ್ದಾರೆ. ಈ ಕೊಲೆಯು ಇಟಲಿ ದೇಶದಲ್ಲಿಯೇ ಯೋಜಿಸಲ್ಪಟ್ಟಿರುವದೆಂದೂ ಅನೇಕರು ಊಹಿಸುತ್ತಾರೆ ಮಾರ್ಸೆಲ್ಸದಲ್ಲಿ ಈ ಕೊಲೆಯಾಗದಿದ್ದರೆ ಪ್ಯಾರಿಸದಲ್ಲಿಯಾದರೂ ಕೊಲೆ ಮಾಡಲು ಇನ್ನಿಬ್ಬರು ಸಿದ್ಧರಿದ್ದರಂತೆ ಕೊಲೆಯಾದ ಕೂಡಲೆ ಒಬ್ಬನು ಸ್ವಿಟ್ಸರ್ಲಂಡಕ್ಕೆ ಹೋಗಲು ಪಾಸಪೋರ್ಟು ತೆಗೆದುಕೊಂಡು ಸಿದ್ಧನಾಗಿದ್ದನು ಇನ್ನೊಬ್ಬನು ಉಗಿಬಂಡಿಯನ್ನು ಹತ್ತುವಾಗ ಹಿಡಿಯಲ್ಪಟ್ಟನು. ಅವನ ಕಾಗದ ಪತ್ರಗಳನ್ನು ಪೋಲೀಸರು ಶೋಧಿಸುತ್ತಿರುವಾಗ ಅವನು ಜಾರಿಕೊಂಡು ಅಡವಿ ಸೇರಿದನು. ಆದರೆ ಥೊರ್ನ ಹೋಟಲಿನಲ್ಲಿ ಇಬ್ಬರನ್ನೂ ಬಂಧಿಸಲಾಯಿತು.




| | | | | |
|---|---|---|---|---|
| ೧೩ | ೧೯೩೪ | ವೀರಶೈವ ಚಂದ್ರಿಕೆ | ಮುರಿಗೇಂದ್ರ ಶಿಟ್ಟರು ಆಲೂರು | ಸಿರಹಟ್ಟಿ | ಮಾ| ಪ| ಕನ್ನಡ |
| ೧೪ | ೧೯೩೪ | ಕರ್ಣಾಟಕ ಕೈಲಾಸಸಂಸ್ಥೆಗಳ ಪತ್ರಿಕೆ | ಟಿ. ಎಸ್. ಚನ್ನಪ್ಪನವರು | ಬೆಂಗಳೂರು | ನಾ. ಪ. | ,, |

( ೫ ನೆಯ ಪುಟದಿಂದ ಬಂದುದು )

೮ ಬಸವ ಪುರಾಣಗಳಲ್ಲಿ ಬಸವೇಶನ ಅವತಾರಕ್ಕೆ ಮೊದಲು ಈ ಮತವು ಬಹಳ ಅವನತಿಗೆ ಬಂದಂತೆ ವರ್ಣನೆಯಿದೆಯೇ ಹೊರತು ಬೇರೆಯಿಲ್ಲ. ಮೊದಲು ಇಲ್ಲದ್ದು ಅವನತಿಗೆ ಬರುವುದೆಂತು ಬಸವ ಪುರಾಣಗಳಲ್ಲಿ ವೀರಶೈವ ಮತವನ್ನು ಬಸವೇಶನು ಸ್ಥಾಪಿಸಿದನೆಂದು ಉಲ್ಲೇಖವಿದೆಯೇ?

೯ ಮುದೇನೂರು ದೇವರ ದಾಸಿಮಯ್ಯನು ಬಸವೇಶನಿಗಿಂತಲೂ ೧೫೦ ವರ್ಷ ಹಿರಿಯನೆಂದು ಮಹಾ ಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯರೂ, ರಾವಸಾಹೇಬ ಪಿ. ಜಿ. ಹಳಕಟ್ಟಿ ವಕೀಲರೂ ನಿರ್ಧರಿಸಿದ್ದಾರೆ. ಶ್ರೀಯುತ ಕರ್ಲಮಂಗಲಂರವರು ವಚನಕಾರ ದಾಸಿಮಯ್ಯನು ಬಸವೇಶನಿಗೆ ಸಮಕಾಲೀನನೆಂದು ಸಿದ್ಧಮಾಡಿದ ಮಾತ್ರಕ್ಕೆ ಮುದೇನೂರು ದಾಸಿಮಯ್ಯನಿಗೆ ವೀರಶೈವ ಪದವಿ ಪ್ರಾಪ್ತವಾಯ್ತೇ?

೧೦ ಬಸವಪುರಾಣದಲ್ಲಿ ಉಕ್ತನಾಗಿರುವ ವೇಮನಾರಾಧ್ಯನು ಪರಮ ಮಾಹೇಶ್ವರನೆಂದೂ, ಬಸವೇಶನಿಗಿಂತಲೂ ಮೊದಲೇ ಕಲ್ಯಾಣದಲ್ಲಿ ಆಗಿಹೋದವನೆಂದೂ ತಿಳಿದು ಬರುತ್ತದೆ. ಇದನ್ನು ತಾವು ನಂಬುವಿರಾ?

ಈ ಎಲ್ಲ ಪ್ರಶ್ನೆಗಳಿಗೂ ತಾವು ಆಧಾರಪೂರ್ವಕವಾಗಿ ಉತ್ತರ ಕೊಟ್ಟರೆ ಬಸವೇಶ್ವರನಿಗಿಂತಲೂ ಮೊದಲು ವೀರಶೈವನೊಬ್ಬನೂ ಇರಲಿಲ್ಲವೆಂಬುದು ಸಿದ್ಧವಾದೀತು.

## ಆಂಧ್ರ ದ್ರಾವಿಡ ಕವಿಗಳು.

ಆಂಧ್ರ ಭಾಷೆಯಲ್ಲಿ "ಆಂಧ್ರ ಕುಮಾರ ಸಂಭವ" ವನ್ನು ಬರೆದ ನನ್ನ ಜೋಳನೂ (ಸು. ಕ್ರಿ. ಶ. ೯೦೦ ರಲ್ಲಿದ್ದನೆಂದು ತಿಳಿದು ಬಂದಿದೆ.) ಸರ್ವೇಶ್ವರ ಶತಕವನ್ನು ಬರೆದು ತೆಲುಗಿಗೆ ಆದಿ ಕವಿಯಾದ ಅನ್ನಮಾಚಾರ್ಯನೂ ಪರಮ ವೀರಶೈವರಾಗಿದ್ದರೆಂದೂ ಇವರು ವೀರಶೈವ ಮತೋದ್ಧಾರಕ ಬಸವೇಶನಿಗಿಂತಲೂ ಪೂರ್ವೀಕರೆಂದೂ ನಿಷ್ಪಕ್ಷಪಾತಿಗಳಾದ ವೇ|| ಟಿ. ಎಚ್. ಎಮ್ ಸದಾಶಿವಯ್ಯ ಎಂ. ಎ. ಬಿ. ಎಲ್. ರವರು ಶಿವಾನುಭವದಲ್ಲಿ "ಆಂಧ್ರ ವೀರಶೈವ ಕವಿಗಳು" ಎಂಬ ಲೇಖನದಲ್ಲಿ ಬರೆದಿದ್ದಾರೆ. ಇದನ್ನೇ ಪಂಡಿತೋತ್ತಮರಾದ ವೇ|| ವೀರಭದ್ರ ಶರ್ಮ ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ ಎಂಬುವರೂ ಅಂಗೀಕರಿಸಿದ್ದಾರೆ.

ದ್ರಾವಿಡ ದೇಶದ ಶಿವಪ್ರಕಾಶ ಸ್ವಾಮಿ ಮಾಣಿಕ್ಯವಾಚಿಕರ್ ಕೈನೈನಾರ್ ಮೊದಲಾದ ಕವಿಗಳು ವೀರಶೈವರೆಂದೂ, ಬಸವೇಶ್ವರನಿಗಿಂತಲೂ ಪ್ರಾಚೀನರೆಂದೂ ಮಿ|| ರಾ|| ಹರ್ಡೇಕರ್ ಮಂಜಪ್ಪನವರು "ಶ್ರೀ ಬಸವ ಚರಿತ್ರೆ" ಎಂಬ ಗ್ರಂಥದಲ್ಲಿ ಸಾಧಾರ ನಿರ್ವಿವಾದವಾಗಿ ಸಿದ್ಧಮಾಡಿದ್ದಾರೆ.

ಧಾರವಾಡದ ೧೯೧೮ ನೇ ವೀರಶೈವ ಮಹಾಸಭೆಯ ಕಾಲದಲ್ಲಿ ಪ್ರಸಿದ್ಧ ದ್ರಾವಿಡ ಪಂಡಿತರೂ, ಪರಮ ವೀರಶೈವರೂ, ಮಹಾ ಧೈ ಸ್ವಾಮಿಂಡಿಗ್ ಕಮಿಟಿ ಮೆಂಬರರೂ ಆದ ಪಂಡಿತ ವೀರಸ್ವಾಮಿ ಎಂಬುವರು ಪ್ರಕಟಿಸಿದ ಉಪನ್ಯಾಸದಲ್ಲಿ ಮೇಲಿನ ಕವಿಗಳೆಲ್ಲಾ ಮಹಾ ವೀರಶೈವರೆಂದೂ ಹೇಳಿದ್ದಾರೆ. ಆ ಲೇಖನವು ಆ ಕಾಲದ ಪ್ರಸಿದ್ಧ "ಮೈಸೂರ್ ಸ್ಟಾರ್" ಪತ್ರಿಕೆಯಲ್ಲಿಯೂ ಪ್ರಕಟವಾಗಿದೆ. ಶ್ರೀ ಕುಮಾರರು ಇವರನ್ನೆಲ್ಲಾ ಖಂಡಿಸಲಿಕ್ಕೆ ಸಾಧ್ಯವೇ?

## ಶ್ರೀ ಬಸವೇಶ್ವರರೇ ವೀರಶೈವ ಮತಸ್ಥಾಪಕರೇ?

ಈ ಹಿಂದಿನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳು ಬಂದರೆ ಆಗ ಅವಶ್ಯವಾಗಿ ಶ್ರೀ ಕುಮಾರರ "ಬೃಹದ್ಗರ್ಭ" ದೊಳಗೇ ಆಡಗಿಕೊಂಡುಬಿಡುತ್ತೇನೆ. ನನ್ನ "ಪ್ರಾಚೀನತಾ ಪ್ರೇಮ" ವೂ ಅಂದು ತಾನಾಗಿಯೇ ಬಯಲಾಗುವುದು. ಶ್ರೀ ಬಸವೇಶ್ವರನನ್ನು ಚಾಮರಸ, ಮಾಯಿದೇವ, ಕೆಳದಿಯ ಬಸವರಾಜ ಮೊದಲಾದ ಕವಿಗಳೂ, ಕೆಲವು ವಚನಕಾರರೂ 'ವೀರಶೈವ ಮತಸ್ಥಾಪಕ' ನೆಂದು ಭಕ್ತಿಯಿಂದ ಹೇಳಿರುವುದು ನಿಶ್ಚಯ. ಇದು ಬಸವೇಶನ ಭವತೆಗೂ, ಅವನಿಂದ ವೀರಶೈವ ಮತಕ್ಕಾದ ಮಹೋಪಕಾರಕ್ಕೂ ನಿದರ್ಶನ. ಬಸವೇಶನು ಭಕ್ತಿಭಾಂಡಾರಿಯೆಂದೂ, ದ್ವಿತೀಯ ಶಂಭುವೆಂದೂ ಆ ಮಹಾತ್ಮನನ್ನು ಸಕಲರೂ ಹೊಗಳಿದ್ದಾರೆ. ಬಸವೇಶ್ವರನ ವಿಷಯವಾಗಿರುವಷ್ಟು ಗ್ರಂಥಗಳು ವೀರಶೈವ ವಾಙ್ಮಯ ಪ್ರಪಂಚದಲ್ಲಿ ಇನ್ನು ಯಾವ ವ್ಯಕ್ತಿಯ ವಿಚಾರವಾಗಿಯೂ ಸಿಕ್ಕಲಾರವು. (Basava is the heart of Veerashaivism ) ಎಂಬ ವಾಕ್ಯವು ನಿಜವಾಗಿಯೂ ಅರ್ಥಪೂರ್ಣವಾದುದು. ಮಹಾತ್ಮ ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಸಪ್ತಕಾವ್ಯದ ಗುರುಬಸವ ಕವಿಗಳನ್ನೂ ಕೆಲವು ಕವಿಗಳು 'ವೀರಶೈವ ಮತಸ್ಥಾಪಕ' ರೆಂದು ಹೊಗಳಿದ್ದಾರೆ. ಈ ಆಚಾರ್ಯ ಪದವಿಯು ಗೌರವದಿಂದ ಹೇಳಿದುದು. ನಿಜವಾಗಿಯೂ ಬಸವೇಶ್ವರನು ಮತಸ್ಥಾಪಕನಾಗಿದ್ದರೆ ಅರ್ಜುನವಾಡದ ಶಿಲಾಶಾಸನವಲ್ಲಿ ಉಲ್ಲೇಖವಾಗಲೇ ಬೇಕಾಗಿತ್ತು. ಆ ಶಾಸನವು ಕೇವಲ ಬಸವೇಶ್ವರ ವಂಶೀಯರಿಗೆ ಕೊಡಲ್ಪಟ್ಟಿದ್ದು. ಬಸವೇಶ್ವರನ ವಚನದಲ್ಲಿಯೂ ಮತಸ್ಥಾಪಕನೆಂಬರ್ಥದ ವಚನಗಳಾವೂ ಕಂಡುಬಂದಿಲ್ಲ. ಎಲ್ಲ ಬಸವ ಪುರಾಣಗಳ ಕವಿಗಳೂ ಅಸಂಖ್ಯಾತ ಕವಿಗಳೂ ಅವನನ್ನು ಮತೋದ್ಧಾರಕನೆಂದು ಕರೆದಿರುವರು. ಶ್ರೀ ಮಲ್ಲಿಕಾರ್ಜುನ ಕಲ್ಯಾಣಶೆಟ್ಟಿ ಬಿ. ಎ. ಎಂಬುವರು ಮರಾಠಿ ಭಾಷೆಯಲ್ಲಿ ಬರೆದಿರುವ 'ವೀರಶೈವಾಂಚಿಸ್ಥಿತಿ' ಎಂಬ ಗ್ರಂಥದಲ್ಲಿ ಬಸವೇಶ್ವರನಿಗೆ ಪೂರ್ವ ವೀರಶೈವ ಮತವಿತ್ತೆಂದು ರೈಸ್, ಬ್ರೌನ್ ಮೊದಲಾದ ಪಾಶ್ಚಿಮಾತ್ಯ ಪಂಡಿತರ ಅಭಿಪ್ರಾಯಗಳೊಡನೆ ಬಸವೇಶ್ವರನಿಗೆ ಮೊದಲು ವೀರಶೈವ ಮತವಿತ್ತೆಂದು ಸಿದ್ಧಮಾಡಿರುವ ವಿಚಾರ ಕುಮಾರರಿಗೆ ತಿಳಿಯದಂತಿಲ್ಲ. ಮತ್ತು ವೀರಶೈವ ಮತಕ್ಕಾಗಿ ಬಹಳವಾಗಿ ಶ್ರಮಪಟ್ಟು ಮೈಸೂರು ಕೈ. ಯಜಮಾನ್ ವೀರಸಂಗಪ್ಪನವರು ಕೈ. ಪಿ. ಆರ್ ಕರಿಬಸವ ಶಾಸ್ತ್ರಿಗಳು ಕೈ. ಎನ್. ಆರ್ ಕರಿಬಸವ ಶಾಸ್ತ್ರಿಗಳೇ ಮೊದಲಾದವರು ಬಸವೇಶ್ವರನನ್ನು ಮತೋದ್ಧಾರಕನೆಂದೇ ಅಭಿಪ್ರಾಯಪಟ್ಟಿದ್ದಾರೆ. ಇಷ್ಟಾದರೂ ಕುಮಾರರು ತಮ್ಮ ವಾದವನ್ನೇ ಮುಂದುವರಿಸಿದರೆ ಉಪಾಯವಿಲ್ಲ. ನಮ್ಮ ಅಭಿಪ್ರಾಯಗಳನ್ನೆಲ್ಲಾ ಸಾಧಾರ ಪೂರ್ವಕ ಖಂಡಿಸಿದರೆ ಆಗ ನಾವೂ ಅವರ ಗೋತ್ರಕ್ಕೆ ಸೇರಿಕೊಳ್ಳಬಹುದು.

ಈ ಲೇಖನದಲ್ಲಿ ವ್ಯಕ್ತಿದ್ವೇಷ, ಪಕ್ಷಾಂಧತೆಗಳಿಗೆಡೆಯಿಲ್ಲವೆಂದು ಜಾಣಾಕ್ಷರಾದ ವಿಮರ್ಶಕರು ತಿಳಿಯಬಹುದು. ನನ್ನ ವ್ಯಾಖ್ಯಾನು, ಲೇಖನಗಳು ಜಿಜ್ಞಾಸುತಾ ಬುದ್ಧಿಯಿಂದ ಮುಂದುವರಿದುದು. ನಮಗೆ ಬೇಕಾದುದು ಇತಿಹಾಸದ ಸತ್ಯಂ ಶುಷ್ಕಸನಾತನವಲ್ಲ. ಇತಿಹಾಸಕಾರನ ಕಣ್ಣಿಗೆ ಮಣ್ಣೆರಚಬೇಕೆಂಬ ಸಂಕಲ್ಪ ಎಂದೂ ಇರಲಿಲ್ಲ. ಇಂದೂ ಇಲ್ಲ. "ಬೈದವರೆನ್ನ ಬಂಧುಗಳೆಂಬೆನಯ್ಯ, ಹೊಯ್ದವರೆನ್ನ ಒಡನಾಡಿಗಳೆಂಬೆನಯ್ಯ, ಎನ್ನಂ ಸ್ತೋತ್ರ ಗೈಯ್ಯುವರನು ಹೊನ್ನತೊಲದೊಳಗಿಕ್ಕಿದವರೆಂಬೆನಯ್ಯ ಕೂಡಲ ಸಂಗಮೇಶ್ವರ" ಎಂಬ ಶ್ರೀ ಬಸವೇಶ್ವರನ ಬೋಧೆ ನಮಗೆ ಮಾರ್ಗದರ್ಶಕವಾಗಲಿ.

ಶಿವಂಭೂಯಾತ್.

# ಪ್ಲೇಗ ಸಂಜೀವನಿಯು ಸಂಘ ಸಂಸ್ಥೆಗಳಲ್ಲಿಯೂ ಮಾನ್ಯವಾಗಿದೆ!

ಮ್ಯಾನೇಜರ್, ಪ್ಲೇಗ್ ಸಂಜೀವನಿ
ಆಫೀಸ್ ಇವರಿಗೆ—

ಸವಿನಯ ವಿನಂತಿ.

ಈ ಕೆಳಗೆ ಕಾಣಿಸಿದ ಅಡ್ರೆಸ್ಸಿಗೆ ೫೦ ಪ್ಲೇಗ ಸಂಜೀವಿನಿ ಬಾಟ್ಲಿಗಳನ್ನು ಮತ್ತು ೧ ಕಾಲರಾ ಸಂಜೀವಿನಿ ಬಾಟ್ಲಿಯನ್ನು ವ್ಹಿ. ಪಿ. ಮೂಡಿ ಕಳುಹಿಸಿಕೊಡ ಬೇಕಾಗಿ ವಿನಂತಿ. ಅನುಪಾನ ಪತ್ರಿಕೆ ಇಡಬೇಕು. ಮತ್ತೇನಾದರೂ ತಮ್ಮಲ್ಲಿ ವಿಶೇಷ ಔಷಧಗಳು ಸಿಗುತ್ತಿದ್ದರೆ ತಿಳಿಸ ಬೇಕು. ನಮ್ಮ ಸಂಘಕ್ಕೆ ತಮ್ಮ ಪ್ಲೇಗ ಸಂಜೀವಿನಿಯನ್ನೇ ತರಿಸಿಕೊಳ್ಳುತ್ತೇವೆ.

ಸಿ. ಎಸ್. ಮಠ.
ಸೆಕ್ರೆಟರಿ,
ಕೋ-ಆಪರೇಟಿವ್ ಸೊಸಾಯಿಟಿ,
ಚೊಳಚಗುಡ್ಡ.

ಪ್ಲೇಗ ಸಂಜೀವಿನಿಯನ್ನೇ ತರಿಸಿಕೊಳ್ಳುತ್ತೇವೆ.

ತಾವಾಗಲಿ ಸಂಸ್ಥೆಯಾಗಲಿ ಪ್ಲೇಗ ಸಂಜೀವಿನಿಯನ್ನು ತರಿಸಿಕೊಳ್ಳಿರಿ.

## ಒಮ್ಮೆಯಾದರೂ ತರಿಸಿ- -
## - -ಅದರ ಸತ್ವ ನೋಡಿರಿ!

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಕುಮಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೬ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಗೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಊರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ, ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಸ್ತ್ರಜ್ಞರಿಗೆ ಕಶ್ಯತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೪-೦.

**ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಆಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಪಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಭಾವಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಿರೆಂದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾಃ—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ದೇಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತಬೋಧೆ | ೦-೩-೦ | ಕಶ್ಯಪದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗಾ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೩-೦ | ಶರಣಬಸವೇಶ್ವರರ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ವಿಕಲವೃನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಅದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸಃ- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

## ವಿಚಾರ ಕ್ರಾಂತಿಯನ್ನುಂಟು ಮಾಡುವ ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—

ಕರ್ಪಾಮುಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ ಅತ್ಯವಶ್ಯವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ



## ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.

(ವೈಸೂರು ಸ್ಟೇಟ್)



## ೪,೬೦,೦೦೦ ರೂಪಾಯಿಗಳ ವಿಮೆ!

ಸಪ್ಟಂಬರ್ ಒಂದೇ ತಿಂಗಳಲ್ಲಿ

# ೧,೪೦,೦೦೦ ಬೆಲೆಯ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವವಿಮೆಗಳು ಬಡವರಿಗೂ ಬಲ್ಲಿದರಿಗೂ— — — —ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ವಿಮೆಯ ಬೆಳವಣಿಗೆಯು ಕೆಳಗಿನಂತಿದೆ.

೧೯೩೪ ನೇಯ ಜನವರಿ ೧ ನೇಯ ತಾರೀಖಿನಿಂದ ಜೂನ್ ೩೦ ನೇಯ ವರೆಗೆ ೧೫೬೫೦೦

" ಜುಲಾಯಿ " ಸಪ್ಟೆಂಬರ್ ೩೦ನೇಯ ವರೆಗೆ ೩೨೯೦೦೦

ಅಂತು ರೂಪಾಯಿ ೪೮೬೫೦೦

ಕರ್ನಾಟಕದಲ್ಲಿ ಈ ಮಾದರಿಯ ವಿಮೆ ಕಂಪನಿಯು ಇದೊಂದೇ ಆಗಿರುವುದರಿಂದಲೂ ಉದ್ಯೋಗ ಧಂದೆಗಳನ್ನು ಬೆಳಸಲಿಚ್ಛೈಯನ್ನಿಟ್ಟುಕೊಂಡಿರುವದರಿಂದಲೂ ಕರ್ನಾಟಕಸ್ಥರಾದ ಪ್ರತಿಯೊಬ್ಬರೂ ಮುಂದುವರಿದು ಅಭಿಮಾನದಿಂದ ಈ ಕಂಪನಿಯ ಪಾಲಿಸಿಗಳನ್ನು ತೆಗೆದುಕೊಳ್ಳುವರೆಂದು ನಂಬಿದ್ದೇವೆ. ಪ್ರತಿಯೊಂದು ವಿಮೆಯಲ್ಲಿಯೂ ಪ್ರವೇಶ ಧನ ರೂಪಾಯಿ ೫, ತಿಂಗಳ ಕಂತ ರೂಪಾಯಿ ೧, ವಾರ್ಷಿಕ ಚಂದಾ ರೂಪಾಯಿ ೧.

ಈ ಕಂಪನಿಯಲ್ಲಿ ಕೆಲಸಮಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನಾಯಜರರು, ಪೆಗಾರ ಆಥವಾ ಕವಿಶನ್ ತೆಗೆದುಕೊಂಡು ಕೆಲಸ ನಾಡಲುಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ

ಮ್ಯಾನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂ. ಲಿ. ಧಾರವಾಡ.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ..... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೫೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಾಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ವಿಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ, ಎಂ. ಎಸ್‌ಸಿ., ಪಿಎಚ್. ಡಿ.** ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಸೈಪಾರ್ಡ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹೆಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿಸ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ ಎಂ. ಎಸ್‌ಸಿ., ಪಿಎಚ್. ಡಿ.** ಇವರಿಂದ ತಯಾರಿಸಲ್ಪಟ್ಟ

**" ಕಚ್ಯೆ "**

ಕ್ರಿಮಿನಾಶಕ ದಂತವಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮೌಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

**ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?**

ಕಣ್ಣಿಗೆ ಚಂದ, ಧಳಧಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟೆ.

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ' ನೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧೫೯ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
**ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.**



ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

| | | |
|---|---|---|
| ನೀಲೀ ಮಶಿಜೀಟು— | ೪ | ರೂಪಾಯಿ |
| ಭಾಸ್ಕರ ಪ್ರಕಾಶ— | ೧೧ | ,, |
| ಗುಂಗಾಡ ನಾಶಕ— | ೧೧ | ,, |
| ಚೇಳಿನ ನಾಶ— | ೧೧ | ,, |
| ೧೨ ತರಣಿ ಕತ್ತು ಬಾಟ್ಲಿ— | ೭ | ,, |

೧೦೦ ಚೀಟುಗಳಾವರೂ ವ್ಹಿ. ಪಿ. ಯಿಂದ ಕಳಸುವೆವು

**ಭಾಸ್ಕರ ಪ್ರಕಾಶ ವರ್ಕ್ಸ್.**
**ಪೋ. ಹಂಚಲಿ.**
**ತಾ. ರಾಯಬಾಗ.**



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೀಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

# ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ನವ್ಹಂಬರ್ ತಾರೀಖು ೨೬ ನೆಯ ಸೋಮವಾರ | ಸಂಚಿಕೆ ೧೪.


## ತಿರುಳಿಲ್ಲದ ವರದಿ ಹೊರಬಿದ್ದಿತು.

ಹಿಂದುಸ್ಥಾನಕ್ಕೆ ಮುಂದೆ ಕೊಡಬಹುದಾದ ರಾಜಕೀಯ ಸುಧಾರಣೆಯನ್ನೊಳಕೊಂಡ ಜಾಯಿಂಟ್ ಪಾರ್ಲಮೆಂಟರಿ ಕಮಿಟಿಯ ವರದಿಯು ಕಳೆದ ೨೨ ನೆಯ ತಾರೀಖಿನ ದಿನ ಇಂಗ್ಲೆಂಡ ಮತ್ತು ಹಿಂದುಸ್ಥಾನಗಳಲ್ಲಿ ಪ್ರಕಟವಾಯಿತು. ಇದರಲ್ಲಿ ಸ್ವರಾಜ್ಯದ ತಿರುಳೇ ಇಲ್ಲ; ಬರೀ ಚಿಪ್ಪು. ಎಂದೇ ರಾಜಕಾರಣ ಪ್ರವೀಣರೆಲ್ಲಾ ಏಕಕಂಠವಾಗಿ ಸಾರುತ್ತಿದ್ದಾರೆ.

### ಪೊರಗಿನ ಕಥೆ

ಹಿಂದುಸ್ಥಾನಕ್ಕೆ ಸ್ವರಾಜ್ಯಕೊಡುವ ಯೋಚನೆಗಾಗಿ ಮೊದಲು ಸಾಯಮನ್ ಕಮಿಶನ್ ನೇಮಕವಾಗಿ ಅದು ಇಲ್ಲಿಗೆ ಬಂದು ಹೋಯಿತು. ಅನೇಲೆ ಅದರ ತಿದ್ದುಪಡೆಗಾಗಿ ಮಂಡಲಾಕಾರ ಪರಿಷತ್ತಿನ ಮೂರು ಅಧಿವೇಶನಗಳು ಸೇರಿದವು. ಅವುಗಳ ಫಲಾಂಶವೇ ಶ್ವೇತಪತ್ರಿಕೆ. ಅದರ ವಿಮರ್ಶೆಗಾಗಿ ಅನಂತರ ಈ ಜಾಯಿಂಟ್ ಪಾರ್ಲಮೆಂಟರಿ ಕಮಿಟಿ ನೇಮಕ ಮಾಡಿತು. ಅದು ಪ್ರಕಟಿಸಿದ ಈ ವರದಿಯಾದರೋ ಸ್ವರಾಜ್ಯದ ತಿರುಳಿಲ್ಲದ ಕರಟ!

ಈ ಕಮಿಟಿಯಲ್ಲಿ ೧೬ ಲಾರ್ಡ್ ಪದವಿಧರರು ೧೨ ಇತರ ಸಭಾಸದರು ಇದ್ದರು. ಲಾರ್ಡ್ ರೀಡಿಂಗ್, ಹಾರ್ಡಿಂಜ್, ಆಯರ್ವಿನ್ ಎಂಬ ಮೂರು ಜನ ವ್ಹಾಯಿಸ್‌ರಾಯರು ಇಬ್ಬರು ಗವ್ಹರ್ನರರು ಇಂದಿನ ಇಬ್ಬರು ಭಾರತಮಂತ್ರಿಗಳು ಈ ಕಮಿಟಿಯಲ್ಲಿದ್ದ ಅನುಭವಿಕರು

ಈ ಕಮಿಟಿಯ ಮೊದಲನೆಯ ಕೂಟವು ೧೯೩೩ ನೆಯ ನವ್ಹಂಬರ್ ೨೯ ನೆಯ ತಾರೀಖಿನಲ್ಲಿ ಸೇರಿದ್ದಿತು. ಈ ಒಂದು ವರ್ಷದಲ್ಲಿ ೧೫೯ ಸಾರಿ ಈ ಕಮಿಟಿಯು ಕೂಡಿದ್ದಿತು. ಈ ಕಮಿಟಿಯವರು ೧೨೦ ಜನ ಸಾಕ್ಷಿದಾರರ ಹೇಳಿಕೆ ಕೇಳಿದರು. ಭಾರತ ಮಂತ್ರಿಗಳ ಸಾಕ್ಷಿ ೧೯ ದಿನ ಜರುಗಿ ೬ ಸಾವಿರ ಪ್ರಶ್ನೆಗಳಿಗೆ ಅವರು ಉತ್ತರ ಕೊಟ್ಟರು. ಈ ಎಲ್ಲ ಸಂಗತಿಗಳನ್ನು ಕೂಡಿಕೊಂಡ ಈ ವರದಿಯು ೩೪೧ ಪುಟಗಳುಳ್ಳದ್ದಾಗಿದೆ.

### ಒಳಗಿರುವುದೇನು?

ಈ ವರದಿಯ ಹೊರಗಿನ ಆಡಂಬರವೇ ಹೆಚ್ಚು. ಗುಡ್ಡ ಬಗೆದು ಇಲಿ ತೆಗೆದಂತೆ. ಶ್ವೇತಪತ್ರಿಕೆಯ ವಿಮರ್ಶನೆಗಾಗಿ ಅವತರಿಸಿದ ಈ ನೀಲಿ ಹೊತ್ತಿಗೆಯು ಮೊದಲಿದ್ದ ಅಲ್ಪಸ್ವಲ್ಪವನ್ನೂ ಸೆಳೆದು ಕೊಂಡುಹೋಗಿದೆ. ಕೇಸರೀ ಪತ್ರಿಕಾಕರ್ತರು ಹೀಗೆ ಹೇಳುತ್ತಾರೆ- ಶ್ವೇತಪತ್ರಿಕೆಯು ಒಂದು ಲಂಗೋಟಿಯನ್ನಾದರೂ ಇಟ್ಟಿತ್ತು. ಈ ಕಮಿಟಿಯು ಅದನ್ನೂ ಕಿತ್ತುಕೊಂಡಿತು!

ಶ್ವೇತಪತ್ರಿಕೆಯ ಅಲ್ಲಲ್ಲಿದ್ದ ಅಲ್ಪಸ್ವಲ್ಪ ಸೌಲಭ್ಯಗಳನ್ನು ಕೂಡಾ ಈ ಜಾಯಿಂಟ್ ಕಮಿಟಿಯು ತೆಗೆದುಹಾಕಿ ಎಲ್ಲವನ್ನೂ ಸರಿಯಾಗಿ ಕೂಡಿಸಿ ಭಾರತೀಯ ಪ್ರಜಾಪ್ರಭುತ್ವಕ್ಕೆ ಎಲ್ಲಿಯೂ ಅವಕಾಶವಿಲ್ಲದಂತೆ ಭದ್ರಗೊಳಿಸಿದೆ. ಅದಕ್ಕಾಗಿ ಇದಕ್ಕೆ ಜಾಯಿಂಟ್ ಕಮಿಟಿಯೆಂಬ ಹೆಸರು ಸಾರ್ಥಕವಾದುದೇ ಸರಿ.

ಜಾತಿನಿರ್ಣಯವನ್ನು ಭದ್ರಗೊಳಿಸಿ ಒಡಕಿನಿಂದ ಒಡೆತನ ನಡೆಯಿಸಲು ಅನುಕೂಲವಾಡಿಕೊಟ್ಟಿದೆ. ಮುಂಬೈ ಮದ್ರಾಸ ಪ್ರಾಂತಗಳಲ್ಲಿ ಕೂಡಾ ಎರಡು ಸಭೆಗಳನ್ನು ಏರ್ಪಡಿಸಿ ಪ್ರಾಂತಿಕ ಪ್ರಜಾಪ್ರಭುತ್ವಕ್ಕೆ ಅವಕಾಶವಿಲ್ಲದಂತೆ ಮಾಡಿದೆ. ಅಸೆಂಬ್ಲಿಯ ಚುನಾವಣೆಗೆ ಈಗಿನಂತೆ ಕೂಡಾ ಜನಮತ ಸೇರಲು ಅವಕಾಶವಿಲ್ಲದಂತೆ ಮಾಡಿ ಪ್ರಾಂತಿಕ ಕೌನ್ಸಿಲ್ ಸಭಾಸದರೇ ಆರಿಸುವಂತೆ ಮಾಡಿದೆ.

ಬ್ರಿಟಿಶ್ ವ್ಯಾಪಾರಾದಿಗಳ ವಿಷಯದಲ್ಲಂತೂ ಬಹು ದಕ್ಷತೆಯನ್ನು ವಹಿಸಿ ಸರ್ವ ಸಂರಕ್ಷಣಾಧಿಕಾರವನ್ನು ಗವ್ಹರ್ನರ್ ಮತ್ತು ವ್ಹಾಯಿಸ್‌ರಾಯರ ಕೈಯಲ್ಲಿ ಕೊಟ್ಟಿದೆ. ಶ್ವೇತಪತ್ರಿಕೆಯಾದರೂ ಇರಲಿ, ಈ ವರದಿ ಬೇಡವೆಂದು ನಾ. ಆಗಾಖಾನರು ಸಹ ಹೇಳುವಷ್ಟು ಈ ವರದಿಯಲ್ಲಿ ಸ್ವರಾಜ್ಯದ ತಿರುಳಿದೆ!

### ಹೆತ್ತವರಿಗೆ ಹೆಗ್ಗಣ ಮುದ್ದು!

ಈ ವರದಿ ಹೀಗಿದ್ದರೂ ಇದನ್ನು ಬಹು ಕಷ್ಟಪಟ್ಟು ಸಿದ್ಧಗೊಳಿಸಿದವರು ಇದು ಹಿಂದುಸ್ಥಾನಕ್ಕೂ ಬ್ರಿಟಿಶ್ ಸಾಮ್ರಾಜ್ಯಕ್ಕೂ ಬಹು ಹಿತವಾದುವುದೆಂದೇ ಇದನ್ನು ಕೊಂಡಾಡಿದ್ದಾರೆ. ಈ ದೇಶದಲ್ಲಿಯೂ ಅವರ ಸ್ವರಕ್ಕೆ ದನಿಗೂಡಿಸುವವರು ಇದ್ದೇ ಇದ್ದಾರೆ. ನಮಗೆ ದೊರೆತಷ್ಟೇ ಲಾಭ. ಬಂದದ್ದನ್ನು ಬಗಲಲ್ಲಿ ಹಾಕಿಕೊಳ್ಳೋಣವೆಂಬುವವರೂ ಇದ್ದಾರೆ. ಇವರೆಲ್ಲರ ಸಹಾಯದಿಂದ ಆಳರಸರು ಭಾರತೀಯರ ಕೈಯಲ್ಲಿ ತಿರುಳಿಲ್ಲದ ಈ ಸುಧಾರಣೆಯ ಚಿಪ್ಪನ್ನು ಕೊಟ್ಟೇಕೊಡುವರು.

ಏಕೆ? ನಮ್ಮಲ್ಲಿ ಮತ್ಸರಿಕ್ಯವಿಲ್ಲ. ಎಲ್ಲರೂ ಎಸದು ಬಿಡುವುದಿಲ್ಲ. ಕೆಲವರು ಕೈಯೊಡ್ಡಿ ಗೋಡೆನಿಂದ ಬೇಡೆಂದು ಹೇಳುವರು.

# ಶ್ರೀಯುತ ಪಂಡಿತ ಶಿವಮೂರ್ತಿಶಾಸ್ತ್ರಿಗಳ ಶರಣಸಂದೇಶದಲ್ಲಿನ ಲೇಖನದ ಮೇಲೆ ವಿಚಾರ.

[ ಲೇಖಕ—ಜೀರಗೆ ಬಸವಲಿಂಗಪ್ಪ ]

(ಲೇಖಾಂಕ—೨)

ವೀರಶೈವದಲ್ಲಿ ಆರ್ಯಸಂಸ್ಕೃತಿ ಇಲ್ಲವೇ ಎಂದು ಕೇಳಿರುತ್ತಾರೆ. ಈಗಿನ ಹಿಂದುಗಳಲ್ಲಿ ಆರ್ಯ ಸಂಸ್ಕೃತಿಯ ಅತ್ಯಲ್ಪವೆನವೂ, ದ್ರಾವಿಡ ಸಂಸ್ಕೃತಿಯು ಅತ್ಯಧಿಕವೂ ಇರುತ್ತದೆ. ಆರ್ಯರು ವೇದಗಳ ಕಾಲದಲ್ಲಿ ಆಕಾಶದಲ್ಲಿನ ವರುಣ, ಉಷಸ್ಸು, ಸೂರ್ಯ, ಮಿತ್ರ, ಇಂದ್ರ, ರುದ್ರ ಮೊದಲಾದವುಗಳನ್ನು ಪೂಜಿಸುತ್ತಿದ್ದರು. ಆರ್ಯರು ಉತ್ತರ ಧ್ರುವಪ್ರದೇಶದಿಂದ ಭರತಖಂಡದ ಉತ್ತರ ಭಾಗಕ್ಕೆ ಬಂದಾಗ ಭರತಖಂಡವೆಲ್ಲಾ ದ್ರಾವಿಡಮಯವಾಗಿತ್ತು. ಆಗ್ಗೆ ದ್ರಾವಿಡರು ರೂಪಿನಲ್ಲಿ ಕುಳ್ಳರೂ, ಕಪ್ಪು ವರ್ಣವುಳ್ಳವರೂ ದಪ್ಪ ಮೂಗಿನವರೂ ಆಗಿದ್ದರು. ಅವರು ಸ್ವತಂತ್ರ ಭಾಷೆಯುಳ್ಳವರಾಗಿದ್ದರು. ಅವರು ತಕ್ಕಮಟ್ಟಿಗೆ ನಾಗರಿಕತೆಯುಳ್ಳವರಾಗಿದ್ದರೆಂದು ಪೌರ್ವಾತ್ಯ ಮತ್ತು ಪಾಶ್ಚಾತ್ಯ ಪಂಡಿತರು ಭಾಷಾ ಶಾಸ್ತ್ರದಿಂದ ಕಂಡು ಹಿಡಿದಿರುತ್ತಾರೆ. ದ್ರಾವಿಡರು ಆರ್ಯರಂತೆ ಆಕಾಶದಲ್ಲಿನ ವರುಣ, ಇಂದ್ರ ಮೊದಲಾದವುಗಳನ್ನು ಪೂಜಿಮಾಡುತ್ತಿರಲಿಲ್ಲ. ಅವರು ಉಷ್ಣವಲಯದಲ್ಲಿದ್ದವರಾದರಿಂದ ಅವರಿಗೆ ಆಕಾಶದಲ್ಲಿ ಅದ್ಭುತಗಳು ತೋರದೆ ಭೂಮಿಯಲ್ಲೇ ವಿಶೇಷಗಳು ತೋರಿ ವೃಕ್ಷಗಳನ್ನು, ಕಲ್ಲುಗಳನ್ನು, ನಾಗರಹಾವುಗಳನ್ನು, ಅಮ್ಮಗಳನ್ನು ಪೂಜೆಮಾಡವವರಾಗಿದ್ದರು. ದ್ರಾವಿಡರಲ್ಲಿ ಕಲ್ಲುದೇವರನ್ನು ಕಟ್ಟಡದೊಳಗೆ ಪೂಜೆಮಾಡುತ್ತಿದ್ದರು. ಇದಕ್ಕೆ ದ್ರಾವಿಡ ಭಾಷೆಯಲ್ಲಿ ಕೋಯಿತ್ ಎಂದು ಹೆಸರು. ಭಾರತ ದೇಶದಲ್ಲಿ ದೇವಸ್ಥಾನಗಳಲ್ಲಿನ ಲಿಂಗಪೂಜೆ, ವಿಷ್ಣುಪೂಜೆ ಮೊದಲಾದವುಗಳೆಲ್ಲವೂ ದ್ರಾವಿಡರಿಂದ ಮಾರ್ಪಾಟಾಗಿ ಬಂದವುಗಳಾಗಿರುತ್ತವೆ. ಆರ್ಯರ ವೇದದಲ್ಲಿ ದೇವಸ್ಥಾನದ ವಿಚಾರವೇ ಇಲ್ಲ. ಈಗ್ಗೆ ಭರತಖಂಡದಲ್ಲಿನ ಹಿಂದೂಗಳ ಆಚರಣೆ ಎಲ್ಲವೂ ದ್ರಾವಿಡ ಸಂಪ್ರದಾಯಗಳೇ ಆಗಿರುತ್ತವೆಯೇ ಹೊರತು, ಆರ್ಯರ ವೇದಕಾಲದಲ್ಲಿನ ಆಚರಣೆ ಅತ್ಯಲ್ಪ. ಈ ಮಾತನ್ನು ಎಲ್ಲಾ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಪಂಡಿತರು ಹೇಳುತ್ತಾರೆ. ಪ್ರತ್ಯಕ್ಷ ಪ್ರಮಾಣದಿಂದ ಎಲ್ಲರಿಗೂ ತೋರತಕ್ಕದ್ದಾಗಿದೆ. ವೀರಶೈವರ ಬಹುಭಾಗದ ಆಚರಣೆಯು ಆರ್ಯರ ಮತ್ತು ದ್ರಾವಿಡರ ಆಚರಣೆಯನ್ನು ಮೀರಿ ಬಂದುದಾಗಿರುತ್ತದೆಂದು ಬಸವೇಶ್ವರನ ತತ್ವಗಳಿಂದ ತಿಳಿಯಬಹುದು. ಬಸವೇಶ್ವರನು ಆರ್ಯರ ಹಲವು ದೇವರುಗಳ ಪೂಜೆಯನ್ನು ನಿರಾಕರಿಸಿರುತ್ತಾನೆ. ದ್ರಾವಿಡರ ವಿವಿಧ ಪೂಜೆಯನ್ನು ನಿರಾಕರಿಸಿರುತ್ತಾನೆ. ಆರ್ಯರ ವೇದದ ಪಶುಹಿಂಸಾತ್ಮಕ ಯಜ್ಞವನ್ನೂ ನಿರಾಕರಿಸಿರುತ್ತಾನೆ. ದ್ರಾವಿಡರ ಪ್ರಾಣಿಕೊಲೆಯ ಅಮ್ಮನ ಪೂಜೆಯನ್ನೂ ನಿರಾಕರಿಸಿರುತ್ತಾನೆ. ಬಸವೇಶ್ವರನ ಧಾರಣ ಲಿಂಗಪೂಜೆಯು ನಿರ್ಗುಣಪರ ವಸ್ತುವಿನ ಪೂಜಾಕ್ರಮವಾಗಿರುತ್ತದೆಂದು ಬಸವಾದಿ ಪ್ರಮಥರ ಆರು ಸ್ಥಲಗಳ ಸಿದ್ಧಿಧ್ಯಾಸನದಿಂದ ತಿಳಿಯಬಹುದಾಗಿದೆ. ಲಿಂಗಧಾರಣವು ಶೈವರ ಸ್ಥಾವರ ಲಿಂಗಪೂಜೆಯಿಂದ ಉಗಮವಾಗಿರುವುದರಿಂದಲೂ, ಆ ಸ್ಥಾವರ ಲಿಂಗಪೂಜೆಯು ದ್ರಾವಿಡರ ಸಂಪ್ರದಾಯದಿಂದ ಬಂದುದಾಗಿರುವದರಿಂದಲೂ, ಆ ಸ್ಥಾವರ ಲಿಂಗಪೂಜೆಯು ವೇದದಲ್ಲಿಲ್ಲವಾದುದರಿಂದಲೂ ವೀರಶೈವರ ಲಿಂಗಧಾರಣವು ದ್ರಾವಿಡ ಸಂಬಂಧವಾಯಿತೆಂದು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ನಂದೀಶ್ವರ ಶಿವಯೋಗಿಯು ತನ್ನ ಲಿಂಗಧಾರಣ ಚಂದ್ರಿಕೆಯಲ್ಲಿ ಲಿಂಗಧಾರಣ ವಿಚಾರಕ್ಕೆ ವೇದದಲ್ಲಿನ " ಅತಪ್ಯತನುರ್ನತ ದಾಮೋಶ್ನುತೇ" ಎಂಬುದನ್ನು ಲಿಂಗಧಾರಣ ಪರವಾಗಿ ಅರ್ಥಮಾಡಿರುತ್ತಾನಲ್ಲಾ ಎಂದರೆ, ಅರ್ಥಮಾಡಿರುತ್ತಾನೆಂದು ಹೇಳಬಹುದೇ ಹೊರತು, ವೇದದಲ್ಲಿ ಮೂಲಶಬ್ದವಿದೆಯೆಂದು ಹೇಳುವದಕ್ಕಾಗುತ್ತದೆಯೇ? ಬೇರೆ ಬೇರೆ ನಮನವಗೆ ಬೇಕಾದ ಹಾಗೆ ಅರ್ಥಮಾಡಿ ನಮ್ಮ ವೀರಶೈವಮತವು ವೇದಮತವೆಂದು ನಮ್ಮಸ್ವಕ್ಕೆ ನಾವೇ ಹಿಗ್ಗುವದಕ್ಕಾಗುತ್ತದೆಯೇ? ವೇದದ ಕೊನೆಯಲ್ಲಿ ದೇವರೊಬ್ಬನು, ದೇವರು ಸರ್ವಾಂತರ್ಯಾವಿ. ಎಂದು ಕೊನೆ ತೀರ್ಮಾನಕ್ಕೆ ಬಂದಿರುವದನ್ನು ಮಾತ್ರ ಬಸವೇಶ್ವರನು ತನ್ನ ಅಭಿಪ್ರಾಯಕ್ಕೆ ಸರಿಯಾಗಿದೆ ಎಂದು ಹೇಳಿದ ಮಾತ್ರಕ್ಕೆ ವೇದವೆಲ್ಲವೂ ನಮ್ಮ ವೀರಶೈವಕ್ಕೆ ಆಧಾರವಾಗಿದೆ ಎಂದು ನಾವು ಹೇಳಬಹುದೆ? ವೇದದ ಬಹುಭಾಗವನ್ನು ನಮ್ಮ ಬಸವಣ್ಣನು ನುಚ್ಚುನೂರಾಗಿ ಖಂಡಿಸಿರುತ್ತಾನೆ. ಬಸವದೇವನು ವೇದವನ್ನು ಕುರಿತು—" ವೇದವು ಹೋತಂಗೆ ಮಾರಿ" ಎಂತಲೂ, "ವೇದವನೋದಿದವರ ಮುಂದೆ ಅಸುಕಂಡೆಯೊ ಹೋತೆ" ಎಂತಲೂ " ವೇದವು ಪ್ರಾಣ್ಣಿವಧೆಯ ಹೇಳುತಿಪ್ಪುದು " ಎಂತಲೂ ಕೊಲಾಹಲವಾಗಿ ಉಸುರಿರುತ್ತಾನೆ. ಆದದರಿಂದ ವೀರಶೈವವು ಕೇವಲ ಆರ್ಯಸಂಸ್ಕೃತಿಯುಳ್ಳದ್ದೆಂದು ಹೇಳುವದಕ್ಕಾಗುವದಿಲ್ಲ. ವೇದದಲ್ಲಿನ ಯಜ್ಞವನ್ನು ನಿರಾಕರಿಸಿದಂತೆಯೇ, ವೇದದಲ್ಲಿನ ಬ್ರಾಹ್ಮಣ್ಯವನ್ನು ನಿರಾಕರಿಸಿರುತ್ತಾನೆ. ವೇದದಲ್ಲಿನ ವರ್ಣಭೇದವನ್ನು ನಿರಾಕರಿಸಿರುತ್ತಾನೆ.

ಬಸವಣ್ಣನು " ವರ್ಣಾನಾಂ ಬ್ರಾಹ್ಮಣೋಗುರು ಎಂಬುದು ಪುಸಿ, ವರ್ಣಾನಾಂ ಗುರು ನಮ್ಮ ಕೂಡಲ ಸಂಗನ ಶರಣರು ' ಎಂದು ಬ್ರಾಹ್ಮಣ್ಯವನ್ನು ತಿರಸ್ಕರಿಸಿರುತ್ತಾನೆ. ವೇದದಲ್ಲಿ ಯಜ್ಞ ಪೂರ್ವಕವಾಗಿ ಎತ್ತು, ಮೇಕೆ ಮೊದಲಾದವುಗಳನ್ನು ಹತಿಸಿ ಸೇವಿಸುತ್ತಿದ್ದ ವಿಚಾರವು ಹೇಳಿರುತ್ತದೆ. ಸೋಮಪಾನವೆಂಬ ಮದ್ಯಸೇವನೆಯು ಹೇಳಿರುತ್ತದೆ. ಮಾಂಸಾಹಾರ, ಮದ್ಯಪಾನ ವಿಚಾರಗಳಲ್ಲಿ ಬಸವಸ್ವಾಮಿಯು ಅತ್ಯಂತ ತಿರಸ್ಕಾರ ವಾಕ್ಯಗಳನ್ನು ಆಡಿರುತ್ತಾನೆ. ಬಸವಣ್ಣನು ಲಿಂಗಧಾರಣೆಯ ವಿಚಾರದಲ್ಲಿ ಹೀಗೆ ಹೇಳಿರುತ್ತಾನೆ—

" ಅಂಗದಿಚ್ಛೆಗೆ ಮದ್ಯಮಾಂಸಗಳ ತಿನ್ನುವರು. ಕಂಗಳಿಚ್ಛೆಗೆ ಪರವಧುವನೆರಗುವರು, ಲಿಂಗಲಾಂಛನಧರಿಯಾದಲ್ಲಿ ಫಲವೇನು? ಈ ಕಾರಣದಿಂದ ಬಸವೇಶ್ವರನು ವೇದದಲ್ಲಿನ ಸಾರ ಭಾಗವನ್ನೆಲ್ಲಾ ನಿರಾಕರಿಸಿರುತ್ತಾನೆ. ಆದದರಿಂದ ವೇದದಲ್ಲಿನ ಆರ್ಯಸಂಸ್ಕೃತಿಯು ವೇದದ ಕೊನೆಯ ಏಕ ದೇವತಾರಾಧನೆಯ ಮಟ್ಟಿಗೆ ವೀರಶೈವರಲ್ಲಿದೆಯೆಂದ ಹೇಳಬಹುದೇ ಹೊರತು ವೇದದ ಬಹುಭಾಗದ ಆರ್ಯಸಂಸ್ಕೃತಿಯು ವೀರಶೈವರಲ್ಲಿರುವದಿಲ್ಲ ಮೇಲೆ ಹೇಳಿದಂತೆ ಲಿಂಗಧಾರಣ ಶೈವದವರ ಲಿಂಗಪೂಜೆಯಿಂದ ಉಗಮವಾಗಿರುವದರಿಂದ ಅಷ್ಟರ ಮಟ್ಟಿಗೆ ವೀರಶೈವದಲ್ಲಿ ದ್ರಾವಿಡ ಸಂಸ್ಕೃತಿಯು ಇರುವದೆಂದು ತಿಳಿಯಬಹುದು. " ಬಸವಣ್ಣನ ಆನೇಕ ಮಾರ್ಪಾಟುಗಳು ಅಂದರೆ ಪಟ್ಟಸ್ಥಲ, ಪಂಚಸೂತಕ ನಿರಾಕರಣವು, ಉದ್ಯೋಗ ಸಮಾನತೆ, ಅಸ್ಪೃಶ್ಯತಾ ನಿರಾಕರಣ, ವರ್ಣಭೇದ ನಿರಾಕರಣ ಇವುಗಳೆಲ್ಲವು ಬಸವೇಶ್ವರನ ಸ್ವಂತದವುಗಳಾದದರಿಂದ ಇವು ಯಾವವೂ ಯಾವ ಸಂಸ್ಕೃತಿಗೂ ಸೇರಿದವೆಂದು ಹೇಳುವದಕ್ಕಾಗುವದಿಲ್ಲ. ಬಸವೇಶ್ವರನು ನೂತನ ಮಾರ್ಗಸ್ಥಾಪಕನು. ಬಸವೇಶ್ವರನು ಹಿಂದಣ ಶೈವದಲ್ಲಿನ ಕೆಲವು ತಗಳನ್ನು ನಡಿಸಿಕೊಂಡು ಬಂದುದರಿಂದ ಬಸವೇಶ್ವರನು ಶೈವಮತೋದ್ಧಾರಕನೆನಿಸಿರುತ್ತಾನೆ ಲಿಂಗಧಾರಣ ಕುರಿತು ನೀವಿಷ್ಟು

# ವೀರಶೈವ ಗುರು, ಜಂಗಮ ಪೀಠಗಳಿಗೆ ನೇಮಿಸುವ ಅಧಿಕಾರಿಗಳ ವಿಚಾರ.

ಈಗ ಸದ್ಯಃ ವೀರಶೈವ ಸಮಾಜದಲ್ಲಿ ಧರ್ಮಪೀಠಗಳಿಗೆ ಅಧಿಕಾರಿಗಳನ್ನು ನೇಮಿಸುತ್ತಿರುವುದು ಸರಿಯೇ? ಈ ರೀತಿಯಾಗಿ ನೇಮಿಸುವುದರಿಂದ ಸಮಾಜಕ್ಕೆ ಕಲ್ಯಾಣವಿದೆಯೇ? ಕೆಲವು ಜಂಗಮಪೀಠಗಳಿಂದಲೇನೋ ಸಮಾಜಕ್ಕೆ ಉಪಕಾರವಾಗಿದೆ ಆದರೆ ಗುರುಪೀಠಗಳಿಂದ ಸಮಾಜಕ್ಕೆ ಆಗಿರುವ ಉಪಕಾರವೇನು? ಇಂಥವರನ್ನು ನೇಮಿಸುವದರಿಂದ ಫಲವೇನು? ಸಾಹಿತ್ಯ ತೀರ್ಥವಾದ ಕೂಡಲೇ ಗುರುಪೀಠಗಳಿಗೆ ಯೋಗ್ಯ ಪಟ್ಟಗಳಾದಂತಾಯಿತೆ? ಇಲ್ಲ. ವ್ಯಾಕರಣ ತೀರ್ಥವಾದರೆ ಸಮಾಜ ಉದ್ಧಾರವಾದಂತಾಯಿತೇ? ಕಾವ್ಯತೀರ್ಥವಾದರೆ ಅದಂತಾಯಿತೆ? ಸ್ಮೃತಿತೀರ್ಥವಾದರೆ ವೀರಶೈವ ಮತತತ್ವವನ್ನು ತಿಳಿದಂತಾಯಿತೆ? ವೇದಾಂತ ಮುಂತಾದನೇಕ ತೀರ್ಥಗಳನ್ನು ಮಾಡಿದವರಿಗೆ ಯೋಗ್ಯ ಪಟ್ಟಗಳಾದಂತಾಯಿತೆ? ಈ ಎಲ್ಲ ತೀರ್ಥಗಳು ವೀರಶೈವ ಧರ್ಮದ ತತ್ವಗಳನ್ನು ತಿಳಿಯಲು ಸಹಕಾರಿಗಳೇ ಹೊರತು ತತ್ವಗಳನ್ನು ತಿಳಿದಂತಾಗಲಿಲ್ಲ. ವೀರಶೈವ ಧರ್ಮತತ್ವಗಳನ್ನು ತಿಳಿಯಬೇಕಾದರೆ ಶಿವಶರಣರ "ವಚನ" ಶಾಸ್ತ್ರ ತೀರ್ಥರಾಗಲೇಬೇಕು. ಅದರ ಜೊತೆಗೆ ಶಿವಾನುಭವ ತೀರ್ಥವೂ ಇದ್ದು ಈ ಎಲ್ಲ ತೀರ್ಥಗಳ ಅನುಭವನನ್ನು ತಾವು ನಡವಳಿಕೆಯಲ್ಲಿಟ್ಟು ಅದರಂತೆ ನಡೆಯುವವರಾಗಿ ಸಮಾಜೋದ್ಧಾರ ಕಾರ್ಯಗಳಲ್ಲಿ ವಿನಿಯೋಗಿಸಿದಾಗಲೇ ಪೀಠಗಳಿಗೆ ಯೋಗ್ಯ ಪಟ್ಟಗಳಾಗುವುದು. ಈಗ ಕೆಲವು ಪೀಠಗಳಿಗೆ ನೇಮಿಸಿರುವ ಕಾವ್ಯತೀರ್ಥ, ವ್ಯಾಕರಣ ತೀರ್ಥ, ತರ್ಕತೀರ್ಥ, ಕಲಹ ತೀರ್ಥರುಗಳಿಂದಲೇ ಸಮಾಜದಲ್ಲಿ ಈ ಕಲಹಾಗ್ನಿ ಎದ್ದಿರುವುದು. ಸಮಾಜದವರು ಇಂತಹ ತೀರ್ಥರನ್ನು ತಯಾರುಮಾಡಲು ಹಣವನ್ನು ಸೂರೆಮಾಡುವುದಕ್ಕಿಂತಲೂ ಸುಮ್ಮನಿರುವುದು ಮೇಲಲ್ಲವೇ? ಈಗ ಇಲ್ಲಿಯ ವರೆಗೆ ಈ ತೀರ್ಥರುಗಳಿಂದ ಆಗಿರುವ ಉಪಕಾರವೇನು? ಸಮಾಜದಲ್ಲಿ ಇಲ್ಲದ ಕಲಹಾಗ್ನಿ ಎದ್ದಿತು. ಹಿಂದಿನಿಂದ ಇಲ್ಲದ ಜನ್ಮದಿಂದ ವರ್ಣಾಶ್ರಮಭೇದವೆಂಬ ವಿಷಮೊಳಕೆಗಳು ಹುಟ್ಟಿದವು. ವೀರಶೈವ ಧರ್ಮಕ್ಕೆ ವಿರೋಧವಾದ ಅಚಾರ ವಿಚಾರಗಳೆದ್ದವು. ಪ್ರತಿಯೊಂದು ಗ್ರಾಮ ಪಟ್ಟಣಗಳಿಗೆ ಇಂಥ ತೀರ್ಥರುಗಳುದಯಮಾಡಿಸಿದ ಕಡೆಗಳಲ್ಲಿ (ಕಂಡುಗ ಹಾಲಿಗೆ ಒಂದೇ ತೊಟ್ಟು ಎಂಬ ಗಾದೆಯಂತೆ) ಎರಡು, ಮೂರು ಗುಂಪುಗಳಾಗುತ್ತಲಿವೆ. ಇಂಥದ್ದರಲ್ಲಿ ಈ ತೀರ್ಥರುಗಳಿಂದ ಆಗುವ ಉಪಕಾರವೇನು? ಇಂತಹ ತೀರ್ಥರುಗಳನ್ನು ತಯಾರು ಮಾಡಲು ಖರ್ಚು ಮಾಡುವ ಹಣವನ್ನು ಹಳ್ಳಿಗಳಲ್ಲಿರುವ ನಿರಕ್ಷರ ಕುಕ್ಷಿಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸದವರಿಗಾದರೂ ಬಡ ಕುಟುಂಬಗಳಿಗೆ ಸಹಾಯ ಮಾಡಿದಲ್ಲಿ ಸಮಾಜಕ್ಕೆ ಎಷ್ಟೋ ಉಪಕಾರವಾದೀತು ಇಲ್ಲಿಯ ವರೆಗೆ ಈ ಧರ್ಮಪೀಠಾಧಿಕಾರಿಗಳು ವೀರಶೈವ ಧರ್ಮದ ವಿಷಯವಾಗಿ ಯಾವ ವಿಶ್ವ ಧರ್ಮ ಸಮ್ಮೇಳನಗಳಲ್ಲಿ ವ್ಯಾಖ್ಯಾನ ಮಾಡಿದ್ದಾರೆ? ಯಾವ ಧರ್ಮಗ್ರಂಥಗಳನ್ನು ಭಾಷಾಂತರಿಸಿ ಯಾವ ಯಾವ ಭಾಷೆಗಳಲ್ಲಿ ಪ್ರಸಿದ್ಧಿಸಿದ್ದಾರೆ? ಯಾವ ಯಾವ ತೀರ್ಥಗಳಿಂದ ವೀರಶೈವ ಧರ್ಮವನ್ನು ಶ್ರೇಷ್ಠವಾದದ್ದಾಗಿ ಸಿದ್ಧಾಂತಮಾಡಿ ತೋರಿಸಿದ್ದಾರೆ? ಯಾರು ಯಾವ ವಿಷಯವನ್ನು ಕೇಳಿದರೂ ನಿಮಗೆ ಹೇಳುವುದಕ್ಕೆಲ್ಲ ನಾವಿರುವುದು ಎಂಬದಾಗಿ ಗರ್ಜಿಸುತ್ತಾರೆ ಇವರು ಕಲಿತಿರುವುದಾದರೂ ಯಾರಿಗೆ ಹೇಳಲಿಕ್ಕೆ? ಎಲ್ಲರಿಗೂ ಹೇಳದಿದ್ದರೆ ಹೋಗಲಿ; ಇವರು ಇಲ್ಲಿಯ ವರೆಗೂ ಯಾರಿಗೆ ಕೇಳಿದ ಪ್ರಶ್ನೆಗಳಿಗೆ ಸಮರ್ಪಕವನ್ನು ವಿಷಯಪಾಲಿಸಿದ್ದಾರೆ? ಇದೆಲ್ಲವನ್ನು ನೋಡಿದರೆ ಇವರುಗಳಿಗೆ ವೀರಶೈವ ಧರ್ಮತತ್ವಗಳು ತಿಳಿಯುವದಿಲ್ಲವೆಂದೇ ಭಾವಿಸಬೇಕಾಗುವದೆ ವೀರಶೈವ ಮಹಾನೀಯರೇ, ಇನ್ನಾದರೂ ಯಾರು ಯಾವ ವೀರಶೈವ ಧರ್ಮಪೀಠಗಳಿಗೆ ಸ್ವಾಮಿಗಳನ್ನು ನೇಮಿಸಬೇಕಾದರೆ ಅವರು ಯಾವ ತೀರ್ಥವಾದರೂ ಆಗಿರಲಿ, ನಾವು ಮಾತ್ರ, ವೀರಶೈವ ವಚನಶಾಸ್ತ್ರ, ವಿಶ್ವವಿದ್ಯಾಲಯ ಒಂದನ್ನು ಸ್ಥಾಪಿಸಿ, ಯಾವದೇ ತೀರ್ಥದಲ್ಲಿ ಉತ್ತೀರ್ಣರಾಗಿದ್ದರೂ, ಈ ವಚನಶಾಸ್ತ್ರ ತೀರ್ಥವಲ್ಲಿ ಉತ್ತೀರ್ಣರಾಗಿ ಸಮಾಜ ಸೇವೆಯನ್ನು ಮಾಡುವವರನ್ನು ಸ್ವಾಮಿಗಳನ್ನು ನೇಮಿಸಬೇಕೇ ಹೊರತು ವಚನಶಾಸ್ತ್ರ ತೀರ್ಥದಲ್ಲಿ ಉತ್ತೀರ್ಣರಾಗದೆ ಮತ್ತು ಸಮಾಜ ಸೇವೆಯನ್ನು ಮಾಡದೇ ಇರುವವರನ್ನು ಯಾವ ತೀರ್ಥದಲ್ಲಿ ಉತ್ತೀರ್ಣರಾಗಿದ್ದರೂ, ಸಮಾಜದ ಮೇಲೆ ಹಿತದೃಷ್ಟಿಯಿಂದ ದಯವಿಟ್ಟು ನೇಮಿಸಬೇಡಿ. ವೀರಶೈವ ಶಿವಶರಣರ ವಚನಶಾಸ್ತ್ರದಲ್ಲಿ ಇಲ್ಲದ ವಿಷಯ ಯಾವ ತೀರ್ಥಗಳಲ್ಲಿಯೂ ಇಲ್ಲ ತೀರ್ಥಗಳಲ್ಲಿ ಉತ್ತೀರ್ಣರಾಗಿರುವ ಮಹನೀಯರು ವಚನಶಾಸ್ತ್ರವನ್ನಲ್ಲಗಳೆಯುವದಕ್ಕಿಂತಲೂ, ವಚನಶಾಸ್ತ್ರವನ್ನೂ ನಿರ್ಮಲ ಮನಸ್ಸಿನಿಂದ ವಿಮರ್ಶಮಾಡಿದರೆ, ಆಗ ವಚನಶಾಸ್ತ್ರದ ಮಹತ್ವ ಗೊತ್ತಾಗುತ್ತೆ. ವೀರಶೈವ ಮಹನೀಯರು ಇನ್ನು ಮೇಲಾದರು ಹೆಚ್ಚಾಗಿ ಸಮಾಜ ಸೇವೆ ಮಾಡುವವರನ್ನು ಸ್ವಾಮಿಗಳನ್ನಾಗಿ ಮಾಡಬೇಕಾಗಿ ಸರ್ವ ವೀರಶೈವರಲ್ಲಿ ನನ್ನ ಪ್ರಾರ್ಥನೆ. **ಎಂ. ಎಸ್. ಶಿವಪ್ಪ**
**ಬೆಂಗಳೂರು ಸಿಟಿ**

---

ವುಗಳನ್ನು ನಿರ್ಮಿಸಿರುವದರಿಂದ ವೀರಶೈವ ಅಥವಾ ಲಿಂಗಾಯತ ಮತಸ್ಥಾಪನಾಗಿರುತ್ತಾನೆ. ಈ ವಿಷಯದಲ್ಲಿ ಪಾಶ್ಚಾತ್ಯ ಪಂಡಿತರಾದ ಮೆ॥ ವಿನ್ಸೆಂಟ್ ಸ್ಮಿಥ್ ಸಾಹೇಬರು ಬರೆದಿರುವದನ್ನು ನೋಡಿರಿ.

" The brief reign of Bijjala .....was marked by a religious revolution by the revival of the cult of Siva and the foundation of the new sect, the Veerasaivas or Lingayets, which is a Power to this day. "

(ಮುಂದುವರಿಯುವದು.)

---

### ನಿಮಗೆ ಗೊತ್ತುಂಟೆ?

(೧) ಶರೀರ ಪ್ರಮಾಣಕ್ಕಿಂತ ಹೆಚ್ಚಿಗೆ ಭಾರವಿರುವ ಮನುಷ್ಯನು ಸೈರಣೆ ಮತ್ತು ಪ್ರತೀಕಾರಗಳಲ್ಲಿ ಅಧಿಕವಾಗಿರುವನಂತೆ-ಪ್ರಮಾಣಕ್ಕಿಂತ ಕಡಿಮೆ ಭಾರದವನಿದ್ದರೆ ಈ ಗುಣಗಳು ಕಡಿಮೆ ಪ್ರಮಾಣದಲ್ಲಿರುತ್ತವೆ.

(೨) ಮನುಷ್ಯನು ಸರಾಸರಿಯಿಂತಲೂ ತೀವ್ರ ಓಡಬಲ್ಲನು. ಸರ್ಪವು ಗಂಟೆಗೆ ೩೫ ಮೈಲು ಓಡುತ್ತದೆ.

(೩) ಗುಂಗೀ ಹುಳಕ್ಕೆ ಬಣ್ಣ ತಿಳಿಯುವದಿಲ್ಲ. ಆದರೂ ನೇರಳ ಬಣ್ಣವು ಮನುಷ್ಯ ದೃಷ್ಟಿಗೆ ಗೋಚರವಾಗದಷ್ಟು ದೂರ ವಿದ್ದರೂ ಅದು ನೋಡಬಲ್ಲದು.

(೪) ಅಮೇರಿಕೆಯಲ್ಲಿ ಫಾಕ್ಸ ಟೇರಿಯರ ಎಂಬ ಒಂದು ಜಾತಿಯ ನಾಯಿಯು ಬೇಕಾದಂಥ ವಿಷಸರ್ಪವಿದ್ದರೂ, ಅದು ಅಡವಿಯಲ್ಲಿರಲಿ-ನೀರಿನಲ್ಲಿರಲಿ-ಹುಡಿದು ಕೊಲ್ಲುತ್ತದೆ.

(೫) ಜಗತ್ತಿನಲ್ಲಿ ಎಲ್ಲಕ್ಕೂ ಸಣ್ಣ ರೇಡಿಯೊ ಅಂದರೆ ಎಷ್ಟಿರಬಹುದು? ಸೀಸಪೆನ್ಸಿಲಿನ ತೂತಿನಲ್ಲಿ ತೂರಿಸುವಷ್ಟು ಸಣ್ಣವಾದ ರೇಡಿಯೊ ಒಂದಿರುವದು. ಅದರಿಂದ ಬಹು ದೂರದಲ್ಲಿರುವ ಧ್ವನಿಗಳು ಸ್ಪಷ್ಟವಾಗಿ ಕೇಳಬರುತ್ತದೆ.

# ದೇವರ ದಾಸಿಮಯ್ಯನು ಬಸವನ ಸಮಕಾಲೀನನೇ?

[ ಲೇಖಕರು— ಶ್ರೀ. ಎಸ್. ಎಸ್. ಮಾಳವಾಡ ಬಿ. ಎ. (ಆನರ್ಸ್) ಬೆಳಗಾವ ]

ವೀರಶೈವ ಮತದ ಇತಿಹಾಸದಲ್ಲಿ ದೇವರ ದಾಸಿಮಯ್ಯನ ಕಾಲಸಮಸ್ಯೆಯು ಒಳ್ಳೇ ಮಹತ್ವದ್ದಾಗಿದೆ. ಆತನು, ಕೆಲವರು ಅಭಿಪ್ರಾಯಪಡುವಂತೆ, ಬಸವಣ್ಣನಿಗಿಂತ ಮೊದಲಿನವನಾದರೆ ವೀರಶೈವ ಮತದ ಇತಿಹಾಸವನ್ನು ಅರಿಯುವದಕ್ಕೆ ಹೆಚ್ಚಿನ ಸಾಧನವು ನಮಗೆ ದೊರೆತಂತಾಗುವದು. ಆದರೆ ಆತನು ಬಸವನ ಸಮಕಾಲೀನನೇ ಎಂದು ನಂಬಲಿಕ್ಕೆ ಸಾಕಷ್ಟು ಸಾಧನಗಳಿವೆ. ಅವುಗಳ ಆಧಾರದ ಮೇಲಿಂದ ವಿದ್ವಾಂಸರು ದೇವರ ದಾಸಿಮಯ್ಯನ ಕಾಲವನ್ನು ನಿರ್ಣಯಿಸಿರುವರು. ಬಸವನ ಮೇಲೆ ಅಧಿಕೃತ ಪುಸ್ತಕವೊಂದನ್ನು ಬರೆದ ಶ್ರೀಮಾನ್ ಎಂ ಆರ್. ಶ್ರೀನಿವಾಸಮೂರ್ತಿಗಳು ಈ ಸಮಸ್ಯೆಯನ್ನು ವಿಶದವಾಗಿ ಚರ್ಚಿಸಿ ಕೊನೆಗೆ ದೇವರ ದಾಸಿಮಯ್ಯನು ಬಸವನ ಕಾಲಕ್ಕೇ ಇದ್ದಿರಬೇಕೆಂದು ಅಭಿಪ್ರಾಯಪಡುತ್ತಾರೆ. ಹೊಸದಾಗಿ ಹೊರಟ "ವೀರಶೈವ ಮತಾಚಾರ್ಯರ ಕಾಲನಿರ್ಣಯ" ವೆಂಬ ಪುಸ್ತಕದಲ್ಲಿ ಶ್ರೀಮಾನ್ ಕರ್ಲಮಂಗಲಾ ಅವರಾದರೂ ಈ ಅಭಿಪ್ರಾಯವನ್ನೇ ಒಪ್ಪುತ್ತಾರೆ. ಅಲ್ಲದೆ ಅನುಭವಮಂಟಪದಲ್ಲಿನ ಶಿವಶರಣರ ಹೆಸರುಗಳಲ್ಲಿ ದೇವರ ದಾಸಿಮಯ್ಯನದು ಒಂದಾಗಿದೆ. ಅಂದ ಮೇಲೆ ಈ ವಚನಕಾರ ಹೆಚ್ಚು ಅಧಿಕೃತನೆಂದು ತಿಳಿದುಬರುವುದು ಶಕ್ಯವಾಗಲಾರದು. ಈ ವಿಷಯವಾದ ವಿಸ್ತೃತ ವಿವರಣೆಯನ್ನು ದೇವರ ದಾಸಿಮಯ್ಯನ ಚರಿತ್ರೆಯ ಐತಿಹಾಸಿಕ ಮಹತ್ವವನ್ನು ಚರ್ಚಿಸುವದು ನನ್ನ ಉದ್ದೇಶವಲ್ಲ. ಆದರೆ ಈ ವಿಷಯವಾಗಿ ಕೀರ್ತನ ಕೇಸರಿ ಹುಲ್ಯಂಟಿ ಮಠ ಶಿವಮೂರ್ತಿ ಸ್ವಾಮಿಗಳು ಶರಣ ಸಂದೇಶದ ತಾ. ೨೨-೧೦-೬೪ ನೇ ಸಂಚಿಕೆಯಲ್ಲಿ ದೇವರ ದಾಸಿಮಯ್ಯನ ವಿಷಯವಾಗಿ ನ್ಯಕ್ಕಪಡಿಸಿದ ಅಭಿಪ್ರಾಯವನ್ನು ಚರ್ಚಿಸುವದೇ ನನ್ನ ಲೇಖನದ ಉದ್ದೇಶ.

ಶ್ರೀ ಶಿವಮೂರ್ತಿ ಸ್ವಾಮಿಗಳಾದರೂ ದೇವರ ದಾಸಿಮಯ್ಯನು ಬಸವನ ಸಮಕಾಲೀನನೆಂಬದನ್ನು ಒಪ್ಪುತ್ತಾರೆ. ಆದರೆ ಆತನು ವಚನದ ದಾಸಿಮಯ್ಯನೆಂದೂ ಪುರಾಣ ಕಥಿತ ದಾಸಿಮಯ್ಯನು ಬೇರೊಬ್ಬನೆಂದೂ ಅಭಿಪ್ರಾಯಪಡುತ್ತಾರೆ. ಇಷ್ಟಲ್ಲದೆ ಪುರಾಣ ಕಥಿತ ದಾಸಿಮಯ್ಯನು ಪರಮ ವೀರಶೈವನೇ ಆಗಿರಬೇಕೆಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಗಳನ್ನೇ ನಾನಿಲ್ಲಿ ಚರ್ಚಿಸಬೇಕಾಗಿದೆ. ಯಾಕೆಂದರೆ ಆ ಅಭಿಪ್ರಾಯಗಳೇ ಸರಿಯೆಂದು ಸಿದ್ಧಪಡಿಸುವದಕ್ಕೆ ಅನೇಕ ತೊಂದರೆಗಳು ಬರುತ್ತವೆ. ಅದುದರಿಂದ ಶಿವಮೂರ್ತಿ ಸ್ವಾಮಿಗಳ ಅಭಿಪ್ರಾಯವು ಸತ್ಯವಾದುದೇ ಎಂದು ನಂಬಲಾಗುವದಿಲ್ಲ. ನಾನಿಲ್ಲಿ ನನ್ನ ಭಿನ್ನಾಭಿಪ್ರಾಯವನ್ನು ಮಾತ್ರ ಸೂಚಿಸುತ್ತೇನೆ. ನಿಸ್ಸರ್ಶವಾಗಿ ಹೀಗೇ ಎಂದು ಹೇಳಲು ಸಾಧನದ ಅಭಾವವು ಇನ್ನೂ ಇದೆ. ಆದರೆ ದೇವರ ದಾಸಿಮಯ್ಯನ ವಿಷಯವಾಗಿ ಹೆಚ್ಚು ಸಂಗತಿಗಳು ಹೊರಬೀಳುವದು ಒಳ್ಳೇ ಮಹತ್ವದ ಪರಿಣಾಮವನ್ನುಂಟು ಮಾಡುವದರಿಂದ ಆ ವಿಷಯವನ್ನು ಚರ್ಚಿಸಬೇಕಾಗಿದೆ. ಓದುಗರ ಕುತೂಹಲವು ಕೆರಳಿ ಅವರು ದೇವರ ದಾಸಿಮಯ್ಯನ ಸಮಸ್ಯೆಯ ವಿಷಯವಾಗಿ ಹೆಚ್ಚಾಗಿ ಅಭ್ಯಸಿಸಿ, ವಿಚಾರಮಾಡಿ ತಮ್ಮ ಅಭಿಪ್ರಾಯಗಳನ್ನು ನ್ಯಕ್ಕಪಡಿಸಬೇಕೆಂದು ನನ್ನ ಮನೀಷೆ. ಅದುಕಾರಣವೇ ಈ ಬರಹವನ್ನು ಬರೆಯಲುದ್ಯುಕ್ತನಾಗಿರುವೆ.

ಶಿವಮೂರ್ತಿ ಸ್ವಾಮಿಗಳು ಸುಗ್ಗಲಾದೇವಿಯ ಶಾಸನದ ಆಧಾರದ ಮೇಲೆ ಶಾಸನದಲ್ಲಿ ಉಕ್ತನಾದ ದಾಸಿಮಯ್ಯನೇ ಬೇರೆ, ಬಸವನ ಸಮಕಾಲೀನ ದಾಸಿಮಯ್ಯನೇ ಬೇರೆ ಎಂದು ಹೇಳುತ್ತಾರೆ. ಆದರೇ ಶಿವಾನುಭವದ ೨ನೇ ಸಂಚಿಕೆಯಲ್ಲಿ ಶ್ರೀ ಮುಪ್ಪಾಂತಣ್ಣನವರು ದೇವರ ದಾಸಿಮಯ್ಯನ ವಿಷಯವಾಗಿ ಒಂದು ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಆತನ ಚಾರಿತ್ರ್ಯವನ್ನು ಹೇಳುವಾಗ ಆತನು ಸುಗ್ಗಲಾದೇವಿಯ ಗುರುವಾಗಿದ್ದನೆಂದೂ ಹಾಗೂ ಆತನು ಉತ್ತಮವಾದ ವಚನಗಳನ್ನು ಬರೆದನೆಂದೂ ಹೇಳಿದೆ. ಇದರ ಮೇಲಿಂದ ವಚನಗಳ ದಾಸಿಮಯ್ಯನೂ ಸುಗ್ಗಲಾದೇವಿಯ ಗುರು ದಾಸಿಮಯ್ಯನೂ ಬೇರೆ ಬೇರೆಯಲ್ಲವೆಂದು ಹೇಳಬಹುದು. ಸುಗ್ಗಲದೇವಿಯ ಶಾಸನದ ಆಧಾರವನ್ನು ಹೇಳುವ ಶಿವಮೂರ್ತಿ ಸ್ವಾಮಿಗಳ ಅಭಿಪ್ರಾಯವು ತಪ್ಪೆಂದು ತಾನೇ ಸಿದ್ಧವಾಗುತ್ತದೆ. ಇಷ್ಟಲ್ಲದೆ ಶಾಸನೋಕ್ತ ದಾಸಿಮಯ್ಯನು ಜೈನರೊಡನೆ ವಾದಿಸಿದನೆಂದೂ ಅವರನ್ನ ವೀರಶೈವರನ್ನಾಗಿ ಮಾಡಿಕೊಂಡನೆಂದೂ ಹೇಳಿರುವದರಿಂದ ಈ ಘಟನೆಗಳು ಬಸವನ ಕಾಲಕ್ಕೆ ಹೆಚ್ಚು ಅನ್ವಯಿಸುತ್ತವೆ. ಆದುದರಿಂದ ಬಸವನ ಸಮಕಾಲೀನ ದೇವರ ದಾಸಿಮಯ್ಯನೇ ಇವುಗಳ ಕರ್ತೃವೆಂದು ನಂಬಬೇಕಾಗುತ್ತದೆ. ಈ ವಿಷಯವಾಗಿ ಶ್ರೀಮಾನ್ ಎಂ. ಆರ್. ಶ್ರೀ ಅವರ ಅಭಿಪ್ರಾಯದಿಂದಂತೂ ಶಿವಮೂರ್ತಿ ಸ್ವಾಮಿಗಳ ಹೇಳಿಕೆಯನ್ನು ಪೂರ್ಣ ನಿರಾಧಾರವಾದುದೆಂದು ನಿರ್ಣಯಿಸಬಹುದಾಗಿದೆ. ಹೇಗಂದರೆ ಸುಗ್ಗಲದೇವಿಯ ಉಲ್ಲೇಖವು ಹಾಸನ ಡಿಸ್ಟ್ರಿಕ್ಟ್ ಬೇಲೂರಿನ ಶಾಸನದಲ್ಲಿದೆ. ಆದರೆ ಸುಗ್ಗಲದೇವಿಯ ಉಲ್ಲೇಖವು ೧೧೨೨ನೆಯ ಬೇಲೂರ ಶಾಸನದಲ್ಲಿ ಇದ್ದರೂ ಅದರಿಂದ ಸುಗ್ಗಲದೇವಿಗೂ, ದೇವರ ದಾಸಿಮಯ್ಯನಿಗೂ ಗುರು ಶಿಷ್ಯ ಸಂಬಂಧವನ್ನು ಸ್ಥಾಪಿಸುವದಕ್ಕೆ ಸಾಧ್ಯವಿಲ್ಲವೆಂದು ಎಂ. ಆರ್. ಶ್ರೀಯವರು ಸ್ಪಷ್ಟವಾಗಿ ಹೇಳುತ್ತಾರೆ. ಅಂದ ಮೇಲೆ ಪೊಟ್ಟಲ ಕೆರೆಯ ಜಯಸಿಂಹನ (೧೧೦೦-೧೧೫೦) ಆಳಿಕೆಯಲ್ಲಿದ್ದ ದಾಸಿಮಯ್ಯನೇ ಪುರಾಣ ಕಥಿತ ದಾಸಿಮಯ್ಯನೆಂದೂ ಆತನು ೭೦೦ ಜೈನರನ್ನು ವೀರಶೈವರನ್ನಾಗಿ ಮಾಡಿಕೊಂಡನೆಂದೂ ಶಿವಮೂರ್ತಿ ಸ್ವಾಮಿಗಳು ಹೇಳುವದಕ್ಕೆ ಏನೂ ಆಧಾರವೇ ಇಲ್ಲದಂತೆ ಆಗುತ್ತದೆ. ಹೀಗೆ ನಿರಾಧಾರ ಸಂಗತಿಯ ಮೇಲೆಯೇ ದಾಸಿಮಯ್ಯನು ಪರಮ ವೀರಶೈವನಾಗಿದ್ದನೆಂದು ಸ್ವಾಮಿಗಳು ಕಲ್ಪಿಸುವದಾದರೂ ಶಕ್ಯವಾಗುವದೆಷ್ಟೇ. ವೀರಶೈವ ಮತದ ಐತಿಹಾಸಿಕ ಸತ್ಯವನ್ನು ನಿಶ್ಚಯಿಸುವ ದೃಷ್ಟಿಯಿಂದ ದಾಸಿಮಯ್ಯನು ೧೧ನೇ ಶತಮಾನದಲ್ಲಿಯೇ ಜೀವಿಸಿರುವದೂ ಆತನು ಪರಮ ವೀರಶೈವನೇ ಆಗಿರುವದು ನನಗೆ ಅಪೇಕ್ಷಣೀಯವೇ ಆದರೂ ನಮ್ಮ ಅಪೇಕ್ಷೆಯಂತೆ ಕಲ್ಪಿಸುವದೇ ಸರಿಯಾಗಲಾರದು. ಆ ಕಲ್ಪನೆಯನ್ನು ಸಮರ್ಥಿಸುವದಕ್ಕೆ ಐತಿಹಾಸಿಕ ಆಧಾರವೇಕೇ ಬೇಕು? ವೀರಶೈವ ಮತವನ್ನು ಪೌರಾಣಿಕ ಇಲ್ಲವೆ ಧಾರ್ಮಿಕ ದೃಷ್ಟಿಯಿಂದ ನೋಡುವವರು ಎಂತಹ ಕತೆಗಳನ್ನು ನಂಬಬಹುದಾದರೂ ಐತಿಹಾಸಿಕ ದೃಷ್ಟಿಯಿಂದ ನಿರೀಕ್ಷಿಸುವವರು ಮಾತ್ರ ಹಾಗೆ ಮಾಡಕೂಡದಷ್ಟೆ. ಇನ್ನು ಬಸವ ಪುರಾಣದಲ್ಲಿಯಾದರೋ ಜಯಸಿಂಹನಿಗೆ ಪ್ರತಿಯಾಗಿ ದೇವಿಂಗರಾಯನೆಂಬ ಹೆಸರಿದೆ. ಆ ದೇ

ಸಿಂಗರಾಯನು ಬಲ್ಲಾಳನಾಗಿರಬಹುದೆಂದೂ ಕೆಲವರ ತರ್ಕವಿದೆ. ಇಷ್ಟಲ್ಲದೆ "ದೇವರ ದಾಸಿಯು ಚಾರಿತ್ರಕ ಪುರುಷನೆಂದಾಗಲಿ, ಅವನು ಜಯಸಿಂಹನ ಕಾಲದವನೆಂದಾಗಲಿ, ಬಸವ ಪುರಾಣದಲ್ಲಿಯ ಕಥೆಯು ನಿಜವೆಂದಾಗಲಿ ಅವರು (ಡಾ. ಫ್ಲೀಟರು) ಹೇಳಿದಾತೆ ತೋರುವದಿಲ್ಲ." (ಎಂ. ಆರ್ ಶ್ರೀನಿವಾಸಮೂರ್ತಿಗಳು ಭಕ್ತಿಭಾಂಡಾರಿ ಬಸವ ಪುಸ್ತಕದ ೧೩ ನೇ ಪುಟದಲ್ಲಿ ಬರೆದುದು.)

ದೇವರ ದಾಸಿಮಯ್ಯನು ಬಸವನಕ್ಕಿಂತ ಮೊದಲು ನೂರಾರು ವರುಷಗಳ ಹಿಂದೆಯೇ ಜೀವಿಸಿದ್ದನೆಂದು ಹೇಳುವ ಅಭಿಪ್ರಾಯವನ್ನು ಶಂಕಿಸುವದಕ್ಕೆ ಇನ್ನೂ ಒಂದು ಕಾರಣವಿದೆ. ಅದು ಏನಂದರೆ ದಾಸಿಮಯ್ಯನು ಬಸವನಿಗೆ ಮೊದಲು ೧೦೦ ವರುಷ ಈ ರೀತಿ ವೀರಶೈವ ಮತದ ಕಾರ್ಯಪ್ರಸಾರವನ್ನು ಮಾಡಿದ್ದರೆ ಅದರ ಪರಿಣಾಮವು ಮುಂದೆ ಕಂಡುಬರುವದಿಲ್ಲವೆ? ಆಗಿನ ಘಟನೆಗಳನ್ನು ನಂಬುವದಕ್ಕೆ ಐತಿಹಾಸಿಕ ಆಧಾರವಿಲ್ಲ. ಆತನ ಪ್ರಸಾರ ಕಾರ್ಯದ ಪರಿಣಾಮವು ಮುಂದೆ ಕಂಡುಬರುವದಿಲ್ಲ. ಅಂದ ಮೇಲೆ ನಾವೇನು ಇತ್ಯರ್ಥಮಾಡಬೇಕು? ವಚನಗಳ ದಾಸಿಮಯ್ಯನು ಬಸವನ ಸಮಕಾಲೀನನೆಂಬುದನ್ನು ಶಿವಮೂರ್ತಿ ಸ್ವಾಮಿಗಳು ಒಪ್ಪಿಯೇ ಒಪ್ಪುತ್ತಾರೆ.

ಪುರಾಣೋಕ್ತ ಹಾಗು ಬಸವನಿಗೆ ಮೊದಲು ಇದ್ದ ದೇವರ ದಾಸಿಮಯ್ಯನು ಪರಮ ವೀರಶೈವನಾಗಿದ್ದನೆಂಬ ಮಾತಂತೂ ತಾ ನಾಗಿಯೇ ನಿರಾಧಾರವೆಂದು ಸಿದ್ಧವಾಗುತ್ತದೆ. ಯಾಕೆಂದರೆ ಬೇಲೂರಿನ ಶಾಸನದಿಂದ ದಾಸಿಮಯ್ಯನು ಸುಗ್ಗಲದೇವಿಯ ಗುರುವೆಂಬುದು ಸ್ಥಾಪಿತವಾಗುವದೇ ಇಲ್ಲ.

"ಬಾಣಮಯೂರನಂತೆ ಬಣ್ಣಿಸಬಲ್ಲೆನೇ, ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ, ದಾಸಿಮಯ್ಯನಂತೆ ಉಡಕೊಡಬಲ್ಲೆನೆ" ಎಂಬ ಬಸವನ ವಚನದ ಆಧಾರದ ಮೇಲೆಯೇ ದಾಸಿಮಯ್ಯನು (ಪುರಾಣೋಕ್ತನು) ಪರಮ ವೀರಶೈವನಾಗಿದ್ದನೆಂದು ನಂಬುವದು ಸರಿಯಲ್ಲ. ಯಾಕೆಂದರೆ ಬಸವನಿಂದ ಹೊಗಳಲ್ಪಟ್ಟ ಪುರಾತನರೆಲ್ಲರೂ ಪರಮ ಶೈವರಾಗಿದ್ದರೆಂದು ಹೇಳಬಹುದಾದರೂ ಪರಮ ವೀರಶೈವರೇ ಆಗಿದ್ದರೆಂದು ಹೇಳಲು ಬಾರದು. ಬಾಣಮಯೂರನು ವೀರಶೈವನೇ ಎಂದು ಹೇಳುವದಕ್ಕೆ ಏನು ಆಧಾರವಿದೆ? ಅದೇ ಪ್ರಕಾರ ಒಸವಣ್ಣನಿಂದ ಸ್ತುತಿಸಲ್ಪಟ್ಟ ಕಣ್ಣಪ್ಪನು ಪರಮ ವೀರಶೈವನೆಂದೆ ಹೇಗೆ ಹೇಳಬೇಕು? ಆತನು ಜೇಡರವನಾಗಿದ್ದನೆಂದೇ ಸ್ಪಷ್ಟವಿದೆ. ಆತನು ಪರಮ ಶೈವನೇನೋ ಆಹುದು. ಯಾಕೆಂದರೆ ಆತನು ಶಿವನಲ್ಲಿ ಅನನ್ಯ ಭಕ್ತಿಯುಳ್ಳವನು. ಶಿವಶರಣರಿಂದು ಸ್ತುತಿಸಲ್ಪಡುವ ಅನೇಕ ಪುರಾತನರ ವಿಷಯವಾಗಿಯೂ ಈ ಮಾತು ಅನ್ವಯಿಸುತ್ತದೆ. ಆದುದರಿಂದ ಬಸವನ ವಚನದಲ್ಲಿ ಉಕ್ತವಾದ ಮಾತ್ರಕ್ಕೆ ದಾಸಿಮಯ್ಯನನ್ನು ಪರಮ ವೀರಶೈವನೆಂದು ನಿಶ್ಚಯಿಸಲಾಗದು.

ಅಂದ ಮೇಲೆ ಪುರಾಣಕಥಿತ ದಾಸಿಮಯ್ಯನು ಬಸವನಿಗಿಂತ ನೂರಾರು ವರುಷ ಮೊದಲಿದ್ದು ವೀರಶೈವ ಮತಪ್ರಸಾರ ಕಾರ್ಯ ಮಾಡಿದನೆಂದೂ ಹಾಗೂ ಆತನು ಪರಮ ವೀರಶೈವನೇ ಆಗಿದ್ದನೆಂದು ಹೇಳುವ ಶಿವಮೂರ್ತಿ ಸ್ವಾಮಿಗಳ ಅಭಿಪ್ರಾಯವು ತಪ್ಪೆಂದು ತೋರುವದು ಸಹಜವಲ್ಲವೇ? ಈ ನನ್ನ ಭಿನ್ನಾಭಿಪ್ರಾಯಕ್ಕೆ ಸಮಂಜಸ ಉತ್ತರ ಸಿಗಲೆಂಬ ಉದ್ದೇಶದಿಂದಲೇ ನಾನು ಈ ಬರಹವನ್ನು ಬರೆದನಲ್ಲದೆ ಸ್ವಾಮಿಗಳನ್ನು ಟೀಕಿಸುವದಕ್ಕೆಂದಲ್ಲ. ಆ ದೃಷ್ಟಿಯಿಂದಲೇ ಓದುಗರು ಈ ಲೇಖನವನ್ನು ಪರಾಮರ್ಶಿಸಬೇಕು.

---

**ಚಾಮರಾಜನಗರದ ತಾಲ್ಲೂಕು ಛತ್ರದ ಹೊಸೂರಿನಲ್ಲಿ ಶಾ. ೩೦-೯-೩೪ನೇ ಭಾನುವಾರ ನಡೆದ ಸಂಜನಗೂಡು ಪ್ರಾಂತಿಕ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನದಿಂದ**

ವೈಸೂರು ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರಾದ

**ಆರ್. ಬಿ. ಎಸ್ ಪುಟ್ಟಸ್ವಾಮಿ, ಬಿ. ಎ., ಬಿ. ಎಲ್, ಎಂ.ಎಲ್. ಸಿ**

ಇವರು ಮಾಡಿದ

## ಭಾಷಣದ ಮುಖ್ಯಾಂಶ.

ಇತ್ತೀಚೆಗೆ ವೀರಶೈವ ಸಮಾಜದಲ್ಲಿ ಕೆಲ ಕುಹಕಿಗಳು ಬಸವಾದಿ ಪ್ರಮಥರನ್ನು ನಿಂದಿಸುವ ಒಂದು ಚಳುವಳಿಯನ್ನು ಎಬ್ಬಿಸಿರುವರು. ವೀರಶೈವ ಸಮಾಜದವರಲ್ಲಿ ಅನೂಚೀನವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯಕ್ಕೂ, ವಂಬಿಕೆಗೂ ವಿರೋಧವಾಗಿ ಈ ಚಳುವಳಿಗಾರರು, ಶ್ರೀ ಬಸವೇಶ್ವರನನ್ನು ನಂದಿಯ ಅವತಾರವಲ್ಲವೆಂತಲೂ, ಶ್ರೀ ಬಸವೇಶ್ವರನ ತತ್ವಗಳು ಸನಾತನಧರ್ಮಕ್ಕೆ ವಿರೋಧವಾದವುಗಳೆಂತಲೂ, ಶ್ರೀ ಬಸವೇಶ್ವರನು ವರ್ಣಸಂಕರಮಾಡಿದ ಮಹಾ ಅಪರಾಧಿಯೆಂತಲೂ ಸಮಸ್ತ ವೀರಶೈವರಿಂದಲೂ ಪೂಜ್ಯನೆಂದು ಗಣಿಸಲ್ಪಟ್ಟಿರುವ ಅಲ್ಲಮ ಪ್ರಭುದೇವರು ವ್ಯೋಮಕ್ಕೆಂತಲೂ ಇತ್ಯಾದಿಯಾಗಿ ಕುಚ್ಛವಾದ ಬರವಣಿಗೆಗಳನ್ನು ಬರೆದು ಪ್ರಕಟಿಸಿ, ಅನೇಕ ವೀರಶೈವರಿಗೆ ಮನಃಖೇದವನ್ನುಂಟುಮಾಡುತ್ತಿರುವರು. ಈ ಬಗೆಯ ಬರವಣಿಗೆಗಳು ಸಮಾಜದಲ್ಲಿ ಘಾತವನ್ನುಂಟುಮಾಡುತ್ತಿರುವುದನ್ನು ಕಂಡೂ ಕಂಡೂ ಶ್ರೀಮದ್ರಂಭಾಪುರಿ ಸ್ವಾಮಿಗಳವರು ಅಂತಹ ಚಳುವಳಿಗಾರರನ್ನು ತಿರಸ್ಕರಿಸುವುದಕ್ಕೆ ಬದಲಾಗಿ ಅವರಿಗೆ ಪುರಸ್ಕಾರಮಾಡುತ್ತಿರುವುದರಿಂದ ಶ್ರೀ ಸ್ವಾಮಿಗಳವರು ಪ್ರಮಥರನ್ನು ನಿಂದಿಸುವ ಚಳವಳಿಗೆ ಪ್ರೋತ್ಸಾಹ ಕೊಡುತ್ತಿರುವರೆಂದು ವೀರಶೈವ ಸಮಾಜದಲ್ಲಿ ಒಂದು ಶಂಕೆ ಉಂಟಾಗಿರುತ್ತದೆ. ಶ್ರೀಗಳವರ ಮೇಲೆ ಬಂದಿರುವ ಈ ಬಗೆಯ ಶಂಕೆಯನ್ನು ಪರಿಹಾರಮಾಡುವುದು ಸೂಕ್ತವೆಂದು ಶಿಷ್ಯವರ್ಗದಲ್ಲನೇಕರು ಅನೇಕ ವಿಧದಲ್ಲಿ ಬಿನ್ನವಿಸಿಕೊಂಡಾಗ್ಯೂ ತತ್ಸಂಬಂಧದಲ್ಲಿ ಅವರು ಉದಾಸೀನರಾಗಿರುವರಲ್ಲದೆ ತದ್ವಿಷಯದಲ್ಲಿ ಅವರು ಹಿಡಿದಿರುವ ಮೌನವ್ರತವೇ ಈ ಚಳುವಳಿಗಾರರಿಗೆ ಶ್ರೀಗಳು ಪ್ರೋತ್ಸಾಹಕೊಡುತ್ತಿರುವುದು ದಿಟವಿದ್ದರೂ ಇರಬಹುದೆಂಬ ಶಂಕೆಯು ಬಲವತ್ತರವಾಗಲು ಸಹಾಯವಾಗುತ್ತಿರುವುದು. ಈ ವಿಷಯಕ್ಕೆ ಸಂಬಂಧಪಟ್ಟ ಸಂಶಯಗಳನ್ನು ಪರಿಹಾರಮಾಡಿಕೊಳ್ಳಲೋಸುಗ ಶ್ರೀ ಸ್ವಾಮಿಗಳವರನ್ನು ಸಂದರ್ಶಿಸಲು ಹೋಗುವ ಶಿಷ್ಯವರ್ಗದವರಿಗೆ ಅವಕಾಶ ದೊರೆಯುವುದೇ ದುರ್ಲಭ. ಹೇಗೋ ಅವಕಾಶವನ್ನು ಕಲ್ಪಿಸಿಕೊಂಡು ಶ್ರೀ ಸ್ವಾಮಿಗಳವರನ್ನು ಒತ್ತಾಯಮಾಡಿ ಯಾರಾದರೂ ಕೇಳುವುದಾದರೆ ಶ್ರೀ ಸ್ವಾಮಿಗಳವರು ಅಪ್ರಸನ್ನರಾಗಿ "ನಾವು ಯಾರನ್ನೂ ದೂಷಿಸುವುದಿಲ್ಲ. ದೂಷಿಸುವುದು ಗುರುಗಳ ಕರ್ತವ್ಯವಲ್ಲ, ದೂಷಣೆಯು ಪಾಪಕರವಾದದ್ದು" ಎಂಬ ಇಷ್ಟೇ ಅರ್ಥವನ್ನು ಧ್ವನಿಗೊಡುವ ಮಾತುಗಳನ್ನು ಅಪ್ಪಣೆ ಕೊಡಿಸುವರು. ಶ್ರೀ ಬಸವೇಶ್ವರನನ್ನು ಸಾಕ್ಷಾತ್ ನಂದಿಯ ಅವತಾರವೆಂದೂ, ದ್ವಿತೀಯ ಶಂಭುವೆಂದೂ, ಪರಮ ಪೂಜ್ಯನೆಂದೂ ಭಾವಿಸಿರುವ ಶಿಷ್ಯವರ್ಗದವರು ಶ್ರೀ ಸ್ವಾಮಿಗಳವರು "ಬಸವೇಶ್ವರನನ್ನು ನಾವು ದೂಷಿಸುವುದಿಲ್ಲ, ನಾವು ಯಾರನ್ನೂ ದೂಷಿಸುವುದಿಲ್ಲ" ಎಂಬ ಇಷ್ಟೇ ವಾಕ್ಯಗಳನ್ನು ಹೇಳುವುದನ್ನು ನೋಡಿ ಶ್ರೀ ಬಸವೇಶ್ವರನ ವಿಷಯದಲ್ಲಿ ಅವರಿಗೆ ಅಭಿಮಾನವಿಲ್ಲವೆಂದು ಭಾವಿಸಲು ಕಾರಣವಾಗಿ, ಶ್ರೀ ಸ್ವಾಮಿಗಳವರು ಈ ಚಳುವಳಿಗಾರರಿಗೆ ಪ್ರೋತ್ಸಾಹಕೊಡುತ್ತಿರುವರೆಂಬ ಶಂಕೆಯು ಮತ್ತಷ್ಟೂ ಬಲವಾಗಲು ಕಾರಣವಾಯಿತು. ಬಹಳ ಪ್ರಯಾಸಪಟ್ಟಮೇಲೆ "ಶ್ರೀ ಬಸವೇಶ್ವರನು ಹನ್ನೆರಡನೆಯ

ಶಮಾನದಲ್ಲಿದ್ದ ಒಬ್ಬ ಪರಮ ಭಕ್ತ, ಅವನು ಮತಕ್ಕೆ ಉಪಕಾರ ಮಾಡಿರುವುದೇನೋ ನಿಜ; ಆದರೆ ತಾವು ಶ್ರೀ ರೇಣುಕರಪೀಠಕ್ಕೆ ಬಂದಿರುವಕಾರಣ ತಾವು ಸಾಕ್ಷಾತ್ ಶ್ರೀ ರೇಣುಕರೇ ಆಗಿರುವು ದರಿಂದ ಭಕ್ತನಾದ ಬಸವಣ್ಣನನ್ನು ತಾವು ಪೂಜ್ಯನೆಂದು ಭಾವಿ ಸಲಾಗದು" ಎಂಬ ನಿರ್ದಿಷ್ಟವಾದ ಅಭಿಪ್ರಾಯವನ್ನು ತಿಳಿದುಕೊ ಳ್ಳಲು ಸಾಧ್ಯವಾಯಿತು

ಇನ್ನಾದರೂ ಕೆಲವರು ಶ್ರೀ ಬಸವೇಶ್ವರನನ್ನು ಒಬ್ಬ ಕೇವ ಲ ಭಕ್ತನೆಂತಲೂ, ಅವನು ಭಕ್ತನಾದುದರಿಂದ ಅವನು ಪೂಜ್ಯ ನಾಗಲಾರನೆಂದೂ ಹೇಳುವರು. ಶ್ರೀ ಬಸವೇಶ್ವರನು ಪಂಚಾಚಾ ರ್ಯರಿಗೆ ಭಕ್ತನಾಗಿದ್ದಂತೆ ಯಾವ ಆಧಾರಗಳೂ ಕಾಣುವುದಿಲ್ಲ. ಬಸವೇಶ್ವರನು ಭಕ್ತಯೋಗಿಯಾಗಿದ್ದುದೇನೋ ನಿಜ. ಅಂದರೆ ವೀರಶೈವ ಮತದಲ್ಲಿ ಉಕ್ತವಾಗಿರುವ ಲಿಂಗಾಂಗಸಾಮರಸ್ಯಜ್ಞಾನ ವನ್ನು ಪಡೆಯಲು ಕರ್ಮ, ಭಕ್ತಿ, ಜ್ಞಾನ, ಯೋಗ ಮಾರ್ಗಗಳಲ್ಲಿ ಒಂದಾದ ಭಕ್ತಿಮಾರ್ಗವನ್ನನುಸರಿಸಿ, ಲಿಂಗೈಕ್ಯವನ್ನು ಪಡೆದ ಮ ಹಾಮಹಿಮನು ಹೀಗಂದ ಮಾತ್ರದಿಂದಲೇ ಅವನು ಗುರುವರ್ಗದ ವರೆಲ್ಲರಿಗೂ ಭಕ್ತನೆಂಬರ್ಥವಲ್ಲ ಭಕ್ತಿಮಾರ್ಗವನ್ನನುಸರಿಸಿದ ಯಾರೊಬ್ಬರೂ ಭಕ್ತರೇ ಆಗುತ್ತಾರೆ; ಉದಾಹರಣೆಗಾಗಿ ಶ್ರೀ ರಂಭಾಪುರಿ ಸ್ವಾಮಿಗಳವರು ಶಿಷ್ಯವರ್ಗದವರೆಲ್ಲರಿಗೂ ಪೂಜ್ಯರಾ ಗಿದ್ದರೂ ಅವರೇ ತಮ್ಮಿಷ್ಟಲಿಂಗಾರ್ಚನೆಯನ್ನು ಮಾಡುವಾಗ ಭ ಕ್ತಿಯನ್ನು ಅವರೂ ತೋರಿಸುತ್ತಾರಾದುದರಿಂದ ತಮ್ಮಿಷ್ಟಲಿಂಗಕ್ಕೆ ಅವರೂ ಭಕ್ತನೆಂದು ಹೇಳುವುದಾದರೆ ಹೇಗೆ ನಗೆಗೀಡು ಗುವರೋ, ತದ್ವತ್ತು ಶ್ರೀ ಬಸವೇಶ್ವರನು ಕೂಡಲಸಂಗನ ಭಕ್ತನೆಂದು ಹೇಳಿ ಕೊಂಡ ಮಾತ್ರದಿಂದಲೇ ಶ್ರೀ ಬಸವೇಶ್ವರನೂ ಭಕ್ತನೆಂದು ಹೇ ಳುವ ಮಾತು ನಗೆಗೀಡಾಗಲೇಬೇಕು

ವೀರಶೈವ ಮತತತ್ವದ ಪ್ರಕಾರ ಪ್ರತಿಯೊಂದು ಜೀವಾತ್ಮ ವೂ ಪ್ರಗತಿಯನ್ನು ಹೊಂದಿದ ಹಾಗೆಲ್ಲಾ ಮಲಪಾಶಬಂಧಗಳಿಂದ ಮುಕ್ತವಾಗಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬವೇ ಷಟ್ಸ್ಥಲಗಳನ್ನೈದಿ ಸ್ವಸ್ವರೂಪ ಜ್ಞಾನದಿಂದ ಮೋ ಕ್ಷವನ್ನು ಪಡೆಯಬಲ್ಲನೆಂಬ ತತ್ವವಿರುವಾಗ ಪಾವನ ಚರಿತ್ರನಾದ ಶ್ರೀ ಬಸವೇಶ್ವರನು ಅಂತ್ಯದ ವರೆಗೂ ಭಕ್ತಸ್ಥಲದಲ್ಲೇ ಇದ್ದನೆಂದು ಹೇಳಲು ಕಾರಣಗಳಾದರೂ ಏನು? ಶ್ರೀ ಬಸವೇಶ್ವರನ ಜೀವನ ಚರಿತ್ರೆಯೇ ವೀರಶೈವ ಮತದ ಜೀವಾಳವಾದ ಷಟ್ಸ್ಥಲವನ್ನು ನಿ ದರ್ಶಿಸುತ್ತದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಭಕ್ತರು ತಾವು ಪೂಜ್ಯರೆಂದು ಭಾವಿಸಿರುವ ಗುರುವಿನಲ್ಲಿ ಸಕ ಲ ಕಲ್ಯಾಣಗುಣಗಳನ್ನೂ ಆರೋಪಿಸಿ ಆರಾಧಿಸುವುದು ಸಹಜ ವಾದುದೇ ಸರಿ. ಆದರೆ ಭಕ್ತರು ತಮ್ಮ ಭಕ್ತಿಯಿಂದ ಹಾಗೆ ಭಾ ವಿಸಿದಮಾತ್ರಕ್ಕೆ ಗುರುವು ತಾನು ಸರ್ವಶ್ರೇಷ್ಠನೆಂದುಬ್ಬಿದರೆ ಮ ಮಕಾರದಿಂದ ತುಂಬಿದವನೆಂಬ ಕಳಂಕಕ್ಕೆ ಗುರಿಯಾಗುವುದಿಲ್ಲ ವೆ? ನೀವೇ ಯೋಚಿಸಿ. ಅಲ್ಲದೆ ತಾನೇ ದೊಡ್ಡವನೆಂದೂ, ಪೂ ಜ್ಯನೆಂದೂ ವಿಜೃಂಭಿಸುವುದು ಸೌಜನ್ಯದ, ಗಾಂಭೀರ್ಯದ ಮ ತ್ತು ಮಹಿಮೆಯ ಚಿಹ್ನೆಯಲ್ಲ. ಏಸುಕ್ರಿಸ್ತನು—

'ತಾನು ಮೇಲೆಂದವನು ಕೀಳಾಗುವನು, ತಾನು ಕೀಳೆಂದವ ನು ಮೇಲಕೇರುವನು' 'ಒಡೆಯಾ ಒಡೆಯಾ ಎಂದು ನೀವೆನ್ನ ಕರೆ ಯುವಿರಿ, ನಾನಿನ್ನ ಪಾದಗಳ ತೊಳೆಯುವೆನು. ತಾನು ಮೊದಲಿ ಗನಾಗಬಯಸುವವನು ಎಲ್ಲರನು ನೆಂಬಿಸಲಿ ಆಳಾಗಿ ಮೊದಲು'

"ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ, ಕೀಳಾಗಲೊಲ್ಲದೆ ಹಯನು ಕರೆವುದೆ ಮೇಲಾಗಿ ನರಕದಲೋಲಾಡಲಾರೆನು, ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲ ಸಂಗವ. ದೇವಾ"—ಎಂಬ ಉದ್ಗಾರ ತೆಗೆದು,

"ಬ್ರಹ್ಮಪದವಿಯನ್ನೊಲ್ಲೆ ವಿಷ್ಣುಪದವಿಯನ್ನೊಲ್ಲೆ, ರುದ್ರಪ ದವಿಯನ್ನೊಲ್ಲೆ ನಾನು ಮತ್ತಾವ ಪದವಿಯನ್ನೊಲ್ಲೆನಯ್ಯಾ ಕೂಡಲ ಸಂಗಮದೇವಾ ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿ ಯನೆ ಕರುಣಿಸಯ್ಯ"

ಎಂದು ಕೈಂಕರ್ಯ ಪೂರಿತವಾಗಿ ನುಡಿದ ಅಂದಿನ ಆ ವಿನಯ ನಾದ ವೇ ಇಂದು ಬಸವಪ್ರೇಮಿಗಳ ಹೃದಯದಲ್ಲಿ ಬಸವೇಶ್ವರನನ್ನು ತಿರಸ್ಕರಿಸುವ ಯಾರೊಬ್ಬ ವೀರಶೈವನನ್ನೂ ಪುರಸ್ಕರಿಸಲಾಗದೆಂ ಬ ಸಿಂಹನಾದವಾಗಿ ಪರಿಣಮಿಸಿರುವುದು. ಮಹಾಶಯರೇ, ಶ್ರೀ ಬಸವೇಶ್ವರನು ಹೇಗೆ ಸರ್ವರಿಗೂ ಪೂಜ್ಯನಾಗಿರುವನೆಂದೂ, ಶ್ರೀ ಬಸವೇಶ್ವರನನ್ನ ಪೂಜ್ಯನೆಂದು ಒಪ್ಪುವುದರಿಂದ ಶ್ರೀಗಳವರ ಸ್ಥಾನಗೌರವಗಳಿಗೆ ಚ್ಯುತಿಯುಂಟಾಗಲಾರದೆಂದೂ, ಅದಕ್ಕೆ ಬದಲಾ ಗಿ ಅತಿಶಯ ಶೋಭೆ ಉಂಟಾಗುವುದೆಂದೂ ಪ್ರತಿಪಾದಿಸಿರುತ್ತೇನೆ.

ಶ್ರೀ ರಂಭಾಪುರಿ ಶ್ರೀಗಳವರೇ ಆಗಲಿ ಅವರ ಕಡೆಯವರೇ ಆಗಲಿ, ಹೇಳುವ ಮಾದವು ಆಸಮಂಜಸವಾಗಿರುವಂತೆ ನಮಗೆ ಭಾ ಸವಾಗಿರುವುದು. ಈ ಬಗೆಯ ಸಂದೇಹವನ್ನು ಪರಿಹರಿಸಕೊಡ ಬೇಕೆಂದು ಶಿಷ್ಯವರ್ಗದಲ್ಲಿ ಅನೇಕರು ಮಾಡಿದ ಪ್ರಾರ್ಥನೆಗಳೆಲ್ಲ ವೂ ಶ್ರೀಗಳವರಿಂದ ನೆರವೇರಲಿಲ್ಲ. ಒಂದು ವಿದ್ವತ್ಸಭೆಯನ್ನಾದ ರೂ ನೆರವೇರಿಸಿ, ಎರಡು ಪಕ್ಷಗಳ ಕಡೆಯ ಪಂಡಿತರನ್ನು ಸೇರಿಸಿ, ನಿಷ್ಪಕ್ಷಪಾತವಾಗಿ ವಿಷಯವನ್ನು ತರ್ಕಿಸಿ, ಶಾಸ್ತ್ರಸಮ್ಮತವಾಗಿ ತೀರ್ಮಾನಕ್ಕೆ ಬಂದು ಆದರಂತೆ ಎಲ್ಲರೂ ವರ್ತಿಸುವಂತೆ ಮಾಡಿ ಈಗ ನಡೆಯುತ್ತಿರುವ ಚಳುವಳಿಯನ್ನು ಕೊನೆಗಾಣಿಸಬೇಕೆಂದು ಮಾಡಿದ ನಮ್ಮ ಪ್ರಯತ್ನವು ಶ್ರೀ ರಂಭಾಪುರಿ ಸ್ವಾಮಿಗಳವರ ನಿರಾಕರಣೆಯಿಂದಲೇ ವಿಫಲವಾದುದು ಬಹು ಶೋಚನೀಯವಾದ ಸಂಗತಿಯು.

ಶತ್ಯಾರಣ ಸಮಾಜದವರೇ ಒಂದು ತೀರ್ಮಾನವನ್ನು ಮಾ ಡಬೇಕೆಂದು ಯೋಚಿಸಿ ಮೈಸೂರು ಡಿಸ್ಟ್ರಿಕ್ಟ್ ಕಾರ್ಯಕರ್ತರನ್ನು ನೆರ ವೇರಿಸಲ್ಪಟ್ಟಿತು ಈ ಸಮ್ಮೇಳನದವರು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರೂ ವೀರಶೈವ ಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರೂ ಆದ ಶ್ರೀಯುತ ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಬಾ ಗಲಕೋಟೆಯಲ್ಲಿ ಮೊನ್ನೆ ತಾನೆ ಜರುಗಿದ ಬಿಜಾಪುರ ಡಿಸ್ಟ್ರಿಕ್ಟ್ ಕಾರ್ಯಕರ್ತರಿನಲ್ಲಿ ತೀರ್ಮಾನವಾದ ಗೊತ್ತುವಳಿಗಳನ್ನೇ ಇಲ್ಲಿಯೂ ತೀರ್ಮಾನಿಸಿರುತ್ತಾರೆ ಈ ತೀರ್ಮಾನಗಳಿಗೆ ನೀವೂ ಬದ್ಧರಾಗಿರು ತ್ತೀರೆಂದು ನಾನು ಎಣಿಸುತ್ತೇನೆ. ಆದುದರಿಂದ ಆ ವಿಷಯದಲ್ಲಿ ಇನ್ನು ಹೆಚ್ಚಾಗಿ ಪ್ರಸ್ತಾಪಮಾಡಬೇಕಾದ ಅವಶ್ಯಕತೆ ಇರುವುದಿ ಲ್ಲ. ಏಕೆಂದರೆ ಮತಸಂಬಂಧವಾದ ನಂಬುಗೆಗಳು ಪ್ರತಿಯೊ ಬ್ಬನ ಅಂತಃಕರಣಕ್ಕೆ ಸೇರಿದವುಗಳಾದುದರಿಂದ ಪರಕೀಯರು ಒ ತ್ತಾಯಮಾಡಲು ಯಾವ ಅಧಿಕಾರವಿಲ್ಲವೆಂಬುದೇ ನನ್ನ ಭಾವನೆ. ಆದುದರಿಂದ ನಿಮಗೆ ಯಾವುದು ಸತ್ಯವೆಂದು ತೋರಿಬರುವುದೋ ಅದರಂತೆ ನಡೆದುಕೊಳ್ಳಿರಿ.

ಈಗ ಕೆಲವು ಕುಹಕಿಗಳು ವೀರಶೈವ ಸಮಾಜದಲ್ಲಿ ಗುರುವ ರ್ಗದವರ ಬೇರೆಜಾತಿಯೊಂದನ್ನು ಏಂಗಡಿಸಿ ಆ ಪಂಗಡದವರು ಮಾತ್ರ ಗುರುಗಳಾಗಲಿಕ್ಕೆ ಅರ್ಹರೆಂದು ಹೇಳುತ್ತಾರೆ. ಇದು ಏ ನ್ನು ಅಸಂಬದ್ಧವಾದುದು! ಭಕ್ತನನ್ನು ಗುರುವನ್ನಾಗಿ ಮಾಡು ವಂಥ ಸಾಮರ್ಥ್ಯವು ಗುರುವಿನಲ್ಲಿಲ್ಲದಿದ್ದರೆ ಅಂಥ ಗುರುವಿನಿಂದ ಭ ಕ್ತನಿಗಾದರೂ ಏನು ಪ್ರಯೋಜನ? ಗುರುವರ್ಗದವರ ಕಡೆಯವ ರೂ, ಶ್ರೀಗಳವರೂ ವರ್ಣಾಶ್ರಮ ಧರ್ಮವನ್ನು ವೀರಶೈವ ಸಮಾ ಜದಲ್ಲಿ ಪ್ರಚಾರಕ್ಕೆ ತರಲು ಸಂಧಾನಗಳನ್ನು ನಡೆಸುತ್ತಿರುವರು. ಈ ಚಳುವಳಿಯನ್ನು ನಿಗ್ರಹಿಸಿದ ಹೊರತು ಸಮಾಜದ ಏಳ್ಗೆಯಾ ಗುವಂತಿಲ್ಲ.

# ಕಾಕಾ ಕಾಲೇಲಕರರ ಸಪ್ತವರ್ಣ ವ್ಯವಸ್ಥೆ.

ಮಹಾಭಾರತದಲ್ಲಿಯ ಉಕ್ತಿಯಂತೆ ಪೂರ್ವದಲ್ಲಿ ಒಬ್ಬನೇ ದೇವನಿದ್ದನು. ಒಂದೇ ವೇದವಿದ್ದಿತು ಮತ್ತು ಒಂದೇ ವರ್ಣವಿದ್ದಿತು. ಆದರೆ ಜನರ ಕಾರ್ಯ ವರ್ತುಲವು ವಿಸ್ತಾರವಾಗಹತ್ತಿದಂತೆ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯ ಎಂಬ ಮೂರು ವರ್ಣಗಳಾದವು, ವೇದಗಳೂ ಋಕ್ ಯಜುಸ್ ಸಾಮವೆಂದು ಮೂರಾದವು. ಬರ ಬರುತ್ತ ಉಳಿದ ಜನಾಂಗದ ಸಂಪರ್ಕವು ಹೆಚ್ಚಿದಂತೆ ಶೂದ್ರ ವೆಂಬ ನಾಲ್ಕನೆಯ ವರ್ಣವೂ ಅಥರ್ವಣವೆಂಬ ನಾಲ್ಕನೆಯ ವೇದವೂ ಉಂಟಾದವು. ಈ ಪ್ರಕಾರವಾಗಿ ಧರ್ಮಶಾಸ್ತ್ರಗಳ ಹೇಳಿಕೆ.

ವರ್ಣಗಳು ಆಗಿನ ಕಾಲದಲ್ಲಿ ಗುಣಕ್ರಮದಿಂದಲೇ ಮಾಡಲ್ಪಟ್ಟಿದ್ದವು. ನಾಲ್ಕನೆಯ ವರ್ಣವೊಂದು ಸಂಬಂಧಿಸಲ್ಪಟ್ಟ ಕೂಡಲೆ ವರ್ಣದ ಅರ್ಥವು ಬಣ್ಣವೆಂದಾಯಿತು. ಮನುಷ್ಯನ ಮೈದೊಗಲಿನ ಬಣ್ಣದಿಂದ ವರ್ಣಗಳ ಭೇದವು ಎಣಿಸಲ್ಪಡಹತ್ತಿತು. ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯರು ಬಿಳಿಯ ಬಣ್ಣದವರಾದುದರಿಂದ ದ್ವಿಜರೆಂದೂ ಶೂದ್ರ ವರ್ಣದವರು ಕಪ್ಪು ಬಣ್ಣದವರಾದುದರಿಂದ ಸಂಸ್ಕಾರವಿಹೀನರೆಂದೂ ತಿಳಿಯಲ್ಪಡಹತ್ತಿದರು.

ಬಣ್ಣಗಳು ನಾಲ್ಕೇ ಎಂಬುದಕ್ಕೆ ಕಾರಣವೇನೆಂದರೆ ಪೂರ್ವ ಕಾಲದಲ್ಲಿ ಕಪ್ಪು, ಬಿಳುಪು, ಕೆಂಪು ಮತ್ತು ಹಳದಿ, ಇಷ್ಟೇ ಬಣ್ಣಗಳು ಗೊತ್ತಿದ್ದವು. ಇನೇ ಬಣ್ಣಗಳನ್ನು ಕಲ್ಪಿತ ರೂಪದಿಂದ ಆಗಿನ ಕಾಲದ ಜನರಿಗೆ ಅನ್ವಯಿಸಿದರೆಂದೂ ಕೆಲವರ ಅಭಿಪ್ರಾಯ. ಏನೇ ಇರಲಿ; ಆಗಿನ ಸಮಾಜ ವ್ಯವಸ್ಥೆಗೆ ತಕ್ಕಂತೆ ನಾಲ್ಕು ವರ್ಣಗಳು ಉಂಟಾಗಿ ಎಲ್ಲ ಕಾರ್ಯಗಳನ್ನು ಸುಗಮವಾಗಿ ಸಾಗಿಸುತ್ತಿದ್ದವು.

ಸದ್ಯದ ಸಮಾಜದ ಪ್ರಶ್ನೆಯು ಜಟಿಲವಾಗಹತ್ತಿದೆ. ಕಾರ್ಯ ಕ್ಷೇತ್ರವು ವಿಸ್ತಾರವಾಗಹತ್ತಿ ಭಿನ್ನ ಭಿನ್ನ ಕಾರ್ಯಗಳು ಅಸ್ತಿತ್ವದಲ್ಲಿ ಬರಹತ್ತಿವೆ. ಹೀಗಿದ್ದಾಗ್ಗೆ ಪೂರ್ವದ ನಾಲ್ಕೇ ವರ್ಣಗಳನ್ನು ನಂಬಿಕೊಂಡಿದ್ದರೆ ಕಾರ್ಯ ಸಾಗುವ ಬಗೆ ಹೇಗೆ? ಬಣ್ಣಗಳ ಮೇಲಿಂದಲೇ ಜಾತ್ಯಾವರ್ಣ ವ್ಯವಸ್ಥೆಯಾದುದಾಗಿದ್ದರೆ ಈ ಕಾಲಕ್ಕೆ ತಕ್ಕಂತೆ ಸಪ್ತವರ್ಣ ವ್ಯವಸ್ಥೆಯೇಕಾಗಬಾರದು? ಸೂರ್ಯನ ಕಿರಣಗಳು ಏಳು ಬಣ್ಣಗಳಿಂದ ಕೂಡಿಲ್ಲವೆ? ಕಾಮನಬಿಲ್ಲಿನಲ್ಲಿ ಏಳು ಬಣ್ಣಗಳು ಕಾಣುವದಿಲ್ಲವೆ? ಹಾಗೆಯೇ ಸಮಾಜವನ್ನು ಏಳು ವರ್ಣಗಳಲ್ಲಿ ಏಕೆ ವಿಂಗಡಿಸಬಾರದು? ಇದೇ ಕಾಕಾಜಿಯವರ ಸಪ್ತ ವರ್ಣ ವ್ಯವಸ್ಥೆಯ ಕಲ್ಪನೆಗೆ ಮೂಲವಾದುದು.

ಈ ಸಪ್ತವರ್ಣ ವ್ಯವಸ್ಥೆಯಲ್ಲಿ ಯಾವ ಯಾವ ಕಾರ್ಯದವರು ಯಾವ ವರ್ಣದಲ್ಲಿ ಸೇರಬೇಕು? ಇದನ್ನು ಶ್ರೀ ಕಾಲೇಲಕರರು ಈ ರೀತಿ ವಿಂಗಡಿಸಿದ್ದಾರೆ. ಅವರು ಒಂದೊಂದು ವರ್ಣ ವಿಭಾಗಕ್ಕೆ, ಕಾರ್ಯಕ್ಕೆ ತಕ್ಕಂತೆ, ಒಂದೊಂದು ಹೆಸರನ್ನು ಕೊಟ್ಟಿದ್ದಾರೆ.

(೧) **ಆಚಾರ್ಯ**—ಇದರಲ್ಲಿ ಜ್ಞಾನಶೋಧಕರು, ಧರ್ಮೋಪದೇಶಕರು, ಅಧ್ಯಾಪಕರು ಮತ್ತು ಜೀವನ ಪ್ರೇರಕರು ಬರುವರು. (೨) **ಕ್ಷತ್ರಿಯ**—ಸಮಾಜ ಪೋಷಕ, ಒಕ್ಕಲಿಗ, ತೋಟಿಗ, ನೇಕಾರ, ಖನಕ, ಕುರುಬ, ಗವಳಿಗ ಇವರು ಇರುವರು. (೩) **ಕಲ್ಪಿತ**—ಕೂಲಿ ಕೈಗಾರಿಕೆಗೆ ಬೇಕಾದ ಉಪಕರಣಗಳನ್ನು ಮಾಡುವವನು, ಕಲಾಜ್ಞಾನಿ, ಬಡಿಗ, ಕಮ್ಮಾರ, ಉಪ್ಪಾರ, ಪಥಿಕ, ವೈದ್ಯ, ಸಿಂಪಿಗ, ಲೇಖಕ ಮತ್ತು ಮೊಚ್ಚೆಗಾರರು ಸೇರುತ್ತಾರೆ (೪) **ವಣಿಕ**—ಸಾರ್ಥವಾಹ, (ಸಮಾನುಗಳನ್ನು ಒಯ್ಯುವವನು, ಜಂಗಡಿಕಾರ, ಕಾರ್ಯಾಲಯಗಳನ್ನು ನಡೆಯಿಸುವವ, ಚಿನಿವಾಲ ಇವರೆಲ್ಲರೂ ಕೂಡಿರುತ್ತಾರೆ. (೫) **ಧುರೀಣ**—ಸಂಚಾಲಕ, ವ್ಯವಸ್ಥಾಪಕ, ರಾಜ್ಯಕರ್ತ, ಮುಂದಾಳು, ಯೋಜಕ ಇವರೆಲ್ಲರು ಧುರೀಣ ವರ್ಣದವರೆನ್ನಬೇಕು. (೬) **ರಂಜಕ**—ಕಲಾಕುಶಲ, ಗಾಯಕ, ಚಿತ್ರಕಾರ, ಶಿಲ್ಪಿಗ, ಸಾಹಿತ್ಯ ಸೇವಕ, ನಟ ಇವರು ರಂಜಕ ವರ್ಣಿಗಳು. (೭) **ಭೃತ್ಯ**—ಪರಿಚಾರಕ, ಆಚಾರಿ, ಪೂಜಾರಿ, ಜೋವಿ (ಮೇಣ ಹೊರುವವ), ಕೂಲಿಕಾರ ಮತ್ತು ಸೇವಕರು.

ಈ ಪ್ರಕಾರದ ವಿಭಜನೆಯನ್ನು ಮಾಡಿ ಆಯಾ ಕಾರ್ಯಕರ್ತರನ್ನು ಆ ಆ ವರ್ಣಗಳಲ್ಲಿಯೇ ಏಕೆ ಹಾಕಬೇಕಾಗುವದೆಂಬುದನ್ನು ಸವಿಸ್ತಾರವಾಗಿ ವಿವೇಚಿಸಿರುವರು.

ಕಾಕಾಜಿಯವರ ಈ ಸಪ್ತವರ್ಣ ವ್ಯವಸ್ಥೆಯಲ್ಲಿ ಎರಡನೆಯ ವರ್ಣಕ್ಕೆ ಭರ್ತಾ ಎಂಬ ಹೆಸರನ್ನು ಏಕೆ ಕೊಟ್ಟಿರುವರೆಂಬುದು ಬಹುಜನ ವಾಚಕರಿಗೆ ಗೊತ್ತಾಗಲಿಕ್ಕಿಲ್ಲ. ಅವರ ಅಭಿಪ್ರಾಯದಂತೆ ಈ ವರ್ಣದವರೇ ಮುಖ್ಯವಾಗಿ ಸಮಾಜವನ್ನು ಪೋಷಿಸುವವರು (ಭರ-ಪೋಷಣೆಮಾಡು). "ಸೈನ್ಯವು ತನ್ನ ಹೊಟ್ಟೆಯ ಮೇಲಿಂದ ನಡೆಯುತ್ತದೆ" ಎಂಬ ನೆಪೋಲಿಯನ್ನನ ಹೇಳಿಕೆಯಂತೆ ಸಮಾಜ ಪೋಷಣೆಗೆ ಅನ್ನವೂ ನಂತರ ವಸ್ತ್ರವೂ ಅವಶ್ಯವಾದವುಗಳಾಗಿವೆ. ಒಕ್ಕಲಿಗನೇ ತನ್ನ ವಸ್ತ್ರಗಳನ್ನು ತಯಾರಿಸಿಕೊಳ್ಳಬಹುದಾದರೂ ಸೂಕ್ಷ್ಮ ವಸ್ತ್ರಗಳನ್ನು ಸಿದ್ಧಪಡಿಸಲು ಒಂದು ವಿಶಿಷ್ಟ ಜನಸಮುದಾಯವೇ ಬೇಕಾಗುತ್ತದೆ. ಆದರೂ ಅನ್ನವಾಗಲಿ, ವಸ್ತ್ರವಾಗಲಿ ಉದ್ಭಿಜ ಜನಿತವಾದುದರಿಂದ ಒಂದೇ ವರ್ಣದಲ್ಲಿ ಇರಬಲ್ಲವು. ಆದುದರಿಂದ ಇವಕ್ಕೆ ಭರ್ತಾ ಎಂಬ ಹೆಸರು ಕೊಡಲ್ಪಟ್ಟಿದೆ.

ಇನ್ನು ಆಚಾರಿ ಪೂಜಾರಿಗಳನ್ನು ಭೃತ್ಯ ವರ್ಣದಲ್ಲಿ ಸೇರಿಸಲ್ಪಟ್ಟಿದೆ. ಏಕೆಂದರೆ ಸಮಾಜದಲ್ಲಿ ಸ್ವಂತ ವಿಚಾರವಿಲ್ಲದ್ದರಿಂದ ಅನ್ಯರು ಹೇಳಿದ ಕೆಲಸವನ್ನಷ್ಟು ಮಾಡಿಕೊಂಡಿರುವ ಜನರ ಒಂದು ಪಂಗಡವೂ ಇರುವದು. ಅವರಿಗೇ ಪೂರ್ವಕಾಲದಲ್ಲಿ ಶೂದ್ರರೆಂಬ ಹೆಸರಿಡಲಾಯಿತು. ಪರಿಚಾರಕರಂತೆಯೇ ಆಚಾರಿ ಪೂಜಾರಿಗಳು, "ಎರಡನೆಯವರ ಸಲುವಾಗಿ ದೇವರ ಪೂಜೆಮಾಡುವದು, ಎರಡನೆಯವರ ಸಲುವಾಗಿ ಮಂತ್ರಗಳನ್ನು ಹೇಳುವದು ಇಲ್ಲವೆ ವಿಧಿಗಳನ್ನು ನೆರವೇರಿಸುವುದು, ಎರಡನೆಯವರ ಕೈಕೆಳಗೆ ಸಂಸ್ಕಾರದಲ್ಲಿ ಭಾಗವಹಿಸುವುದು, ಎರಡನೆಯವರು ಹೇಳಿದಂತೆ ಧರ್ಮಗ್ರಂಥಗಳನ್ನು ಪಠನಮಾಡುವುದು ಇಲ್ಲವೆ ಹೇಳುವುದು ಈ ಮೂಲಕ ಹೊಟ್ಟೆ ಹೊರೆದುಕೊಳ್ಳುತ್ತಿರುವದರಿಂದ ಅವರು ಶೂದ್ರ ಕರ್ಮಿಗಳೇ ಆಹುದು." ಆದುದರಿಂದ ಅವರನ್ನು ಭೃತ್ಯ ವರ್ಣದಲ್ಲಿ ಸೇರಿಸಲಾಗಿದೆ. ಶ್ರೀ ಕಾಲೇಲಕರರ ಹೇಳಿಕೆ. ಈ ವರ್ಣ ವ್ಯವಸ್ಥೆಯಲ್ಲಿ ಹೆಚ್ಚು ಕಡಿಮೆಯೆಂಬ ಕಲ್ಪನೆಯು ಸಹ ಇಲ್ಲ. ಇವು ಸಮಾಜ ವ್ಯವಸ್ಥೆಗೆ ತಕ್ಕವುಗಳಾಗುವದರಿಂದ ಸಪ್ತವರ್ಣಗಳನ್ನೂ ಮಾಡುವದೇ ಲೇಸೆಂದು ಅವರ ಅಭಿಪ್ರಾಯ.





ಶಾ ಶ. ೧೮೫೬ ನೆಯ ಕಾರ್ತಿಕ ಬ|| ೫ ಸೋಮವಾರ.

## ಚುನಾವಣೆಯ ಹೋರಾಟದಿಂದ ಗೊತ್ತಾದುದೇನು?

ಈ ತಿಂಗಳಲ್ಲಿ ಜರುಗಿದ ಅಸೆಂಬ್ಲಿಯ ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯು ಸೇರಿ ಹೋರಾಡಿತಷ್ಟೆ. ಈ ಹೋರಾಟದಲ್ಲಿ ರಾಷ್ಟ್ರೀಯ ಸಭೆಗಾದ ಅಪೂರ್ವವಿಜಯ, ಅದಕ್ಕಾಗಿ ರಾಷ್ಟ್ರೀಯ ಸಭೆಯ ಸಾವಿರಾರು ಸಾಹಸಿಗಳು ಮಾಡಿದ ದೀರ್ಘಪ್ರಯತ್ನ, ರಾಷ್ಟ್ರೀಯ ಸಭೆಯವರೆಂದು ಹೇಳಿಕೊಳ್ಳುವವರಲ್ಲಿ ಅನೇಕರು ಮಾಡಿದ ಭಾಷಣ, ಬರೆದ ಲೇಖನ ಮಾಡಿದ ನಡತೆ, ಅನ್ಯ ಪಕ್ಷಗಳಿಗಾದ ಅಪಜಯ ಮುಂತಾದವುಗಳನ್ನೆಲ್ಲಾ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದವರಿಗೆ ಗೊತ್ತಾದುದೇನು?

(೧) ರಾಷ್ಟ್ರೀಯ ಸಭೆಗೆ ರಾಷ್ಟ್ರದ ಸಂಪೂರ್ಣ ಬೆಂಬಲವಿದೆ. ಇದಕ್ಕೆ ಸಟ್ಟಣಗಳಂತೆಯೇ ಪಲ್ಲಿಗಳೂ ಸೇರಿವೆಯೆಂದು ಅದು ತನ್ನಲ್ಲಿ ಸ್ವಾರ್ಥತ್ಯಾಗದ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ.

(೨) ರಾಷ್ಟ್ರೀಯ ಸಭೆಯ ವಿಜಯ ಜ್ಯೋತಿಯು ಅಳರಸರ ಕಣ್ಣು ಕುಕ್ಕುವಷ್ಟು ದಿವ್ಯತರವಾಗಿದ್ದರೂ ಮುಸಲ್ಮಾನ್, ಯೂರೋಪಿಯನ್, ಕ್ರಿಶ್ಚಿಯನ್ ಎಂಬ ಜಾತೀಯ ಪ್ರತ್ಯೇಕ ಪ್ರತಿನಿಧ್ಯಗಳ ಬಲವಾದ ಉಪನೇತ್ರವು ಅಳರಸರಿಗಿರುವುದರಿಂದ ಈ ವಿಜಯ ಜ್ಯೋತಿಯು ಅವರ ಕಾರ್ಯಕ್ಕೆ ಪ್ರತಿಬಂಧಕವಾಗುವುದಿಲ್ಲ.

(೩) ಬಂಗಾಲ, ಪಂಜಾಬ, ಸಿಂಧ ಪ್ರಾಂತಗಳಲ್ಲಿಯು ಒಂದುಗಳಿಗೆ ಮಾತ್ರ ಮುಸಲ್ಮಾನರ ಪ್ರಾಬಲ್ಯಕ್ಕೆ ಸಹಾಯಕವಾಗಿರುವ ಈಗಿನ ಜಾತಿನಿರ್ಣಯವು ತಮಗೆ ತುಂಬಾ ಅನರ್ಥಕಾರಿಯೆಂದು ಮನವರಿಕೆಯಾಗಿದೆ.

(೪) ಬ್ರಾಹ್ಮಣೇತರವೆಂಬ ರಾಜಕೀಯ ಪಕ್ಷಕ್ಕೆ ಜನಬಲ ಇಷ್ಟವೇ ಇಲ್ಲ.

(೫) ಲಿಬರಲ್ ಅಥವಾ ಪ್ರಾಗತಿಕ ಪಕ್ಷವು ನಿರ್ಬಲವಾಗಿದೆ. ಅದಕ್ಕೆ ಜನಸಾಮಾನ್ಯರ ಬೆಂಬಲವಿಲ್ಲ

(೬) ಪಂಜಾಬ, ಬಂಗಾಲ, ಸಿಂಧ, ನಾರ್ಥಡಗಳಿಗೆ ಮಾತ್ರ ರಾಷ್ಟ್ರೀಯ ಸಭೆಯು ಜಾತಿನಿರ್ಣಯದ ವಿಷಯದಲ್ಲಿ ವಹಿಸಿದ ಮೌನ ವ್ರತವು ಮಾನ್ಯವಿಲ್ಲ. ರಾಷ್ಟ್ರೀಯ ಪಕ್ಷವೇ ಮಾನ್ಯ.

(೭)ಮುಂಬೈಯಲ್ಲಿ ಮದ್ರಾಸಿನಂತೆ ರಾಷ್ಟ್ರೀಯ ಸಭೆಗೆ ಸಂಪೂರ್ಣ ಬೆಂಬಲವಿಲ್ಲ.

(೮) ಎಲ್ಲಿ ಬ್ರಾಹ್ಮಣ ಬ್ರಾಹ್ಮಣೇತರವೆಂಬ ಧಾರ್ಮಿಕ ಅಥವಾ ಸಾಮಾಜಿಕ ಮಾತಿಲ್ಲವೋ ಅಲ್ಲಿ ಕೇವಲ ಜಾತಿಯ ಪ್ರಶ್ನೆಯೋ ಅಲ್ಲಿ ಬ್ರಾಹ್ಮಣೇತರರು ರಾಷ್ಟ್ರೀಯ ಸಭೆಯ ಹೆಸರಿನಿಂದ ಕೌನ್ಸಿಲ್ಲುಗಳಿಗೆ ಹುರಿಯಾಳುಗಳಾಗಿ ನಿಂತಿದೆ ಹೆಚ್ಚು ಮತಗಳು ದೊರೆಯುತ್ತವೆ.

(೯) ಹಿಂದುಗಳಲ್ಲಿ ಬಹುಮಟ್ಟಿಗೂ ಮುಸಲ್ಮಾನರಲ್ಲಿ ಅಲ್ಪಮಟ್ಟಿಗೂ ಜಾತಿಯ ಭಾವನೆಯು ರಾಜಕೀಯದಲ್ಲಿ ಕಡಿಮೆಯಾಗಿದೆ.

(೧೦) ಸನಾತನ ಪಕ್ಷ ಎಂಬ ಒಂದು ರಾಜಕೀಯ ಪಕ್ಷವು ರಾಜಕಾರಣದಲ್ಲಿ ಇರುವುದು ಶಕ್ಯವಿಲ್ಲ. ಲೋಕಶಾಹಿ ಎಂಬ ಪಕ್ಷಕ್ಕೂ ಜನಬಲ ಇಲ್ಲವೇ ಇಲ್ಲ.

(೧೧) ರಾಷ್ಟ್ರೀಯ ಸಭೆಯವರೇ ಜಯಶೀಲರಾಗಬೇಕೆಂದು ಅನೇಕರು ಸಮಯ ಬಂದಂತೆ ಹೇಳಿದುದು ಪ್ರತಿಪಕ್ಷದವರಿಗೆ ಮನನ ಮಾಡುವಂತೆ ಸಲ್ಲಿದ ಅವಮಾನಕರ ಲೇಖನ ಭಾಷಣಗಳನ್ನು ಸೂರೆಮಾಡಿದುದು ಧರ್ಮಾತ್ಮಾ ಮಾಲವೀಜಿಯವರಂತಹ ಪೂಜ್ಯ ರಾಷ್ಟ್ರೀಯ ವಿಭೂತಿಯ ವಿಷಯದಲ್ಲಿ ನಿಂದ್ಯ ಕೃತ್ಯಗಳನ್ನು ಆಚರಿಸಿದುದು ರಾಷ್ಟ್ರೀಯ ಸಭೆಯ ಸದಸ್ಯರಲ್ಲಿ ಬಹು ಜನರು ಸತ್ಯ ಅಹಿಂಸೆಗಳ ಶೀಲಯುಕ್ತರಾಗಿಲ್ಲವೆಂಬ ಗಾಂಧೀಜಿಯವರ ಅಭಿಪ್ರಾಯಕ್ಕೆ ದೃಷ್ಟಾಂತಗಳಾದವು.

(೧೨) ಇಂದಿನ ವಿಜಯದ ಹೆಮ್ಮೆ ಮುಂದಿನ ಅಪಜಯದ ಮೂಲವೆಂಬುದಾಗಲಿ ಪ್ರತಿಪಕ್ಷದವರ ನೆರೆಯಲ್ಲಿಯೇ ಅವರ ಸಹಾಯ ಸೌಕರ್ಯಗಳೊಡನೆ ರಾಷ್ಟ್ರೀಯ ಸಭೆಯ ಕಾರ್ಯವನ್ನು ಕೌನ್ಸಿಲ್ಲಿನ ಹೊರಗಡೆಯಲ್ಲಿಯೇ ಹಚ್ಚಾಗಿ ಮಾಡಬೇಕಾಗಿರುವುದರಿಂದ ತಮ್ಮ ವ್ಯಕ್ತಿ ದ್ವೇಷ ಅಥವಾ ಪಕ್ಷಾಂಧತೆಯಿಂದ ಪ್ರತಿಪಕ್ಷದವರನ್ನು ಅಲ್ಲಗಳೆಯುವುದು ರಾಷ್ಟ್ರೀಯ ಸಭೆಗೆ ಕುಂದಕ ಮತ್ತು ಅದರ ಕೆಲಸಕ್ಕೆ ಪ್ರತಿಬಂಧಕವೆಂಬುದಾಗಲಿ ರಾಷ್ಟ್ರೀಯ ಸಭೆಯ ಬಹುಜನ ಸಾಮಾನ್ಯ ಸದಸ್ಯರಿಗೆ ಇನ್ನೂ ತಿಳಿದಿಲ್ಲ

### ಅಭಿನಂದನ.

ಈ ಚುನಾವಣೆಯಲ್ಲಿ ಜಯಶೀಲರಾದ ರಾಷ್ಟ್ರೀಯ ಸಭೆಯ, ರಾಷ್ಟ್ರೀಯ ಪಕ್ಷದ, ಸ್ವತಂತ್ರ ಪಕ್ಷದ ಮತ್ತು ಪ್ರಾಗತಿಕ ಪಕ್ಷದ ಎಲ್ಲಾ ಪ್ರತಿನಿಧಿಗಳನ್ನೆಲ್ಲ ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ ಈ ಎಲ್ಲ ರಾಷ್ಟ್ರಭಕ್ತರೂ ಅಸೆಂಬ್ಲಿಯಲ್ಲಿ ಏಕಾಭಿಪ್ರಾಯದಿಂದ ಭಾರತ ಮಾತೆಯ ಪವಿತ್ರ ಸೇವೆಯನ್ನು ಮಾಡಿ ಅವಳ ದುರವಸ್ಥೆಯನ್ನು ದೂರಮಾಡುವರೆಂದು ನಂಬಿದ್ದೇವೆ

ರಾಷ್ಟ್ರ ಹಿತದೃಷ್ಟಿಯಿಂದ ಲಕ್ಷಾಂತರ ದೇಶಬಂಧುವರು ತಮ್ಮ ಮೇಲಿರುವ ಹೊಣೆಗಾರಿಕೆಯನ್ನು ತಿಳಿದುಕೊಂಡು ತಮ್ಮ ಸದಸದ್ವಿವೇಕ ಬುದ್ಧಿಗೆ ವಿಹಿತತೋರಿದಂತೆ ಅಯಾಯ ಪಕ್ಷದವರಿಗೆ ತಮ್ಮ ಮತಗಳನ್ನು ಕೊಟ್ಟು ಜಯಶಾಲಿಗಳಾಗಮಾಡಿದುದರಿಂದ ಅವರೆಲ್ಲರೂ ಧನ್ಯವಾದಾರ್ಹರು. ಈ ಚುನಾವಣೆಯಲ್ಲಿ ಹೋರಾ

# ಅಸೆಂಬ್ಲಿ ಚುನಾವಣೆಯ ಫಲಿತಾಂಶ.

## ರಾಷ್ಟ್ರೀಯ ಸಭೆಯ ಅಪೂರ್ವ ವಿಜಯ.

### ಕಾಂಗ್ರೆಸ್ಸಿನಿಂದ ಈ ವರೆಗೆ ೪೧ ಸಭಾಸದರು ಆರಿಸಿ ಬಂದರು.

### ಸಿಂಧ, ಪಂಜಾಬ, ಬಂಗಾಲ, ವಹಾರ್ಡಗಳಲ್ಲಿ ರಾಷ್ಟ್ರೀಯ ಪಕ್ಷಕ್ಕೆ ವಿಜಯ.

**ಕಾಂಗ್ರೆಸ್ಸಿನಿಂದ ಆರಿಸಿಬಂದವರು.**

**ಸಂಯುಕ್ತ ಪ್ರಾಂತ.**

೧ ಡಾ, ಭಗವಾನದಾಸ ೨ ಶ್ರೀ ಮುನಸಿ ಈಶ್ವರ ಶರಣ ೩ ಪಂ. ಗೋವಿಂದ ವಲ್ಲಭಪಂತ ೪ ಶ್ರೀ ರಘುವೀರಸಿಂಗ ಮಿರತ ೫ ಸರದಾರ ಜೋಗೇಂದ್ರಸಿಂಹ ೬ ಪಾಲಿವಾಲಾ ೭ ಟಿ. ಎ. ಕೆ. ಶೇರವಾಣಿ ೮ ಶ್ರೀ ಪ್ರಕಾಶ ೯ ಮೋಹನಲಾಲ ಸಕ್ಸೇನಾ

**ಬಿಹಾರ**

೧೦ ಶ್ರೀ ದೀಪನಾರಾಯಣಸಿಂಹ ೧೧ ಬಾಬು ಬಿಪಿನ ಬಿಹಾರಿ ೧೨ ಶ್ರೀ ಸತ್ಯನಾರಾಯಣಸಿಂಹ ೧೩ ಶ್ರೀ ಅನುಗ್ರಹ ನಾರಾಯಣಸಿಂಹ ೧೪ ಬಾಬು ಶ್ರೀಕೃಷ್ಣಸಿಂಗ ಗಯಾ

**ಮಧ್ಯಪ್ರಾಂತ.**

೧೫ ಶೇಟ ಶಿವದಾಸ ಡಾಗಾ ೧೬ ಬ್ಯಾ. ಅಭ್ಯಂಕರ

**ಮದ್ರಾಸ.**

೧೭ ಶ್ರೀ ಎಸ್. ಸತ್ಯಮೂರ್ತಿ ೧೮ ಸ್ವಾಮಿ ವೆಂಕಟಾಚಲಂ ಶೆಟ್ಟಿ ೧೯ ಶ್ರೀ ಕುಮಾರ ಸ್ವಾಮಿ ರಾಜ ೨೦ ಡಾ. ಟಿ ಎಸ್. ಎಸ್. ರಾಜಾ ೨೧ ಶ್ರೀ ಸ್ಯಾಮ್ಯುಅಲ್ ಆರ್ಯ ೨೨ ಶ್ರೀ ಮಧುರಂಗ ಮುದಲಿಯಾರ ೨೩ ಶ್ರೀ ಎ. ಜಿ. ರಂಗಾ ೨೪ ಶ್ರೀ ನಾಗೇಶ್ವರರಾವ ೨೫ ಶ್ರೀ ವಿ. ವಿ. ಗಿರಿ ೨೬ ಶ್ರೀ ಅವನಾಶಿ ಲಿಂಗಂ ೨೭ ಅನಂತ ಶಯನನ್ ಅಯ್ಯಂಗಾರ

**ಅಸಾಮ.**

೨೮ ಶ್ರೀ ಎಸ್. ಸಿ. ಬಾರ್ಡೊಲೊಯಿ. ೨೯ ಶ್ರೀ ವಸಂತ ಕುಮಾರದಾಸ

**ಗಡಿನಾಡು**

೩೦ ಡಾ. ಖಾನಸಾಹೇಬ

**ಪಂಜಾಬ.**

೩೧ ಲಾಲಾ ಶ್ಯಾಮಲಾಲ

**ದಿಲ್ಲಿ**

೩೨ ಬ್ಯಾ. ಆಸಫ ಅಲ್ಲಿ

**ಹಿಂದಿ ಮಧ್ಯಪ್ರಾಂತ.**

೩೩ ಸೇಟ ಗೋವಿಂದದಾಸ ೩೪ ಘನಶ್ಯಾಮಗುಪ್ತ

ಓರಿಸಾ—೩೫ ವಿ. ಬಿ. ದಾಸ ೩೬ ಶ್ರೀ ನೀಲಕಂಠದಾಸ

**ಕರ್ನಾಟಕ.**

೩೭ ಶ್ರೀ ಸಿದ್ಧಪ್ಪ ಕೊಸನುರ

**ಮುಂಬಯಿ.**

೩೮ ಡಾ|| ಜೀವರಾಜ ಮೆಹ್ತಾ ಭೂಲಾಭಾಯಿ ದೇಸಾಯಿ ಕೇಶವರಾವ ಜೇಧೆ ಎಸ್. ನಿಜಲಿಂಗಪ್ಪ ಗಾಡಗೀಳ

**ರಾಷ್ಟ್ರೀಯ ಪಕ್ಷದಿಂದ ಆರಿಸಿಬಂದವರು.**

ವಹಾರ್ಡ—೧ ಶ್ರೀ ಲೋಕನಾಯಕ ಅಣೆ ಬಂಗಾಲ— ೨ ಶ್ರೀ ಶರಶ್ಚಂದ್ರ ಬೋಸ ೩ ಡಾ|| ಪ್ರಮಥನಾಥ ಬಾನರ್ಜಿ ಬ್ಯಾ ಬಿ ಎಸ್ ಸಸ್ಮಲ್ ಪಂಜಾಬ—೪ ಸರದಾರ ಮಂಗಲಸಿಂಗ ೫ ಲಾಲಾ ಫಕೀರಚಂದ ಸಿಂಧ—೬ ಲಾಲಚಂದ ನವಲರಾಯ

ಬಂಗಾಲ—೭ ಶ್ರೀ ಲಕ್ಷ್ಮೀಕಾಂತ ಮೈತ್ರಾ

**ಹಿಂದುಮಹಾಸಭಾ**—(೧) ಪಂಜಾಬ—ಭಾಯಿ ಪರಮಾನಂದಜಿ

**ಸ್ವತಂತ್ರಪಕ್ಷ**—(೬) ಲಾಹೋರ—ಸರದಾರ ಸೇರಸಿಂಗ ಅಜಮೀರ—ಶೇಟ ಭಾಗಚಂದ ಸೋನಿ ಕೊಯಿ ಮುತ್ತೂರ—ಡಾ. ವರದರಾಜಲು ನಾಯಡು ಸಂಯುಕ್ತ ಪ್ರಾಂತ—ಮಹಾರಾಜಾ ವಿಜಯನಗರ ಮದ್ರಾಸ—ಕೊಲೆನಗೋಡದ ರಾಜೆ ಮುಂಬಯಿ ಶಹರ—ಎಚ್. ಪಿ. ಮೋದಿ. **ಪ್ರಾಗತಿಕಪಕ್ಷ**-ಸರ್ ಜಹಂಗಿರ.

**ಮುಸಲ್ಮಾನ**—(೨೫) ಅಲಾಹಾಬಾದ—ಮೌ. ಶೌಕತ ಅಲ್ಲಿ ಲಾಹೋರ—ಮಿ ಫಾಜಲ ಹಕ್, ಮಿ. ಖಲೀಫ ಲಧಿಫ ಗೌಬಾ ಅಂಬಾಲಾ—ಮಿ. ಸಯ್ಯದ ಗುಲಾಬ ಬೀಕನೌರಂಗ ಕಾಲಿಕತ್ತ—ಹಾಜಿ ಅಬ್ದುಲ ಸತರ ಇಸಾಕ ಕಲಕತ್ತಾ—ಸರ ಅಬ್ದುಲ ರಹಿಂ ಡಾಕಾ—ವೈಮನಸಿಂಗ ಮಿ. ಎ. ಎಚ್. ಗಝನವಿ ಅಸಾಮ—ಮಿ ಅಬ್ದುಲ ಮತೀನ ಚೌಧರಿ ಓರಿಸಾ—ಮಿ. ನೌಮನ ಮಹಮದ ಮುಂಬಯಿ ಶಹರ—ಬ್ಯಾ. ಜಿನ್ನಾ, ಮಿ ಆಸ್ಫರ್ಅಲಿ ಆಝಿಮ, ಮಿಯ್ಯಾ ಗಿಯಾಸುದ್ದೀನ, ಮಿ. ಬವ್ಲಅಝಮಾನ, ಮಿ. ಅಬ್ದುಲಹಫೀಜ ಮತ್ತು ಸರ ಮಹಮದ ಮೇಹರಶಹ ಬಿಹಾರ-ಓರಿಸಾ—ಮೌ. ಶಫೀ ದಾವುದಿ ಸಂಯುಕ್ತ ಪ್ರಾಂತ—ಡಾ. ಝಿಯಾ ಉದ್ದೀನ ಅಹಮದ ಮಧ್ಯಪ್ರಾಂತ—ಖಾನಸಾಹೇಬ ನಬಾಬ ಸಿದ್ದೀಕ ಅಲೀಖಾನ ಬೆರಾರ— ಮಿ. ಅಝರುಲ್ಲಿ ಕೊಹಿಲಖಂಡ—ಸರ ಮಹಮದ ಯಾಕೂಬ, ಮಿ. ಕರಿಮುಲ ರಾಜಾಖಾನ ಮಧ್ಯ ವಿಭಾಗ—ಮಿ. ಅಹಮದ ಇ. ಹಾಫರ ಸಿಂಧ—ಸರದಾರ ನಬಿ ಬಕ್ಷ ಭುತ್ತೊ, ಶೇಟ ಹಾಜಿ ಅಬ್ದುಲ ಹಾರುನ ಮದ್ರಾಸ—ಮಿ. ಉಮರಅಲ್ಲಿ ಶಹಾ

**ಜಮಿನಸದಾರ**—(೧) ಬಿಹಾರ-ಓರಿಸಾ—ರಾಜಾಬಹದ್ದೂರ ಹರಿಹರಪ್ರಸಾದ ನಾರಾಯಣಸಿಂಗ ಹಿಂದಿ ವ್ಯಾಪಾರಿ—(೧) ಕಲಕತ್ತಾ—ಶ್ರೀ ಬೈಜನಾಥ ಬಜೋರಿಯಾ

---

ಇದ ಡಾ. ಮುಂಜೆ, ಶ್ರೀ ಮುನಸಿ, ಶ್ರೀ ಕುಂಝರು, ಶ್ರೀ ವಾಲಜಿಂದ ಮೊದಲಾದ ಅನೇಕ ರಾಷ್ಟ್ರಭಕ್ತರು ಚುನಾವಣೆಯಲ್ಲಿ ಅಪಜಯಹೊಂದಿದ ಮಾತ್ರದಲ್ಲಿ ಅವರ ಈ ವರೆಗಿನ ದೇಶ ಸೇವೆ ಗೇನೂ ಕುಂದಿಲ್ಲವಿಲ್ಲ. ಇಂಥ ಮಹಾಶಯರು ಅಸೆಂಬ್ಲಿಯ ಹೊರಗಿದ್ದರೂ ಇವರಿಂದ ರಾಷ್ಟ್ರಸೇವೆಯು ವಿಶೇಷವಾಗಿ ಸಂಭವಿಸು ವುದೆಂದೇ ನಾವು ನಂಬಿದ್ದೇವೆ.

# ವಿವಿಧ ವರ್ತಮಾನ.

## ಡೊಂಬರ ಸ್ತ್ರೀಯ ದುರ್ಭಾಗ್ಯ.

ಬೆಳಗಾವಿಯಲ್ಲಿ ಕೆಲವು ದಿವಸಗಳ ಪೂರ್ವದಲ್ಲಿ ಬಾಯಜಾ ಎಂಬ ಡೊಂಬರ ಸ್ತ್ರೀಯು ಮನೆಮನೆಗೆ ಭಿಕ್ಷೆ ಬೇಡುತ್ತ ಖಂಜೀರ ಗಲ್ಲಿಯಲ್ಲಿ ಹೋಗುತ್ತಿರುವಾಗ್ಗೆ ಕೆಲ ಮುಸಲ್ಮಾನರು ಅವಳನ್ನು ಒಂದು ಮನೆಯಲ್ಲಿ ಒಯ್ದು ಬಲಾತ್ಕಾರದಿಂದ ನಿಕಾಮಾಡಿದರಂತೆ. ಅವಳ ಅತ್ತೆಯು ಪರಸ್ಥಳಕ್ಕೆ ಹೋಗಿದ್ದಳು. ಗಂಡನು ಬಂದು ೩-೪ ದಿವಸ ಹುಡಿಕಿ ಕಡೆಗೆ ತನ್ನ ಹೆಂಡತಿಯು ಖಂಜೀರಗಲ್ಲಿಯಲ್ಲಿರುವಳೆಂದು ತಿಳಿಯಿತು. ಅವನು ತನ್ನ ಹೆಂಡತಿರುವ ಮನೆಯನ್ನು ಪ್ರವೇಶಿಸುವ ಪ್ರಯತ್ನದಲ್ಲಿರುವಾಗ್ಗೆ ಅವನ ತಾಯಿಯು ಕೊಲೆಯಾದೀತೆಂಬ ಭಯದಿಂದ ಅವನನ್ನು ಜಗ್ಗಿಕೊಂಡಳು. ಕಡೆಗೆ ನಿರ್ಬಂಧದಲ್ಲಿದ್ದ ಆ ಸ್ತ್ರೀಯು ಕಂಡವರಿಗೆಲ್ಲ ತನ್ನ ದುರ್ಭಾಗ್ಯ ಸ್ಥಿತಿಯನ್ನು ಹೇಳಹತ್ತಲು ಒಬ್ಬನು ಅವಳಿಗೆ ಹುಜುರ ಡಿಪ್ಯುಟಿ ಕಲೆಕ್ಟರ ರಾ. ಸಾ. ಗಿಲಗಂಚಿಯವರ ಕಚೇರಿಯನ್ನು ತೋರಿಸಿದನು. ಅವಳು ರಾ. ಸಾ. ಗಿಲಗಂಚಿಯವರಿಗೆ ಬೇಡಿಕೊಳ್ಳಲು ಅವಳ ವ್ಯಾಜ್ಯವನ್ನು ನಿರ್ಣಯಿಸುವದಕ್ಕಾಗಿ ಅವರು ಆಶ್ವಾಸನೆ ಕೊಟ್ಟರು. ಈ ಡೊಂಬರ ಸ್ತ್ರೀಗೆ ಯೋಗ್ಯ ನ್ಯಾಯವು ದೊರೆಯುವಂತೆ ಪ್ರಯತ್ನವಾಡುವದು ಪ್ರತಿಯೊಬ್ಬ ಬೆಳಗಾವಿ ನಾಗರಿಕನ ಕರ್ತವ್ಯವಾಗಿದೆಯೆಂದು ಅಲ್ಲಿಯ "ತರುಣ ಭಾರತ" ಪತ್ರಿಕೆಯು ಅನ್ನುತ್ತದೆ.

## ಕೃತ್ರಿಮ ನಾಣ್ಯವನ್ನು ಪರೀಕ್ಷಿಸುವ ಯಂತ್ರ.

ಆಸ್ಟ್ರೇಲಿಯಾ ಖಂಡದ ಒಂದು ಬ್ಯಾಂಕಿನಲ್ಲಿ ನಡೆಯದ ನಾಣ್ಯಗಳನ್ನು ಕಂಡುಹಿಡಿಯುವ ಒಂದು ಯಂತ್ರವನ್ನು ನಿರ್ಮಿಸಿರುವರು. ಇದರಲ್ಲಿ ನಡೆಯುವ ನಾಣ್ಯ ಹಾಕಿದರೆ ಯಂತ್ರದಲ್ಲಿ ಕೂಡ್ರಿಸಿರುವ ಮುಳ್ಳು ಮೇಲೆ ಬರುತ್ತದೆ, ನಡೆಯದ ನಾಣ್ಯವಿದ್ದರೆ ಆ ಮುಳ್ಳು ಶೂನ್ಯದ ಮೇಲೆ ಬರುತ್ತದೆ.

ಇದೇ ಕಾರ್ಯಕ್ಕಾಗಿ ಜರ್ಮನಿಯ ಟಂಕಸಾಲಿಯವರು ಒಂದು ವಿಶಿಷ್ಟ ಪ್ರಕಾರದ ಕ್ಯಾಮರಾ ತಯಾರುಗೊಳಿಸಿದ್ದಾರೆ. ಆ ಕ್ಯಾಮರಾದ ಸಹಾಯದಿಂದ ನಾಣ್ಯಗಳ ಮೇಲಿನ ಅತಿ ಸೂಕ್ಷ್ಮ ರೇಖೆಗಳೂ ಕಲೆಗಳೂ ಮೂಡುವಂತೆ ಫೋಟೊ ತೆಗೆದುಕೊಳ್ಳಲು ಬರುತ್ತದೆ. ಟಂಕಶಾಲೆಯಲ್ಲಿ ಉಂಟಾದ ನಾಣ್ಯಗಳ ಮೇಲಿನ ಹೊಳಪುಗಳೆಲ್ಲ ಒಂದೇ ತೆರನಾಗಿರುವದರಿಂದ ಕೃತ್ರಿಮ ನಾಣ್ಯವಾವುದೆಂಬುದನ್ನು ಗುರುತಿಸಲು ಅಸ್ಪದವಾಗುತ್ತಿದೆ.

## ಒಬ್ಬ ಹಿಂದು ತರುಣಿಯ ಕರುಣಾಕಥೆ.

ನೌಖಾಲಿ (ಬಂಗಾಲ) ಹತ್ತರ ಒಂದು ಹಳ್ಳಿಯಲ್ಲಿ ಕುಮುದಿನೀ ಎಂಬ ಹೆಸರಿನ ಒಬ್ಬ ಅವಿವಾಹಿತ ತರುಣಿಯು ತನ್ನ ತಾಯಿತಂದೆಗಳೊಡನೆ ಇರುತ್ತಿದ್ದಳು. ಒಂದು ದಿವಸ ಅವಳ ತಂದೆಯು ಪರಗ್ರಾಮಕ್ಕೆ ಹೋಗಿರುವದನ್ನು ಸಾಧಿಸಿ ಅವರು ರಾತ್ರಿ ಮಲಗಿಕೊಂಡಿರುವಾಗ ೩-೪ ಮುಸಲ್ಮಾನರು ಆ ಮನೆಯನ್ನು ಪ್ರವೇಶಿಸಿದರು. ಮೊದಲು ಅವರು ಅವಳ ತಾಯಿಯ ಬಾಯನ್ನು ಮುಚ್ಚಲು ಪ್ರಯತ್ನಿಸಿದರು. ಅವಳಿಗೆ ಎಚ್ಚರವಾಗಿ ಚೀರಾಡಹತ್ತಲು ಕುಮುದಿನಿಯೂ ಎಚ್ಚರಗೊಂಡು ಆಕ್ರೋಶ ಮಾಡಹತ್ತಿದಳು. ಆಗ್ಗೆ ಅವರು ಬಲತ್ಕಾರದಿಂದ ಅವಳನ್ನು ಹೊತ್ತುಕೊಂಡು ಹೊಲದಲ್ಲಿ ಹೋದರು. ಕುಮುದಿನಿಯು ಒದ್ದಾಡಿದಳು; ಚೀರಾಡಿದಳು. ಅವಳು ಚೀರುವ ಧ್ವನಿಕೇಳಿ ಅವಳ ಕಕ್ಕನ ಮಗನಾದ ಅಭಿಮನ್ಯು ಎಂಬವನು ಧಾವಿಸಿ ಬಂದನು. ಆವರು ಅವನ ಮೇಲೆ ಡೊಣ್ಣೆಗಳನ್ನು ಎಸೆಯಹತ್ತಿದರೆ, ಅಭಿಮನ್ಯುವು ಹಿಂಜರಿಯದೆ ಕೆಲವು ಕಾಲದನಂತರ ಒಳ್ಳೇ ಗಟ್ಟಿಗತನದಿಂದ ಅವರನ್ನು ಕಡೆದನು. ಅಷ್ಟರಲ್ಲಿ ಹಳ್ಳಿಯ ಜನರೆಲ್ಲ ಕೋಲುಗುದಿಗೆಗಳನ್ನು ತೆಗೆದುಕೊಂಡು ಓಡುತ್ತ ಬರುವದನ್ನು ಕಂಡು ಅವರು ಕುಮುದಿನಿಯನ್ನು ಬಿಟ್ಟುಕೊಟ್ಟು ಪಾರಾದರು. ಪೋಲೀಸರು ನಂತರ ಬಂದು ಶೋಧಮಾಡಲಾಗಿ ಅವಳನ್ನು ಹೊತ್ತು ಒಯ್ದ ಮುಸಲ್ಮಾನ ಗುಂಡರು ಅವರ ನೆರೆಮನೆಗಳಲ್ಲಿಯೇ ವಾಸಿಸುತ್ತಿದ್ದವರೆಂದು ಕಂಡುಬಂದಿತು.

ಹಿಂದುಗಳು ಇನ್ನಾದರೂ ತಮ್ಮ ಭ್ರಮೆಯನ್ನು ಬಿಟ್ಟು ಆತ್ಮರಕ್ಷಣೆಯನ್ನುಂಟುಮಾಡಿಕೊಳ್ಳಲು ಸಂಘಟನೆಯನ್ನೂ ಶಕ್ತಿಯನ್ನೂ ಪಡೆಯುವರೆ?

## ಸುಂದರ ಮುಖವಾಗಬೇಕೆ?

ಹಲ್ಲು ಬಿದ್ದರೆ ಹಲ್ಲು ಹಾಕುವದು, ಕಣ್ಣು ಹೊದರೆ ಕಣ್ಣು ಕೂಡ್ರಿಸುವದು, ಇವೆಲ್ಲ ಹಳೆಯ ಮಾತಾದವು. ಈಗೊಂದು ಹೊಸ ಶೋಧ. ಮುಖವು ವೈಲಿಬೇನೆಯಿಂದ ಹುಳುಕಾಗಿದ್ದರೆ, ಮೂಗು ಕೊಯ್ದು ವೊಂಡಾಗಿದ್ದರೆ, ತುಟಿ ಹರಿದಿದ್ದರೆ ಅಥವಾ ಮೋರೆ ಸುಟ್ಟು ವಿದ್ರೂಪವಾಗಿದ್ದರೆ ಇವುಗಳೆಲ್ಲವನ್ನೂ ಈಗ ಸರಿಪಡಿಸಿಕೊಳ್ಳುವ ಶೋಧವಾಗಿದೆ. ಅದೇನಂದರೆ ಮೋರೆ ಸುಟ್ಟದ್ದರೆ ಸುಟ್ಟ ತೊಗಲು ಮಾಂಸಗಳನ್ನು ಕೊಯ್ದು ತೆಗೆದು ಆ ಸ್ಥಾನದಲ್ಲಿ ಶರೀರದ ಬೇರೊಂದು ಭಾಗದಿಂದ ಅಂದರೆ ತೊಡೆಯ ಮಾಂಸವನ್ನು ಮತ್ತು ತೊಗಲನ್ನು ತೆಗದು ಹಾಕಿ ಹೊಲಿಯುತ್ತಾರೆ. ಇದರಿಂದ ದುರ್ಮುಖವು ಹೋಗಿ ಸುಂದರವಾಗುತ್ತದೆ. ಹೀಗೆಯೇ ಕಿವಿ, ಮೂಗು, ತುಟಿಗಳ ಊನವು ಹೋಗಿ ಸರಿಯಾಗುತ್ತವೆ. ವೈಲಿಯ ಕಲೆಯಂತೂ ಪೂರ್ಣ ಹೋಗಿ ಮುಖವನ್ನು ನೋಡಿದರೆ ವೈಲಿ ಎದ್ದಂತೆ ಕಾಣುವದೇ ಇಲ್ಲ. ಕೈ ಕಾಲು ಮುರಿದಿದ್ದರೆ ಕೂಡ್ರಿಸಲಿಕ್ಕೆ ಬರುತ್ತದೆ. ಬೊಟ್ಟು ಕತ್ತರಿಸಿದ್ದರೆ ಪುನಃ ಹಾಕಲು ಬರುತ್ತದೆ. ಅದರ ಉಗುರುಗಳು ಸಹ ಬೆಳೆಯುತ್ತವೆ. ಅಣ್ಣ ತಮ್ಮಂದಿರ ಮಾಂಸವನ್ನೂ ರೋಗಿಗೆ ಉಪಯೋಗಿಸಲು ಬರುತ್ತದೆ. ದನಗಳ ಮಾಂಸ ಬರುವದಿಲ್ಲ.

## ರಾಜಮಾರ್ಗಕ್ಕೆ ಕಬ್ಬಿಣ ಹಾಕುವದು.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಹನದ ಓಡಾಟದಿಂದ ಯಾವ ಮಾರ್ಗವೂ ಬಹು ದಿವಸ ಕಡೆಯದಂತಾಗಿವೆ. ಹರಳು ಡಾಂಬರಿನ ಪ್ರಯೋಗವನ್ನೂ ಸಿಮೆಂಟಿನ ಪ್ರಯೋಗವನ್ನೂ ಮಾಡಿದ್ದಾಯಿತು. ಅವು ಸಹ ನಡೆಯದಂತಾದವು. ಸರಕುಗಳನ್ನು ಹೇರುವ ಡಬಲ್ ಟಾಯರಿನ ಮೋಟಾರುಗಳ ಓಡಾಟಕ್ಕೆ ಇಂಥ ಮಾರ್ಗಗಳೂ ಬಿಚ್ಚಬೀಳುವವು. ಅದಕಾರಣ ಅಮೇರಿಕೆಯಲ್ಲೊಬ್ಬ ಶೋಧಕನು ರಾಜಮಾರ್ಗಗಳಿಗೆ ಕಬ್ಬಿಣ ಹಲಿಗೆಗಳನ್ನು ಕೂಡ್ರಿಸುವ ಯೋಜನೆ ಮಾಡಿರುವನು. ಈ ಕಬ್ಬಿಣ ಹಲಿಗೆಗಳು ಭಿನ್ನ ಭಿನ್ನ ಆಕಾರದವಿದ್ದು ಅವುಗಳ ಮೇಲ್ಭಾಗವು ಹುರುಬರಕಾಗಿರುವದು. ಇಂಥ ಮಾರ್ಗಗಳಾದರೆ ಮೇಲಿಂದ ಮೇಲೆ ಮಾರ್ಗಗಳು ಕೀಳುವ ಸಂಭವವೂ ಇಲ್ಲ ಹಾಗೂ ಮೇಲ್ಮೈಯು ಹುರುಬರಕಾಗಿರುವುದರಿಂದ ಗಾಲಿಗಳು ಜಾರುವ ಸಂಭವವೂ ಇಲ್ಲ. ಆದರೆ ಇವುಗಳ ವೆಚ್ಚವು ಈಗಿನ ಎರಡರಷ್ಟು ಆಗುತ್ತದೆ. ಈಗಾಗಲೆ ಅಮೇರಿಕೆಯಲ್ಲಿ ಈ ಹಲಿಗೆಗಳನ್ನು ಹೊಯ್ಯುವ ಕಾರ್ಯವು ನಡೆದಿದ್ದು ಅಲ್ಲಲ್ಲಿ ಮಾರ್ಗಗಳೂ ಮಾಡಲ್ಪಟ್ಟಿವೆ. ಯುರೋಪವು ಇದೇ ಮಾರ್ಗಗಳನ್ನು ಮಾಡಿಸುವ ಯೋಜನೆಮಾಡಿದೆ. ಫ್ರಾನ್ಸ ದೇಶದಲ್ಲಿ ಪ್ಯಾರಿಸದಿಂದ ಮಾರ್ಸೆಲ್ಸದ ವರೆಗೆ ೫೦೦ ಮೈಲು ಅಂತರದ ಮಾರ್ಗವನ್ನು ಹೊಯ್ದ ಕಬ್ಬಿಣದಿಂದ ಹೊಚ್ಚಬೇಕೆಂಬ ಯೋಜನೆಯು ಮಾಡಲ್ಪಟ್ಟಿದೆ.

### ಸರ್ಪ ವಿಷದ ಉಪಯೋಗ.

ವಿಷವೆಂದರೆ ನೀಲಕಂಠನೊಬ್ಬನನ್ನು ಬಿಟ್ಟು ಯಾರಿಗೂ ಬೇಡ. ಅದರೆ ಈಗ ವಿಷವನ್ನು ಕೂಡಿಹಾಕಲು ಯುರೋಪದ ಜನರು ಹಿಂದುಸ್ಥಾನಕ್ಕೆ ಬರಬೇಕಾಗಿದೆ. ಯಾಕೆಂದರೆ ವಿಷದ ಉಪಯೋಗವು ಅವರಿಗೆ ಅವಗತವಾಗಿದೆ. ಖಾರದಿಂದ ಖಾರವನ್ನು ಕಳೆಯುವಂತೆ, ಮುಳ್ಳಿನಿಂದ ಮುಳ್ಳು ತೆಗೆಯುವಂತೆ ವಿಷದಿಂದ ವಿಷವನ್ನು ನಾಶಪಡಿಸುವ ರೀತಿಯು ಶೋಧವಾಗಿದೆ. ಮುಂಬಯಿಯಲ್ಲಿಯೂ ಈ ತರದ ಒಂದು ಪ್ರಯೋಗ ಶಾಲೆಯು ಉಂಟಾಗಿದೆ. ಈ ಪ್ರಯೋಗದಿಂದ ಮಲಬಾರ ಮೊದಲಾದ ಭಾಗಗಳಿಂದ ಭಯಂಕರ ವಿಷಸರ್ಪಗಳನ್ನು ಹಿಡಿದು ಅವುಗಳ ತಲೆಯ ಒಂದು ವಿಶಿಷ್ಟ ಸ್ಥಾನದಲ್ಲಿ ಒತ್ತುತ್ತಾರೆ. ಅದರಿಂದ ಅವು ವಿಷವನ್ನು ಕಾರುತ್ತವೆ. ಆ ಕಾರಿದ ವಿಷವನ್ನು ಉಪ್ಪಿನ ನೀರಿನಲ್ಲಿ ಕರಗಿಸುತ್ತಾರೆ. ಆ ಮಿಶ್ರಣದ ಸ್ವಲ್ಪಾಂಶವನ್ನು ಕುದುರೆಯ ರಕ್ತದಲ್ಲಿ ಚುಚ್ಚಿ ಹಾಕುತ್ತಾರೆ (Injection). ಹೀಗೆಯೇ ದಿನ ದಿನಕ್ಕೆ ಹೆಚ್ಚು ಹೆಚ್ಚಿಗೆ ಮಿಶ್ರಣವನ್ನು ಚುಚ್ಚಿಹಾಕುತ್ತ ಆರು ತಿಂಗಳ ವರೆಗೆ ಬಿಡುತ್ತಾರೆ. ಆ ಮೇಲೆ ಆ ಕುದುರೆಯ ಶಿರವನ್ನು ಕೊಯ್ದು ಆ ಕ್ಯಾರಿಟ್ ರಕ್ತವನ್ನು ತೆಗೆದುಕೊಳ್ಳುತ್ತಾರೆ. ಆ ರಕ್ತವನ್ನು ಶಾಸ್ತ್ರೀಯ ರೀತಿಯಿಂದ ಶುದ್ಧಗೊಳಿಸಿ ಒಣಗಿಸುತ್ತಾರೆ. ಒಣಗಿದ ರಕ್ತದ ಮೇಲೆ ಒಂದು ವಿಶಿಷ್ಟ ದ್ರವ್ಯದ ತರವು ಕುಳಿತಿರುತ್ತದೆ. ಅದೇ ವಿಷಕ್ಕೆ ಪ್ರತಿವಿಷವು.

ಈ ಪ್ರತಿವಿಷವನ್ನು ಅಪಸ್ಮಾರರೋಗ, ಕುಷ್ಠರೋಗ, ಕ್ಯಾನ್ಸರ್, ಕ್ಷಯ ಮೊದಲಾದ ಭಯಂಕರ ರೋಗಗಳ ಮೇಲೆ ಪ್ರಯೋಗಿಸಿದಲ್ಲಿ ಅವು ವಾಸಿಯಾಗುತ್ತವೆಂದು ಕಂಡುಬಂದಿದೆ. ಅಂದ ಮೇಲೆ ಜಗತ್ತಿನಲ್ಲಿ ಉಪಯೋಗವಿಲ್ಲದ್ದು ಯಾವದು ಇರುತ್ತದೆ?

### ಉತ್ತರ ಹಿಂದುಸ್ಥಾನದಲ್ಲಿ ಭೂಕಂಪ.

೧೫ ನೆಯ ತಾರೀಖಿನ ದಿವಸ ಮುಂಜಾನೆ ೯ ಗಂಟೆಗೆ ಪೇಶಾವರದಲ್ಲಿ ಭೂಕಂಪದ ಆಘಾತವಾಯಿತು. ಇದು ಕೇವಲ ಅರ್ಧ ನಿಮಿಷ ನಡುಗಿಸಿತು. ಮೊದಲು ಭೂಕಂಪವು ಯಾರಿಗೂ ಅನಿಸದಿದ್ದರೂ ಕಟ್ಟಕಡೆಗೆ ಬಲವಾಗಿ ಆಘಾತಗಳುಂಟಾದುದರಿಂದ ಜನರೆಲ್ಲ ಭಯಭೀತರಾಗಿ ಹೊರಗೆ ಓಡಿಹೋದರು. ಇಲ್ಲಿಯವರೆಗಾದ ಭೂಕಂಪದ ಆಘಾತಗಳಲ್ಲಿ ಇಷ್ಟು ಬಲವಾದ ಆಘಾತವು ಎಂದೂ ಉಂಟಾಗಿದ್ದಿಲ್ಲ.

ಅದೇ ದಿವಸ ಲಾಹೋರಿನಲ್ಲಿಯೂ ಭೂಕಂಪವಾಯಿತು. ಅದರಿಂದ ಮನೆಯ ಮೇಲಿನ ಚಪ್ಪರಗಳೂ ಮತ್ತು ಮನೆಯೊಳಗಿನ ಪದಾರ್ಥಗಳೂ ಅಲ್ಲಾಡಿದವು. ಜನರಿಗೇನೂ ಅಪಾಯವಾಗಿಲ್ಲ.

ಭೂಗರ್ಭ ಶಾಸ್ತ್ರಜ್ಞರ ಮತದಂತೆ ಹಿಂದುಸ್ಥಾನದಲ್ಲಿ ಅನೇಕ ಕಡೆ ಭೂಕಂಪನವಾಗುವ ಶಕ್ಯತೆಯಿಲ್ಲದಿದ್ದರೂ ಇಷ್ಟೊಂದು ಭೂಕಂಪವಾಗುತ್ತಿರುವದು ಕಾಲಗತಿಯಿರಬಹುದೇ?

### ಪರದೇಶಗಳಲ್ಲಿಯ ಅಸರ್ಥ.

ಭಯಂಕರ ಬಿರುಗಾಳಿಯಿಂದ ಪ್ಯಾಸಿಫಿಕ್ ಮಹಾಸಾಗರದೊಳಗಿರುವ ಫಿಲಾಪಾಯಿನ್ಸ್ ದ್ವೀಪಗಳಲ್ಲಿ ಸಮುದ್ರವು ಪ್ರಳಯಸಿ ೩೦೦ ಜನರು ಮೃತಪಟ್ಟರುವರು. ಲುಝೂನ ದ್ವೀಪದಲ್ಲಿ ೩೦ ಜನರು ಸತ್ತರು ಈ ಸುದ್ದಿಯನ್ನು ಕೇಳಿ ರೆಡ್‌ಕ್ರಾಸ್ ಸಂಸ್ಥೆಯ ಸ್ವಯಂಸೇವಕರು ಸಂಕಟದಲ್ಲಿ ಸಿಲ್ಕಿದವರಿಗೆ ಸಹಾಯಮಾಡುವದಕ್ಕಾಗಿ ಕಳಸಲ್ಪಟ್ಟಿದ್ದಾರೆ.

ಇದರಂತೆಯೇ ದಕ್ಷಿಣ ಅಫ್ರಿಕೆಯಲ್ಲಿ ಕ್ಲಾರ್ಕ್ಸಬೆರಿ ಎಂಬಲ್ಲಿ ಒಂದು ಸೆರೆಯ ಅಂಗಡಿಯಲ್ಲಿ ಜನರು ಸೆರೆ ಕುಡಿಯುತ್ತಿರುವಾಗ ಸಿಡಿಲು ಬಿದ್ದು ಅದರ ಆಘಾತಕ್ಕೆ ೬೧ ಜನರು ಸತ್ತರು. ಮೂರು ಜನರು ಮೂರ್ಛಿತರಾಗಿದ್ದು ಹಿಂದಿನಿಂದ ಎಚ್ಚರಹೊಂದಿದರು.

ಸೆರೆ ಕುಡಿಯುವದು ದೇವರಿಗೂ ಸಹಿ ಬೇಸರವಾಯಿತು.

### ಕಪುರ್ಥಳಾ ಸಂಸ್ಥಾನದಲ್ಲಿ ಅಶಾಂತಿ.

ಕಪುರ್ಥಳಾ ಸಂಸ್ಥಾನದಲ್ಲಿಯ ಶೀಖ ಮತ್ತು ಹಿಂದುಗಳು ಕೂಡಿ "ಸಂಸ್ಥಾನದ ಮುಖ್ಯ ಮಂತ್ರಿಯಾದ ಸರ ಅಬ್ದುಲ ಹಮೀದ ಇವರನ್ನು ಆ ಕೆಲಸದಿಂದ ನಿವೃತ್ತರನ್ನಾಗಿ ಮಾಡದಿದ್ದರೆ ಜನತೆಯ ಅಹಿತವುಂಟಾಗುವುದರಿಂದ ೧೬ ನೆಯ ತಾರೀಖಿಗೆ ಅವರನ್ನು ಬಿಡಿಸಲೇಬೇಕು; ಇಲ್ಲದಿದ್ದರೆ ಕಟ್ಟಳೆಯ ಪ್ರಕಾರ ಶಾಂತರೀತಿಯಿಂದ ಯೋಗ್ಯ ಮಾರ್ಗವನ್ನು ಕೈಕೊಳ್ಳುವೆವು" ಎಂಬ ಅಭಿಪ್ರಾಯದ ನಿರ್ಣಯವನ್ನು ಮಾಡಿಕೊಂಡಿದ್ದಾರೆ. ಇದರಿಂದ ಕಪುರ್ಥಳಾ ಪಟ್ಟಣದಲ್ಲೆಲ್ಲ ಗಲಭೆಯುಂಟಾಗಿದೆ.

ಸಂಸ್ಥಾನಿಕರು ಪ್ರಜೆಗಳ ಬೇಡಿಕೆಯನ್ನು ಲಕ್ಷಿಸಿ ನಡೆಯುವದು ಅವರಿಗೆ ಭೂಷಣವಲ್ಲವೇ?

### ಕನ್ಯಾಪಹಾರ

ಸಿಂಧ ಪ್ರಾಂತದ ಸಿಟಾ ಗ್ರಾಮದಲ್ಲಿ ಒಬ್ಬ ಮುಸಲ್ಮಾನ ಯುವತಿಯು ಹಿಂದು ಧರ್ಮ ಸ್ವೀಕರಿಸಿದ್ದಳು. ಅವಳು ಕೋರ್ಟಿಗೆ ಹೋಗುವಾಗ ಮುಸಲ್ಮಾನರು ಬಲಾತ್ಕಾರದಿಂದ ಅವಳನ್ನು ಓಡಿಸಿಕೊಂಡು ಹೋಗುವಾಗ ಪೋಲಿಸರು ಬರಲು ಅವರಿಗೂ ತಂಟರಿಗೂ ಹೊಡೆದಾಟವಾಗಲು ಪೋಲಿಸರು ಪುಂಟರ ತಂಡಿಗೆ ಗುಂಡು ಹಾಕಿದರು. ಒಬ್ಬನು ಮೃತಪಟ್ಟನು.

ಲಾಹೋರಿನಲ್ಲಿ ಒಬ್ಬ ಮುಸಲ್ಮಾನ್ ತರುಣಿಯು ಹಿಂದು ಧರ್ಮ ಸ್ವೀಕರಿಸಿದ್ದಳು. ಅವಳನ್ನು ಒಬ್ಬ ತರುಣನು ಚೂರಿಯಿಂದ ಇರಿದು ಗಾಯಗೊಳಿಸಿದ್ದಾನೆ.

---

—ಮಹಾಯುದ್ಧದಲ್ಲಿ ಸುಪ್ರಸಿದ್ಧವಾದ ಜರ್ಮನ್ ಎಮ್ಡನ್ ಹಡಗವು ಹಿಂದುಸ್ಥಾನದ ಬಂದರಗಳನ್ನೆಲ್ಲ ಸುತ್ತಿಕೊಂಡು ಸುಯೇಜ ಮಾರ್ಗವಾಗಿ ಹೋಗುವದು. ಕಾರಣ?

—ಕೆತ್ತೂರಿನ ಕೊಲೆಯ ಅಪರಾಧಿಯಾದ ಈರಯ್ಯ ಚನ್ನಬಸಯ್ಯ ಶಿವಮ್ಮಾಪುರ ಎಂಬವನು ಮೂರು ವರ್ಷಗಳವರೆಗೆ ತಲೆತಪ್ಪಿಸಿಕೊಂಡಿದ್ದು ಕಳೆದ ೬ ನೆಯ ತಾ|| ಒಳಗೆ ಪೋಲಿಸರು ಅವನನ್ನು ಹಿಡಿದರು.

—ವಿಯೆನ್ನಾದಲ್ಲಿ ಆಸ್ಟ್ರಿಯದ ಸದ್ಯದ ಚಾನ್ಸೆಲರ ಮಿ. ಶುಶ್ನಿಂಗರನ್ನು ಕೊಲೆಮಾಡುವೆವೆಂದು ಹಸ್ತಪತ್ರಿಕೆಗಳು ಅಂಟಿಸಲ್ಪಟ್ಟಿದ್ದವು. ಇದರಿಂದ ಪಟ್ಟಣದಲ್ಲೆಲ್ಲ ಗದ್ದಲವುಂಟಾಗಿದೆ.

—ದಿಲ್ಲಿಯ ಹತ್ತಿರ ಒಂದು ಹಿಂದೀವಿಮಾನಕ್ಕೆ ಅಪಘಾತವಾಯಿತು. ಇಬ್ಬರು ಅಧಿಕಾರಿಗಳು ಗಾಯಪಟ್ಟರು. ವಿಮಾನವು ನಾಶವಾಯಿತು.

—ಜಪಾನದಲ್ಲಿ ಬರಬಿದ್ದದರಿಂದ ಒಕ್ಕಲಿಗರು ತಮ್ಮ ಹೆಣ್ಣು ಮಕ್ಕಳನ್ನು ಮಾರಿ ಜೀವನವನ್ನು ನಡೆಯಿಸುತ್ತಿರುವರು.

—ಸುಲಿಗೆಗಾರರ ವಂಶವು ವೃದ್ಧಿಯಾಗಬಾರದೆಂದು ಜರ್ಮನ ಸರಕಾರದವರು ಒಂದು ಕಟ್ಟಳೆಯನ್ನು ಮಾಡಿ ಅಮೇರಿಕೆಗೆ ಹೋದವರ್ಷ ೨೧೧ ಜನರ ಪ್ರಜೋತ್ಪಾದನವನ್ನು ನಿಲ್ಲಿಸಿ ಬಿಟ್ಟರು. ಸುಲಿಗೆಗಾರನ ಮಗನು ಸುಲಿಗೆಗಾರನೇ ಆಗುವನೆ?

# ಈ ಬಸವನು ಯಾರು?

ಲೇಖಕರು,
ಶ್ರೀ. ಎಂ. ಚಂದ್ರಶೇಖರ ಶಾಸ್ತ್ರಿಗಳು ಬನಾರಸ ಹಿಂದುವಿಶ್ವವಿದ್ಯಾಲಯ

ಈ ಕೆಳಗೆ ಕೊಟ್ಟಿರುವ ಶಾಸನವು ಬನಾರಸ ಹಿಂದು ವಿಶ್ವವಿದ್ಯಾಲಯದ ಪುಸ್ತಕಾಲಯದಲ್ಲಿದೆ. ಇದು ಡಾ. ಫ್ಲೀಟರವರಿಗೆ ೧೮೯೪ ರಲ್ಲಿ ಮನಗೋಳದಲ್ಲಿ ಸಿಕ್ಕಿತೆಂದು ಕಾಣುತ್ತದೆ. ಇದರಲ್ಲಿ ಎರಡು ಕಾಲವು ಕೊಡಲ್ಪಟ್ಟಿವೆ. ಒಂದನೆ ಕಾಲವು ೯೯ನೇ ಡಿಶೆಂಬರ್ ೧೧೪೭ ಇಸ್ವಿ. ಇದರೆ ಎರಡನೆಯ ತೈಲಪನಕಾಲ. ಎರಡನೆಯದು ೧೧೫೬-೫೭ನೇ ಇಸ್ವಿ ಅಂದರೆ ಬಿಜ್ಜಳನ ಅರನೆಯ ವರ್ಷ ಎಂದು ಸ್ಪಷ್ಟವಾಗಿ ಬರೆದಿದೆ. ಇದರಲ್ಲಿ ಉದಾಹರಿಸಲ್ಪಟ್ಟಿರುವ ಬಸವನೇ ನಮ್ಮ ವೀರಶೈವ ಮತಸ್ಥಾಪಕನಾದ ಬಸವನಿರಬಹುದೆ?

ಇದರ ಸಂಪೂರ್ಣ ಭಾಗವು ಒಂದೇ ದಿವಸ ಒಬ್ಬರಿಂದಲೇ ಕೆತ್ತಿರಬಹುದೆಂದು ಊಹಿಸಿದ್ದಾರೆ. ಇದರಲ್ಲಿ ಕಲಿದೇವೇಶ್ವರ ಸಿದ್ಧಲಿಂಗಗಳಿಗೆ, ಶೆಟ್ಟರು ಮುಂತಾದವರು ದಾನಕೊಟ್ಟ ಭೂಮಿಕಾಣಿಕೆ ಇತ್ಯಾದಿಗಳನ್ನು ಕಾಣಿಸಿದೆ. ಕನ್ನಡ ಅಕ್ಷರ. ಶೈವ ಪದ್ಧತಿಯಂತೆ ಕಲ್ಲಿನ ಮೇಲು ಭಾಗದಲ್ಲಿ, ಲಿಂಗ ಹಸು ಒಂದು ಕರು, ಇಬ್ಬರು ಲಿಂಗದ ಎಡಬಲದಲ್ಲಿ ನಿಂತಿರುವುದು ಇವುಗಳನ್ನು ಸಹ ಕೆತ್ತಿದೆಯಂತೆ. ಮನಗೋಳಿ ಹನುಮಂತದೇವರ ಆಸ್ಥಾನದಲ್ಲಿದೆಯಂತೆ. ಡಾ. ಫ್ಲೀಟರವರೇ ಸ್ವಹಸ್ತದಿಂದ ಮುದ್ರಿಸಿಕೊಂಡಿದ್ದರಂತೆ. ಇದು ಆಚ್ಚಿಗೆ ಬಿದ್ದು ೩೬-೩೭ ವರ್ಷಗಳಾದರೂ ಯಾರೂ ಇದು ವರೆಗೂ ಬೆಳಕಿಗೆ ಹಾಕದಿರುವುದು ಆಶ್ಚರ್ಯವೇ ಸರಿ.

ಇದನ್ನು ಇಂಗ್ಲಿಷಾಕ್ಷರದಿಂದ ಕನ್ನಡಕ್ಕೆ ಬರೆದಿದ್ದೇನೆ. ಆದುದರಿಂದ ಅಲ್ಪ ಸ್ವಲ್ಪ ತಪ್ಪುಗಳು ಸಿಕ್ಕಬಹುದು. ಇದರಲ್ಲಿ ಯ ಕ್ಕೆ ಜ, ವ ಕ್ಕೆ ಬ ಬರೆದಿದೆ. ಇದನ್ನು ಫ್ಲೀಟರವರು ತಮ್ಮ ನೋಟಿನಲ್ಲಿ ಕಾಣಿಸಿದ್ದಾರೆ.

"ಚಾರುತೇಯ ಸಹಜಸಾರತೆ ರಾರಾಜಪ ತರ್ದವಾಡಿ ಸಾಸಿರ ನೇಂಬೀನಾರಿಯ ಳುಡುರುಡಿರಲಂಕಾರವೆನಲ್ ಧರೆಗೆ ಮಣಿಗವಳ್ಳಿಯೇಸೇವ್ಯಂ॥ ಆ ನೆಗಳ್ದ ಮಣಿಗವಳ್ಳಿಯ ಭೂಸುತರ ವನೂರ್ವರೊಳಗೆ ಕಾಶ್ಯಪಗೋತ್ರಾಂಭೋನಿಧಿಶಶಿ ಗೋವರ್ಧನರ್ ಅನತರಿಪುವಾಜವಂಶವರ್ಧ ಉದಯಿಸಿದಂ॥ ಹುವ್ವಿ ನಜರ್‌ವುವಿಶಿಷ್ಟರ ಹರ್ವಿದ ಬಡತನದ ಕೊರ್ವ್ವ ಉಡುಗಿಸಂ ಅದರಿಂಹುವ್ವಿನವರ್ ಎಂಬ ನಾಮದಗುರ್ವಿನಗೋವರ್ಧನಂಗೆನಂದನೆನಿಪ॥ ಜನನುತ ರೇವದಾಸ ವಿಭುಗಾತ್ಮಜರ್ ಅಗ್ರಣಿ ನಾಗದೇವನೊಳ್ಪಿನಕಣಿ ವಿಷ್ಣುಪುಣ್ಯನಿಧಿಗೊಯ್ಯರಸಂ ಹುಳದಂಧರಿಶ್ರೀಜೆಯರ್ ಎನೆ ಪೆಸರ್‌ವೆತ್ತ ನಾಲ್ವರವರೀಕಿರಿಯಂಹಿರಿಯಂಜಗಕ್ಕೆಸಜನ್ನನನಿಧಿಚಂದ್ರಮಂ ಜಸವಂ ಏಸಿದಂಹಿಮವನಗೇಂದ್ರಮಂ॥ ಆಚಂದಿರಾಜವಿಭುಗಂ ಶ್ರೀ ಚಂದ್ರಾಂಬಕೆಗವಾತ್ಮಜಂ ಪುಟ್ಟಿದ ಉರ್ವೀಶಶ್ರುತಗುಣಾಬ್ಧಿಸದಾಚಾರತೆಯಿಂನಿಮಿರ್ಚ್ಚಿ ಜಸಮಂ ಬಸವ॥ ಪರಹಿತದೊಳ್ ಪರಾಶ್ರಿತ.ದೊಳ್ ಅರ್ವಿನೋಳ್ ಊರ್ಜಿತಶಕ್ತಿಯೊಳ್ ಮಹೇಶ್ವರಪಾದ ಭಕ್ತಿಯೋಳ್ ತನಗೆಪಾಸತಿಯಾರ್ವೆರರ್ ಎಂಬ ಹೆಮ್ಮೆಯೋಳ್ ನೆರೆದುಮಣಿಗವಳ್ಳಿಯ.ಧರಾವರಪಂಚಶತಾಮರಾಗಪಂಕೇರುಹವಿಕಾಶ ಭಾಸ್ಕರನೆನಲುನೆಗಳ್ದಂ ಬಸವಂ ಗುಣಾಕರಂ॥ ಕೈಯಂನಿಕಳಲ್ಗೆದಂ ದೆಪ್ಪಯ್ಯಂಗುಣಿ ಎಂದು ಪೊಗಳೆಧರೆಸಲೆಲೋಕಕ್ಕಯ್ಯನೆನಿಸಿಪ್ಪ ಬಸವರಸಯ್ಯಂಶ್ರೀ ಮಣಿಗವಳ್ಳಿ ಊರ್ಜಿತವೆನಿಸಲ್॥

...ಮವೇದಶ್ರುತಿ ತತ್ವಧಾಮವಿದನೆಂ ಅನಾದಿಸಂಸಿದ್ಧನೆಂತಿದುತೇಜೋಮಯದಿವ್ಯಲಿಂಗವಿದುಲೀಲಾಲೋಕಸಾಂನಿಧ್ಯವ ಎಂಬ ದಯಾಭ್ಯುನ್ನತಿ ಜೆನ್ನನಾದಕಲಿದೇವೇಶಂಗೆ ಲೋಕೊಶ್ವನ ಅಸ್ಪದವಂಮಾಡಿಸಿದಂನಿಜಾನ್ವಯ ಯಶಸ್ಸಂದೋಹಮಂ ಇದುರಜತಾದ್ರಿಯಿಂದ ಅಧಿಕನೆಂಬಿನಿಗಂ ಬಸವನಿವಾಸ ಸಂಪದಮಂ ಅದರ್ಚಿದಂಮಣಿಗವಳ್ಳಿಯವಿಪ್ರವರ್ ಕುಬೇರ ನೋಳ್ಪುದುವೆನಿಸಿ ಸ್ವಭಕ್ತಿಯುತರಲ್ಲಿಯೇಸಂತತವಿರಿಪೆನೆಂಬಸಂನಿಧನವಪ್ಪುವಂತೆ ಕಲಿದೇವಮಹೇಶನಿವಾಸವಪ್ಪುಗಂ॥ ಸಲೆಮೂರುಜಗವೋಲ್ದ ಉಪಾರ್ಜಿಸಿದಪುಣ್ಯವಾರ್ತ್ತೆವೆತ್ತಂತೆ ನಿರ್ಮಲಧರ್ಮೋನ್ನತಿಸನ್ನುತಂ ಸಕಲ ಲಕ್ಷ್ಮೀವಾಸಂ ಅದಂತೆ ಭೂಲಲನಾಲಂಕೃತಿರತ್ನರಾಸಿನೆರೆದಿರ್ದಂತಾವಗಂರಂಜಕುಂ ಕಲಿದೇವೇಶವಿಳಾಸಧಾಸ.ರ ಗೃಹಂಲೋಕೈಕಶೋಭಾವಹಂ॥

# ವರ್ತಮಾನ ಸಾರ.

—ದಿಲ್ಲಿಯ ವ್ಹಾಯಿಸರಾಯರ ನಿವಾಸಸ್ಥಾನವನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತ ನಿಂತ ಒಬ್ಬ ಬಂಗಾಲಿ ತರುಣನನ್ನು ಪೋಲೀಸರು ಬಂಧಿಸಿದರು. ಸದ್ಯಕ್ಕೆ ಮುಚ್ಚಳಿಕೆಯನ್ನು ತೆಗೆದುಕೊಂಡು ಬಿಟ್ಟಿದ್ದಾರೆ.

—ಫ್ರೆಂಚ ಸರಕಾರದ ಗುಪ್ತ ವಾರ್ತೆಯನ್ನು ಜರ್ಮನ ಸರಕಾರಕ್ಕೆ ತಿಳಿಸಿದ ಕಾರಣ ಕ್ಯಾ. ಫಾಗೊ ಎಂಬವನಿಗೆ ೫ ವರ್ಷ ಕಠಿಣಶ್ರಮ ಶಿಕ್ಷೆಯನ್ನು ವಿಧಿಸಲಾಯಿತು.

—ಕಲಕತ್ತಾದಲ್ಲಿ "ಕಾಂಗ್ರೆಸ್ ಸೋಶಿಯಾಲಿಸ್ಟ" ಎಂಬ ಒಂದು ಇಂಗ್ಲೀಷ ವಾರ ಪತ್ರಿಕೆಯು ಹೊರಡುವದು. ಮಿ. ಲೋಹಿಯಾರವರು ಇದರ ಸಂಪಾದಕರು.

—ಜರ್ಮನಿಯ ಅಧ್ಯಕ್ಷರಾದ ಹೀರಹಿಟ್ಲರರು ಬರ್ಲಿನ್ ಸ್ತ್ರೀ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ, ಜರ್ಮನಿಯು ಒಡ ದೇಶವಾದುದರಿಂದ ಸ್ತ್ರೀಯರು ತಮ್ಮ ಬಟ್ಟೆಗಳನ್ನು ಸ್ವಲ್ಪ ಕಡಿಮೆ ಹೊಲಿಸಬೇಕೆಂದು ಹೇಳಿದರು. ಪ್ರಜೆಗಳಿಗೆ ಆವಶ್ಯಕವಾದ ಅನ್ನ ವಸ್ತ್ರಗಳ ಕ್ರಯದ ಮೇಲೆ ಸರಕಾರದ ನಿಯಂತ್ರಣವಿರುವದೆಂದೂ ಹೇಳಿದರು.

—ಜಮಖಂಡಿಯಲ್ಲಿ ಶ್ರೀಮಂತ ಅಪ್ಪಾಸಾಹೇಬ ಪಟವರ್ಧನ ಇವರ ಸನ್ನಿಧಿಯಲ್ಲಿ ಜಮಖಂಡಿ, ಸಾಂಗಲಿ, ವಂಥೋಳ ಸಂಸ್ಥಾನದ ಅನೇಕ ತರುಣರು ತಿಳಿ, ತೀತೀ, ಮಲಕಂಬ ಮೊದಲಾದ ಆಟಗಳನ್ನಾಡಿದರು. ಶ್ರೀಮಂತರ ಹಸ್ತದಿಂದ ಬಹುಮಾನೋತ್ಸವಕ ಹಂಚಲಾಯಿತು.

—ಲಾಹೋರದಲ್ಲಿ 'ಸಿವಿಲ್ ಮತ್ತು ಮಿಲಿಟರಿ' ಆಫೀಸದಲ್ಲಿ ಒಂದು ಬಾಂಬಿನ ಸ್ಫೋಟವಾಯಿತು. ಪೋಲೀಸರ ಶೋಧವು ನಡೆದಿದೆ.

—ಮಿರಜಿಯಲ್ಲಿ ವೈದ್ಯ ಶ್ರೀ. ಕಾಪಸೆ ಇವರು ತಮ್ಮ ಸೊಸೆಗೆ ವಿಷಪ್ರಯೋಗಮಾಡಿದರೆಂದು ಅವರ ಮೇಲೆ ಪನ್ಹಾಳಾದಲ್ಲಿ ವ್ಯಾಜ್ಯವು ಮಾಡಲ್ಪಟ್ಟಿದ್ದಿತು. ಪನ್ಹಾಳಾ ಮ್ಯಾಜಿಸ್ಟ್ರೇಟರು ಅದನ್ನು ಶೆಶನ್ಸ ಕೋರ್ಟಿಗೆ ಹಾಕಿದರು.

—ಕಳೆದ ೧೧ನೆಯ ತಾರೀಖಿನ ದಿವಸ ಮಸೂರ ಬ್ರಹ್ಮಚರ್ಯಾಶ್ರಮದವರು ಶ್ರೀ ದಾದೊಬಾ ಎಂಬ ಕ್ರಿಶ್ಚಿಯನ್ನನನ್ನು ಶುದ್ಧ ಮಾಡಿ ಹಿಂದು ಧರ್ಮದಲ್ಲಿ ತೆಗೆದುಕೊಂಡರು.

—ತ್ರಿವೇಂದ್ರವಾದಲ್ಲಿ ಮುಂದಿನ ಜನವರಿ ತಿಂಗಳದಲ್ಲಿ ಒಂದು ರಬ್ಬರಿನ ಕಾರ್ಯಾಲಯವನ್ನು ಸ್ಥಾಪಿಸುವವರಿದ್ದಾರೆ. ಇಲ್ಲಿಂದ ಪ್ರತಿ ತಿಂಗಳ ೧೫ ಟನ್ನು ರಬ್ಬರ ಸಿದ್ಧಪಡಿಸಲಾಗುವದು.

# ಪತ್ರಗಳ ಸಾರಾಂಶ.

ಪ್ರೇಮವೇ ದೇವನು.

## ೧೯ ಶಿವಸುತರ ಪ್ರೇಮದ ಒಳ್ಳೆಯ ಒಳಗದವರ ವಿನೋದಕೂಟ ಡಾವಣಗೆರೆ

ಕಾರ್ತೀಕ ಶುದ್ಧ ಪಾಡ್ಯ ಗುರುವಾರ ಮಧ್ಯಾಹ್ನ ೩ ಗಂಟೆಗೆ 'ವಿನೋದ ಕೂಟವು' ಪ್ರೇಮದ ಒಳ್ಳೆಯ ಒಳಗದ ಕಛೇರಿಯಲ್ಲಿ ನೆರೆಯಿತು' ಗೆಳೆಯರು ಸವಿಯಾಟದಿಂದ ಕಣದಿದ್ದರು. ಕಾರ್ಯಕ್ರಮದ ಪ್ರಕಾರ ಸದಸ್ಯರಲ್ಲಿ ಒಬ್ಬರಾದ ನ್ಯಾಮತಿ ಶ್ರೀ ಎಚ್. ಎಂ. ವೀರಭದ್ರಯ್ಯನವರು ಹರಿಶ್ಚಂದ್ರ ಕಾವ್ಯ ಸಂಗ್ರಹದಲ್ಲಿ ಕೆಲವು ಭಾಗಗಳನ್ನು ರಸವತ್ತಾಗಿಯೂ ಮಂಜುಳವಾದ ನಿರರ್ಗಳವಾದ ಗಮನೆಯ ಪ್ರತಿಭೆಯಿಂದಲೂ ಪಠಿಸಿ ಸಾಹಿತ್ಯದ ಸವಿಯೂಟವನ್ನು ಮನದಣಿಯುವಂತೆ ಮಾಡಿಸಿದರು. ಇವರು ವಿದ್ಯಾರ್ಥಿಗಳು ಇನ್ನೂ ಚಿಕ್ಕವರು ಲಲಿತವಾದ ಕಂಠ ಉಳ್ಳವರು. ಇಂಥ ರಸವತ್ತಿನ ತೆಯನ್ನೂ ಇಷ್ಟ ಸರಸವಾಗಿಯೂ ಲಲಿತವಾಗಿಯೂ ಪಠಿಸಿದ್ದು ಬಹಳ ಪ್ರಸಂಶನೀಯವಾದದ್ದು. ಇವರು ಇನ್ನು ಮುಂದೆ ಸ್ವಲ್ಪ ನಿಧಾನವಾಗಿಯೂ, ಅನುರಾಗದಿಂದ ಆಲಿಸುವ ರಸಿಕ ಶಿರೋಮಣಿಗಳಿಗೆ ಭಾವಗರ್ಭಿತವಾಗಿಯೂ, ಅರ್ಥಗರ್ಭಿತವಾಗಿಯೂ ಓದುತ್ತ ಹೋದರೆ ಇವರೊಬ್ಬರು ಕರ್ನಾಟಕದಲ್ಲಿ ಉತ್ತಮ ಗಮಕಿಗಳಾಗುವುದರಲ್ಲಿ ಸಂದೇಹವೇ ಇಲ್ಲ.

ಇದೇ ಡಿಸೆಂಬರ ಕೊನೆಯ ವಾರದಲ್ಲಿ ರಾಯಚೂರಿನಲ್ಲಿ ನಡೆಯಲಿರುವ ೨೦ ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಕರುಣ ಕವಿತಾಂತರಾದ ಶ್ರೀಮಾ ಎಳ್ಳು ಬೇಸಿ ಗಂಗಾಧರಪ್ಪನವರು, ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟರು. "ಕವಿಗಳ" ವಿಚಾರದಲ್ಲಿ ಶ್ರೀ ಗಂಗಾಧರಪ್ಪನವರು ಮತ್ತು ಕನ್ನಡ ಸಾಹಿತ್ಯದಲ್ಲಿ ವಚನ ವಾಙ್ಮಯದ ವೈಶಿಷ್ಟ್ಯತೆಯ ವಿಚಾರದಲ್ಲಿ ಶ್ರೀಯುತ ಮಲ್ಲಾಬಾದಿಯವರು ಭಾಷಣ ಮಾಡಲು ಕರ್ನಾಟಕ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳವರ ಕಛೇರಿಗೆ ವಿಷಯಗಳನ್ನು ಕಳಿಸಿಕೊಟ್ಟಿರುವ ವಿಚಾರವಾಗಿಯು ಅವರಿಂದ ಪ್ರೇಮಪೂರ್ವಕವಾಗಿ ಬಂದಿರುವ ಉತ್ತರದ ವಿಚಾರದಲ್ಲಿ ಬಳಗದ ಕಾರ್ಯದರ್ಶಿಗಳು ತಿಳಿಸಿದರು.

ಪ್ರೇಮ ಒಳ್ಳೆಯ ಒಳಗದ ಕಾರ್ಯಕಾರಿ ಮಂಡಲಕ್ಕೆ ಲಲಿತ ಕಲಾಕೋವಿದರಾದ ವೈಸೂರು ಶ್ರೀಮಾ ಗುರುಶಿದ್ಧಪ್ಪನವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. "ಅಧ್ಯಕ್ಷ ಮಹಾಶಯರ ಶುದ್ಧವಾದ ಸರಳವಾದ ಪವಿತ್ರವಾದ ಶಾಂತಿ ಮತ್ತು ಪ್ರೇಮಮಯ ಜೀವನವ ಹೊನಲಿನ ಬಗ್ಗೆ ಮತ್ತು ಸೌಂದರ್ಯೋಪಾಸನೆ ಲಲಿತಕಲಾ ತಪಸ್ಸಿನ ವಿಚಾರದಲ್ಲಿ ಶ್ರೀಯುತ ಮಲ್ಲಾಬಾದಿಯವರು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರೇಮದ ಒಳ್ಳೆಯ ಬಳಗದವರಿಗೆಲ್ಲಾ ಒಬ್ಬ ಗುರುದೇವನನ್ನು ಗುರ್ತಿಸಿ ಅಧಿಕಾರ ವಹಿಸುವುದಾಗಿ ಚಿತ್ರದುರ್ಗದಲ್ಲಿರುವ ಪ್ರೇಮದ ಒಳ್ಳೆಯ ಬಳಗದ ಮತ್ತೊಂದು ಪುಷ್ಪವಾದ ಶ್ರೀ ನಾಡಿಗ ಜಯದೇವಣ್ಣನಿಂದ ಓಲೆಯ ಮುಖಾಂತರ ಬಂದ ಸಲಹೆಯ ಮೇರೆಗೆ ಪರಿಶುದ್ಧವಾದ ಆಚರಣೆ ಮತ್ತು ಶಿವಸಂಸ್ಕೃತಿಯ ಪ್ರತಿನಿಧಿಗಳಂತಿರುವ ಶಾಂತಿ ಮೂರ್ತಿಗಳಾದ ನ್ಯಾಮತಿ ಶ್ರೀಮಾ ಎಚ್. ಎಂ. ವೀರಭದ್ರಯ್ಯನವರಿಗೆ ಪ್ರೇಮದ ಒಳ್ಳೆಯ ಗೆಳೆಯರೆಲ್ಲರೂ ತ್ರಿಕರಣ ಪೂರ್ವಕವಾಗಿ ಅಧಿಕಾರವಹಿಸಿ ಭಕ್ತಿಪೂರ್ವಕವಾಗಿ ಹಾರಗಳನ್ನು ಅರ್ಪಿಸಿದರು.

ಉಪಸಂಹಾರದಲ್ಲಿ ಗೌರವಕಾರ್ಯದರ್ಶಿಗಳು ಪ್ರೇಮದ ಒಳ್ಳೆಯ ಬಳಗದವರ ಮುಖ್ಯ ಉದ್ದೇಶ ಮತ್ತು ಗುರಿಯಾದ ಸಾಹಿತ್ಯ ಸಾಧನೆ, ಲಲಿತಕಲಾ ತಪಸ್ಸಿನೆಯ ವಿಚಾರವಾಗಿ ವಿವರ ಭಾಷಣಮಾಡಿದರು. ವಿನೋದ ಕೂಟದ ಕಾರ್ಯಕ್ರಮಗಳನ್ನ ಸಾಂಗೋಪಾಂಗವಾಗಿ ನೆರವೇರಿಸಿದ ಅಧ್ಯಕ್ಷ ವ ಹಾಶಯರಿಗೂ ರೆದವರೆಲ್ಲರಿಗೂ ಅಭಾರವನ್ನಿಸಿ ಮಂಗಳಗೀತೆಯೊಡನೆ ವಿನೋದ ಕೂಟವು ಪರಿಸಮಾಪ್ತಿಯಾಯಿತು

ಓರ್ವ ಸಾಹಿತ್ಯಪ್ರೇಮಿ

## ರಾಯಚೂರು.

ತಾ. ೧೧-೧೧-೩೪ ನೆಯ ದಿವಸ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ವಾಗತ ಸಭೆಯು ಸೇರಿ ಸರ್ವಾನುಮತದಿಂದ ಕವಿ ಸಮ್ಮೇಳನದ ಸ್ವಾಗತ ಸಭೆಯ ಏರ್ಪಾಟುಮಾಡಿ ಅದರ ಕಾರ್ಯವನ್ನು ಜರುಗಿಸಲು ಡಾಕ್ಟರ್ ರಾಮಕೃಷ್ಣ ಎಮ್. ಬಿ. ಎಸ್‌ರವರು ಮತ್ತು ಮಾಣಿಕರಾವ ಬಿ ಎಸ್‌ರವರು ಈ ಉಭಯರನ್ನು ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟರು ಪ್ರೊಫೆಸರ್ ವಿ ಕೃಷ್ಣಾ ಗೋಕ್ ಗರ್ನ್‌ಮೆಂಟ್ ಕಾಲೇಜ ಪೂನಾ ಇವರು ಕವಿ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿದ್ದಾರೆ.

ಈ ಸಲದ ಕವಿ ಸಮ್ಮೇಳನದಲ್ಲಿ ಗದ್ಯ ಪದ್ಯ ಲೇಖಕರಿಗೆ ಮಾನ ಅವಕಾಶಕೊಡಲಾಗುವದು ಹಾಗೂ ಸಾಹಿತ್ಯದ ಒಂದು ಅಂಗವಾದ ನಾಟಕವನ್ನು ಪ್ರಧಾನವಾಗಿ ಚರ್ಚಿಸಬೇಕೆಂದು ಕೋರಿಕೆ. ಇತರ ಸಾಹಿತ್ಯ ಭಾಗಗಳ ವಿಷಯವಾಗಿ ಲೇಖಗಳನ್ನು ಓದಬಹುದು. ಲೇಖಗಳನ್ನ ಬರೆಯಲು ಹಾಗು ಓದಲಿಚ್ಛಿಸುವವರು ತಾ|| ೩೦-೧೧-೩೪ ರ ಒಳಗಾಗಿ ಕಾರ್ಯದರ್ಶಿ ಕವಿ ಸಮ್ಮೇಳನ ರಾಯಚೂರು ಇವರಿಗೆ ತಿಳಿಸತಕ್ಕದ್ದು.

ಲೇಖಕರು ತಮ್ಮ ಲೇಖಗಳ ಸಾರಾಂಶವನ್ನು ತಿಳಿಸತಕ್ಕದ್ದ



ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ

ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

# ಕಾಲ ನಿರ್ಣಯ.

ಲೇಖಕರು—

ಕರ್ಲಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ

ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೫ ಆಣೆ.

ಮ್ಯಾನೇಜರರ— ಶರಣ ಸಂದೇಶ



# ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡವೂಲಿತೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ ಅರಳೇ ಪೇಟೆ, ತುಮಕೂರು.

(ಮೈಸೂರು ಸ್ಟೇಟ್)



ಹತ್ತು ತಿಂಗಳುಗಳಲ್ಲಿ

# ೫೦,೨೫೦,೫೦೦ ರೂ. ಗಳ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವ ವಿಮೆಗಳು ಯಾವತ್ತೂ ತರಹದ ಜನರಿಗೆ—

—ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ಪ್ರವೇಶ ಧನ ರೂ. ೫, ತಿಂಗಳ ಕಂತ ೧.

ವಾರ್ಷಿಕ ಚಂದಾ ರೂ. ೧.

ಈ ಕಂಪನಿಯಲ್ಲಿ ಕೆಲಸಮಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನೈಜರರು, ಪೆಗಾರ ಅಥವಾ ಕಮಿಶನ್ ತೆಗೆದುಕೊಂಡು ಕೆಲಸ ಮಾಡಲುದೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ್ ಕಂ. ಲಿ. ಧಾರವಾಡ.

# ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
# ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

**ಸುಳುವಾರ ಲೇಹ್ಯವು**— ಈ ಲೇಹ್ಯವು ೧೦ ವರುಷದ ಅನುಭವವುಳ್ಳದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೇಗೈ ಊಟದ ನೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೋದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ ಹಾಗೂ ಪೈಕನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

**ಜೀವಾಮೃತ ಲೇಹ್ಯವು**— ಶಾಪ್ತಜ್ಞರಿಗೆ ಕಪ್ಪತಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿ ವಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೪-೦.

**ಕಾಡುಕವದಿಳಾಯಿ (ಇಂದ್ರವಾರುಣಿ) ತೈಲವು**—ಮಾಧವನಿದಾನ ಪ್ರಕಾರ ಮನುಷ್ಯರಿಗೆ ೬೦ ಶರದ ವಾತನೋವುಗಳೂ ೪ ಶರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟಿ ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ವೇಲ್ಮಂಡ ಎಲ್ಲ ರೋಗಗಳಿಗೆ ಪಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

**ನಾರಿನ ವೈರಿಯು**—ಕಾಲಿಗೆ ಅರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೪ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂಬಿ ಭಾಸಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ- ೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಬರೆದು ಓದಿ ಧಿಕ್ಕರಿಸಬೇಡಿರಿ. ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ರಾ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

## ಹರ್ಡೀಕರ ಮಂಜಪ್ಪನವರು ಬರೆದ
## ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

| | | | |
|---|---|---|---|
| ಬುದ್ಧಿಯ ಮಾತು | ೦-೩-೦ | ಪುಲಿಕೇಶಿಯ ಚರಿತ್ರೆ | ೦-೧-೬ |
| ವೀರಶೈವ ಮತದೀಪಿ | ೦-೨-೦ | ಕಣದೇವನ ಕಥೆ | ೦-೧-೬ |
| ವೀರಶೈವ ಮತತತ್ವ | ೦-೪-೦ | ಸ್ವಾಮಿ ವಿವೇಕಾನಂದರ ಚರಿತ್ರೆ | ೦-೧-೬ |
| ಉದ್ಯೋಗಪತ್ರಿಕೆಗಿ ಪುಸ್ತಕಗಳು | ೨-೦-೦ | ಸುಕಲಾದೇವಿಯ ಕಥೆ | ೦-೧-೬ |
| ಕಾಯಕವೆ ಕೈಲಾಸ | ೦-೩-೦ | ಬಸವಣ್ಣನವರ ಚರಿತ್ರೆ | ೦-೧-೬ |
| ಶ್ರೀ. ಲಿಂಗರಾಜರ ಚರಿತ್ರೆ | ೦-೬-೦ | ಶರಣಬಸವೇಶ್ವರನ ಚರಿತ್ರೆ | ೦-೧-೬ |
| ಪ್ರಭುದೇವರ ಕಥೆ | ೦-೧-೬ | ದೇವಯಾನಿಯ ಕಥೆ | ೦-೧-೬ |
| ವಿಠಲಮ್ಮನ ಕಥೆ | ೦-೧-೬ | ವಿಜಯವಾಣಿ | ೦-೨-೦ |
| ಲಜಪತರಾಯರ ಚರಿತ್ರೆ | ೦-೧-೬ | ಬಸವಾವತಾರ | ೦-೦-೬ |
| ಆದಿಜನ ಸುಧಾರಣೆ | ೦-೨-೦ | ರಾಷ್ಟ್ರಗೀತೆ | ೦-೦-೬ |

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

# ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೬ ತಾಸುಗಳಲ್ಲಿಯೇ ಗುಣ!

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮುನ್ನಿರಂಜನ ತಾಂತವೀರ ಸ್ವಾಮಿಗಳು ಗುರುಮುಕಲ್ ಇವರು ಲೋಕ ಕಲ್ಯಾಣಾರ್ಥವಾಗಿ ಪ್ಲೇಗ ಸಂಜೀವಿನಿ ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಶೆಟ್ಟಿಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

# ನೋಟೀಸು.

ವಿಜಾಪುರ ಜಿಲ್ಲೆಯ
ಸಮಸ್ತ ಜನರಿಗೆ ತಿಳಿಸುವದೇನಂದರೆ-

ನಾವು ನಿಮ್ಮ ಜಿಲ್ಲೆಯ ಏಜನ್ಸಿಯನ್ನು ಶ್ರೀ. ಬಶೆಟ್ಟಿಪ್ಪ ಬಸಪ್ಪ ಹಲಕುರ್ಕಿ ಬಾಗಲಕೋಟಿ ಇವರಿಗೆ ಕೊಟ್ಟಿರುವೆವು. ಆದ್ದರಿಂದ ದಯಮಾಡಿ ತಾವೆಲ್ಲರೂ ಪ್ಲೇಗ ಸಂಜೀವಿನಿಯ ಆರ್ಡರ್ ಕೊಡಬೇಕಾದರೆ ಸದರಿಯವರಿಗೇನೇ ಕೊಡಬೇಕೆಂದು ಸವಿನಯ ವಿನಂತಿ.

ಮ್ಯಾನೇಜರ್
ಪ್ಲೇಗ್ ಸಂಜೀವಿನಿ ಆಫೀಸ,
ಗುಲಬರ್ಗಾ.

# ಗೌರೀಶಂಕರ ನಿವಾಸ.
## ಮುಂಬಯಿ.

**ಸೋಯಿದರೆ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಯಾಲ್‌ಕಾಜ್ ಕೋರ್ಟಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .. ..... ..... ಅಂದವಾಗಿ ಸಿಂಗರಿಸಿದ ಪೋಲಿಗಳು! ರಮ್ಯವಾದ ಸ್ಥಾನ! ಸುಖ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೪-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**



# ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

**ಕಷ್ಟಪಡುತ್ತಿರುವಿರೋ?**

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
**ಹುಲಗಿಲಿ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
**ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

**" ಹೊಂಗೊಲ್ "**

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

**ಯಾರಿಗೆ ಬೇಕಾಗಿಲ್ಲ?**

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

**" ಕಚ್ಚೆರ್ "**

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

**ಟೀಪು**—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಪ್ರಾತ್ಯಕ್ಷಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಚ್ಛವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
**ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

# ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

## ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುಂಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಅದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ನಿಮ್ಮಾಕಿಗಳು ಇತ್ತಲಕ್ಷಿಸುವರು? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ವಿಜಂಟ-
ವಿಷಳಂಗಪ್ಪನವರ ಕುಮಸ್ತ,
**ಬಾಗಲಕೋಟೆ.**

**ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**
( ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು. )



## ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧೫ಕ್ಕೆ ೨೦. ೪. ಆಂಡೆಯವೆಚ್ಚ ಬೇರೆ

ವಿಳಾಸ—

**ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು**
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ



## ಕಂಪಾಜಟರು ಬೇಕಾಗಿದ್ದಾರೆ.

ಕನ್ನಡನನ್ನ ಚೆನ್ನಾಗಿ ಬಲ್ಲ ಒಳ್ಳೆಯ ಕಂಪಾಜಟರು ಬೇಕಾಗಿದ್ದಾರೆ ಅವರ ಕೆಲಸದ ಮೇಲಿಂದ ವೇತನ ದೊರೆಯುವುದು. ಇಷ್ಟವುಳ್ಳವರು ಜಾಗ್ರತೆ ಬರೆದುಕೊಳ್ಳಬೇಕು

ಮ್ಯಾನೇಜರ್
**"ಶರಣ ಸಂದೇಶ"**



**ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೀಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.**

REGISTERED No

# ಶರಣ ಸಂದೇಶ

The

# Sharana Sandesh

ನ್ಯಾಯನಿಷ್ಠುರ! ಪಾಕ್ಷಿಕಪತ್ರಿಕೆಯಾಗಿದ್ದು! ಕೇವಲವಿರೋಧಿ! ಶರಣನಾದಾರಿಗೂ ಅಂಜುವವನಲ್ಲ
ಕೂಡಲಸಂಗಮದೇವರ ರಾಜತೇಜಸಲ್ಲಿಪ್ಪನಾಗಿ ॥ ವ. ೨೨೫ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಕೆ. ಹರ್ಡೀಕರ ಮುಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ೪೮ನೆಯ ಸಂಚಿಕೆ- ಸೋಮವಾರ ತಾರೀಖು ೩ ನೆಯ ಡಿಸೆಂಬರ್ ೧೯೩೪. | ಸಂಚಿಕೆ ೧೯೩.

## ಪಂ. ಜವಾಹರಲಾಲರನ್ನು ಬಿಡುವದಿಲ್ಲವೇ?

## ಭಾರತ ಮಂತ್ರಿಗಳ ಅಸಮ್ಮತಿ!

ಬ್ರಿಟಿಶ ಪಾರ್ಲಿಮೆಂಟಿನ ಹೌಸ ಆಫ್ ಕಾಮನ್ಸ ಸಭೆಯಲ್ಲಿ ಕರ್ನಲ ವೆಜ್‌ವುಡ್‌ರವರು ಪಂ. ಜವಾಹರಲಾಲರನ್ನು ಬಿಟ್ಟುಕೊಡುವುದಿಲ್ಲವೇ? ಎಂದು ಭಾರತಮಂತ್ರಿಗಳಿಗೆ ಪ್ರಶ್ನಿಸಿದರು. ಅದಕ್ಕೆ ಭಾರತ ಮಂತ್ರಿಗಳು ತಾವು ಹಿಂದೆ ದಯಪಾಲಿಸಿದ ಉತ್ತರದ ಕಡೆಗೇ ತೋರಿಸಿ ಸುಮ್ಮನಾದರು. ಆದರೆ ಕರ್ನಲ ವೆಜ್‌ವುಡ್‌ರವರು ಪುನಃ— "ಪಂ. ನೆಹರುರವರನ್ನು ಈಗ ಬಿಟ್ಟುಕೊಡಲು ಅಡ್ಡಿಯಿಲ್ಲ. ಯಾಕಂದರೆ ಜಾ. ಪಾ. ಕಮಿಟಿಯ ವರದಿ ಈಗ ಪ್ರಸಿದ್ಧವಾಗಿದೆಯಷ್ಟೆ. ಇದಲ್ಲದೆ ಪಂ. ಜವಾಹರಲಾಲರು ಒಳ್ಳೇ ಬುದ್ಧಿಶಾಲಿಗಳಾಗಿದ್ದು ಹಿಂದೀ ಗೃಹಸ್ಥರಲ್ಲಿ ಅವರೇ ತರ್ಕಶುದ್ಧ ವಿಚಾರವುಳ್ಳವರಾಗಿದ್ದಾರೆ" ಎಂದು ಸೂಚಿಸಿದರು.

ಅದಕ್ಕೆ ಭಾರತ ಮಂತ್ರಿಗಳು ಪಂಡಿತಜಿಯವರಿಗೆ ಒಟ್ಟಾವ್ಜ್ಞೆಯ ಮೇರೆಗೆ ಶಿಕ್ಷೆಯಾಗಿಲ್ಲವೆಂದೂ, ಆದರೆ ಪ್ರಚಲಿತ ಕಟ್ಟಳೆಯ ಮೇರೆಗೆ ಶಿಕ್ಷೆಯಾಗಿರುವದೆಂದೂ ಪ್ರಯುಕ್ತ ಕಟ್ಟಳೆಗೆ ವ್ಯತ್ಯಾಸ ಮಾಡಿ ಬಿಡುವ ಕಾರಣವಿಲ್ಲವೆಂದೂ ತಿಳಿಸಿದರು. ತಾವು ಈ ಬಗ್ಗೆ ಸರ್ವ ವಿಧದಿಂದಲೂ ವಿಚಾರಿಸಿರುವರಂತೆ.

SANGAM CLOTH STORES
Prop: M. S. Hundekar & Sons,
Dt. Bijapur, (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ. (ಡೆಕ್ಕ)

ಗ ಎ. ಎಂ. ದಿವಾಕರ
ಸರಾಫ ತಹಶೀಲ್ದಾರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ಹಾವಣಗೇರಿ.
ಸೇಠ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ರಾಮಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತ್ತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲಿಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮ್ಯಾಲಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಪಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದಂಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತು ಹನ್ನೆರಡ ವರ್ಷದಾಗ ನಮ್ಮ ಧಾರವಾಡಗಡಾಗ, ಗದಗಿನಾಗ, ಹುಬ್ಬಳ್ಯಾಗ, ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶ್ರೀ ಹೂಲಿ ಸಿದ್ಧಾಂತ ಪಂಚಾಂಗದಲ್ಲಿ

ಜಾಹೀರಾತ

ಕೊಡುವವರು ಜರೂರ ಕಳಿಸಿರಿ.

ಪಂಚಾಂಗವು ಅಚ್ಚಾಗುತ್ತಲಿದೆ. ಕಾರಣ ತಡಮಾಡದೆ ಕಳಿಸಿರಿ.

ವಿಶೇಷ— ಹೆಚ್ಚಿನ ಮಾಹಿತಿಯ ಬಗ್ಗೆ ಪತ್ರ ಬರೆಯಿರಿ.

ಪಂಚಾಂಗ ಪ್ರಕಾಶಕರು,

ಸಿ. ಕೆ. ಲಿಂಗಯ್ಯಾಸ್ವಾಮಿ

ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.